UNIVERSAL LIBRARY
OU_202231
UNIVERSAL LIBRARY

OUP—556—13-7-71—4,000.

OSMANIA UNIVERSITY LIBRARY

Call No. K 294.5 Accession No. K 603

Author N21S

Title

This book should be returned on or before the date last marked below.

ಶ್ರೀ

# ಸಂಗ್ರಹ ಭಾಗವತ

★

ದೇವುಡು

(ಸರ್ವಸ್ವಾಮ್ಯವನ್ನೂ ಕಾದಿಡಲಾಗಿದೆ)

ಮುದ್ರಿಸಿದವರು:
ಶ್ರೀನಿವಾಸ ಮುದ್ರಣಾಲಯ, ಬೆಂಗಳೂರು-೪

ಬೆಲೆ:
ಸಾಮಾನ್ಯ ಪ್ರತಿ ಮೂರು ರೂಪಾಯಿ
ಕ್ಯಾಲಿಕೋ ಪ್ರತಿ ನಾಲ್ಕು ರೂಪಾಯಿ

# ಪೀಠಿಕೆ

ರಾಮಾಯಣದಂತೆ ಶ್ರೀ ಭಾಗವತವೂ ಪಾರಾಯಣಾದಿಗಳಿಂದ ಸನ್ಮಾನ್ಯ ವಾಗಿರುವ ಗ್ರಂಥ. ಭಾಗವತವನ್ನು ಓದಿದರೆ ಭಕ್ತಿಯಿಲ್ಲದವರು ಭಕ್ತರಾಗುತ್ತಾರೆ: ಭಕ್ತರ ಭಕ್ತಿಯು ದೃಢವಾಗುತ್ತದೆ. ಅದರಿಂದ ಭಾಗವತವನ್ನು ಎಲ್ಲರೂ ಗೌರವಿಸುತ್ತಾರೆ.

"ದೇವರು ಎಲ್ಲೆಲ್ಲೂ ಇದ್ದಾನೆ" "ಎಲ್ಲವೂ ನಡೆಯುವುದು ಆತನಿಂದ" "ಆತನು ತನ್ನನ್ನು ನಂಬಿದವರನ್ನು ಕೈ ಬಿಡುವುದಿಲ್ಲ" ಎಂಬ ಈ ಸಿದ್ಧಾಂತಗಳು ಹಲವು ನಮ್ಮ ಮನೆಮಾತುಗಳಾಗಿವೆ. ಇವು ಬಹುಕಾಲದಿಂದ ಬಳಕೆಯಲ್ಲಿದ್ದು ಸವೆದ ನಾಣ್ಯಗಳಂತಾಗಿವೆ. ಭಾಗವತವನ್ನು ಓದಿದರೆ, ಈ ನಾಣ್ಯಗಳಿಗೆ ಹೊಸತನ ಬರುತ್ತದೆ. ಪ್ರಹ್ಲಾದ ಚರಿತ್ರೆಯನ್ನು ಓದಿದರೆ, "ಹೌದು ದೇವರು ಎಲ್ಲೆಲ್ಲೂ ಇದ್ದಾನೆ. ಅದನ್ನು ಪ್ರಹ್ಲಾದನು ತಿಳಿದ. ಅದರಿಂದಲೇ ಭಾಗವತರ ಪಂಕ್ತಿಯಲ್ಲಿ ಆತನಿಗೆ ಗುರುಗಳಾದ ನಾರದರಿಗಿಂತ ಹಿರಿಯ ಸ್ಥಾನ ಬಂತು. ಈಗಲೂ 'ಪ್ರಹ್ಲಾದ ನಾರದ ಪರಾಶರ—. ಎನ್ನುತ್ತಾರೆ' ಎಂಬುದು ಮನಸ್ಸಿಗೆ ಹಿಡಿಯುತ್ತದೆ. ಹಾಗೆಯೇ ಧ್ರುವಚರಿತ್ರೆಯಿಂದ "ಎಲ್ಲವೂ ನಡೆಯುವುದು ಆತನಿಂದ. ಆತನ ಚೈತನ್ಯವು ಒಳಹೊಕ್ಕು ನನ್ನ ಮಾತನ್ನು ನುಡಿಸುತ್ತದೆ" ಎಂಬುದರ ಅರಿವಾಗುತ್ತದೆ. ಅಂಬರೀಷನ ಚರಿತ್ರೆಯು "ಸ್ವಾಮಿಯು ತನ್ನನ್ನು ನಂಬಿದವರನ್ನು ಕೈಬಿಡುವುದಿಲ್ಲ" ಎಂಬ ಸಿದ್ಧಾಂತದಲ್ಲಿ ನಂಬಿಕೆಯನ್ನು ಹುಟ್ಟಿಸುತ್ತದೆ. ಹೀಗೆಯೇ ಇತರ ಚರಿತ್ರೆಗಳೂ ಮನುಷ್ಯನನ್ನು ಮೃಗದ ಮಟ್ಟದಿಂದ ಮೇಲಕ್ಕೆತ್ತಿ ಉದ್ಧಾರದ ಹಾದಿಯನ್ನು ತೋರಿಸುತ್ತವೆ. ಅದರಿಂದ ಆಸ್ತಿಕರು ಈ ಗ್ರಂಥವನ್ನು ಪಾರಾಯಣ, ಶ್ರವಣ, ಮನನಾದಿಗಳಿಂದ ಆರಾಧಿಸುತ್ತಾರೆ.

ಭಾಗವತದಲ್ಲಿ ವೇದಾಂತ ಶಾಸ್ತ್ರವನ್ನು ಬಹುವಾಗಿ ಹೇಳಿದೆ. ಆ ಭಾಗವನ್ನು ಬಿಟ್ಟು ಕಥಾಭಾಗವನ್ನು ಮಾತ್ರ ಆರಿಸಿಕೊಂಡು, ಮೂಲವನ್ನು ಬಿಡದೆ ಬರೆದಿರುವ ಗ್ರಂಥ ಈ ಸಂಗ್ರಹ ಭಾಗವತ. ನಾನು ಕಂಡಂತೆ ಇಂತಹದೊಂದು ಸಂಗ್ರಹ ವಿರಲಿಲ್ಲ.

ಭಾಗವತದಲ್ಲಿ ಎರಡು ಭಾಗ. ಮೊದಲನೆಯದು ಒಂಭತ್ತು ಸ್ಕಂಧಗಳು ಅದರಲ್ಲಿ ಭಕ್ತೋದ್ಧಾರಕ್ಕಾಗಿ ಅವತರಿಸಿದ ಮಹಾ ವಿಷ್ಣುವಿನ ಅವತಾರಗಳ ಕಥೆ, ಹತ್ತು ಹನ್ನೊಂದನೆಯ ಸ್ಕಂಧಗಳು ಪರಮಾತ್ಮನಾದ ಶ್ರೀಕೃಷ್ಣನ ಲೀಲಾ

ವಿಸ್ತಾರ. (ಹನ್ನೆರಡನೆಯದು ಭವಿಷ್ಯನ್ನರ ಪಾಲವರ್ಣನ.) ಅದರಂತೆ ಇಲ್ಲಿಯೂ ಎರಡು ಭಾಗಗಳನ್ನು ಮಾಡಿದೆ.

ಶ್ರೀರಾಮಕೃಷ್ಣರಂತಹ ಪುರುಷೋತ್ತಮರು ಭಾರತದಲ್ಲಿ ಅಲ್ಲದೆ ಇನ್ನು ಎಲ್ಲಿಯೂ ಇಲ್ಲ. ರಾಮನ ಕಥೆಯಲ್ಲಿ ಹಿಂದಿನ ಹಿರಿಯರು ಆತನ ಬಾಲ್ಯದ ವಿಷಯವಾಗಿ ಅಷ್ಟು ಹೇಳಿಲ್ಲ. ಆದರೆ ಶ್ರೀಕೃಷ್ಣನ ವಿಚಾರ ಹಾಗಲ್ಲ. ಆತನು ಗರ್ಭಕ್ಕೆ ಬಂದುದು ಮೊದಲು, ಆತನು ಈ ಲೋಕವನ್ನು ಬಿಟ್ಟು ಹೊರಟುಹೋದ ಮೇಲೂ ಏನೇನಾಯಿತು ಅದೆಲ್ಲವನ್ನೂ ಹೇಳಿದೆ. ಶ್ರೀರಾಮನು ಮನುಷ್ಯನಂತೆ ನಡೆಯುತ್ತಾನೆ. ತಾನು ಮನುಷ್ಯ ಎನ್ನುತ್ತಾನೆ. ಆದರೆ ಶ್ರೀಕೃಷ್ಣನು ಹಾಗಲ್ಲ. ಆತನು ಹುಟ್ಟಿದುದು ಮೊದಲು ಎಲ್ಲರೂ ಆತನನ್ನು ದೇವರು ಎನ್ನುತ್ತಾರೆ. ಆತನು "ನಾನು ಪುರುಷೋತ್ತಮ. ನನ್ನ ದಿವ್ಯ ಜನ್ಮಕರ್ಮಗಳನ್ನು ಬಲ್ಲವರು ಮುಕ್ತರಾಗುವರು'' ಎನ್ನುತ್ತಾನೆ. ಅದನ್ನು ಎಲ್ಲರೂ ಒಪ್ಪುತ್ತಾರೆ. ಅದರಿಂದ ಭಾಗವತಕ್ಕೆ ಇಷ್ಟು ಗೌರವ.

ಇನನ್ನು ಬರೆದಿರುವುದು ಸಂಸ್ಕೃತದ ಮೂಲವನ್ನು ಓದಲಾರದವರಿಗಾಗಿ. ಭಾಷೆಯು ಕೂಡ ಆದಷ್ಟು ಸುಲಭವಾಗಿದೆ. ಜೊತೆಗೆ ಚಿತ್ರಗಳೂ ಇವೆ. ಈ ಚಿತ್ರಗಳಲ್ಲಿ ಎಂಟು ಹೊಸದಾಗಿ ಬರೆಸಿದವು. ಉಳಿದವೆಲ್ಲ ಶ್ರೀಮಾನ್ ನಾರಾಯಣ ಅಯ್ಯಂಗಾರ್ಯರು, ಡೈರೆಕ್ಟರ್, ಆರ್ಕಿಯೋಲಾಜಿಕಲ್ ಆಫೀಸ್, ಮೈಸೂರು ಇವರ ವಿಶ್ವಾಸದಿಂದ ದೊರೆತವು. ಹಿಂದಿನ ಹಿರಿಯರು ಕಟ್ಟಿದ ದೇವಸ್ಥಾನಗಳಲ್ಲಿ ಇರುವ ವಿಗ್ರಹಗಳ ಪ್ರತಿಬಿಂಬಗಳು. ಅವು ಗ್ರಂಥದ ಯೋಗ್ಯತೆಯನ್ನು ಹೆಚ್ಚಿಸಿವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಉಪಕಾರಕ್ಕಾಗಿ ಶ್ರೀಮಾನ್ ನಾರಾಯಣ ಅಯ್ಯಂಗಾರ್ಯರಿಗೂ ಅವರ ಸಹಾಯಾಧಿಕಾರಿಗಳಿಗೂ ಕೃತಜ್ಞತೆಯ ಅನೇಕ ವಂದನೆಗಳು.

ಇದನ್ನು ಪ್ರಕಟಿಸುವುದರಲ್ಲಿ ವಿದ್ಯಾಭ್ಯಾಸದ ಇಲಾಖೆಯವರ, ಸರಕಾರದವರ ಸಹಾಯವು ದೊರೆಯಿತಾಗಿ, ಈ ಗ್ರಂಥವನ್ನು ಇಷ್ಟು ಸುಲಭ ಕ್ರಯಕ್ಕೆ ಕೊಡಲು ಸಾಧ್ಯವಾಗಿದೆ. ಈ ಉಪಕಾರಕ್ಕಾಗಿ ವಿದ್ಯಾ ಇಲಾಖೆಯ ಡೈರೆಕ್ಟರ್ ಶ್ರೀಮಾನ್ ಮಲ್ಲಾರಾಧ್ಯರು, ವಿದ್ಯಾಮಂತ್ರಿ ರಾಮಚಂದ್ರರಾಯರು, ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಇವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ಶ್ರೀ ಗೀರ್ವಾಣ ವಿದ್ಯಾಪೀಠ
ಬೆಂಗಳೂರು, ೪

**ದೇವುಡು**

# ವಿಷಯಸೂಚಿಕೆ


| ಅಧ್ಯಾಯ | ಹೆಸರು | ಪುಟ |
|---|---|---|
| ೧ | ಭಾಗವತವು ಬಂದುದು | ೧ |
| ೨ | ಭಾಗವತವು ಹರಡಿದುದು | ೧೨ |
| ೩ | ಭಾಗವತವೆಂದರೇನು ? | ೧೯ |
| ೪ | ಭಾಗವತವು ಹರಡಿದುದು | ೩೧ |
| ೫ | ಹಿರಣ್ಯಾಕ್ಷನ ವೃತ್ತಾಂತ | ೪೮ |
| ೬ | ಕಪಿಲಾವತಾರ | ೫೪ |
| ೭ | ಮನುವಂಶದ ಕಥೆ | ೬೦ |
| ೮ | ದಕ್ಷ ಯಾಗ | ೬೫ |
| ೯ | ಧ್ರುವಚರಿತ್ರೆ | ೭೦ |
| ೧೦ | ಧ್ರುವ ವಂಶವು | ೭೭ |
| ೧೧ | ಪೃಥು ಚರಿತ್ರೆ | ೮೦ |
| ೧೨ | ಪೃಥು ವಂಶವು | ೮೯ |
| ೧೩ | ಋಷಭ ಚರಿತ್ರೆ | ೯೫ |
| ೧೪ | ಭರತ ಚರಿತ್ರೆ | ೧೦೧ |
| ೧೫ | ಅಜಾಮಿಳನ ಚರಿತ್ರೆ | ೧೦೮ |
| ೧೬ | ನಾರದರಿಗೆ ಶಾಪ ಬಂದುದು | ೧೧೩ |
| ೧೭ | ವೃತ್ರಾಸುರ ವೃತ್ತಾಂತ | ೧೧೮ |
| ೧೮ | ಇಂದ್ರ ಚಿತ್ರಕೇತುಗಳ ವೃತ್ತಾಂತ | ೧೨೬ |
| ೧೯ | ಹಿರಣ್ಯ ಕಶಿಪುವಿನ ವೃತ್ತಾಂತ | ೧೩೪ |
| ೨೦ | ನರಸಿಂಹಾವತಾರ | ೧೪೦ |
| ೨೧ | ಭಾಗವತರೂ, ಭಾಗವತ ಧರ್ಮವೂ | ೧೪೮ |
| ೨೨ | ಗಜೇಂದ್ರಮೋಕ್ಷ | ೧೫೪ |

| | | |
|---|---|---|
| ೨೩ | ಸಮುದ್ರ ಮಥನ | ೧೫೯ |
| ೨೪ | ಶ್ರೀಹರಿಯು ಅಮೃತವನ್ನು ಹಂಚಿದುದು | ೧೬೬ |
| ೨೫ | ದೇವಾಸುರ ಯುದ್ಧವು | ೧೬೯ |
| ೨೬ | ಮನ್ವಂತರ ವರ್ಣನೆ | ೧೭೩ |
| ೨೭ | ವಾಮನಾವತಾರ | ೧೭೫ |
| ೨೮ | ತ್ರಿವಿಕ್ರಮಾವತಾರ | ೧೮೧ |
| ೨೯ | ಮತ್ಸ್ಯಾವತಾರ | ೧೯೩ |
| ೩೦ | ಅಂಬರೀಷ ಚರಿತ್ರೆ | ೧೯೬ |
| ೩೧ | ಇಕ್ಷ್ವಾಕುವಂಶದ ಚರಿತ್ರೆ | ೨೦೫ |
| ೩೨ | ಚಂದ್ರವಂಶ | ೨೧೨ |
| ೩೩ | ಶ್ರೀ ಕೃಷ್ಣಾವತಾರ | ೨೨೧ |
| ೩೪ | ಬಾಲಲೀಲೆ | ೨೨೭ |
| ೩೫-೧ | ಬೃಂದಾವನ ಲೀಲೆ | ೨೩೪ |
| ೩೫-೨ | ಬೃಂದಾವನ ಲೀಲೆ | ೨೪೫ |
| ೩೬ | ರಾಮಕೃಷ್ಣರು ಮಧುರೆಗೆ ಹೋಗುವುದು | ೨೫೩ |
| ೩೭ | ಉಗ್ರಸೇನ ಪಟ್ಟಾಭಿಷೇಕ | ೨೬೧ |
| ೩೮ | ದ್ವಾರಕೆಗೆ ಬಂದುದು | ೨೬೭ |
| ೩೯ | ಕಲ್ಯಾಣ ಲೀಲೆಗಳು | ೨೭೩ |
| ೪೦ | ಅನಿರುದ್ಧ ವೃತ್ತಾಂತ | ೨೮೧ |
| ೪೧ | ಇತರ ಲೀಲೆಗಳು | ೨೮೬ |
| ೪೨ | ದುಷ್ಟ ಕ್ಷತ್ರಿಯವಧೆ | ೨೯೨ |
| ೪೩ | ಇತರ ಲೀಲೆಗಳು | ೩೦೦ |
| ೪೪ | ಭಕ್ತರನ್ನು ಅನುಗ್ರಹಿಸಿದುದು | ೩೦೮ |
| ೪೫ | ಯಾದವನಾಶ | ೩೧೭ |
| ೪೬ | ಉಪಸಂಹಾರ | ೩೨೯ |



ಸಂಸ್ಕೃತಿ ಪ್ರಚಾರ ಪ್ರಿಯರೂ,
ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳೂ ಆದ
**ಶ್ರೀಮಾನ್ ಕೆ. ಹನುಮಂತಯ್ಯನವರಿಗೆ**
ಸಮರ್ಪಿಸಲಾಗಿದೆ.

ಶ್ರೀ

# ಸಂಗ್ರಹ ಭಾಗವತ

---

ನಿಗಮಕಲ್ಪತರೋರ್ಗಳಿತಂಫಲಂ ।
ಶುಕಮುಖಾದಮೃತದ್ರವಸಂಯುತಂ ॥
ಪಿಬತ ಭಾಗವತಂ ರಸಮಾಲಯಂ ।
ಮುಹುರಹೋ ರಸಿಕಾ ಭುವಿ ಭಾವುಕಾಃ ॥

ರುಚಿಯನ್ನು ಬಲ್ಲ ರಸಿಕರಿರಾ! ಈ ಭಾಗವತವು ವೇದಗಳೆಂಬ ಕಲ್ಪವೃಕ್ಷದಲ್ಲಿ ತಾನಾಗಿ ಫಲವಾದ ಹಣ್ಣು. ಶುಕ ಮುಖದಿಂದ ಬಂದಿರುವುದರಿಂದ ಇದರಲ್ಲಿ ಅಮೃತರಸವೂ ಸೇರಿರುವುದು. ಇದನ್ನು ಕೊನೆಯವರೆಗೂ ಸೇವಿಸಿರಿ.

" ಅನ್ಯ ಕಥೆಗಳಿಂದ ವಾಕ್ಕು ಮಲಿನವಾಗುವುದು. ಪರಮಾತ್ಮನ ದಿವ್ಯಚರಿತೆಯನ್ನು ಹೇಳಿದರೆ ಶುದ್ಧವಾಗುವುದು. ವಾಕ್ಕು ಇದ್ದವನು ಆ ಭಗವಂತನ ಚರಿತೆಯನ್ನು ವರ್ಣಿಸಬೇಕು. ಕಿವಿಗಳಿದ್ದವನು ಅವುಗಳನ್ನು ಕೇಳಬೇಕು ಅದೇ ಪರಮ ಲಾಭವು. ಅದಕ್ಕಿಂತ ಲಾಭವಿನ್ನಿಲ್ಲ "



ಮೊದಲನೆಯ ಅಧ್ಯಾಯ

# ಭಾಗವತವು ಬಂದುದು

ನೈಮಿಷವೆಂಬ ಅರಣ್ಯದಲ್ಲಿ ಶೌನಕಾದಿಗಳು ಒಂದು ಸತ್ರವನ್ನು ಮಾಡುತ್ತಿದ್ದರು. ಆಗ ಅಲ್ಲಿಗೆ ಸೂತಪುರಾಣಿಕನು ಬಂದನು. ಅಲ್ಲಿದ್ದವರು ಒಂದು ದಿನ ಆತನನ್ನು ಕೇಳಿದರು: "ಎಲೈ ಸೂತನೆ, ನೀನು ಪುರಾಣ ಇತಿಹಾಸ ಧರ್ಮಶಾಸ್ತ್ರಗಳನ್ನು ಬಲ್ಲವನು. ಜೊತೆಗೆ ಅವುಗಳ ಮೇಲೆ ವ್ಯಾಖ್ಯಾನವನ್ನೂ ಮಾಡಿರುವವನು. ಭಗವಾನ್ ವ್ಯಾಸರ ಪ್ರಿಯ ಶಿಷ್ಯನು. ಈ ಕಲಿಯುಗದಲ್ಲಿನ ಜನರು ಅಲ್ಪಾಯುಗಳು, ಅಲ್ಪಬುದ್ಧಿಗಳು, ದರಿದ್ರರು, ಚಿಂತಾಪರರು, ವ್ಯೆಗಳ್ಳರು. ಇಂಥವರು ಕೇಳಬೇಕಾದುದೆಲ್ಲವನ್ನೂ ಪೂರ್ಣವಾಗಿ ಕೇಳುವ ಹಾಗಿಲ್ಲ. ಅದರಿಂದ, ಎಲೈ ಸಾಧುವೆ, ಯಾವುದು ಸಾರವಾದುದೋ ಅದನ್ನು ಮಾತ್ರ ಹೇಳು. ಯಾವುದನ್ನು ಕೇಳಿದರೆ ಮನಸ್ಸು ಶುದ್ಧವಾಗುವುದೋ ಅದನ್ನು ಹೇಳು.

ಶ್ರೀಕೃಷ್ಣನು ಏಕೆ ಹುಟ್ಟಿದನು ಎಂಬುದನ್ನು ನಮಗೆ ವಿವರಿಸಿ ಹೇಳು. ಶ್ರೀ ಮಹಾವಿಷ್ಣುವಿನ ಅವತಾರವು ಯಾವಾಗಲೂ ಲೋಕಕ್ಷೇಮಕ್ಕೆಂದೇ ಹೇಳುವರು. ದೇವಗಂಗೆಯು ತನ್ನಲ್ಲಿ ಸ್ನಾನಮಾಡಿದವರನ್ನು ಉದ್ಧಾರ ಮಾಡುವಳು. ಭಗವಂತನ ನಾಮವಾದರೋ ಮರೆತು ಉಚ್ಚರಿಸಿದವನನ್ನೂ ಕಾಪಾಡುವುದು. ಭಯವೂ ಆ ಭಗವಂತನಿಗೆ ಭಯಪಡುವುದು. ಅದರಿಂದ ಕಲಿಯೆಂಬ ಕಾಲದ ಮಹಿಮೆಯಾಗಿ ಬರುವ ಪಾಪಗಳನ್ನು ಕಳೆದುಕೊಳ್ಳಲು ಭಗವಂತನ ಕಥೆಯನ್ನು ನಮಗೆ ಹೇಳು.

ನಾವು ಆ ಕಥೆಗಳನ್ನು ಕೇಳಬೇಕೆಂದಿರುವೆವು. ಅದರಿಂದ, ಎಲೈ ಬುದ್ಧಿವಂತನೆ, ಆ ಮಹಾವಿಷ್ಣುವಿನ ಅವತಾರ ಕಥೆಗಳನ್ನೆಲ್ಲಾ

ಹೇಳು. ಮಾಯೆಯಿಂದ ಮನುಷ್ಯನಾಗಿ ಹುಟ್ಟಿದ ಆ ಪುರುಷೋತ್ತಮನ ಕಥೆಗಳನ್ನೆಲ್ಲಾ ಹೇಳು. ಕಲಿಯುಗವು ಬಂತೆಂದು ಹೆದರಿ ನಾವು ಇಲ್ಲಿಗೆ ಬಂದು ಸೇರಿಕೊಂಡಿರುವೆವು. ಸತ್ರವೆಂಬ ನೆಪದಿಂದ ಕಾಲವನ್ನು ಕಳೆಯುತ್ತಿರುವೆವು. ದೈವವೇ ನಿನ್ನನ್ನು ಕರೆತಂದಿತು. ಸಮುದ್ರವಲ್ಲಿ ಬಿದ್ದವನಿಗೆ ನಾವಿಕನ ದೊರೆತಂತಾಯಿತು."

ಹೀಗೆಂದು ಕೇಳಿದ ಆ ಮಹರ್ಷಿಗಳಿಗೆ, ಸೂತನು ಆಗಲೆಂದು ಭಗವಂತನ ಕಥೆಗಳನ್ನು ಹೇಳತೊಡಗಿದನು. "ನಾರಾಯಣನನ್ನೂ ನರೋತ್ತಮನಾದ ನರನನ್ನೂ ಸರಸ್ವತೀದೇವಿಯನ್ನೂ ವ್ಯಾಸರನ್ನೂ ನಮಸ್ಕರಿಸಿ ಜಯಪ್ರದವಾದ ಭಗವಂತನ ಕಥೆಯನ್ನು ಹೇಳುವೆನು. ಅದನ್ನು ಹೇಳು ಎಂದು ನೀವು ಕೇಳಿದುದು ನನ್ನ ಅದೃಷ್ಟ. ದೇವರಲ್ಲಿ ಭಕ್ತಿಯಿಡುವುದೇ ಧರ್ಮವು. ಅದಕ್ಕಿಂತ ಧರ್ಮವಿನ್ನಿಲ್ಲ. ಅದರಿಂದ ಮನಸ್ಸು ತಿಳಿಯಾಗುವುದು: ವೈರಾಗ್ಯವೂ ಜ್ಞಾನವೂ ಲಭಿಸುವುವು.

ಭಗವಂತನ ಕಥೆಯನ್ನು ಕೇಳಿ ಮನಸ್ಸು ಕರಗಿ, ಆನಂದವು ತಾನೇ ತಾನಾಗಿ, ಮೈಯುಬ್ಬಿ ಕಣ್ಣಲ್ಲಿ ನೀರಾಗಿ ಹರಿಯುವವನೇ ಧನ್ಯನು. ಅದರಿಂದ ಭಗವತ್ಕಥಾಶ್ರವಣವು ಉಪನಿಷತ್ತುಗಳನ್ನು ಓದುವುದಕ್ಕಿಂತಲೂ ಹೆಚ್ಚಿನದು. ಆದುದರಿಂದ ವಾಸುದೇವನ ಕಥೆಗಳನ್ನು ಕೇಳುವುದಕ್ಕಿಂತ ಉತ್ತಮವಾದ ಧರ್ಮವಿನ್ನಿಲ್ಲ. ಅದರಿಂದಲೇ ತಿಳಿದವರು ಪುರುಷೋತ್ತಮನಲ್ಲಿ ಭಕ್ತಿ ಮಾಡುವರು. ಪುರುಷೋತ್ತಮನು ಮಾಯೆಯನ್ನು ಸೃಜಿಸಿದನು. ಮಾಯೆಯು ಸತ್ತ್ವ, ರಜಸ್ಸು, ತಮಸ್ಸು, ಎಂದು ಮೂರು ಗುಣಗಳ ರೂಪವಾಗಿರುವುದು. ಪರಮಾತ್ಮನು ತಾನಾಗಿ ಮಾಯೆಯೊಳಕ್ಕೆ ಬಂದು ತಾನು ಒಬ್ಬನೇ ಆದರೂ ನಾನಾ ರೂಪವಾಗಿ ಕಾಣುತ್ತಿರುವನು. ಉರಿಯುತ್ತಿರುವ ಕಟ್ಟಿಗೆಗಳಲ್ಲಿರುವ ಬೆಂಕಿಯು ಬೇರೆ ಬೇರೆಯಾಗಿ

ಕಾಣುತ್ತಿದ್ದರೂ ಬೆಂಕಿಯು ಹೇಗೆ ಒಂದೇ ಒಂದೋ, ಹಾಗೆಯೇ ದೇವದೇವನು ದೇಹದೇಹಗಳಲ್ಲಿಯೂ ಇದ್ದು ಬೇರೆ ಬೇರೆಯಾಗಿ ಕಂಡರೂ ಒಬ್ಬನೇ! ಲೋಕಕರ್ತನಾದ ಈತನು ಲೀಲೆಯಿಂದ ದೇವ, ಮನುಷ್ಯ, ಮೃಗರೂಪವಾಗಿ ಅವತಾರ ಮಾಡುವನು.

ಪರಮಾತ್ಮನು ಲೋಕವನ್ನು ಸೃಷ್ಟಿಸಬೇಕೆಂದು ಹದಿನಾರು ಕಳೆ (ಅಂಗ)ಗಳುಳ್ಳ ಒಂದು ದೇಹವನ್ನು ಮಾಡಿಕೊಂಡನು. ಆತನ ಅವಯವವೊಂದೊಂದೂ ಒಂದೊಂದು ಲೋಕವಾಯಿತು. ಆ ರೂಪವನ್ನೇ ಬಲ್ಲವರು ಸಾವಿರ ತಲೆ, ಸಾವಿರ ಕಾಲು, ಸಾವಿರ ಮುಖಗಳು ಉಳ್ಳ ವಿಶ್ವರೂಪವೆಂದು ಹೊಗಳುವುದು. ಆತನ ಅಂಶದಿಂದ ಚತುರ್ಮುಖ ಬ್ರಹ್ಮ ಮೊದಲಾದವರು ಹುಟ್ಟಿದರು. ಜೊತೆಗೆ ಆತನೂ ನಾನಾ ಅವತಾರಗಳನ್ನು ಮಾಡಿದನು.

ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರರೆಂಬ ನಾಲ್ವರು ಮಕ್ಕಳಾಗಿ ಬ್ರಹ್ಮನ ಮನಸ್ಸಿನಿಂದ ಹುಟ್ಟಿದುದೇ ಆತನ ಪ್ರಥಮಾವತಾರವು ಎರಡನೆಯದು ಯಜ್ಞವರಾಹಾವತಾರವು: ಆಗ ರಸಾತಲದಲ್ಲಿ ಮುಳುಗಿ ಹೋಗಿದ್ದ ಭೂಮಿಯನ್ನು ಮೇಲಕ್ಕೆತ್ತಿದನು. ಮೂರನೆಯವತಾರದಲ್ಲಿ ನಾರದನಾಗಿ ಎಲ್ಲರಿಗೂ ವಿಷ್ಣುಭಕ್ತಿಯ ಶಾಸ್ತ್ರವನ್ನು ಕಲಿಸಿಕೊಟ್ಟನು ಮೂರ್ತಿದೇವಿ-ಧರ್ಮರ ಮಕ್ಕಳಾದ ನರನಾರಾಯಣರೆಂಬ ಮಹರ್ಷಿಗಳಾಗಿ ಹುಟ್ಟಿದುದು ನಾಲ್ಕನೆಯ ಅವತಾರವು. ಸಿದ್ಧಪುರುಷರಲ್ಲಿ ಶ್ರೇಷ್ಠನಾದ ಕಪಿಲಮಹರ್ಷಿಯಾಗಿ ಹುಟ್ಟಿ ಆಸುರಿ ಎಂಬವನಿಗೆ ಸಾಂಖ್ಯಶಾಸ್ತ್ರವನ್ನು ಬೋಧಿಸಿದನು. ಅದು ಐದನೆಯವತಾರವು. ಆರನೆಯ ಅವತಾರದಲ್ಲಿ ಅತ್ರಿಮಹಾ ಮುನಿಯ ಪುತ್ರನಾದ ದತ್ತಾತ್ರೇಯನಾಗಿ, ಅಲರ್ಕ, ಪ್ರಹ್ಲಾದ ಮೊದಲಾದವರಿಗೆ ವೇದಾಂತವನ್ನು ಉಪದೇಶ ಮಾಡಿದನು. ಏಳನೆ ಯದರಲ್ಲಿ ರುಚಿಯೆಂಬುವನಲ್ಲಿ ಯಜ್ಞನಾಗಿ ಹುಟ್ಟಿ ಇಂದ್ರನಾಗಿದ್ದನು.

ಎಂಟನೆಯವತಾರದಲ್ಲಿ ನಾಭಿಯ ಮಗನಾದ ಋಷಭನಾಗಿ ಎಲ್ಲರಿಗೂ ಪರಮಹಂಸ ಮಾರ್ಗವನ್ನು ಉಪದೇಶಿಸಿದನು. ಒಂಭತ್ತನೆಯದರಲ್ಲಿ ಪೃಥುವೆಂಬ ರಾಜನಾಗಿ ಗೋರೂಪವನ್ನು ಧರಿಸಿದ ಭೂಮಿಯಿಂದ ಬೇಕುಬೇಕಾದುದನ್ನೆಲ್ಲ ಹಾಲಾಗಿ ಕರೆದನು.

ಹತ್ತನೆಯದಾಗಿ ಮತ್ಸ್ಯಾವತಾರವನ್ನು ಮಾಡಿ ವೈವಸ್ವತನನ್ನು ಕಾಪಾಡಿದನು. ಹನ್ನೊಂದರಲ್ಲಿ ಆಮೆಯಾಗಿ ಮಂದರಪರ್ವತವನ್ನು ಹೊತ್ತು ದೇವದಾನವರು ಕ್ಷೀರಸಮುದ್ರವನ್ನು ಕಡೆಯಲು ಅನುಕೂಲ ಮಾಡಿ ಕೊಟ್ಟನು. ಹನ್ನೆರಡನೆಯ ಧನ್ವಂತರಿಯ ಅವತಾರದಲ್ಲಿ ಅಮೃತವನ್ನು ತಂದನು. ಹದಿಮೂರನೆಯ ಅವತಾರದಲ್ಲಿ ದೇವತೆಗಳಿಗೆ ಅಮೃತವನ್ನು ಹಂಚಿದನು. ಹದಿನಾಲ್ಕನೆಯ ನರಸಿಂಹಾವತಾರದಲ್ಲಿ ಹಿರಣ್ಯಕಶಿಪುವನ್ನು ಸೀಳಿ ಹಾಕಿದನು. ಹದಿನೈದನೆಯ ವಾಮನಾವತಾರದಲ್ಲಿ ಬಲಿಯನ್ನು ದಾನ ಬೇಡಿದನು. ಹದಿನಾರನೆಯ ಪರಶುರಾಮಾವತಾರದಲ್ಲಿ ದುಷ್ಟ ಕ್ಷತ್ರಿಯರನ್ನು ಧ್ವಂಸ ಮಾಡಿದನು. ಹದಿನೇಳರಲ್ಲಿ ಪರಾಶರನಿಂದ ಸತ್ಯವತಿಯಲ್ಲಿ ವೇದವ್ಯಾಸನಾಗಿ ಜನಿಸಿ ಲೋಕವು ಉದ್ಧಾರವಾಗಲೆಂದು ವೇದಗಳನ್ನು ವಿಂಗಡಿಸಿಟ್ಟನು. ಹದಿನೆಂಟರಲ್ಲಿ ರಾಮಾವತಾರವನ್ನು ಮಾಡಿ ರಾವಣ ಸಂಹಾರ ಮಾಡಿ ದೇವಕಾರ್ಯವನ್ನು ಸಾಧಿಸಿದನು.

ಹತ್ತೊಂಭತ್ತರಲ್ಲಿ ರಾಮಕೃಷ್ಣರೆಂಬ ಇಬ್ಬರಾಗಿ ಜನಿಸಿ ಭೂಭಾರವನ್ನು ಇಳುಹಿದನು. ಅನಂತರ ಇಪ್ಪತ್ತನೆಯದರಲ್ಲಿ ಬುದ್ಧನಾಗಿ ಹುಟ್ಟಿ ದೇವಶತ್ರುವನ್ನು ಮೋಹಗೊಳಿಸುವನು. ಮುಂದೆ ಕಲಿಯುಗವು ಮುಗಿದ ಮೇಲೆ, ವಿಷ್ಣುಯಶನೆಂಬುವನಿಂದ ಕಲ್ಕಿಯಾಗಿ ಹುಟ್ಟಿ ಜಗದ್ಗುರುವಾಗುವನು.

ಶ್ರೀಹರಿಯ ಅವತಾರಗಳು ಲೆಕ್ಕವಿಲ್ಲದಷ್ಟು ಉಂಟು. ಎಲೈ ಮಹರ್ಷಿಗಳೇ, ದೊಡ್ಡ ಸರೋವರದಿಂದ ಹೊರಟ ಕಾಲುವೆಗಳಂತೆ

ಅವೆಲ್ಲವೂ ಆ ಪುರುಷೋತ್ತಮನ ಅಂಶದಿಂದ ಆದವು. ಆದರೆ ಶ್ರೀ ಕೃಷ್ಣಾವತಾರವಾದರೋ ಪೂರ್ಣಾವತಾರವು.

ಇವೆಲ್ಲವೂ ಮಾಯೆಯಿಂದಲೇ ಆದುದು. ಮಾಯೆಯಿಂದ ಆದ ಲೋಕದಲ್ಲಿ, ಕಣ್ಣಿಗೆ ಕಾಣುವ ದೇಹ, ಕಣ್ಣಿಗೆ ಕಾಣದ ಜೀವ, ಈ ಎರಡೂ ಉಂಟು. ಇವೆರಡಕ್ಕಿಂತ ಬೇರೆಯಾಗಿ, ಮಾಯೆಗೆ ಸಿಕ್ಕದೆ ಆ ಪರಮಾತ್ಮನು ಇರುವನು. ಮಾಯೆಗೆ ಸಿಕ್ಕಿದವನು ಜೀವನು ಮಾಯೆಗೆ ಸಿಕ್ಕಿದವನು ಈಶ್ವರನು. ಮಾಯೆಗೆ ಸಿಕ್ಕಿದ್ದರೂ ಮಾಯೆಯ ಆಚೆಯಿರುವ ವಾಸುದೇವನನ್ನು ಬಿಡದೆ ಭಜಿಸುವವರು ಧನ್ಯರು. "ವಾಸುದೇವನು ಎಲ್ಲವರಲ್ಲಿಯೂ ಇರುವನು. ಎಲ್ಲೆಲ್ಲಿಯೂ ಇರುವನು. ನನ್ನಲ್ಲಿಯೂ ಇರುವನು ಎಂದು ತಿಳಿದವನು ಮಾಯೆಯನ್ನು ದಾಟುವನು.

ಈ ವಾಸುದೇವನ ಕಥೆಯೇ ಭಾಗವತ ಪುರಾಣವು. ಇದನ್ನು ವ್ಯಾಸಭಗವಾನರು ರಚಿಸಿದರು. ಇದು ಲೋಕದಲ್ಲಿ ಹರಡಲಿ, ಎಲ್ಲರೂ ಉದ್ಧಾರವಾಗಲಿ, ಎಂದು ಇದನ್ನು ಮಗನಿಗೆ ಹೇಳಿಕೊಟ್ಟರು. ಸರ್ವವೇದ ಇತಿಹಾಸಗಳ ಸಾರವಾದ ಈ ಭಾಗವತವನ್ನು ವ್ಯಾಸರ ಮಗನಾದ ಶುಕಮಹರ್ಷಿಯು, ಸಾಯುವುದಕ್ಕೆ ಸಿದ್ಧನಾಗಿ ಗಂಗಾತೀರದಲ್ಲಿ ನಿಂತ ಅಭಿಮನ್ಯು ಪುತ್ರನಾದ ಪರೀಕ್ಷಿತ ಮಹಾರಾಜನಿಗೆ ಹೇಳಿದನು. ಆಗ ನಾನಲ್ಲಿದ್ದು ಆ ಶುಕಮಹರ್ಷಿಯ ಅನುಗ್ರಹದಿಂದ ಕೇಳಿದೆನು. ಈ ಕಲಿಯುಗದಲ್ಲಿ ಈ ಭಾಗವತವು ಸೂರ್ಯನಂತೆ ಜ್ಞಾನವನ್ನು ಕೊಟ್ಟು ಕಾಪಾಡುವುದು."

ಹೀಗೆಂದ ಸೂತನನ್ನು ಕುರಿತು ಶೌನಕಮಹರ್ಷಿಯು ಹೀಗೆ ಹೇಳಿದನು: "ಪುರಾಣ ಹೇಳುವರಲ್ಲೆಲ್ಲಾ ಶ್ರೇಷ್ಠನಾದ ಸೂತನೆ, ಶುಕಮಹರ್ಷಿಯು ಜ್ಞಾನಿಯು. ಆತನು ಹುಚ್ಚನಂತೆ, ಮೂಕನಂತೆ, ಜಡನಂತೆ ಅಲೆದುಕೊಂಡಿರುವನು. ಹಸುವು ಕರೆಯುವಷ್ಟು ಹೊತ್ತು

ಮಾತ್ರ ಒಂದು ಕಡೆ ಇರುವವನು. ಆತನು ಈ ಭಾಗವತವನ್ನು ಹೇಳಿದನೆನ್ನುವುದು ಹೇಗೆ? ವ್ಯಾಸರು ಈ ಭಾಗವತವನ್ನು ಏಕೆ ಬರೆದರು? ಅಭಿಮನ್ಯುವಿನ ಮಗನಾದ ಪರೀಕ್ಷಿತನು ಸಾಯುವುದಕ್ಕೆ ಸಿದ್ಧನಾಗಿ ಗಂಗಾ ಮಧ್ಯದಲ್ಲಿ ಕುಳಿತಾಗ ಶುಕನು ಈ ಕಥೆಯನ್ನು ಹೇಳಿದನು ಎಂದೆಯಲ್ಲ? ಪಾಂಡವರ ಮೊಮ್ಮಗನಾದ ಆ ಮಹಾ ರಾಜನಿಗೆ ಏಕೆ ಅಂತಹ ಗತಿಯು ಬಂತು? ನೀನು ಇವೆಲ್ಲವನ್ನೂ ನಮಗೆ ವಿಸ್ತಾರವಾಗಿ ಹೇಳು" ಎಂದು ಕೇಳಿದನು.

ಸೂತನು ಆಗಲಿ ಎಂದು ಎಲ್ಲವನ್ನೂ ಹೇಳಿದನು: "ದ್ವಾಪರ ಯುಗದಲ್ಲಿ ಪರಾಶರನಿಂದ ಸತ್ಯವತಿಯಲ್ಲಿ, ಶ್ರೀ ವಿಷ್ಣುವಿನಂಶದಿಂದ ವ್ಯಾಸರು ಜನಿಸಿದರು. ಅವರು ಸರಸ್ವತೀ ತೀರದಲ್ಲಿ ಒಂದು ದಿವಸ ಸೂರ್ಯೋದಯ ಕಾಲದಲ್ಲಿ ಕುಳಿತು ಹೀಗೆ ಯೋಚಿಸಿದರು: ''ಬರು ಬರುತ್ತ ಜನರು ಶ್ರದ್ಧಾರಹಿತರಾಗುವರು. ಆಯುಸ್ಸು, ಬುದ್ಧಿ ಶಕ್ತಿಗಳು ಕಡಿಮೆಯಾಗುತ್ತಾ ಬರುವುವು. ಅದಕ್ಕಾಗಿ ವೇದ ಗಳನ್ನು ವಿಂಗಡಿಸಿಟ್ಟ್ಟು ಆಯಿತು. ಇತಿಹಾಸ ಪುರಾಣಗಳೆಂಬ ಐದನೆಯ ವೇದವೆಂಬ ಭಾರತವನ್ನು ರಚಿಸಿದುದಾಯಿತು. ಇಷ್ಟಾದರೂ ಇನ್ನೂ ನನಗೆ ತೃಪ್ತಿಯಾಗಲಿಲ್ಲ. ವ್ರತವನ್ನು ಹಿಡಿದು ವೇದಗಳನ್ನೂ, ಗುರುಗಳನ್ನೂ, ಅಗ್ನಿಗಳನ್ನೂ, ಗೌರವಿಸಿದೆನು. ಗುರುಗಳ ಅಪ್ಪಣೆಯನ್ನು ಪಾಲಿಸಿದೆನು ಭಾರತವೆಂಬ ನೆಪದಿಂದ ವೇದಾರ್ಥಗಳೆಲ್ಲವನ್ನೂ ಪ್ರದರ್ಶಿಸಿದೆನು. ಅದರೂ ನನಗೇಕೆ ತೃಪ್ತಿಯಾಗಲಿಲ್ಲ? ಪರಮಹಂಸರಿಗೆ ಅತಿಪ್ರಿಯವಾದ ಭಾಗವತ ಧರ್ಮಗಳನ್ನೂ ಬರೆಯಬೇಕೋ ಏನೋ?" ಎಂದು ಯೋಚಿಸು ತ್ತಿರುವಾಗ ದೇವರ್ಷಿಯಾದ ನಾರದರು ಅಲ್ಲಿಗೆ ಬಂದರು.

ವ್ಯಾಸರು ಒಪ್ಪಿಸಿದ ಪೂಜೆಯನ್ನು ಅಂಗೀಕರಿಸಿ ನಗುನಗುತ್ತಾ ನಾರದರು, "ವ್ಯಾಸರೇ! ಸುಖವಾಗಿದ್ದೀರಾ? ನೀವು ಬೇಕಾದ

ಹಾಗೆ ಬ್ರಹ್ಮವಿಚಾರವನ್ನು ನಡೆಸಿರುವಿರಿ. ಆದರೂ ಏಕೆ ಹೀಗಿರುವಿರಿ ?" ಎಂದು ಕೇಳಿದರು. ವ್ಯಾಸರು "ನಾರದರೆ! ನಿಜ. ನೀವು ಮೂರು ಲೋಕಗಳನ್ನು ಸಂಚರಿಸುವಂತೆ, ಮನುಷ್ಯರ ಮನಸ್ಸಿನ ಒಳಗೂ ಹೊಕ್ಕು ತಿಳಿಯಬಲ್ಲವರು ಅದರಿಂದ ನೀವೇ ಅದನ್ನು ತಿಳಿದು ಹೇಳಬೇಕು" ಎಂದರು. ಆಗ ನಾರದರು "ನೀವು ಅನೇಕವಾಗಿ ಉಪದೇಶ ಮಾಡಿರುವಿರಿ ನಿಜ. ಆದರೂ ವಾಸುದೇವನ ಕಥೆಯನ್ನು ಇನ್ನೂ ಹೇಳಿಲ್ಲ. ಅದರಿಂದ ನಿಮಗಿನ್ನೂ ಶಾಂತಿಯು ಬಂದಿಲ್ಲ. ಆ ವಾಸುದೇವನ ಕಥೆಯು ಜನ್ಮ ಜನ್ಮಾಂತರಗಳ ಪಾಪಗಳನ್ನು ತೊಳೆಯುವುದು: ಜ್ಞಾನವನ್ನು ಕೊಡುವುದು; ಪರಬ್ರಹ್ಮವನ್ನು ಸಾಕ್ಷಾತ್ಕಾರ ಮಾಡಿ ಕೊಡುವುದು. ಅದರಿಂದ ಮನಸ್ಸನ್ನು ಒಂದೇ ಕಡೆ ನಿಲ್ಲಿಸಿ ಆ ಪುರುಷೋತ್ತಮನ ಕಥೆಗಳನ್ನು ಧ್ಯಾನ ಮಾಡಿ ನೋಡಿರಿ ಆತನ ಚರಿತ್ರೆಗಳನ್ನು ಗ್ರಂಥವಾಗಿ ಬರೆದಿಡಿರಿ. ಸ್ವಧರ್ಮವನ್ನು ಬಿಟ್ಟವನೂ ಕೂಡ ಶ್ರೀ ಹರಿಸ್ಮರಣವನ್ನು ಪದೇ ಪದೇ ಮಾಡುತ್ತಿದ್ದರೆ ಕೃತಾರ್ಥನಾಗುವನು. ಈ ಸಮಸ್ತವೂ ವಾಸುದೇವನಲ್ಲದೆ ಬೇರೆಯಿನ್ನೇನೂ ಇಲ್ಲ. ಎಂಬ ಸುಜ್ಞಾನವನ್ನು ಪಡೆಯುವನು. ಈ ಸುಜ್ಞಾನವನ್ನು ತಿಳಿಯುವುದೇ ಜನ್ಮವನ್ನು ಪಡೆದುದಕ್ಕೆ ಫಲವು !

ಇಂತಹ ಜ್ಞಾನವನ್ನು ಪಡೆದೇ ನಾನೂ ಕೃತಾರ್ಥನಾದುದು. ನನ್ನ ಕಥೆಯನ್ನು ಕೇಳಿ: ಹಿಂದಿನ ಕಲ್ಪದಲ್ಲಿ ನಾನು ದಾಸಿಯ ಮಗನು. ಒಂದು ಸಲ ಜ್ಞಾನಿಗಳೂ ಭಕ್ತರೂ ಆದ ಬ್ರಾಹ್ಮಣರ ಸಹವಾಸವು ದೊರೆಯಿತು. ಅವರು ನನ್ನ ಸೇವೆಯಿಂದ ತೃಪ್ತರಾಗಿ ನನಗೆ ಕೃಷ್ಣಕಥೆಯನ್ನೂ, ವಿಷ್ಣು ಭಕ್ತಿಯನ್ನೂ ಉಪದೇಶ ಮಾಡಿದರು. ತಾಯಿಯು ಬದುಕಿದ್ದವರೆಗೂ ಆಕೆಯ ಜೊತೆಯಲ್ಲಿದ್ದು ಆಮೇಲೆ ಯಾತ್ರೆ ಹೊರಟೆನು.

"ನಮೋ ಭಗವತೇ ತುಭ್ಯಂ ವಾಸುದೇವಾಯ ಧೀಮಹಿ । ಪ್ರದ್ಯುಮ್ನಾಯಾನಿರುದ್ಧಾಯ ನಮಸ್ಸಂಕರ್ಷಣಾಯಚ" ಎಂದು ಆ ಪುರುಷೋತ್ತಮನನ್ನು ಧ್ಯಾನ ಮಾಡುತ್ತ ಯಾತ್ರೆ ಮಾಡುತ್ತಿದ್ದ ನನಗೆ ಆ ವಾಸುದೇವನ ದಯೆಯಿಂದ ಸುಜ್ಞಾನವು ಲಭಿಸಿತು. ಸಂತೋಷವು ತಾನೇ ತಾನಾಯಿತು"

ಹೀಗೆ ಹೇಳಿದ ನಾರದನನ್ನು ಕುರಿತು "ನಾರದರೇ, ನೀವು ದೇಹವನ್ನು ತ್ಯಾಗ ಮಾಡುವವರೆಗೂ ಹೇಗಿದ್ದಿರಿ? ಆಗಿನ ಸ್ಮೃತಿಯು ನಿಮಗೆ ಇನ್ನೂ ಇರುವುದಕ್ಕೆ ಕಾರಣವೇನು ? ಏಕೆ ಮರೆತು ಹೋಗಲಿಲ್ಲ ?" ಎಂದು ವ್ಯಾಸರು ಕೇಳಿದರು. ನಾರದರು "ನಾನು ಕೊನೆಯ ವರೆಗೂ ತೀರ್ಥಯಾತ್ರೆಯನ್ನು ಮಾಡಿಕೊಂಡೇ ಇದ್ದುಬಿಟ್ಟೆನು. ಒಂದು ದಿನ, ಮನುಷ್ಯರಿಲ್ಲದ ಕಾಡಿನಲ್ಲಿ ತಿರುಗುತ್ತಿದ್ದ ನನಗೆ ಬಹಳ ಆಯಾಸವಾಯಿತು. ಆಗ ಒಂದು ನದಿಯಲ್ಲಿ ಸ್ನಾನ ಪಾನಗಳನ್ನು ಮಾಡಿಕೊಂಡು ಒಂದು ಅಶ್ವತ್ಥವೃಕ್ಷದೆಡೆಯಲ್ಲಿ ಕುಳಿತೆನು. ಎಲ್ಲವನ್ನೂ ಬಿಟ್ಟು ಶ್ರೀಹರಿಯ ಧ್ಯಾನವೊಂದರಲ್ಲಿ ನಿಂತುಬಿಟ್ಟೆನು. ಆಗ ಸ್ವಾಮಿಯ ದರ್ಶನವಾಯಿತು. ಎಲ್ಲವೂ ಮರೆತು ಹೋಯಿತು. ಆನಂದವು ತಾನೇ ತಾನಾಯಿತು. ಅದೇ ರೂಪವನ್ನು ಮತ್ತೆ, ಮತ್ತೆ ನೋಡುತ್ತಿರಬೇಕು ಎನ್ನಿಸಿತು. ಆ ಪ್ರಯತ್ನದಲ್ಲಿ ಮಿಕ್ಕೆಲ್ಲವನ್ನೂ ಬಿಟ್ಟು ಕುಳಿತ ನನಗೆ ಆ ವನದಲ್ಲಿ ಒಂದು ವಾಣಿಯು ಕೇಳಿಸಿತು. "ಈ ಜನ್ಮದಲ್ಲಿ ನೀನು ಮತ್ತೆ ನನ್ನನ್ನು ನೋಡಲಾರೆ. ನಿನ್ನ ಭಕ್ತಿಯು ಸ್ಥಿರವಾಗಿರುವುದು. ಬರುವ ಜನ್ಮದಲ್ಲಿ ನೀನು ನನ್ನ ಪರಿಜನರಲ್ಲಿ ಒಬ್ಬನಾಗುವೆ. ಕಲ್ಪವು ಮರಳಿದರೂ ನಿನಗೆ ಮರವು ಬರುವುದಿಲ್ಲ" ಎಂದ ಆ ಮಾತನ್ನು ಕೇಳಿ ನನ್ನ ಮನಸ್ಸು ಶಾಂತವಾಯಿತು.

ಅಂದಿನಿಂದ ಶ್ರೀ ಹರಿಯ ನಾಮಗಳನ್ನು ನಾಚದೆ ಗಟ್ಟಿ

ಯಾಗಿ ಹೇಳಿಕೊಳ್ಳುತ್ತ ಆತನ ಚರಿತ್ರೆಗಳನ್ನು ಹಾಡಾಗಿ ಹಾಡುತ್ತ ತಿರುಗಿಕೊಂಡಿದ್ದೆನು. ಒಂದು ದಿವಸ ಜನ್ಮವು ಮುಗಿದು ದೇಹವು ಬಿದ್ದು ಹೋಯಿತು. ಆ ವೇಳೆಗೆ ಕಲ್ಪವೂ ಮುಗಿದು ಬ್ರಹ್ಮನು ಯೋಗನಿದ್ರೆಯಲ್ಲಿರುವ ನಾರಾಯಣಮೂರ್ತಿಯನ್ನು ಸೇರಬೇಕೆಂದುಕೊಂಡನು. ನಾನು ಆತನ ಶ್ವಾಸವಾಗಿ ವಾಯುವಿನೊಡನೆ ಹೋಗಿ ಆತನೊಳಗೆ ಸೇರಿಕೊಂಡೆನು. ಮತ್ತೆ ಆ ಬ್ರಹ್ಮನು ನಿದ್ರೆಯಿಂದ ಎದ್ದಾಗ ಬ್ರಹ್ಮದೇವನ ಶ್ವಾಸವಾಯುವಿನಿಂದ ಹುಟ್ಟಿದ ಮರೀಚಿ ಮೊದಲಾದ ಬ್ರಹ್ಮರೊಡನೆ ನಾನೂ ಹುಟ್ಟಿ ಬಂದೆನು. ಅಂದಿನಿಂದಲೂ ಆ ಪರಮೇಶ್ವರನು ದಯಪಾಲಿಸಿದ ಈ ವೀಣೆಯನ್ನು ಬಾರಿಸಿಕೊಂಡು, ಶ್ರೀಹರಿಯ ಕಥೆಯನ್ನೂ ಹಾಡಿಕೊಂಡು ಮೂರು ಲೋಕಗಳನ್ನೂ ಸುತ್ತುತ್ತಿರುವೆನು. ಶ್ರೀ ಹರಿಯೂ, ಕೂಗಿ ಕರೆದಂತೆ ನನಗೆ ಆಗಾಗ ದರ್ಶನ ಕೊಡುವನು.

ಈ ಹರಿಕಥೆಯ ಹಾಗೆ ಮನಸ್ಸಿಗೆ ಶಾಂತಿಯನ್ನು ಕೊಡಬಲ್ಲುದು ಇನ್ನೊಂದಿಲ್ಲ. ಯೋಗವೂ ಇಂತಹ ಶಾಂತಿಯನ್ನು ಕೊಡಲಾರದು. ಆದುದರಿಂದ ನೀವೂ ಈ ಹರಿಕಥೆಯನ್ನು ಗ್ರಂಥವಾಗಿ ರಚಿಸಿ ಆತ್ಮಶಾಂತಿಯನ್ನು ಪಡೆಯಿರಿ" ಎಂದು ಹೇಳಿ ನಾರದರು ವೀಣಾವಾದನ ಮಾಡಿಕೊಂಡು ಹೊರಟು ಹೋದರು.

ಅನಂತರ ವ್ಯಾಸರು ಸರಸ್ವತೀ ನದಿಯ ತೀರದಲ್ಲಿರುವ ಶಮ್ಯಾಪ್ರಾಸವೆಂಬ ಆಶ್ರಮದಲ್ಲಿ ಕುಳಿತು ಭಗವಂತನ ಧ್ಯಾನ ಮಾಡಿದರು. ಅವರಿಗೆ ಭಗವಂತನ ದರ್ಶನವಾಯಿತು. ಆತನ ದಯೆಯಿಂದ ಆತನ ಮಾಯೆಯೂ, ಆ ಮಾಯೆಯೊಳಗಾದ ಜೀವನೂ ಕಾಣಿಸಿದರು. ಮಾಯೆಗೆ ಸಿಕ್ಕಿ ದುಃಖಪಡುವ ಜೀವನು, ಆ ಮಾಯೆಯನ್ನು ದಾಟಬೇಕಾದರೆ ಏನು ಮಾಡಬೇಕು ಎಂಬುದನ್ನೂ, ಅವರು ಚಿಂತಿಸಿದರು. ಭಗವಂತನಲ್ಲಿ ಭಕ್ತಿ ಮಾಡುವುದು ಒಂದೇ ಸಾಧನ ಎಂದು

ಗೊತ್ತಾಯಿತು. ಆ ಭಕ್ತಿಗೆ ಸಾಧನವು ಭಗವಂತನ ಕಥೆಗಳನ್ನು ಕೇಳುವುದು ಎಂದೂ ತಿಳಿಯಿತು. ಆಗ ಭಗವಂತನಲ್ಲಿ ಭಕ್ತಿಯನ್ನುಂಟು ಮಾಡುವ ಭಕ್ತಿಶಾಸ್ತ್ರವನ್ನು ವಿರಚಿಸಿ ಮಗನೂ ಮಹಾಜ್ಞಾನಿಯೂ ಆದ ಶುಕಮಹರ್ಷಿಗೆ ಅದನ್ನು ಬೋಧಿಸಿದರು. ಆತನು ತಾನು ಜೀವನ್ಮುಕ್ತನಾದರೂ ಭಗವಂತನ ಭಕ್ತನಾದುದರಿಂದ ಆ ಶಾಸ್ತ್ರವನ್ನು ಸಂಪೂರ್ಣವಾಗಿ ಗ್ರಹಣ ಮಾಡಿದನು.

---

ಎರಡನೆಯ ಅಧ್ಯಾಯ

## ಭಾರತವು ಹರಡಿದುದು

ಸೂತನು ಇನ್ನೂ ಹೇಳಿದನು: "ಎಲೈ ಶೌನಕಾದಿಗಳಿರಾ ! ಇನ್ನು ಪರೀಕ್ಷಿದ್ರಾಜನ ವೃತ್ತಾಂತವನ್ನು ಹೇಳುವೆನು ಕೇಳಿರಿ.

ಭೀಮಸೇನನು ಯುದ್ಧದಲ್ಲಿ ಗದೆಯಿಂದ ಕೌರವನ ತೊಡೆಗಳನ್ನು ಮುರಿದನು. ಆ ದಿನ ರಾತ್ರಿ ಅಶ್ವತ್ಥಾಮನು "ಪಾಂಡವರ ವಂಶವೇ ಇಲ್ಲದಂತೆ ಮಾಡುವೆನು. ಕೌರವನಿಗೆ ತೃಪ್ತಿಯಾಗಲಿ" ಎಂದು, ಪಾಂಡವರ ಶಿಬಿರಕ್ಕೆ ನುಗ್ಗಿ ಮಲಗಿ ನಿದ್ದೆ ಮಾಡುತ್ತಿದ್ದ ಉಪಪಾಂಡವರ ಶಿರಗಳನ್ನು ಕತ್ತರಿಸಿದನು. ಅದನ್ನು ತೆಗೆದುಕೊಂಡು ಹೋಗಿ ಕೌರವನಿಗೆ ಕೊಡಲು, ಅವನು "ಛೇ! ಏನು ಕೆಲಸ ಮಾಡಿದೆ? ನೀನು ಶಿಶುಹತ್ಯೆ ಮಾಡಬಾರದಾಗಿತ್ತು!" ಎಂದು ಆ ತಲೆಗಳನ್ನು ಅತ್ತ ಹಾಕಿ ಪ್ರಾಣ ಬಿಟ್ಟನು.

ಇತ್ತ ಮಕ್ಕಳನ್ನು ಕಳೆದುಕೊಂಡ ದ್ರೌಪದಿಯು ಅತ್ತಳು. ಆಕೆಯನ್ನು ಸಮಾಧಾನ ಮಾಡಲು ಕೃಷ್ಣಾರ್ಜುನರು ಹೋಗಿ ಅಶ್ವತ್ಥಾಮನನ್ನು ಹಿಡಿದು ಎಳೆತಂದರು. ದ್ರೌಪದಿಯು "ನಾನು

ಮಕ್ಕಳನ್ನು ಕಳೆದುಕೊಂಡು ಅಳುವಂತೆಯೇ ಇವರ ತಾಯಿಯೂ ಅಳುವಳು ಅಲ್ಲದೆ ಈತನು ದ್ರೋಣಾಚಾರ್ಯರ ಮಗನು ಆತನಿಂದ ಅಸ್ತ್ರವಿದ್ಯೆಯನ್ನು ಕಲಿತವನು ನೀನು. ತಂದೆಯ ಮೇಲಿನ ಭಕ್ತಿಯಿಂದ ಮಗನನ್ನು ಬಿಟ್ಟುಬಿಡು" ಎಂದು ಅರ್ಜುನನಿಗೆ ಹೇಳಿದಳು. ಕೊನೆಗೆ ಅರ್ಜುನನು ಅಶ್ವತ್ಥಾಮನ ಮುಡಿಯನ್ನು ಕತ್ತರಿಸಿ ಅಲ್ಲಿದ್ದ ಚೂಡಾಮಣಿಯನ್ನು ತೆಗೆದುಕೊಂಡು ಬಿಟ್ಟುಬಿಟ್ಟನು.

ಅಶ್ವತ್ಥಾಮನು ಅವಮಾನದಿಂದ ಕೋಪಗೊಂಡು ಭೂಮಿಯಲ್ಲಿ ಪಾಂಡವರ ವಂಶವೇ ಇಲ್ಲದಂತೆ ಮಾಡುವೆನು ಎಂದು, ಮತ್ತೆ ಅಸ್ತ್ರವನ್ನು ತೊಟ್ಟು ಹೊಡೆದನು. ಅದು ಬಂದು ಗರ್ಭಿಣಿಯಾಗಿದ್ದ ಉತ್ತರೆಯನ್ನು ಹಿಡಿಯಿತು ಉತ್ತರೆಯು ಅಭಿಮನ್ಯುವಿನ ಹೆಂಡತಿ. ಅಭಿಮನ್ಯುವು ಅರ್ಜುನನ ಮಗನು. ಅವಳು ಕೃಷ್ಣನ ಮರೆಹೊಕ್ಕಳು. ಕೃಷ್ಣನು ತನ್ನ ಚಕ್ರಾಯುಧದಿಂದ ಆ ಅಸ್ತ್ರವನ್ನು ನಿವಾರಿಸಿದನು. ಕಾಲಕ್ರಮದಲ್ಲಿ ಆಕೆಯು ಗಂಡು ಮಗುವೊಂದನ್ನು ಪ್ರಸವಿಸಿದಳು. ಆ ಮಗುವು ಗರ್ಭದಲ್ಲಿರುವಾಗ ತನ್ನನ್ನು ಕೊಲ್ಲಬೇಕೆಂದು ಬಂದ ಅಸ್ತ್ರವನ್ನು ಹೆಬ್ಬೆರಳಿನಷ್ಟಿರುವ ಪುರುಷನೊಬ್ಬನು ತನ್ನ ಗದಾದಂಡದಿಂದ ನಿವಾರಿಸುತ್ತಿರುವುದನ್ನು ಕಂಡಿದ್ದನು: "ಹಾಗೆ ತಾನು ಗರ್ಭದಲ್ಲಿರುವಾಗ ತನಗೆ ಕಾಣಲಿದ್ದ ಆ ಪುರುಷನು ಎಲ್ಲೆಲ್ಲಿಯೂ ಇರುವನೇ? ಎಂದು ಬಂದ ಬಂದವರನ್ನೆಲ್ಲಾ ಪರೀಕ್ಷಿಸುತ್ತಿದ್ದುದರಿಂದ ಆ ಮಗುವಿಗೆ ಪರೀಕ್ಷಿತ್ತು ಎಂದೂ, ವಿಷ್ಣುವಿನ ಕೃಪೆಯಿಂದ ಬದುಕಿದವನಾದ್ದರಿಂದ ಆ ಮಗುವಿಗೆ ವಿಷ್ಣುರಾತನೆಂದೂ ಹೆಸರಾಯಿತು.

ಆ ಮಗುವು ಹುಟ್ಟಿದನೆಂದು ಪಾಂಡವರು ಬಹಳ ಸಂತೋಷಪಟ್ಟುಕೊಂಡು ಮತ್ತೆ ಪಾಂಡುಮಹಾರಾಜನೇ ತನ್ನ ವಂಶವನ್ನು ಬೆಳೆಸಿಕೊಳ್ಳಲು ಹುಟ್ಟಿರಬೇಕು ಎಂದುಕೊಂಡರು. ಬೇಕಾದ ಹಾಗೆ ವೈಭವಗಳಿಂದ ಅವರು ಪುತ್ರೋತ್ಸವವನ್ನು ಮಾಡಿದರು.

ಶ್ರೀಕೃಷ್ಣನು ತನ್ನ ಅವತಾರವನ್ನು ಪೂರಯಿಸಿ ವೈಕುಂಠಕ್ಕೆ ಹಿಂತಿರುಗಿದನು.

ಈ ಸುದ್ದಿಯು ಹಸ್ತಿನಾವತಿಯಲ್ಲಿದ್ದ ಧರ್ಮರಾಜನಿಗೆ ತಿಳಿಯಿತು. ಆತನೂ ಆತನ ಜೊತೆಯಲ್ಲಿ ಎಲ್ಲರೂ ಕೃಷ್ಣನು ಹೋದನೆಂದು ಬಹು ದುಃಖಪಟ್ಟರು. ಕೃಷ್ಣನು ದೇಹವನ್ನು ಬಿಟ್ಟ ದಿವಸವೇ ಕಲಿಯುಗವು ಪ್ರಾರಂಭವಾಯಿತು ಎಂಬುವನ್ನು ತಿಳಿದು ಪಾಂಡವರು ತಮ್ಮ ಮೊಮ್ಮಗನಾದ ಪರೀಕ್ಷಿತನಿಗೆ ಪಟ್ಟವನ್ನು ಕಟ್ಟಿ ತಾವೆಲ್ಲರೂ ಹಿಮಾಲಯಕ್ಕೆ ಹೊರಟು ಹೋದರು.

ಪರೀಕ್ಷಿತನು ಧರ್ಮವಾಗಿ ರಾಜ್ಯವಾಳಿದನು. ತನ್ನ ಸೋದರಮಾವನಾದ ಉತ್ತರನ ಮಗಳು ಇರಾವತಿಯನ್ನು ಮದುವೆಯಾಗಿ ಆಕೆಯಲ್ಲಿ ಜನಮೇಜಯನೇ ಮೊದಲಾದ ನಾಲ್ವರು ಮಕ್ಕಳನ್ನು ಪಡೆದನು. ಗಂಗಾತೀರದಲ್ಲಿ ಮೂರು ಅಶ್ವಮೇಧಗಳನ್ನು ಮಾಡಿದನು. ಆಗ ಇಂದ್ರಾದಿ ದೇವತೆಗಳೆಲ್ಲರೂ ಪ್ರತ್ಯಕ್ಷರಾಗಿ ತಮ್ಮ ತಮ್ಮ ಹವಿರ್ಭಾಗಗಳನ್ನು ತೆಗೆದುಕೊಂಡು ಹೋದರು. ಆತನೂ ತನ್ನ ತಾತಂದಿರಂತೆ ವಿಜಯ ಯಾತ್ರೆ ಹೊರಟು ದೇಶದೇಶಗಳನ್ನು ಗೆದ್ದನು. ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತಾ ಹಿಂತಿರುಗಿ ಬರುವಾಗ ಅವನಿಗೆ ಕಲಿದರ್ಶನವಾಯಿತು. ಕಲಿಯು ಮ್ಲೇಚ್ಛ ರಾಜನ ಹಾಗಿದ್ದಾನೆ. ಒಂದು ಕಾಲು ಮಾತ್ರವಿರುವ ಒಂದು ಗೂಳಿ, ಕೊಟ್ಟಿಗಿಲ್ಲದ ಹಸುವೊಂದು, ಇವೆರಡನ್ನೂ ದೊಣ್ಣೆ ತೆಗೆದುಕೊಂಡು ಹೊಡೆಯುತ್ತಿದ್ದಾನೆ; ಒದೆಯುತ್ತಿದ್ದಾನೆ. ಅವನ್ನು ಕಂಡು ಅರಸನಿಗೆ ಬಹಳ ಕೋಪ ಬಂತು, ಕತ್ತಿಯನ್ನು ಹಿಡಿದು ಆ ದೊರೆಯ ವೇಷದಲ್ಲಿದ್ದ ಮ್ಲೇಚ್ಛನ ಮೇಲೆ ಬಿದ್ದು ಅವನನ್ನು ಕತ್ತರಿಸಲು ಹೋದನು. ಅವನು ಕೂಡಲೇ ತನ್ನ ಕಿರೀಟವನ್ನು ಅತ್ತ ಇಟ್ಟು ಪರೀಕ್ಷಿತನ ಕಾಲಿಗೆರಗಿದನು: "ಕಾಪಾಡಬೇಕು" ಎಂದು ಕೇಳಿಕೊಂಡನು.

ಅರಸನು ಅವನು ಕಲಿಯೆಂದು ತಿಳಿದು "ನೀನು ಅಧರ್ಮಗಳಿಗೆ ಸಹಾಯವಾಗುವುದರಿಂದ ಎಷ್ಟು ಮಾತ್ರವೂ ನನ್ನ ದೇಶದಲ್ಲಿರಕೂಡದು. ಭಗವಂತನಾದ ಮಹಾವಿಷ್ಣುವು ಇದ್ದ ದೇಶದಲ್ಲಿ ನೀನಿರಕೂಡದು ನಡೆ" ಎಂದು ಗದರಿಸಿದನು. ಕಲಿಯು ಗಡಗಡನೆ ನಡುಗುತ್ತಾ "ನಿನ್ನ ಅಪ್ಪಣೆಯಂತೆಯೇ ಆಗಲಿ. ನನಗೆ ಇರುವುದಕ್ಕೆ ಒಂದು ಸ್ಥಾನವನ್ನು ತೋರಿಸು" ಎಂದು ಬೇಡಿಕೊಂಡನು. ಅರಸನು "ಜೂಜಾಟವು ನಡೆಯುವ ಸ್ಥಳ, ಮದ್ಯಪಾನವು ನಡೆಯುವ ಸ್ಥಳ, ವ್ಯಭಿಚಾರಿಣಿಯರು ಇರುವ ಸ್ಥಳ, ಹಿಂಸೆಯು ನಡೆಯುವ ಸ್ಥಳ, ಈ ನಾಲ್ಕು ಅಧರ್ಮ ಸ್ಥಳಗಳು ಅವು ನಿನಗೆ ನಿವಾಸಗಳಾಗಲಿ" ಎಂದು ಕಟ್ಟಳೆ ಮಾಡಿದನು. ಕಲಿಯು "ದೇವಾ, ಇವೆಲ್ಲಕ್ಕೂ ಆಶ್ರಯವಾದ ಒಂದೇ ಒಂದು ಸ್ಥಾನವನ್ನು ತೋರಿಸು" ಎನ್ನಲು ಅರಸನು ಯೋಚನೆ ಮಾಡಿ "ಸುಳ್ಳು, ಮದ್ಯ, ವ್ಯಭಿಚಾರ, ಹಿಂಸೆ, ಇವಿಷ್ಟಕ್ಕೂ ಕಾರಣವಾಗಿ, ವೈರಕ್ಕೆ ಮೂಲಕಾರಣವಾದುದು ಸುವರ್ಣವು ಅಲ್ಲಿರು" ಎಂದನು ಅಂದಿನಿಂದ ಕಲಿಯು ಈ ಐದು ಸ್ಥಾನಗಳಲ್ಲಿರುವನು.

ಹೀಗೆ ಅರಸನು ಕಲಿಯನ್ನು ನಿಗ್ರಹಿಸಿ, ಗೋವುಗಳ ಕಡೆ ತಿರುಗಿದನು. ಆ ಬಿಳಿಯ ಗೂಳಿಯು ಧರ್ಮವೆಂದೂ ಆ ಹಸುವು ಭೂದೇವಿಯೆಂದೂ ತಿಳಿದು, ಅವರನ್ನು ಸಂತೈಸಿದನು. ತನ್ನ ರಾಜ್ಯದಲ್ಲಿ ಎಲ್ಲರೂ ತಪಸ್ಸು, ಶೌಚ, ದಯೆ, ಸತ್ಯ, ಎಂಬ ಧರ್ಮವನ್ನೂ ಭೂಮಿಯನ್ನೂ ಸಂತೋಷಪಡಿಸಿ, ತಾನು ರಾಜಧಾನಿಗೆ ಹೋದನು ಆತನ ರಾಜ್ಯದಲ್ಲಿ ಸರ್ವರೂ ಜ್ಞಾನವನ್ನು ಆರ್ಜಿಸುತ್ತ, ದೇವತೆಗಳಿಗೂ, ಪಿತೃಗಳಿಗೂ ಪೂಜೆಯನ್ನು ಒಪ್ಪಿಸುತ್ತಾ ಸತ್ಯವಾಗಿ ಬಾಳುತ್ತಾ ಸುಖದಿಂದಿದ್ದರು.

ಪರೀಕ್ಷಿದ್ರಾಜನು ಭಗವತ್ಕಥಾಮೃತವನ್ನು ಯಾವಾಗಲೂ ಸೇವಿಸುತ್ತ ರಾಜ್ಯವನ್ನು ಆಳುತ್ತಿದ್ದನು ಆತನು ಕಲಿಯನ್ನು ನಿಗ್ರಹಿಸಬಹುದಾಗಿತ್ತು. ಆದರೂ ಆತನಿಂದ ಭಕ್ತರಿಗೆ ಜ್ಞಾನಿಗಳಿಗೆ ಉಪಕಾರವಾಗುವುದೆಂದು ಸುಮ್ಮನಾದನು. ಈ ಯುಗದಲ್ಲಿ ಪುಣ್ಯ, ಕರ್ಮಗಳನ್ನು ಮಾಡುವೆನೆಂದು ಸಂಕಲ್ಪಿಸಿದ ಮಾತ್ರದಿಂದಲೇ ಆ ಕರ್ಮದ ಫಲವು ಸಿದ್ಧಿಸುವುದು. ಈ ಯುಗದಲ್ಲಿ ಪಾಪಸಂಕಲ್ಪವು ತಾನಾಗಿ ಬರುವುದು: ಹಾಗೆ ಬಂದರೂ ಅದನ್ನು ಕಾರ್ಯರೂಪದಲ್ಲಿ ತರುವವರೆಗೂ ಏನು ಪಾಪವೂ ಒರುವುದಿಲ್ಲ. ಅಲ್ಲದೆ ಕಲಿಯು ತನ್ನನ್ನು ಕಂಡು ಅಂಜಿದವರನ್ನು ಅಂಜಿಸುವನಲ್ಲದೆ, ತನ್ನನ್ನು ಅಂಜಿಸಿದವರ ಕಡೆಯೂ ತಿರುಗುವುದಿಲ್ಲ. ಅದರಿಂದ ಈ ಕಲಿಯುಗದಲ್ಲಿ ಭಗವದ್ಭಕ್ತರು ಕಲಿಯನ್ನು ಸುಲಭವಾಗಿ ಜಯಿಸಬಲ್ಲರು. ಭಗವಂತನ ಕಥೆಗಳನ್ನು ಹೇಳಿ, ಕೇಳಿ, ಧನ್ಯರಾದವರಿಗೆ ಕಲಿಯ ಭಯವಿಲ್ಲ.

ಎಲೈ ಶೌನಕಾದಿ ಮಹರ್ಷಿಗಳಿರಾ! ಮುಂದಿನ ಕಥೆಯನ್ನು ಕೇಳಿರಿ. ಒಂದು ದಿನ ಪರೀಕ್ಷಿದ್ರಾಜನು ಬೇಟೆಗೆ ಹೋದನು. ಆಗ ಆತನಿಗೆ ಎಂದೂ ಇಲ್ಲದ ಹಸಿವು ಬಾಯಾರಿಕೆಗಳಾದುವು. ಅನ್ನ ನೀರುಗಳನ್ನು ಹುಡುಕಿಕೊಂಡು ಆತನು ಆ ಕಾಡಿನಲ್ಲೆಲ್ಲಾ ಅಲೆದಾಡಿದನು ಕೊನೆಗೆ ಒಂದು ಆಶ್ರಮವು ಸಿಕ್ಕಿತು. ಅಲ್ಲಿ ಒಳ ಹೊಕ್ಕು ನೋಡಿದರೆ ಯಾರೂ ಇಲ್ಲ. ಇದ್ದ ಒಬ್ಬನು ಸಮಾಧಿಯಲ್ಲಿ ಕುಳಿತಿದ್ದಾನೆ. ಎಷ್ಟು ಕೂಗಿದರೂ, ಕೇಳಿಕೊಂಡರೂ ಅತನು ಕಣ್ಣು ಕೂಡ ಬಿಡಲಿಲ್ಲ. ಆಶ್ರಮದಲ್ಲಿ ಯಾವಾಗಲೂ ಉಪಚಾರದ ಮಾತು, ತಿನ್ನುವುದಕ್ಕೆ ಅನ್ನ, ಕುಡಿಯುವುದಕ್ಕೆ ನೀರು, ಇರುವದಕ್ಕೆ ಎಡೆ ಕೊಡಬೇಕಾದುದು ಧರ್ಮ. ಅದು ಯಾವುದೂ ದೊರೆಯಲಿಲ್ಲ. ಅರಸನಿಗೆ ಕೋಪ ಬಂತು ಈ ಮೌನಿಯು ನಿಜವಾಗಿ ತಪಸ್ವಿಯೋ

ಅಥವಾ ಆಟ ಕಟ್ಟುತ್ತಿರುವನೋ ನೋಡಬೇಕೆನ್ನಿಸಿತು. ಏನು ಮಾಡಿದರೂ ಸುಮ್ಮನಿರುವ ಆ ಮುನಿಯಲ್ಲಿ ಕೋಪವು ಬಂತು. ಆ ಕೋಪದಲ್ಲಿ ಅಲ್ಲಿ ಸತ್ತು ಬಿದ್ದಿದ್ದ ಒಂದು ಹಾವನ್ನು ಬಿಲ್ಲಿನ ಕೊನೆಯಿಂದೆತ್ತಿಕೊಂಡು ಹೋಗಿ ಆ ಋಷಿಯ ಕೊರಳಿಗೆ ಹಾಕಿ ಹೊರಟು ಹೋದನು.

ಆ ಮುನಿಯು ಶಮೀಕನು. ಆತನ ಮಗನು ಶೃಂಗಿಯು. ಆ ಶೃಂಗಿಯು ತನ್ನ ಜೊತೆಯ ಹುಡುಗರಿಂದ ತಂದೆಯ ಕತ್ತಿನಲ್ಲಿ ಸತ್ತ ಹಾವು ಇರುವುದನ್ನು ತಿಳಿದು, ಹಿಂದೆ ಮುಂದೆ ನೋಡದೆ ರೇಗಿದನು. ಆ ಸತ್ತ ಹಾವನ್ನು ಕೊರಳಿಗೆ ಹಾಕಿರುವುದು ತಂದೆಗೆ ಅವಮಾನವಾಯಿತೆಂದು ಅವನಿಗೆ ಕೋಪವು ತಾನೇ ತಾನಾಯಿತು. ಆ ಕೋಪದಲ್ಲಿ ಯಾರು, ಏಕೆ ಹೇಗೆ ಮಾಡಿದರು ? ಎಂಬುವನ್ನು ವಿಚಾರಿಸದೆ, ತನಗಿದ್ದ ಶಾಪಶಕ್ತಿಯನ್ನು ಉಪಯೋಗಿಸಿ, " ಈ ಅಕಾರ್ಯ ಮಾಡಿದವನನ್ನು ಇವೊತ್ತಿನಿಂದ ಏಳನೆಯ ದಿನದಲ್ಲಿ ತಕ್ಷಕನು ಕಡಿದು ಸಾಯಿಸಲಿ " ಎಂದು ವಜ್ರದಂತೆ ಕಠೋರವಾದ ಶಾಪವನ್ನು ಕೊಟ್ಟನು.

ಶಮೀಕನು ಮಹರ್ಷಿಯು. ಆತನು ಈ ಸುದ್ದಿಯನ್ನು ಕೇಳಿ ಬಹುವಾಗಿ ನೊಂದುಕೊಂಡನು. ಮಗನನ್ನು ಅವಿವೇಕಿ ಎಂದು ಬೈಯ್ದನು. " ಪರೀಕ್ಷಿದ್ರಾಜನು ಧರ್ಮಿಷ್ಠನು. ಪ್ರತಾಪಶಾಲಿಯಾದ ಆತನ ರಾಜ್ಯದಲ್ಲಿ ಪ್ರಜೆಗಳು ಸುಖವಾಗಿರುವರು. ಆತನನ್ನು ಸಾಮಾನ್ಯನಂತೆಣಿಸಬಹುದೇ ? ಆತನು ಅಪರಾಧ ಮಾಡಿದವನು ಎಂದರೂ ಆ ಅಲ್ಪ ಅಪರಾಧಕ್ಕೆ ಇಷ್ಟು ದೊಡ್ಡ ಶಿಕ್ಷೆಯೇ ? ಪಾಪಿ ! ಅಂಕೆ ಮಾಡುವ ಅರಸಿಲ್ಲದ ರಾಜ್ಯದಲ್ಲಿ, ಸದಾಚಾರವು ಉಳಿಯುವುದೇ ! ಜನರು ನಾಯಿಗಳಂತೆಯೂ ಕೋತಿಗಳಂತೆಯೂ ಆಗಿ ಎಲ್ಲವೂ ತಲೆಕೆಳಗಾಗುವುದು " ಎಂದು ಬಹಳವಾಗಿ ಒದ್ದಾಡಿದನು.

ಅರಸನಿಗೂ ಈ ಸುದ್ದಿಯು ತಿಳಿದರೂ ಭಗವದ್ಭಕ್ತನಾದ ಆತನು ಆ ಬ್ರಾಹ್ಮಣನಿಗೆ ಪ್ರತಿಶಾಪವನ್ನು ಕೊಡಲಿಲ್ಲ. "ಆ ಹುಡುಗನನ್ನು ಅಂದು ಫಲವೇನು? ಹಸಿವು ಬಾಯಾರಿಕೆಗಳಿಂದ ಬುದ್ಧಿಗೆಟ್ಟು ನಾನು ಅಂತಹ ನೀಚಕೃತ್ಯವನ್ನು ಮಾಡಬಾರದಾಗಿತ್ತು. ಆ ನೀಚ ಕೃತ್ಯದಿಂದ ಬೇಗ ಆ ಹುಡುಗನು ತನಗೆ ತೋರಿದಂತೆ ಶಾಪವನ್ನು ಕೊಟ್ಟನು. ಅವನ ಮಾತೇ ನಡೆದು ಹೋಗಲಿ. ಇನ್ನು ಮೇಲಾದರೂ ನನಗೆ ಯೋಗ್ಯರ ವಿಷಯದಲ್ಲಿ ನೀಚಕಾರ್ಯವನ್ನು ಮಾಡುವ ದುರ್ಬುದ್ಧಿಯು ಇಲ್ಲದಿರಲಿ. ಈ ಶಾಪವು ನನಗೆ ವೈರಾಗ್ಯವನ್ನು ಅವಲಂಬಿಸುವುದಕ್ಕೆ ಕಾರಣವಾಗಲಿ" ಎಂದು ಎಲ್ಲವನ್ನೂ ಬಿಟ್ಟನು. ಮಗನಿಗೆ ರಾಜ್ಯವನ್ನು ಕೊಟ್ಟು ಗಂಗಾತೀರವನ್ನು ಸೇರಿದನು. ಅನ್ನ ನೀರುಗಳನ್ನು ತೊರೆದನು. ಎಲ್ಲರನ್ನೂ ಕಳುಹಿಸಿಬಿಟ್ಟನು. ಋಷಿ ಯಂತೆ ವೇಷವನ್ನು ಧರಿಸಿ, ಭಗವಂತನನ್ನು ಧ್ಯಾನಿಸುತ್ತಾ ಕುಳಿತನು.

ಮಹಾರಾಜನು ಹೀಗೆ ವೈರಾಗ್ಯವಂತನಾಗಿ ಗಂಗಾತೀರದಲ್ಲಿ ಏಕಾಂತವಾಗಿರುವುದನ್ನು ತಿಳಿದು, ಮಹರ್ಷಿಗಳೆಲ್ಲರೂ ಅಲ್ಲಿಗೆ ಬಂದರು. ಆತನು ಅವರಿಗೆಲ್ಲ ಯಥೋಚಿತವಾಗಿ ಪೂಜೆಯನ್ನೊಪ್ಪಿಸಿ "ಭಗವಂತನ ದಯೆಯು ಲಭಿಸಿತು. ಈ ವೈರಾಗ್ಯವು ಬರುವುದಕ್ಕೆ ಶಾಪವು ಕಾರಣವಾಯಿತು. ಇದೇ ಒಂದು ಭಾಗ್ಯ! ಎಲೈ ಮಹಾತ್ಮರೆ, ಒಂದೇ ಮನಸ್ಸಿನಿಂದ ಮಹಾ ವಿಷ್ಣುವನ್ನು ಧ್ಯಾನಿಸುವ ಭಾಗ್ಯವು ನನಗಾಗಲಿ. ಹಾಗಾಗುವಂತೆ ಗಂಗಾದೇವಿಯು ನನಗೆ ಅನುಗ್ರಹಿಸಲಿ. ಈ ದೇಹವು ಬಿದ್ದು ಹೋಗುವವರೆಗೂ ತಾವು ಭಗವತ್ಕಥೆಗಳನ್ನು ಗಾನಮಾಡುತ್ತಿರಿ. ಇನ್ನು ನನಗೆ ಯಾವ ಜನ್ಮ ಬಂದರೂ ಭಗವಂತನಲ್ಲಿಯೂ ಭಾಗವತರಲ್ಲಿಯೂ ದೃಢವಾದ ಭಕ್ತಿ ಯಿರುವಂತೆ ಅನುಗ್ರಹಿಸಿರಿ" ಎಂದು ಪ್ರಾರ್ಥಿಸಿದನು. ಅದನ್ನು ಕೇಳಿ ಅಲ್ಲಿ ಸೇರಿದ್ದ ಮಹರ್ಷಿಗಳೆಲ್ಲರೂ "ಈತನು ವೈರಾಗ್ಯವಂತನು, ಜ್ಞಾನ

ಸಂಪನ್ನನು, ಭಕ್ತಿಯುಕ್ತನು, ಭಕ್ತಾಗ್ರೇಸರನು. ಅದರಿಂದ ಈತನು ಪರಲೋಕವನ್ನು ಸೇರುವವರೆಗೂ ನಾವು ಇಲ್ಲಿಯೇ ಇದ್ದು ಭಾಗವತ ಕಥೆಗಳನ್ನು ಹೇಳಬೇಕು" ಎಂದು ಮಾತನಾಡಿಕೊಂಡರು.

ಆ ವೇಳೆಗೆ ಸರಿಯಾಗಿ ಪರಮ ವಿರಕ್ತನೂ, ಆತ್ಮಜ್ಞಾನಸಂತುಷ್ಟನೂ ಅವಧೂತವೇಷನೂ ಆದ ಶುಕಮಹರ್ಷಿಯು ದಯಮಾಡಿಸಿದನು. ಪರೀಕ್ಷಿತನು ಆತನನ್ನು ಗೌರವವಾಗಿ ಬರಮಾಡಿಕೊಂಡು ಪೀಠದಲ್ಲಿ ಕುಳ್ಳಿರಿಸಿದನು. ಆತನಿಗೆ ರಾಜನು ಸಾಷ್ಟಾಂಗವಾಗಿ ಎರಗಿ, ವಿನಯದಿಂದ ಮೃದುವಾಗಿ ಹೇಳಿದನು: "ದೇವ, ನಿಮ್ಮಂತಹವರ ಹೆಸರನ್ನು ಹೇಳುವುದರಿಂದಲೇ ಜನರು ಪರಿಶುದ್ಧರಾಗುವರು: ಹೀಗಿರಲು ನೀವಾಗಿ ಬಂದಮೇಲೆ ನಮ್ಮ ಭಾಗ್ಯವು ಇನ್ನೆಂಥದು ? ನೀನು ವಿಷ್ಣುವಿಗೆ ಸಮನಾದವನು. ನೀನು ಇಲ್ಲಿಗೆ ಈ ವೇಳೆಗೆ ಬಂದುದು ಶ್ರೀಕೃಷ್ಣನ ಅನುಗ್ರಹವು. ಅದರಿಂದ ಈಗ ಮರಣಕ್ಕೆ ಸಿದ್ಧನಾಗಿರುವ ನಾನು ಏನು ಮಾಡಬೇಕು ಎಂಬುದನ್ನು ಹೇಳು. ನೀನು ಮರಳಿ ಸಿಕ್ಕತಕ್ಕವನಲ್ಲ. ಅದರಿಂದ ಈಗಲೇ ಹೇಳು" ಎಂದು ಬೇಡಿಕೊಂಡನು. ಶುಕಮಹರ್ಷಿಯೂ ಆಗಲಿ ಎಂದು ಒಪ್ಪಿಕೊಂಡನು.

## ಮೂರನೆಯ ಅಧ್ಯಾಯ

# ಭಾಗವತವೆಂದರೇನು ?

ಶ್ರೀ ಶುಕಮುನೀಂದ್ರನು ಹೇಳಿದನು:—ಎಲೈ ರಾಜನೇ ನೀನು ಕೇಳಿದ ಪ್ರಶ್ನೆಯು ಜಗತ್ತಿಗೆ ಹಿತಕರವಾದುದು. ಜ್ಞಾನಿಗಳು ಒಪ್ಪುವಂಥದು. ಎಲ್ಲರೂ ತಿಳಿಯಬೇಕಾದುದು ಎಷ್ಟೋ ಇರುವುದು. ನಿದ್ದೆಗೆ ರಾತ್ರಿಯನ್ನೂ ಸಂಪಾದನೆಗೆ ಹಗಲನ್ನೂ ವಿನಿಯೋಗ ಮಾಡಿರುವ ಮಾನವನು ತನ್ನ ಹೆಂಡತಿ ಮಕ್ಕಳಿಗಾಗಿ ಒದ್ದಾಡುತ್ತಾ ತನಗೆ ಮರಣವು ಬರುವುದು ಎಂಬುವನ್ನೇ ಮರೆತುಬಿಡುವನು. ಅದರಿಂದ

ಇಷ್ಟು ವರಲ್ಲಿ ಬಿಡುವು ಮಾಡಿಕೊಂಡು ಶ್ರೀಹರಿಯನ್ನು ಸ್ಮರಣ ಮಾಡ ಬೇಕು. ಶಾಸ್ತ್ರಗಳೆಲ್ಲವೂ ಮರಣ ಕಾಲದಲ್ಲಿಯಾದರೂ ನಾರಾಯಣ ಎನ್ನಿರೋ ಎಂದು ಬೋಧಿಸುತ್ತಿರುವುವು. ಹೀಗೆ ನಾರಾಯಣ ಕಥೆ ಗಳನ್ನು ಹೇಳುವ ಶಾಸ್ತ್ರವು ಭಾಗವತವು. ಇದು ವೇದಕ್ಕೆ ಸರಿಸಮ ವಾದುದು. ಇದನ್ನು ಈ ಕಲಿಯುಗದ ಆದಿಯಲ್ಲಿ ನಮ್ಮ ತಂದೆಯಾದ ವ್ಯಾಸಮಹರ್ಷಿಯು ರಚಿಸಿದನು. ನಾನು ಶ್ರೀಹರಿಯ ಕಥೆಗಳ ಮೇಲಿನಾಸೆಯಿಂದ ಈ ಭಾಗವತವನ್ನು ಕಲಿತೆನು. ಈ ಭಾಗವತ ವನ್ನು ಈಗ ನಾನು ನಿನಗೆ ಹೇಳುವೆನು. ಮನುಷ್ಯನು ಜೀವಂತ ನಾಗಿರಲಿ, ಮರಣವನ್ನು ಸಮೀಪಿಸಿರಲಿ, ಭಾಗವತವನ್ನು ಕೇಳುವುದ ಕ್ಕಿಂತ ಉತ್ತಮವಾದ ಕಾರ್ಯವನ್ನು ಮಾಡಲಾರನು. ಇದನ್ನು ಕೇಳಿ ದರೆ ಮುಕುಂದನ ಪಾದಗಳಲ್ಲಿ ಭಕ್ತಿಯುಂಟಾಗುವುದು.

ಹಿಂದೆ ಖಟ್ವಾಂಗನೆಂಬ ಅರಸನಿದ್ದನು. ಆತನು ದೇವತೆಗಳ ಜೊತೆ ಸೇರಿ ರಾಕ್ಷಸರ ಮೇಲೆ ಯುದ್ಧ ಮಾಡಿ ಗೆದ್ದನು. ದೇವತೆಗಳು ಸಂತೋಷಗಟ್ಟು "ನಿನಗೇನು ಬೇಕು ?" ಎಂದು ಕೇಳಿದರು.

ಆತನು "ಮೊದಲು ನನಗೆ ಆಯುಸ್ಸೆಷ್ಟಿದೆ ಹೇಳಿ" ಎಂದನು. ಅವರು ಎರಡು ಮುಹೂರ್ತವಿದೆಯೆಂದರು. ಆತನು ಕೂಡಲೇ ಭೂಮಿಗೆ ಬಂದು ಭಗವದ್ಧ್ಯಾನಪರಾಯಣನಾಗಿ ಮುಕ್ತಿಯನ್ನು ಪಡೆದನು. ರಾಜ ! ನಿನಗೆ ಇನ್ನೂ ಏಳು ದಿನವಿದೆ. ನೀನೂ ಖಟ್ವಾಂಗನಂತೆಯೇ ಮಾಡಿ ಮುಕ್ತಿಯನ್ನು ಸಂಪಾದಿಸಿಕೋ. ಮನಸ್ಸು ಚಲಿಸದಂತೆ ಶ್ರೀಹರಿಯ ಪಾದಗಳಲ್ಲಿ ನಿಂತರೆ ಆತನು ತಪ್ಪದೆ ದರ್ಶನ ವೀಯುವನು. ಅದೇ ಧಾರಣವು. ಶುದ್ಧವಾದ ಮನಸ್ಸುಳ್ಳವರಿಗೆ ಇದು ಅತಿ ಸುಲಭ."

ರಾಜನು ಈ ಮಾತನ್ನು ಕೇಳಿ ಶುಕಮುನೀಂದ್ರನನ್ನು ಹೀಗೆ ಕೇಳಿದನು. "ಎಲೈ ಬ್ರಹ್ಮವನ್ನು ಬಲ್ಲ ಮುನೀಂದ್ರನೆ, ನೀನು ಹೇಳಿದ

ಧಾರಣೆಯನ್ನು ಬೆಳಸುವುದೆಂತು ? ಏನು ಮಾಡಿದರೆ ಮನಸ್ಸು ಶುದ್ಧವಾಗುವುದು ? ಅದನ್ನು ಹೇಗೆ ಮಾಡುವುದು ?" ಶುಕಮುನೀಂದ್ರನು ಹೇಳಿದನು: 'ಮನಸ್ಸು ಅಶುದ್ಧವಾಗಿ ಚಂಚಲವಾಗಿರುವುದಕ್ಕೆ ಶ್ವಾಸ, ಆಸನ, ಸಂಗ, ಇಂದ್ರಿಯ, ಇವು ಕಾರಣಗಳು. ಇದನ್ನು ಒಂದೊಂದಾಗಿ ಗೆದ್ದರೆ ಮನಸ್ಸು ಚಾಂಚಲ್ಯವನ್ನು ಬಿಡುವುದು. ಹಾಗೆ ಚಾಂಚಲ್ಯವನ್ನು ನೀಗಿಕೊಂಡು ಸ್ಥಿರವಾದ ಮನಸ್ಸನ್ನು ಭಗವಂತನ ಚರಣಾರವಿಂದದಲ್ಲಿ ಇಡಬೇಕು. ಹಾಗೆ ಮಾಡಿದರೆ ಮನಸ್ಸು ಶುದ್ಧಿಯಾಗುವುದು. ಇದೇ ಧಾರಣೆಯು.

ಪೂರ್ವದಲ್ಲಿ ನಾರಾಯಣನ ನಾಭೀ ಕಮಲದಿಂದ ಬ್ರಹ್ಮನು ಹುಟ್ಟಿದನು. ಆ ಬ್ರಹ್ಮನು ಹೀಗೆ ಧಾರಣೆ ಮಾಡಿದನು. ಅದರಿಂದ ನಾರಾಯಣನು ಸಂತುಷ್ಟನಾಗಿ ಆತನಿಗೆ ಸೃಷ್ಟಿಯನ್ನು ಮಾಡುವುದು ಹೇಗೆ ಎಂಬುದು ನೆನಪಿಗೆ ಬರುವಂತೆ ಮಾಡಿದನು. ಆಗ ಬ್ರಹ್ಮನು ಲೋಕಲೋಕಗಳನ್ನೆಲ್ಲಾ ಸೃಷ್ಟಿ ಮಾಡಿದನು. ಇದು ಧಾರಣೆಯ ಫಲವು. ಪರಮಾತ್ಮನನ್ನು ಪಡೆಯುವುದು ಬ್ರಹ್ಮನು ಮಾಡಿದ ಸೃಷ್ಟಿಗಿಂತಲೂ ಹೆಚ್ಚಿನದು. ಪರಮಾತ್ಮನಲ್ಲದೆ ಇನ್ನೇನೂ ಬೇಡ ಎಂದವನಿಗೆ ಪರಮಾತ್ಮನು ಸಿಕ್ಕುವನು. ಪರಮಾತ್ಮ ಲಾಭಕ್ಕಿಂತ ದೊಡ್ಡದಾದ ಬೇರೆ ಲಾಭವಿಲ್ಲ. ಪರಮಾತ್ಮನನ್ನು ಪಡೆದವನ ಹೃದಯವು ಆನಂದದಿಂದ ತುಂಬಿ ಹೋಗುವುದು. ಆತನಿಗೆ ಪರಮಾತ್ಮನ ಧ್ಯಾನವಲ್ಲದೆ ಇನ್ನೇನೂ ಬೇಕಾಗುವುದಿಲ್ಲ. ಅದರಿಂದ ವಿವೇಕಿಗಳು ಪರಮಾತ್ಮನ ಧ್ಯಾನವನ್ನು ಬಿಟ್ಟು ಇನ್ನೇನೂ ಬಯಸುವುದಿಲ್ಲ. ಮಹಾತ್ಮರು ತಮ್ಮ ಹೃದಯದಲ್ಲಿ ಶಂಖಚಕ್ರಗಧಾಪದ್ಮಧಾರಿಯಾದ ಮಹಾವಿಷ್ಣುವನ್ನು ಧ್ಯಾನಿಸುವರು. ಮಹಾವಿಷ್ಣುವಿನ ಕಥೆಯನ್ನು ಕೇಳಬೇಕು: ಹೇಳಬೇಕು. ಆತನ ಸ್ಮರಣವನ್ನು ಮಾಡುತ್ತಿರಬೇಕು. ಯಾರ ಕಿವಿಗಳಲ್ಲಿ ಆತನ ಕಥೆಯು ತುಂಬಿರುವುದೋ ಅವರೇ ಜ್ಞಾನಿ

ಗಳು. ಅವರ ಮನಸ್ಸು ಶುದ್ಧವಾಗುವುದು. ಅವನು ಕೊನೆಯಲ್ಲಿ ಆ ಪುರುಷೋತ್ತಮನನ್ನು ಪಡೆಯುವನು.

ರಾಜನೆ, ಎಷ್ಟೋ ದೇವತೆಗಳಿರುವಾಗ ಶ್ರೀಹರಿಯನ್ನೇಕೆ ಸ್ಮರಿಸಬೇಕು ಎನ್ನುವೆಯೋ ? ಕಾರಣವನ್ನು ಕೇಳು. ಅನ್ಯದೇವತಾ ಭಜನವು ಅಲ್ಪವಾದ ಫಲವನ್ನು ಕೊಡುವುದು. ಶ್ರೀಹರಿಭಜನವು ಪೂರ್ಣ ಫಲವನ್ನು ಕೊಡುವುದು. ಆ ಪೂರ್ಣ ಫಲವೇ ಮೋಕ್ಷವು. ಅದರಿಂದ ಮುಕ್ತಿಯು ಬೇಕು ಎನ್ನುವ ಯಾರು ತಾನೇ ಮುಕುಂದನನ್ನು ಭಜಿಸುವುದಿಲ್ಲ ?" ಎಂದು ಶುಕಮುನಿಯು ರಾಜನಿಗೆ ಬೋಧಿಸಿದನು.

ಸೂತನು ಹೀಗೆ ಹೇಳಿದುದನ್ನು ಕೇಳಿ ಶೌನಕಾದಿಗಳೆಲ್ಲರೂ ಹೇಳಿದರು: "ಪಾಂಡವರ ಮೊಮ್ಮಗನಾದ ಪರೀಕ್ಷಿತನು ಆಟವಾಡುವ ವಯಸ್ಸಿನಲ್ಲಿ ಶ್ರೀಹರಿ ಪೂಜೆಯ ಆಟಗಳನ್ನೇ ಆಡುತ್ತಿದ್ದ ಮಹಾಭಾಗವತನು. ಶುಕಮುನೀಂದ್ರನಾದರೂ ವಾಸುದೇವನ ಮಹಾಭಕ್ತನು. ಇವರಿಬ್ಬರೂ ಸೇರಿದಾಗ ಹರಿಕಥಾಮೃತವು ಯಾವ ಯಾವ ರೂಪದಲ್ಲಿ ಪ್ರವಹಿಸಿತೋ, ಎಲೈ ಪೌರಾಣಿಕೋತ್ತಮನೆ, ಅದೆಲ್ಲವನ್ನೂ ನಮಗೆ ಹೇಳು. ಯಾವನು ಆ ಪರಮಾತ್ಮನ ಸತ್ಕಥೆಯಲ್ಲಿ ಒಂದು ಕ್ಷಣವನ್ನಾದರೂ ಕಳೆಯುವನೋ ಅವನ ಜನ್ಮವೇ ಸಾರ್ಥಕವು.

ಹಾಗೆ ಹರಿಕಥೆಗಳನ್ನು ಕೇಳದೆ, ಶ್ರೀಹರಿಯನ್ನು ಸ್ಮರಿಸದೆ ಇರುವ ಜೀವನವೂ ಒಂದು ಜೀವನವೇ ? ಮರಗಳೂ ಬೆಳೆಯುವುವು: ತಿದಿಗಳೂ ಉಸಿರಾಡುವುವು. ಗ್ರಾಮಗ್ರಾಮಗಳಲ್ಲಿಯೂ ಪಶುಗಳು ತಿನ್ನುವುವು. ಹೆಣ್ಣುಗಂಡೂ ಸೇರುವುವು. ಯಾರ ಕಿವಿಗಳು ಒಮ್ಮೆಯಾದರೂ ಶ್ರೀಹರಿಕಥಾಮೃತವನ್ನು ಪಾನ ಮಾಡಿಲ್ಲವೋ ಅಂಥವರು ಹಂದಿ, ಒಂಟೆ, ಕತ್ತೆ, ನಾಯಿ ಇವುಗಳಂತೆಯೇ ಪಶುಜಾತಿಗೇ

ಸೇರಿದವರು. ಅಷ್ಟೇ ಅಲ್ಲ: ಅಂಥವರ ಕಿವಿಗಳು ಬಿಲಗಳು. ಶ್ರೀಹರಿಯನ್ನು ಹೊಗಳದ ನಾಲಗೆಯು ಕಪ್ಪೆಯ ನಾಲಗೆಯು. ಮುಕುಂದನ ಚರಣಾರವಿಂದಗಳಿಗ ವಂದಿಸದ ತಲೆಯು ಕಿರೀಟಧಾರಿಯಾಗಿದ್ದರೂ ಕಲ್ಲಿನಂತೆ ಭಾರವೇ ಸರಿ. ಶ್ರೀಕೃಷ್ಣನನ್ನು ಪೂಜಿಸದ ಕೈಗಳು ಚಿನ್ನದ ಕಂಕಣವನ್ನು ಧರಿಸಿದ್ದರೂ ಅವು ಮರಗೈಗಳೇ ಸರಿ! ಮಹಾವಿಷ್ಣುವಿನ ರೂಪಗಳನ್ನು ನೋಡದ ಕಣ್ಣುಗಳು ನವಿಲು ಗರಿಯ ಕಣ್ಣುಗಳು. ಶ್ರೀ ವಿಷ್ಣುವಿನ ಕ್ಷೇತ್ರಗಳಿಗೆ ಹೋಗದ ಕಾಲುಗಳು ಮರಗಾಲುಗಳು. ಭಾಗವತರನ್ನು ಪೂಜಿಸದವನು ಬದುಕಿರುವ ಹೆಣವು. ಶ್ರೀಹರಿನಾಮಗಳನ್ನು ಕೇಳಿ ಯಾರ ಹೃದಯವು, ಕರಗುವುದಿಲ್ಲವೋ, ಯಾರ ಕಣ್ಣಿನಲ್ಲಿ ಆನಂದಭಾಷ್ಪಗಳು ಉದುರುವುದಿಲ್ಲವೋ ಯಾರ ಮೈಯ್ಯು ಜುಮ್ಮೆನ್ನುವುದಿಲ್ಲವೋ ಅವನು ಕಲ್ಲು ಎಂದೇ ಹೇಳಬೇಕು. ಜೊತೆಗೆ ಎಲೈ ಭಾಗವತೋತ್ತಮನೇ, ನೀನು ಕೇಳುವವರ ಕಿವಿಗೆ ಇಂಪಾಗುವಂತೆ, ಮನಕರಗುವಂತೆ, ಶ್ರೀಕಾಂತನ ಭಕ್ತಿಯು ಬೆಳೆಯುವಂತೆ ಕಥೆಗಳನ್ನು ಹೇಳಬಲ್ಲವನು ಅಪರಿಂದ ಆತ್ಮವಿದ್ಯಾವಿಶಾರದನಾದ ಶುಕಮುನೀಂದ್ರನು ಮಹಾಭಕ್ತನಾದ ಪರೀಕ್ಷಿತನಿಗೆ ಏನೇನು ಹೇಳಿದನೋ ಅದೆಲ್ಲವನ್ನೂ ಹೇಳು."

ಸೂತನು ಆಗಲೆಂದು ಹೇಳಿದನು:—

ಶ್ರೀ ಶುಕಮುನೀಂದ್ರನ ಮಾತುಗಳನ್ನು ಕೇಳಿ ಪರೀಕ್ಷಿತನು "ಈತನು ಹೇಳಿದಂತೆ ಭಜಿಸಬೇಕೆಂದರೆ ಶ್ರೀಕೃಷ್ಣನನ್ನೇ ಭಜಿಸಬೇಕು." ಎಂದು ನಂಬಿದನು. ಶ್ರೀಕೃಷ್ಣನನ್ನು ಪಡೆಯುವುದು ಹೊರತು ಇನ್ನೇನೂ ಬೇಡವೆಂದು ದೃಢಮಾಡಿಕೊಂಡನು. ಭಗವಂತನಿಗೆ ತನ್ನನ್ನು ಒಪ್ಪಿಸಿಕೊಂಡು ನೀವು ಈಗ ನನ್ನನ್ನು ಕೇಳಿದಂತೆಯೇ ಆತನೂ ಶ್ರೀಕೃಷ್ಣನನ್ನು ಕೇಳಿದನು: "ಎಲೈ ಬ್ರಹ್ಮನೆ, ಸರ್ವಜ್ಞನಾದ ನೀನು ಶ್ರೀಹರಿಕಥೆಯನ್ನು ಹೇಳುತ್ತಿದ್ದರೆ, ಕೇಳುತ್ತ ಕೇಳುತ್ತ ನನ್ನ

ಮನಸ್ಸಿನಲ್ಲಿದ್ದ ಅಜ್ಞಾನವು ಕಳೆಯುತ್ತಿರುವುದು. ನಿನ್ನ ಪವಿತ್ರವಾದ ವಾಕ್ಕಿನಿಂದ ಇನ್ನೂ ಒಂದು ಸಂಗತಿಯನ್ನು ಹೇಳು. ಪರಮಾತ್ಮನು ಈ ಲೋಕವನ್ನು ಎಂತು ಸೃಷ್ಟಿಸುವನು ? ಎಂತು ಪಾಲಿಸುವನು ? ಕಡೆಗೆ ಹೇಗೆ ಸಂಹರಿಸುವನು ? ಬ್ರಹ್ಮ ವಿಷ್ಣು ರುದ್ರರೆಂಬ ನಾನಾ ರೂಪಗಳನ್ನು ಆತನೊಬ್ಬನೇ ಧರಿಸುವುದೆಂತು ? ಈ ಕಾರ್ಯದಲ್ಲಿ ಆತನಿಗೆ ಸಹಾಯ ಮಾಡುವ ಮಾಯೆಯು ಎಂಥದು ? ಇದು ಯಾರಿಗೂ ತಿಳಿಯದ ಗುಟ್ಟಾಗಿರುವುದಲ್ಲ ? ಇದನ್ನು ನನಗೆ ತಿಳಿಯು ವಂತೆ ವಿಸ್ತಾರವಾಗಿ ಹೇಳು?"

ಶುಕಮುನಿಯು ಆಗಲಿ ಎಂದು ಹೇಳುವುದಕ್ಕೆ ಮುಂಚೆ ತಾನು ಶ್ರೀಹರಿಯನ್ನು ಧ್ಯಾನ ಮಾಡಿದನು. "ಪುರುಷೋತ್ತಮನಿಗೆ ನಮ ಸ್ಕಾರವು. ಸೃಷ್ಟಿ ಸ್ಥಿತಿ ಸಂಹಾರಗಳೆಂಬ ಆಟವಾಡುವವನಿಗೆ ನಮ ಸ್ಕಾರವು. ಪಾಪವನ್ನು ಸಂಹಾರ ಮಾಡುವವನಿಗೆ ನಮಸ್ಕಾರವು. ಜನ್ಮರಹಿತನಾದವನಿಗೆ ನಮಸ್ಕಾರವು. ಯಾರನ್ನು ಸ್ಮರಿಸಿದರೆ, ಯಾರನ್ನು ದರ್ಶನ ಮಾಡಿದರೆ, ಯಾರಿಗೆ ವಂದನೆ ಮಾಡಿದರೆ, ಯಾರ ಕಥೆಯನ್ನು ಕೇಳಿದರೆ, ಯಾರನ್ನು ಪೂಜಿಸಿದರೆ, ಜಗತ್ತಿನ ಪಾಪ ಗಳೆಲ್ಲವೂ ಕಳೆಯುವುವೋ ಅಂತಹ ಪುಣ್ಯ ಯಶಸ್ಸಿನ ಪುಣ್ಯ ಮೂರ್ತಿಗೆ ನಮಸ್ಕಾರವು. ತಪಸ್ವಿಗಳು, ದಾನಪರರು, ಯಶಸ್ವಿಗಳು, ಮಂತ್ರಜ್ಞರು, ಮೊದಲಾದವರೆಲ್ಲ ಯಾವನ ಪೂಜೆಯನ್ನು ಮಾಡಿ ಕೃತಾರ್ಥರಾಗುವರೋ ಆ ಮಂಗಳಾತ್ಮನಿಗೆ ನಮಸ್ಕಾರವು. ಜಾತಿ ಯಿಲ್ಲದ ಪಾಪಿಗಳನ್ನೂ ಯಾವನು ಬಿಡದೆ ಕಾಪಾಡುವನೋ ಅಂಥಹ ಶುದ್ಧಾತ್ಮನಿಗೆ ನಮಸ್ಕಾರವು. ಯಾರು ಯಾರು ಯಾವ ಯಾವ ರೂಪ ದಿಂದ ತನ್ನನ್ನು ಪೂಜಿಸಿದರೆ ಅದದೇ ರೂಪದಿಂದ ಅವರವರಿಗೆ ಒಲಿಯುವ ಭಗವಂತನಿಗೆ ನಮಸ್ಕಾರವು. ಯಾವನ ಚರಣವನ್ನು ಆಶ್ರಯಿಸಿ ಎಲ್ಲರೂ ಕೃತಾರ್ಥರಾಗಿ ಎಲ್ಲದಕ್ಕಿಂತ ಹೆಚ್ಚಾದ ಆತ್ಮವನ್ನು

ಪಡೆಯುವರೋ ಅಂತಹ ಮುಕುಂದನಿಗೆ ನಮಸ್ಕಾರವು. ಆತನು ನನ್ನ ಮಾತು ಪ್ರಸನ್ನವಾಗಿರುವಂತೆ ಅನುಗ್ರಹಿಸಲಿ. ವಿಷ್ಣುಸ್ವರೂಪನಾದ, ಭಗವಂತನಾದ, ನನ್ನ ಗುರುವಾದ, ಎಲ್ಲರಿಗೂ ಜ್ಞಾನಾಮೃತವನ್ನೆರೆಯುವ ವೇದವ್ಯಾಸ ಮುನಿಗೆ ನಮಸ್ಕಾರವು. ಎಲೈ ರಾಜನೆ, ನೀನು ಕೇಳಿದ ಪ್ರಶ್ನೆಯನ್ನು ಹಿಂದೆ ನಾರದನು ತನ್ನ ತಂದೆಯಾದ ಬ್ರಹ್ಮನನ್ನು ಕೇಳಿದನು. ಬ್ರಹ್ಮನು ಅದಕ್ಕಿಂತ ಮುಂಚೆ ಅದೇ ಪ್ರಶ್ನೆಯನ್ನು ಶ್ರೀ ನಾರಾಯಣನನ್ನು ಕೇಳಿದ್ದನು. ನಾರಾಯಣನು ತನಗೆ ಹೇಳಿದ್ದುದನ್ನು ಬ್ರಹ್ಮನು ನಾರದನಿಗೆ ಹೇಳಿದ್ದನು. ಅದನ್ನು ಈಗ ನಾನು ನಿನಗೆ ಹೇಳುವೆನು ಕೇಳು.

ಮೊದಲು ಪರಬ್ರಹ್ಮವೊಂದೇ ಇತ್ತು. ಅದಕ್ಕೆ ಕೊನೆಮೊದಲು ಏನೂ ಇರಲಿಲ್ಲ. ಅದಲ್ಲದೆ ಇನ್ನು ಏನೂ ಇರಲಿಲ್ಲ. ಅದರಲ್ಲಿ ಎಲ್ಲೋ ಯಾವಾಗಲೋ ಒಂದು ಚಲನವು ಹುಟ್ಟಿತು. ಅದೇ ಬ್ರಹ್ಮದ ಸಂಕಲ್ಪವಾಯಿತು: ಆ ಸಂಕಲ್ಪದಿಂದ ಮಾಯೆಯು ಹುಟ್ಟಿತು. ಆ ಮಾಯೆಯು ಮೂರು ಪಾಲಾಗಿ ಸತ್ವ, ರಜಸ್ಸು, ತಮಸ್ಸು, ಎಂದು ಮೂರು ಪಾಲಾಯಿತು. ಆಗ ಕಾಲವು ಹುಟ್ಟಿತು. ಅದರ ಜೊತೆಯಲ್ಲಿ ಕರ್ಮವು ಹುಟ್ಟಿತು. ಅದರಲ್ಲಿ ಜೊತೆಯಲ್ಲಿ ಸ್ವಭಾವವೂ ಹುಟ್ಟಿತು. ಕಾಲವು ಸತ್ವ ರಜಸ್ಸು, ತಮಸ್ಸುಗಳೆಂಬ ಗುಣಗಳನ್ನು ಹೆಚ್ಚು ಕಡಿಮೆ ಮಾಡುವುದು. ಸ್ವಭಾವವು ಎಲ್ಲವನ್ನೂ ಬೆಳೆಸಿ ಹಣ್ಣು ಮಾಡುವುದು. ಕರ್ಮವು ಜನ್ಮವನ್ನು ಕೊಡುವುದು. ಇವಿಷ್ಟೂ ಹುಟ್ಟಿದ ಮೇಲೆ ಮಾಯೆಯನ್ನು ಆಳುವ ಈಶ್ವರನೂ, ಮಾಯೆಗೆ ಸಿಕ್ಕಿರುವ ಈ ಜೀವನೂ ಹುಟ್ಟಿದನು.

ಈ ಮೂರು ಗುಣಗಳು ಹೆಚ್ಚು ಕಡಿಮೆಯಾಗುತ್ತ ಆಕಾಶ, ವಾಯು, ಅಗ್ನಿ, ಜಲ, ಭೂಮಿ, ಎಂಬ ಪಂಚಭೂತಗಳನ್ನೂ, ಕೆಲಸ ಮಾಡುವ ಕರ್ಮೇಂದ್ರಿಯಗಳನ್ನೂ, ತಿಳಿಯುವ ಜ್ಞಾನೇಂದ್ರಿಯ

ಗಳನ್ನೂ ಸೃಷ್ಟಿಸಿದುವು. ಪ್ರಾಣ, ಮನಸ್ಸುಗಳು ಹುಟ್ಟಿದುವು. ಇವೆಲ್ಲವನ್ನೂ ಸೇರಿಸಿ ಭಗವಂತನು ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದನು. ಆದರೂ ಆ ಬ್ರಹ್ಮಾಂಡವು ಅಚೇತನವಾಗಿ ಬಿದ್ದಿತ್ತು. ಆಗ ಆ ಭಗವಂತನೇ ಮತ್ತೆ ಆ ಬ್ರಹ್ಮಾಂಡಕ್ಕೆ ಚೇತನವನ್ನು ಕೊಟ್ಟ. ಆಗ ಅದು ಬೆಳೆಯಿತು. ಅದರಿಂದ ಆ ಭಗವಂತನೇ ಸಹಸ್ರ ಸಹಸ್ರ ಮುಖಗಳೂ ಸಹಸ್ರ ಸಹಸ್ರ ಬಾಹುಗಳೂ, ಸಹಸ್ರ ಸಹಸ್ರ ಉದರ ಪಾದಗಳೂ ಉಳ್ಳ ಪುರುಷನಾಗಿ ಪ್ರಕಟನಾದನು. ಸೃಷ್ಟಿಯಲ್ಲಿ ಏನೇನಿರುವುದೋ ಅದೆಲ್ಲವೂ ಈ ಪುರುಷನೇ ! ಎಲ್ಲವೂ ಪುರುಷನಲ್ಲಿಯೇ ಇದೆ ಎಂದು ಜ್ಞಾನಿಗಳು ಹೇಳುವರು. ಇದನ್ನೇ ವೇದವು ಪುರುಷಸೂಕ್ತದಲ್ಲಿ ಹೇಳಿರುವುದು.



ಈ ಪುರುಷನ ನಾಭಿಯಿಂದ ಒಂದು ಕಮಲವು ಹುಟ್ಟಿತು.

ಆ ಕಮಲದಲ್ಲಿ ಚತುರ್ಮುಖ ಬ್ರಹ್ಮನು ಹುಟ್ಟಿದನು. ಆತನಿಗೆ ತಾನು ಏನು ಮಾಡಬೇಕೋ ತಿಳಿಯದೆ ಹೋಯಿತು. ಆಗ ಆತನು ಚಿಂತೆಗೊಳಗಾದನು. ಹಾಗೆ ಆತನು ಚಿಂತಿಸುತ್ತಿರುವಾಗ ಆತನಿಗೆ 'ತಪ' ಎಂಬ ಅಕ್ಷರಗಳು ಕೇಳಿಸಿದುವು. ಹೇಳಿದವರು ಯಾರು ಎಂಬುದು ತಿಳಿಯದಿದ್ದರೂ ಚೆನ್ನಾಗಿ ಕೇಳಿಸಿದ ಆ ಅಕ್ಷರಗಳನ್ನು ಸೇರಿಸಿ ನೋಡಿದರೆ, ತಪ ಎಂದು ಆಜ್ಞೆಯಾಗಿತ್ತು. ಅದರಂತೆ ಚತುರ್ಮುಖನು ತಪಸ್ಸು ಮಾಡಿದನು. ತಾನು ಹಾಗೆ ಒಂದು ಸಾವಿರ ವರ್ಷ ಅದ್ಭುತವಾದ ತಪಸ್ಸನ್ನು ಮಾಡಲು, ಪರಮಾತ್ಮನು ಪ್ರಸನ್ನನಾಗಿ ತನ್ನ ವೈಕುಂಠವನ್ನು ತೋರಿಸಿದನು. ಅಲ್ಲಿ ಕಾಲ, ಕರ್ಮ, ಸ್ವಭಾವಗಳೂ, ಸತ್ತ್ವರಜಸ್ತಮೋಗುಣಗಳೂ ಕೂಡ ಇಲ್ಲ. ಅಲ್ಲಿರುವವರೆಲ್ಲ, ಶ್ರೀದೇವಿಯೂ ಕೂಡ ಹರಿಪೂಜೆ ಮಾಡುವ ಪುಣ್ಯವಂತರು. ಅಲ್ಲಿರುವವರನ್ನು ಮುಕ್ತರೆಲ್ಲರೂ ಪೂಜೆ ಮಾಡುವರು. ಅಂತಹ ವೈಕುಂಠದಲ್ಲಿ ಶ್ರೀಮನ್ನಾರಾಯಣನು ಬ್ರಹ್ಮನಿಗೆ ದರ್ಶನವಿತ್ತು, " ಬ್ರಹ್ಮನೇ ! ನಾನೇ ನಿನಗೆ ತಪ ಎಂದು ಹೇಳಿದವನು. ನಾನೂ ತಪಸ್ಸು ಮಾಡುತ್ತಿರುವೆನು. ನಾನೇ ತಪಸ್ಸು. ನನ್ನ ತಪಸ್ಸಿನಿಂದಲೇ ಸೃಷ್ಟಿ ಸ್ಥಿತಿ ಸಂಹಾರಗಳು ನಡೆಯುತ್ತಿರುವುದು. ನೀನೂ ತಪಸ್ಸಿನಿಂದ ಎಲ್ಲವನ್ನೂ ಮಾಡು " ಎಂದು ಹೇಳಿದನು.

ಬ್ರಹ್ಮನು ವಿನಯದಿಂದ ನಮಸ್ಕಾರ ಮಾಡಿ, " ಎಲೈ ಭಗವಂತನೇ ! ನೀನು ಸರ್ವೇಶ್ವರನು. ನಿನ್ನ ಆಜ್ಞೆಯಾದಂತೆ ಎಚ್ಚರವಾಗಿ ಎಲ್ಲವನ್ನೂ ಮಾಡುವೆನು. ಆದರೆ ದೇವ, ನನಗೆ ಮಾಡುವ ಕಾರ್ಯದಲ್ಲಿ ಬೇಸರವಿಲ್ಲದೆ ಆದರವಿರಲಿ. ಮಾಡಿದ ಕಾರ್ಯದಿಂದ ಮದಹಂಕಾರವು ಬರದಿರಲಿ!! ಎಂದು ಕೇಳಿಕೊಂಡನು.

ಆಗ ಭಗವಂತನು ಬ್ರಹ್ಮನಿಗೆ ಮೂಲಭಾಗವತವನ್ನು ಉಪ

ದೇಶ ಮಾಡಿದನು. ಅದು ಹೀಗೆ ಕೇಳು: “ ಮೊದಲು ನಾನು ಒಬ್ಬನೇ ಇದ್ದುದು. ಇನ್ನು ಏನೂ ಇರಲಿಲ್ಲ. ಈಗ ಇರುವ ಈ ಜಗತ್ತೂ ನಾನೇ! ಎಲ್ಲವೂ ಹೋದ ಮೇಲೆ ಉಳಿಯುವುದೂ ನಾನೇ ! ಬೆಳಕಿನಂತೆ ಕಾಣಿಸುವುದಾಗಿ, ಕತ್ತಲಿನಂತೆ ಕಾಣಿಸದೆ ಇರುವುದಾಗಿ, ತಾನು ನಿಜವಾಗಿ ಇಲ್ಲದಿರುವುದು ಯಾವುದೋ ಅದೇ ಮಾಯೆಯು. ಪಂಚಭೂತಗಳು ತಮ್ಮಿಂದ ಆಗಿರುವ ದೇಹಗಳಲ್ಲಿ ಇದ್ದರೂ ಬೇರೆಯಾಗಿ ಕಾಣಿಸದೆ ಇರುವಂತೆ, ಎಲ್ಲಿಲ್ಲಿಯೂ ಇದ್ದರೂ ಕಾಣಿಸದೇ ಇರುವುದೇ ನನ್ನ ಸ್ವರೂಪವು. ತಿಳಿಯಬೇಕು ಎಂದಿರುವವನು ಇದಿಷ್ಟನ್ನೇ ತಿಳಿಯಬೇಕು. ಇದನ್ನು ಸರಿ ತಪ್ಪು ಎಂದು ಎರಡು ಕಡೆಯಿಂದಲೂ ವಿಚಾರ ಮಾಡಿ ದೃಢವಾಗಿ ತಿಳಿಯಬೇಕು. ಎಲ್ಲಿಲ್ಲಿಯೂ ಯಾವ ಯಾವಾಗಲೂ ಇದ್ದೇ ಇರುವುದನ್ನು ಕಂಡುಕೊಳ್ಳಬೇಕು. ಇದನ್ನು ನೀನು ಏಕಚಿತ್ತವಾಗಿ ತಿಳಿದು ಮರೆಯದೇ ಮನಸ್ಸಿನಲ್ಲಿಟ್ಟುಕೊಂಡಿರು. ನಿನಗೆ ಯಾವಾಗಲೂ ಮೋಹವು ಬರುವುದಿಲ್ಲ.” ಎಂದು ಉಪದೇಶ ಮಾಡಿ ಭಗವಂತನು ಕಣ್ಮರೆಯಾದನು.

ಅನಂತರ ಆ ಬ್ರಹ್ಮನು ತಾನು ಯಾರ ನಾಭೀ ಕಮಲದಿಂದ ಜನಿಸಿ ಬಂದಿದ್ದನೋ ಆ ಪುರುಷನ ಅಂಗಾಂಗಗಳಿಂದಲೇ ಯಜ್ಞಕ್ಕೆ ಬೇಕಾದ ಸಾಧನಗಳನ್ನೆಲ್ಲಾ ಕಲ್ಪಿಸಿಕೊಂಡು, ಯಜ್ಞ ಮಾಡಿ ಭಗವಂತನನ್ನು ಆರಾಧಿಸಲು, ಈ ಲೋಕವೆಲ್ಲವೂ ಇಷ್ಟು ವಿಸ್ತಾರವಾಗಿ ಹುಟ್ಟಿತು. ಹುಟ್ಟಿದವರೆಲ್ಲರೂ ಆ ಭಗವಂತನನ್ನು ಯಜ್ಞದಿಂದ ಆರಾಧಿಸಿದರು.

ಅದರಿಂದ ಲೋಕದಲ್ಲಿರುವ ಸಮಸ್ತವೂ ಪರಮಾತ್ಮನೇ ! ಆದರೂ ಉತ್ತಮರನ್ನು ಪೂಜೆಯಿಂದಲೂ ಮಧ್ಯಮರನ್ನು ಉದಾಸೀನತೆಯಿಂದಲೂ ಅಧಮರನ್ನು ತಿರಸ್ಕಾರದಿಂದಲೂ ಆರಾಧಿಸಬೇಕು”

ಎಂದು ಬ್ರಹ್ಮನು ನಾರದನಿಗೆ ಹೇಳಿ, ಶ್ರೀಹರಿಯ ಅವತಾರಗಳನ್ನು ಕುರಿತು ಮತ್ತೆ ಹೇಳಿದನು.

“ಶ್ರೀ ಭಗವಂತನು ಕರ್ದಮ ದೇವಹೂತಿಯರಲ್ಲಿ ಕಪಿಲನಾಗಿ ಜನಿಸಿ ದೇವಹೂತಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನು. ಅತ್ರಿ, ಅನಸೂಯೆಯರಿಗೆ ದತ್ತಾತ್ರೇಯನೆಂಬ ಹೆಸರಿನಿಂದ ಮಗನಾಗಿ ಹುಟ್ಟಿ ಭಕ್ತರಿಗೆ ಭಕ್ತಿ ಮುಕ್ತಿಗಳನ್ನಿತ್ತು ಸಲಹಿದನು. ನಾನು ಲೋಕ ಸೃಷ್ಟಿಗಾಗಿ ತಪಸ್ಸು ಮಾಡುತ್ತಿರುವಾಗ ಸನಕಾದಿ ರೂಪದಿಂದ ಜನಿಸಿ, ಎಲ್ಲರಿಗೂ ಮರೆತು ಹೋಗಿದ್ದ ಆತ್ಮತತ್ತ್ವವನ್ನು ನನಗೆ ಉಪದೇಶಿಸಿದನು. ಧ್ರುವನಿಗೆ ಪ್ರಸನ್ನನಾಗಿ ಆತನಿಗೆ ಸ್ಥಿರ ಪದವಿಯನ್ನು ಅನುಗ್ರಹಿಸಿದನು. ಮತ್ತೊಮ್ಮೆ ಹಯಗ್ರೀವನಾಗಿ, ನನ್ನ ಯಜ್ಞದಲ್ಲಿ ಅವತರಿಸಿ ತನ್ನ ನಿಶ್ವಾಸ ರೂಪದಿಂದ ವೇದಗಳನ್ನು ಅನುಗ್ರಹಿಸಿದನು. ಇನ್ನೊಮ್ಮೆ ಸರಸ್ಸಿನಲ್ಲಿಳಿದ ಗಜೇಂದ್ರನನ್ನು ಒಂದು ಮೊಸಳೆಯು ಹಿಡಿದುಬಿಡಲು, ಅವನ್ನು ನಿಗ್ರಹಿಸುವುದಕ್ಕಾಗಿ ಬಂದನು.

ನಾರದ, ನೀನೊಮ್ಮೆ ಭಕ್ತಿಯಿಂದ ಸ್ತುತಿಸಿದಾಗ ಯೋಗ ಜ್ಞಾನಗಳಿಂದ ಕೂಡಿರುವ ವಾಸುದೇವ ಶರಣಾಗೆ ಆತ್ಮ ತತ್ತ್ವವನ್ನು ತೋರಿಸುವ ಕೈ ದೀವಿಗೆಯಂತಿರುವ ಭಾಗವತವನ್ನು ಉಪದೇಶಿಸಿದ ನಲ್ಲವೇ ? ಅದು ಹಂಸಾವತಾರವು, ಮತ್ತೊಮ್ಮೆ ಮನುವಾಗಿ ಭೂಮಿಯಲ್ಲಿಯೂ ಸ್ವರ್ಗದಲ್ಲಿಯೂ ಪಾತಾಳದಲ್ಲಿಯೂ ಬ್ರಹ್ಮಲೋಕ ದಲ್ಲಿಯೂ ಸಹ ತನ್ನ ಕೀರ್ತಿಯನ್ನು ಸ್ಥಾಪಿಸಿದನು. ಇನ್ನೊಮ್ಮೆ ಧನ್ವಂತರಿಯಾಗಿ ರೋಗಪರಿಹಾರಕವಾದ ಆಯುರ್ವೇದವನ್ನು ಉಪ ದೇಶಿಸಿದನು. ಮಗದೊಮ್ಮೆ ತ್ರಿವಿಕ್ರಮಾವತಾರವನ್ನು ಮಾಡಿ ಸರ್ವ ಲೋಕಗಳನ್ನೂ ವ್ಯಾಪಿಸಿದನು. ಆ ಭಗವಂತನ ಮಹಿಮೆಯೆಷ್ಟೆಂಬು ದನ್ನು ನಾನು ಕಾಣೆನು: ಈ ಸನಕಾದಿಗಳೂ ಕಾಣರು: ಸಾವಿರ ಬಾಯಿಗಳುಳ್ಳ ಆದಿಶೇಷನೂ ಈತನ ಮಹಿಮೆಯನ್ನು ಹೇಳಿ

ಮುಗಿಸಲಾರನು. ಈತನನ್ನು ಜ್ಞಾನದಿಂದ ತಿಳಿಯುವುದು ಅಸಾಧ್ಯವಾದರೂ ಭಕ್ತಿಯಿಂದ ಒಲಿಸಿಕೊಳ್ಳಬಹುದು. ಹಾಗೆ ಒಲಿಸಿಕೊಂಡವರು ಎಷ್ಟೋ ಮಂದಿ! ನಾರದ! ತಿಳಿದವರು ಈ ಜಗತ್ತಿನಲ್ಲಿರುವ ಸರ್ವಸ್ವವೂ ವಾಸುದೇವನೇ ಎನ್ನುವರು. ಹಾಗೆ ತಿಳಿಯುವುದೇ ಭಾಗವತವು. ಸಂಗ್ರಹವಾಗಿ ನಾನು ಹೇಳಿರುವುದನ್ನು ನೀನು ದೊಡ್ಡದು ಮಾಡಿ, ಕೇಳಿದವರಿಗೆ ಭಕ್ತಿಯುಂಟಾಗಲಿ ಎಂದು ಸಂಕಲ್ಪ ಮಾಡಿ ಹೇಳು. ಶ್ರೀಕೃಷ್ಣನಲ್ಲಿ ಭಕ್ತಿಯೊಂದಿದ್ದರೆ ಸಾಕು. ಇನ್ನೇನು ಇಲ್ಲದಿದ್ದರೂ ಚಿಂತೆಯಿಲ್ಲ" ಎಂದು ಹೇಳಿದನು.

ಅದೇ ಈ ಭಾಗವತವು. ಇದು ಸರ್ಗ, ವಿಸರ್ಗ, ಸ್ಥಿತಿ, ಪೋಷಣ, ಊತಿ, ಮನ್ವಂತರ, ಈಶ್ವರ ಕಥಾ, ನಿರೋಧ, ಮುಕ್ತಿ, ಇವೆಲ್ಲಕ್ಕೂ ಆಶ್ರಯನಾದ ಪರಮಾತ್ಮ, ಎಂದು ಹತ್ತು ಲಕ್ಷಣಗಳುಳ್ಳದ್ದು. ಪರಮಾತ್ಮನಾದ ಪುರುಷನು ಹುಟ್ಟಿದುದು ಸರ್ಗವು. ಆಮೇಲೆ ಹುಟ್ಟಿದುದೆಲ್ಲವೂ ವಿಸರ್ಗವು. ಎಲ್ಲರನ್ನೂ ಕಾಪಾಡುವುದೇ ಸ್ಥಿತಿಯು. ಭಕ್ತರನ್ನು ಅನುಗ್ರಹಿಸುವುದು ಪೋಷಣವು. ಭಕ್ತರ ಚರಿತ್ರೆಗಳು ಮನ್ವಂತರವು. ಭಕ್ತರಾಗುವ ಸಾಧನಗಳು ಊತಿಯು. ಭಗವಂತನ ಚರಿತ್ರೆಯು ಈಶ್ವರ ಕಥೆಯು. ಈ ಸೃಷ್ಟಿಯ ಸಂಹಾರವೇ ನಿರೋಧವು. ಮಾಯೆಯನ್ನು ದಾಟಿ ಭಗವಂತನನ್ನು ಸೇರುವುದೇ ಮುಕ್ತಿಯು. ಸೃಷ್ಟಿಸ್ಥಿತಿ ಸಂಹಾರಗಳಿಗೆ ಕಾರಣವಾದುದೇ ಆಶ್ರಯವು.

ಈ ದಶಲಕ್ಷಣಗಳಿಂದ ಕೂಡಿದ ಭಾಗವತವನ್ನು ಭಕ್ತಿಯಿಂದ ಅಧ್ಯಯನ ಮಾಡುವುದೇ ಮನುಷ್ಯನ ಕರ್ತವ್ಯವು.

## ನಾಲ್ಕನೆಯ ಅಧ್ಯಾಯ

# ಭಾಗವತವು ಹರಡಿದುದು

ಶುಕಮುನಿಯು ಮುಂದೆ ಹೇಳತೊಡಗಿ "ಎಲೈ ರಾಜನೇ ನಿಮ್ಮ ಪಾಂಡವರ ಚಿಕ್ಕಪ್ಪನಾದ ವಿದುರನಿದ್ದನಲ್ಲವೆ? ಆತನು ಹಿಂದೆ ಮೈತ್ರೇಯ ಮಹರ್ಷಿಯನ್ನು ಇದೇ ಪ್ರಶ್ನೆಯನ್ನು ಕೇಳಿದನು" ಎಂದನು. ಆಗ ರಾಜನು "ವಿದುರನು ಮೈತ್ರೇಯನನ್ನು ಕಂಡುದೆಲ್ಲಿ? ಅವರ ಸಂವಾದವನ್ನು ಕುರಿತು ವಿಸ್ತಾರವಾಗಿ ಹೇಳಬೇಕು" ಎಂದು ಪ್ರಾರ್ಥಿಸಿಕೊಳ್ಳಲು ಶುಕಮುನಿಯು ಹೇಳಿದನು.

ಹಿಂದೆ ಅಜ್ಞಾತವಾಸವನ್ನು ಮುಗಿಸಿದ ಪಾಂಡವರು ತಮ್ಮ ರಾಜ್ಯವನ್ನು ಹಿಂದಕ್ಕೆ ಕೊಡಬೇಕೆಂದು ಕೌರವನನ್ನು ಕೇಳಲು ಶ್ರೀಕೃಷ್ಣನನ್ನು ಕಳುಹಿಸಿದರು. ಅವನು ಶ್ರೀಕೃಷ್ಣನ ಮಾತನ್ನು ಕೇಳಲಿಲ್ಲ. ಆಗ ಧೃತರಾಷ್ಟ್ರನು ತಮ್ಮನಾದ ವಿದುರನನ್ನು ಕರೆಯಿಸಿ ಏನು ಮಾಡಬೇಕೆಂದು ಕೇಳಿದನು. ಆಗ ವಿದುರನು ದುರ್ಯೋಧನನನ್ನು ಕುರಿತು "ನೀನು ರಾಜ್ಯವನ್ನು ಕೊಟ್ಟುಬಿಡುವುದೇ ಸರಿ. ಶ್ರೀಕೃಷ್ಣನ ಮಾತುಗಳನ್ನು ಕೇಳು" ಎಂದು ಹೇಳಿ ಅಣ್ಣನನ್ನು ಕುರಿತು "ನೀನು ಮಗನ ಮೇಲಣ ವ್ಯಾಮೋಹದಿಂದ ಕೃಷ್ಣನ ಮಾತನ್ನು ಕೇಳದೇ ಹೋದೆ. ಪಾಂಡವರಲ್ಲಿ ದ್ವೇಷ ಮಾಡುತ್ತಿರುವೆ. ಇದು ಸರಿಯಲ್ಲ. ನೀನು ಧರ್ಮವಂತನಾದರೆ, ಈ ಕೂಡಲೇ ಈ ನೀಚನನ್ನು ತ್ಯಜಿಸು" ಎಂದನು.

ಆಗ ದುರ್ಯೋಧನನು ಆ ಮಾತನ್ನು ಕೇಳಿ, ಮಹಾರೋಷದಿಂದ ಕಂಪಿಸುತ್ತ ವಿದುರನನ್ನು ಧಿಕ್ಕರಿಸಿದನು. "ನಾವು ಹಾಕಿದ ಕೂಳಿನಿಂದ ಬದುಕಿ, ನಮ್ಮ ಶತ್ರುಗಳ ಕಡೆ ನುಡಿಯುವ ಈ ವಂಚಕನನ್ನು ಈ ತೊತ್ತಿನ ಮಗನನ್ನು ಯಾರು ಕರೆದವರು? ಮೊದಲಿವನನ್ನು ಊರಿನಿಂದ ಹೊರಕ್ಕೆ ನೂಕಿ" ಎಂದು ಆಡಬಾರದ ಮಾತು

ಗಳನ್ನು ಆಡಿದನು. ಆಗ ವಿದುರನು "ಆಹಾ ! ಮಾಯಾಶಕ್ತಿಯು ಎಂಥದು ! ಎಷ್ಟು ಮಾತಾಡಿಸಿತು!" ಎಂದುಕೊಳ್ಳುತ್ತಾ, ತನ್ನ ಧನುಸ್ಸನ್ನು ಅರಮನೆಯ ಮುಂದೆ ಎಸೆದು ಕೌರವರ ಪುಣ್ಯಫಲವೇ ಅವರನ್ನು ಬಿಟ್ಟು ಹೋಗುತ್ತಿರುವುದೋ ಎಂಬಂತೆ ಹಸ್ತಿನಾವತಿಯಿಂದ ಹೊರಟು ಹೋದನು. ಸಹಸ್ರಮೂರ್ತಿಯಾದ ಮಹಾವಿಷ್ಣುವು ಎಲ್ಲೆಲ್ಲಿ ನೆಲಸಿರುವನೋ ಆ ಪುಣ್ಯವನ, ಪರ್ವತ, ತೀರ್ಥಗಳಲ್ಲಿ ಸಂಚರಿಸುತ್ತಿದ್ದನು. ಆಗ ಆತನು ಅವಧೂತ ವೇಷದಿಂದ ಇದ್ದನು. ಆತನನ್ನು ಯಾರೂ ವಿದುರನೆಂದು, ಗುರುತು ಹಿಡಿಯಲೂ ಆಗುತ್ತಿರಲಿಲ್ಲ. ಮಹಾವಿಷ್ಣುವಿನ ಪುಣ್ಯಮೂರ್ತಿಗಳನ್ನು ದರ್ಶನ ಮಾಡುತ್ತ ತೀರ್ಥಗಳಲ್ಲಿ ಸ್ನಾನ ಮಾಡುತ್ತ, ವ್ರತೋಪವಾಸಾದಿಗಳನ್ನು ಆಚರಿಸುತ್ತಾ ಪ್ರಭಾಸ ಕ್ಷೇತ್ರಕ್ಕೆ ಬಂದನು. ಅಲ್ಲಿಂದ ಹಾಗೆಯೇ ಹೊರಟು ಸರಸ್ವತೀ ನದಿಗೆ ಹೋಗಿ ಅಲ್ಲಿಂದ ಹಾಗೆಯೇ ಇನ್ನೂ ಇತರ ತೀರ್ಥಗಳನ್ನೂ ಯಾತ್ರೆ ಮಾಡಿಕೊಂಡು ಯಮುನಾ ತೀರಕ್ಕೆ ಬಂದು ಶ್ರೀಕೃಷ್ಣನ ಪರಮ ಮಿತ್ರರೂ ಶಿಷ್ಯನೂ ಆದ ಉದ್ಧವನನ್ನು ಕಂಡನು.

ಆತನನ್ನು ಸ್ನೇಹದಿಂದ ಆಲಂಗಿಸಿ, ತಮ್ಮ ನೆಂಟರಿಂದ ಯಾದವರ ಮತ್ತು ಯಾದವೇಂದ್ರನಾದ ಶ್ರೀಕೃಷ್ಣನ ಕ್ಷೇಮಸಮಾಚಾರವನ್ನು ಕೇಳಿದನು. ವಿದುರನು ಹಾಗೆ ಕೇಳುತ್ತಲೂ ಉದ್ಧವನು ಶ್ರೀಕೃಷ್ಣನನ್ನು ನೆನೆದು ದುಃಖದಿಂದ ಕಣ್ಣುಗಳಲ್ಲಿ ನೀರು ಸುರಿಸುತ್ತಾ ಒಂದುಗಳಿಗೆ ಮಾತನಾಡಲಾರದೆ ಹೋದನು. ಚಿಕ್ಕಂದಿನಿಂದಲೂ ಶ್ರೀಕೃಷ್ಣನ ಕಿಂಕರನಾಗಿ ಶಿಷ್ಯನಾಗಿ ಆತನನ್ನು ಸೇವಿಸುತ್ತಾ ವೃದ್ಧನಾದ ಉದ್ಧವನು, ಒಂದು ಗಳಿಗೆಯಾದ ಮೇಲೆ ತನ್ನ ದುಃಖವನ್ನೆಲ್ಲಾ ನುಂಗಿಕೊಂಡು, " ವಿದುರ, ಶ್ರೀಕೃಷ್ಣರೂಪದಿಂದ ವಿಹಾರ ಮಾಡುತ್ತಾ ದುಷ್ಟರನ್ನೆಲ್ಲ ಸಂಹಾರ ಮಾಡಿ, ಸಜ್ಜನರನ್ನೆಲ್ಲ ಸಂತೋಷಪಡಿಸುತ್ತಿದ್ದ ಆ ದಿವ್ಯಮೂರ್ತಿಯು ಇಲ್ಲವಾಯಿತು "

ಎಂದನು. ವಿದುರನೂ ಉದ್ಧವನ ದುಃಖದಲ್ಲಿ ಭಾಗಿಯಾಗಿ ಬಹಳ ವಾಗಿ ವ್ಯಥೆಪಡುತ್ತ "ಉದ್ಧವ! ನಿಜವೇ? ವಿವರಗಳನ್ನೆಲ್ಲಾ ಹೇಳು" ಎಂದು ಕೇಳಿದನು. "ವಿದುರ! ಏನು ಹೇಳಲಿ? ನಿಮ್ಮ ಕೌರವ ಪಾಂಡವರನ್ನು ಕಾರಣ ಮಾಡಿಕೊಂಡು ಸ್ವಾಮಿಯು ಭೂಭಾರ ವಾಗಿದ್ದ ದುಷ್ಟ ಕ್ಷತ್ರಿಯರನ್ನೆಲ್ಲಾ ಕುರುಕ್ಷೇತ್ರದಲ್ಲಿ ಧ್ವಂಸ ಮಾಡಿ ದನು: ಧರ್ಮರಾಜನಿಗೆ ಪಟ್ಟಾಭಿಷೇಕವನ್ನೂ ಭೀಷ್ಮನಿಂದ ಆತನಿಗೆ ಧರ್ಮೋಪದೇಶವನ್ನೂ ಮಾಡಿಸಿದನು. ಅನಂತರ ಆತನಿಂದ ಮೂರು ಅಶ್ವಮೇಧಗಳನ್ನು ಮಾಡಿಸಿದನು. ಉತ್ತರೆಯ ಗರ್ಭಕ್ಕೆ ಅಶ್ವತ್ಥಾಮ ನಿಂದ ಬಂದಿದ್ದ ಆಪತ್ತನ್ನು ತಪ್ಪಿಸಿ ಪಾಂಡವರ ವಂಶವನ್ನು ಕಾಪಾಡಿದನು.

ಹೀಗೆ ಎಲ್ಲರೂ ಸುಖವಾಗಿರುವಾಗ ಆತನಿಗೆ ತನ್ನವರೆನ್ನಿಸಿ ಕೊಂಡ ಯಾದವರೂ ಭೂಭಾರವಾಗಿರುವರು ಎನ್ನಿಸಿತು. ಒಂದು ದಿನ ಶ್ರೀಕೃಷ್ಣ ದರ್ಶನಾರ್ಥವಾಗಿ ಬಂದಿದ್ದ ಮುನಿಗಳಲ್ಲಿ ಯಾದವರು ದುಶ್ಚೇಷ್ಟೆಯನ್ನು ಮಾಡಿದರು. ಅವರೂ ಶ್ರೀಕೃಷ್ಣನ ಮನೋಗತ ವನ್ನರಿತು ಆ ಯಾದವರನ್ನು ಶಪಿಸಿದರು. ಅದಾದ ಕೆಲವು ತಿಂಗಳ ಮೇಲೆ ಯಾದವರೆಲ್ಲರೂ ಒಂದು ದಿನ ವಿಹಾರಾರ್ಥವಾಗಿ ಪ್ರಭಾಸ ಕ್ಷೇತ್ರಕ್ಕೆ ಬಂದರು. ಅಲ್ಲಿ ಮಧುಪಾನೋತ್ಸವವು ನಡೆಯಿತು. ಯಾದವರು ಅತಿಯಾಗಿ ಪಾನ ಮಾಡಿ, ಉನ್ಮತ್ತರಾಗಿ ಪರಸ್ಪರ ಕಲಹವಾಡಿ ಹೊಡೆದಾಡಿ ಎಲ್ಲರೂ ಸತ್ತರು.

ಭಗವಂತನಾದ ಶ್ರೀಕೃಷ್ಣಮೂರ್ತಿಯು ತನ್ನ ಅವತಾರ ಪೂರ್ತಿಯ ಕಾಲವು ಬಂದಿತೆಂದು ಅಲ್ಲಿಂದ ಸರಸ್ವತೀ ತೀರಕ್ಕೆ ಬಂದು ಶುದ್ಧಾಚಮನ ಮಾಡಿ ಒಂದು ಅರಳಿಯ ಮರದ ಬುಡದ ಕೆಳಗೆ ಕುಳಿತುಕೊಂಡನು. ಅಲ್ಲಿಗೆ ವ್ಯಾಸಮಿತ್ರನೂ ಭಗವದ್ಭಕ್ತನೂ ಆದ ಮೈತ್ರೇಯ ಮಹರ್ಷಿಯು ಬಂದನು. ಆತನನ್ನು ಕೃಪಾ

ದೃಷ್ಟಿಯಿಂದ ಅನುಗ್ರಹಿಸಿ, ಹೇಳಬೇಕಾದುದನ್ನು ಹೇಳಿ, ನನ್ನನ್ನು ಕುರಿತು ಪ್ರಸನ್ನನಾಗಿ ಹೀಗೆ ಹೇಳಿದನು: ಉದ್ಧವ! ನಾನು ಈ ಲೋಕವನ್ನು ಬಿಟ್ಟು ರಹಸ್ಯವಾಗಿ ವೈಕುಂಠಕ್ಕೆ ಹೊರಟಿರುವ ಈ ವೇಳೆಯಲ್ಲಿ ನನ್ನ ದರ್ಶನ ಮಾಡಿದೆ. ನಿನಗಿದು ಕೊನೆಯ ಜನ್ಮವು. ಆದುದರಿಂದಲೇ ನಿನಗೆ ಈಗ ನನ್ನ ದರ್ಶನವು ದೊರೆಯಿತು. ಇತರರಿಗೆ ದೊರೆಯದ ದುರ್ಲಭವಾದ ವರವನ್ನು ನಿನಗೆ ಕೊಟ್ಟಿರುವೆನು. ತೆಗೆದುಕೋ! ಪೂರ್ವದಲ್ಲಿ ಬ್ರಹ್ಮನಿಗೆ ಕೊಟ್ಟುದೂ ಇದೇ ವರವು. ಇವನ್ನೇ ಜ್ಞಾನಿಗಳೆಲ್ಲರೂ ಭಾಗವತವೆನ್ನುವರು: ಇದು ನನ್ನ ಮಹಿಮೆಯನ್ನು ಚೆನ್ನಾಗಿ ಪ್ರಕಾಶಗೊಳಿಸುವುದು" ಎಂದು ಕರೆದು ಆತ್ಮತತ್ತ್ವವನ್ನು ಉಪದೇಶ ಮಾಡಿ "ನೀನು ಬದರಿಕಾಶ್ರಮಕ್ಕೆ ಹೋಗು" ಎಂದು ಕಳುಹಿಸಿಬಿಟ್ಟನು. ನಾನೂ ಆತನ ಮಾತು ಮೀರಲಾರದೆ ಬಂದೆನು."

ಹೀಗೆ ಹೇಳಿದ ಉದ್ಧವನ ಮಾತುಗಳನ್ನು ಕೇಳಿದ ವಿದುರನು ನೆಂಟರಾದ ಯಾದವರ ವಿನಾಶವನ್ನು ಕೇಳಿ ತನಗಾದ ದುಃಖವನ್ನು ವಿವೇಕದಿಂದ ನುಂಗಿಕೊಂಡು "ಶ್ರೀಕೃಷ್ಣನು ನಿನಗೆ ಉಪದೇಶಿಸಿದ ತತ್ತ್ವ ಜ್ಞಾನವನ್ನು ನನಗೂ ಅನುಗ್ರಹಿಸು." ಎಂದು ಕೇಳಿಕೊಂಡನು. ಉದ್ಧವನು "ವಿದುರ! ನಿನಗೆ ಜ್ಞಾನೋಪದೇಶವನ್ನು ಮಾಡು ಎಂದು ಮೈತ್ರೇಯನಿಗೆ ಭಗವಂತನು ಅಪ್ಪಣೆಯನ್ನು ಮಾಡಿದನು. ಅದರಿಂದ ನೀನು ಆತನನ್ನು ಹುಡುಕಿಕೊಂಡು ಹೋಗು" ಎಂದು ಹೇಳಿ, ಆ ವಿದುರನೊಡನೆ ಒಂದು ರಾತ್ರಿ ಯಮುನಾ ತೀರದಲ್ಲಿದ್ದು ಮುಂದೆ ಹೋದನು. ಉದ್ಧವನು ಬದರಿಕಾಶ್ರಮದಲ್ಲಿ ನಿಂತು ಭಾಗವತವನ್ನು ಇತರರಿಗೆ ಉಪದೇಶ ಮಾಡಿಕೊಂಡಿದ್ದನು.

ವಿದುರನೂ ಶ್ರೀಕೃಷ್ಣನ ಅವತಾರ ಪೂರ್ತಿಯಾಯಿತೆಂದು ಬಹಳವಾಗಿ ದುಃಖಿಸುತ್ತಾ, ಮೈತ್ರೇಯನನ್ನು ಹುಡುಕಿಕೊಂಡು

ಹೋದನು. ಆತನು ಗಂಗಾದ್ವಾರದಲ್ಲಿದ್ದನು. ಆತನು ಜ್ಞಾನನಿಧಿಯು. ಒಳ್ಳೆಯ ನಡತೆಯುಳ್ಳವನು. ಭಕ್ತರನ್ನು ಅನುಗ್ರಹಿಸುವನು. ವಿದುರನು ಆತನಿಗೆ ನಮಸ್ಕಾರ ಮಾಡಿ ಕೇಳಿದನು. "ಎಲೈ ಮಹರ್ಷಿಯೆ, ಸುಖದ ದಾರಿ ಯಾವುದೋ ಅದನ್ನು ಕೃಪೆ ಮಾಡಿ ಹೇಳು. ಭಗವಂತನು ಪೂರ್ಣ ಕಾಮನಲ್ಲವೇ? ಆತನಿಗೆ ಆಗಬೇಕಾದುದು ಏನೂ ಇಲ್ಲವಲ್ಲವೇ? ಇಂಥವನು ಜಗತ್ತನ್ನು ಏಕೆ ನಿರ್ಮಿಸಿದನು? ಆತನು ಹೇಗೆ ನಿರ್ಮಿಸುವನು? ಜಗತ್ತಿನಲ್ಲಿರುವ ಪ್ರಾಣಿವರ್ಗವನ್ನು ಹೇಗೆ ಸಾಕುವನು? ಹೇಗೆ ಈ ಲೋಕಲೋಕಗಳನ್ನೆಲ್ಲಾ ಸಂಹರಿಸುವನು? ಎಲ್ಲವನ್ನೂ ನನಗೆ ತಿಳುಹಿಸಬೇಕು. ಎಲೈ ಮಹರ್ಷಿಯೆ, ನನಗೆ ಭಗವಂತನಾದ ಶ್ರೀಕೃಷ್ಣನ ಕಥೆಯನ್ನು ಕೇಳುವುದನ್ನು ಬಿಟ್ಟು ಇನ್ನೇನೂ ಬೇಕಿಲ್ಲ. ನಿನ್ನ ಸ್ನೇಹಿತನಾದ ವೇದವ್ಯಾಸಮುನಿಯೂ ಭಗವಂತನ ಗುಣವರ್ಣನೆ ಜನಗಳ ಮನಸ್ಸಿಗೆ ಹಿಡಿಯಲಿ ಎಂದೇ ಅಲ್ಲವೇ ಸಾಮಾನ್ಯರ ಕಥೆಗಳನ್ನು ಹೇಳುವ ನೆಪದಲ್ಲಿ ಶ್ರೀಕೃಷ್ಣನ ಕಥೆಯನ್ನು ಮಹಾಭಾರತವಾಗಿ ರಚಿಸುವುದು? ಭಗವಂತನ ಪಾದಗಳನ್ನು ಸ್ಮರಿಸುವ ಮನುಷ್ಯನು ಸಕಲ ದುಃಖಗಳನ್ನೂ ಕಳೆದುಕೊಂಡು ಸುಖಿಯಾಗುವನೆಂದು ನಿಮ್ಮಂಥವರು ಹೇಳುವರು. ಕಥೆ ಕಥೆಗಳಲ್ಲಿಯೂ ಸಾರವಾದ ಶ್ರೀಹರಿ ಕಥೆಯನ್ನು ದುಂಬಿಯು ಹೂವಿನ ಸಾರವನ್ನು ಗ್ರಹಿಸುವಂತೆ ಗ್ರಹಿಸಿ ಹೇಳು."

ವಿದುರನು ಕೇಳಿದುದು ಆ ಮಹರ್ಷಿಗೆ ಸಂತೋಷವಾಯಿತು. ಲೋಕಕ್ಕೆ ಒಳ್ಳೆಯದಾಗಲಿ ಎಂದೇ ಆತನ ಪ್ರಶ್ನೆಗಳಿಗೆ ಉತ್ತರ ಕೊಟ್ಟನು. ಮೈತ್ರೇಯನು ಹೇಳಿದನು: "ಅಯ್ಯಾ ವಿದುರನೆ, ನೀನು ಯಾವಾಗಲೂ ಭಗವಂತನನ್ನೇ ಧ್ಯಾನಿಸುತ್ತಿರುವವನು. ನೀನು ವ್ಯಾಸಮಹರ್ಷಿಯ ಅನುಗ್ರಹದಿಂದ ಹುಟ್ಟಿದವನು. ಮಾಂಡವ್ಯ ಋಷಿಯ ಶಾಪವನ್ನು ಅನುಭವಿಸುವುದಕ್ಕಾಗಿ ಮನುಷ್ಯನಾಗಿ ಹುಟ್ಟಿದ

ಯುನುನು. ಇಂತಹ ನೀನು ಯಾವಾಗಲೂ ಶ್ರೀಹರಿ ಧ್ಯಾನದಲ್ಲಿರು ವುದು ಏನು ಆಶ್ಚರ್ಯ! ಎಲೈ ಏದುರನೆ, ನೀನು ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯನು. ಅದುಂದಲೇ ಆತನು ಭೂಲೋಕದಿಂದ ತೆರಳು ವಾಗ ನಿನಗೆ ಜ್ಞಾನೋಪದೇಶ ಮಾಡುವಂತೆ ನನಗೆ ಆಜ್ಞೆಯನ್ನಿ ತ್ತನು. ಅದುಂದ ನೀನು ಕೇಳುವುದನ್ನೆಲ್ಲಾ ಹೇಳುವೆನು.*

"ಭಗವಂತನು ಆದಿಯಲ್ಲಿ ಒಬ್ಬನೇ ಇದ್ದನು. ಆತನಿಂದ ಮಾಯೆಯು ಹುಟ್ಟಿತು. ಅಷ್ಟು ಕಾಣಿಸುವುದು: ಅಷ್ಟು ಕಾಣಿಸ ದಿರುವುದು ಯಾವುದೋ ಅದೇ ಮಾಯೆಯು. ಆ ಮಾಯೆಯೇ ಅವ್ಯಕ್ತವು. ಅದನ್ನು ಅವಲಂಬಿಸಿಯೇ ಪರಮಾತ್ಮನು ಸೃಷ್ಟಿಯನ್ನು ಮಾಡುವನು.

ಮಾಯೆಯಿಂದ ಮಹತ್ತು ಹುಟ್ಟಿತು. ಅದುಂದ ಅಹಂಕಾ ರವು ಹುಟ್ಟಿತು. ಅದು ಸಾತ್ವಿಕ, ರಾಜಸ, ತಾಮಸ, ಎಂದು ಮೂರು ಭಾಗವಾಯಿತು. ಸಾತ್ವಿಕದಿಂದ ಮನಸ್ಸೂ, ದೇವತೆಗಳೂ ಹುಟ್ಟಿ ದರು. ರಾಜಸದಿಂದ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು ಹುಟ್ಟಿ ದುವು. ಆಕಾಶದಿಂದ ವಾಯು, ತೇಜಸ್ಸು, ಜಲ, ಭೂಮಿ ಎಂಬ ಪಂಚಭೂತಗಳು ಹುಟ್ಟಿದುವು.

ದೇವತೆಗಳು ತಾವಾಗಿ ಏನೂ ಮಾಡಲಾರದೆ, ಭಗವಂತನನ್ನು ಪ್ರಾರ್ಥಿಸಿ, ಲೋಕಸೃಷ್ಟಿಯನ್ನು ಮಾಡಲು ಚೇತನವನ್ನು ಕೊಡ ಬೇಕು ಎಂದು ಕೇಳಿಕೊಂಡರು. "ಪರಮಾತ್ಮ, ಕಾಲಕಾಲಕ್ಕೆ ನಿನಗೆ ಸಂಪೂರ್ಣ ಪೂಜೆಯನ್ನು ನಾವು ಸಮರ್ಪಿಸಬೇಕು. ನಮಗೆ ಆಹಾರವು ದೊರೆಯಲಿ. ನೀನು ನಮ್ಮನ್ನು ಯಾವ ಉದ್ದೇಶದಿಂದ ಸೃಷ್ಟಿಸಿ

* ಪುಟ ೨೬ರಲ್ಲಿ ಬಂದಿರುವ ಕಥೆಯ ವಿಸ್ತಾರವಿದು.

ದೆಯೋ? ಅದನ್ನು ನಿರ್ವಹಿಸಲು ಬೇಕಾದ ಶಕ್ತಿಯನ್ನೂ ಜ್ಞಾನವನ್ನೂ ಕರುಣಿಸು" ಎಂದು ಬೇಡಿಕೊಂಡರು.

ಆಗ ಪರಮಾತ್ಮನು ಕಾಲಸ್ವರೂಪನಾಗಿ ಆ ದೇವತೆಗಳನ್ನು ಪ್ರವೇಶಿಸಿದನು. ಆಗ ಅಲ್ಲಿ ಸುಪ್ತವಾಗಿದ್ದ ಕರ್ಮಗಳೆಲ್ಲವೂ ನಿದ್ದೆಯಿಂದ ಎದ್ದಂತೆ ಎದ್ದು ಕುಳಿತವು. ಆಗ ಬ್ರಹ್ಮಾಂಡವು ಹುಟ್ಟಿತು. ಆ ಬ್ರಹ್ಮಾಂಡದೊಳಗೆ ವಿರಾಟ್ಪುರುಷನು ಸ್ಥಾವರ - ಜಂಗಮ (ಅಚರ-ಚರ) ವನ್ನೆಲ್ಲ ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಒಂದು ಸಾವಿರ ವರ್ಷ ಜಲರಾಶಿಯ ಮಧ್ಯದಲ್ಲಿದ್ದನು. ಅನಂತರ ತಾನಾಗಿ ತನ್ನ ದೇಹವನ್ನು ಬೇರೆ ಬೇರೆ ಮಾಡಿದನು.

ಈ ವಿರಾಟ್ಪುರುಷನೇ ಸರ್ವಪ್ರಾಣಿಗಳ ಆತ್ಮನು: ಇದೇ ಪರಮಾತ್ಮನ ಮೊದಲನೆಯ ಅವತಾರವು. ಇವನೇ ಇಂದ್ರಿಯಗಳಾಗಿ ಅಧ್ಯಾತ್ಮನೆಂಬ ಹೆಸರಿನಿಂದ ಶರೀರವನ್ನು ರಚಿಸುವನು. ಅಧಿದೈವವೆಂಬ ಹೆಸರಿನಿಂದ ದೇವತೆಗಳಾಗಿರುವನು. ಅಧಿಭೂತವೆಂಬ ಪಂಚಭೂತಗಳಾಗಿರುವನು. ಪಂಚ ಪ್ರಾಣ ಪಂಚ ಉಪಪ್ರಾಣಗಳೂ ಈತನೇ! ಎಲ್ಲರಲ್ಲಿಯೂ ಇರುವ ಚೈತನ್ಯವೂ ಇವನೇ! ಹಿಂದೆ ಪರಮಾತ್ಮನನ್ನು ಪ್ರಾರ್ಥಿಸಿದ ದೇವತೆಗಳೆಲ್ಲರೂ ಈ ವಿರಾಟ್ಪುರುಷನ ದೇಹದಲ್ಲಿ ನಿಂತರು. ಆತನ ಅಂಗಾಂಗಗಳಿಂದ ಮನುಷ್ಯರು ಹುಟ್ಟಿದರು. ಸ್ವಭಾವವೂ ಅದಕ್ಕೆ ಸರಿಯಾದ ಸ್ವಧರ್ಮವೂ ಹುಟ್ಟಿತು. ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಧರ್ಮದಿಂದ ಆ ತಮ್ಮೊಳಗಿರುವ ಪರಮಾತ್ಮನನ್ನು ಆರಾಧಿಸುವರು.

ಅನ್ಯಕಥೆಗಳಿಂದ ವಾಕ್ಕು ಮಲಿನವಾಗುವುದು. ಪರಮಾತ್ಮನ ದಿವ್ಯಚರಿತೆಯನ್ನು ಹೇಳಿದರೆ ಶುದ್ಧವಾಗುವುದು: ವಾಕ್ಕು ಇದ್ದವನು ಆ ಭಗವಂತನ ಚರಿತೆಯನ್ನು ವರ್ಣಿಸಬೇಕು. ಕಿವಿಗಳಿದ್ದವನು ಅವುಗಳನ್ನು ಕೇಳಬೇಕು. ಅದೇ ಪರಮಲಾಭವು. ಅದಕ್ಕಿಂತ ಲಾಭ

ವಿನ್ನಿಲ್ಲ. ಯಾರಿಗೂ, ಚತುರ್ಮುಖ ಬ್ರಹ್ಮನಿಗೂ, ತಿಳಿಯಲು ಸಾಧ್ಯವಿಲ್ಲದ ಆ ಪರಮಾತ್ಮನಿಗೆ ನಮಸ್ಕಾರವು.”

ಹೀಗೆ ಹೇಳಿದ ಮೈತ್ರೇಯನ ಮಾತುಗಳನ್ನು ಆಲಿಸಿ, ವಿದುರನು ಮತ್ತೆ ಕೇಳಿದನು: “ಎಲೈ ಮಹರ್ಷಿಯೇ! ಭಗವಂತನೂ ಮಾಯೆಗೆ ಸಿಕ್ಕಿ ಬೀಳುವನೆ? ಒಬ್ಬನೇ ಆದ ಭಗವಂತನು ದೇಹ ದೇಹದಲ್ಲೂ ಇರುವನಲ್ಲಾ, ಆತನಿಗೆ ಆಯಾ ದೇಹದ ಸಂಸಾರವು ಗಂಟುಬೀಳುವುದಿಲ್ಲವೆ?” ಎಂದನು.

ಮೈತ್ರೇಯನು ನಸುನಗುತ್ತಾ ಹೇಳಿದನು: “ಕೇಳು, ವಿದುರ, ಕನಸುಗಳಲ್ಲಿ ಏನೇನೋ ಕಾಣುವೆವು. ಎಚ್ಚರಾಗ ಅದೆಲ್ಲ ಸುಳ್ಳೆನಿಸುವುದಲ್ಲವೆ? ನೀರಿನಲ್ಲಿ ಪ್ರತಿಬಿಂಬಿಸುವ ಚಂದ್ರನು ಅಲ್ಲಾಡಿದಂತೆ ತೋರಿದ ಮಾತ್ರಕ್ಕೆ ಆಕಾಶದಲ್ಲಿರುವ ಚಂದ್ರನೂ ಅಲ್ಲಾಡುವನೇ? ಹಾಗೆ ಭಗವಂತನು ಮಾಯೆಗೂ ಸಿಕ್ಕಿಬೀಳುವುದಿಲ್ಲ. ಆತನಿಗೆ ಸಂಸಾರವೂ ಇಲ್ಲ. ಎಷ್ಟೇ ಕಷ್ಟಗಳಿದ್ದರೂ ನಿದ್ದೆ ಬಂದಾಗ ಎಲ್ಲವೂ ಮರೆತು ಹೋಗುವಂತೆ, ಆತನ ಅನುಗ್ರಹವನ್ನು ಪಡೆದಾಗ ಎಲ್ಲಾ ದುಃಖಗಳೂ ಹೋಗುವುವು ಎಂದ ಮೇಲೆ, ಆತನಿಗೆ ಈ ದುಃಖಗಳು ಹೇಗೆ ಉಂಟು?” ಎಂದನು.

ಅದನ್ನು ಕೇಳಿ ವಿದುರನು ಸಂತೋಷಪಟ್ಟು “ನೀನು ಹೇಳಿದುದು ತಿಳಿಯಿತು. ಎಲೈ ಮಹಾತ್ಮನೆ, ಆ ಪರಮಾತ್ಮನು ಎಲ್ಲವನ್ನೂ ತಾನೇ ಸೃಜಿಸಿದನು. ಎಲ್ಲದರಲ್ಲಿಯೂ ತಾನೇ ಸೇರಿಕೊಂಡನು. ಆತನೇ ವಿರಾಟ್ಪುರುಷನು. ಆತನೇ ಈ ಎಲ್ಲವೂ ಎಂದೆಯಲ್ಲ, ಅದನ್ನು ವಿವರಿಸು. ಅವುಗಳನ್ನೆಲ್ಲಾ ತಿಳಿಯುವುದೆಂತು? ಪರಮಾತ್ಮನ ಮಹಿಮೆಯನ್ನೂ ಯಜ್ಞಯೋಗ ಜ್ಞಾನಗಳನ್ನೂ ಹೇಳು. ಏನು ಮಾಡಿದರೆ ಅವು ಲಭಿಸುವುವು ಅದನ್ನು ಹೇಳು.” ಎಂದು ಬೇಡಿಕೊಂಡನು.

ಮೈತ್ರೇಯನು ಸಂತೋಷದಿಂದ ಹೇಳಿದನು: "ನಿನ್ನಂತಹ ಭಗವದ್ಭಕ್ತರು ಅಪರೂಪವು. ಅದರಿಂದ ನೀನು ಕೇಳಿರುವನ್ನು ಸಂತೋಷವಾಗಿ ಹೇಳುವೆನು ಕೇಳು: ಪೂರ್ವದಲ್ಲಿ ಸನತ್ಕುಮಾರನೇ ಮೊದಲಾದ ಮಹರ್ಷಿಗಳು ಪಾತಾಳ ಲೋಕಕ್ಕೆ ಹೋಗಿ ಅಲ್ಲಿ ಭಗವಂತನಾದ ವಾಸುದೇವನನ್ನು ಆರಾಧಿಸುತ್ತ ಕುಳಿತಿದ್ದ ಆದಿಶೇಷನ ದರ್ಶನ ಮಾಡಿ ಆತನಿಗೆ ನಮಸ್ಕಾರ ಮಾಡಿ ನೀನು ಈಗ ನನ್ನನ್ನು ಕೇಳಿದ ಪ್ರಶ್ನೆಯನ್ನೇ ಕೇಳಿದರು. ಆಗ ಆತನು ತಾನು ಮಾಡುತ್ತಿದ್ದ ಆರಾಧನೆಯನ್ನೂ ಬಿಟ್ಟು ಈ ಭಾಗವತವನ್ನು ಸನತ್ಕುಮಾರನಿಗೆ ಬೋಧಿಸಿದನು. ಆತನು ಆ ಭಾಗವತವನ್ನು ತನ್ನ ಶಿಷ್ಯನಾದ ಸಾಂಖ್ಯಾಯನ ಋಷಿಗೆ ಉಪದೇಶ ಮಾಡಿದನು. ಆ ಸಾಂಖ್ಯಾಯನನು ಪರಮಹಂಸರಲ್ಲಿ ಉತ್ತಮನು. ಆತನು ಭಗವಂತನ ಲೀಲೆಗಳನ್ನು ಪ್ರಚುರಪಡಿಸಬೇಕೆಂದು ಪುರಾಣಾಚಾರ್ಯನಾದ ಪರಾಶರ ಮಹರ್ಷಿಗೂ ಬೃಹಸ್ಪತ್ಯಾಚಾರ್ಯರಿಗೂ ಇದನ್ನು ಹೇಳಿದನು.

(ಪರಾಶರನ ತಂದೆಯಾದ ಶಕ್ತಿಯನ್ನು ರಾಕ್ಷಸನು ನುಂಗಿ ಹಾಕಿದನು. ಅದರಿಂದ ಪರಾಶರನು ಈ ಲೋಕದಲ್ಲಿ ರಾಕ್ಷಸರೇ ಇಲ್ಲದಂತೆ ಮಾಡಬೇಕೆಂದು ಯಜ್ಞವನ್ನು ಮಾಡಿದನು. ರಾಕ್ಷಸ ಕುಲದ ತಂದೆಯಾದ ಪುಲಸ್ತ್ಯನು ಬಂದು ಈ ಯಜ್ಞವನ್ನು ನಿಲ್ಲಿಸು ಎಂದು ಪರಾಶರನನ್ನು ಪ್ರಾರ್ಥಿಸಿದನು. ಆತನು ಆಗಲೆಂದು ಆ ಯಜ್ಞವನ್ನು ನಿಲ್ಲಿಸಿದನು. ಅದರಿಂದ ಸಂತುಷ್ಟನಾದ ಪುಲಸ್ತ್ಯನು ಪರಾಶರನಿಗೆ ನೀನು ಪುರಾಣಾಚಾರ್ಯನಾಗು ಎಂದು ವರವನ್ನು ಕೊಟ್ಟನು.)

ಹಾಗೆ ಪುರಾಣಾಚಾರ್ಯನಾದ ಪರಾಶರನಿಂದ ಈ ಭಾಗವತವು ನನಗೆ ಅನುಗ್ರಹವಾಯಿತು. ಆತನಿಂದ ಬೋಧೆಯನ್ನು ಪಡೆದ

ನಾನು ಶ್ರೀಕೃಷ್ಣನ ಅಪ್ಪಣೆಯಾಯಿತೆಂದು, ನೀನು ನನ್ನ ಶಿಷ್ಯನು ಎಂದು ನಿನಗೆ ಹೇಳುವೆನು.

ಮೊದಲು ಶ್ರೀಮನ್ನಾರಾಯಣನ ಸೃಷ್ಟಿಯನ್ನು ಕುರಿತು ಹೇಳುವೆನು. ಇದು ಸರ್ಗವು. ಈ ಜಗತ್ತೆಲ್ಲವೂ ನೀರಿನಲ್ಲಿ ಮುಳುಗಿ ಹೋಗಿತ್ತು. ಆಗ ನಾರಾಯಣನಲ್ಲದೆ ಇನ್ನು ಯಾರೂ ಇರಲಿಲ್ಲ. ಅನೇಕ ಸಹಸ್ರ ಚತುರ್ಯುಗಗಳು ನಾರಾಯಣನು ಯೋಗನಿದ್ರೆಯಲ್ಲಿ ಮುಳುಗಿದ್ದು ಮತ್ತೆ ಎಚ್ಚೆತ್ತನು. ಲೋಕಗಳನ್ನು ಸೃಷ್ಟಿಸಬೇಕು ಎಂದುಕೊಂಡನು. ತನ್ನಲ್ಲಿಯೇ ಲೋಕಗಳೆಲ್ಲವೂ ಸೂಕ್ಷ್ಮರೂಪದಲ್ಲಿರುವುದನ್ನೂ ಕಂಡನು. ಆಗ ಆತನ ನಾಭಿಯಿಂದ ಒಂದು ಕಮಲವು ಹುಟ್ಟಿತು. ಅದರಲ್ಲಿ ಮುಂದಕ್ಕೆ ಸೃಷ್ಟಿಯನ್ನು ಮಾಡುವ ಬ್ರಹ್ಮನು ಹುಟ್ಟಿದನು. ಆತನು ಆ ಕಮಲದಲ್ಲಿ ಕುಳಿತು ನಾಲ್ಕು ದಿಕ್ಕಿಗೂ ತಿರುಗಿ ನೋಡಲು ಆತನಿಗೆ ನಾಲ್ಕು ಮುಖಗಳಾದುವು. ಸುತ್ತಲೂ ನೀರಲ್ಲದೆ ಇನ್ನೇನೂ ಕಾಣದಿರಲು, ಈ ಜಲಕ್ಕೆ ಆಧಾರವೇನು ಎಂದು ಹುಡುಕಿದನು. ತಾನು ಕುಳಿತಿದ್ದ ಕಮಲದೊಳಗೆ ಇಳಿದು ಅದರ ಮೂಲವೆಲ್ಲಿದೆ ಎಂದು ಎಷ್ಟೋ ಹುಡುಕಿದರೂ ಆತನಿಗೆ ಸಿಕ್ಕಲಿಲ್ಲ. ಆ ನೀರಿನಲ್ಲಿರುವ ಕತ್ತಲೊಳಗೆ ಎಷ್ಟೋ ಕಾಲವಿದ್ದು, ಪ್ರಯೋಜನವಿಲ್ಲವೆಂದು ಹಿಂತಿರುಗಿ ಬಂದನು. ಅನಂತರ ಶ್ವಾಸನಿರೋಧಮಾಡಿ, ಮನಸ್ಸನ್ನು ನಿಗ್ರಹಿಸಿ, ಯೋಗದಲ್ಲಿ ಕುಳಿತನು. ಹೀಗೆ ನೂರಾರು ವರ್ಷಗಳು ಯೋಗವನ್ನು ಮಾಡುತ್ತಿರಲು ಆತನ ಹೃದಯಾರವಿಂದದಲ್ಲಿ, ಸಾವಿರಾರು ಹೆಡೆಗಳಿಂದ ಶೋಭಿಸುವ ಆದಿಶೇಷನ ಹಾಸುಗೆಯ ಮೇಲೆ ಮಲಗಿರುವ, ಮೇಘದಂತೆ ಹೊಳೆಯುವ ನೀಲಿಯ ದೇಹ ಕಾಂತಿಯುಳ್ಳ, ಕಿರೀಟಾದಿ ಅಲಂಕಾರಗಳುಳ್ಳ ಭಗವಂತನು ದರ್ಶನವನ್ನು ಕೊಟ್ಟನು. ಆಗ ಆತನ ನಾಭೀಸರೋವರವನ್ನೂ ಅಲ್ಲಿರುವ ಕಮಲವನ್ನೂ ಅದ

ರಲ್ಲಿರುವ ತನ್ನನ್ನೂ ಕಂಡು. ಆತನಪ್ಪಣೆಯಿಂದು ಲೋಕವನ್ನು ಸೃಷ್ಟಿ ಮಾಡಿದನು.

ಹೀಗೆ ಆತನು ಸೃಷ್ಟಿಗೆ ಆರಂಭಮಾಡಲು ಒಂದು ಬಿರುಗಾಳಿಯು ಹುಟ್ಟಿ, ಆತನ ಕಮಲವೂ ಅದರ ಸುತ್ತಲೂ ಇರುವ ಜಲರಾಶಿಯೂ ಅಲ್ಲಾಡಿ ಹೋಯಿತು. ಆತನು ತನ್ನ ತಪೋಬಲದಿಂದ ಆ ಜಲರಾಶಿಯನ್ನೂ ಬಿರುಗಾಳಿಯನ್ನೂ ಕುಡಿದುಬಿಟ್ಟನು. ಆತನು ಕುಳಿತಿದ್ದ ಕಮಲವು ಬೆಳೆದುಬೆಳೆದು ಆಕಾಶವನ್ನೆಲ್ಲಾ ವ್ಯಾಪಿಸಿತು. ಆ ಕಮಲದಲ್ಲಿದ್ದ ಬ್ರಹ್ಮನು ಭೂಮಿ ಸ್ವರ್ಗ ಪಾತಾಳಗಳೆಂದು ಮೂರು ಭಾಗಗಳನ್ನು ಮಾಡಿದನು. ಆತನ ಸೃಷ್ಟಿಯು ಪ್ರಾಕೃತ, ವೈಕೃತ, ಎಂದು ಎರಡು ವಿಧವು. ಅದರಲ್ಲಿ ಮೊದಲನೆಯದು ಆರು ವಿಧವು: ಎರಡನೆಯದು ನಾಲ್ಕು ವಿಧವು. ಮಾಯೆಯು ಸತ್ವ ರಜಸ್ತಮಸ್ಸುಗಳೆಂಬ ಮೂರು ಗುಣಗಳು ಒಂದಕ್ಕೊಂದು ಸಮವಾಗಿದ್ದುದು ತಪ್ಪಿ ವಿಷಮವಾಗಿ ಹೆಚ್ಚು ಕಡಿಮೆಯಾಗಿ ಮಹತ್ತತ್ವವಾದುದೇ ಮೊದಲನೆಯ ಸೃಷ್ಟಿಯು. ಮಿಕ್ಕ ಎಲ್ಲಾ ಸೃಷ್ಟಿಗೂ ಕಾರಣವಾದ ಅಹಂಕಾರವೇ ಎರಡನೆಯ ಸೃಷ್ಟಿಯು. ಆಕಾಶಾದಿ ಭೂತಗಳ ಸೂಕ್ಷ್ಮ ಸೃಷ್ಟಿಯು ಮೂರನೆಯದು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಸೃಷ್ಟಿಯು ನಾಲ್ಕನೆಯದು. ಇಂದ್ರಿಯಾಭಿಮಾನೀ ದೇವತೆಗಳೂ ಮನಸ್ಸೂ ಐದನೆಯ ಸೃಷ್ಟಿಯು. ಜೀವರನ್ನು ಹಿಡಿದಿರುವ ಅವಿದ್ಯೆಯು ಆರನೆಯ ಸೃಷ್ಟಿಯು ಇದಿಷ್ಟೂ ಪ್ರಕೃತಿ (ಪ್ರಾಕೃತ) ಸೃಷ್ಟಿಯು.

ಇನ್ನು ವಿಕೃತಿ (ವೈಕೃತ) ಸೃಷ್ಟಿಯನ್ನು ಹೇಳುವೆನು ಕೇಳು: ಸ್ಥಾವರ ಸೃಷ್ಟಿಯೇ ಏಳನೆಯ ಸೃಷ್ಟಿಯು. ಅದು ವೈಕೃತ ಸೃಷ್ಟಿಯಲ್ಲಿ ಮೊದಲನೆಯದು. ಇದು ಆರು ವಿಧವು. ಹೂವಿಲ್ಲದೆ ಫಲಿಸುವ ಅತ್ತಿ, ಅರಳಿ, ಆಲ, ಮೊದಲಾದುವು ವನಸ್ಪತಿಗಳು. ಹೂಬಿಟ್ಟು ಫಲಿ



ಪ್ರಳಯ ಜಲದಲ್ಲಿ
ಚತುರ್ಮುಖ ಬ್ರಹ್ಮನು ತಪಸ್ಸು ಮಾಡುವುದು

ಸುಸ ಭತ್ತ ಮೊದಲಾದುವು ಔಷಧಿಗಳು. ಮಾಲತಿ ಮಲ್ಲಿಗೆ ಮೊದಲಾದವು ಲತೆಗಳು. ಬಿದಿರು ಮುಂತಾದುವು ವೇಣ್ವಾದಿಗಳು. ಪೊದೆಗಳಾಗಿ ಬೆಳೆಯುವವು ಗುಲ್ಮಗಳು. ಮಾವು ತೆಂಗು ಮೊದಲಾದವು ದ್ರುಮಗಳು.

ತಿರ್ಯಗ್ಜಂತುಗಳ ಸೃಷ್ಟಿಯು ಏಳನೆಯದು. ಇವರಲ್ಲಿ ಇಪ್ಪತ್ತೆಂಟು ಜಾತಿಯ ಪ್ರಾಣಿಗಳಾದುವು. ನಾಳೆಯೆಂಬ ಯೋಚನೆಯಿಲ್ಲದೆ, ಮೂಗಿನಿಂದ ಇಷ್ಟಾನಿಷ್ಟಗಳನ್ನು ತಿಳಿದುಕೊಳ್ಳುತ್ತ. ಆಹಾರಾದಿ ಜ್ಞಾನಮಾತ್ರವಿರುವುವು ತಿರ್ಯಗ್ಜಂತುಗಳು. ಯಾವಾಗಲೂ ಏನಾದರೂ ಒಂದು ಚಿಂತೆಯಿಂದ ಕೂಡಿರುತ್ತ, ಯಾವಾಗಲೂ ಏನಾದರೂ ಮಾಡುತ್ತಲೇ ಇರುತ್ತ, ಕಷ್ಟಗಳಲ್ಲಿ ಬಿದ್ದು ಒದ್ದಾಡುತ್ತಿದ್ದರೂ ಸುಖವಾಗಿರುವೆವೆಂದು ದುರಭಿಮಾನ ಪಡುತ್ತಾ ಇರುವ ಮನುಷ್ಯರೂ ಇದೇ ವರ್ಗವು. (ಎಂಟನೆ ಸರ್ಗಗಳು.) ದೇವತೆಗಳು ಪಿತೃಗಳು ಅಸುರರು ಗಂಧರ್ವರು ಮೊದಲಾದ ಎಂಟು ವಿಧವೂ ವೈಕೃತ ದೇವತಾ ಸೃಷ್ಟಿಯು. ಸನಕಾದಿಗಳು ಮಾಡಿರುವ ಸೃಷ್ಟಿಯು ಪ್ರಾಕೃತ ವೈಕೃತ್ಯವು.

ಇಂತು ಈ ಸೃಷ್ಟಿಯೆಲ್ಲವೂ ಸತ್ವ ರಜಸ್ತಮೋರೂಪವಾದ ಗುಣಗಳಿಂದ ಆದುದು. ನದಿಯಲ್ಲಿ ಹರಿಯುವ ನೀರಿನಿಂದ ಸುಳಿ, ನೊರೆ, ಮೊದಲಾದವು ಹುಟ್ಟುವಂತೆ, ಹುಟ್ಟಿದುದು. ಇನ್ನು ಈ ಸೃಷ್ಟಿಗೆ ಕಾರಣವಾದ ಕಾಲದ ವಿಚಾರವನ್ನು ಹೇಳುವೆನು ಕೇಳು.

ಹಿಂದೆ ಹೇಳಿದ ಸತ್ವ ರಜಸ್ತಮೋಗುಣಗಳ ಹೆಚ್ಚು ಕಡಿಮೆಯೇ ಕಾಲವು. ಎಲ್ಲವನ್ನೂ ಮಾಡುವುದು ಈ ಕಾಲವು. ನಾಲ್ಕುಯಾಮ ಹಗಲು, ನಾಲ್ಕುಯಾಮ ಇರುಳು ಸೇರಿ ಮಾನವರ ಒಂದು ದಿನವು. ಇಂತಹ ದಿನಗಳು ಹದಿನೈದು ಆದರೆ ಒಂದು ಪಕ್ಷವು. ಇಂತಹ ಪಕ್ಷಗಳು ಎರಡು ಆದರೆ ಮಾನವರಿಗೆ ಒಂದು ತಿಂಗಳು. ಮಾನವರ

ಒಂದು ತಿಂಗಳಿಗೆ ಪಿತೃಗಳ ಒಂದು ದಿನವು. ಮಾನವರ ಎರಡು ತಿಂಗಳಿಗೆ ಒಂದು ಋತುವು. ಮೂರು ಋತುಗಳಿಗೆ ಒಂದು ಅಯನವು. ಎರಡು ಅಯನಗಳಿಗೆ ಒಂದು ಸಂವತ್ಸರವು. ಮಾನವರ ಸಂವತ್ಸರವು ದೇವತೆಗಳಿಗೆ ಒಂದು ದಿನವು. ಇಂತಹ ನೂರು ಸಂವತ್ಸರಗಳು ಮಾನವನ ಆಯುಸ್ಸು.

ಈ ಕಾಲಕ್ಕೆ ಅಧಿಪತಿಯು ಸೂರ್ಯನು. ಬಿತ್ತಿದ ಬೀಜವು ಮೊಳಕೆಯಾಗಿ ಫಲವಾಗುವುದು ಆತನಿಂದ. ಯಜ್ಞಾದಿ ಕರ್ಮಗಳಿಗೆ ಫಲವನ್ನು ಕೊಡುವುದೂ ಆತನೇ! ಹೀಗೆ ತೇಜೋರೂಪನಾಗಿ ಗಗನದಲ್ಲಿ ಸಂಚರಿಸುತ್ತಿರುವ ಆತನನ್ನು ಆದರದಿಂದ ಆರಾಧಿಸುವುದು."

ವಿದುರನು ಮತ್ತೆ ಕಾಲಸ್ವರೂಪವನ್ನು ವಿಸ್ತಾರವಾಗಿ ಹೇಳಬೇಕೆನ್ನಲು ಮೈತ್ರೇಯನು ಹೇಳಿದನು—ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳು. ಇವುಗಳಿಗೆ ದೇವತೆಗಳ ಲೆಕ್ಕದ ಹನ್ನೆರಡು ಸಾವಿರ ವರ್ಷಗಳು. ಕೃತಯುಗಕ್ಕೆ ನಾಲ್ಕು ಸಾವಿರದ ಎಂಟುನೂರು, ತ್ರೇತೆಗೆ ಮೂರು ಸಾವಿರದ ಆರುನೂರು, ದ್ವಾಪರಕ್ಕೆ ಎರಡು ಸಾವಿರದ ನಾಲ್ಕುನೂರು, ಕಲಿಯುಗಕ್ಕೆ ಒಂದು ಸಾವಿರದ ಇನ್ನೂರು ವರ್ಷಗಳು ಪ್ರಮಾಣವು. ಈ ಯುಗಯುಗಕ್ಕೂ ಸಂಧಿ, ಸಂಧ್ಯಾಂಶ, ಮಧ್ಯಭಾಗ ಎಂದು ಮೂರು ಭಾಗಗಳು. ಸಂಧಿಯಲ್ಲಿ ಆ ಯುಗ ಧರ್ಮವು ಸೃಷ್ಟಿಯಾಗುವುದು. ಮಧ್ಯವಲ್ಲಿ ಆ ಯುಗದ ಧರ್ಮವು ಪ್ರಚಾರವಾಗುವುದು. ಸಂಧ್ಯಾಂಶವಲ್ಲಿ ಆ ಯುಗದ ಧರ್ಮವು ಪ್ರಲಯವಾಗುವುದು.

ದೇವತೆಗಳ ಲೆಕ್ಕದ ಒಂದು ಸಾವಿರ ವರ್ಷಗಳಿಗೆ ಬ್ರಹ್ಮನ ಒಂದು ಹಗಲು. ಆತನ ರಾತ್ರಿಯೂ ಅಷ್ಟೇ! ಹೀಗೇ ಆತನ ಮಾಸ ಸಂವತ್ಸರಗಳು. ಆತನ ಆಯುಸ್ಸು ನೂರು ವರ್ಷವು. ಆತನ ಆಯುಸ್ಸಿನಲ್ಲಿ ಐವತ್ತು ವರ್ಷವಾದರೆ ಮನುಷ್ಯರಿಗೆ ಒಂದು

ಪರಾರ್ಧವು. ಈಗ ಮೊದಲನೆಯ ಪರಾರ್ಧವು ಕಳೆದು ಹೋಗಿರುವುದು. ಆ ಮೊದಲನೆಯ ಪರಾರ್ಧದ ಆದಿಭಾಗದಲ್ಲಿ ಬ್ರಾಹ್ಮಕಲ್ಪವು ನಡೆಯಿತು. ಅದರ ಕೊನೆಯಲ್ಲಿ ಪಾದ್ಮಕಲ್ಪವು ನಡೆಯಿತು. ಈ ಕಲ್ಪವು ಭಗವಂತನ ನಾಭೀಸರೋವರದಿಂದ ಬ್ರಹ್ಮಾಂಡ ರೂಪವಾದ ಪದ್ಮವು ಹುಟ್ಟಿದಾಗ ಆರಂಭವಾಯಿತು. ಅದರಿಂದ ಅದಕ್ಕೆ ಆ ಹೆಸರು. ಎರಡನೆಯ ಪರಾರ್ಧದಲ್ಲಿ ಈಗ ನಡೆಯುತ್ತಿರುವ ಶ್ವೇತವರಾಹ ಕಲ್ಪವು ಮೊದಲನೆಯದು. ಭಗವಂತನಾದ ನಾರಾಯಣನು ಶ್ವೇತವರಾಹನಾಗಿ ಅವತರಿಸಿ ಈ ಕಲ್ಪವನ್ನು ಆರಂಭಿಸಿದನು. ಅದರಿಂದ ಈ ಹೆಸರು.

ಈ ಬ್ರಹ್ಮನ ಪೂರ್ಣಾಯುಸ್ಸಾದ ನೂರು ವರ್ಷಗಳೂ ಆ ಭಗವಂತನಿಗೆ ಒಂದು ನಿಮೇಷವು. ಈ ಕಾಲದ ಲೆಕ್ಕವು ಸೃಷ್ಟಿಯಾದವರಿಗೆ ಮಾತ್ರವೇ ಹೊರತು ಸೃಷ್ಟಿ ಮಾಡುವ ಭಗವಂತನಿಗಲ್ಲ. ಈ ಬ್ರಹ್ಮಾಂಡವು ಐವತ್ತು ಕೋಟಿ ಯೋಜನ ವಿಸ್ತೀರ್ಣವಾಗಿರುವುದು. ಇಂತಹ ಬ್ರಹ್ಮಾಂಡವು ಆ ಭಗವಂತನಿಗೆ ಹೋಲಿಸಿದರೆ ಸಾಸುವೆಯೂ ಅಲ್ಲ."

"ವಿದುರ! ಇದುವರೆಗೆ ಭಗವಂತನು ಕಾಲವಾಗಿ ಮಾಡಿದ ಸೃಷ್ಟಿಯನ್ನು ಹೇಳಿದೆನು. ಇನ್ನು ಚತುರ್ಮುಖನ ಸೃಷ್ಟಿಯನ್ನು ಹೇಳುವೆನು ಕೇಳು. ಚತುರ್ಮುಖನು ಮೊದಲು (ಸೃಷ್ಟಿಯು ನಡೆದು ಕೊಂಡು ಹೋಗಲು ಬೇಕಾದ) ಅಜ್ಞಾನ ವೃತ್ತಿಯನ್ನು ಸೃಷ್ಟಿ ಮಾಡಿದನು. ಭಗವಂತನನ್ನು ಮರೆತು, ತಾನು ಆತ್ಮನೆಂಬುದನ್ನು ಅರಿಯದೆ, ಇರುವುದೇ ಅಜ್ಞಾನವು. ಇದು ಐದು ವಿಧವಾಗಿರುವುದು. ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂದು ಆ ಐದರ ಹೆಸರು. ತಾನು ಆತ್ಮನು ಎಂಬುದನ್ನು ಅರಿಯದೆ ಇರುವುದೇ ತಮಸ್ಸು. ಶರೀರವೇ ತಾನು ಎಂದುಕೊಳ್ಳುವುದೇ

ಮೋಹವು. ಶಬ್ದಾದಿ ವಿಷಯಗಳನ್ನು ಅನುಭವಿಸಬೇಕು ಎಂದು ಕೊಳ್ಳುವುದು ಮಹಾಮೋಹವು. ವಿಷಯಾಸಕ್ತಿ ಅಡ್ಡಿಬಂದಾಗ ಉಂಟಾಗುವುದು ಕ್ರೋಧವು. ಅದೇ ತಾಮಿಸ್ರವು. ವಿಷಯಸುಖವು ತಪ್ಪಿಹೋದಾಗ ತಾನೇ ಸತ್ತೆನೆಂದು ತಿಳಿದುಕೊಳ್ಳುವುದು ಅಂಧತಾಮಿಸ್ರವು.

ಈ ಅಜ್ಞಾನವು ಲೋಕವನ್ನು ಮೋಹಿಸಿದಲ್ಲ ಅದ್ಭುತವಲ್ಲಾ ಎಂದು ಬ್ರಹ್ಮನಿಗೆ ಅಯ್ಯೋ ಎನ್ನಿಸಿತು. ಮತ್ತೆ ಭಗವದ್ಧ್ಯಾನಸಹಿತ ಶುದ್ಧ ತಪಸ್ಸಿನಿಂದ ಮಾನಸಪುತ್ರರನ್ನು ಸೃಜಿಸಿದನು. ಅವರೇ ಸನಕ, ಸನಂದನ, ಸನಾತನ, ಸನತ್ಕುಮಾರರೆಂಬುವರು. ಅವರೆಲ್ಲರೂ ಜಿತೇಂದ್ರಿಯರು. ಪರಮವಿರಕ್ತರು ಆತ್ಮಧ್ಯಾನ ಪರಾಯಣರು. ಮುಂದೆ ಸೃಷ್ಟಿಮಾಡಿರಿ ಎಂದರೆ ಅವರು ಆಗುವುದಿಲ್ಲ ಎಂದರು. ಅದರಿಂದ ಬ್ರಹ್ಮನಿಗೆ ಕೋಪವು ಬಂತು. ಆ ಕೋಪವು ನೀಲಲೋಹಿತನಾಯಿತು. ಅದು ಅಳುತ್ತಲೇ ಹುಟ್ಟಿತಾಗಿ ಅದಕ್ಕೆ ರುದ್ರನೆಂದೂ ಹೆಸರಾಯಿತು. ಈ ರುದ್ರನು ಹನ್ನೊಂದು ರೂಪದಿಂದ, ಹನ್ನೊಂದು ಹೆಸರುಗಳಿಂದ, ಹನ್ನೊಂದು ಜನ ಹೆಂಡತಿಯರೊಡನೆ ಹನ್ನೊಂದು ಸ್ಥಾನಗಳಲ್ಲಿ ನೆಲಸಿದನು. ಈತನು ತನ್ನಂತೆಯೇ ಇರುವ ರುದ್ರಗಣಗಳನ್ನು ಸೃಷ್ಟಿಸಿದನು. ಆ ರುದ್ರಗಣಗಳು ಲೋಕಗಳನ್ನು ಸುಡುತ್ತಾ ಬರಲು, ಬ್ರಹ್ಮನು ಅವರನ್ನು ತಡೆದು, "ರುದ್ರ, ನೀನು ತಪಸ್ಸು ಮಾಡಿ ಶುದ್ಧನಾಗಿ ಸೃಷ್ಟಿಯನ್ನು ಮಾಡು" ಎಂದು ಅಪ್ಪಣೆ ಮಾಡಿದನು. ಆಗ ರುದ್ರನು ಅಪ್ಪಣೆಯೆಂದು ತಪಸ್ಸಿಗೆ ಹೋದನು.

ಬ್ರಹ್ಮನು ಮತ್ತೆ ಸೃಷ್ಟಿಮಾಡಿದನು. ಆತನ ಅಂಗಾಂಗಗಳಿಂದ ನಾರದ, ದಕ್ಷ, ವಸಿಷ್ಠ, ಭೃಗು, ಕ್ರತು, ಪುಲಹ, ಪುಲಸ್ತ್ಯ, ಅಂಗಿರಸ್ಸು, ಅತ್ರಿ, ಮರೀಚಿ ಎಂಬ ಹತ್ತು ಮಂದಿ ಮಕ್ಕಳಾದರು. ಹಾಗೇ

ಧರ್ಮ, ಮೃತ್ಯು, ಕಾಮ, ಕ್ರೋಧ, ಲೋಭ, ಸರಸ್ವತಿ, ಸಮುದ್ರಗಳು, ಕಲಿ, ಕರ್ದಮ, ಇವರೂ ಹುಟ್ಟಿದರು. ತನ್ನ ಬಾಯಿಂದ ಹುಟ್ಟಿದ ಸರಸ್ವತಿಗೆ ಮನಸೋತು ಆತನು ಆ ಮಗಳನ್ನು ಕೂಡಿಕೊಂಡನು. ಅವನ್ನು ಕಂಡು ಮರೀಚಿ ಮೊದಲಾದವರು ಹೀಗೆ ಮಾಡಬಹುದೇ ಎನ್ನಲು, ಆತನು ನಾಚಿಕೊಂಡು ತನ್ನ ದೇಹವನ್ನು ಬಿಟ್ಟುಬಿಟ್ಟನು. ಆ ಶರೀರದಿಂದ ಕತ್ತಲೆಯೂ, ಮಂಜುಗಳೂ ಹುಟ್ಟಿದುವು.

ಮತ್ತೆ ಆತನು ದೇಹವನ್ನು ಧರಿಸಿ ಬಂದು ಸೃಷ್ಟಿಗಾರಂಭಿಸಿದಾಗ ಚತುರ್ವೇದಗಳೂ ಆಯುರ್ವೇದ ಧನುರ್ವೇದ, ಗಾಂಧರ್ವವೇದ, ಸ್ಥಾಪತ್ಯವೇದ, ಎಂಬ ನಾಲ್ಕು ಉಪವೇದಗಳು, ಇತಿಹಾಸ ಪುರಾಣಗಳೆಂಬ ಐದನೆಯ ವೇದವು, ಯಜ್ಞಗಳು, ಧರ್ಮದ ನಾಲ್ಕು ಪಾದಗಳೆನಿಸಿದ ಆತ್ಮಜ್ಞಾನ, ಭೂತದಯೆ, ಸತ್ಯ, ತಪಸ್ಸು, ಆಶ್ರಮ ಧರ್ಮಗಳೂ ಎಲ್ಲವೂ ಆಗ ಹುಟ್ಟಿದುವು.

ಆಗ ಬ್ರಹ್ಮನ ಹೃದಯಾಕಾಶದಿಂದ ಪ್ರಣವವು ಹುಟ್ಟಿತು. ವ್ಯಾಹೃತಿಗಳು ಹುಟ್ಟಿದುವು. ಏಳು ಛಂದಸ್ಸುಗಳು ಹುಟ್ಟಿದುವು.

ಇಷ್ಟಾದರೂ ಪ್ರಜಾಭಿವೃದ್ಧಿಯಾಗಲಿಲ್ಲ. ಲೋಕ ಲೋಕಗಳು ಪ್ರಜೆಗಳಿಂದ ತುಂಬಲಿಲ್ಲ. ಆಗ ಏನು ಮಾಡಬೇಕೆಂದು ಯೋಚಿಸುತ್ತಿರುವಾಗ ಆತನ ಶರೀರವು ಎರಡಾಗಿ ಸ್ತ್ರೀ ಪುರುಷರು ಜನಿಸಿದರು. ಸ್ತ್ರೀಯೇ ಶತರೂಪೆಯು. ಪುರುಷನೇ ಸ್ವಾಯಂಭುವ ಮನುವು ಇವರಿಬ್ಬರೂ ದಂಪತಿಗಳಾದರು.

ಆ ದಂಪತಿಗಳು ಬ್ರಹ್ಮನ ಬಳಿಗೆ ಬಂದು ವಿನಯದಿಂದ ನಮಸ್ಕಾರಮಾಡಿ, "ತಂದೆಯೇ, ನಾವು ಮುಂದೆ ಮಾಡಬೇಕಾದ ಕಾರ್ಯವನ್ನು ಆಜ್ಞಾಪಿಸು" ಎಂದರು. ಬ್ರಹ್ಮನು ಆ ವಿನಯವನ್ನು ಕಂಡು ಸಂತುಷ್ಟನಾಗಿ "ನೀವು ಗುಣವಂತರಾದ ಮಕ್ಕಳನ್ನು ಪಡೆಯಿರಿ.

ನೀನು ಮನುವು. ಈ ಭೂಮಂಡಲವನ್ನೆಲ್ಲಾ ಧರ್ಮದಿಂದ ಪಾಲಿಸು ಇದರಿಂದ ಶ್ರೀಮನ್ನಾರಾಯಣನು ತೃಪ್ತನಾಗುವನು" ಎಂದನು.

ಅದಕ್ಕೆ ಸ್ವಾಯಂಭುವನು "ತಂದೆಯೇ, ನಿನ್ನ ಅಪ್ಪಣೆಯಾದಂತಾಗಲಿ. ಆದರೆ ಸರ್ವಪ್ರಾಣಿಗಳಿಗೂ ನೆಲೆಯಾಗಿದ್ದ ಭೂಮಿಯು ಮಹಾಜಲದಲ್ಲಿ ಮುಳುಗಿ ಹೋಗಿರುವುದು. ಆದ್ದರಿಂದ ನನಗೂ ನನ್ನ ಪ್ರಜೆಗಳಿಗೂ ನಿಲ್ಲುವುದಕ್ಕೆ ತಾವಿಲ್ಲ" ಎಂದನು. ಅದನ್ನು ಕೇಳಿ ಬ್ರಹ್ಮನು ಆ ಭೂಮಂಡಲವನ್ನು ಎತ್ತುವುದು ಹೇಗೆ ಎಂದು ಚಿಂತೆಯನ್ನು ಮಾಡಿದನು.

ಹಾಗೆ ಚಿಂತಿಸುತ್ತಿದ್ದಾಗ ಆತನ ಮೂಗಿನ ಹೊಳ್ಳೆಯಿಂದ ಥಟ್ಟನೆ ಬೆರಳುಗಾತ್ರದ ಹಂದಿಯೊಂದು ಈಚೆಗೆ ಬಂತು. ಅದು ಅವರೆಲ್ಲ ನೋಡುತ್ತಿದ್ದ ಹಾಗೆಯೇ ಬೆಳೆದು ಆನೆಯಷ್ಟಾಯಿತು. ಇನ್ನಷ್ಟು ಹೊತ್ತಿನೊಳಗಾಗಿ ದೊಡ್ಡ ಬೆಟ್ಟದಷ್ಟಾಯಿತು. ಆಗ ಎಲ್ಲರೂ ಇದು ಭಕ್ತರನ್ನು ಕಾಯುವ ನಾರಾಯಣನ ಅವತಾರವು ಎಂದು ನಿಶ್ಚಯಿಸಿ, ಆತನನ್ನು ವೇದ ಮಂತ್ರಗಳಿಂದ ಹೊಗಳಿದರು. ಆ ವರಾಹದ ಅಂಗಾಂಗಗಳಲ್ಲಿ ಯಜ್ಞವೆಲ್ಲವೂ ಇರುವುದನ್ನು ಕಂಡು ಈತನೇ ಯಜ್ಞಸ್ವರೂಪನು ಎಂದು ಬಹಳ ಸಂತೋಷಪಟ್ಟರು. ಆ ವರಾಹವು ಶ್ವೇತ (ಬಿಳಿಯ) ವರ್ಣವಾಗಿತ್ತು. ಆ ವರಾಹದ ಅವತಾರದಿಂದ ಒಂದು ಹೊಸ ಕಲ್ಪವು ಆರಂಭವಾಯಿತು. ಅದೇ ಶ್ವೇತವರಾಹಕಲ್ಪವು. ಆ ಕಲ್ಪವು ಇನ್ನೂ ನಡೆಯುತ್ತಿರುವುದು.

ಆ ವರಾಹವು ತನ್ನನ್ನು ಸ್ತುತಿ ಮಾಡಿದವರನ್ನು ಅನುಗ್ರಹಿಸಿ, ಭೂಮಂಡಲವನ್ನು ತರಲು ಮಹಾಜಲದೊಳಕ್ಕೆ ನುಗ್ಗಿತು. ಅಲ್ಲಿ ಜಲ ಮಧ್ಯದಲ್ಲಿರುವ ಭೂಮಂಡಲವನ್ನು ತನ್ನ ಮೂತಿಯಿಂದ ಎತ್ತಿಕೊಂಡಿತು. ಆಗ ಜಲವೆಲ್ಲವೂ ಬಹಳವಾಗಿ ಕಲಕಿಹೋಯಿತು. ಸಮುದ್ರರಾಜನು ಏನಾಗುವುದೋ ಎಂದು ಹೆದರಿ "ಎಲೈ ಯಜ್ಞ

ಮೂರ್ತಿಯೆ, ನನ್ನನ್ನು ಕಾಪಾಡು, ಕಾಪಾಡು" ಎಂದು ಪ್ರಾರ್ಥಿಸಿಕೊಂಡನು. ಆ ವರಾಹ ಮೂರ್ತಿಯು ಅವನಿಗೆ ಅಭಯವನ್ನು ಕೊಟ್ಟು, ಭೂಮಂಡಲವನ್ನು ತೆಗೆದುಕೊಂಡು ಹೊರಟನು.

ಆಗ ಆ ವರಾಹವೇಷವನ್ನು ಒಬ್ಬ ರಾಕ್ಷಸನು ಎದುರಿಸಿ ತಡೆದನು. ಆತನು ಆ ರಾಕ್ಷಸನನ್ನು ಸಂಹರಿಸಿ, ಕಾಡಾನೆಯು ನೀರಾಟವಾಡಿ, ಒಂದು ಕಮಲವನ್ನು ಕಿತ್ತುಕೊಂಡು ಬರುವ ರೀತಿಯಂತೆ, ಭೂಮಿಯನ್ನು ತಾನು ತನ್ನ ದಾಡೆಯಷ್ಟು ಇರುವ ಜಲದಲ್ಲಿ ಇಟ್ಟನು. ಆಗ ಬ್ರಹ್ಮಾದಿಗಳೆಲ್ಲರೂ ಬೇಕಾದ ಹಾಗೆ ಆತನನ್ನು ಸ್ತೋತ್ರ ಮಾಡಿದರು.

---

ಐದನೆಯ ಅಧ್ಯಾಯ

## ಹಿರಣ್ಯಾಕ್ಷನ ವೃತ್ತಾಂತವು

ಮೈತ್ರೇಯನು ಹೇಳಿದ ವರಾಹ ಅವತಾರವನ್ನು ಕೇಳಿ ವಿದುರನಿಗೆ ಇನ್ನೂ ಕೇಳಬೇಕೆನ್ನಿಸಿತು. ಕೈ ಮುಗಿದುಕೊಂಡು "ಎಲೈ ಮುನೀಂದ್ರನೇ, ಯಜ್ಞರೂಪನಾದ ವರಾಹ ಮೂರ್ತಿಯು ಆದಿ ರಾಕ್ಷಸನನ್ನು ಕೊಂದನು ಎಂದೆಯಲ್ಲ: ಅವನು ಯಾರು? ಏಕೆ ಮಹಾವಿಷ್ಣುವಿನೊಡನೆ ಕಾದಿದನು? ಆ ವೃತ್ತಾಂತವನ್ನೆಲ್ಲ ವಿಸ್ತಾರವಾಗಿ ಹೇಳು" ಎಂದು ಕೇಳಿಕೊಂಡನು.

ಮೈತ್ರೇಯನು ಅದನ್ನು ಕೇಳಿ ಬಹಳ ಸಂತೋಷಪಟ್ಟನು: "ಭಗವಂತನ ಅವತಾರಗಳ ಚರಿತ್ರೆಯು ಮನುಷ್ಯರ ಮರಣ ಭೀತಿಯನ್ನು ಕಳೆಯುವುದು. ಅದರಿಂದ ನೀನು ಈ ಚರಿತ್ರೆಯನ್ನು ಕೇಳಿದುದು ಲೋಕಕ್ಕೆ ಒಳ್ಳೆಯದಾಯಿತು. ವಿಸ್ತಾರವಾಗಿ ಹೇಳುವೆನು ಕೇಳು.

ದಕ್ಷಬ್ರಹ್ಮನ ಪುತ್ರಿಯರಲ್ಲಿ ಹದಿಮೂರು ಮಂದಿಯು ಕಶ್ಯಪನನ್ನು ಮದುವೆಯಾದರು. ಅವರಲ್ಲಿ ದಿತಿಯೂ ಒಬ್ಬಳು. ಒಂದು ದಿನ ಸಂಜೆಯ ಹೊತ್ತಿನಲ್ಲಿ ಆಕೆಗೆ ಗಂಡನ ಮೇಲೆ ಆಸೆಯಾಯಿತು. ಗಂಡನಾದ ಕಶ್ಯಪನ ಬಳಿಗೆ ಹೋಗಿ ತನಗೆ ಮಕ್ಕಳನ್ನು ಕೊಡು ಎಂದು ಬೇಡಿದಳು. ಆತನು "ಇದು ಅತ್ಯಂತ ಭಯಂಕರವಾದ ಸಂಧ್ಯಾಕಾಲವು. ಈ ಕಾಲದಲ್ಲಿ ರುದ್ರನು ತನ್ನ ಭೂತಗಣಗಳೊಡನೆ ಎಲ್ಲೆಲ್ಲಿಯೂ ಸಂಚರಿಸುತ್ತಿರುವನು. ಆದುದರಿಂದ ಇನ್ನಷ್ಟು ಹೊತ್ತು ಕಳೆಯಲಿ" ಎಂದರೂ ಕೇಳದೆ ಬಲವಂತ ಮಾಡಿದಳು. ಆಗ ಆತನು "ಈಕೆಗೆ ಈ ದುರ್ಬುದ್ಧಿಯು ಬಂದಿರುವುದೇಕೆ?" ಎಂಬುದನ್ನು ಅರಿತುಕೊಂಡು ಆಕೆಯ ಆಸೆಯನ್ನು ನೆರವೇರಿಸಿದನು.

ಆಮೇಲೆ ಆಕೆಗೆ ತಾನು ಮಾಡಿದುದು ತಪ್ಪು ಎಂದು ತಿಳಿಯಿತು. ಆಗ ಅವಳು ಮತ್ತೆ ಗಂಡನ ಬಳಿಗೆ ಬಂದು "ರುದ್ರನು ಈ ನನ್ನ ತಪ್ಪನ್ನು ಮನ್ನಿಸಿ ನನ್ನ ಗರ್ಭವನ್ನು ಕಾಪಾಡಲಿ. ಆ ಮಹಾದೇವನು ನನ್ನನ್ನು ಕನಿಕರಿಸಲಿ." ಎಂದು ಬೇಡಿಕೊಂಡಳು. ಆಗ ಆತನು "ನಾನು ಹಿತವೆಂದರೂ ಕೇಳದೆ ಹೋದೆ. ಆದುದರಿಂದ ನಿನ್ನ ಗರ್ಭದಲ್ಲಿ ಇಬ್ಬರು ದುಷ್ಟರು ಹುಟ್ಟಿ ಮೂರು ಲೋಕಗಳನ್ನೂ ಕಾಡಿ, ಮಾಡಬಾರದ ಕಾರ್ಯಗಳನ್ನೆಲ್ಲ ಮಾಡುವರು. ಅವರನ್ನು ಕೊಲ್ಲಲು ಮಹಾವಿಷ್ಣುವೇ ಅವತಾರ ಮಾಡಬೇಕಾಗುವುದು. ಆದರೂ ಚಿಂತಿಸಬೇಡ. ಈಗ ನೀನು ನಿನ್ನ ಅಕಾರ್ಯಕ್ಕಾಗಿ ಪಶ್ಚಾತ್ತಾಪಪಡುತ್ತಿರುವೆ. ಮಹಾದೇವನಲ್ಲಿ ಕ್ಷಮಾಪಣೆ ಬೇಡುತ್ತಿರುವೆ. ನನ್ನನ್ನೂ ಗೌರವಿಸುತ್ತಿರುವೆ. ಆದುದರಿಂದ ನಿನ್ನ ಮಗನ ಮಗನೊಬ್ಬನು ಮಾತ್ರ ಸಜ್ಜನಾಗ್ರಣಿಯಾಗುವನು. ಆತನು ಭಗವಂತನಿಗೆ ಸಮನಾಗುವನು" ಎಂದು ಅನುಗ್ರಹಿಸಿದನು. ದಿತಿಯು ತನ್ನ ಮೊಮ್ಮಗನಾದರೂ ಭಗವದ್ಭಕ್ತನಾಗುವನಲ್ಲಾ ಎಂದು ಸಂತೋಷಪಟ್ಟಳು.

ದಿತಿದೇವಿಯು ಯಾರಿಂದಲಾದರೂ ತನ್ನ ಗರ್ಭಕ್ಕೆ ಕೇಡು ಬಂದೀತು ಎಂದು ಆ ಗರ್ಭವನ್ನು ಹೊರಗೆ ಬಿಡದೆ ನೂರು ವರ್ಷಗಳು ಹೊಟ್ಟೆಯಲ್ಲಿಯೇ ಇಟ್ಟುಕೊಂಡಿದ್ದಳು. ಆ ಗರ್ಭವು ಒಳಗಿದ್ದರೂ ಅದರ ತೇಜಸ್ಸು ಲೋಕ ಲೋಕಗಳನ್ನೆಲ್ಲಾ ವ್ಯಾಪಿಸಿ ಸೂರ್ಯ ಚಂದ್ರಾದಿಗಳನ್ನು ಕೂಡ ಕಂಗುಂದಿಸಿತು. ಎಲ್ಲೆಲ್ಲಿಯೂ ಕತ್ತಲು ತಾನೇ ತಾನಾಯಿತು. ಆಗ ಇಂದ್ರಾದಿ ದೇವತೆಗಳೆಲ್ಲರೂ ಏನೂ ಮಾಡಲು ತೋರದೆ ಹೋಗಿ ಜಗತ್ಕಾರಣನಾದ ಬ್ರಹ್ಮನನ್ನು ದರ್ಶನ ಮಾಡಿ ಆಗಿರುವುದನ್ನು ಹೇಳಿಕೊಂಡರು.

ಆಗ ಆತನು ನಕ್ಕು ಆ ದೇವತೆಗಳಿಗೆ ಒಂದು ಹಿಂದಿನ ಸಂಗತಿಯನ್ನು ಹೇಳಿದನು:– "ಎಲೈ ದೇವತೆಗಳಿರಾ, ಅದೊಮ್ಮೆ ನನ್ನ ಮನಸ್ಸಿನಿಂದ ಜನಿಸಿದ ಸನಕಾದಿಗಳು ನಾಲ್ವರು ಒಂದು ದಿನ ವೈಕುಂಠ ಲೋಕಕ್ಕೆ ಹೋದರು. ಅಲ್ಲಿ ವೈಭವವನ್ನು ನೋಡಿ ಪರಮ ಪುರುಷನಾದ ಪುರುಷೋತ್ತಮನನ್ನು ನೋಡಬೇಕೆಂದು ಅಂತಃಪುರದ ಬಳಿಗೆ ಹೋದರು. ಅಲ್ಲಿ ಬಾಗಿಲಲ್ಲಿ ಕಾವಲಾಗಿದ್ದ ಇಬ್ಬರು ದಿವ್ಯ ಪುರುಷರು ಅವರನ್ನು ಯಾರು ಇವರು ಎಂಬುದನ್ನು ಅರಿಯದೆ ತಡೆದು ಬಿಟ್ಟರು. ಆ ಸನಕಾದಿಗಳು ಸಾತ್ವಿಕರೂ ಮಹಾತಪಸ್ವಿಗಳು. ಅವರಿಗೆ ಕೋಪವೆಂಬುದೇ ಇಲ್ಲ. ಆದರೂ ಮುಂದೆ ಕಾರ್ಯವು ನಡೆಯ ಬೇಕಾಗಿತ್ತಾಗಿ ಅವರಿಗೆ ಕೋಪವು ಬಂತು. "ನೀವು ಇಲ್ಲಿರುವುದಕ್ಕೆ ಅರ್ಹರಲ್ಲ. ನೀವು ಮಾಡಿದ ಕೆಲಸ ರಾಕ್ಷಸರ ಕೆಲಸ. ಅದರಿಂದ ನೀವೂ ರಾಕ್ಷಸರಾಗಿ" ಎಂದು ಶಾಪವನ್ನು ಕೊಟ್ಟರು.

ಈ ಗದ್ದಲವನ್ನು ಕೇಳಿ ಪುರುಷೋತ್ತಮನು ತಾನೇ ಬಾಗಿಲಿಗೆ ಬಂದನು. ಕೋಪಗೊಂಡಿರುವ ಸನಕಾದಿಗಳನ್ನೂ ಅಪರಾಧವನ್ನು ಮಾಡಿ ಗಡಗಡನೆ ನಡುಗುತ್ತಿರುವ ಜಯವಿಜಯರನ್ನೂ ನೋಡಿ ಇಬ್ಬರನ್ನೂ ಸಮಾಧಾನ ಮಾಡಿದನು. "ಎಲೈ ಸನಕಾದಿಗಳೇ, ನೀವು

ಹೀಗಾಯಿತು ಎಂದು ವ್ಯಥೆಪಡಬೇಡಿ. ಒಂದು ದಿನ ಈ ಜಯ ವಿಜಯರು ರಮಾದೇವಿಯು ಒಳಕ್ಕೆ ಬರದಂತೆ ತಡೆದು ಆಕೆಯ ಶಾಪವನ್ನು ಪಡೆದಿರುವರು. ಅದರಿಂದ ಆ ಶಾಪವು ಫಲವಾಗುವ ಕಾಲವು ಬಂದು, ನಿಮಗೆ ಕೋಪ ಬಂತು. ಇದು ಹೀಗೇ ಆಗಬೇಕಾಗಿರುವುದು." ಎಂದು ಅವರಿಗೆ ಹೇಳಿ, ಜಯವಿಜಯರನ್ನು ಕುರಿತು ಹೀಗೆಂದನು: "ಎಲೈ, ನೀವು ಈ ದುಷ್ಕೃತ್ಯದ ಫಲವನ್ನು ಅನುಭವಿಸಲೇ ಬೇಕು. ಆದರೂ ಹೆದರಬೇಡಿ. ಬೇಗನೆ ನನ್ನ ಬಳಿಗೆ ಕರೆದುಕೊಳ್ಳುವೆನು." ಎಂದು ಹೇಳಿ ಕಳುಹಿಸಿದನು. ಆ ಜಯ ವಿಜಯರು ಈಗ ದಿತಿದೇವಿಯ ಗರ್ಭದಲ್ಲಿರುವರು. ಅದರಿಂದ ಅವರ ಕಾಂತಿಯು ನಿಮ್ಮನ್ನೆಲ್ಲ ಮಂಕು ಹಿಡಿಸಿರುವುದು. ಭಗವಂತನು ನಿಮ್ಮನ್ನು ಕಾಪಾಡುವನು" ಎಂದು ಹೇಳಿ ಬ್ರಹ್ಮನು ಅವರಿಗೆ ಅಭಯವನ್ನಿತ್ತು ಕಳುಹಿಸಿ ಕೊಟ್ಟನು.

ಇತ್ತ ದಿತಿದೇವಿಯು ನೂರು ವರ್ಷಗಳ ಮೇಲೆ ಇಬ್ಬರು ಗಂಡುಮಕ್ಕಳನ್ನು ಹೆತ್ತಳು. ಆ ಮಕ್ಕಳು ಹುಟ್ಟುತ್ತಿದ್ದ ಹಾಗೆಯೇ ಭೂಮಿ ಅಂತರಿಕ್ಷ ಪಾತಾಳಗಳಲ್ಲೆಲ್ಲ ಅನೇಕಾನೇಕ ಉತ್ಪಾತಗಳಾದುವು. ಬೆಟ್ಟಗಳು ನಡುಗಿದುವು. ದಿಕ್ಕುದಿಕ್ಕುಗಳಲ್ಲಿ ಜ್ವಾಲೆಗಳು ಕಾಣಿಸಿದುವು. ಧೂಮಕೇತುಗಳು ತಲೆದೋರಿದುವು. ಮೋಡಗಳು ಮುಚ್ಚಿ ಎಲ್ಲೆಲ್ಲಿಯೂ ಕತ್ತಲು ತಾನೇ ತಾನಾಯಿತು. ಬಿರುಗಾಳಿಯು ಭರ್ರನೆ ಬೀಸಿ ಭಾರಿಯ ಮರಗಳನ್ನೂ ಮುರಿಯಿತು. ಸಮುದ್ರವು ಎದ್ದೆದ್ದು ಕುಣಿಯಿತು. ಕೆರೆ ಕುಂಟೆ ನದಿ ಮೊದಲಾದುವು ಬತ್ತಿಹೋದುವು. ಇನ್ನೂ ಎಷ್ಟೆಷ್ಟೋ ಅಪಶಕುನಗಳಾಯಿತು.

ಆ ಮಕ್ಕಳು ಹುಟ್ಟುತ್ತಿದ್ದ ಹಾಗೆಯೇ ತಮ್ಮ ಪೌರುಷವನ್ನು ತೋರಿಸುತ್ತಾ ಕಲ್ಲುಗುಂಡುಗಳಂತೆ ಗಟ್ಟಿಯಾಗಿರುವ ಶರೀರದಿಂದ ಕೂಡಿ ಮಹಾ ಪರ್ವತಗಳಂತೆ ಬೆಳೆದರು. ಅವರಲ್ಲಿ ಒಬ್ಬನಿಗೆ ಹಿರಣ್ಯ

ಕಶಿಪುವೆಂದೂ ಇನ್ನೊಬ್ಬನಿಗೆ ಹಿರಣ್ಯಾಕ್ಷನೆಂದೂ ಹೆಸರಾಯಿತು. ಹಿರಣ್ಯಕಶಿಪುವು ಬ್ರಹ್ಮನಿಂದ ವರವನ್ನು ಪಡೆದು ಇಂದ್ರಾದಿಗಳನ್ನೆಲ್ಲ ಗೆದ್ದು ಮೂರು ಲೋಕಗಳಿಗೂ ಒಡೆಯನಾದನು. ಹಿರಣ್ಯಾಕ್ಷನು ಅಣ್ಣನಿಗೆ ಜೊತೆಯಾಗಿದ್ದನು.

ಹಿರಣ್ಯಾಕ್ಷನು ಬಲು ಕೊಬ್ಬಿದ ದಾನವನು. ಅವನಿಗೆ ಯಾರ ಮೇಲಾದರೂ ಬಿದ್ದು ಯುದ್ಧ ಮಾಡಬೇಕು ಎನ್ನಿಸಿತು. ಅದಕ್ಕಾಗಿ ಒಂದು ಗದೆಯನ್ನು ಹಿಡಿದು ದೇವಲೋಕಕ್ಕೆ ಹೋದನು. ಅವನನ್ನು ಕಂಡು ಹೆದರಿ ದೇವತೆಗಳೆಲ್ಲರೂ ಅವಿತುಕೊಂಡರು. ಅಲ್ಲಿ ಹುಡುಕಿ ದರೂ ಯಾರೂ ಸಿಕ್ಕದಿರಲು ಭಾರಿಯಾಗಿ ಸಿಂಹನಾದವನ್ನು ಮಾಡಿ ದನು. ಆಗಲೂ ದೇವತೆಗಳು ಯಾರೂ ಈಚೆಗೆ ಬರಲಿಲ್ಲ. "ಹುಂ! ಇವರೆಲ್ಲ ಹೇಡಿಗಳು" ಎಂದು ಅಲ್ಲಿಂದ ಹೊರಟು ಮಹಾಸಮುದ್ರ ವನ್ನು ಹೊಕ್ಕನು. ಅಲ್ಲಿ ಎಷ್ಟೋ ಸರ್ಪಗಳು ಆಟವಾಡುತ್ತಾ ಇದ್ದು ಜಲಗಳಿಗೆ ದೇವತೆಯಾದ ವರುಣನ ಪುರಕ್ಕೆ ಹೋದನು. ಅಲ್ಲಿ ವರುಣನನ್ನು ಕಂಡು "ನೀನು ಮಹಾಶೂರನು. ನನಗೆ ಯುದ್ಧ ಭಿಕ್ಷೆಯನ್ನು ಕೊಡು" ಎಂದನು. ವರುಣನು "ಈ ದುಷ್ಟನಿಗೆ ಮದವು ತಲೆಗೇರಿದೆ ಯೆಂದುಕೊಂಡು "ಅಯ್ಯಾ, ನಿನ್ನಂತಹ ಶೂರ ನೊಡನೆ ಹೋರಾಡಲು ಪುರುಷೋತ್ತಮನಾದ ಮಹಾವಿಷ್ಣುವಿಗೆ ಒಬ್ಬನಿಗೇ ಸಾಧ್ಯ. ಆತನನ್ನು ಹುಡುಕಿಕೊಂಡು ಹೋಗು" ಎಂದನು.

ಆ ದಾನವನು ಅದನ್ನು ಕೇಳಿ ವರುಣನನ್ನು ಪರಿಹಾಸ ಮಾಡಿ, ಅಲ್ಲಿಂದ ಹೊರಟು ದಾರಿಯಲ್ಲಿ ನಾರದನನ್ನು ಕಂಡನು. "ಮಹಾ ವಿಷ್ಣುವು ಎಲ್ಲಿದ್ದಾನೆ?" ಎಂದು ಕೇಳಿದನು. ನಾರದರು "ಅಯ್ಯಾ, ಆತನು ವರಹಾವತಾರ ಮಾಡಿ ಪಾತಾಳಕ್ಕೆ ಹೋಗಿದ್ದಾನೆ" ಎನ್ನುತ್ತಲೂ, ಆ ವರಾಹನನ್ನು ಹುಡುಕಿಕೊಂಡು ಓಡಿದನು. ವರಾಹ ರೂಪಿಯಾದ ಸ್ವಾಮಿಯು ಭೂಮಂಡಲವನ್ನು ಹೊತ್ತು ತರುತ್ತಿದ್ದನು.

ಆತನನ್ನು ಕಂಡು “ಅಬ್ಬಾ! ಇದೆಂತಹ ಭಾರಿಯ ಹಂದಿ!” ಎಂದು ಆಶ್ಚರ್ಯಪಡುತ್ತಾ, ಭೂಮಿಯನ್ನೇ ಹೀನವಾಡಿಕೊಂಡನು. “ಈ ಭೂಮಿಯು ನನ್ನದು. ನೀನು ಎಲ್ಲಿಗೆ ತೆಗೆದುಕೊಂಡು ಹೋಗುವೆ?” ಎಂದು ಮೇಲೆ ಬಿದ್ದನು.

ವರಾಹನಿಗೂ ದಾನವನಿಗೂ ಭಾರಿಯ ಯುದ್ಧವಾಯಿತು. ಅದನ್ನು ಕಂಡು ಹೆದರಿದ ಭೂದೇವಿಯನ್ನು ಸಂತೈಸಿ, ಸ್ವಾಮಿಯು



ಯಜ್ಞವರಾಹ

ಕ್ರಿ. ಶ. ೧೨. ಶತ.

ಆತನ ಮೇಲೆ ಬಿದ್ದು ಹೋರಾಡಿದನು. “ಮೃಗವೇ! ನಾಚಿಕೆಯಿಲ್ಲವೇನು! ಹೆದರಿ ಓಡುತ್ತಿರುವೆಯಾ?” ಎಂದು ನಾನಾವಿಧವಾಗಿ ಬೈಯುತ್ತಿರುವ ಆ ದಾನವನನ್ನು ಗದಾಯುದ್ಧದಲ್ಲಿ ಸೋಲಿಸಿದನು. ಆಗ ದಾನವನು ಮೇಲೆ ಬಿದ್ದು ಮಲ್ಲ (ಕುಸ್ತಿ) ಯುದ್ಧವನ್ನು ಮಾಡಿದನು. ಅದರಲ್ಲಿಯೂ ಸೋತು, ದಾನವನು ಕ್ರೋಧದಿಂದ ಮೇಲೆ ತ್ರಿಶೂಲವನ್ನು ಪ್ರಯೋಗಿಸಿದನು. ಅದನ್ನು ಸ್ವಾಮಿಯು ಚಕ್ರದಿಂದ ಕತ್ತರಿಸಿದನು. ಆಗ ಆತನು ಮಾಯಾಯುದ್ಧವನ್ನು ಆರಂಭಿಸಿದನು. ಆಕಾಶದ ತುಂಬಾ ಗಾಳಿಗಳೆದ್ದು ಧೂಳು ಕವಿದು ಎಲ್ಲೆಲ್ಲೂ ಕಣ್ಣು ಕಾಣಿಸದಂತಹ ಕತ್ತಲೆಯು ತುಂಬಿತು.

ಎಲ್ಲೆಲ್ಲಿಂದಲೂ ಭಾರಿಯ ಗುಂಡುಗಳು ಬಂದು ಜೊಡೆದುವು. ಕೂಡಲೇ ಮಹಾವಿಷ್ಣುವು ತನ್ನ ಸುದರ್ಶನವನ್ನು ಪ್ರಯೋಗಿಸಲು ಮಾಯೆಯೆಲ್ಲವೂ ಮಾಯವಾಗಿ ಹೋಯಿತು.

ಆಗ ದೈತ್ಯನು ಮತ್ತೆ ಬಂದು ಶ್ರೀಹರಿಯನ್ನು ತೋಳುಗಳಿಂದ ಹಿಡಿದುಕೊಂಡನು. ಆಗ ಭಗವಂತನು ಅವನನ್ನು ಕೆಡಹಿ ಅಂಗೈಯಿಂದ ಅವನ ಕೆನ್ನೆಗೆ ಒಂದೇಟು ಕೊಟ್ಟನು. ಆ ಏಟನ್ನು ತಡೆಯಲಾರದೆ, ಮೇಲಕ್ಕೆ ಹಾರಿ ನೆಲಕ್ಕೆ ಬಿದ್ದು ಉರುಳಿ ಅವನು ಮಹಾಪರ್ವತದಂತೆ ಬಿದ್ದು ಸತ್ತನು. ಬ್ರಹ್ಮಾದಿ ದೇವತೆಗಳೆಲ್ಲರೂ ಲೋಕಕಂಟಕವು ನಿವಾರಣವಾಯಿತು ಎಂದು ಭಗವಂತನನ್ನು ಬೇಕಾದಹಾಗೆ ಸ್ತುತಿಸಿದರು.

ಅತ್ಯಾಶ್ಚರ್ಯಕರವಾದ ಈ ಹಿರಣ್ಯಾಕ್ಷ ಸಂಹಾರವನ್ನೂ ವರಾಹಾವತಾರ ಲೀಲೆಯನ್ನೂ ಭಕ್ತಿಯಿಂದ ಕೇಳಿದವರೂ ಪಾರಾಯಣ ಮಾಡಿದವರೂ ಸಮಸ್ತ ಪಾಪಗಳನ್ನೂ ನೀಗಿಕೊಂಡು ಕೃತಾರ್ಥರಾಗುವರೆಂದು ಮೈತ್ರೇಯನು ವಿದುರನಿಗೆ ಹೇಳಿದನು. ವಿದುರನೂ ಅದನ್ನು ಕೇಳಿ ಪರಮಾನಂದಭರಿತನಾದನು.

---

ಆರನೆಯ ಅಧ್ಯಾಯ

## ಕಪಿಲಾವತಾರವು

ಸ್ವಾಯಂಭುವ ಮನುವು ಸಪ್ತದ್ವೀಪಗಳಿಂದ ಕೂಡಿದ ಭೂಮಂಡಲಕ್ಕೆಲ್ಲಾ ಅಧಿಪತಿಯಾಗಿ ಧರ್ಮದಿಂದ ರಾಜ್ಯವನ್ನಾಳಿದನು. ಆತನು ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಗಂಡು ಮಕ್ಕ

ಳನ್ನೂ ಆಕೂತಿ, ದೇವಹೂತಿ, ಪ್ರಸೂತಿಯರೆಂಬ ಮೂರು ಹೆಣ್ಣು ಮಕ್ಕಳನ್ನೂ ಪಡೆದು ಸುಖವಾಗಿದ್ದನು.

ಬ್ರಹ್ಮನು ಸೃಷ್ಟಿಸಿದ ದಕ್ಷ ಕರ್ದಮ ಮೊದಲಾದ ಪ್ರಜೇಶ್ವರರು ಆತನ ಅಪ್ಪಣೆಯಂತೆ ಮಕ್ಕಳಾಗಲೆಂದು ತಪಸ್ಸು ಮಾಡಿದರು. ಅವರಲ್ಲಿ ಕರ್ದಮನು ಸರಸ್ವತೀ ತೀರದಲ್ಲಿ ನಿಂತು ಹತ್ತುಸಾವಿರ ವರ್ಷ ಗಳವರೆಗೂ ತಪಸ್ಸು ಮಾಡುತ್ತಾ ಭಕ್ತಿಯಿಂದ ಶ್ರೀ ಹರಿಯನ್ನು ಸೇವಿಸಿದನು. ಆ ಕೊನೆಯಲ್ಲಿ ಸ್ವಾಮಿಯು ಪ್ರಸನ್ನನಾಗಿ ಆತನಿಗೆ ದರ್ಶನವನ್ನು ಕೊಟ್ಟನು. ಪ್ರಸನ್ನವಾದ ಮುಖಮಂಡಲವು ವಿರಾಜಿ ಸುತ್ತಿರಲು, ಕಮಲ ಪುಷ್ಪಗಳ ಮಾಲೆಯು ಶೋಭಿಸುತ್ತಿರಲು ಆತನ ಆಯುಧಗಳು ಮೆರೆಯುತ್ತಿರಲು, ಗೋವಿಂದನು ಎದುರಿಗೆ ನಿಂತನು. ಕರ್ದಮನು ಸಾಷ್ಟಾಂಗ ನಮಸ್ಕಾರ ಮಾಡಿ ಹೇಳಿದನು: "ಪ್ರಭುವೆ, ನಿನ್ನ ದಿವ್ಯ ದರ್ಶನದಿಂದ ನನ್ನ ಜನ್ಮವು ಸಾರ್ಥಕವಾಯಿತು. ನಾನು ಕೇಳಬೇಕಾದುದೂ ಪಡೆಯಬೇಕಾದುದೂ ಇನ್ನು ಏನೂ ಇಲ್ಲ. ಆದರೂ ಗೃಹಸ್ಥನಾಗು ಎಂದು ತಂದೆಯ ಅಪ್ಪಣೆಯಾಗಿರು ವುದು. ಆದರಿಂದ ಕೆಲವು ದಿನ ಸಂಸಾರಿಯಾಗಿದ್ದು ಸನ್ಯಾಸಿಯಾಗ ಬೇಕೆಂದಿರುವೆನು. ನೀನು ಅದನ್ನು ನಡೆಸಿಕೊಡು" ಎಂದು ಬೇಡಿ ಕೊಂಡನು. ಶ್ರೀ ಮಹಾವಿಷ್ಣುವು "ಎಲೈ ಕರ್ದಮನೆ, ನೀನು ಏಕೆ ತಪಸ್ಸು ಮಾಡಿದೆಯೆಂಬುವನ್ನು ಬಲ್ಲೆನು. ನಿನ್ನ ತಪಸ್ಸೂ, ನನಗೆ ಮಾಡಿದ ಪೂಜೆಯೂ ಎಂದಿಗೂ ವ್ಯರ್ಥವಾಗುವುದಿಲ್ಲ. ಸಾರ್ವ ಭೌಮನಾದ ಸ್ವಾಯಂಭುವ ಮನುವು ವಯಸ್ಸು, ಶೀಲ, ಗುಣಗಳಿಂದ ಕೂಡಿ ನಿನಗೆ ಅನುರೂಪಳಾಗಿರುವ ತನ್ನ ಮಗಳಾದ ದೇವಹೂತಿ ಯನ್ನು ನಿನಗೆ ಕೊಟ್ಟು ಮದುವೆ ಮಾಡುವನು. ಆಕೆಯಲ್ಲಿ ನಿನಗೆ ಒಂಭತ್ತು ಮಂದಿ ಕನ್ಯೆಯರಾಗುವರು. ನಾನೂ ನಿಮ್ಮ ಮಗನಾಗಿ ಅವತರಿಸಿ, ಮೋಕ್ಷದಾಯಕವಾದ ಸಾಂಖ್ಯಶಾಸ್ತ್ರವನ್ನು ಲೋಕಕ್ಕೆ

ಅನುಗ್ರಹಿಸುವೆನು. ನೀವು ದಂಪತಿಗಳಿಬ್ಬರೂ ಕೃತಾರ್ಥರಾಗುವಿರಿ" ಎಂದು ಅನುಗ್ರಹಿಸಿ ಗರುಡನನ್ನೇರಿ, ಆತನ ರೆಕ್ಕೆಗಳಿಂದ ಹೊರ ಹೊಮ್ಮುತ್ತಿರುವ ತನ್ನ ಸ್ತೋತ್ರರೂಪಗಳಾದ ಸಾಮಗಳನ್ನು ಕೇಳುತ್ತಾ ಹೊರಟು ಹೋದನು. ಭಗವಂತನು ಆ ಕರ್ದಮನೊಡನೆ ಮಾತ ನಾಡುವಾಗ ಆನಂದದಿಂದ ಆತನಿಗೆ ಕಣ್ಣಲ್ಲಿ ನೀರು ತುಂಬಿ, ಆ ನೀರು ಎರಡು ಹನಿಗಳಾಗಿ ಉದುರಿತು. ಅಲ್ಲಿ ಬಿಂದು ಸರೋವರವಾಯಿತು. ಆ ಸರೋವರದ ತೀರದಲ್ಲಿಯೇ ಆ ಮಹಾಮುನಿಯು ಇದ್ದುಕೊಂಡು ಇದ್ದನು.

ಭಗವಂತನು ಹೇಳಿದಂತೆ ಚಕ್ರವರ್ತಿಯಾದ ಮನುವು ತನ್ನ ಮಡದಿ ಮಕ್ಕಳೊಡನೆ ಅಲ್ಲಿಗೆ ಬಂದನು. ಸಾಧುವಾದ ಮೃಗಪಕ್ಷಿ ಗಳಿಂದಲೂ ಫಲಪುಷ್ಪಭರಿತವಾದ ನಾನಾ ವೃಕ್ಷಗಳಿಂದಲೂ ಕೂಡಿ ರುವ ಆ ಕರ್ದಮನ ಆಶ್ರಮವನ್ನು ಕಂಡು ಬಹು ಸಂತೋಷಪಟ್ಟನು. ಕರ್ದಮನು ಆ ಚಕ್ರವರ್ತಿಯನ್ನು ಕಂಡು "ಶಿಷ್ಟರನ್ನು ಸಲಹು ವುದಕ್ಕೂ ದುಷ್ಟರನ್ನು ದಂಡಿಸುವುದಕ್ಕೂ ಈತನಲ್ಲಿ ನಿಂತಿರುವ ಮಹಾ ವಿಷ್ಣುವಿಗೆ ನಮಸ್ಕಾರವು" ಎಂದು ಮನಃಪೂರ್ವಕವಾಗಿ ನಮಸ್ಕಾರ ಮಾಡಿ ಆತನಿಗೆ ಸಲ್ಲಿಸಬೇಕಾದ ಗೌರವಗಳನ್ನೆಲ್ಲ ಸಮರ್ಪಿಸಿದನು.

ಆತನು ಕರ್ದಮನನ್ನೂ ಯಥೋಚಿತವಾಗಿ ಸತ್ಕರಿಸಿ "ಪಿತಾ ಮಹನಾದ ಚತುರ್ಮುಖನು ವೇದಮೂರ್ತಿಗಳಾಗಿಯೂ ಜ್ಞಾನ ಕರ್ಮ ತಪಸ್ಸುಗಳಲ್ಲಿ ನಿರತರಾಗಿಯೂ ನಿಷ್ಕಾಮರಾಗಿಯೂ ಇರುವ ಬ್ರಾಹ್ಮಣರಾದ ನಿಮ್ಮನ್ನೂ ನಿಮ್ಮ ಸಂರಕ್ಷಣಕ್ಕಾಗಿ ಕ್ಷತ್ರಿಯರಾದ ನಮ್ಮನ್ನೂ ಸೃಷ್ಟಿ ಮಾಡಿದನು. ನಾನು ಈಗ ಕಾರ್ಯಾರ್ಥಿಯಾಗಿ ನಿಮ್ಮ ಬಳಿ ಬಂದಿರುವೆನು. ಈಕೆಯು ನನ್ನ ಮಗಳು, ಪ್ರಿಯವ್ರತ, ಉತ್ತಾನಪಾದರ ತಂಗಿಯು. ತನಗೆ ಅನುರೂಪನಾದ ಪತಿಯನ್ನು ಬಯಸುತ್ತಿರುವಳು. ದೇವಮುನಿಯಾದ ನಾರದರಿಂದ ನಿನ್ನ

8

ವೃತ್ತಾಂತವನ್ನು ಕೇಳಿ ನಿನ್ನನ್ನು ಮದುವೆಯಾಗಬೇಕೆಂದಿರುವಳು. ಈಕೆಯನ್ನು ನೀನು ಸ್ವೀಕರಿಸಿ, ನನ್ನನ್ನು ಅನುಗ್ರಹಿಸು." ಎಂದು ಪ್ರಾರ್ಥಿಸಿದನು. ಕರ್ದಮನೂ ಭಗವಂತನ ಆಜ್ಞೆಯನ್ನು ನೆನೆದು "ಆಗಲಿ. ಸರ್ವಾಂಗಸುಂದರಿಯಾಗಿ, ಗುಣವತಿಯಾಗಿರುವ ಈಕೆಯನ್ನು ನಾನು ವೇದೋಕ್ತವಾಗಿ ಮದುವೆಯಾಗುವೆನು. ಈಕೆಯಲ್ಲಿ ಮಕ್ಕಳಾಗುವವರೆಗೆ ಗೃಹಸ್ಥನಾಗಿದ್ದು, ಅನಂತರ ಸನ್ಯಾಸಿಯಾಗುವೆನು." ಎಂದು ನಿಬಂಧನನ್ನಿಟ್ಟು ಆಕೆಯನ್ನು ಮದುವೆಯಾದನು. ದೇವಹೂತಿಯು ಸಾಧ್ವಿಯಾಗಿ ಭವನನ್ನು ಸೇವಿಸುವ ಭವಾನಿಯಂತೆ ಆ ಮಹರ್ಷಿಯನ್ನು ಪ್ರೀತಿವಿಶ್ವಾಸಗಳಿಂದ, ಮನಶ್ಶುದ್ಧಿಯಿಂದ, ಮರ್ಯಾದೆಯಿಂದ, ಮಧುರವಾಕ್ಕಿನಿಂದ, ಜಾಗರೂಕಳಾಗಿ ಸೇವಿಸಿದಳು. ಆತನೂ ತನಗಾಗಿ ಅಷ್ಟು ಕಷ್ಟಪಟ್ಟು, ತಾನು ರಾಜಪುತ್ರಿಯೆಂಬುದನ್ನೂ ಗಮನಿಸದೆ ದುಡಿಯುತ್ತಿರುವ ಮಡದಿಯಲ್ಲಿ ಸಂತುಷ್ಟನಾಗಿ ಆಕೆಗೆ ದಿವ್ಯದೃಷ್ಟಿಯನ್ನು ಕೊಟ್ಟನು. ಪತಿವ್ರತೆಯಾದ ಆಕೆಗೆ ತನ್ನ ತಪಸ್ಸಿನಿಂದ ಸಂಪಾದಿಸಿರುವ ದಿವ್ಯ ಭೋಗಗಳನ್ನೆಲ್ಲಾ ತೋರಿಸಿದನು. ಆಕೆಯು ಅವನ್ನೆಲ್ಲಾ ಕಂಡು, "ದೇವ, ಸತಿಯರಿಗೆ ಪತಿಯಿಂದ ಆಗುವ ಲಾಭಗಳಲ್ಲೆಲ್ಲಾ ಸಂತಾನ ಲಾಭವೇ ದೊಡ್ಡದು ಎನ್ನುವರು. ಅದನ್ನು ಕರುಣಿಸು" ಎಂದು ಪ್ರಾರ್ಥಿಸಿದಳು.

ಕರ್ದಮನು ಆಕೆಯ ಪ್ರಾರ್ಥನೆಯಂತೆ ದಿವ್ಯ ವಿಮಾನವನ್ನು ನಿರ್ಮಿಸಿದನು. ಆಕೆಯನ್ನು ಕರೆದು "ಪರಮಾತ್ಮನ ಕರುಣೆಯಿಂದ ಆದ ಈ ಸರಸ್ಸಿನಲ್ಲಿ ಸ್ನಾನ ಮಾಡಿ ಬಂದು ಈ ವಿಮಾನವನ್ನೇರು" ಎಂದನು. ಆಕೆಯು ಅದರಂತೆ ಸ್ನಾನಕ್ಕೆಂದು ನೀರಿನಲ್ಲಿಳಿಯಲು ಆ ಸರೋವರದಲ್ಲಿ ಒಂದು ದಿವ್ಯಮಂದಿರದಿಂದ ಒಂದು ಸಾವಿರ ಮಂದಿ ಕನ್ನೆಯರು ಬಂದು ಆಕೆಯನ್ನು ಕರೆದುಕೊಂಡು ಹೋಗಿ ಮಜ್ಜನ ಮಾಡಿಸಿ, ದಿವ್ಯವಸ್ತ್ರವನ್ನು ಉಡಿಸಿ, ಒಡವೆಗಳನ್ನು ತೊಡಿಸಿ,

ಅಲಂಕಾರ ಮಾಡಿ, ದಿವ್ಯ ಭೋಜನ ಮಾಡಿಸಿ, ಅಮೃತಪಾನವನ್ನು ಕೊಟ್ಟು ಆಕೆಯನ್ನು ಹೊರಕ್ಕೆ ಕರೆತಂದರು. ಕರ್ದಮನೂ ಪರಮ ಹರ್ಷದಿಂದ ಆಕೆಯನ್ನು ಎದುರುಗೊಂಡು ಕರೆದುಕೊಂಡು ಹೋಗಿ ಆ ದಿವ್ಯ ವಿಮಾನವನ್ನು ಹತ್ತಿಸಿದನು. ಆಕೆಗೆ ತಕ್ಕಂತೆ ತಾನೂ ಆಗಿ ಬಹು ಕಾಲದವರೆಗೂ ಸಂತೋಷದಿಂದ ಆಕೆಯೊಡನೆ ವಿಹರಿಸಿದನು. ಹಾಗೆ ಸಂತೋಷವಾಗಿರುವ ಆ ದಂಪತಿಗಳಿಗೆ ನೂರಾರು ವರ್ಷಗಳು ಒಂದು ನಿಮಿಷದಂತೆ ಕಳೆದು ಹೋದುವು.

ಹೀಗೆ ಸಂತೋಷದಿಂದ ಪತಿಯೊಡನೆ ವಿಹರಿಸುತ್ತಿದ್ದ ಆಕೆಗೆ ಒಂಭತ್ತು ಜನ ಹೆಣ್ಣು ಮಕ್ಕಳು ಒಂದೇ ಸಲಕ್ಕೆ ಆಗುವಂತೆ ಕರ್ದಮನು ಅನುಗ್ರಹ ಮಾಡಿದನು. ಹಾಗೆ ಮಕ್ಕಳಾಗುತ್ತಲೂ ದೇವಹೂತಿಯು ಗಂಡನು ಇನ್ನು ಸನ್ಯಾಸಿಯಾಗುವನೆಂದು ಬೆದರಿ, ಆತನನ್ನು ಪ್ರಾರ್ಥಿಸಿಕೊಂಡಳು. "ಪ್ರಭುವೆ, ದಿವ್ಯವೃಷ್ಟಿಯನ್ನೂ ದಿವ್ಯ ಭೋಗಗಳನ್ನೂ ಕೊಟ್ಟು ಸಂತಾನವನ್ನೂ ಕರುಣಿಸಿದೆ. ಆದರೂ ಪ್ರಾರ್ಥಿಸುತ್ತಿರುವ ನನಗೆ ಅಭಯವನ್ನು ಕೊಡು. ನಿನ್ನ ಮಕ್ಕಳಾದ ಇವರಿಗೆ ನೀನೇ ಇದ್ದು ಮದುವೆ ಮಾಡು. ನನಗೆ ಜ್ಞಾನೋಪದೇಶ ಮಾಡುವ ಒಬ್ಬ ಪುತ್ರನನ್ನು ಕರುಣಿಸು'' ಎಂದಳು.

ಕರ್ದಮನು ಅದನ್ನು ಕೇಳಿ ಭಗವಂತನು ತನಗೆ ಕರುಣಿಸಿದ್ದ ವರವನ್ನು ನೆನೆದುಕೊಂಡು "ಎಲೌ ರಾಜಪುತ್ರಿಯೆ, ಚಿಂತಿಸಬೇಡ. ಭಗವಂತನು ನಿನ್ನ ಗರ್ಭದಲ್ಲಿ ಜನಿಸುವನು. ನಿನಗೆ ಜ್ಞಾನೋಪದೇಶ ಮಾಡುವನು. ನಿಯಮದಿಂದಲೂ ಶ್ರದ್ಧೆಯಿಂದಲೂ ಭಗವಂತನನ್ನು ಆರಾಧಿಸು." ಎಂದು ಅನುಗ್ರಹ ಮಾಡಿದನು. ದೇವಹೂತಿಯೂ ಸಂತುಷ್ಟಳಾಗಿ, ಪತಿಯಪ್ಪಣೆಯಂತೆ ಈಶ್ವರನನ್ನು ಆರಾಧಿಸಿದಳು. ಆಕೆಯ ತಪಸ್ಸು ಸಫಲವಾಯಿತು. ಪರಮಾತ್ಮನು ಆಕೆಯ ಗರ್ಭದಲ್ಲಿ ಜನಿಸಿದನು. ಬ್ರಹ್ಮಾದಿಗಳು ಬಂದು ಆ ದಿವ್ಯಶಿಶುವನ್ನು

ನೋಡಿ ಸಂತೋಷದಿಂದ ಲೋಕಸಂರಕ್ಷಣಕ್ಕಾಗಿ ಅವತರಿಸಿದ ಶ್ರೀಮನ್ನಾರಾ[illegible]ದು ನಾನಾ ವಿಧವಾಗಿ ಆತನನ್ನು ಪ್ರಾರ್ಥಿಸಿದರು. ಆ ಮಹಾಪುರುಷನ ಜನ್ಮವಾದಾಗ [illegible] ಪುಷ್ಪವೃಷ್ಟಿಯಾಯಿತು. [illegible] ಶಕುನಗ[illegible]ವಾದ ನಾಗ ಆದುವು.

ಆತನೇ ಕಪಿಲ [illegible]. ಆತನೇ [illegible]ಶಾಸ್ತ್ರವನ್ನು ಪ್ರಕಟಿಸಿದ ಮಹಾಮಹಿಮನು.



ಕಪಿಲ ಮುನಿಯು ದೇವಹೂತಿಗೆ
ಸಾಂಖ್ಯವನ್ನು ಉಪದೇಶ ಮಾಡಿದುದು

ಕ್ರಮವಾಗಿ ಮರೀಚಿ, ಅತ್ರಿ, ಅಂಗೀರಸ್ಸು, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ, ಅಥರ್ವ ಮಹರ್ಷಿಗಳಿಗೆ ಕೊಟ್ಟು ಮದುವೆ ಮಾಡಿ ಅವರನ್ನೆಲ್ಲಾ ಆಶೀರ್ವದಿಸಿದನು.

ಅನಂತರ ಏಕಾಂತವಾಗಿ, ಮಗನಾದ ಕಪಿಲ ಮಹರ್ಷಿಯ ಬಳಿ ಸಾರಿ, ನಮಸ್ಕರಿಸಿ "ದೇವ ದೇವ, ನಿನ್ನ ಮಹಿಮೆಯು ಅಚಿಂತ್ಯ ನಾವರೂ ಭಕ್ತರಿಂದ ನನ್ನನ್ನು ಕಾಪಾಡಲು ನನ್ನ ಮನೆಯಲ್ಲಿ ಅವತರಿಸಿದೆ. ನೀನು ಕೊಟ್ಟ ವರವು ಸಾರ್ಥಕವಾಯಿತು. ನಿನಗೆ ವಂದನವು. ನನಗೆ ಅಪ್ಪಣೆಯನ್ನು ಕೊಡು. ನಾನಿನ್ನು ಸನ್ಯಾಸ ಮಾಡುವೆನು." ಎಂದು ಬಿನ್ನವಿಸಿಕೊಂಡು ಆತನ ಅಪ್ಪಣೆಯನ್ನು ಪಡೆದು ಹೆಂಡತಿಯನ್ನೂ ಒಪ್ಪಿಸಿ ವಿಧಿಪ್ರಕಾರವಾಗಿ ಸನ್ಯಾಸವನ್ನು ಮಾಡಿ ಕಾಡಿಗೆ ನಡೆದನು.

---

### ಏಳನೆಯ ಅಧ್ಯಾಯ

## ಮನುವಂಶದ ಕಥೆ

ಮನುವಿಗೆ ಇಬ್ಬರು ಗಂಡುಮಕ್ಕಳೂ ಮೂವರು ಹೆಣ್ಣು ಮಕ್ಕಳೂ ಇದ್ದರು. ಹೆಣ್ಣು ಮಕ್ಕಳಲ್ಲಿ ಮೊದಲನೆಯವಳಾದ ಆಕೂತಿಯು ರುಚಿಯೆಂಬ ಮಹರ್ಷಿಯನ್ನು ಮದುವೆಯಾಗಿ ಯಜ್ಞ ದಕ್ಷಿಣಾ ಎಂಬ ಮಕ್ಕಳನ್ನು ಪಡೆದಳು. ಅವರ ವಂಶದಲ್ಲಿ ತುಷಿತರೆಂಬ ದೇವತೆಗಳು [illegible]. ಎರಡನೆಯ ದೇವಹೂತಿಯು ಕರ್ದಮನನ್ನು [illegible]. ಆಕೆಯ ಮಕ್ಕಳಲ್ಲಿ ಅನಸೂಯೆಯು [illegible] ಮದುವೆಯಾಗಿ ತ್ರಿಮೂರ್ತಿಗಳನ್ನು ಮಗನಾಗಿ [illegible]

ಣರು, ವಾಲಖಿಲ್ಯರು, ಮಾರ್ಕಂಡೇಯ, ಶುಕ್ರಾಚಾರ್ಯರ ಮೊದಲಾದವರೆಲ್ಲ ಈ ದೇವಹೂತಿಯ ಹೆಣ್ಣು ಮಕ್ಕಳ ಸಂತಾನದವರು.

ದೇವಹೂತಿಯು ಕಪಿಲನನ್ನು ಪಡೆದಂತೆಯೇ ಅನಸೂಯೆಯು ದತ್ತಾತ್ರೇಯನನ್ನು ಪಡೆದಳು. ಆ ಕಥೆಯೂ ಪುಣ್ಯಕರವಾದುದು. ಹೇಳುವೆನು ಕೇಳು. ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಅತ್ರಿ ಮಹರ್ಷಿಯನ್ನು ಕುರಿತು ಬ್ರಹ್ಮನು ಪ್ರಜಾಸೃಷ್ಟಿ ಮಾಡು ಎಂದು ಅಪ್ಪಣೆ ಮಾಡಿದನು. ಆತನು ಅದರಂತೆ ಅನಸೂಯೆಯನ್ನು ಮದುವೆಯಾಗಿ ಮಕ್ಕಳಿಗಾಗಿ ತಪಸ್ಸು ಮಾಡಬೇಕೆಂದು ಋಕ್ಷಪರ್ವತಕ್ಕೆ ಹೋದನು. ಅಲ್ಲಿ ಶರೀರದ ಸುಖ ದುಃಖಗಳನ್ನು ಗಮನಿಸದೆ, ಗಾಳಿಯನ್ನು ಆಹಾರ ಮಾಡಿಕೊಂಡು ಒಂದೇ ಕಾಲಿನಲ್ಲಿ ನಿಂತು ತಪಸ್ಸು ಮಾಡಿದನು. "ಯಾವನು ಜಗದೀಶ್ವರನೋ ಆತನೇ ನನಗೆ ಶರಣನು. ಆತನು ತನಗೆ ಸಮಾನನಾದ ಸಂತತಿಯನ್ನು ನನಗೆ ಕೊಡಲಿ" ಎಂದು ಧ್ಯಾನ ಮಾಡಿದನು.

ಆತನ ತಪಸ್ಸಿಗೆ ಒಲಿದು ಜಗದೀಶ್ವರರಾದ ತ್ರಿಮೂರ್ತಿಗಳು ಆತನನ್ನು ಅನುಗ್ರಹಿಸಲು ಬಂದರು. ಆ ಅತ್ರಿಮಹರ್ಷಿಯು ಅವರಿಗೆ ನಮಸ್ಕಾರ ಮಾಡಿ "ಎಲೈ ತ್ರಿಮೂರ್ತಿಗಳೇ, ನಾನು ಜಗತ್ತಿಗೆ ಈಶ್ವರನಾದ ಒಬ್ಬನನ್ನು ಕುರಿತು ತಪಸ್ಸು ಮಾಡಿದೆನು. ತಾವು ಮೂವರು ಬಂದಿರುವಿರಲ್ಲಾ ! ಇದು ಹೇಗೆ ?" ಎಂದು ಕೇಳಿದನು. ಅದಕ್ಕೆ ಅವರು "ನೀನು ಜಗದೀಶ್ವರನೊಬ್ಬನನ್ನೇ ಕುರಿತು ಧ್ಯಾನಿಸಿದೆ. ನಿಜ. ಆದರೆ, ಆ ನಿನ್ನ ಜಗದೀಶ್ವರನೇ ಸೃಷ್ಟಿ, ಸ್ಥಿತಿ, ಸಂಹಾರ ಎಂಬ ಮೂರು ಕಾರ್ಯಗಳನ್ನು ಮಾಡಲು ಈ ನಮ್ಮ ಮೂರು ರೂಪಗಳಿಂದ ಇರುವನು. ಅದರಿಂದ ನಾವೆಲ್ಲರೂ ಒಂದೇ! ಬೇರೆ ಬೇರೆಯಲ್ಲ! ನೀನು ಕೋರಿದಂತೆ ನಾವು ಮೂವರೂ ನಿನಗೆ ನಮಗೆ ಸಮಾನರಾದ ಮೂರು ಮಕ್ಕಳನ್ನು ಕೊಡುವೆವು. ಚಂದ್ರ,

ದತ್ತಾತ್ರೇಯ, ದುರ್ವಾಸರೆಂಬ ಆ ಮಕ್ಕಳು ಲೋಕವಿಖ್ಯಾತರಾಗುವರು. ಚಂದ್ರನು ಬ್ರಹ್ಮನ ಅವತಾರವು, ದತ್ತಾತ್ರೇಯನು ವಿಷ್ಣುವಿನ ಅವತಾರವು. ದುರ್ವಾಸನು ಮಹಾದೇವನ ಅವತಾರವು" ಎಂದು ಹೇಳಿ ಅತ್ರಿಗೆ ವರವನ್ನು ಕೊಟ್ಟು ಆ ದಂಪತಿಗಳಿಂದ ಪೂಜೆಯನ್ನು ಪಡೆದು, ತಮ್ಮ ತಮ್ಮ ಲೋಕಗಳಿಗೆ ಹೋದರು. ಈ ಚರಿತ್ರೆಯನ್ನು ಭಕ್ತಿಯಿಂದ ಕೇಳುವವರು ತಮ್ಮ ಪಾಪಗಳನ್ನೆಲ್ಲಾ ಕಳೆದುಕೊಳ್ಳುವರು.

ಇನ್ನು ಮನುವಿನ ಮೂರನೆಯ ಮಗಳಾದ ಪ್ರಸೂತಿಯ ವಂಶವನ್ನು ಕೇಳು. ಆಕೆಯು ಬ್ರಹ್ಮಪುತ್ರನಾದ ದಕ್ಷನನ್ನು ಮದುವೆಯಾಗಿ, ಹದಿನಾರು ಹೆಣ್ಣು ಮಕ್ಕಳನ್ನು ಪಡೆದಳು. ಅವರಲ್ಲಿ ಹದಿಮೂರು ಮಂದಿಯನ್ನು ಯಮಧರ್ಮನು ಮದುವೆಯಾದನು. ಆ ಹದಿಮೂರರಲ್ಲಿ ಮೂರ್ತಿಯೆಂಬುವಳು ನರನಾರಾಯಣರೆಂಬ ಮಹರ್ಷಿಗಳನ್ನು ಪಡೆದಳು. ಅವರು ಜನಿಸಿದರು ಎಂದು ಜಗತ್ತಿಗೆ ಜಗತ್ತೇ ಆನಂದಪಟ್ಟಿತು. ಸಜ್ಜನರ ಮನಸ್ಸುಗಳೂ ದಿಕ್ಕುಗಳೂ ಗಾಳಿಗಳೂ ಜಲಗಳೂ ಬೆಟ್ಟಗಳೂ ಕೂಡ ಪ್ರಸನ್ನವಾದುವು. ಅಂತರಿಕ್ಷದಲ್ಲಿ ದೇವವಾದ್ಯಗಳು ಮೊಳಗಿದುವು : ಕುಸುಮವೃಷ್ಟಿಯು ಆಯಿತು. ಆಗ ಬ್ರಹ್ಮಾದಿ ದೇವತೆಗಳೆಲ್ಲರೂ ಅಲ್ಲಿಗೆ ಬಂದು, "ಈ ಲೋಕವನ್ನೆಲ್ಲ ಸೃಷ್ಟಿಸಿದ ಪುರುಷನೇ ಈಗ ಋಷಿಗಳಾಗಿ ಜನಿಸಿದನು" ಎಂದು ಸ್ತೋತ್ರ ಮಾಡಿ ಪೂಜೆಯನ್ನು ಒಪ್ಪಿಸಿದರು. ಅವರು ಭೂಭಾರವನ್ನು ಇಳುಹಲು ಕೃಷ್ಣಾರ್ಜುನರಾಗಿ ಹುಟ್ಟಿದರು.

ದಕ್ಷಬ್ರಹ್ಮನ ಹದಿನಾಲ್ಕನೆಯ ಮಗಳಾದ ಸ್ವಾಹಾದೇವಿಯು ಅಗ್ನಿಯನ್ನು ಮದುವೆಯಾಗಿ ಪಡೆದ ಮಕ್ಕಳು, ಅವರ ಮಕ್ಕಳು, ಸೇರಿ, ಒಟ್ಟು ನಲವತ್ತೊಂಭತ್ತು ಜನ ಅಗ್ನಿದೇವತೆಗಳಾದರು. ಹದಿನೈದನೆಯ ಸ್ವಧೆಯು ಪಿತೃಗಳ ಪತ್ನಿಯಾಗಿ ಪಡೆದ ಇಬ್ಬರು

ಹೆಣ್ಣು ಮಕ್ಕಳು ಯೋಗಿನಿಯರಾದರು. ದಕ್ಷಬ್ರಹ್ಮನ ಕೊನೆಯ ಮಗಳಾದ ಸತೀದೇವಿಯು ಮಹಾದೇವನನ್ನು ಮದುವೆಯಾದಳು. ಆಕೆಯ ಪತಿಯಾದ ಮಹಾದೇವನನ್ನು ದಕ್ಷಬ್ರಹ್ಮನು ಕಾರಣವಿಲ್ಲದೆ ದ್ವೇಷಿಸಿ ನಿಂದಿಸಿದನು. ಆ ಪತಿನಿಂದೆಯನ್ನು ತಡೆಯಲಾರದೆ ಆಕೆಯು ಪೂರ್ವ ವಯಸ್ಸಿನಲ್ಲಿಯೇ ಯೋಗದಿಂದ ತನ್ನ ದೇಹವನ್ನು ನೀಗಿದಳು. ಅದರಿಂದ ಆಕೆಗೆ ಮಕ್ಕಳಾಗಲಿಲ್ಲ."

ಈ ಮಾತನ್ನು ಕೇಳಿ ವಿದುರನು ಮೈತ್ರೇಯನನ್ನು ಬೆಸಗೊಂಡನು: "ಆರ್ಯ ಮಹರ್ಷಿಯೆ, ದಕ್ಷನು ತನ್ನ ಪುತ್ರಿಯರಲ್ಲಿ ವಿಶ್ವಾಸವುಳ್ಳವನು. ಚತುರ್ಮುಖ ಬ್ರಹ್ಮನ ಮಗನು. ಮಹಾದೇವನಾದರೋ ಎಲ್ಲರಿಗೂ ಗುರುವು. ಶಾಂತಮೂರ್ತಿಯು. ಯಾರಲ್ಲೂ ವೈರವಿಲ್ಲದವನು. ಇಂತಹ ಜಗದೀಶ್ವರನನ್ನು ದಕ್ಷನು ಹೇಗೆ ಏತಕ್ಕೆ ದ್ವೇಷಿಸಿದನು? ಆ ದ್ವೇಷವು ಹೇಗೆ ಮಗಳಿಗೆ ಮೃತ್ಯುವಾಯಿತು ? ಈ ಕಥೆಯನ್ನು ನನಗೆ ವಿಸ್ತಾರವಾಗಿ ಹೇಳು" ಎಂದನು. ಮೈತ್ರೇಯನೂ ಆಗಲೆಂದು ಹೇಳಿದನು.

"ಮರೀಚಿ ಮೊದಲಾದ ನವಬ್ರಹ್ಮರು ಉಂಟಲ್ಲವೆ? ಅವರೆಲ್ಲರೂ ಲೋಕಕ್ಕೆ ಕಲ್ಯಾಣವಾಗಲೆಂದು ಒಂದು ಸತ್ರಯಾಗವನ್ನು ಮಾಡಿದರು. ಅಲ್ಲಿಗೆ ದೇವತೆಗಳು, ಮಹರ್ಷಿಗಳು, ಎಲ್ಲರೂ ಬಂದಿದ್ದರು. ದಕ್ಷಬ್ರಹ್ಮನು ಯಾಗ ನಡೆಯುತ್ತಿದ್ದಾಗ ಬಂದನು. ಆತನು ಬಂದನೆಂದು ಎಲ್ಲರೂ ಸಂಭ್ರಮದಿಂದ ಎದ್ದು ಆತನಿಗೆ ಪೂಜೆಯನ್ನು ಒಪ್ಪಿಸಿದರು. ಆದರೆ ರುದ್ರನು ಮಾತ್ರ ಎದ್ದು ಪೂಜೆಯನ್ನು ಒಪ್ಪಿಸಲಿಲ್ಲ.

ಅದನ್ನು ಕಂಡು ದಕ್ಷನು ತನಗೆ ಅವಮಾನವಾಯಿತು ಎಂದುಕೊಂಡನು: ಕೋಪಗೊಂಡು ಸಭೆಯಲ್ಲಿದ್ದವರಿಗೆ ಹೀಗೆ ಹೇಳಿದನು; "ಎಲೈ ದೇವತೆಗಳೇ, ಅಗ್ನಿಗಳೇ, ಬ್ರಹ್ಮರ್ಷಿಗಳೇ, ನಾನು ಸಾಧುಗಳ

ಆಚಾರವನ್ನು ಹೇಳುವೆನು: ಅಜ್ಞಾನದಿಂದಲೂ ಮತ್ಸರದಿಂದಲೂ ಹೀಗೆ ಹೇಳುತ್ತಿಲ್ಲ. ಈ ರುದ್ರನು ಲೋಕಪಾಲಕರ ಯಶಸ್ಸನ್ನು ಕೆಡಿಸುವವನು: ನಾಚಿಕೆಯಿಲ್ಲದವನು. ಸಾಧುಗಳ ಆಚರಣವನ್ನು ಬಿಟ್ಟವನು. ನಾನು ಅರಿಯದೆ ಇವನಿಗೆ ಮಗಳನ್ನು ಕೊಟ್ಟೆನು. ನನಗೆ ಅಳಿಯನಾದ ಈ ಕಪಿಗಣ್ಣಿನವನು ಮಾವನಾದ ನಾನು ಬಂದರೂ ಎದ್ದು ಗೌರವಿಸಲಿಲ್ಲವಲ್ಲ! ಕರ್ಮಹೀನನಾಗಿ, ಶುಚಿಯೂ ಮಾನವೂ ಮರ್ಯಾದೆಯೂ ಇಲ್ಲದ ಇವನಿಗೆ ನಾನು ಮಗಳನ್ನು ಕೊಟ್ಟುದು ತಪ್ಪಾಯಿತು. ಸ್ಮಶಾನದಲ್ಲಿ ಘೋರವಾದ ಭೂತಪ್ರೇತಗಳೊಡನೆ ತಿರುಗುವ, ತಲೆಯನ್ನು ಕೆದರಿಕೊಂಡು ಅಳುತ್ತ, ನಗುತ್ತ ಹುಚ್ಚನಂತೆ ಅಲೆಯುವ ಭಸ್ಮಧಾರಿಯಾದ ಇವನಿಗೆ ನಾನು ಚತುರ್ಮುಖನು ಹೇಳಿದನೆಂದು ಮಗಳನ್ನು ಕೊಟ್ಟೆನು" ಎಂದು ಮನಬಂತಾಗಿ ಬಾಯಿಗೆ ಬಂದಂತೆ ಮಹಾದೇವನನ್ನು ಬೈದನು. ಅಲ್ಲಿಗೂ ನಿಲ್ಲದೆ ಕೋಪ ದಲ್ಲಿ ನೀರು ತೆಗೆದುಕೊಂಡು ಆ ರುದ್ರನಿಗೆ "ಇನ್ನು ಮೇಲೆ ಈ ರುದ್ರನಿಗೆ ಇಂದ್ರವಿಷ್ಣುಗಳೊಡನೆ ಸಮನಾಗಿ ಹವಿರ್ಭಾಗವಿಲ್ಲವಾಗಲಿ" ಎಂದು ಶಾಪವನ್ನು ಕೊಟ್ಟನು. ಸಭೆಯಲ್ಲಿ ಯಾರು ಹೇಳಿದರೂ ತಡೆಯದೆ ಆ ಕೋಪದಲ್ಲಿಯೇ ಎದ್ದು ಮನೆಗೂ ಹೊರಟು ಹೋದನು.

ಅದನ್ನು ಕಂಡು ಶಿವಭಕ್ತನಾದ ನಂದೀಶ್ವರನು ಆ ದಕ್ಷನಿಗೆ ಈ ದಕ್ಷನು ಪರಶಿವನ ಯೋಗ್ಯತೆಯನ್ನು ಅರಿಯದೆ ಶಾಪವನ್ನು ಕೊಟ್ಟನು: ಅದರಿಂದ ಇವನಿಗೆ ಶೀಘ್ರವಾಗಿ ಕುರಿಯ ತಲೆಯಾಗಲಿ" ಎಂದು ಶಾಪವನ್ನು ಕೊಟ್ಟನು.

ನಂದಿಯು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಇವ ನನ್ನು ಅನುಸರಿಸಿದ ಬ್ರಾಹ್ಮಣರಿಗೂ ಇವನಂತೆಯೇ ಶಿವಭಕ್ತಿಯು ಇಲ್ಲದೇ ಹೋಗಲಿ. ಶಿವದ್ವೇಷವನ್ನು ಮಾಡುತ್ತ ಅವರು ತಾವು ಕಲಿತ ವಿದ್ಯೆಯನ್ನೂ ಮಾಡುವ ತಪಸ್ಸು ಮೊದಲಾದುವುಗಳನ್ನೂ



ಮಹಾದೇವ

ಶಾಸನ ಇಲಾಖೆಯವರ ಕೃಪೆ

ಜೀವನಕ್ಕಾಗಿ ಮಾಡುತ್ತ ಯಾಚಕರಾಗಿರಲಿ'' ಎಂದು ಇತರರು ಬೇಡವೆನ್ನುತ್ತಿದ್ದರೂ ಶಾಪವನ್ನು ಕೊಟ್ಟನು.

ಅದಕ್ಕಾಗಿ ಭೃಗುವು ಕೋಪಗೊಂಡು "ನೀನು ಹೀಗೆ ಎಲ್ಲರಿಗೂ ಶಾಪವನ್ನು ಕೊಟ್ಟೆ. ಅದರಿಂದ ಇನ್ನು ಮೇಲೆ ಶಿವಭಕ್ತರು ಪಾಷಂಡರಾಗಲಿ" ಎಂದು ಶಾಪವನ್ನು ಕೊಟ್ಟನು. "ತನಗಾಗಿ ಇಷ್ಟಾಯಿತು. ಇನ್ನು ಇಲ್ಲಿರಬಾರದು'' ಎಂದು ಪರಶಿವನು ಅಲ್ಲಿಂದ ಎದ್ದು ತನ್ನವರನ್ನೆಲ್ಲಾ ಕರೆದುಕೊಂಡು ಹೊರಟು ಹೋದನು.

---

## ಎಂಟನೆಯ ಅಧ್ಯಾಯ

# ದಕ್ಷಯಾಗ

ಇದಾದ ಕೆಲವು ಕಾಲಕ್ಕೆ ಚತುರ್ಮುಖ ಬ್ರಹ್ಮನು ತನ್ನ ಎಲ್ಲಾ ಮಕ್ಕಳೂ ದಕ್ಷಬ್ರಹ್ಮನ ಕೈಕೆಳಗಿರಬೇಕು ಎಂದು ಗೊತ್ತು ಮಾಡಿ ಆತನಿಗೆ ಪಟ್ಟವನ್ನು ಕಟ್ಟಿದನು. ದಕ್ಷನ ಗರ್ವವು ತಾನೇ ತಾನಾಯಿತು. ಆ ಗರ್ವದಲ್ಲಿ ಒಂದು ಯಾಗವನ್ನು ಮಾಡಿದನು. ಅದಕ್ಕೆ ಪರಶಿವನನ್ನು ಕರೆಯಲಿಲ್ಲ. ಶಿವನನ್ನು ಬಿಟ್ಟು ಮಿಕ್ಕವರೆಲ್ಲರೂ ಆ ಯಾಗಕ್ಕೆ ಬಂದಿದ್ದರು.

ದಕ್ಷನು ಯಾಗ ಮಾಡುತ್ತಿರುವ ಸುದ್ದಿಯು ಕೈಲಾಸಕ್ಕೂ ಹೋಯಿತು. ಸತಿಯು ತನ್ನ ಪತಿಯಾದ ಈಶ್ವರನ ಬಳಿಗೆ ಹೋಗಿ "ನಾನು ತಂದೆಯು ಮಾಡುತ್ತಿರುವ ಯಾಗಕ್ಕೆ ಹೋಗಬೇಕು. ಅಪ್ಪಣೆ ಕೊಡು. ಮಿತ್ರರ, ಸ್ವಾಮಿಯ, ಗುರುವಿನ, ತಂದೆಯ, ಮನೆಗೆ ಕರೆಯದಿದ್ದರೂ ಹೋಗಬೇಕಲ್ಲವೆ ? ದಯವಿಟ್ಟು ಈ ನನ್ನ ಆಶೆಯನ್ನು ಕರುಣಿಸು'' ಎಂದು ಕೇಳಿಕೊಂಡಳು. ಆ ರುದ್ರದೇವನು ಹಿಂದಿನ

ದೆಲ್ಲವನ್ನೂ ನೆನೆದು ಆಕೆಗೆ ಹೀಗೆ ಹೇಳಿದನು: "ದೇವಿ, ನೀನು ಹೇಳಿದುದು ಸರಿ. ಯಾವ ಬಂಧುಗಳು ದೂಷಿಸುವುದಿಲ್ಲವೋ ಅವರ ಮನೆಗೆ ನೀನು ಹೇಳಿದಂತೆ ಕರೆಯದಿದ್ದರೂ ಹೋಗಬೇಕು. ವಿದ್ಯೆ, ತಪಸ್ಸು, ಐಶ್ವರ್ಯ, ದೇಹ, ವಯಸ್ಸು, ಕುಲ, ಸತ್ಪುರುಷರ ಗುಣ ಗಳಿವೆಲ್ಲವೂ ದುಷ್ಟರಲ್ಲಿ ದೋಷವಾಗಿ ಪರಿಣಮಿಸುವುವು. ದುಷ್ಟರು ವಿವೇಕವಿಲ್ಲದೆ, ಗರ್ವದಿಂದ ಕುರುಡರಾಗಿ, ದೊಡ್ಡವರು ಎಂಬುದನ್ನೂ ಕಾಣದೆ ಹೋಗುವರು. ಅಂತಹವರು ಸ್ವಜನರಾದರೂ ಅವರ ಮನೆಗಳಿಗೆ ಹೋಗಬಾರದು. ಬಂಧುಗಳು ಆಡಿದ ದುರುಕ್ತಿಗಳು ಬಾಣಗಳಿಗಿಂತ ಹೆಚ್ಚಾಗಿ ನೋಯಿಸುವುವು. ನಿನ್ನ ತಂದೆಯಾದ ದಕ್ಷನು ವಿಷ್ಣುವನ್ನು ದ್ವೇಷಿಸುವ ಅಸುರರಂತೆ ನನ್ನನ್ನು ದ್ವೇಷಿಸುವನು. ಎಲೌ, ಸಾಧಾರಣನಂತೆ ನಾನೂ ಆತನಿಗೆ ಎದ್ದು ನಿಂತು ಗೌರವ ವನ್ನು ಸಲ್ಲಿಸಲಿಲ್ಲವೆಂದು ಕೋಪಗೊಂಡಿರುವನು. ನನ್ನಂತಹವರು ಸಂಸಾರಿಗಳು ಎದುರಿಗೆ ಬಂದಾಗ ಅವರಲ್ಲಿರುವ ಈಶ್ವರನಿಗೆ ನಮನ ಸ್ಕಾರಗಳನ್ನು ಮನಸ್ಸಿನಿಂದ ಮಾಡುವರಲ್ಲದೆ ದೇಹದಿಂದ ಮಾಡು ವುದಿಲ್ಲ. ಇದನ್ನರಿಯದೆ ಆತನು ನನ್ನನ್ನು ದ್ವೇಷಿಸುತ್ತಿರುವನು. ನೀನು ಅಲ್ಲಿಗೆ ಹೋಗಬೇಡ. ಹೋದರೆ ಆತನು ನನ್ನ ಮೇಲಿನ ಕೋಪ ವನ್ನು ನಿನ್ನ ಮೇಲೆ ತೀರಿಸುವನು" ಎಂದನು.

ಸತಿಗೆ ಆ ಮಾತು ಒಡಿಯಲಿಲ್ಲ: ರುದ್ರನು ಈಕೆಯು ಈ ಲೋಕವನ್ನು ಬಿಡುವ ಕಾಲವು ಬಂದಿದೆಯೆಂದು ಅಲ್ಲಿಂದ ಮುಂದಕ್ಕೆ ಏನೂ ಹೇಳಲಿಲ್ಲ. ಸತಿಯು ಏನಾದರೂ ಆಗಲಿ ಎಂದು ತಂದೆಯ ಮನೆಗೆ ಹೊರಟೇ ಬಿಟ್ಟಳು.

ಸತಿಯು ದಕ್ಷಬ್ರಹ್ಮನ ಯಜ್ಞಮಂಟಪಕ್ಕೆ ಬಂದಳು. ಆಕೆ ಯನ್ನು ಕಂಡು ತಾಯಿಯೂ ಸಹೋದರಿಯರೂ ಬಂದು ಎದಿರು ಗೊಂಡರು. ದಕ್ಷನಿಗೆ ಹೆದರಿ ಮಿಕ್ಕವರು ಯಾರೂ ಆಕೆಳನ್ನು ಮಾತ

ಮಾಡಿಸಲಿಲ್ಲ. ಆಕೆಯನ್ನು ಕಂಡೂ ದಕ್ಷನು ಗೌರವಿಸಲಿಲ್ಲ. ಅದಕ್ಕೆ ಬದಲಾಗಿ ಆಕೆಯ ಪತಿಯಾದ ರುದ್ರನನ್ನು ನಿಂದಿಸಿದನು: " ಈ ಯಾಗದಲ್ಲಿ ನಾನು ರುದ್ರನಿಗೆ ಆಹುತಿಯನ್ನು ಕೊಡುವುದಿಲ್ಲ '' ಎಂದನು. ಇದನ್ನು ಕಂಡು ಆಕೆಗೆ ಸಂಕಟವಾಗಿ ಕೋಪವು ಬಂತು. ಅದನ್ನು ಕಂಡು ಆಕೆಯ ಜೊತೆಯಲ್ಲಿ ಬಂದಿದ್ದ ಶಿವಗಣಗಳು ಆ ದಕ್ಷನನ್ನು ಕೊಲ್ಲಬೇಕೆಂದು ಎದ್ದರು. ಆಕೆಯು ಅವರನ್ನು ತಡೆದಳು. ಕೋಪದಿಂದ ಆಕೆಯ ತುಟಿಯು ನಡುಗಿತು. ಗಂಟಲು ಕಟ್ಟಿ ಹೋಯಿತು. ಕಣ್ಣುಗಳು ಕೆಂಡದಂತಾಗಿ ಕಣ್ಣೀರು ಕರೆದುವು. ಆಗ ತಂದೆಯನ್ನು ಕುರಿತು ಹೀಗೆ ಹೇಳಿದಳು" ಅರಿತೋ ಅರಿಯದೆಯೋ ಯಾರಾದರೂ ಶಿವ ಎಂಬ ಎರಡಕ್ಷರವನ್ನು ಉಚ್ಚರಿಸಿದರೆ, ಅವರ ಪಾಪಗಳೆಲ್ಲವೂ ತೊಡೆದು ಹೋಗುವುವು. ಅಂತಹ ಶಿವನನ್ನು ನಿಂದಿಸುವೆಯಾ ? ಬ್ರಹ್ಮಾನಂದವನ್ನು ಬೇಕಾದರೂ ಕೊಡುವ ಶಿವನನ್ನು ನೀನು ತಿರಸ್ಕರಿಸುವೆಯಾ ? ಧರ್ಮರಕ್ಷಕನಾದ ಮಹಾಪ್ರಭುವನ್ನು ದೂಷಿಸುವುದನ್ನು ಕೇಳಬಾರದು. ಕೈಲಾದರೆ ಹಾಗೆ ದೂಷಿಸಿದವರ ನಾಲಿಗೆಯನ್ನು ಕಿತ್ತು ತಾವೂ ಪ್ರಾಣತ್ಯಾಗ ಮಾಡಬೇಕು. ಶಿವನಿಂದಕನಾದ ನಿನ್ನಿಂದ ಬಂದ ಈ ದೇಹವು ನನಗೆ ಬೇಡ" ಎಂದು, ಆಕೆಯು ಆಚಮನ ಮಾಡಿ, ನೆಲದ ಮೇಲೆ ಕುಳಿತು ತನ್ನ ಯೋಗ ಬಲದಿಂದ ತನ್ನನ್ನು ತಾನು ಸುಟ್ಟುಕೊಂಡುಬಿಟ್ಟಳು. ಎಲ್ಲರೂ "ಹೀಗುಂಟೆ ? ದಕ್ಷನು ಅನ್ಯಾಯ ಮಾಡಿದ ! ಅನರ್ಥವಾಯಿತು" ಎಂದು ಹಾಹಾಕಾರ ಮಾಡಿದರು. ಆಕೆಯ ಜೊತೆಯಲ್ಲಿ ಬಂದಿದ್ದ ಪ್ರಮಥ ಗಣಗಳು ದಕ್ಷನನ್ನು ಹೊಡೆಯಲು ಹೋದರು. ಆದರೆ, ಭೃಗುಮುನಿಯು ತನ್ನ ಮಂತ್ರಬಲದಿಂದ ಅವರನ್ನೆಲ್ಲಾ ಓಡಿಸಿ ದಕ್ಷನನ್ನು ಕಾಪಾಡಿದನು.

ಈ ಸುದ್ದಿಯನ್ನು ತಿಳಿದು ಪರಮೇಶ್ವರನು ಕೋಪಗೊಂಡು

ಉರಿದೆದ್ದನು. ತನ್ನ [illegible] ತ್ತು ನೆಲಕ್ಕಪ್ಪಳಿಸಿದನು. ಕೂಡಲೇ ವೀರಭದ್ರನು [illegible] ತೆ ಎತ್ತರವಾಗಿ ನೋಡನಂತೆ ಕಪ್ಪಾಗಿ, ಸೂರ [illegible] ಧ ಆಯುಧಗಳನ್ನು ಹಿಡಿದಿರುವ ಸಾವಿರ ಕೈಗಳೂ ಉಳ್ಳ ಆ ವೀರಭದ್ರನಿಗೆ "ಹೋಗು. ದಕ್ಷನನ್ನು ಸಂಹರಿಸಿ ಬಾ" ಎಂದು ಈಶ್ವರನು ಅಪ್ಪಣೆ ಮಾಡಿದನು.

ವೀರಭದ್ರನು ಬರುತ್ತಿದ್ದರೆ ದಾರಿಯಲ್ಲಿ ಧೂಳಿಯೆದ್ದಿತು.



ದಾಕ್ಷಾಯಣಿಯು [illegible]ತ್ಯಾಗ ಮಾಡಿದುದು

ಆತನನ್ನು ಕಂಡು ಪಶುಗಳೆಲ್ಲವೂ ಓಡಿಹೋದುವು. ದಕ್ಷನ ಯಜ್ಞ ಮಂಟಪದಲ್ಲಿ ಅನೇಕ ಭಯಂಕರವಾದ ಅಪಶಕುನಗಳಾದುವು. ಏನಾಗುವುದೋ ಎಂದು ಎಲ್ಲರಿಗೂ ಹೆದರಿಕೆಯಾಯಿತು. ಅಷ್ಟರಲ್ಲಿಯೇ ರುದ್ರನೂ ರುದ್ರಗಣಗಳೂ ಬಂದು ದಕ್ಷನನ್ನೂ ಆತನ ಯಾಗಮಂಟಪವನ್ನೂ ಸುತ್ತಿಕೊಂಡರು. ಎಲ್ಲವೂ ಧ್ವಂಸವಾಗಿ ಹೋಯಿತು. ವೀರಭದ್ರನು ಭೃಗುಮುನಿಯ ಗಡ್ಡಮೀಸೆಗಳನ್ನು ಕಿತ್ತೆಸೆದನು. ಶಿವನಿಂದೆಯಾದಾಗ ಇನ್ನೂ ಮಾಡು ಎಂದು ಕಣ್ಣು ಕುಣಿಸಿದ ಭಗನ ನೇತ್ರಗಳು ಹೋದುವು. ಆಗ ಛಳಿಯೆಂದು ನಕ್ಕ ಆದಿತ್ಯನ ಹಲ್ಲುಗಳು ಈಚೆಗೆ ಬಂದುವು: ವೀರಭದ್ರನು ದಕ್ಷನನ್ನು ಕೆಳಗೆ ಹಾಕಿಕೊಂಡು ಗುದ್ದಿ ಗುದ್ದಿ ಸಾಯಿಸಿ, ಅವನ ತಲೆಯನ್ನು ಬೆಂಕಿಯಲ್ಲಿ ಹಾಕಿದನು.

ಯಜ್ಞಕ್ಕೆ ಬಂದಿದ್ದ ದೇವತೆಗಳು ಹೆದರಿ ಚತುರ್ಮುಖನ ಬಳಿಗೆ ಹೋಗಿ, ಎಲ್ಲವನ್ನೂ ಆತನಿಗೆ ತಿಳಿಸಿದರು. ಆತನು “ಹೀಗಾಗುವುದೆಂದು ನನಗೆ ಮೊದಲೇ ತಿಳಿದಿತ್ತು. ಅದರಿಂದ ನಾನೂ ನಾರಾಯಣನೂ ಈ ಯಾಗಕ್ಕೆ ಬರಲಿಲ್ಲ. ತೇಜಸ್ವಿಗಳಲ್ಲಿ ಅಪರಾಧ ಮಾಡಿ ಬದುಕುವುದು ಕಷ್ಟ. ಹೀಗಿರಲು, ನೀವು ಶಿವನಲ್ಲಿ ಅಪರಾಧ ಮಾಡಿದಿರಲ್ಲಾ ! ಆ ಶಿವನನ್ನು ನಾವು ಯಾರು ತಾನೇ ಬಲ್ಲೆವು ? ಆತನಲ್ಲಿ ನೀವು ಅಪರಾಧವನ್ನು ಮಾಡಬಹುದೋ ?” ಎಂದು ಅವರೆಲ್ಲರನ್ನೂ ಕಟ್ಟಿಕೊಂಡು ಕೈಲಾಸಕ್ಕೆ ಹೋದನು.

ಕೈಲಾಸಗಿರಿಯ ಪಕ್ಕದಲ್ಲಿರುವ ಅಲಕಾಪುರಿಯನ್ನೂ ಅದರ ಬಳಿಯಲ್ಲಿರುವ ಸೌಗಂಧಿಕ ವನವನ್ನೂ ದಾಟಿ, ಅಲ್ಲಿಯೇ ಇರುವ ಒಂದು ಅದ್ಭುತವಾದ ಆಲದ ಮರವನ್ನು ಅವರು ಕಂಡರು. ಆ ಮಹಾವೃಕ್ಷದ ಅಡಿಯಲ್ಲಿ ಪರಮೇಶ್ವರನು ಕುಳಿತಿದ್ದನು. ಸನಕಸನಂದಾದಿ ಯೋಗೀಶ್ವರರೂ ಸರ್ವಸಿದ್ಧಿಗಳಿಗೂ ಒಡೆಯನಾದ ಕುಬೇರನೂ ಆತನನ್ನು ಓಲೈಸುತ್ತಿದ್ದರು. ಆತನು ಭಸ್ಮವನ್ನು ಮೈಗೆಲ್ಲಾ ಬಳಿದು

ಕೊಂಡು, ಜಡೆಗಳನ್ನು ಧರಿಸಿಕೊಂಡು, ಚಂದ್ರನನ್ನು ಮುಡಿದು ಕೊಂಡು, ದರ್ಭೆಯನ್ನು ಹಾಸಿಕೊಂಡು ಕುಳಿತು, ತನ್ನ ಸುತ್ತಲೂ ಇರುವ ಮಹರ್ಷಿಗಳಿಗೆಲ್ಲ ಜ್ಞಾನೋಪದೇಶವನ್ನು ಮಾಡುತ್ತಿದ್ದನು. ಸಕಲ ದೇವತೆಗಳನ್ನೂ ಕರೆದುಕೊಂಡು ತನ್ನ ಬಳಿಗೆ ಬಂದ ಬ್ರಹ್ಮನನ್ನು ಕಂಡು ಶಂಕರನು ಗೌರವದಿಂದ ಆದರಿಸಿದನು ಬ್ರಹ್ಮನು "ಲೋಕವೆಲ್ಲವೂ ಪ್ರಕೃತಿ ಪುರುಷರಿಂದ ಆದುದು ನೀನು ಆ ಇಬ್ಬರಿಗೂ ಆಚಿನವನು. ಯಜ್ಞಕ್ಕೆ ಫಲ ಕೊಡುವವನು ನೀನು ಎಂಬುದನ್ನೂ ಅರಿಯದೆ ನಿನ್ನನ್ನು ತಿರಸ್ಕರಿಸಿ ಆ ದಕ್ಷನು ಹತನಾದನು. ಅವನು ಬದುಕಲಿ. ಭೃಗುವಿಗೆ ಗಡ್ಡಮೀಸೆಗಳು ಬರಲಿ. ಭರ್ಗನಿಗೆ ಕಣ್ಣುಗಳೂ ಸೂರ್ಯನಿಗೆ ಹಲ್ಲುಗಳೂ ಹುಟ್ಟಲಿ. ರುದ್ರಗಣಗಳಿಂದ ಏಟು ತಿಂದು ಅಂಗಗಳನ್ನು ಕಳೆದುಕೊಂಡು ಕೆಟ್ಟಿರುವ ದೇವತೆಗಳು ನಿನ್ನ ದಯೆಯಿಂದ ಮೊದಲಿನಂತಾಗಲಿ. ಮತ್ತೆ ಯಜ್ಞವು ನಡೆಯಲಿ, ಅನುಗ್ರಹ ಮಾಡು" ಎಂದು ಪ್ರಾರ್ಥಿಸಿದನು.

ಶಿವನು ಪ್ರಸನ್ನನಾಗಿ ಹಾಗೇ ಆಗಲೆಂದನು. ಆಗ ಇಂದ್ರಾದಿ ದೇವತೆಗಳೆಲ್ಲ ಪರಶಿವನನ್ನು ತಮ್ಮೊಡನೆ ಕರೆದುಕೊಂಡು ದಕ್ಷನ ಯಜ್ಞಮಂಟಪಕ್ಕೆ ಹೋದರು. ಯಜ್ಞ ಪಶುವಿನ ತಲೆಯನ್ನು ತಂದು ದಕ್ಷನ ದೇಹಕ್ಕೆ ಸೇರಿಸಿದರು. ಆತನು ಬದುಕಿ ಶಿವದ್ವೇಷವನ್ನು ಬಿಟ್ಟು ಶಿವನನ್ನು ಸ್ತುತಿಸಿದನು—ಯಜ್ಞ ಮಾಡಿದನು. ಆತನು ನಿರ್ಮಲವಾದ ಮನಸ್ಸಿನಿಂದ ಧ್ಯಾನಿಸಲು ಶ್ರೀ ಹರಿಯು ಅಲ್ಲಿಯೇ ಪ್ರತ್ಯಕ್ಷನಾದನು. ಆಗ ಯಜಮಾನನಾದ ದಕ್ಷಬ್ರಹ್ಮ, ಆತನ ಋತ್ವಿಜರು, ಅಲ್ಲಿದ್ದ ಮುನಿಗಳು, ದೇವತೆಗಳು, ಎಲ್ಲರೂ ಆತನನ್ನು ಹೊಗಳಿದರು. ಆಗ ಆ ಪುರುಷೋತ್ತಮನು ದಕ್ಷನನ್ನು ಕರೆದು "ಎಲೈ ದಕ್ಷಬ್ರಹ್ಮನೆ, ನಾನೇ ಬ್ರಹ್ಮನೂ ರುದ್ರನೂ ಆಗಿರುವೆನು. ತ್ರಿಗುಣಗಳಿಂದ ಈ ಲೋಕದ ಸೃಷ್ಟಿ, ಸ್ಥಿತಿ, ಸಂಹಾರ

ಗಳನ್ನು ನಡೆಸುವ ನಾನು ಆಯಾ ಕಾರ್ಯಗಳಿಗೆ ತಕ್ಕಂತೆ ನಾನಾರೂಪ ಗಳನ್ನು ಧರಿಸಿ ಬೇರೆಬೇರೆಯಾಗುವೆನು. ಆದರೂ, ಈ ತ್ರಿಮೂರ್ತಿ ಗಳಿಗೂ ಭೇದವಿಲ್ಲ. ಈ ಗುಟ್ಟನ್ನು ಅರಿತವನು ಶಾಂತಿಯನ್ನು ಹೊಂದುವನು.'' ಎಂದು ಹೇಳಿ ಅನುಗ್ರಹವನ್ನು ಮಾಡಿದನು. ದಕ್ಷನು ರುದ್ರನಿಗೂ ಇತರ ದೇವತೆಗಳಿಗೂ ಆಹುತಿಯನ್ನು ಒಪ್ಪಿಸಿ ಯಜ್ಞವನ್ನು ಪೂರೈಸಿದನು. ಈ ಶಿವಲೀಲೆಯನ್ನು ಕೇಳಿದವನು ಈ ಭಕ್ತಿಯನ್ನು ಪಡೆದು ಪಾಪರಹಿತನಾಗಿ ಕೃತಾರ್ಥನಾಗುವನು.

---

## ಒಂಭತ್ತನೆಯ ಅಧ್ಯಾಯವು

# ಧ್ರುವಚರಿತ್ರೆ

ಸೃಷ್ಟಿ ಮಾಡಬೇಕೆಂದುಕೊಂಡು ಬ್ರಹ್ಮನು ಸೃಷ್ಟಿಸಿದ ಸನ ಕಾದಿಗಳು ನಾರದರು ಋಭು ಹಂಸ ಆರುಣಿ ಯತಿ ಇವರು ಮದುವೆ ಯನ್ನೇ ಮಾಡಿಕೊಳ್ಳಲಿಲ್ಲವಾಗಿ ಅವರಿಗೆ ಸಂತತಿಯೇ ಇಲ್ಲವಾಯಿತು. ಬ್ರಹ್ಮನ ಇನ್ನೊಬ್ಬ ಮಗನಾದ ಅಧರ್ಮನಲ್ಲಿ ದಂಭ ಮಾಯೆಯರು ಹುಟ್ಟಿದರು. ರಾಕ್ಷಸೇಶ್ವರನಾದ ನಿರ್ಋತಿಯು ಆ ಇಬ್ಬರನ್ನೂ ಕಾಪಾಡಿದನು. ಅವರು ಲೋಭ ನಿಕೃತಿಯರನ್ನೂ ಅವರು ಕ್ರೋಧ ಹಿಂಸೆಯರನ್ನೂ ಅವರು ಕಲಿ ದುರುಕ್ತಿಯೆಂಬುವರನ್ನೂ, ಅವರು ಭಯ ಮೃತ್ಯುಗಳನ್ನೂ ಅವರು ನಿರಯ ಯಾತನೆಗಳೆಂಬುವರನ್ನೂ ಪಡೆದರು. ಇದು ಅಧರ್ಮ ವಂಶವು. ಇದನ್ನು ತಿಳಿದವನಿಗೆ ಮನಶ್ಶುದ್ಧಿಯು ಲಭಿಸುವುದು. ಇನ್ನು ಭಗವದಂಶಸಂಭೂತನಾದ ಮನುವಿನ ವಂಶವನ್ನು ಬಣ್ಣಿಸುವೆನು. ಕೇಳು.

ಮನುವಿಗೆ ಪ್ರಿಯವ್ರತ ಉತ್ತಾನಪಾದರೆಂಬ ಇಬ್ಬರು ಗಂಡು

ಮಕ್ಕಳಾದರು* ಉತ್ತಾನಪಾದನಿಗೆ ಸುನೀತಿ ಸುರುಚಿಯೆಂದು ಇಬ್ಬರು ಹೆಂಡತಿಯರಾದರು. ಸುನೀತಿಗೆ ಧ್ರುವನೂ ಸುರುಚಿಗೆ ಉತ್ತಮನೂ ಆದರು. ರಾಯನಿಗೆ ದೊಡ್ಡ ಹೆಂಡತಿಯಾದ ಸುನೀತಿಗಿಂತ ಸುರುಚಿಯಲ್ಲಿಯೇ ಹೆಚ್ಚು ಅಭಿಮಾನವಿತ್ತು. ಒಂದು ದಿನ ರಾಜನು ಉತ್ತಮನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮುದ್ದಾಡುತ್ತಿರುವಾಗ ಧ್ರುವನು ಬಂದು ತಾನೂ ತೊಡೆಯ ಮೇಲೆ ಕುಳಿತುಕೊಳ್ಳಬೇಕೆಂದನು. ಅದನ್ನು ಕಂಡು ಸುರುಚಿಯು ಗರ್ವದಿಂದ "ಧ್ರುವ, ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲ: ಆದರಿಂದ ನೀನು ನಿನ್ನ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲಾರೆ. ನಿನಗೆ ಸಿಂಹಾಸನವಂತೂ ಸಿಕ್ಕುವುದೇ ಇಲ್ಲ. ನಿನಗೆ ಸಿಂಹಾಸನವು ಬೇಕಾದರೆ ನಾರಾಯಣನ ಕೃಪೆಯನ್ನು ಪಡೆದು ನನ್ನ ಹೊಟ್ಟೆಯಲ್ಲಿ ಹುಟ್ಟು" ಎಂದು ಗದರಿಕೊಂಡಳು. ಧ್ರುವನು ಅದನ್ನು ಸಹಿಸಲಾರದೆ ಅಳುತ್ತ ತನ್ನ ತಾಯಿಯ ಬಳಿಗೆ ಹೋದನು. ಆಕೆಯೂ ಎಲ್ಲವನ್ನೂ ಕೇಳಿ ಬಹಳವಾಗಿ ದುಃಖಪಟ್ಟಳು: ಮಗನನ್ನು ಕುರಿತು, "ಅಪ್ಪಾ, ಸುರುಚಿಯ ಮಾತು ನಿಜ. ನೀನು ಶ್ರೀಮನ್ನಾರಾಯಣನನ್ನು ಭಕ್ತಿಯಿಂದ ಆರಾಧಿಸು. ನಿಮ್ಮ ತಾತನಾದ ಮನು ಚಕ್ರವರ್ತಿಗೆ ಭೂಮಂಡಲದ ಒಡೆತನವನ್ನೂ ನಿಮ್ಮ ಮುತ್ತಾತನಾದ ಬ್ರಹ್ಮನಿಗೆ ಸತ್ಯಲೋಕಾಧಿಪತ್ಯವನ್ನೂ ಕೊಟ್ಟವನೂ ಆತನೇ! ಅದರಿಂದ ಭಕ್ತರನ್ನು ಕಾಪಾಡುವ ಶ್ರೀಮನ್ನಾರಾಯಣನನ್ನು ಆರಾಧಿಸು. ಆತನು ನಿನಗೆ ಸಿಂಹಾಸನವನ್ನು ಕೊಡುವನು" ಎಂದು ಹೇಳಿದಳು. ಆ ಮಗುವೂ ಹಾಗೆಯೇ ಆಗಲಿ ಎಂದು ನಾರಾಯಣನನ್ನು ಹುಡುಕಿಕೊಂಡು ಹೊರಟನು.

---

*ಪ್ರಿಯವ್ರತನ ಕಥೆಯು ಮುಂದೆ ಬರುವುದು.

ನಾರದ ಮಹರ್ಷಿಯು ಧ್ರುವನನ್ನು ಕಂಡು ಓಡಿ ಬಂದನು. "ಆಟವಾಡುವ ವಯಸ್ಸಿನಲ್ಲಿ ನಾರಾಯಣನನ್ನು ಹುಡುಕಿಕೊಂಡು ಬಂದೆಯಲ್ಲ: "ನಾರದರೆ, ನನ್ನನ್ನು ಮನೆಗೆ ಹೋಗು ಎನ್ನಬೇಡಿ. ಶ್ರೀಮನ್ನಾರಾಯಣನನ್ನು ಕಾಣುವುದು ಹೇಗೆ ಹೇಳಿಕೊಡಿ. ನನ್ನನ್ನು ಕಾಪಾಡಿ ಎಂದು ಬೇಡಿಕೊಂಡನು. ನಾರದರು ಆತನ ನಿಶ್ಚಯ ವನ್ನು ಕಂಡು ಸಂತೋಷಪಟ್ಟು "ಧ್ರುವಕುಮಾರ, ಭಗವಂತನಾದ ವಾಸುದೇವನನ್ನು ಕಾಣುವುದಕ್ಕೆ ಭಕ್ತಿಗಿಂತ ಬೇರೆ ಇನ್ನು ಯಾವ ಉಪಾಯವೂ ಇಲ್ಲ. ಇಷ್ಟಸಿದ್ಧಿಗೆ ಶ್ರೀಹರಿಯ ಪಾದಸೇವನವೊಂದೇ ದಾರಿಯು. ಆದರಿಂದ ನೀನು ಯಮುನಾ ನದಿಯ ಬಳಿ ಹೋಗು. ಅಲ್ಲಿ ಮಧುವನವೆಂಬ ಅರಣ್ಯದಲ್ಲಿ ಶ್ರೀಹರಿಯು ಯಾವಾಗಲೂ ಇರುವನು. ಅಲ್ಲಿ ಭಗವಂತನನ್ನು ಕುರಿತು ತಪಸ್ಸು ಮಾಡು. ಆತನು ನಿನಗೆ ಒಲಿಯುವನು. ನಾನು ನಿನಗೊಂದು ಮಂತ್ರವನ್ನು ಉಪ ದೇಶ ಮಾಡುವೆನು. ಅದರಿಂದ ಸ್ವಾಮಿಯನ್ನು ಬೇಗ ಕಾಣುವೆ. "ಓಂ ನಮೋ ಭಗವತೇ ವಾಸುದೇವಾಯ ಎಂಬುದೇ ಆ ಮಂತ್ರವು" ಎಂದು ಹೇಳಿ, ಮಂತ್ರೋಪದೇಶ ಮಾಡಿ, ಆ ಭಗವಂತನನ್ನು ಆರಾ ಧನೆ ಮಾಡುವ ಕ್ರಮವನ್ನು ಹೇಳಿಕೊಟ್ಟನು. ಧ್ರುವನು ಆತನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ತಪಸ್ಸಿಗಾಗಿ ಯಮುನಾ ತೀರದ ಮಧುವನಕ್ಕೆ ಹೊರಟು ಹೋದನು.

ನಾರದರು ಉತ್ತಾನಪಾದರಾಯರ ಬಳಿಗೆ ಹೋದರು. ಆತನು ತಾನು ಹೆಂಡತಿಗಾಗಿ ಮಗನನ್ನು ತೊರೆದೆನಲ್ಲಾ : ಆ ಹುಡು ಗನು ಏನಾದನೋ ಎಂದು ಬಹಳವಾಗಿ ಮರುಗುತ್ತಿದ್ದನು. ನಾರ ದರು ಆತನಿಗೆ "ಯೋಚಿಸಬೇಡ. ನಿನ್ನ ಮಗನು ನಾರಾಯಣನನ್ನು ಆಶ್ರಯಿಸಿರುವನು. ಲೋಕಪಾಲಕರಾದ ಇಂದ್ರಾದಿಗಳಿಗೂ ಅಸಾಧ್ಯ



ಪ್ರಸನ್ನ ಶ್ರೀಮಹಾವಿಷ್ಣು ಧ್ರುವನನ್ನು ಅನುಗ್ರಹಿಸಿದುದು

ಪಾಪ ಫಲವನ್ನು ಹೊಂದಿ, ನಿನ್ನ ಯಶಸ್ಸನ್ನು ಬೆಳೆಸುವನು ” ಎಂದು ಹೇಳಿ ಸಮಾಧಾನ ಮಾಡಿದನು.

ಇತ್ತ ಧ್ರುವನು ಮಧುವನದಲ್ಲಿ ತಪಸ್ಸಿಗೆ ನಿಂತನು: ಬರು ಬರುತ್ತ ಆ ಹುಡುಗನ ತಪಸ್ಸು ತೀವ್ರವಾಯಿತು. ಮೂರು ದಿನಗಳಿಗೊಂದು ಬಾರಿ ಹಣ್ಣು ತಿನ್ನುತ್ತಾ ಒಂದು ತಿಂಗಳು ಕಳೆದನು. ಎರಡನೆಯ ತಿಂಗಳಲ್ಲಿ ಆರಾರು ದಿನಗಳಿಗೊಮ್ಮೆ ತರಗೆಲೆ ಒಣ ಹುಲ್ಲುಗಳನ್ನು ತಿನ್ನುತ್ತಾ ಬಂದನು. ಹೀಗೆಯೇ ಆಹಾರವನ್ನು ತ್ಯಜಿಸಿ, ದೃಢ ಮನಸ್ಸಿನಿಂದ, ಒಂದು ಕಾಲಿನಿಂದ ನಿಂತು ತಪಸ್ಸು ಮಾಡಿದನು.

ಆತನ ತಪಸ್ಸು ಬಲವಾಯಿತು. ತಪಸ್ಸು ಅಗ್ನಿಯಾಗಿ ತನ್ನ ಬಿಸಿಯನ್ನು ಮೂರು ಲೋಕಕ್ಕೂ ಮುಟ್ಟಿಸಿತು. ಅದನ್ನು ಸಹಿಸಲಾರದೆ ಎಲ್ಲರೂ ಒದ್ದಾಡಿದರು. ಆಗ ಲೋಕಪಾಲಕರೆಲ್ಲರೂ ಹೋಗಿ ಶ್ರೀಮನ್ನಾರಾಯಣನಿಗೆ ಆ ಸುದ್ದಿಯನ್ನು ತಿಳಿಸಿ ತಮ್ಮನ್ನು ಕಾಪಾಡಬೇಕು ಎಂದು ಬೇಡಿಕೊಂಡರು. ಆತನು ಆಗಲಿ, ನಿಮ್ಮನ್ನು ಕಾಪಾಡುವೆನು ಎಂದು ಅಭಯವನ್ನು ಕೊಟ್ಟು, ಗರುಡವನ್ನೇರಿ ಧ್ರುವನು ತಪಸ್ಸು ಮಾಡುತ್ತಿದ್ದ ಮಧುವನಕ್ಕೆ ಬಂದನು.

ಅದುವರೆಗೂ ತನ್ನ ಹೃದಯದಲ್ಲಿ ಜ್ಯೋತಿಯನ್ನು ಕಾಣುತ್ತಿದ್ದ ಧ್ರುವನಿಗೆ ತಟ್ಟನೆ ಕಣ್ತೆರೆಯಿತು : ಎದುರಿಗೆ ಸ್ವಾಮಿಯು ನಿಂತಿದ್ದಾನೆ. ಪರಮಾತ್ಮನಾದ ಶ್ರೀಹರಿಯ ದರ್ಶನವಾಗುತ್ತಲೇ ಧ್ರುವನಿಗೆ ಭಯ ಸಂತೋಷಗಳೆರಡೂ ಆದುವು. ಒಂದೇ ಕಾಲಿನಿಂದ ಭೂಮಿಯಲ್ಲಿ ದಂಡದಂತೆ ಮಲಗಿ ಪ್ರಣಾಮ ಮಾಡಿದನು. ಆ ದಿವ್ಯ ಮಂಗಳ ವಿಗ್ರಹವನ್ನು ನೋಡುತ್ತಾ, ಆ ಪರಮಪುರುಷನ ಸೌಂದರ್ಯವನ್ನೆಲ್ಲಾ ಕಣ್ಣುಗಳಿಂದ ಕುಡಿಯುವನೋ, ಆ ಪುರುಷೋತ್ತಮನನ್ನು ತಬ್ಬಿಕೊಂಡು ಮುದ್ದಾಡುವನೋ ಎಂಬಂತೆಯೂ ಆಗಿ, ಆ ಪರಮಾತ್ಮನನ್ನು ಹೊಗಳಬೇಕೆಂಬ ಆಸೆಯು ಬಲವಾ

ಗಿದ್ದರೂ, ನಾಲಗೆಯನ್ನೂ ಆಡಿಸಲರಿಯದೆ, ಕೈ ಮುಗಿದುಕೊಂಡು ಕಂಭದಂತೆ ನಿಂತಿರುವ ಆ ಕುಮಾರನನ್ನು ಕಂಡು ಶ್ರೀಮನ್ನಾರಾಯಣನು ತನ್ನ ಕೈಯಲ್ಲಿರುವ ಶಂಖದಿಂದ ಪರಮ ಪ್ರೀತಿಯಿಂದ ಮುಟ್ಟಿದನು.

ಆಗ ಧ್ರುವನಿಗೆ ನಾಲಗೆಯಲ್ಲಾಡಿತು : ವಾಕ್ಕು ಹೊರಟಿತು. ಆ ಭಗವಂತನನ್ನು ಹೊಗಳಿದನು: “ಅಖಿಲ ಶಕ್ತಿಧರನಾದ ಪುರುಷನು ನನ್ನ ಹೃದಯವನ್ನು ಹೊಕ್ಕನು. ಮಲಗಿದ್ದ ಮಾತು ಮತ್ತೆ ಜೀವಿಸಿತು: ನನ್ನ ಕೈ ಕಾಲು ಕಿವಿ ಚರ್ಮ ಮೊದಲಾದ ಇಂದ್ರಿಯಗಳೂ ಪ್ರಾಣಗಳೂ ಸಚೇತನವಾದುವು. ಆ ಪುರುಷಗೆ ನಮಸ್ಕಾರವು. ಎಲೈ ಭಗವಂತನೆ, ನೀನೇ ಈ ಲೋಕವನ್ನು ಸೃಷ್ಟಿಸುವೆ: ನೀನೇ ಅದನ್ನು ಹೊಕ್ಕು ಎಲ್ಲವನ್ನೂ ಆಡಿಸುವೆ. ಅದರಿಂದ ಎಲ್ಲವೂ ನೀನೇ ಆಗಿರುವೆ. ಎಲೈ ಜಗನ್ನಾಥನೆ. ನಿನ್ನ ಪಾದಕಮಲವನ್ನು ಧ್ಯಾನಿಸಿದರೆ, ನಿನ್ನ ಭಕ್ತರ ಕಥೆಯನ್ನು ಕೇಳಿದರೆ, ಯಾವ ಆನಂದವುಂಟಾಗುವುದೋ ಆ ಆನಂದವನ್ನು ಇನ್ನು ಹೇಗೂ ಪಡೆಯಲು ಸಾಧ್ಯವಿಲ್ಲ. ಕಮಲನಾಭನೆ, ನನಗೆ ಯಾವಾಗಲೂ ನಿನ್ನ ಭಕ್ತರ ಸಂಗವುಂಟಾಗುವಂತೆ ಅನುಗ್ರಹಿಸು” ಎಂದು ಪರಮ ಭಕ್ತಿಯಿಂದ ಪರಮಪುರುಷನನ್ನು ಪರಿಪರಿಯಾಗಿ ಹೊಗಳಿದನು.

ಭಗವಂತನು ಆ ಭಕ್ತಿಗೆ ಒಲಿದು ಹೇಳಿದನು: “ಕುಮಾರ, ನಿನ್ನ ಮನಸ್ಸಿನಲ್ಲಿರುವುದನ್ನು ಬಲ್ಲೆನು. ಅದನ್ನು ಕರುಣಿಸುವೆನು. ನಾಶರಹಿತವಾದ ಧ್ರುವಪದವಿಯು ನಿನ್ನದಾಗಲಿ. ಪ್ರಳಯದಲ್ಲಿಯೂ ಆ ನಿನ್ನ ಪದವಿಯು ಹೋಗುವುದಿಲ್ಲ. ಸೂರ್ಯಚಂದ್ರಾದಿ ಗ್ರಹಗಳೂ ನಕ್ಷತ್ರಗಳೂ ಸಪ್ತರ್ಷಿಗಳೂ ನಿನ್ನ ಸಿಂಹಾಸನವನ್ನು ಆಶ್ರಯಿಸಿ ನಿಂತು ನಿನ್ನನ್ನು ಪ್ರದಕ್ಷಿಣ ಮಾಡುತ್ತಿರಲಿ. ಭೂಮಂಡಲದಲ್ಲಿ ತಂದೆಯ ರಾಜ್ಯವನ್ನು ಪಡೆದು ಚಕ್ರವರ್ತಿಯಾಗಿ ಬಹು ಕಾಲ ರಾಜ್ಯ

ವಾಳಿ ಕೊನೆಗೆ ಸಪ್ತರ್ಷಿಗಳಿಗೂ ಮೇಲಿರುವ ಪದವಿಯನ್ನು ಪಡೆದು ಸುಖವಾಗಿರು " ಎಂದು ಅನುಗ್ರಹ ಮಾಡಿ ಹೋದನು.

ಇತ್ತ ಧ್ರುವಕುಮಾರನಿಗೆ ಅಂತಹ ಶಾಶ್ವತ ಪದವಿಯು ದೊರೆತರೂ ಸಂತೋಷವಾಗಲಿಲ್ಲ. ಭಗವಂತನ ದರ್ಶನದಿಂದ " ಈ ಲೋಕದಲ್ಲಿರುವ ಪದವಿಗಳೆಲ್ಲ ಒಂದಲ್ಲ ಒಂದು ದಿನ ಮುಗಿಯುವುವು. ಈ ಎಲ್ಲದಕ್ಕಿಂತ ಮುಕ್ತಿಯು ದೊಡ್ಡದು" ಎಂಬ ಜ್ಞಾನವು ಬಂದಿತು. ಅದರಿಂದ, ತಾನು ಭಗವಂತನು ಎದುರಾಗಿ ಬಂದಾಗ ಮುಕ್ತಿಯನ್ನು ಕೇಳಲಿಲ್ಲವಲ್ಲಾ ಎಂಬ ಚಿಂತೆಯು ತಾನೇ ತಾನಾಯಿತು. ಪುಣ್ಯವಿಲ್ಲದ ಬಡವನು ಚಕ್ರವರ್ತಿಯ ಬಳಿಗೆ ಹೋಗಿ ಒಂದು ಹಿಡಿ ಕಾಳು ಕೇಳಿದಂತಾಯಿತಲ್ಲ" ಎಂದು ಬಲು ವಾಗಿ ಮರುಗಿದನು.

ಹೀಗೆ ಚಿಂತಿಸುತ್ತ ಮತ್ತೆ ರಾಜಧಾನಿಗೆ ಹಿಂತಿರುಗಿದ ಮಗನನ್ನು ರಾಜನು ಪರಮ ಪ್ರೇಮದಿಂದ ಸತ್ಕರಿಸಿದನು. ಕುಮಾರನು ತಾಯಿಯರಿಗೂ ತಂದೆಗೂ ಸಾಷ್ಟಾಂಗ ನಮಸ್ಕಾರ ಮಾಡಿ ಗೌರವಿಸಿ ಅವರ ಆಶೀರ್ವಾದವನ್ನು ಪಡೆದನು. ಎಲ್ಲರೂ ಸುನೀತಿಯು ಎಂತಹ ಪುಣ್ಯವಂತೆಯೆಂದು ಬಾಯಿತುಂಬಾ ಹೊಗಳಿದರು.

ಕೆಲವು ಕಾಲವಾದ ಮೇಲೆ ರಾಯನು ತನಗೆ ಮುದಿತನವು ಬಂದಿರುವುದನ್ನು ತಿಳಿದು, ಧ್ರುವನಿಗೆ ರಾಜ್ಯವನ್ನು ಒಪ್ಪಿಸಿ ತಾನು ತಪಸ್ಸಿಗಾಗಿ ಕಾಡಿಗೆ ಹೋದನು. ಧ್ರುವನು ಭ್ರಮಿ, ಇಳಾ ಎಂಬ ಇಬ್ಬರು ಹೆಂಡಿರನ್ನು ಮದುವೆಯಾಗಿ ಮೂವರು ಗಂಡು ಮಕ್ಕಳನ್ನೂ ಒಬ್ಬ ಮಗಳನ್ನೂ ಪಡೆದನು.

ಉತ್ತಮ ಕುಮಾರನು ಬೇಟೆಗೆಂದು ಹೋದವನು ಒಬ್ಬ ಯಕ್ಷನಿಗೆ ಬಲಿಯಾದನು. ಅದನ್ನು ಕೇಳಿ ಅವನ ತಾಯಿಯೂ ಪ್ರಾಣಬಿಟ್ಟಳು. ಸೋದರನ ಮರಣವನ್ನು ಕೇಳಿ, ರಥವನ್ನೇರಿಯಕ್ಷ

ರಾಜ್ಯವನ್ನು ಕುರಿತು ಹೊರಟನು. ಅಲ್ಲಿ ಯಕ್ಷರಿಗೂ ಧ್ರುವನಿಗೂ ಘೋರವಾದ ಯುದ್ಧವಾಯಿತು. ಆಗ ಬಲಿಷ್ಠನಾದ ಧ್ರುವನು ಯಕ್ಷರನ್ನು ಗುಂಪು ಗುಂಪಾಗಿ ಕೊಲ್ಲುತ್ತಿರುವುದನ್ನು ನೋಡಿ, ಆತನ ತಾತನಾದ ಮನು ಚಕ್ರವರ್ತಿಯು ಕನಿಕರಗೊಂಡು ಧ್ರುವನ ಬಳಿಗೆ ಬಂದನು. ಆತನನ್ನು ಕುರಿತು ಮನುವು "ಕುಮಾರ, ಈ ಅತಿ ಕೋಪವೇಕೆ ? ಒಬ್ಬನ ಅಪರಾಧಕ್ಕಾಗಿ ಕುಲವನ್ನೆಲ್ಲ ಕೊಲ್ಲುವುದು ನ್ಯಾಯವಲ್ಲ. ಎಲ್ಲರಲ್ಲಿಯೂ ಪ್ರೀತಿಯನ್ನಿಡುವುದು ಭಕ್ತನ ಕಾರ್ಯವು. ಹಾಗೆ ಮಾಡಿದವನಿಗೆ ಭಗವಂತನು ಒಲಿಯುವನು. ಎಲ್ಲವನ್ನೂ ಮಾಡುವವನು ಭಗವಂತನು ಎಂಬುದನ್ನು ಗಮನಿಸು. ಈ ಯಕ್ಷನು ನಿನ್ನ ತಮ್ಮನನ್ನು ಸಂಹರಿಸಿದವನಲ್ಲ. ಆಗುಹೋಗುಗಳಿಗೆಲ್ಲ ದೈವವೇ ಕಾರಣವು. ಆ ದೈವವು ಲೋಕವನ್ನೆಲ್ಲಾ ಮೂಗುದಾರ ಹಾಕಿದ ಎತ್ತುಗಳಂತೆ ಆಡಿಸುವುದು ಎಂಬುದನ್ನು ಮರೆಯಬೇಡ. ಆದರಿಂದ ಕೋಪವನ್ನು ನಿಗ್ರಹಿಸು: ಕೋಪವು ಪಾಪಿಯು. ಅವಕ್ಕೆ ವಿವೇಕಿಯು ಸಿಕ್ಕಬಾರದು. ಈಗ ನೀನು ಮಾಡಿರುವ ಯಕ್ಷರ ವಧೆಯು ಕುಬೇರ ನಿಗೆ ಆಗ್ರಹವನ್ನು ತಂದಿರುವುದು. ಮಹಾತ್ಮರ ಆಗ್ರಹದಿಂದ ಅಮಂಗಳವಾಗುವುದು. ಆದರಿಂದ ನೀನು ಈ ಕೋಪವನ್ನು ಬಿಟ್ಟು ಕುಬೇರನನ್ನು ಸೇವಿಸು'' ಎಂದು ಹೇಳಿದನು. ಧ್ರುವನೂ ಅವರಂತೆ ಮಾಡಿ ಕುಬೇರನ ಅನುಗ್ರಹವನ್ನು ಪಡೆದು ರಾಜಧಾನಿಗೆ ಹಿಂತಿರು ಗಿದನು.

ಈ ಧ್ರುವನ ಕಥೆಯನ್ನು ನಾರದರು ವೀಣೆಯನ್ನು ಬಾರಿಸಿ ಕೊಂಡು ಪ್ರಚೇತಸರ ಯಾಗದಲ್ಲಿ ಹೊಗಳಿದರು. ಈ ಚರಿತ್ರೆಯನ್ನು ಹೇಳಿದವರ ಕೇಳಿದವರ ಮನೋರಥಗಳೆಲ್ಲವೂ ಫಲಿಸುವುವು: ಅವರಿಗೆ ಭಗವದ್ಭಕ್ತಿಯುಂಟಾಗುವುದು. ಎಂದು ಮೈತ್ರೇಯನು ವಿದುರನಿಗೆ ಹೇಳಿದನು.

ಒಂಭತ್ತನೆಯ ಅಧ್ಯಾಯವು

# ಧ್ರುವ ವಂಶವು

ಧ್ರುವನ ಹಿರಿಯ ಮಗನಾದ ಉತ್ಕಲನು ಬ್ರಹ್ಮಜ್ಞಾನಿಯು: ಪರಮ ಭಕ್ತನು. ಆತನಿಗೆ ತಂದೆಯ ಸಿಂಹಾಸನವೂ ಬೇಕಾಗಲಿಲ್ಲ. ಆದರಿಂದ ಮಂತ್ರಿಗಳು ಆತನ ತಮ್ಮನಾದ ವತ್ಸರನಿಗೆ ಪಟ್ಟವನ್ನು ಕಟ್ಟಿದರು. ಆ ವಂಶದಲ್ಲಿ ಧ್ರುವನಿಂದ ಏಳನೆಯ ತಲೆಯಲ್ಲಿ ಉಲ್ಮುಕನೆಂಬ ರಾಜನು ಆದನು. ಅವನ ಮಗನು ಅಂಗನು. ಆತನು ಮೃತ್ಯುವಿನ ಪುತ್ರಿಯಾದ ಸುನೀಥಾ ಎಂಬುವಳನ್ನು ಮದುವೆಯಾದನು.

ಆತನು ಅಶ್ವಮೇಧವನ್ನು ಮಾಡಿದನು. ಆ ಯಾಗದಲ್ಲಿ ಹವಿಸ್ಸನ್ನು* ತೆಗೆದುಕೊಳ್ಳಲು ದೇವತೆಗಳು ಬರಲಿಲ್ಲ. ಅದನ್ನು ಕಂಡು ಯಾಗ ಮಾಡಿಸುತ್ತಿದ್ದ ಋತ್ವಿಜರಿಗೂ ಆಶ್ಚರ್ಯವಾಯಿತು: " ಅಯ್ಯಾ ರಾಜನೆ, ನೀನು ದೋಷವಿಲ್ಲದೆ ಶುದ್ಧವಾಗಿರುವ ಹವಿಸ್ಸನ್ನು ಮಂತ್ರ ಹೇಳಿ ಕೊಡುತ್ತಿರುವೆ ನಾವು ಲೋಪವಿಲ್ಲದಂತೆ ಸರಿಯಾಗಿ ಮಂತ್ರಗಳನ್ನು ಹೇಳುತ್ತಿರುವೆವು. ನಿನ್ನ ಶ್ರದ್ಧೆಯಲ್ಲಿಯೂ ಲೋಪವಿಲ್ಲ. ಹೀಗಾಗಲು ನೀನು ಪುತ್ರವಂತನಲ್ಲದಿರುವುದೇ ಕಾರಣವು. ನೀನು ಭಕ್ತಿಯಿಂದ ಭಗವಂತನನ್ನು ಆರಾಧಿಸು. ಭಗವಂತನು ನಿನಗೆ ತಪ್ಪದೆ ಪುತ್ರಫಲವನ್ನು ಕೊಡುವನು " ಎಂದು ಶ್ರೀಹರಿಯನ್ನು ಕುರಿತು ಒಂದು ಯಾಗವನ್ನು ಮಾಡಿದರು. ಆ ಯಾಗದ ಕೊನೆಯಲ್ಲಿ ಚಿನ್ನದ ಮಾಲೆಗಳನ್ನು ಧರಿಸಿದ ಪುರುಷನು ಚಿನ್ನದ ಪಾತ್ರೆಯಲ್ಲಿ ಪಾಯಸವನ್ನು ತಂದುಕೊಟ್ಟನು: ಅಂಗರಾಜನು ಅದನ್ನು ಸ್ವೀಕರಿಸಿ

---

*ಹವಿಸ್ಸು: ಯಾಗಗಳಲ್ಲಿ ದೇವತೆಗಳಿಗಾಗಿ ಕೊಡುವ ಪದಾರ್ಥಗಳಿಗೆ ಹವಿಸ್ಸು ಎಂದು ಹೆಸರು.

ಮೂಸಿ ನೋಡಿ ಹೆಂಡತಿಗೆ ಕೊಟ್ಟನು. ಆಕೆಯೂ ಭಕ್ತಿಯಿಂದ ಅದನ್ನು ಭೋಜನ ಮಾಡಿದಳು. ಕಾಲಕ್ರಮವಲ್ಲಿ ಆಕೆಗೆ ಪುತ್ರನು ಜನಿಸಿದನು. ಅವನೇ ವೇನನು.

ಆ ಮಗನು ತನ್ನ ತಾಯಿಯ ತಂದೆಯಾದ ಮೃತ್ಯುವನ್ನೇ ಹೋತುಕೊಂಡು ದುರ್ಮಾರ್ಗನಾದನು. ದುಷ್ಟನಾಗಿ, ಯಾವಾಗಲೂ ಬಿಲ್ಲು ಹಿಡಿದು ಬೇಟೆಯನ್ನು ಹುಡುಕುತ್ತಾ ವನಗಳಲ್ಲಿ ಅಲೆದನು: ಜನರನ್ನು ಗೋಳು ಹುಯ್ದುಕೊಳ್ಳುವನು. ಜೊತೆಯ ಆಟಗಾರರನ್ನೂ ಹಿಡಿದು ನಿರ್ದಯನಾಗಿ ಹೊಡೆದು ಕೊಲ್ಲುವನು. ತಂದೆಯು ಏನು ಮಾಡಿದರೂ ಮಗನನ್ನು ತಿದ್ದಲಾಗಲಿಲ್ಲ. ಅದರಿಂದ ಬಹು ದುಃಖಪಡುತ್ತಾ ಕೆಲವು ಕಾಲವಿದ್ದು ಮಗನನ್ನೂ ಮಡದಿಯನ್ನೂ ತೊರೆದು ಆತನು ಕಾಡಿಗೆ ಹೊರಟು ಹೋದನು. ಪ್ರಜೆಗಳಿಗೆ ಬೇಡದಿದ್ದ ವೇನನೇ ರಾಜನಾದನು.

ವೇನನಿಗೆ ತನ್ನನ್ನು ಬಿಟ್ಟರೆ ಇನ್ನು ಯಾರು ? ಎನ್ನಿಸಿತು. ಅಹಂಕಾರವು ತಾನೇ ತಾನಾಯಿತು. ಮದವೇರಿ, ಅಂಕುಶವನ್ನು ಕಾಣದ ಮದ್ದಾನೆಯಂತೆ, ಸೊಕ್ಕಿನಿಂದ ತನಗೆ ತೋರಿದಂತೆ ನಡೆದನು. "ಇನ್ನು ಮೇಲೆ ನನ್ನ ರಾಜ್ಯದಲ್ಲಿ ದೇವರ ಪೂಜೆ ಯಾಗ ಯಾವುದೂ ಕೂಡದು.'' ಎಂದು ಕಟ್ಟಪ್ಪಣೆ ಮಾಡಿದನು. ಹಾವಿಗೆ ಎರೆದ ಹಾಲು ವಿಷವಾಗುವಂತೆ, ಅವನಿಗೆ ಅಧಿಕಾರವು ಬಂದುದು ಲೋಕಕ್ಕೆ ಕಂಟಕವಾಯಿತು. ಪ್ರಜೆಗಳೆಲ್ಲರೂ ಗೋಳುಗುಟ್ಟಿ ಹೋದರು.

ಆಗ ದೂರು ಮಹರ್ಷಿಗಳವರೆಗೂ ಹೋಯಿತು. ಅವರೂ ಹೀಗಾಯಿತಲ್ಲ ಎಂದು ಸಂಕಟಪಟ್ಟು "ಇವನು ಹೀಗೆ ದುಷ್ಟನಾಗಿರಲು ಬಿಡಬಾರದು. ಅವನಿಗೆ ಬುದ್ಧಿ ಹೇಳುವುದು ನಮ್ಮ ಕರ್ತವ್ಯ. ಅದರ ಮೇಲೂ ಅವನು ತಿಳಿದುಕೊಳ್ಳದಿದ್ದರೆ ಆ ಅನ್ಯಾಯಗಾರನನ್ನು ನಮ್ಮ ತಪಸ್ಸಿನಿಂದ ಸುಟ್ಟುಬಿಡೋಣ" ಎಂದು ಮಹರ್ಷಿಗಳೆಲ್ಲರೂ

ಅವನ ಬಳಿಗೆ ಬಂದರು: "ಅಯ್ಯಾ, ರಾಜನೆ, ನಮ್ಮ ಮಾತನ್ನು ಲಾಲಿಸು. ನಿನಗೆ ಆಯುಸ್ಸು, ಐಶ್ವರ್ಯ, ಬಲ, ಕೀರ್ತಿಗಳು ಬೆಳೆಯುವುವು. ಧರ್ಮವನ್ನು ಮನಸ್ಸು ವಾಕ್ಕು ಕಾಯಗಳಿಂದ ಆಚರಿಸಿದರೆ ಅದು ಲೋಕಗಳಿಗೆಲ್ಲಾ ಬಂದಿರುವ ಶೋಕಗಳನ್ನು ತಪ್ಪಿಸುವುದು. ಧರ್ಮವನ್ನು ಬಿಟ್ಟವನು ಭಾಗ್ಯಹೀನನಾಗುವನು. ದುಷ್ಟರಾದ ಅಧಿಕಾರಿಗಳು ಕಳ್ಳಕಾಕರೂ ಹಿಂಸಿಸದಂತೆ ಪ್ರಜೆಗಳನ್ನು ಕಾಪಾಡುವ ಅರಸನು ತಾನೂ ಸುಖವಾಗಿರುವನು. ಅಂತಹ ರಾಜನಿಗೆ ಮಹಾವಿಷ್ಣುವು ಒಲಿಯುವನು. ಆತನು ಒಲಿದರೆ ನಿನಗೆ ಬೇಕಾದುದು ಲಭಿಸುವುದು" ಎಂದು ಬುದ್ಧಿಯನ್ನು ಹೇಳಿದರು.

ವೇನನು ಅವರ ಬುದ್ಧಿವಾದವನ್ನು ಕೇಳಲಿಲ್ಲ. "ನಾನೇ ದೇವರು. ನೀವು ಹೇಳುವ ಎಲ್ಲಾ ದೇವತೆಗಳೂ ನನ್ನಲ್ಲಿರುವರು. ಆದರಿಂದ ನೀವು ಏನು ಪೂಜೆ ಮಾಡಿದರೂ ಅದು ನನಗೇ ಸಲ್ಲಬೇಕು. ಬೇರೆ ದೇವರಿಲ್ಲ" ಎಂದು ಪಟ್ಟು ಹಿಡಿದನು. ಮಹರ್ಷಿಗಳೂ ಹೇಳುವವರೆಗೂ ಹೇಳಿ, ಅವರು ಏನು ಹೇಳಿದರೂ ಕೇಳದಿರಲು, ತಮ್ಮ ತಪೋಬಲದಿಂದ ಅವನನ್ನು ಕೊಂದರು: ಅವನ ತಾಯಿಯಾದ ಸುನೀಥೆಯು ಮಗನ ಮೇಲಣ ಮೋಹದಿಂದ ಅವನ ಶರೀರವನ್ನು ಕಾಪಾಡಿಕೊಂಡಿದ್ದಳು.

ರಾಜನಿಲ್ಲವಾಗುತ್ತಲೂ ರಾಜ್ಯದಲ್ಲಿ ಕಳ್ಳಕಾಕರು ಹೆಚ್ಚಿದರು. ಕೊಲೆ, ಕೊಳ್ಳೆ, ಪುಂಡಾಟಗಳು ತಾವೇತಾವಾದುವು. ಆಗ ಮಹರ್ಷಿಗಳು ಮತ್ತೆ ಸೇರಿ "ಈಗ ನಾವು ಸುಮ್ಮನಿದ್ದರೆ ನಮ್ಮ ತಪಸ್ಸೆಲ್ಲವೂ ಒಡೆದ ಮಡಕೆಯಲ್ಲಿಟ್ಟ ಹಾಲಿನಂತೆ ಪೋಲಾಗುವುದು'' ಎಂದು ಮತ್ತೆ ರಾಜನನ್ನು ಪಡೆಯಲು ಯತ್ನಿಸಿದರು. "ಅಂಗರಾಜನು ಮಹಾತ್ಮನು. ಆತನ ವಂಶವು ಕ್ಷಯವಾಗಬಾರದು'' ಎಂದು, ವೇನನ ಮೃತಶರೀರವನ್ನು ತರಿಸಿ, ಅದರ ತೊಡೆಯನ್ನು ಕಡೆದರು. ಆಗ ಆ ವೇನನ

ಪಾಪವೆಲ್ಲವೂ ಮನುಷ್ಯಾಕಾರದಿಂದ ಈಚೆಗೆ ಬಂತು. ವಿಕಾರರೂಪಿ ಯಾದ ಅವನನ್ನು ಅತ್ತ ನೂಕಿ ಮತ್ತೆ ತೋಳುಗಳನ್ನು ಕಡೆದರು. ಆಗ ಆ ತೋಳುಗಳಿಂದ ಅವಳಿ ಜವಳಿ ಮಕ್ಕಳು ಹುಟ್ಟಿದರು. ಅವರೇ ಪೃಥು, ಅರ್ಚಿಯರು. ಅವರಿಬ್ಬರೂ ಭಗವಂತನ ಅಂಶದಿಂದ ಹುಟ್ಟಿ ದವರು ಎಂದು ಮುನೀಂದ್ರರು ಬಹಳ ಸಂತೋಷಪಟ್ಟರು.

---

## ಹನ್ನೊಂದನೆಯ ಅಧ್ಯಾಯವು

# ಪೃಥುಚರಿತ್ರೆ

"ಪೃಥುವು ಮಹಾವಿಷ್ಣುವಿನ ಅಂಶದಿಂದ ಹುಟ್ಟಿದನು. ಅರ್ಚಿಯು ಮಹಾಲಕ್ಷ್ಮಿಯ ಅಂಶವು" ಎಂದು ಎಲ್ಲರೂ ಪೃಥುವನ್ನು ಕೊಂಡಾಡಿದರು. ಲೋಕಗಳೆಲ್ಲವೂ ಪೃಥುವಿನ ಜನನವಾದಾಗ ಸಂತೋಷಪಟ್ಟಿತು. ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಜಗದ್ಗುರು ವಾದ ಚತುರ್ಮುಖನು ಅಲ್ಲಿಗೆ ದೇವತೆಗಳು ಋಷಿಗಳು ಎಲ್ಲರನ್ನೂ ಕರೆದುಕೊಂಡು ಬಂದನು. ಅವರೆಲ್ಲರೂ ನೇರಿ ಆತನಿಗೆ ಪಟ್ಟಾಭಿ ಷೇಕವನ್ನು ಮಾಡಿದರು. "ಭಗವಂತನಾದ ಸೂರ್ಯನ ಕಿರಣಗಳು ಎಲ್ಲೆಲ್ಲಿ ಬೆಳಗುವುವೋ ಅಲ್ಲಲ್ಲಿ ಎಲ್ಲಾ ಈತನ ಆಜ್ಞೆಯು ನಡೆಯಲಿ" ಎಂದು ಎಲ್ಲರೂ ಹರಸಿದರು.

ಪೃಥುವು ರಾಜನಾಗುತ್ತಲೂ ದೇಶದ ಪ್ರಜೆಗಳೆಲ್ಲ ಆತನ ಬಳಿಗೆ ಬಂದರು: ಎಲ್ಲರೂ ದೀನರಾಗಿ ಕಣ್ಣಲ್ಲಿ ನೀರಿಟ್ಟುಕೊಂಡು ಅಳುತ್ತಿದ್ದರು: ರಾಜನು ಏನು ? ಎಂದು ವಿಚಾರಿಸಲು, ಅವರು, "ಅಯ್ಯಾ ಮಹಾರಾಜನೆ, ಹೊಟ್ಟೆಯಲ್ಲಿರುವ ಬೆಂಕಿಯು ಮರಗಳನ್ನು ಸುಡುವಂತೆ, ಹೊಟ್ಟೆಯ ಹಸಿವು ನಮ್ಮನ್ನು ತಿನ್ನುತ್ತಿರುವುದು.

ನನಗೆ ಅನ್ನವನ್ನು ಕೊಡು ಎಂದು ಮೊರೆಯಿಟ್ಟುಕೊಂಡರು. "ಏಕೆ ಹೀಗಾಯಿತು ?" ಎಂದು ಆತನು ವಿಚಾರಿಸಲು, ಭೂಮಿಯು ತನ್ನಲ್ಲಿ ಬಿತ್ತಿದ ಬೀಜಗಳನ್ನೆಲ್ಲ ತಿಂದುಬಿಟ್ಟಳು ಎಂದು ತಿಳಿಯಿತು. ಕೂಡಲೇ ಆ ರಾಜನು ಬಿಲ್ಲು ಬಾಣಗಳನ್ನು ಧರಿಸಿ ಭೂಮಿಯನ್ನೇ ಧ್ವಂಸ ಮಾಡುವೆನೆಂದು ಹೊರಟನು. ಅದನ್ನು ಕಂಡು ಭೂದೇವಿಯು ಗೋರೂಪಧರಳಾಗಿ ಓಡಿಹೋದಳು. ಪೃಥುವು ಅವಳನ್ನು ಓಡಿಸಿಕೊಂಡು ಹೋದನು.

ಭೂದೇವಿಯು ದಿಕ್ಕುದಿಕ್ಕುಗಳಿಗೆ ಹೋದರೂ ಅಂತರಿಕ್ಷವನ್ನು ಏರಿದರೂ ಪೃಥುವು ಬಿಡಲಿಲ್ಲ. ಎಲ್ಲಿ ಹೋದರೂ ಬರುತ್ತಿರುವ ಆ ದೊರೆಯನ್ನು ಕಂಡು, ಆತನಿಂದ ತಪ್ಪಿಸಿಕೊಳ್ಳಲು ಅಸಾಧ್ಯವೆಂಬುದನ್ನು ತಿಳಿದು ಆತನಿಗೇ ಶರಣು ಹೋದಳು: "ಅಯ್ಯಾ ಮಹಾನುಭಾವನೆ, ನೀನು ಧರ್ಮವನ್ನು ಬಲ್ಲವನು. ಯಾರಿಗೇ ಆಗಲಿ ಆಪತ್ತು ಬಂದರೆ ಕಾಪಾಡುವವನು. ಎಲ್ಲರನ್ನೂ ಕಾಪಾಡುವುದಕ್ಕೆಂದು ಹುಟ್ಟಿರುವ ನೀನು ನನ್ನನ್ನೂ ಕಾಪಾಡು. ನಾನು ಸ್ತ್ರೀಯು. ಸಾಲದೆ ನಿನ್ನ ಮರೆಹೊಕ್ಕಿರುವೆನು. ಅದರಿಂದ ನನ್ನನ್ನು ಬಾಧಿಸಬಾರದು. ಅಲ್ಲದೆ ಪ್ರಪಂಚವನ್ನೆಲ್ಲ ಧರಿಸಿ ದೃಢವಾದ ಹಡಗಿನಂತೆ ಜಲದ ಮೇಲೆ ನಿಂತಿರುವ ನನ್ನನ್ನು ನಾಶಮಾಡಿದರೆ, ನೀನೂ ನಿನ್ನ ಪ್ರಜೆಗಳನ್ನು ನೀರಿನ ಮೇಲೆ ಹೇಗೆ ಇಡುವೆ?" ಎಂದು ಕೇಳಿಕೊಳ್ಳಲು ಪೃಥುವು ಹೇಳಿದನು:

"ಎಲೌ ಭೂದೇವಿಯೆ, ನಾನು ಪಾಲಕನು: ನನ್ನ ಅಪ್ಪಣೆಯನ್ನು ಮೀರಿರುವೆ. ಇದು ಮೊದಲನೆಯ ಅಪರಾಧವು. ನಿನಗಾಗಿ ಯಜ್ಞ ಮಾಡಿ ಹವಿರ್ಭಾಗವನ್ನು ಕೊಟ್ಟಿದ್ದರೂ ಪ್ರಜೆಗಳಿಗೆ ಬೇಕಾದ ಧಾನ್ಯಾದಿಗಳು ಬೆಳೆಯಿಸದೆ ಅದನ್ನು ತಿಂದು ಜನಕ್ಕೆ ಅನ್ನವಿಲ್ಲದಂತೆ ಮಾಡಿರುವೆ. ಇದು ಎರಡನೆಯ ಅಪರಾಧವು. ನಾನು ಗೋರೂಪ,

ದಿಂದ ಇರುವೆನು ಎನ್ನುವೆಯೇನೋ? ಹಾಕಿದ ಹುಲ್ಲನ್ನೆಲ್ಲ ತಿಂದು ಹಾಲು ಕರೆಯದೆ ವಂಚನೆ ಮಾಡುವ ಹಸುವನ್ನು ದಂಡಿಸುವುದು ಪಾಪವಲ್ಲ. ಅದರಿಂದ ನಿನ್ನನ್ನು ಕೊಂದು ನಿನ್ನನ್ನು ನನ್ನ ಪ್ರಜೆಗಳಿಗೆ ಬಡಿಸುವೆನು. ಪ್ರಾಣಿಗಳಲ್ಲಿ ದಯೆಯನ್ನು ತೋರಿಸದೆ, ತಾವೇ ಹೆಚ್ಚಿಂದುಕೊಳ್ಳುವ ಅಧಮರು ಗಂಡಾಗಲಿ, ಹೆಣ್ಣಾಗಲಿ, ಅವರನ್ನು ವಧಿಸಲೇಬೇಕು. ಅಂತಹವರನ್ನು ಕೊಂದರೂ ಪಾಪ ಬರುವು ದಿಲ್ಲ. ಇನ್ನು ನಿನ್ನ ಪ್ರಜೆಗಳು ಎಲ್ಲಿ ನಿಲ್ಲುವರು ಎಂದೆ. ನಾನೇ ಯೋಗ ಬಲದಿಂದ ಅವರನ್ನು ಧರಿಸುವೆನು." ಎಂದು ಪ್ರಳಯಕಾಲದ ಯಮನಂತೆ ರೇಗಿರುವ ಆತನಿಗೆ ಭೂದೇವಿಯು ನಮಸ್ಕಾರ ಮಾಡಿ ಕೈ ಮುಗಿದುಕೊಂಡು ಕೇಳಿಕೊಂಡಳು.

"ಎಲೈ ಪುರುಷೋತ್ತಮನೆ, ನೀನೇ ಅನೇಕ ರೂಪಗಳನ್ನು ಧರಿಸಿರುವೆ. ಪ್ರತಿಯೊಂದು ದೇಹದಲ್ಲಿಯೂ ಇರುವೆ. ನನ್ನನ್ನು ಹೀಗೆ ಎಲ್ಲರಿಗೂ ಆಧಾರವಾಗಿರು ಎಂದು ಗೊತ್ತು ಮಾಡಿದ ಪರಮೇಶ್ವರನೇ ಈ ರೂಪವಾಗಿ ನನ್ನನ್ನು ಸಂಹರಿಸಲು ಬಂದಿರುವೆ. ನೀನು ಕೊಲ್ಲಬಲ್ಲೆ ನಿಜ. ಆದರೂ ನೀನು ಕೊಲ್ಲಬಹುದೆ? ನೀನು ಜಗತ್ಕಾರಣನಾದ ಜಗನ್ನಾಥನು. ಹಿಂದೆ ನಾನು ನೀರಿನಲ್ಲಿ ಮುಳುಗಿ ಹೋದಾಗ ವರಾಹನಾಗಿ ಮೇಲಕ್ಕೆ ಎತ್ತಿದ ನೀನು ಈಗ ಧನುರ್ಬಾಣಧರನಾಗಿ ಕೊಲ್ಲಲು ಬಂದಿರುವೆ. ಇನ್ನು ಕೋಪವನ್ನು ಬಿಡು. ನನಗೆ ಅಭಯವನ್ನು ಕೊಡು. ಈ ಲೋಕದಲ್ಲಿ ಶ್ರೇಯಸ್ಸಿಗೆ ಎಷ್ಟೋ ದಾರಿಗಳಿರುವುವು. ಅವುಗಳನ್ನು ಅವಲಂಬಿಸಿದ ವನು ತಪ್ಪದೆ ಉದ್ಧಾರವಾಗುವನು. ಹಾಗಿಲ್ಲದೆ ತನಗೆ ತೋರಿದಂತೆ ಮಾಡುವವನು ಅಡ್ಡಿಗಳಿಂದ ಕೆಡುವನು. *ದುಷ್ಟರೂ ವ್ರತಗಳನ್ನು

---

*ಭೂಮಿಯಲ್ಲಿ ಇರುವ ಎಲ್ಲವೂ ದೇವತೆಗಳು ಕೊಟ್ಟುದು. ಅವರು ಕೊಟ್ಟುದನ್ನು ಅವರಿಗೆ ಕೊಡದೆ ತಿನ್ನುವವನು ಕಳ್ಳನು—ಗೀತಾ.

ಮಾಡದವರೂ ಆದ ಕಳ್ಳರು ಧಾನ್ಯಗಳನ್ನು ತಿಂದು ಹಾಕುವುದನ್ನು ನೋಡಿ "ಯಜ್ಞಕ್ಕೆ ಕೂಡ ಧಾನ್ಯವಿಲ್ಲದಾಗುವುದಿಲ್ಲವಲ್ಲ" ಎಂದು ನಾನು ತಿಂದು ಹಾಕಿದೆನು. ಈಗ ಗೋರೂಪದಿಂದ ಇರುವ ನನ್ನನ್ನು ಕಾಪಾಡು. ನನಗೊಂದು ಕರುವನ್ನು ಮಾಡು. ಕರೆಯುವುದಕ್ಕೆ ಒಂದು ಪಾತ್ರೆಯನ್ನು ಮಾಡಿಕೊಂಡು ಬೇಕಾದುದನ್ನು ಕರೆದುಕೊ: ನೆಲವೆಲ್ಲವೂ ಹಳ್ಳತಿಟ್ಟಾಗಿ ಮಳೆಯಿಂದ ಬಂದ ನೀರು ನಿಲ್ಲದೆ ಹೋಗುತ್ತಿರುವುದು. ಅದನ್ನು ತಡೆದು ನಿಲ್ಲಿಸುವ ಉಪಾಯ ಮಾಡು. ಮೊದಲಿನಂತೆ ಲೋಕವೆಲ್ಲವೂ ಅನ್ನದಿಂದ ತುಂಬುವುದು." ಎಂದಳು.

ಪೃಥುವು ಒಪ್ಪಿ ತನ್ನ ವಂಶಕ್ಕೆ ಮೊದಲಿಗನಾದ ಮನುವನ್ನು ಕರುವನ್ನಾಗಿ ಮಾಡಿ, ತಾನೇ ನಿಂತು ತನ್ನ ಪ್ರಜೆಗಳಿಗೆ ಬೇಕಾದ ಧಾನ್ಯಾದಿಗಳನ್ನೆಲ್ಲ ಕರೆದನು. ಮಹರ್ಷಿಗಳು, ದೇವತೆಗಳು, ದೈತ್ಯದಾನವರು, ಗಂಧರ್ವರು, ಅಪ್ಸರರ, ಪಿತೃದೇವತೆಗಳು, ಸಿದ್ಧರು, ವಿದ್ಯಾಧರರು, ಮೊದಲಾದವರೆಲ್ಲರೂ ತಮ್ಮ ತಮ್ಮಲ್ಲಿ ಮುಖ್ಯರಾದವರನ್ನು ಕರುವಾಗಿ ಮಾಡಿಕೊಂಡು ಆಕೆಯಿಂದ ಬೇಕುಬೇಕಾದುದನ್ನೆಲ್ಲ ಕರೆದುಕೊಂಡರು.

ಹೀಗೆ ಸೌಮ್ಯಳಾಗಿ ಎಲ್ಲರನ್ನೂ ಅನುಗ್ರಹಿಸಿದ ಭೂದೇವಿಯನ್ನು ಗೌರವಿಸಿ ತನ್ನ ಮಗಳನ್ನಾಗಿ ಮಾಡಿಕೊಂಡನು. ಅನಂತರ ತನ್ನ ಪ್ರಜೆಗಳನ್ನೆಲ್ಲ ಅವರವರಿಗೆ ತಕ್ಕಂತೆ ಗ್ರಾಮ, ನಗರ, ಮೊದಲಾದುವುಗಳನ್ನು ಕಟ್ಟಿ ಅಲ್ಲಲ್ಲಿ ಅವರನ್ನು ನಿಲ್ಲಿಸಿದನು. ಅದುವರೆಗೆ ಈ ಭೂಮಂಡಲವಲ್ಲಿ ಪುರಗ್ರಾಮ ಮೊದಲಾದುವು ಇರಲಿಲ್ಲ.*

* "ಹಲವು ಮಂದಿಯಿರುವ ಊರಿಗೆ ಗ್ರಾಮವೆಂತಲೂ, ನದೀ ಸಮುದ್ರಗಳ, ಸಂಗಮ ಸ್ಥಾನದಲ್ಲಿದ್ದು ಯವನರು ವಾಸವಾಗಿರುವುದಕ್ಕೆ ಪಟ್ಟಣವೆಂತಲೂ ವೈಶ್ಯರಿರುವ ಸ್ಥಾನಕ್ಕೆ ನಗರವೆಂತಲೂ ಬೇಡರ ಊರಿಗೆ ಖೇಟವೆಂತಲೂ ಸಂತೆಗಳು ಜವಳಿ ಅಂಗಡಿಗಳು ಇರುವ ಸ್ಥಾನಕ್ಕೆ ಖರ್ವಟವೆ ದೂಹೆಸರು.

ಪೃಥು ಮಹಾರಾಜನು ನೂರು ಅಶ್ವಮೇಧಗಳನ್ನು ಮಾಡಬೇಕೆಂದು ದೀಕ್ಷೆಯನ್ನು ವಹಿಸಿದನು. ತೊಂಭತ್ತೊಂಭತ್ತು ಅಶ್ವಮೇಧಗಳು ನಿರ್ವಿಘ್ನವಾಗಿ ಆದುವು. ಸರಸ್ವತೀ ನದಿಯು ಪೂರ್ವ ದಿಕ್ಕಿಗೆ ಪ್ರವಹಿಸುವ ಭೂಮಿಗೆ ಸುಕ್ಷೇತ್ರವೆಂದು ಹೆಸರು. ಗಂಗಾ ಯಮುನಾಗಳ ನಡುವಿನ ಬ್ರಹ್ಮಾವರ್ತವಲ್ಲಿ ಅದಿರುವುದು. ಅಲ್ಲಿ ನೂರನೆಯ ಯಾಗವನ್ನು ಮಾಡಬೇಕೆಂದು ಮನಸ್ಸು ಮಾಡಿ ಅಲ್ಲಿ ಯಾಗವನ್ನು ಆರಂಭಿಸಿದನು.

ಆ ಮಹಾರಾಜನ ಯಜ್ಞಕ್ಕೆ ಮಹಾವಿಷ್ಣುವು ದೇವತೆಗಳೆಲ್ಲರನ್ನೂ ಕರೆದುಕೊಂಡು ಬಂದನು. ಕಪಿಲ, ನಾರದ, ದತ್ತಾತ್ರೇಯ, ಸನಕಾದಿಗಳೂ ಬಂದರು. ಭೂಮಿಯು ಕಾಮಧೇನುವಾಗಿ ಬಂದು ನಿಂತು ಆ ಮಹಾರಾಜನು ಏನು ಬೇಕು ಎಂದರೆ ಅದನ್ನು ಕೊಟ್ಟಳು. ನದಿಗಳು ಹಾಲು ಮೊಸರು ಮೊದಲಾದ ಸರ್ವರಸಗಳನ್ನೂ ಹೊತ್ತು ತಂದುವು. ಗಿಡಮರಗಳು ರಸವನ್ನು ಸುರಿಯುವ ಹಣ್ಣುಗಳನ್ನು ಕೊಟ್ಟುವು. ಸಮುದ್ರಗಳು ರತ್ನರಾಶಿಗಳನ್ನು ತಂದು ಒಪ್ಪಿಸಿದುವು. ಬೆಟ್ಟಗಳು ಭಕ್ಷ್ಯ ಭೋಜ್ಯಲೇಹ್ಯ ಚೋಷ್ಯ*ಗಳೆಂಬ ಚತುರ್ವಿಧಾನ್ನಗಳನ್ನು ನೀಡಿದುವು.

ಹೀಗೆ ಮಹಾವಿಷ್ಣುವಿನ ಅಂಶದಿಂದ ಜನಿಸಿದವನೂ ಮಹಾವಿಷ್ಣುವಿನ ಪರಮ ಭಕ್ತನೂ ಆದ ಆ ಪೃಥು ಚಕ್ರವರ್ತಿಯ ಯಾಗವು ಮಹಾವೈಭವದಿಂದ ನಡೆಯಿತು. ಅದನ್ನು ಕಂಡು ದೇವೇಂದ್ರನಿಗೆ ಸಂಕಟವಾಯಿತು. ಏನಾದರೂ ಮಾಡಿ ಈ ಯಾಗಕ್ಕೆ ವಿಘ್ನವನ್ನು ಉಂಟು ಮಾಡಬೇಕೆಂದುಕೊಂಡನು. "ಅಶ್ವಮೇಧವೆಂದರೆ ಕುದು

---

*** ಅಗಿದು ತಿನ್ನುವ ಚಕ್ಕುಲಿ ಮೊದಲಾದವು ಭಕ್ಷ್ಯಗಳು: ಮೃದುವಾದ ಅನ್ನ ಮೊದಲಾದವು ಭೋಜ್ಯಗಳು: ನಾಲಗೆಯಿಂದ ನೆಕ್ಕಿಕೊಳ್ಳುವವು ಲೇಹ್ಯವು: ಕುಡಿಯುವ ಪಾನಕ ಮೊದಲಾದವು ಚೋಷ್ಯವು.**

ರೆಯ ಯಾಗ. ಆ ಯಾಗಕ್ಕೆ ಕುದುರೆಯು ಬಹಳ ಮುಖ್ಯವಾದುದು. ಅದರಿಂದ ಆ ಕುದುರೆಯೇ ಇಲ್ಲದಂತೆ ಮಾಡಿ ಯಾಗಕ್ಕೆ ವಿಘ್ನವನ್ನು ಉಂಟು ಮಾಡುವೆನು, ಎಂದು ಯೋಚಿಸಿಕೊಂಡು ಇಂದ್ರನು ಕುದುರೆಯನ್ನು ಕದ್ದನು. ಆ ಕುದುರೆಯ ಕಳ್ಳನನ್ನು ಅತ್ರಿ ಮಹಾ ಮುನಿಯು ಹಿಡಿದನು. ಆತನು ಪೃಥುವಿನ ಮಗನಿಗೆ ಅದನ್ನು ತೋರಿಸಿದನು. ಆತನು ಹೋಗಿ ನೋಡಲು ಇಂದ್ರನು ಜಟಾಭಸ್ಮ ಗಳನ್ನು ಧರಿಸಿಕೊಂಡು ನಿಂತನು. ಅದನ್ನು ಕಂಡು ಪೃಥು ಕುಮಾ ರನು ಅವನನ್ನು ಕೊಲ್ಲದೆ ಕುದುರೆಯನ್ನು ತೆಗೆದುಕೊಂಡು ಬಂದನು. ಹೀಗೆ ಇಂದ್ರನಿಂದ ಕುದುರೆಯನ್ನು ಗೆದ್ದವನೆಂದು ಆತನಿಗೆ ವಿಜಿತಾಶ್ವ ಎಂದು ಹೆಸರಾಯಿತು.

ಇಂದ್ರನು ಮತ್ತೆ ಘೋರವಾದ ಕಗ್ಗತ್ತಲೆಯನ್ನು ಸೃಷ್ಟಿ ಮಾಡಿ ಯೂಪಸ್ತಂಭಕ್ಕೆ ಚಿನ್ನದ ಸರಪಳಿಯಿಂದ ಕಟ್ಟಿ ಹಾಕಿದ್ದ ಕುದುರೆ ಯನ್ನು ಹಾರಿಸಿಕೊಂಡು ಹೋದನು. ಮತ್ತೆ ಅತ್ರಿಯು ವಿಜಿತಾಶ್ವ ನಿಗೆ ಅದನ್ನು ತೋರಿಸಿ, ಕಾಪಾಲಿಕನಂತೆ ರುಂಡಮಾಲೆಯನ್ನು ಧರಿಸಿರುವ ಆ ಕುದುರೆಗಳ್ಳನು ಇಂದ್ರನು ಎನ್ನಲು, ರಾಜಕುಮಾರನು ತೀವ್ರವಾದ ಬಾಣವನ್ನು ಪ್ರಯೋಗಿಸಿದನು. ಇಂದ್ರನು ಆ ವೇಷ ವನ್ನೂ ಕುದುರೆಯನ್ನೂ ಬಿಟ್ಟು ಓಡಿಹೋದನು.

ಇಂದ್ರನು ಹೀಗೆಯೇ ಅನೇಕ ವೇಷಗಳನ್ನು ಧರಿಸಿ ಬಂದರೂ ಕುದುರೆಯನ್ನು ಕದಿಯಲು ಆಗಲಿಲ್ಲ. ಆ ಇಂದ್ರನು ಧರಿಸಿದ್ದ ವೇಷಗಳನ್ನು ನೋಡಿ ಜನರು, ಅದರಂತೆಯೇ ವೇಷಗಳನ್ನು ಧರಿಸಿ ಅಧರ್ಮ ಮಾರ್ಗವನ್ನು ಹಿಡಿದರು. ಅದನ್ನು ಕಂಡು ಹೀಗೆ ದಾರಿ ತಪ್ಪಿಸಿದ ಇವನನ್ನು ಕೊಲ್ಲುವೆನೆಂದು ಪೃಥುವು ಬಿಲ್ಲೆತ್ತಿಕೊಂಡನು. ಆತನ ಯಜ್ಞ ಮಾಡಿಸುವುದಕ್ಕೆ ಬಂದಿದ್ದ ಋತ್ವಿಜರು “ ಅಯ್ಯಾ, ನೀನು ಧರ್ಮವನ್ನು ಬಲ್ಲವನು. ಇದು ಇಂದ್ರನನ್ನು ಕೊಲ್ಲುವ

ಸಮಯವಲ್ಲ. ನೀನು ಮಾಡುವ ಕೆಲಸವನ್ನು ನಾವು ಮಾಡುವೆವು. ಯಜ್ಞಕ್ಕೆ ವಿಘ್ನವನ್ನು ಆಚರಿಸಿದ ಆ ಇಂದ್ರನು ಅಗ್ನಿಯ ಪಾಲಾಗುವನು" ಎಂದು ಅವರು ಆರಂಭಿಸಿದರು. ಆಗ ಚತುರ್ಮುಖ ಬ್ರಹ್ಮನು ಬಂದು ಇಂದ್ರನನ್ನು ಕೊಲ್ಲಬಾರದು ಎಂದು ಅವರನ್ನು ತಡೆದನು: ಪೃಥುವನ್ನು ಕುರಿತು "ಅಯ್ಯಾ, ನೀನೂ ಇಂದ್ರನೂ ಇಬ್ಬರೂ ಭಗವಂತನ ಅಂಶಗಳು. ಈ ಯಾಗವು ಪೂರ್ಣವಾಗುವುದು ದೇವತೆಗಳಿಗೆ ಬೇಡ. ಅದರಿಂದ ಇದನ್ನು ನಿಲ್ಲಿಸು" ಎಂದು ಹೇಳಿ ಇಬ್ಬರಿಗೂ ಸಖ್ಯವನ್ನು ಮಾಡಿಸಿದನು. ಆಗ ಮಹಾವಿಷ್ಣುವೂ ಪ್ರಸನ್ನನಾಗಿ ಆತನಿಗೆ ಬೇಕಾದ ವರಗಳನ್ನು ಕೊಟ್ಟನು. ಪೃಥುವು ಮಹಾವಿಷ್ಣುವನ್ನು ಬೇಕುಬೇಕಾದ ಹಾಗೆ ಪೂಜಿಸಿದನು: "ಎಲೈ ಪುರುಷೋತ್ತಮನೆ, ಮಿಕ್ಕ ವರಗಳೆಲ್ಲ ಇರಲಿ, ನಿನ್ನ ಚರಣಕಮಲಗಳ ಮಕರಂದವಿಲ್ಲದಿರುವ ಏನೂ ನನಗೆ ಬೇಡ. ಮಹಾತ್ಮರು ಹೊಗಳುವ ನಿನ್ನ ದಿವ್ಯ ಕಥೆಯನ್ನು ಯಾವಾಗಲೂ ಕೇಳುತ್ತಿರುವಂತೆ ನನಗೆ ಹತ್ತು ಸಾವಿರ ಕಿವಿಗಳನ್ನು ಕೊಡು" ಎಂದು ಪ್ರಾರ್ಥಿಸಿದನು. ಜಗನ್ನಾಥನು ಹಾಗೆಯೇ ಆಗಲೆಂದು ಅನುಗ್ರಹ ಮಾಡಿ ವೈಕುಂಠಕ್ಕೆ ದಯಮಾಡಿಸಿದನು. ಮಿಕ್ಕವರೂ ತಮ್ಮ ತಮ್ಮ ಲೋಕಗಳಿಗೆ ಹೋದರು.

ಪೃಥುವು ಒಮ್ಮೆ ಸತ್ರಯಾಗವನ್ನು ಮಾಡಿದನು. ದೇಶದ ಪ್ರಜೆಗಳೆಲ್ಲರೂ ಅಲ್ಲಿಗೆ ಬಂದಿದ್ದರು. ಅವರನ್ನೆಲ್ಲ ಕುರಿತು ಆತನು ಹೀಗೆ ಹೇಳಿದನು: "ತಿಳಿಯಬೇಕು ಎನ್ನುವವರು ತಾವು ಧರ್ಮವೆಂದು ಕೊಂಡಿರುವುದನ್ನು ಸತ್ಪುರುಷರಲ್ಲಿ ಬಿನ್ನವಿಸಬೇಕು. ಪ್ರಜೆಗಳನ್ನು ಯಥೋಚಿತವಾಗಿ ಶಿಕ್ಷಾರಕ್ಷೆಗಳಿಂದ ಸಲಹುವುದಕ್ಕೂ ಅವರಿಗೆ ಜೀವಿಕೆ*ಯನ್ನು ಕಲ್ಪಿಸುವುದಕ್ಕೂ ನಾನು ಇರುವುದು. ರಾಜನು

*ಜೀವಿಕೆ: ಮಾನವಾಗಿ ಬದುಕುವುದಕ್ಕೆ ಬೇಕಾದ ಮಾರ್ಗ.

ಪ್ರಜೆಗಳನ್ನು ಧರ್ಮದಲ್ಲಿ ಕಾಪಾಡದೆ ಅವರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡರೆ ಅವನು ಅವರಿಗೆ ತನ್ನ ಪುಣ್ಯವನ್ನು ಕೊಟ್ಟು ಅವರ ಪಾಪಗಳನ್ನು ತೆಗೆದುಕೊಳ್ಳುವನು. ಆದರಿಂದ ನೀವು ನಿಮ್ಮ ನಿಮ್ಮ ಕಾರ್ಯಗಳನ್ನು ಮಾಡಿಕೊಂಡು, ಭಗವದ್ಭಕ್ತರಾಗಿ ಬಾಳುವುದೇ ನೀವು ನನಗೆ ಮಾಡಬೇಕಾದ ಅನುಗ್ರಹವು. ಧರ್ಮವನ್ನು ಮಾಡಿದವನಿಗೂ, ಧರ್ಮವನ್ನು ಮಾಡು ಎಂದು ಹೇಳಿದವನಿಗೂ ಧರ್ಮವನ್ನು ಮಾಡು ವುದು ಸರಿ ಎಂದವನಿಗೂ ಸಹ ಸಮಾನವಾದ ಫಲವು ದೊರೆಯು ವುದು." ಎಂದು ಹೇಳಿದನು. ಅದನ್ನು ಕೇಳಿದ ಮಹಾತ್ಮರೆಲ್ಲರೂ "ಸತ್ಪುತ್ರನಿಂದ ತಂದೆಯು ಉದ್ಧಾರವಾಗುವನು ಎಂಬ ವೇದ ವಾಕ್ಯವು ನಿಜವಾಯಿತು. ಮಹಾಪಾಪಿಯಾದ ವೇನನೂ ಪೃಥು ಮಹಾರಾಜನಿಂದ ಉದ್ಧಾರವಾದನು'' ಎಂದು ಹೊಗಳಿದರು.

ಹೀಗೆ ಜನಗಳು ಆ ಮಹಾರಾಜನನ್ನು ಕೊಂಡಾಡುತ್ತಿರುವಾಗ ಅಲ್ಲಿಗೆ ಸೂರ್ಯನಂತೆ ತೇಜಸ್ವಿಗಳಾದ ನಾಲ್ವರು ಮುನೀಂದ್ರರು ದಯ ಮಾಡಿಸಿದರು. ಅವರನ್ನು ಅವರ ವರ್ಚಸ್ಸೇ ಇವರು ಸನಕಾದಿಗಳು ಎಂದು ಹೇಳುವಂತಿತ್ತು. ಮಹಾರಾಜನು ಅವರನ್ನು ಆದರದಿಂದ ಬರಮಾಡಿಕೊಂಡು ಶಾಸ್ತ್ರದಲ್ಲಿ ಹೇಳಿರುವಂತೆ ಅವರಿಗೆ ಪೂಜೆಯನ್ನು ಸಮರ್ಪಿಸಿ, ಅವರ ಪಾದೋದಕವನ್ನು ತಲೆಯ ಮೇಲೆ ಪ್ರೋಕ್ಷಿಸಿ ಕೊಂಡು, ಅಗ್ನಿಯಂತೆ ಬೆಳಗುತ್ತಿರುವ ಅವರನ್ನು ಚಿನ್ನದ ಪೀಠಗಳಲ್ಲಿ ಕುಳ್ಳಿರಿಸಿ, ಪರಶಿವನಿಗಿಂತಲೂ ಹಿರಿಯರಾದ ಅವರನ್ನು ಗೌರವಿಸಿದನು: ಮತ್ತೆ ಭಕ್ತಿಯಿಂದ "ಎಲೈ, ಮಂಗಳಾತ್ಮರೆ, ತಮ್ಮ ದರ್ಶನವಾದ ಮೇಲೆ ಯಾವುದು ತಾನೇ ದುರ್ಲಭವಾಗುವುದು ? ತಮ್ಮಂತಹವರು ಯಾರ ಮನೆಗೆ ಬಿಜಮಾಡುವರೋ ಆ ಸಂಸಾರಿಗಳೇ ಧನ್ಯರು. ತಾವು ದಯಮಾಡಿ ಈ ಸಂಸಾರದಲ್ಲಿ ಏನು ಮಾಡಿದರೆ ಶೀಘ್ರವಾಗಿ

ಕ್ಷೇಮವು ಲಭಿಸುವುದು ಎಂದು ಅಪ್ಪಣೆ ಕೊಡಬೇಕು" ಎಂದು ಕೇಳಿಕೊಂಡನು.

ಸನಕಾದಿಗಳು ಆತನನ್ನು ಮೆಚ್ಚಿಕೊಂಡು ಹೇಳಿದರು: "ಚಕ್ರವರ್ತಿ, ನೀನು ಪಂಡಿತನು. ಆದರೂ ಲೋಕಕ್ಕೆ ಒಳ್ಳೆಯದಾಗಲೆಂದು ಹೀಗೆ ಹೇಳುತ್ತಿರುವೆ. ಸಾಧುಗಳು ಯಾವಾಗಲೂ ಹೀಗೆ ಪರೋಪಕಾರವನ್ನೇ ಗುರಿಯಾಗಿಟ್ಟುಕೊಂಡಿರುವರು. ಮಹಾವಿಷ್ಣು ಭಕ್ತನಾದ ನೀನು ಕೇಳಿದೆಯೆಂದು ಸಂತೋಷದಿಂದ ಹೇಳುವೆವು ಕೇಳು. ಸಕಲ ಶಾಸ್ತ್ರಗಳ ಸಾರವೂ ಆದ ಮಾತು ಇದು. ಸರ್ವವ್ಯಾಪಕನಾಗಿ ಎಲ್ಲೆಲ್ಲೂ ತುಂಬಿರುವ ವಾಸುದೇವನಲ್ಲಿ ಭಕ್ತಿಯೊಂದು: ದೇಹ ಮೊದಲಾದುವುಗಳಲ್ಲಿ ವೈರಾಗ್ಯವೊಂದು. ಈ ಭಕ್ತಿ ವೈರಾಗ್ಯಗಳು ಸುಲಭವಲ್ಲ. ಶ್ರದ್ಧೆಯಿಂದ ತಪಸ್ಸು ಮಾಡುತ್ತ ಭಗವಂತನ ಚಿಂತೆಯಲ್ಲಿ ಇರುವವರಿಗೆ ಮಾತ್ರ ಸಾಧ್ಯವು. ಯಾವ ಪ್ರಾಣಿಯನ್ನು ನೋಯಿಸದೆ, ಯಾರನ್ನೂ ದೂಷಿಸದೆ, ನಿಯಮದಿಂದ ಇರುವವರಿಗೆ ಮಾತ್ರ ಭಕ್ತಿಯು ಲಭಿಸುವುದು. ಮನಸ್ಸು ಇರುವವರೆಗೆ ಲೋಕವೆಲ್ಲವೂ ಬೇರೆಬೇರೆಯಾಗಿ ಕಾಣಿಸುವುದು. ಮನಸ್ಸನ್ನು ವಿಚಾರಿಸಿದರೆ ಎಲ್ಲೆಲ್ಲೂ ಪರಮಾತ್ಮನೇ ಕಾಣುವನು. ಪರಮಾತ್ಮನಾದ ವಾಸುದೇವನು ಭಕ್ತಿಪ್ರಿಯನು. ಅದರಿಂದ ವಾಸುದೇವನನ್ನು ಮರೆಹೋಗುವುದೇ ಎಲ್ಲರಿಗೂ ಕ್ಷೇಮವು" ಎಂದು ವಿಸ್ತಾರವಾಗಿ ಬೋಧಿಸಿದರು.

ಆ ಪೃಥು ಚಕ್ರವರ್ತಿಯು ಹಾಗೆಯೇ ಭಗವಂತನಲ್ಲಿ ಭಕ್ತಿಯಿಟ್ಟು ತಾನು ಮಾಡುವ ಕೆಲಸಗಳನ್ನೆಲ್ಲ ಭಗವಂತನಿಗೆ ಒಪ್ಪಿಸಿ ರಾಜ್ಯವಾಳಿಕೊಂಡಿದ್ದನು. ಆತನಿಗೆ ಅರ್ಚಿಯೆಂಬ ಹೆಂಡತಿಯಲ್ಲಿ ಐವರು ಮಕ್ಕಳಾದರು: ಆತನು ತನಗೆ ಮುದಿತನವು ಬಂತು ಎಂದು ಮಕ್ಕಳಿಗೆ ರಾಜ್ಯವನ್ನು ಒಪ್ಪಿಸಿಕೊಟ್ಟು ತಾನು ತಪಸ್ಸಿಗೆ ಹೊರಟುಹೋದನು.

ಅಲ್ಲಿ ಬಿಸಿಲು ಕಾಲವಲ್ಲಿ ಪಂಚಾಗ್ನಿ ಮಧ್ಯವಲ್ಲಿಯೂ ಮಳೆಗಾಲವಲ್ಲಿ ಬಿರು ಮಳೆಯಲ್ಲಿಯೂ ಚಳಿಗಾಲವಲ್ಲಿ ಕತ್ತಿನಷ್ಟು ನೀರಿನಲ್ಲಿಯೂ ನಿಂತು ಅತ್ಯುಗ್ರವಾದ ತಪಸ್ಸು ಮಾಡಿದನು. ಹೀಗೆ ಅನೇಕ ಕಾಲ ತಪಸ್ಸು ಮಾಡಿ ಕೊನೆಗೆ ಮೋಕ್ಷವನ್ನು ಪಡೆದನು.

---

### ಹನ್ನೆರಡನೆಯ ಅಧ್ಯಾಯವು

## ಪೃಥುವಂಶವು

ಪೃಥುವಿನ ಅನಂತರ ವಿಜಿತಾಶ್ವನು ಚಕ್ರವರ್ತಿಯಾದನು. ಆತನು ತನ್ನ ನಾಲ್ವರು ತಮ್ಮಂದಿರಿಗೆ ನಾಲ್ಕು ದಿಕ್ಕುಗಳನ್ನು ಹಂಚಿಕೊಟ್ಟನು. ಆತನಿಗೆ ಹವಿರ್ಧಾನನೆಂಬ ಮಗನಾದನು. ಆತನು ಕಾಣಿಕೆಗಳನ್ನು ತೆಗೆದುಕೊಳ್ಳುವುದು, ದಂಡಿಸುವುದು, ತೆರಿಗೆ ಎತ್ತುವುದು ಇವು ಕ್ರೂರ ಕೃತ್ಯಗಳು ಎಂದು, ರಾಜವೃತ್ತಿಯನ್ನು ಬಿಟ್ಟು ದೀರ್ಘ ಕಾಲ ನಡೆಯುವ ಸತ್ರಯಾಗವನ್ನು ಮಾಡುತ್ತಿದ್ದು ಕೊನೆಗೆ ಜ್ಞಾನವಂತನಾಗಿ ಮುಕ್ತನಾದನು. ಆತನಿಗೆ ಆರು ಜನ ಮಕ್ಕಳಾದರು. ಅವರಲ್ಲಿ ಹಿರಿಯನಾದ ಬರ್ಹಿಷದನು ಎಲ್ಲೆಂದರಲ್ಲಿ ಪೂರ್ವದ ಕಡೆಗೆ ದರ್ಭೆಗಳನ್ನು ಹಾಸಿ ಯಜ್ಞಗಳನ್ನು ಮಾಡಿದನು. ಅದರಿಂದ ಆತನಿಗೆ ಪ್ರಾಚೀನ ಬರ್ಹಿ ಎಂದು ಹೆಸರಾಯಿತು. ಆತನಿಗೆ ಸಮುದ್ರರಾಜನ ಮಗಳಾದ ಶತಧೃತಿಯು ಹೆಂಡತಿಯಾಗಿ ಹತ್ತು ಮಕ್ಕಳನ್ನು ಹೆತ್ತಳು. ಅವರೆಲ್ಲರೂ ಒಂದೇ ಹೆಸರುಳ್ಳವರು.

ಪ್ರಾಚೀನ ಬರ್ಹಿಯು ಎಲ್ಲೆಂದರಲ್ಲಿ ಯಜ್ಞಯಾಗಾದಿಗಳನ್ನು ಮಾಡುತ್ತ ಕರ್ಮ ಮಾರ್ಗದಲ್ಲಿ ಮುಳುಗಿರುವುದನ್ನು ಕಂಡು ಕೃಪಾಳುವಾದ ನಾರದರು ಆತನ ಬಳಿಗೆ ಬಂದು “ ಎಲೈ ಅರಸೆ,

ನೀನು ಹಗಲೂ ರಾತ್ರಿ ಒಂದೇ ಸಮನಾಗಿ ಕರ್ಮಗಳನ್ನು ಮಾಡು ತ್ತಿರುವೆ. ಇದರಿಂದೇನು ಫಲ? ಯಾವಾಗಲೂ ದುಃಖನಿವೃತ್ತಿ ಸುಖ ಪ್ರಾಪ್ತಿ, ಇವೇ ಪರಮ ಫಲಗಳು. ಇವು ಈ ಕರ್ಮಗಳಿಂದ ದೊರೆಯುವುವೇ?" ಎಂದು ಕೇಳಿದರು. ಅವಕ್ಕೆ ಆ ರಾಜನು "ಎಲೈ ಮಹರ್ಷಿಯೆ, ನೀನು ಕೇಳುವ ಪ್ರಶ್ನೆಗೆ ಉತ್ತರವನ್ನು ಅರಿಯೆನು. ಯಾವುದು ನನಗೆ ಶ್ರೇಯಸ್ಸನ್ನು ಉಂಟು ಮಾಡು ವುದೋ ಅದನ್ನು ಹೇಳು'' ಎಂದು ಕೈ ಮುಗಿದನು.

ನಾರದರು ಆತನಿಗೆ ತತ್ತ್ವವನ್ನು ಉಪದೇಶ ಮಾಡಬೇಕೆಂದು ಆತನು ಯಾಗ ಮಾಡುತ್ತ ಕೊಂದ ಪಶುಗಳನ್ನೆಲ್ಲಾ ಆತನಿಗೆ ತಮ್ಮ ಯೋಗ ಮಹಿಮೆಯಿಂದ ತೋರಿಸಿದರು. ಅವು ಹಿಂಡು ಹಿಂಡಾಗಿ ಕೋಪದಿಂದ ಇವನು ಬರಲಿ, ತಿವಿದು ಹಾಕೋಣ, ಎಂದು ಕಾದು ನಿಂತಿದ್ದುವು. ಅದನ್ನು ಕಂಡು ಆ ರಾಜನಿಗೆ ನಾನು ಮಾಡಿದುದು ಎಲ್ಲಕ್ಕೂ ಇಷ್ಟೇ ಫಲವೇ ಎನ್ನಿಸಿತು. ಆಗ ನಾರದರು ಆತನಿಗೆ ಪುರಂಜನನ ಕಥೆಯನ್ನು ಹೇಳಿದರು:-

"ಒಂದಾನೊಂದು ಕಾಲದಲ್ಲಿ ಪುರಂಜನನೆಂಬ ರಾಜನೊಬ್ಬ ನಿದ್ದನು. ಆತನಿಗೆ ಒಬ್ಬ ಮಿತ್ರನಿದ್ದನು. ಆ ಮಿತ್ರನ ಹೆಸರೂ ಅವನು ಮಾಡುವ ಕೆಲಸವೂ ಯಾರಿಗೂ ತಿಳಿಯದು. ಆ ರಾಜನು ತನಗೆ ಅನುಕೂಲವಾಗುವ ರಾಜಧಾನಿಯನ್ನು ಹುಡುಕಿಕೊಂಡು ಭೂಮಿಯನ್ನೆಲ್ಲಾ ಅಲೆದನು. ಕೊನೆಗೆ ಹಿಮಾಲಯದ ದಕ್ಷಿಣದಲ್ಲಿ ಆತನಿಗೆ ಒಂದು ನಗರಿಯು ಸಿಕ್ಕಿತು. ಒಂಭತ್ತು ಬಾಗಿಲುಗಳು, ಎತ್ತರವಾದ ಕೋಟೆಗಳು, ಚಿನ್ನ, ಬೆಳ್ಳಿ, ಕಬ್ಬಿಣದ ಕಲಶಗಳಿಂದ ಅಲಂಕೃತವಾದ ಗೃಹಗಳೂ ಇದ್ದು ಆ ನಗರವು ಸುಂದರವಾಗಿತ್ತು. ರಮ್ಯವಾದ ಉಪವನಗಳಿದ್ದುವು. ಆ ಉಪವನದಲ್ಲಿ ತಿರುಗುತ್ತಿರು ವಾಗ ಹತ್ತು ಮಂದಿ ಭೃತ್ಯರನ್ನು ಜೊತೆಯಲ್ಲಿ ಕರೆದುಕೊಂಡು

ತಿರುಗುತ್ತಿರುವ ಒಬ್ಬ ಸುಂದರಿಯನ್ನು ಕಂಡನು. ಆಕೆಯೂ ತನಗೆ ಸರಿಯಾದ ಗಂಡನನ್ನು ಹುಡುಕಿಕೊಂಡು ತಿರುಗುತ್ತಿದ್ದಳು. ಅವಳ ಹೆಸರು ಕುಲಗೋತ್ರಗಳು ತಂದೆತಾಯಿ ಯಾರಿಗೂ ತಿಳಿಯದು. ಆದರೂ ಪುರಂಜನನು ಅವಳು ಸುಂದರಿಯೆಂದು ಅವಳನ್ನು ಮದುವೆ ಯಾದನು. ಅವಳೇ ಆ ನಗರಿಯ ಒಡತಿಯು. ಐದು ಹೆಡೆಗಳ ಒಬ್ಬ ಸರ್ಪರಾಜನು ಅವಳ ನಗರವನ್ನು ಕಾಯುತ್ತಿದ್ದನು. ಪುರಂ ಜನನು ಅವಳನ್ನು ಮದುವೆಯಾಗಿ, ಬೇಕಾದ ಭೋಗಗಳನ್ನು ಅನು ಭವಿಸುತ್ತಾ ನೂರಾರು ವರ್ಷಗಳು ಸುಖವಾಗಿದ್ದನು.

ಆತನಿಗೆ ಅವಳಲ್ಲಿ ಒಂದು ಸಾವಿರದ ಒಂದು ನೂರು ಮಂದಿ ಗಂಡು ಮಕ್ಕಳೂ ಒಂದು ನೂರು ಹತ್ತು ಮಂದಿ ಹೆಣ್ಣು ಮಕ್ಕಳೂ ಆದರು. ಅವರಿಗೆಲ್ಲ ಮದುವೆಯಾಗಿ ಒಬ್ಬೊಬ್ಬರಿಗೆ ನೂರು ನೂರು ಮಂದಿ ಮಕ್ಕಳಾದರು. ಆ ಸಂತತಿಯಿಂದ ಆ ದೇಶವೆಲ್ಲ ತುಂಬಿ ಹೋಯಿತು. ಹೀಗೆ ಇರುವಾಗ ಆ ಪುರಂಜನ ದಂಪತಿಗಳಿಗೆ ಮುದಿ ತನವು ಬಂತು.

ಆಗ ಚಂಡವೇಗನೆಂಬ ಗಂಧರ್ವರಾಜನು ಬಂದು ಅವರ ಆ ನಗರವನ್ನು ಮುತ್ತಿದನು. ಬಹುಕಾಲ ಅವನೊಡನೆ ಹೋರಾಡಿ ಆ ನಗರವು ಬಹು ಕಷ್ಟಗಳನ್ನು ಅನುಭವಿಸಿತು. ಆ ವೇಳೆಗೆ ಸರಿ ಯಾಗಿ ಕಾಲಕನ್ಯೆಯು ಯಮನ ಭಟರೊಡನೆ ಬಂದು ಆ ಪುರವನ್ನು ಮುತ್ತಿ ಅಲ್ಲಿದ್ದ ಐಶ್ವರ್ಯವನ್ನೆಲ್ಲಾ ಸೂರೆಗೊಂಡಳು. ಆಗ ಪುರಂ ಜನನ ಮಕ್ಕಳು ಮೊಮ್ಮಕ್ಕಳೆಲ್ಲಾ ಅವನನ್ನು ಅಸಡ್ಡೆಯಾಗಿ ಕಂಡರು. ಶತ್ರುಗಳು ಅವನನ್ನು ರಾಜಧಾನಿಯಿಂದ ಕತ್ತು ಹಿಡಿದು ನೂಕಿದರು. ಅವನ ರಾಜಧಾನಿಗೆ ಬೆಂಕಿ ಹಾಕಿ ಸುಟ್ಟರು.

ಇಷ್ಟಾದರೂ ಆ ಪುರಂಜನನು ತನ್ನ ಮಿತ್ರನನ್ನು ಸ್ಮರಿಸಲೂ ಇಲ್ಲ: ಅವನು ಸಾಯುವಾಗಲೂ ಹೆಂಡತಿಯನ್ನೇ ಸ್ಮರಿಸುತ್ತಿದ್ದ

ನಾಗಿ ವಿದರ್ಭರಾಜನ ಮನೆಯಲ್ಲಿ ಹೆಣ್ಣಾಗಿ ಹುಟ್ಟಿದನು. ಆ ಮಗುವು ವಯಸ್ಸು ಬಂದ ಮೇಲೆ ಸ್ವಯಂವರದಲ್ಲಿ ಮಲಯಧ್ವಜ ನೆಂಬ ಪಾಂಡ್ಯರಾಜನನ್ನು ಮದುವೆಯಾದಳು. ಅಲ್ಲಿ ಬೇಕಾದ ಹಾಗೆ ಮಕ್ಕಳನ್ನು ಹೆತ್ತು, ಕೊನೆಗೆ ರಾಜ್ಯವನ್ನು ಬಿಟ್ಟು ತಪ ಸ್ಸಿಗೆ ಹೋದ ಗಂಡನೊಡನೆ ತಾನೂ ಹೋಗಿ ತಪಸ್ಸು ಮಾಡಿದಳು. ಆಕೆಯ ಗಂಡನು ತಪಸ್ಸು ಮಾಡಿ ಮುಕ್ತನಾಗಲು, ಆಕೆಯು ಆ ಗಂಡನ ದೇಹವನ್ನು ಚಿತೆಯ ಮೇಲಿಟ್ಟು ತಾನೂ ಶರೀರವನ್ನು ಬಿಡ ಬೇಕೆಂದು ನಿಶ್ಚಯಿಸಿದಳು. ಆ ವೇಳೆಗೆ ಅಲ್ಲಿಗೆ ಪುರಂಜನನ ಪೂರ್ವ ಮಿತ್ರನು ಬಂದು ಜನ್ಮಾಂತರ ವೃತ್ತಾಂತಗಳನ್ನೆಲ್ಲ ಹೇಳಿದ ಮೇಲೆ ಅವಳಿಗೆ ಜ್ಞಾನೋದಯವಾಯಿತು. ಜೀವನು ಸ್ತ್ರೀಯೂ ಅಲ್ಲ ಪುರುಷನೂ ಅಲ್ಲ. ಸ್ತ್ರೀ ದೇಹವಲ್ಲಿದ್ದರೆ ಸ್ತ್ರೀ, ಪುರುಷ ದೇಹ ದಲ್ಲಿದ್ದರೆ ಪುರುಷ. ದೇಹವಿಲ್ಲದಿದ್ದರೆ ಮುಕ್ತಾ ಎಂಬ ತತ್ವವನ್ನು ಅರಿತು ಮುಕ್ತನಾದನು.

ಅಯ್ಯಾ ಪ್ರಾಚೀನ ಬರ್ಹಿಯೆ, ನಾನು ಹೇಳಿದ ಪುರಂಜನನೇ ಜೀವನು. ತಾನು ಮಾಡಿದ ಕರ್ಮಗಳಿಂದ ನೂರಾರು ಜನಗಳನ್ನು ಎಂದರೆ ನಾನಾ ಶರೀರಗಳನ್ನು ಸಂಪಾದಿಸುವನು ಎಂದು ಅವನಿಗೆ ಆ ಹೆಸರು, ಆ ಜೀವನಿಗೆ ಬೇಕಾದ ಮಿತ್ರನೇ ಈಶ್ವರನು. ಬುದ್ಧಿಯೇ ಪತ್ನಿಯು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಂಬ ಹತ್ತು ಮಂದಿಯೇ ಆಕೆಯ ಭೃತ್ಯರು. ಶರೀರವೇ ಪಟ್ಟಣವು, ಅಲ್ಲಿರುವ ನವದ್ವಾರಗಳೇ ಬಾಗಿಲುಗಳು, ಗಂಧರ್ವನು ಕಾಲವು. ಮುದಿತನವೇ ಕಾಲಕನ್ಯೆಯು, ಮೃತ್ಯುದೂತರೇ ಯವನರು, ಜೀವನು ಶರೀರದಲ್ಲಿರು ವವರೆಗೂ ದುಃಖವು ಹೊರಲಾರದ ಭಾರವಾಗಿ ಇದ್ದೇ ಇರುವುದು. ಭಗವಂತನಾದ ವಾಸುದೇವನೇ ಮಿತ್ರನು. ಆ ಮಿತ್ರನ ಮಾತು ಕೇಳಿದರೆ ದುಃಖವು ತಪ್ಪುವುದು.

ಎಲೈ ರಾಜನೆ, ನೀನೂ ಈ ತತ್ವವನ್ನು ಅರಿತುಕೊ, ಇನ್ನು ನಿನ್ನ ಯಜ್ಞ ಯಾಗಾದಿ ಕರ್ಮಗಳನ್ನು ಸಾಕು ಮಾಡು. ನಿನ್ನ ಮೊದಲಿಗನಾದ ಧ್ರುವನು ಮಾಡಿದಂತೆ, ನಿನ್ನ ಮುತ್ತಾತನಾದ ಪೃಥುವು ಮಾಡಿದಂತೆ ವಾಸುದೇವನಿಗೆ ಶರಣಾಗು. ಈ ಲೋಕವೆಲ್ಲಾ ಹರಿಯೆಂದು ಚಿಂತಿಸಿ ಕೃತಾರ್ಥನಾಗು" ಎಂದು ಉಪದೇಶ ಮಾಡಿದನು.

ಆಗ ಪ್ರಾಚೀನ ಬರ್ಹಿಯು ನಾರದರ ಉಪದೇಶವನ್ನು ಕೇಳಿ, ಮಕ್ಕಳನ್ನು ಕರೆದು "ನೀವು ಮಕ್ಕಳನ್ನು ಪಡೆದು ಲೋಕವನ್ನು ಸಲಹಿ'' ಎಂದು ಆಜ್ಞೆ ಮಾಡಿ ತಾನು ಕಪಿಲಾಶ್ರಮವನ್ನು ಸೇರಿ ತಪಸ್ಸು ಮಾಡಿ ಕೃತಾರ್ಥನಾದನು.

ಪ್ರಾಚೀನ ಬರ್ಹಿಯ ಮಕ್ಕಳಾದ ಪ್ರಚೇತಸರು ತಂದೆಯ ಅಪ್ಪಣೆಯನ್ನು ಗೌರವಿಸಿ ಮಕ್ಕಳಾಗಲೆಂದು ತಪಸ್ಸು ಮಾಡಲು ಸಮುದ್ರವನ್ನು ಕುರಿತು ಹೋದರು. ದಾರಿಯಲ್ಲಿ ಅತಿ ಮನೋಹರವಾದ ತಾವರೆಗಳುಳ್ಳ ವಿಶಾಲ ಸರೋವರವೊಂದು ಕಾಣಿಸಿತು. ಅಲ್ಲಿ ಸಂಗೀತವಾಗುತ್ತಿರುವುದನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. ಹಾಗೆಯೇ ಅದನ್ನು ಕೇಳುತ್ತಾ ಅಲ್ಲಿಯೇ ನಿಂತಿರುವಾಗ, ಭಗವಂತನಾದ ನೀಲಕಂಠನು ಅಲ್ಲಿಂದ ಹೊರಕ್ಕೆ ಬಂದು ಅವರಿಗೆ ದರ್ಶನ ಕೊಟ್ಟನು. ಆತನಿಂದ ಭಗವಂತನಾದ ವಾಸುದೇವನಲ್ಲಿ ಭಕ್ತಿಯೋಗವನ್ನು ಆಚರಿಸುವುದು ಹೇಗೆ ಎಂಬುದನ್ನು ಉಪದೇಶವಾಗಿ ಪಡೆದು ಸಮುದ್ರ ಮಧ್ಯದಲ್ಲಿ ನಿಂತು ಹತ್ತು ಸಾವಿರ ವರ್ಷಗಳು ತಪಸ್ಸನ್ನು ಮಾಡಿದರು.

ಆಗ ವಾಸುದೇವನು ಅವರಿಗೆ ದರ್ಶನವನ್ನು ಇತ್ತನು. ಮೇರು ಶೃಂಗಾರವನ್ನು ಏರಿದ ಮುಗಿಲಿನಂತೆ ಸುವರ್ಣ ಗರುಡನನ್ನು ಏರಿದ ಆ ಶ್ಯಾಮಸುಂದರನು ದಿವ್ಯಾಭರಣಗಳನ್ನೂ ದಿವ್ಯಾಸ್ತ್ರಗ

ಳನ್ನೂ ಧರಿಸಿ ಮೆರೆಯುತ್ತಿದ್ದನು : ಆತನು “ ಎಲೈ ರಾಜಕುಮಾರರೇ, ನಿಮ್ಮ ತಪಸ್ಸಿಗೆ ಒಲಿದಿರುವೆನು. ನಿಮ್ಮ ಇಚ್ಛೆಯು ನೆರವೇರುವುದು. ಕಂಡು ಮುನಿಯ ಪುತ್ರಿಯಾದ ವಾರ್ಕ್ಷಿಯೆಂಬ ಕನ್ಯೆಯನ್ನು ಮದುವೆಯಾಗಿ ವಿಖ್ಯಾತನಾಗುವ ಮಗನನ್ನು ಪಡೆಯಿರಿ. ದೀರ್ಘ ಕಾಲ ರಾಜ್ಯವನ್ನಾಳಿ ಕೊನೆಗೆ ನನ್ನನ್ನು ಸೇರಿ” ಎಂದು ವರವನ್ನು ಕೊಟ್ಟನು. ಪ್ರಚೇತಸರು “ ಸ್ವಾಮಿಯೆ, ನಾವು ಈ ಲೋಕದಲ್ಲಿ ಇರುವವರೆಗೂ ನಿನ್ನ ಭಕ್ತರ ಸಂಗವು ನಮಗೆ ತಪ್ಪದಿರಲಿ” ಎಂದು ಕೇಳಿಕೊಂಡರು. ಸ್ವಾಮಿಯು ಹಾಗೇ ಆಗಲೆಂದು ಅನುಗ್ರಹಿಸಿ, ಕಣ್ಮರೆಯಾದನು.

ಪ್ರಾಚೇತಸರು ಭಗವಂತನ ಆಜ್ಞೆಯಾದಂತೆ ವಾರ್ಕ್ಷಿಯನ್ನು ಮದುವೆಯಾದರು. ಹಿಂದೆ ಮಹಾದೇವನಿಗೆ ಅವಮಾನ ಮಾಡಿದ ಅಪರಾಧಕ್ಕಾಗಿ ದಕ್ಷನು ಮತ್ತೊಂದು ಜನ್ಮವೆತ್ತಬೇಕಾಯಿತು. ಆದರಿಂದ ಆ ದಕ್ಷನು ಪ್ರಾಚೇತಸರ ಮಗನಾಗಿ ಹುಟ್ಟಿದನು. ಆ ವೇಳೆಗೆ ಚಾಕ್ಷುಷನೆಂಬ ಮನುವಿನ ಕಾಲವು ಮುಗಿಯಿತು. ಮನ್ವಂತರವು ಮುಗಿಯಲು, ಅದುವರೆಗೆ ಇದ್ದ ಸೃಷ್ಟಿಯೆಲ್ಲಾ ನಾಶವಾಯಿತು. ಆಗ ತಕ್ಷನು ಚತುರ್ಮುಖ ಬ್ರಹ್ಮನ ಪ್ರೇರಣೆಯಿಂದ ಎಲ್ಲರಿಗೂ ಒಡೆಯನಾಗಿ ಮತ್ತೆ ಎಲ್ಲವನ್ನೂ ಸೃಷ್ಟಿ ಮಾಡಿದನು.

ತಪಸ್ಸು ಮಾಡಿದ್ದರಾಗಿ ಆ ಪ್ರಾಚೇತಸರಿಗೆ ನಾರದ ಮಹರ್ಷಿಯು ಬಂದು ಮತ್ತೆ ಆತ್ಮಜ್ಞಾನವನ್ನು ಉಪದೇಶಿಸಿದನು: “ಸರ್ವಭೂತಗಳಲ್ಲಿಯೂ ದಯೆಯಿಡಿರಿ. ದೊರೆತಷ್ಟರಲ್ಲಿ ತೃಪ್ತಿಪಡಿರಿ. ಪರಮಾತ್ಮನನ್ನು ಬಿಟ್ಟರೆ ಇನ್ನಿಲ್ಲವೆಂದು ಭಜಿಸಿರಿ”, ಎಂದು ಹೇಳಿ, ನಾನಾ ವಿಧವಾದ ಭಗವದ್ಭಕ್ತರ ಚರಿತ್ರೆಗಳನ್ನು ಹೇಳಿ ಅವರನ್ನು ಕಾಪಾಡಿದನು.

### ಹದಿಮೂರನೆಯ ಅಧ್ಯಾಯ

## ಋಷಭ ಚರಿತ್ರೆ

ಮನುವಿಗೆ ಪ್ರಿಯವ್ರತ ಉತ್ತಾನಪಾದ ಎಂದು ಇಬ್ಬರು ಮಕ್ಕಳು. ಅವರಲ್ಲಿ ಪ್ರಿಯವ್ರತನು ಜ್ಞಾನಿಯಾಗಿ ಎಲ್ಲವನ್ನೂ ತೊರೆದು ಮುಕ್ತನಾಗಬೇಕೆಂದು ನಾರದ ಮುನಿಯ ಬಳಿಗೆ ಹೋಗಿ ಅಲ್ಲಿ ವೇದಾಂತ ಶ್ರವಣಕ್ಕೆ ನಿಂತನು. ಚತುರ್ಮುಖನು ಇದನ್ನು ತಿಳಿದು ಮನುವನ್ನೂ ಎಲ್ಲಾ ದೇವತೆಗಳನ್ನೂ ಕರೆದುಕೊಂಡು ಪ್ರಿಯವ್ರತನಿದ್ದ ಗಂಧಮಾದನ ಪರ್ವತಕ್ಕೆ ಬಂದನು.

ಆಗ ನಾರದರು ಪ್ರಿಯವ್ರತನಿಗೆ ತತ್ವವನ್ನು ಉಪದೇಶ ಮಾಡುತ್ತಿದ್ದರು. ಹಂಸರಥದಲ್ಲಿ ಬರುತ್ತಿರುವ ಬ್ರಹ್ಮನನ್ನು ಕಂಡ ಕೂಡಲೇ ಎದ್ದು ನಿಂತು ಆತನಿಗೆ ಸಲ್ಲಬೇಕಾದ ಪೂಜೆಯನ್ನು ಸಲ್ಲಿಸಿದರು. ಪಿತಾಮಹನು ಆ ಪೂಜೆಯನ್ನು ಒಪ್ಪಿಕೊಂಡು ನಾರದರ ಎದುರಾಗಿಯೇ ಪ್ರಿಯವ್ರತನನ್ನು ಕುರಿತು, ಹೀಗೆ ಹೇಳಿದನು: "ಪ್ರಿಯವ್ರತ, ನನ್ನ ಮಾತನ್ನು ಆಲಿಸು, ನಾನು, ನೀನು, ನಿನ್ನ ಗುರುವಾದ ನಾರದರು, ನಿನ್ನ ತಂದೆಯಾದ ಮನುವೂ ಎಲ್ಲರೂ ಭಗವಂತನ ಆಜ್ಞೆಯಂತೆ ನಡೆಯುತ್ತಿರುವೆವು. ಆ ಭಗವಂತನ ಆಜ್ಞೆಯನ್ನು ಯಾರೂ ಮೀರಲಾರರು. ನೀನು ಶ್ರೀಹರಿಯ ಚರಣ ಕಮಲಗಳನ್ನು ಆಶ್ರಯಿಸಿರುವೆ. ಅದರಿಂದ ನೀನಂತೂ ಮಾರುವಂತೆಯೇ ಇಲ್ಲ. ಆದರಿಂದ, ನೀನು ರಾಜನಾಗಿ ಮಾಡಬೇಕಾದ ಕೆಲಸವನ್ನು ಮಾಡಿ ಅನಂತರ ಜ್ಞಾನ ಮಾರ್ಗವನ್ನು ಹಿಡಿ" ಪ್ರಿಯವ್ರತನು ಅಪ್ಪಣೆಯೆಂದು ಒಪ್ಪಿಕೊಂಡನು. ಮನುವು ಆ ಮಗನಿಗೆ ಭೂಮಂಡಲವನ್ನೆಲ್ಲಾ ಕೊಟ್ಟನು.

ಪ್ರಿಯವ್ರತನು ಭಗವಂತನ ಚರಣಾರವಿಂದಗಳನ್ನು ನೆನೆಯುತ್ತಾ ರಾಜ್ಯವನ್ನು ಪಾಲಿಸಿದನು. ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯನ್ನು ಮದುವೆಯಾಗಿ ಎಲ್ಲಾ ವಿಧದಲ್ಲೂ ತನಗೆ ಸಮಾನರಾದ ಹತ್ತು ಮಂದಿ ಗಂಡು ಮಕ್ಕಳನ್ನೂ ಕಿರಿಯಳಾದ ಊರ್ಜಸ್ವತಿಯೆಂಬ ಹೆಣ್ಣು ಮಗಳನ್ನೂ ಪಡೆದನು. ಆತನ ಕಿರಿಯ ಹೆಂಡತಿಯಲ್ಲಿ ಉತ್ತಮ ತಾಮಸ ರೈವತರೆಂಬ ಮೂವರು ಮಕ್ಕಳು ಹುಟ್ಟಿದರು. ಅವರೂ ಮನುಗಳಾದರು.

ಪ್ರಿಯವ್ರತನು ತಾನು ರಾಜನಾಗಿರುವಾಗ ಆತನಿಗೆ ಒಂದು ಯೋಚನೆಯು ಬಂತು: " ಸೂರ್ಯನು ಮೇರುಗಿರಿಯನ್ನು ಸುತ್ತುತ್ತಾ ತನ್ನ ಕಿರಣಗಳಿಂದ ಭೂಮಿಯ ಅರ್ಧಭಾಗವನ್ನು ಮಾತ್ರ ಪ್ರಕಾಶಗೊಳಿಸುವನು. ಹೀಗಾಗಿ ಒಂದೆಡೆ ಬೆಳಕು, ಒಂದೆಡೆ ಕತ್ತಲು ಆಗುವುದು. ಇದು ಸರಿಯಲ್ಲ. ನಾನು ಇನ್ನು ಮೇಲೆ ರಾತ್ರಿಯನ್ನು ಹಗಲು ಮಾಡುವೆನು" ಎಂದು ದಿವ್ಯ ತೇಜಸ್ಸೂ ವೇಗವೂ ಉಳ್ಳ ರಥದಲ್ಲಿ ಕುಳಿತು ಎರಡನೆಯ ಸೂರ್ಯನಂತೆ ಸೂರ್ಯನಿಗೆ ಬದಲು ಸೂರ್ಯನಿಗೆ ಆತನು ಇಲ್ಲದೆಡೆ ತಾನು ಸಂಚರಿಸಿದನು. ಆತನ ರಥವು ಹೋದ ದಾರಿಯಲ್ಲಿ ಹಳ್ಳಗಳಾಗಿ ಅವೇ ಏಳು ಸಮುದ್ರಗಳಾದುವು. ಸಮುದ್ರ ಸಮುದ್ರದ ನಡುವಿನ ಗಡ್ಡೆಯು ದ್ವೀಪವಾಯಿತು. ಹೀಗೆ ಸಪ್ತ ಸಮುದ್ರಗಳೂ ಸಪ್ತ ದ್ವೀಪಗಳೂ ಆದುವು. ಆ ಸಪ್ತ ದ್ವೀಪಗಳಿಗೂ ಆ ಮಕ್ಕಳನ್ನು ದೊರೆಗಳನ್ನು ಮಾಡಿದನು. ತನ್ನ ಮಗಳನ್ನು ಅಸುರ ಗುರುವಾದ ಶುಕ್ರಾಚಾರ್ಯನಿಗೆ ಕೊಟ್ಟು ಮದುವೆ ಮಾಡಿದನು. ಕೊನೆಗೆ ಎಲ್ಲವನ್ನೂ ವೈರಾಗ್ಯದಿಂದ ತೊರೆದು ಭಗವಂತನ ಆರಾಧನೆಯಲ್ಲಿ ನಿಂತನು.

ಆತನ ಮಗನಾದ ಅಗ್ನೀಧ್ರನು ರಾಜನಾದನು. ತನಗೆ ಸಮಾನರಾದ ಸತ್ಪುತ್ರರನ್ನು ಪಡೆಯಬೇಕೆಂದು ಬ್ರಹ್ಮನನ್ನು ಕುರಿತು

ತಪಸ್ಸು ಮಾಡಿದನು. ಆತನು ತನ್ನ ಸಭೆಯಲ್ಲಿ ಗಾಯಕಿಯಾಗಿದ್ದ ಪೂರ್ವ ಚಿತ್ತಿಯೆಂಬ ಅಪ್ಸರಸೆಯನ್ನು ಆತನಿಗೆ ಹೆಂಡಿತಿಯಾಗಿ ಕೊಟ್ಟನು. ಆತನು ಅವಳಲ್ಲಿ ನಾಭಿ ಮೊದಲಾದ ಒಂಭತ್ತು ಮಕ್ಕಳನ್ನು ಪಡೆದನು. ಅವರಿಗೆ ಜಂಬೂದ್ವೀಪದ ಒಂಭತ್ತು ಭಾಗಗಳನ್ನು ಕೊಟ್ಟು ತಪಸ್ಸಿನಲ್ಲಿದ್ದು ಲೋಕಾಂತರವನ್ನು ಪಡೆದನು.

ನಾಭಿರಾಜನು ಮಕ್ಕಳಾಗಲೆಂದು ತನ್ನ ಪತ್ನಿಯಾದ ಮೇರು ದೇವಿಯೊಡನೆ ಭಗವಂತನನ್ನು ಯಜ್ಞದಿಂದ ಆರಾಧಿಸಿದನು. ಭಗವಂತನು ಭಕ್ತವತ್ಸಲನಾಗಿ ಆತನಿಗೆ ದರ್ಶನವನ್ನು ಕೊಟ್ಟನು. ಆತನ ದರ್ಶನದಿಂದ ಅಲ್ಲಿದ್ದ ಸರ್ವರೂ ನಿಧಿಯನ್ನು ಕಂಡ ಬಡವರಂತೆ ಪರಮಾನಂದಭರಿತರಾಗಿ, ನಮಸ್ಕಾರ ಮಾಡಿ ಹೊಗಳಿದರು. ಅವರಲ್ಲಿ ಯಜ್ಞ ಮಾಡಿಸುವುದಕ್ಕೆ ಬಂದಿದ್ದ ಋತ್ವಿಜರು ಆತನನ್ನು "ಮಹಾಪ್ರಭುವೆ, ನಿನ್ನ ದರ್ಶನದಿಂದಲೇ ನಾವು ಕೃತಾರ್ಥರಾದೆವು. ನೀನು ನಾಭಿರಾಜನಿಗೆ ನಿನಗೆ ಸಮಾನವಾದ ಪುತ್ರನಾಗುವಂತೆ ವರವನ್ನು ಕರುಣಿಸು'' ಎಂದು ಕೇಳಿಕೊಂಡರು. ಶ್ರೀಮನ್ನಾರಾಯಣನು ಅವರ ಪ್ರಾರ್ಥನೆಯನ್ನು ಅಂಗೀಕರಿಸಿ "ನಾನೇ ಈತನ ಮಗನಾಗುವೆನು" ಎಂದು ಅನುಗ್ರಹ ಮಾಡಿದನು. ಅದರಂತೆ ದಿಗಂಬರರೂ ಬ್ರಹ್ಮಚಾರಿಗಳೂ ತಪಸ್ವಿಗಳೂ ಆಗಿರುವ ಮಹರ್ಷಿಗಳ ಧರ್ಮವನ್ನು ಲೋಕದಲ್ಲಿ ಹರಡುವುದಕ್ಕಾಗಿ ಶುದ್ಧ ಸತ್ತ್ವಗುಣದಿಂದ ಕೂಡಿರುವ ಶರೀರದಿಂದ ಮೇರು ದೇವಿಯಲ್ಲಿ ಅವತರಿಸಿದನು. ಆತನೇ ಪ್ರಸಿದ್ಧನಾದ ಋಷಭ ದೇವನು. ಆತನ ದೇಹದಲ್ಲಿ ವಜ್ರ ಅಂಕುಶ ಮೊದಲಾದ ರೇಖೆಗಳಿದ್ದು ಈತನು ಭಗವಂತನು ಎಂದು ಸಾರಿ ಹೇಳುತ್ತಿದ್ದುವು. ನಾಭಿರಾಜನು ಆತನು ಯೌವನವನ್ನು ಪಡೆಯುವವರೆಗೂ ರಾಜ್ಯದಲ್ಲಿದ್ದು, ಅನಂತರ ಆತನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೊರಟು ಹೋದನು.

ಋಷಭದೇವನು ತಾನು ಭಗವಂತನಾದರೂ ಗುರುಕುಲಕ್ಕೆ ಹೋಗಿ ವಿದ್ಯಾಭ್ಯಾಸ ಮಾಡಿದನು. ಗೃಹಸ್ಥನಾಗಿ ಲೋಕಕ್ಕೆ ಉಪದೇಶ ಮಾಡಬೇಕೆಂದು ಇಂದ್ರನು ಕೊಟ್ಟ ಜಯಂತಿಯೆಂಬ ಕನ್ಯೆಯನ್ನು ಮದುವೆಯಾಗಿ ಗೃಹಸ್ಥ ಧರ್ಮಗಳನ್ನು ನಡೆಯಿಸುತ್ತಾ ಆಕೆಯಲ್ಲಿ ತನಗೆ ಸಮಾನರಾದ ನೂರು ಮಂದಿ ಮಕ್ಕಳನ್ನು ಪಡೆದನು. ಅವರಲ್ಲಿ ಭರತನು ಜ್ಯೇಷ್ಠನು. ಆತನು ಮಹಾ ಯೋಗಿಯು. ಆ ಮಕ್ಕಳಲ್ಲಿ ಭರತಾದಿಗಳು ಹತ್ತು ಜನರು ಕ್ಷತ್ರಿಯ ಧರ್ಮವನ್ನು ಅನುಸರಿಸಿ ರಾಜರಾದರು. ಇನ್ನು ಹತ್ತುಮಂದಿ ಭಾಗವತ ಧರ್ಮವನ್ನು ದೇಶದೇಶಗಳಲ್ಲಿ ಹರಡುವರಾದರು. ಉಳಿದ ಎಂಭತ್ತು ಮಂದಿ ಕರ್ಮಶುದ್ಧರಾದ ಬ್ರಾಹ್ಮಣರಾದರು.

ಆ ಋಷಭದೇವನು ಧರ್ಮವನ್ನು ಅರಿಯದವರಿಗೆ ಧರ್ಮವನ್ನು ತನ್ನ ಆಚರಣದಿಂದ ಕಲಿಸುತ್ತಾ ಸುಖವಾಗಿ ರಾಜ್ಯವನ್ನು ಆಳುತ್ತಿದ್ದನು. ಒಮ್ಮೆ ಇಂದ್ರನಿಗೆ ಈತನನ್ನು ಕಂಡು ಅಸೂಯೆಯು ಬಂದು, ಈತನ ರಾಜ್ಯದಲ್ಲಿ ಮಳೆಗರೆಯದಂತೆ ತಡೆದುಬಿಟ್ಟನು. ಋಷಭದೇವನು ಅದನ್ನು ತಿಳಿದು ತನ್ನ ಯೋಗಬಲದಿಂದ ರಾಜ್ಯವೆಲ್ಲಾ ಸುಖವಾಗಿರುವಂತೆ ತಾನೇ ಮೋಡವಾಗಿ ಮಳೆಗರೆದನು. ಆತನು ರಾಜ್ಯವಾಳುತ್ತಿರುವಾಗ ಎಲ್ಲರಿಗೂ ಬೇಕುಬೇಕಾದುದು ಸಮೃದ್ಧಿಯಾಗಿ ದೊರೆಯುತ್ತಿದ್ದುದರಿಂದ ಒಬ್ಬರು ಇನ್ನೊಬ್ಬರ ಒಡವೆಯನ್ನು ಬಯಸುತ್ತಿರಲಿಲ್ಲ.

ಆತನು ಒಮ್ಮೆ ಮಕ್ಕಳಿಗೆ ಬ್ರಹ್ಮರ್ಷಿಗಳ ಎದುರಿನಲ್ಲಿ ಉಪದೇಶ ಮಾಡಿದನು. "ಅರಸರಾಗಲಿ, ಗುರುವಾಗಲಿ, ಮಕ್ಕಳಿಗೂ ಶಿಷ್ಯರಿಗೂ ಅವರು ಉದ್ಧಾರವಾಗಲೆಂದು ಶ್ರೀಹರಿಭಕ್ತಿಯನ್ನು ಉಪದೇಶಿಸಬೇಕು. ಭಕ್ತಿಮಾರ್ಗವನ್ನು ಉಪದೇಶಿಸದ ಗುರುವು ಗುರುವಲ್ಲ. ತಂದೆಯು ತಂದೆಯಲ್ಲ. ತಾಯಿಯು ತಾಯಿಯಲ್ಲ.

ಕಡೆಗೆ ಅಂತಹವನು ದೇವರಾದರೂ ದೇವರಲ್ಲ. ಈ ಪ್ರಪಂಚವು ಚೇತನ ಅಚೇತನ ಎಂದು ಎರಡು ವಿಧವಾಗಿರುವುದು. ಅಚೇತನಗಳು ಸ್ಥಾವರಗಳು: ಇದ್ದಲ್ಲಿಯೇ ಇರುವವು ಅವು: ಅವಕ್ಕಿಂತಲೂ ಸಚೇತನಗಳಾದ ಜಂಗಮಗಳು ಉತ್ತಮಗಳು. ಹಾವು ಮೊದಲಾದ ಜಂಗಮಗಳಿಗಿಂತ ಜ್ಞಾನವುಳ್ಳ ಪ್ರಾಣಿಗಳು ಶ್ರೇಷ್ಠಗಳು. ಅವುಗಳಲ್ಲಿಯೂ ಮನುಷ್ಯರು, ಪ್ರಮಥರು, ಗಂಧರ್ವರು, ಸಿದ್ಧರು, ಅಸುರರು, ದೇವತೆಗಳು, ಇವರು ಒಬ್ಬರಿಗಿಂತ ಒಬ್ಬರು ಉತ್ತಮರು. ದೇವತೆಗಳಲ್ಲಿ ಇಂದ್ರನು, ದಕ್ಷಾದಿಗಳು, ರುದ್ರನು, ಬ್ರಹ್ಮನು, ಮಹಾವಿಷ್ಣುವು ಇವರು ಒಬ್ಬರಿಗಿಂತ ಒಬ್ಬರು ಉತ್ತಮರು. ಮಹಾವಿಷ್ಣುವಿಗಿಂತ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರು ಉತ್ತಮರು. ಸತ್ವಗುಣ, ಮನೋಜಯ, ಇಂದ್ರಿಯ ಜಯ, ಸತ್ಯ, ಭೂತಗಳಲ್ಲಿ ದಯೆ, ತಪಸ್ಸು, ಸಹನ, ಬ್ರಹಾನುಭವ, ಎಂಬ ಎಂಟು ಲಕ್ಷಣಗಳಿರುವವನೇ ಬ್ರಾಹ್ಮಣನು. ಅಂತಹವನನ್ನು ಎಲ್ಲರೂ ಸೇವಿಸಬೇಕು. ಅಯ್ಯಾ ಮಕ್ಕಳಿರಾ, ಸ್ಥಾವರ ಜಂಗಮಾದಿ ಸರ್ವದಲ್ಲಿಯೂ ದೇವರು ಇರುವನು ಎಂಬುದನ್ನು ತಿಳಿಯುವುದೇ ಸಮದೃಷ್ಟಿಯು. ಅದೇ ಭಗವಂತನ ಆರಾಧನವು. ಮನಸ್ಸು, ಮಾತು, ನೋಟ, ಮೊದಲಾದುವುಗಳಿಂದ ಯಾವ ಕಾರ್ಯವನ್ನು ಮಾಡಿದರೂ ಅವೆಲ್ಲ ಭಗವಂತನ ಆರಾಧನವೆಂದು ತಿಳಿಯಿರಿ. ಮಾಡಿದ ಕರ್ಮಗಳನ್ನೆಲ್ಲಾ ದೇವರಿಗೊಪ್ಪಿಸಿ ಉದ್ಧಾರವಾಗಿರಿ' ಎಂದು ಉಪದೇಶಿಸಿದನು. ತನ್ನ ಮಕ್ಕಳಲ್ಲಿ ಹಿರಿಯವನಾದ ಭರತನಿಗೆ ರಾಜ್ಯವನ್ನು ಕೊಟ್ಟು ತಾನು ದಿಗಂಬರನಾಗಿ ಅವಧೂತನಾಗಿ ಹೊರಟು ಹೋದನು.

ಆತನು ಯಾರೊಡನೆಯೂ ಮಾತನಾಡಲಿಲ್ಲ. ಯಾರನ್ನೂ ನೋಡಲೂ ಇಲ್ಲ. ಮಾತನಾಡಿಸಿದರೂ ಮೂಗನಂತೆ ಇದ್ದು, ಕಿವುಡನಂತೆ, ಹುಚ್ಚನಂತೆ, ಪಿಶಾಚದಂತೆ, ಇದ್ದು ಮೌನಿಯಾಗಿದ್ದನು.

ಯಾರು ಏನು ಮಾಡಿದರೂ ಗಮನಿಸದೆ, ಕಾಡಾನೆಯಂತೆ ಇದ್ದು ಬಿಟ್ಟನು. ಕೊನೆಗೆ ಪ್ರಜೆಗಳ ಸಂಗವನ್ನೇ ತೊರೆದು ಅಜಗರದಂತೆ ಒಂದು ಕಡೆಯಲ್ಲಿ ಮಲಗಿಬಿಟ್ಟನು. ತಾನಾಗಿ ಸಿಕ್ಕಿದರೆ ತಿನ್ನುವುದು ಇಲ್ಲವಾದರೆ ಉಪವಾಸವಾಗಿರುವುದು. ಹೀಗೆ ಇದ್ದುಬಿಟ್ಟನು. ಹೊರಗೆ ಹೀಗೆ ಇದ್ದರೂ ಚತುರ್ಮುಖನ ಆನಂದಕ್ಕಿಂತಲೂ ನೂರು ಪಾಲು ಹೆಚ್ಚಾದ ಆತ್ಮಾನಂದವನ್ನು ಅನುಭವಿಸುತ್ತಾ ಸುಖವಾಗಿದ್ದನು.



ಶ್ರೀ ಶುಕಮುನೀಂದ್ರನು ಪರೀಕ್ಷಿತನಿಗೆ ಭಾಗವತವನ್ನು

ಉಪದೇಶ ಮಾಡಿದುದು

ಕುಂಬಾರನು ಚಕ್ರವನ್ನು ತಿರುಗಿಸುವುದನ್ನು ಬಿಟ್ಟರೂ ಆ ಚಕ್ರವು ಇನ್ನೂ ಅಷ್ಟು ಕಾಲ ತಿರುಗುವಂತೆ, ಋಷಭ ದೇವನು ಸರ್ವವನ್ನೂ ತ್ಯಾಗ ಮಾಡಿದ್ದರೂ ಹಿಂದೆ ಮಾಡಿದ್ದ ಸಂಕಲ್ಪವು ಆತನನ್ನು ದೇಶ ದೇಶವನ್ನೆಲ್ಲಾ ಸುತ್ತಿಸಿತು. ಆಗೊಮ್ಮೆ ಕಾಡಿನಲ್ಲಿ ಹೋಗುತ್ತಿರುವಾಗ ಬಿರುಗಾಳಿಯು ಬೀಸಿ, ಅದರಿಂದ ಬಿದುರುಮೆಳೆಯಲ್ಲಿ ಹುಟ್ಟಿದ ಕಾಡುಕಿಚ್ಚು ಕಾಡನ್ನೆಲ್ಲಾ ದಹಿಸುತ್ತಾ ಈತನನ್ನೂ ದಹಿಸಿಬಿಟ್ಟಿತು.

ಈ ಋಷಭದೇವನ ಚರಿತ್ರೆಯನ್ನು ಕೇಳಿದವನೂ ಹೇಳಿದವನೂ ಭಗವಂತನಾದ ವಾಸುದೇವನಲ್ಲಿ ಅಖಂಡವಾದ ಏಕಾಂತ ಭಕ್ತಿಯನ್ನು ಪಡೆಯುವರು.

---

### ಹದಿನಾಲ್ಕನೆಯ ಅಧ್ಯಾಯವು

## ಭರತ ಚರಿತ್ರೆ

ಭರತ ಮಹಾರಾಜನು ತಂದೆಯ ಅಪ್ಪಣೆಯಂತೆ ಸಿಂಹಾಸನವನ್ನೇರಿದನು. ವಿಶ್ವರೂಪನ ಮಗಳಾದ ಪಂಚಜನಿಯನ್ನು ಮದುವೆಯಾದನು. ಅವಳಲ್ಲಿ ಆತನಿಗೆ ಐವರು ಮಕ್ಕಳಾದರು. ಅದುವರೆಗೆ ಅಜನಾಭ ವರ್ಷವೆಂದು ಹೆಸರಾಗಿದ್ದ ಭೂಮಿಯು ಆತನಾಳಿದ ಮೇಲೆ ಭಾರತವರ್ಷವೆಂದು ಹೆಸರು ಪಡೆಯಿತು. ಆತನು ದಿನ ದಿನವೂ ಅನೇಕ ವಿಧವಾಗಿ ಯಜ್ಞಸ್ವರೂಪಿಯಾದ ಭಗವಂತನನ್ನು ಆರಾಧಿಸಿದನು. ಆ ಯಜ್ಞಗಳನ್ನು ಮಾಡುವಾಗ ಅಲ್ಲಿ ಹವಿಸ್ಸನ್ನು ತೆಗೆದುಕೊಳ್ಳುವ ಇಂದ್ರಾದಿ ದೇವತೆಗಳೆಲ್ಲರೂ ಆ ಪುರುಷೋತ್ತಮನ ಅಂಗಾಂಗಗಳು ಎಂದು ಧ್ಯಾನಿಸಿದನು. ಹೀಗೆ ಮಾಡುತ್ತಾ ಆತನಿಗೆ

ಭಗವಂತನಾದ ವಾಸುದೇವಮೂರ್ತಿಯಲ್ಲಿ ದಿನದಿನವೂ ಪರಮ ಭಕ್ತಿಯು ಬೆಳೆಯಿತು. ಹೀಗೆ ಪರಮ ಭಕ್ತನಾಗಿದ್ದುಕೊಂಡು ಅನೇಕ ಸಹಸ್ರ ವರ್ಷಗಳು ರಾಜ್ಯವನ್ನು ಧರ್ಮವಾಗಿ ಸುಖವಾಗಿ ಪರಿಪಾಲಿಸಿಕೊಂಡು ಬಂದು ವಂಶಪಾರಂಪರ್ಯವಾಗಿ ಬಂದ ರಾಜ್ಯವನ್ನು ಮಕ್ಕಳಿಗೆ ಹಂಚಿ ಕೊಟ್ಟನು. ತಾನು ಸರ್ವಸ್ವವನ್ನೂ ತ್ಯಜಿಸಿ ಏಕಾಕಿಯಾಗಿ ವಿಷ್ಣುಕ್ಷೇತ್ರವಾದ ಪುಲಹಾಶ್ರಮಕ್ಕೆ ಹೊರಟು ಹೋದನು.

ಆ ಆಶ್ರಮವು ಗಂಡಕೀ ನದಿಯ ತೀರದಲ್ಲಿರುವುದು. ಆ ನದಿಯಲ್ಲಿ ಸಾಲಿಗ್ರಾಮಗಳು ಇದ್ದು ಆ ದೇಶವನ್ನೆಲ್ಲಾ ಪವಿತ್ರಗೊಳಿಸುವುದರಿಂದ ಆ ಆಶ್ರಮಕ್ಕೆ ಹರಿಕ್ಷೇತ್ರವೆಂದು ಹೆಸರಾಯಿತು. ಅಲ್ಲಿ ತಾನು ಏಕಾಕಿಯಾಗಿ ಶ್ರೀಹರಿಯನ್ನು ತುಲಸೀದಳಗಳು, ನಾನಾ ವಿಧವಾದ ಪುಷ್ಪಗಳು ತೀರ್ಥೋದಕಗಳು, ಕಂದಮೂಲ ಫಲಗಳು, ಇವುಗಳನ್ನೆಲ್ಲಾ ಒಪ್ಪಿಸಿ ಪೂಜೆ ಮಾಡಿದನು. ಅದರಿಂದ ಆತನಿಗೆ ಪರಮ ಶಾಂತಿಯೂ ಅತಿಶಯವಾದ ಆನಂದವೂ ಲಭಿಸಿದುವು.

ಹೀಗೆ ಏಕಾಂತವಾಗಿ ಭಗವಂತನ ಧ್ಯಾನದಲ್ಲಿ ಆಸಕ್ತನಾಗಿದ್ದು ಆ ರಾಜನು ಒಂದು ದಿನ ಗಂಡಕಿಯಲ್ಲಿ ಸ್ನಾನ ಮಾಡಿ, ಜಪ ಮಾಡುತ್ತಾ ನದೀ ತೀರದಲ್ಲಿ ಕುಳಿತಿರುವಾಗ ಒಂದು ಹೆಣ್ಣು ಹುಲ್ಲೆಯು ನೀರು ಕುಡಿಯಲು ಅಲ್ಲಿಗೆ ಬಂತು. ಆ ವೇಳೆಗೆ ಸರಿಯಾಗಿ ಒಂದು ಸಿಂಹವು ಭಯಂಕರವಾಗಿ ಗರ್ಜಿಸಲು, ಅದು ಹೆದರಿ ಸರಿಯಾಗಿ ನೀರು ಕುಡಿಯದೆ, ಅಲ್ಲಿಂದ ಓಡಲು ಹಾರಿತು. ಆಗ ಅದರ ಹೊಟ್ಟೆಯಲ್ಲಿದ್ದ ಗರ್ಭವು ಜಾರಿ ಮರಿಯು ಈಚೆಗೆ ಬಂದು ಪ್ರವಾಹದಲ್ಲಿ ಬಿತ್ತು : ತಾಯಿಯು ಓಡಿ ಹೋಗಿ ಎಲ್ಲೋ ಹಳ್ಳದಲ್ಲಿ ಬಿದ್ದು ಸತ್ತುಹೋಯಿತು. ನೀರಲ್ಲಿ ಬಿದ್ದು ಕೊಚ್ಚಿ ಹೋಗುತ್ತಿರುವ ಆ ಮರಿಯನ್ನು ಕಂಡು ಭರತನಿಗೆ ಅಯ್ಯೋ ಎನ್ನಿಸಿತು. ಅದನ್ನು

ನೀರಿನಿಂದ ಎತ್ತಿಕೊಂಡು ಆಶ್ರಮಕ್ಕೆ ಕರೆದುಕೊಂಡು ಹೋಗಿ ಸಾಕಿದನು. ಭರತನಿಗೆ ಆ ಹುಲ್ಲೆಯ ಮರಿಯ ಮೇಲೆ ಅಪಾರವಾದ ಅಭಿಮಾನವು ಬಂದು ಹಗಲಿರುಳೂ ಅದರ ಯೋಚನೆಯು ತಾನೇತಾನಾಗಿ ಹೋಯಿತು. ಬರುಬರುತ್ತ ಅವನಿಗೆ ಯೋಗಾಭ್ಯಾಸಕ್ಕಿಂತ, ಭಗವದಾರಾಧನ ರೂಪವಾದ ತಪಸ್ಸಿಗಿಂತ ಹುಲ್ಲೆಯ ಯೋಚನೆ ಹೆಚ್ಚಾಗಿ ಹೋಯಿತು. ಹೀಗೆ ಆತನಿಗೆ ಹುಲ್ಲೆಯ ಯೋಚನೆಯು ತಾನೇ ತಾನಾಗಿರುವಾಗಲೇ ಆತನಿಗೆ ಮರಣವೂ ಬಂತು. ಅದನ್ನೇ ಸ್ಮರಿಸುತ್ತಾ ಪ್ರಾಣಬಿಟ್ಟನಾಗಿ ಆತನೂ ಹುಲ್ಲೆಯೇ ಆಗಿ ಹುಟ್ಟಿದನು.

ಆದರೆ ಆತನು ಹಿಂದೆ ಮಾಡಿದ್ದ ಭಗವಂತನ ಆರಾಧನವು ಆತನನ್ನು ಬಿಡದೆ ಕಾಪಾಡಿತು. ತಾನು ಹುಲ್ಲೆಯಾದರೂ ಹಿಂದಿನ ಜನ್ಮದ ನೆನಪು ಆತನಿಗೆ ಇತ್ತು. ತಾನು ಜ್ಞಾನಿಗಳ ಮಾರ್ಗದಿಂದ ಭ್ರಷ್ಟನಾದೆನಲ್ಲಾ ಎಂದು ಆತನಿಗೆ ಬಹಳ ಸಂಕಟವಾಯಿತು. ತಾನು ಮಾಡಿದ ಅತಿಯಾದ ಅಭಿಮಾನವು ತನ್ನನ್ನು ಇಂತಹ ಸಂಕಟಕ್ಕೆ ಗುರಿಮಾಡಿತು ಎಂದು ಬಹಳ ವ್ಯಥೆಪಟ್ಟು ತಾಯಿಯನ್ನು ಬಿಟ್ಟು ಮತ್ತೆ ಪುಲಹಾಶ್ರಮಕ್ಕೆ ಬಂದನು. ಅಲ್ಲಿ ಮತ್ತೆಲ್ಲಿ ಅನರ್ಥಕಾರಿಯಾದ ಸಂಗವು ಬಂದೀತೋ ಎಂದು ಹೆದರಿ ಒಂಟಿಯಾಗಿಯೇ ಇದ್ದು ಒಂದಾನೊಂದು ದಿನ ನೀರಿನಲ್ಲಿ ಮುಳುಗಿ ಸತ್ತು ಆ ಶರೀರವನ್ನು ಬಿಟ್ಟನು. ಅಲ್ಲಿಂದ ಅಂಗಿರಸ್ಸಿನ ಕುಲದಲ್ಲಿ ಬ್ರಾಹ್ಮಣನಾಗಿ ಹುಟ್ಟಿದನು.

ಅಲ್ಲಿಯೂ ಆತನಿಗೆ ಶ್ರೀಹರಿಯ ದಯೆಯಿಂದ ಹಿಂದಣ ಜನ್ಮಗಳ ಸ್ಮರಣವಿತ್ತು. ಆದರಿಂದ ಮತ್ತೆ ಸಂಗದೋಷಕ್ಕೆ ಸಿಕ್ಕಬಾರದೆಂದು ಮನಸ್ಸು ಮಾಡಿ ಮನಸ್ಸಿನಲ್ಲಿಯೇ ಭಗವತ್ಪಾದಾರವಿಂದಗಳನ್ನು ಸ್ಮರಿಸಿಕೊಳ್ಳುತ್ತಾ ಹುಚ್ಚನಂತೆಯೂ ಕುರುಡನಂತೆಯೂ ಕಿವುಡನಂತೆಯೂ ಇದ್ದುಬಿಟ್ಟನು: ಆತನ ತಂದೆಯು ಮಗನಿಗೆ

ಬ್ರಾಹ್ಮಣರಿಗೆ ಬೇಕಾದ ಸಂಸ್ಕಾರಗಳನ್ನೆಲ್ಲ ಮಾಡಿ ಆತನಿಗೆ ಗಾಯತ್ರಿ ಯನ್ನು ಕಲಿಸಬೇಕೆಂದು ಇನ್ನಿಲ್ಲದ ಹಾಗೆ ಪ್ರಯತ್ನಪಟ್ಟರೂ ಆಗಲಿಲ್ಲ. ಮಗನು ಪಂಡಿತನಾಗಲಿಲ್ಲವಲ್ಲಾ ಎಂಬ ಚಿಂತೆಯಿಂದಲೇ ಆತನು ಕೊರಗಿ ಕಾಲಾಧೀನನಾದನು. ಭರತನ ತಾಯಿಯೂ ಸಹಗಮನ ಮಾಡಿದಳು. ಆತನು ಬ್ರಹ್ಮಜ್ಞಾನಿಯೆಂಬುದನ್ನು ಅರಿಯದೆ ಎಲ್ಲರೂ ಆತನನ್ನು ಮೂರ್ಖನೆಂದು ಹೀಯಾಳಿಸುತ್ತ ಬಂದರು. ಆತನೂ ಅದನ್ನು ವಿರೋಧಿಸಲಿಲ್ಲ. ಹೀಗೆ ಇದ್ದುಕೊಂಡು ಹೇಳಿದ ಕೆಲಸ ವನ್ನು ಮಾಡಿಕೊಂಡು ಹಾಕಿದುದನ್ನು ತಿಂದುಕೊಂಡು ಆತನೂ ಕಾಲ ಹರಣ ಮಾಡುತ್ತಿದ್ದನು.

ಆಗ ಒಬ್ಬನು ತನಗೆ ಮಕ್ಕಳಾಗಬೇಕೆಂದು ಭದ್ರಕಾಳಿಗೆ ನರ ಬಲಿಯನ್ನು ಕೊಡುವುದಾಗಿ ಹರಕೆ ಹೊತ್ತನು. ಆ ಬಲಿಗಾಗಿ ಹಿಡಿದು ತಂದಿದ್ದವನು ದೈವವಶದಿಂದ ತಪ್ಪಿಸಿಕೊಂಡು ಹೋಗಲು, ಅವನು ತನ್ನ ಭಟರಿಗೆ ಮತ್ತೊಬ್ಬನನ್ನು ಹಿಡಿದುತರುವಂತೆ ಆಜ್ಞೆ ಮಾಡಿದನು. ಅವರು ನರಪಶುವನ್ನು ಹುಡುಕಿಕೊಂಡು ಅಲೆ ಯುತ್ತಾ ಅರ್ಧ ರಾತ್ರಿಯಲ್ಲಿ ಗದ್ದೆಯನ್ನು ಕಾಯುತ್ತಾ ಕುಳಿತಿದ್ದ ಜಡಭರತನನ್ನು ಕಂಡು ಅವನನ್ನು ಕಟ್ಟಿ ಹೊತ್ತುಕೊಂಡು ಹೋದರು. ಅಲ್ಲಿ ಪಶುವಿಗೆ ಮಾಡಬೇಕಾದ ಸಂಸ್ಕಾರಗಳನ್ನೆಲ್ಲಾ ಮಾಡಿ, ಇವನನ್ನು ಬಲಿಗೊಡುವುದಕ್ಕೆ ಸಿದ್ಧವಾದರು. ಆಗ ಭದ್ರ ಕಾಳಿಯು ಇಂತಹ ಜ್ಞಾನಿಗೆ ತನ್ನಿಂದ ಹಿಂಸೆಯಾಗುವುದೆಂದು ತಾನಾಗಿ ಬಂದು ಅವರ ಕೈಯಲ್ಲಿದ್ದ ಆಯುಧಗಳನ್ನು ಕಿತ್ತುಕೊಂಡು ಅವರನ್ನೆಲ್ಲಾ ಸಂಹಾರ ಮಾಡಿ ಭರತಮುನಿಯನ್ನು ಬಿಡಿಸಿದಳು.

ಇನ್ನೊಮ್ಮೆ ಸಿಂಧು ಸೌವೀರ ದೇಶಗಳ ಒಡೆಯನಾದ ರಹೂ ಗಣನೆಂಬ ರಾಜನು ಬ್ರಹ್ಮವಿದ್ಯೆಯನ್ನು ಕಲಿಯಬೇಕೆಂದು ಕಪಿಲ ಮಹಾಮುನಿಯ ಬಳಿಗೆ ಹೊರಟನು. ರಾಜಭಟರು ಸಿಕ್ಕಿದವನನ್ನು

ರಾಜನ ಪಲ್ಲಕ್ಕಿಯನ್ನು ಹೊರಲು ಬಿಟ್ಟು ಓಡಿದರು. ಇಕ್ಷುಮತೀ ನದಿಯ ತೀರದಲ್ಲಿ ಪಲ್ಲಕ್ಕಿಯನ್ನು ಹೊರಲು ಆಳುಗಳು ಸಾಲದೇ ಹೋಗಲು ಬಲವಾಗಿದ್ದ ಜಡಭರತನನ್ನು ಒಡಿದುಕೊಂಡು ಹೋಗಿ ಪಲ್ಲಕ್ಕಿಯನ್ನು ಹೊರು ಎಂದರು. ಭರತಮುನಿಯು ನಡೆಯುವಾಗ ಎಲ್ಲಿ ಯಾವ ಪ್ರಾಣಿಗೆ ಹಿಂಸೆಯಾಗುವುದೋ ಎಂದು ನೋಡಿ ನೋಡಿ ಕಾಲಿಡುವುದರಿಂದ ಪಲ್ಲಕ್ಕಿಯು ಅಲ್ಲಾಡಲು ಮೊದಲಾಯಿತು. ರಾಜನು ಬೋಯಿಗಳನ್ನು ಬೈಯ್ದನು. ಬೋಯಿಗಳು "ಒಡೆಯಾ ಈ ಹೊಸಬನಿಂದ ಹೀಗಾಗಿದೆ. ಅವನು ಸರಿಯಾಗಿ ಹೊತ್ತು ನಡೆಯುತ್ತಿಲ್ಲ" ಎಂದರು. ಅರಸನು ತಾನು ಅರಸನೆಂಬ ಗರ್ವದಿಂದ ಭರತಮುನಿಯ ಯೋಗ್ಯತೆಯನ್ನು ಅರಿಯದೆ ಹಾಸ್ಯ ಮಾಡುತ್ತ "ಅಯ್ಯೋ ಪಾಪ, ಪಲ್ಲಕ್ಕಿ ಹೊತ್ತು ಹೊತ್ತು ಬಹಳ ಬಳಲಿದೆಯೇನೋ? ಪಾಪ, ನಿನಗೆ ಕೈಲಾಗದೋ ಏನೋ ?" ಎಂದು ಮುಂತಾಗಿ ಚುಚ್ಚುವಂತೆ ಮಾತನಾಡಿದನು.

ಅದನ್ನು ಕೇಳಿಯೂ ಭರತನು ಕೇಳದಂತೆ ತನ್ನ ಪಾಡಿಗೆ ತಾನು ಇದ್ದನು. ಪಲ್ಲಕ್ಕಿಯು ಮೊದಲಿನಂತೆಯೇ ಅಲ್ಲಾಡುತ್ತಿರುವುದನ್ನು ಕಂಡು ರಾಜನು ಕೋಪಗೊಂಡು "ಏನೆಲಾ, ಪಿತ್ತ ನೆತ್ತಿಗೇರಿದೆಯೋ ? ಯಮಶಿಕ್ಷೆಯನ್ನು ವಿಧಿಸುವೆನು ಎಚ್ಚರಿಕೆ" ಎಂದು ಅಬ್ಬರಿಸಿದನು. ಆಗ ಭರತ ಮುನಿಯು ನಗುತ್ತಾ, "ಅಯ್ಯಾ, ಪಲ್ಲಕ್ಕಿಯನ್ನು ಹೊತ್ತು ಬಳಲಿದೆಯೆಂದು ಹಂಗಿಸಿದೆ. ಯಮಶಿಕ್ಷೆಯನ್ನು ವಿಧಿಸುವೆನು ಎಂದೆ. ಈ ದೇಹವು ನಾನು ಎಂದುಕೊಂಡಿರುವವನಿಗೆ ತಾನೇ ಆ ಶಿಕ್ಷೆಯು ದಿಗಿಲು ?" ಎಂದು ಸಮಾಧಾನವಾಗಿ ಉತ್ತರವಿತ್ತನು.

ಆ ಮಾತನ್ನು ಕೇಳಿ ರಹೂಗಣನಿಗೆ ಹೇಗೆ ಹೇಗೋ ಆಯಿತು. "ದೇಹವು ನಾನು ಎಂದುಕೊಂಡಿರುವವನಿಗೆ ತಾನೇ

ಆ ಶಿಕ್ಷೆಯ ದಿಗಿಲು ?" ಎಂಬ ಮಾತು ಮತ್ತೆ ಮತ್ತೆ ಕೇಳಿಸಿದಂತಾಗಿ, ಈ ಮಾತನ್ನಾಡುವ ಈತನು ಎಂತಹ ಮಹಾತ್ಮನೋ ಎನ್ನಿಸಿತು. ಕೂಡಲೇ ಪಲ್ಲಕ್ಕಿಯಿಂದ ಇಳಿದು ತಾನು ರಾಜನೆಂಬುದನ್ನೂ ಮರೆತು ಆತನ ಪಾದಗಳಿಗೆ ಎರಗಿದನು; "ಅಪರಾಧವನ್ನು ಮನ್ನಿಸು. ಅಯ್ಯಾ ಮಹಾತ್ಮನೆ, ನೀನು ಯಾರು ? ಏಕೆ ಹೀಗೆ ವೇಷಾಂತರದಿಂದ ಚರಿಸುತ್ತಿರುವೆ? ದಯವಿಟ್ಟು ಹೇಳು. ನನ್ನನ್ನು ಕಾಪಾಡು ಎಂದು ಕೇಳಿಕೊಂಡನು.

ಭರತನು ಹೇಳಿದನು: "ಅಯ್ಯಾ, ಸತ್ವ, ರಜಸ್ಸು, ತಮಸ್ಸು, ಎಂದು ಮೂರು ಗುಣಗಳು. ಈ ಗುಣಗಳು ಮನಸ್ಸನ್ನು ಹಿಡಿದಾಗ ಈ ಸಂಸಾರವನ್ನು ತಂದಿಟ್ಟು ಮನುಷ್ಯನನ್ನು ಗೋಳುಗುಟ್ಟಿಸುವುವು. ಮನಸ್ಸು ಈ ಗುಣಗಳನ್ನು ದಾಟಿದಾಗ ಮೋಕ್ಷವನ್ನು ಉಂಟು ಮಾಡುವುದು. ಅದರಿಂದ ವಿವೇಕಿಗಳು ಮನಸ್ಸನ್ನು ತುಳಿದು, ನಡೆಯುವರು. ವಿವೇಕಿಗಳು "ಶರೀರವು ನನ್ನದು" ಎನ್ನುವರು. ಅವಿವೇಕಿಗಳು, "ಶರೀರವೇ ನಾನು" ಎನ್ನುವರು. ರಾಜನೇ, ಜಾಗ್ರತ್ತು, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಅನುಭವಿಸುತ್ತಿರುವವನೇ ಜೀವನು. ಈ ಜೀವರಿಗೆಲ್ಲಾ ಆಶ್ರಯನಾಗಿರುವವನು ಈಶ್ವರನು. ಗಾಳಿಯು ಕಣ್ಣಿಗೆ ಕಾಣದಿದ್ದರೂ ಎಲ್ಲೆಲ್ಲಿಯೂ ಇರುವಂತೆ, ಈಶ್ವರನು ಇಂದ್ರಿಯಗಳಿಗೆ ಗೋಚರವಾಗದಿದ್ದರೂ ಎಲ್ಲೆಲ್ಲಿಯೂ ಇರುವನು. ಗುರುಕೃಪೆಯನ್ನು ಪಡೆದವನಿಗೆ ಭಗವಂತನು ಎಲ್ಲೆಲ್ಲಿಯೂ ಗೋಚರನಾಗುವನು"

ರಹೂಗಣನು ಮತ್ತೆ ಹೇಳಿದನು: "ಜ್ವರದಿಂದ ಬಳಲಿದವನಿಗೆ ಔಷಧದಂತೆ, ಬಿರು ಬಿಸಿಲಿನಲ್ಲಿ ಬಳಲಿದವನಿಗೆ ತಣ್ಣೀರು ದೊರತಂತೆ ಶರೀರವೇ ನಾನು ಎಂದು ಅಭಿಮಾನ ಪಡುತ್ತಿದ್ದವನಿಗೆ ನಿನ್ನ ನುಡಿಗಳು ಸಂಜೀವನಸದಂತಿರುವುವು. ನಿನ್ನೊಡನೆ ಇಷ್ಟು ಹೊತ್ತು ಮಾತಾ

ಡಿದುದರಿಂದಲೇ ನನ್ನ ಅವಿವೇಕವು ನಾಶವಾಗಿ ಜ್ಞಾನೋದಯ ವಾಯಿತು. ಹೀಗಿರುವಲ್ಲಿ ನಿಮ್ಮಂತಹವರನ್ನು ಸೇವಿಸಿದರೆ ಭಗವಂತ ನಲ್ಲಿ ನಿಶ್ಚಲ ಭಕ್ತಿಯುಂಟಾಗುವುದು ಏನಾಶ್ಚರ್ಯ? ಅದರಿಂದ ನಿನ್ನ ಹಾಗೆ ಇರುವವರಿಗೆಲ್ಲ ಅಡಿಗಡಿಗೂ ನಮಸ್ಕಾರಗಳು" ಎಂದು ಸುತ್ತಿ ಸುತ್ತಿ ನಮಸ್ಕಾರ ಮಾಡಿದನು.

ಮಹಾತ್ಮನಾದ ಭರತ ಮುನಿಯು ಕೃಪೆಮಾಡಿ ಸಿಂಧು ದೇಶಾ ಧಿಪತಿಗೆ ಆತ್ಮ ತತ್ವವನ್ನು ಉಪದೇಶಿಸಿದನು. ಆತನಿಂದ ಪಾದ ಪೂಜೆಯನ್ನು ಮಾಡಿಸಿಕೊಂಡು ಹೊರಟುಹೋದನು. ರಾಜನೂ ತಾನು ದೇಹವೆಂಬ ಅಭಿಮಾನವನ್ನು ಬಿಟ್ಟು ಸುಖಿಯಾದನು.

---

### ಹದಿನೈದನೆಯ ಅಧ್ಯಾಯವು

## ಅಜಾಮಿಳನ ಚರಿತ್ರೆ

ಪರೀಕ್ಷಿತನು ಶ್ರೀ ಶುಕಮುನಿಯನ್ನು ಕೇಳಿದನು: "ಎಲೈ ಭಗವಂತನೆ, ವೈರಾಗ್ಯದಿಂದ ಎಲ್ಲವನ್ನೂ ಬಿಟ್ಟು ಯೋಗಮಾರ್ಗ ವನ್ನು ಹಿಡಿದು ಬ್ರಹ್ಮಲೋಕವನ್ನು ಪಡೆದು ಆ ಬ್ರಹ್ಮನೊಡನೆ ಮುಕ್ತರಾಗುವ ನಿವೃತ್ತಿ ಮಾರ್ಗವನ್ನು ಬೋಧಿಸಿದೆ. ಸ್ವರ್ಗಾದಿ ಪುಣ್ಯ ಲೋಕಗಳಿಗಾಗಿ ಯತ್ನ ಮಾಡುತ್ತ ಮೇಲಿನ ಲೋಕಗಳಿಗೆ ಹೋಗಿ ಹೋಗಿ ಬರುವ ಪ್ರವೃತ್ತಿ ಮಾರ್ಗವನ್ನು ವರ್ಣಿಸಿದೆ. ಸ್ವಾಯಂಭುವ ಮನುವಿನ, ಆತನ ಮಕ್ಕಳಾದ ಪ್ರಿಯವ್ರತ ಉತ್ತಾನ ಪಾದರ ವಂಶಗಳನ್ನೂ ಆ ವಂಶದ ರಾಜರ ಚರಿತ್ರೆಗಳನ್ನೂ ಹೇಳಿದೆ. ಭಗವಂತನಾದ ಚತುರ್ಮುಖನು ನಿರ್ಮಿಸಿರುವ ಬ್ರಹ್ಮಾಂಡವನ್ನೂ ಅಲ್ಲಿರುವ ದ್ವೀಪ, ವರ್ಷ, ಸಮುದ್ರ, ಪರ್ವತ, ನದಿ, ಅರಣ್ಯ, ವನ ಸ್ಪತಿಗಳನ್ನು ಭೂಮಂಡಲವನ್ನೂ ಸೂರ್ಯಚಂದ್ರಾದಿಗಳ ಸ್ವರೂಪ

ಗತಿಗಳನ್ನೂ ವಿವರಿಸಿದೆ. ನೀನು ಮಹಾತ್ಮನು, ಬಲ್ಲವನು, ಅದರಿಂದ ಉಗ್ರಯಾತನೆಯ ನರಕಗಳಿಂದ ಉದ್ಧಾರವಾಗುವ ಬಗೆಯನ್ನೂ ಹೇಳು" ಎಂದು ಬೇಡಿಕೊಂಡನು.

ಶ್ರೀ ಶುಕಮುನೀಂದ್ರರು ಹೇಳಿದರು ;—"ಅರಸ್ತೋ ರಾಜನೆ, ಮನುಷ್ಯನು ಪಾಪ ಮಾಡುವುದು ಮನಸ್ಸು ವಾಕ್ಕು ಕಾಯಗಳು ಎಂಬ ಮೂರು ಕರಣಗಳಿಂದ. ಆ ಪಾಪಗಳನ್ನು ಕಳೆದುಕೊಳ್ಳು ವುದಕ್ಕೆ ಅವನು ದೃಢಾಂಗನಾಗಿರುವಾಗಲೇ ಪ್ರಾಯಶ್ಚಿತ್ತವನ್ನು ಮಾಡಿ ಕೊಳ್ಳಬೇಕು. ಆದರೆ ನಿರ್ಮಲವಾದ ಜಲದಲ್ಲಿ ಮುಳುಗಿ ಮಡಿ ಯಾದ ಆನೆಯು ಮತ್ತೆ ಹೊರಕ್ಕೆ ಬಂದು ತನ್ನ ಮೇಲೆ ಮಣ್ಣು ಸುರಿದುಕೊಳ್ಳುವಂತೆ ಈ ಪ್ರಾಯಶ್ಚಿತ್ತವು. ಪ್ರಾಯಶ್ಚಿತ್ತದಿಂದ ಶುದ್ಧನಾದರೂ ಮರಳಿ ಪಾಪ ಮಾಡುವವನಾದ್ದರಿಂದ, ಈ ಪ್ರಾಯ ಶ್ಚಿತ್ತವು ಪಾಪವನ್ನು ನಿರ್ಮೂಲ ಮಾಡಲಾರದು. ಅದರಿಂದ ಪಾಪ ವನ್ನು ತೊಳೆಯುವುದಕ್ಕೂ ಅದು ಮತ್ತೆ ತಲೆದೋರದಂತೆ ನಿರ್ಮೂಲ ಮಾಡುವುದಕ್ಕೂ ಬ್ರಹ್ಮಜ್ಞಾನವೇ ಸರಿಯಾದ ದಾರಿಯು. ಪಥ್ಯವಾದ ಊಟವನ್ನು ಮಾಡುವವನಿಗೆ ವ್ಯಾಧಿಯು ಹೇಗೆ ಇಲ್ಲವೋ ಹಾಗೆಯೇ ನಿತ್ಯವೂ ನಿಯಮದಿಂದ ಇರುವವನು ತತ್ವಜ್ಞಾನವನ್ನು ಪಡೆದು ಪಾಪ ವನ್ನು ಪರಿಹರಿಸಿಕೊಳ್ಳುವವರೂ ಉಂಟು. ನಾರಾಯಣನನ್ನೇ ನಂಬಿ ನಡೆಯುವುದಕ್ಕಿಂತಲೂ ಇನ್ನು ಯಾವುದೂ ಸುಖವೂ ಅಲ್ಲಿ, ಸುಲ ಭವೂ ಅಲ್ಲ. ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಮನಸ್ಸು ಒಮ್ಮೆ ಆಸಕ್ತವಾದರೆ ಸಾಕು, ಅವನನ್ನು ಯಮರಾಜನ ಭಟರೂ ಏನೂ ಮಾಡಲಾರರು. ಈ ವಿಷಯವಾಗಿ ಒಂದು ಇತಿಹಾಸವನ್ನು ಹೇಳು ವೆನು ಕೇಳು.

ಪೂರ್ವದಲ್ಲಿ ಕಾನ್ಯಕುಬ್ಜವೆಂಬ ದೇಶದಲ್ಲಿ ಅಜಾಮಿಳನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ಒಬ್ಬ ದಾಸಿಯನ್ನು ಕಟ್ಟಿಕೊಂಡು

ತನ್ನ ಸದಾಚಾರವನ್ನೆಲ್ಲ ಬಿಟ್ಟನು: ಜಾತಿಭ್ರಷ್ಟನಾದನು: ನೀಚ ವೃತ್ತಿಯನ್ನು ಅವಲಂಬಿಸಿದನು: ಅವಳ ಮಕ್ಕಳನ್ನು ಲಾಲಿಸುತ್ತಾ ಆ ಸಂಸಾರದಲ್ಲಿಯೇ ಇದ್ದ ಅವನಿಗೆ ಕಿರಿಯ ಮಗನಲ್ಲಿ ಬಹಳ ಮೋಹ ವಿತ್ತು. ಹೀಗಿರಲು ಆ ಅಜಾಮಿಳನಿಗೆ ಮರಣವು ಒದಗಿತು. ಆಗಲೂ ಆ ಮಗನನ್ನು ಕೂಗಬೇಕು ಎನ್ನಿಸಿತು. ಯಮದೂತರು ಎದುರಿಗೆ ಬಂದು ನಿಲ್ಲುವುದಕ್ಕೂ ಅವನು ಗಟ್ಟಿಯಾಗಿ ನಾರಾಯಣಾ ಎಂದು ಕೂಗುವುದಕ್ಕೂ ಸರಿಹೋಯಿತು. ಸಾಯುವಾಗ ಮಗ ನನ್ನು ಕರೆಯುವ ನೆಪದಿಂದಲಾದರೂ ಶ್ರೀಹರಿ ಸ್ಮರಣವನ್ನು ಮಾಡಿದ ನೆಂದು ವಿಷ್ಣುದೂತರೂ ಅಲ್ಲಿಗೆ ಬಂದರು. ಯಮದೂತರು ಪಾಶ ವನ್ನು ಹಾಕಿ ಅಜಾಮಿಳನನ್ನು ಎಳೆದರು. ವಿಷ್ಣುದೂತರು ತಡೆದರು. ಯಮದೂತರು ಅವನ್ನು ಕಂಡು " ಅಯ್ಯಾ, ನೀವು ಮಹಾವಿಷ್ಣುವಿ ನಂತೆ ದಿವ್ಯ ಮಂಗಳ ಮೂರ್ತಿಗಳಾಗಿ, ದಿವ್ಯಾಲಂಕಾರ ಸಂಪನ್ನ ರಾಗಿ, ದಿವ್ಯಾಸ್ತ್ರಗಳನ್ನು ಧರಿಸಿರುವಿರಿ. ನಾವು ಧರ್ಮಪಾಲಕನಾದ ಯಮನ ಕಿಂಕರರು. ನೀವು ನಮ್ಮನ್ನೇಕೆ ತಡೆಯುವಿರಿ?" ಎಂದು ಕೇಳಿದರು. ಅವಕ್ಕವರು, "ಎಲೈ, ನೀವು ಯಮಧರ್ಮನ ದೂತ ರಾದರೆ, ಧರ್ಮವೆಂದರೇನು? ದಂಡನವೆಂದರೇನು? ಹೇಳಿ" ಎಂದು ಕೇಳಿದರು:

ಅವಕ್ಕೆ ಅವರು " ಅಯ್ಯಾ, ವೇದವು ಮಾಡು ಎಂದು ಹೇಳು ವುದು ಧರ್ಮ. ಮಾಡಬೇಡ ಎಂಬುದು ಅಧರ್ಮ. ಲೋಕವನ್ನೆಲ್ಲಾ ಸೃಷ್ಟಿಮಾಡಿ ಕಾಪಾಡುವ ಶ್ರೀಮನ್ನಾರಾಯಣನೇ ವೇದವು, ಸೂರ್ಯ, ಅಗ್ನಿ, ಅಂತರಿಕ್ಷ, ವಾಯು, ಸ್ವರ್ಗ, ಚಂದ್ರ, ಹಗಲು, ಇರುಳು, ದಿಕ್ಕುಗಳು, ಜಲ, ಭೂಮಿ, ಕಾಲ, ಯಮಧರ್ಮ, ಈ ಹದಿಮೂರು ಮಂದಿಯೂ ಯಾವಾಗಲೂ ಪ್ರಾಣಿಗಳ ಕರ್ಮಗಳಿಗೆ ಸಾಕ್ಷಿಗಳಾಗಿ ರುವರು. ಇವರು ಯಾರನ್ನು ಅಧರ್ಮಿಷ್ಠನೆಂದು ಗೊತ್ತು ಮಾಡು

ವರೋಣ. ಅವನಿಗೆ ದಂಡನವು. ಈ ಅಜಾಮಿಳನು ಸದ್ಬ್ರಾಹ್ಮಣನಾಗಿದ್ದನು. ಒಂದು ದಿನ ಒಬ್ಬ ದಾಸಿಯನ್ನು ನೋಡಿ ಮೋಹಗೊಂಡು ಅವಳ ದಾಸನಾಗಿ ಹೋದನು. ನ್ಯಾಯ ಅನ್ಯಾಯಗಳೆಂಬ ಯೋಚನೆಯನ್ನು ಬಿಟ್ಟನು. ಪಾಪವನ್ನು ಆಚರಿಸಿದನು. ಅದರಿಂದ ಈ ಪಾಪಗಳಿಗೆ ದಂಡವನ್ನು ವಿಧಿಸಲು ಇವನನ್ನು ನಮ್ಮ ಲೋಕಕ್ಕೆ ಎಳೆದುಕೊಂಡು ಹೋಗುವೆವು" ಎಂದರು.

ವಿಷ್ಣುದೂತರು ಅವರಿಗೆ ಹೀಗೆ ಹೇಳಿದರು. "ಅಯ್ಯಾ ನೀವು ಹೇಳಿದುದೆಲ್ಲ ಸರಿ. ಆದರೆ, ಈ ಅಜಾಮಿಳನು ಮಗನ ಮೇಲಿನ ಮೋಹದಿಂದಲಾದರೂ ನಾರಾಯಣ ಎಂಬ ಭಗವನ್ನಾಮವನ್ನು ಉಚ್ಚರಿಸಿದನಲ್ಲವೆ? ಇನ್ನು ಅದಕ್ಕಿಂತ ಬೇರೆಯಾದ ಪ್ರಾಯಶ್ಚಿತ್ತವೇನು ಬೇಕು? ಆ ನಾಮವು ಇವನ ಪಾಪಗಳನ್ನು ಕಳೆದುದು ಮಾತ್ರವೇ ಅಲ್ಲ: ಇವನಿಗೆ ಭಗವಂತನ ಪ್ರೀತಿಯನ್ನು ಸಂಪಾದಿಸಿ ಕೊಟ್ಟಿರುವುದು. ಮಕ್ಕಳಿಗಿಟ್ಟ ಹೆಸರಾಗಲಿ, ಪರಿಹಾಸ್ಯಕ್ಕಾಗಲಿ, ಸಂಗೀತದ ಮಧ್ಯದಲ್ಲಾಗಲಿ, ಆಣಕಿಸುವುದಕ್ಕಾಗಲಿ, ಹೇಗೆ ಹೇಗಾದರೂ ಭಗವಂತನ ನಾಮವನ್ನು ಉಚ್ಚರಿಸಿದರೆ ಸಾಕು, ಸರ್ವ ಪಾಪಗಳೂ ನಿಶ್ಶೇಷವಾಗುವುವು: ತಿಳಿಯದೆ ಸೇವಿಸಿದರೂ ಮಹೌಷಧವು ರೋಗವನ್ನು ಕಳೆಯುವುದಿಲ್ಲವೆ?"

ಹೀಗೆ ಹೇಳುತ್ತಲೂ ಯಮದೂತರು ಸರಿಯೆಂದು ಹಿಂದಕ್ಕೆ ಹೊರಟು ಹೋದರು. ವಿಷ್ಣುದೂತರೂ ಹೊರಟು ಹೋದರು. ನಾನು ಮಾಡಿದ ಪಾಪವೆಲ್ಲ ಒಂದು ಸಲ ನಾರಾಯಣ ಎಂದುದರಿಂದ ನಾಶವಾಯಿತು ಎಂದ ಮೇಲೆ ಆ ಭಗವನ್ನಾಮವು ಎಂತಹ ಪವಿತ್ರವಾದುದು! ಇನ್ನು ಮುಂದೆ ನಾನು ಎಲ್ಲವನ್ನೂ ಬಿಟ್ಟು ಭಗವನ್ನಾಮ ಸಂಕೀರ್ತನವೊಂದನ್ನೇ ಒಡಿಯುವೆನು" ಎಂದು ಅವನು ಭಕ್ತನಾದನು. ಕೊನೆಗೆ ವೈಕುಂಠವನ್ನು ಪಡೆದನು.



ಅಜಾಮಿಳನು ವಿಷ್ಣುಲೋಕಕ್ಕೆ ಹೋದುದು

ಯಮದೂತರು ಹಿಂತಿರುಗಿ ಹೋಗಿ ನಡೆದುದು ಎಲ್ಲವನ್ನೂ ಯಮನಿಗೆ ತಿಳಿಸಿದರು. ಆತನು ಅದನ್ನು ಕೇಳಿ ಬಹಳ ಸಂತೋಷ ಪಟ್ಟನು: ಶ್ರೀ ಹರಿಯ ಪಾದಕಮಲಗಳನ್ನು ಧ್ಯಾನಿಸಿ ಅವರಿಗೆ ಹೀಗೆ ಹೇಳಿದನು: ಎಲೈ ದೂತರಿರಾ ಕೇಳಿ. ಬಟ್ಟೆಯಲ್ಲಿ ಅಡ್ಡವಾಗಿ ಉದ್ದವಾಗಿ ಇದ್ದು ಬಟ್ಟೆಯನ್ನು ಮಾಡುವ ದಾರದಂತೆ ಪರಮಾತ್ಮನು ಈ ಪ್ರಪಂಚವನ್ನು ಮಾಡಿರುವನು. ಬ್ರಹ್ಮ ರುದ್ರಾದಿಗಳೆಲ್ಲರೂ ಆ ಭಗವಂತನ ಅಂಶಗಳು. ಆತನೇ ನಾರಾಯಣನು. ಆತನೇ ಎಲ್ಲ ವನ್ನೂ ಆಳುವವನು. ನಾನು ಆತನ ಅಪ್ಪಣೆಯಿಂದ ಚೇತನ ರೂಪ ರಾದ ಪ್ರಾಣಿಗಳಿಗೆ ಮಾತ್ರ ನಿಯಾಮಕನಾಗಿರುವೆನು. ಆತನನ್ನು ಕುರಿತು ಹೇಳುವ ಧರ್ಮವು ಭಾಗವತ ಧರ್ಮವು. ಅದು ಬಹು ರಹಸ್ಯ ವಾದುದು. ಚತುರ್ಮುಖನು, ನಾರದ ಮುನಿಯು, ರುದ್ರನು, ಸನ ತ್ಕುಮಾರನು, ಕಪಿಲ ಮುನಿಯು, ಸ್ವಾಯಂಭುವ ಮನುವು, ಪ್ರಹ್ಲಾದ, ಜನಕರಾಜನು, ಭೀಷ್ಮನು, ಬಲಿಚಕ್ರವರ್ತಿಯು, ಶುಕಮುನಿಯು ನಾನು, ಈ ಹನ್ನೆರಡು ಮಂದಿ ಮಾತ್ರ ಅತಿ ರಹಸ್ಯವೂ ಪರಮ ಪಾವನವೂ ಆದ ಭಾಗವತ ಧರ್ಮದ ರಹಸ್ಯವನ್ನು ಬಲ್ಲೆವು. ಭಗವನ್ನಾಮ ಕೀರ್ತನವು ಸಕಲ ಪಾಪಗಳನ್ನೂ ಹೋಗಲಾಡಿಸ ಬಲ್ಲುದು. ಆದ್ದರಿಂದ ಬಲ್ಲವರು ಭಕ್ತಿಯೋಗವನ್ನು ಸಾಧಿಸುವರು. ದಯಾಳುಗಳಾಗಿ ಎಲ್ಲರಲ್ಲಿಯೂ ಸಮದೃಷ್ಟಿಯುಳ್ಳವರಾಗಿ ಶ್ರೀ ಹರಿ ಯನ್ನು ಸಂಪೂರ್ಣವಾಗಿ ಮರೆ ಹೊಂದಿದವರಾದ ಪುಣ್ಯವಂತರ ಬಳಿಗೆ ಸುಳಿದೀರಿ. ಭಗವಂತನಾದ ವಾಸುದೇವನಿಗೆ ನಮಸ್ಕಾರ ಎನ್ನದ ಪಾಪಿಗಳನ್ನು ಬಿಡದೆ ನನ್ನ ಬಳಿಗೆ ಎಳೆತನ್ನಿ" ಎಂದು ನಾಮ ಮಹಿಮೆಯನ್ನು ನಿರೂಪಿಸಿದನು.

# ನಾರದರಿಗೆ ಶಾಪ ಬಂದುದು

ಪರೀಕ್ಷಿದ್ರಾಜನು ಮತ್ತೆ ಶುಕಮುನಿಯನ್ನು ಕುರಿತು "ಎಲೈ ಶುಕಮುನೀಂದ್ರನೆ, ಸ್ವಾಯಂಭುವ ಮನ್ವಂತರದಲ್ಲಿ ನಡೆದ ಸೃಷ್ಟಿಯನ್ನು ಕುರಿತು ಸಂಗ್ರಹವಾಗಿ ಹೇಳಿದೆ. ಅದನ್ನು ವಿಸ್ತಾರವಾಗಿ ಕೇಳಬೇಕೆಂದಿರುವೆನು" ಎಂದು ಕೇಳಿದನು. ಆತನು ಆಗಲೆಂದು ಹೇಳಿದನು:

"ಪ್ರಚೇತಸರು ಮಾರ್ಕ್ಷೆಯನ್ನು ಮದುವೆಯಾದರು. ಅವರ ಮಗನಾಗಿ ದಕ್ಷನು ಹುಟ್ಟಿದನು ಎಂದು ಹಿಂದೆ ಹೇಳಿದ್ದೆನಲ್ಲವೆ ? ಆ ದಕ್ಷನು ಆಕಾಶ ಭೂಮಿ ಜಲಗಳಲ್ಲಿರುವ ದೇವ ಮನುಷ್ಯಾದಿಗಳನ್ನು ಮನಸ್ಸಿನಿಂದ ಸೃಷ್ಟಿಸಿದನು. ಆದರೆ ಆ ಪ್ರಜಾವರ್ಗವು ಬೆಳೆಯಲಿಲ್ಲ. ಆಗ ಪ್ರಜಾವೃದ್ಧಿಯಾಗಲೆಂದು ವಿಂಧ್ಯ ಪರ್ವತಕ್ಕೆ ಹೋಗಿ ತಪಸ್ಸು ಮಾಡಿದನು. ಆತನು ಹಂಸಗುಹ್ಯವೆಂಬ ಸ್ತೋತ್ರದಿಂದ ಭಗವಂತನಾದ ನಾರಾಯಣನನ್ನು ಪ್ರಾರ್ಥಿಸಿದನು. ಮಹಾವಿಷ್ಣುವು ಆ ಸ್ತೋತ್ರದಿಂದ ಸಂತುಷ್ಟನಾಗಿ ದಕ್ಷಬ್ರಹ್ಮನಿಗೆ ಅನುಗ್ರಹ ಮಾಡಿದನು. ಆ ಸ್ತೋತ್ರವನ್ನು ಹೇಳುವೆನು ಕೇಳು:

"ಎಲ್ಲಕ್ಕಿಂತಲೂ ದೊಡ್ಡವನಿಗೆ ನಮಸ್ಕಾರವು. ಯಾವ ಅಳತೆಗೂ ಸಿಕ್ಕದೆ, ಯಾರಿಗೂ ಗೋಚರನಾಗದೆ, ಇರುವ ಸ್ವಯಂಭುವಿಗೆ ನಮಸ್ಕಾರವು. ಶುದ್ಧವಾದ ಮನಸ್ಸಿಗೆ ಗೋಚರವಾಗುವ ಭಗವಂತನಿಗೆ ನಮಸ್ಕಾರವು. ನಾನಾ ನಾಮರೂಪಗಳನ್ನುಳ್ಳ ಅನಂತವೂ ಅಪ್ರಕಾಶವೂ ಆದ ಮಾಯಾಶಕ್ತಿಯುಳ್ಳವನಾಗಿಯೂ ಇರುವ ವಾಸುದೇವನಿಗೆ ನಮಸ್ಕಾರವು. ನಿಜವಾಗಿ ಯಾವ ನಾಮರೂಪಗಳೂ ಇಲ್ಲದವನಾದರೂ ಭಕ್ತರನ್ನು ಪಾಲಿಸುವುದಕ್ಕಾಗಿ ನಾನಾ

ನಾಮರೂಪಗಳನ್ನು ಯಾರು ಧರಿಸಿರುವರೋ ಆ ಪರಮಾತ್ಮನಿಗೆ ನಮಸ್ಕಾರವು.''

ಹೀಗೆ ದಕ್ಷಬ್ರಹ್ಮನು ಅಘಮರ್ಷಣವೆಂಬ ತೀರ್ಥದಲ್ಲಿ ಕುಳಿತು ಸ್ತೋತ್ರ ಮಾಡಲು ಭಗವಂತನು ಗರುಡಾರೂಢನಾಗಿ, ನೀಲ ಮೇಘಶ್ಯಾಮನಾಗಿ, ಎಂಟು ತೋಳುಗಳುಳ್ಳವನಾಗಿ, ದರ್ಶನ ಕೊಟ್ಟನು. ನಾರದಾದಿಗಳು ಆತನ ಪಕ್ಕದಲ್ಲಿ ನಿಂತು ಹೊಗಳುತ್ತಿದ್ದರು. ಆ ದಿವ್ಯ ರೂಪವನ್ನು ಕಂಡು ದಕ್ಷನ ಮನಸ್ಸು ನೀರಿನಿಂದ ತುಂಬಿದ ಬೆಟ್ಟದ ನದಿಯಂತೆ ಸಂತೋಷದಿಂದ ತುಂಬಿಹೋಯಿತು. ಏನೂ ಮಾತಾಡಲಾರದೇ ಆತನು ನಿಂತುಬಿಟ್ಟನು. ಆಗ ಭಗವಂತನು ಆ ದಕ್ಷನಿಗೆ ಹೀಗೆ ಹೇಳಿದನು:

"ಎಲೈ ದಕ್ಷಬ್ರಹ್ಮನೆ, ನೀನು ಪ್ರಜಾಭಿವೃದ್ಧಿಯಾಗಲೆಂದು ತಪಸ್ಸು ಮಾಡಿದೆ. ನನ್ನ ಇಷ್ಟವೂ ಅದೇ! ಅದಕ್ಕಾಗಿಯೇ ಬ್ರಹ್ಮ ರುದ್ರ ಮರೀಚ ಮೊದಲಾದವರು, ಮನುಗಳು, ಇಂದ್ರಾದಿಗಳು, ಇವರೆಲ್ಲರನ್ನೂ ಸೃಷ್ಟಿಸಿರುವೆನು. ಈ ವಿಷಯದಲ್ಲಿ ಒಂದು ಇತಿಹಾಸವನ್ನು ಹೇಳುವೆನು ಕೇಳು. ಮೊದಲು ಎಂದರೆ ಪ್ರಪಂಚ ಸೃಷ್ಟಿಗೆ ಮೊದಲು ನಾನು ಮಾತ್ರವಿದ್ದೆನು. ಆಗ ನಾನು ಯೋಗನಿದ್ರೆಯಲ್ಲಿದ್ದೆನು. ನನ್ನ ಮಾಯೆಯಿಂದ ವಿರಾಟ್ಪುರುಷನು ಹುಟ್ಟಿದನು. ಆತನಿಂದ ಚತುರ್ಮುಖನು ಹುಟ್ಟಿದನು. ಆತನು ಸೃಷ್ಟಿಯನ್ನು ಮಾಡಲಾರದೆ ಹೋಗಲು ನಾನೇ ತಪಸ್ಸು ಮಾಡು ಎಂದು ಹೇಳಿದೆನು. ತಪಸ್ಸು ಮಾಡಿ ಆತನು ನಿಮ್ಮೆಲ್ಲರನ್ನೂ ಪಡೆದನು. ಈಗ ನೀನು ಪಂಚಜನನ ಮಗಳಾದ ಅಸಿಕ್ನಿಯೆಂಬ ಕನ್ಯೆಯನ್ನು ಮದುವೆಯಾಗು. ನಿನ್ನ ಸಂತಾನವು ಲೋಕವನ್ನೆಲ್ಲಾ ತುಂಬುವುದು. ಇನ್ನು ಮುಂದೆ ಎಲ್ಲರೂ ಸ್ತ್ರೀ ಗರ್ಭದಲ್ಲಿ ಹುಟ್ಟುವರು."

ಹೀಗೆ ಭಗವಂತನಿಂದ ಅಪ್ಪಣೆಯನ್ನು ಪಡೆದು ದಕ್ಷನು ಅಸಿಕ್ನಿ

ಯನ್ನು ಮದುವೆಯಾಗಿ ಹರ್ಯಶ್ವರೆಂಬ ಹತ್ತು ಸಾವಿರ ಮಂದಿ ಪುತ್ರರನ್ನು ಪಡೆದನು ಅವರು ಪ್ರಜಾರ್ಥವಾಗಿ ತಪಸ್ಸು ಮಾಡಲು ಸಿಂಧು ನದಿಯು ಸಮುದ್ರವನ್ನು ಸೇರುವಲ್ಲಿ ಇರುವ ನಾರಾಯಣ ಸರಸ್ಸು ಎಂಬಲ್ಲಿ ನೆಲೆಸಿದರು ಅಲ್ಲಿ ಸ್ನಾನಾಚಮನಾದಿಗಳನ್ನು ಮಾಡುತ್ತಲೂ ಅವರ ಮನಸ್ಸು ಪವಿತ್ರವಾಗಿ ಅವರಿಗೆ ಏನೂ ಬೇಡ ವೆನ್ನಿಸಿತು: ಆದರೂ ತಂದೆಯ ಅಪ್ಪಣೆಯಂತೆ ಕಠೋರವಾದ ತಪಸ್ಸನ್ನು ಮಾಡುತ್ತಿದ್ದರು.

ಆಗ ನಾರದನು ಅಲ್ಲಿಗೆ ಬಂದು ಅವರಿಗೆ ಬ್ರಹ್ಮವಿದ್ಯೆಯನ್ನು ಹತ್ತು ಒಗಟುಗಳಲ್ಲಿ ಹೇಳಿದನು. ಅವರು ಅವನ್ನು ಅರ್ಥ ಮಾಡಿ ಕೊಂಡು ಬುದ್ಧಿಗಿಂತ ಆಚೆ ಇರುವ ಪರಮಾತ್ಮನ ದರ್ಶನ ಮಾಡಿ ಮುಕ್ತರಾದರು.

ದಕ್ಷನು ಮತ್ತೆ ಮಡದಿಯಲ್ಲಿ ಸಬಲಾಶ್ವರೆಂಬ ಒಂದು ಸಾವಿರ ಮಂದಿ ಮಕ್ಕಳನ್ನು ಪಡೆದನು ಅವರೂ ಅಣ್ಣಂದಿರು ತಪ ಸ್ಸಿಗಾಗಿ ಹೋಗಿದ್ದ ನಾರಾಯಣ ತೀರ್ಥಕ್ಕೆ ಹೋಗಿ ಭಗವಂತನನ್ನು ಕುರಿತು ತಪಸ್ಸು ಮಾಡಿದರು ಆಗ ನಾರದನು ಮತ್ತೆ ಅಲ್ಲಿಗೆ ಹೋಗಿ ಹಿಂದೆ ಹೇಳಿದ ಒಗಟುಗಳನ್ನೇ ಹೇಳಿದನು. ಸಬಲಾಶ್ವರೂ ಆ ಒಗಟು ಗಳನ್ನು ಅರ್ಥ ಮಾಡಿಕೊಂಡು ಅಣ್ಣಂದಿರ ಮಾರ್ಗವನ್ನೇ ಹಿಡಿದರು.

ದಕ್ಷನು ಆ ಸುದ್ದಿಯನ್ನು ಕೇಳಿ ಪುತ್ರಶೋಕದಿಂದ ಮೂರ್ಛೆ ಯನ್ನು ಹೊಂದಿದನು. ಆ ವೇಳೆಗೆ ನಾರದನು ಅಲ್ಲಿಗೆ ಬರಲು, ಅವರ ಮೇಲೆ ಕೋಪ ಮಾಡಿಕೊಂಡು “ ನನ್ನ ಮಕ್ಕಳಿಗೆ ವಿರಕ್ತ ಮಾರ್ಗ ವನ್ನು ಉಪದೇಶಿಸಿ ಅನ್ಯಾಯ ಮಾಡಿದೆ. ನನ್ನ ಸಂತಾನವನ್ನು ನಾಶ ಮಾಡಿದವನೆ, ನೀನು ಒಂತಲ್ಲಿ ನಿಲ್ಲದೆ ಅಲೆಯುತ್ತಿರು'' ಎಂದು ಶಪಿಸಿದನು. ನಾರದನು ಅದನ್ನು ಒಪ್ಪಿಕೊಂಡನು.

ಹೀಗೆ ದುಃಖಿತನಾಗಿ ದಕ್ಷಬ್ರಹ್ಮನನ್ನು ಚತುರ್ಮುಖ ಬ್ರಹ್ಮನೇ

ಬಂದು ಸಂತೈಸಿದನು. ಆತನು ಪುತ್ರ ಪ್ರಜಾಸೃಷ್ಟಿ ಮಾಡಲು ಹೊರಟು ನಾರದರಿಗೆ ಹೆದರಿ ಈ ಸಲ ಅರವತ್ತು ಮಂದಿ ಹೆಣ್ಣು ಮಕ್ಕಳನ್ನು ಪಡೆದನು, ಅವರಲ್ಲಿ ಹತ್ತು ಮಂದಿಯನ್ನು ಧರ್ಮನಿಗೂ ಹದಿಮೂರು ಮಂದಿಯನ್ನು ಕಾಶ್ಯಪನಿಗೂ ಇಪ್ಪತ್ತೇಳು ಮಂದಿಯನ್ನು ಚಂದ್ರನಿಗೂ ತಾರ್ಕ್ಷ್ಯನಿಗೆ ನಾಲ್ವರನ್ನೂ ರುದ್ರ ಅಂಗಿರಸ್ಸು ಕೃಶಾಶ್ವರಿಗೆ ಇಬ್ಬಿಬ್ಬರನ್ನೂ ಕೊಟ್ಟನು. ಅವರ ಸಂತಾನಗಳು ಲೋಕಲೋಕಗಳನ್ನೆಲ್ಲಾ ತುಂಬಿದುವು.

ಕಶ್ಯಪನು ತನ್ನ ಹದಿಮೂರು ಮಂದಿ ಪತ್ನಿಯರಲ್ಲಿ ತಿಮಿಯಿಂದ ತಿಮಿಂಗಿಲಾದಿ ಜಲಜಂತುಗಳನ್ನೂ ಸರಮೆಯಿಂದ ಮಾಂಸಾಹಾರಿಗಳಾದ ದುಷ್ಟಮೃಗಗಳನ್ನೂ ಸುರಭಿಯಿಂದ ಎಮ್ಮೆ, ದನ, ಆಡು, ಕುರಿ ಮೊದಲಾದ ಒಡೆದ ಗೊರಸಿನ ಪ್ರಾಣಿಗಳನ್ನೂ ತಾಮ್ರೆಯಿಂದ ಗಿಡಗ, ಹದ್ದು, ಮೊದಲಾದ ಹಕ್ಕಿಗಳನ್ನೂ ಮುನಿಯಿಂದ ಅಪ್ಸರೆಯರನ್ನೂ ಕ್ರೋಧವಶೆಯಿಂದ ಸರ್ಪಜಾತಿಗಳನ್ನೂ ಇಳೆಯಿಂದ ವೃಕ್ಷಜಾತಿಗಳನ್ನೂ ಸುರಸೆಯಿಂದ ಯಾತುಧಾನರನ್ನೂ ಅರಿಷ್ಟೆಯಿಂದ ಗಂಧರ್ವ ಕುಲವನ್ನೂ ಕಾಷ್ಠೆಯಿಂದ ಒಂದೇ ಗೊರಸಿನ ಪ್ರಾಣಿಗಳನ್ನೂ ದನುವೆಂಬುವಳಿಂದ ದಾನವರನ್ನೂ ಪಡೆದನು. ಕಾಶ್ಯಪನೂ ಪುತ್ರ ಬ್ರಹ್ಮನ ಆಜ್ಞೆಯಿಂದ ಪುಲೋಮೆ ಕಾಲಕೇಯರೆಂಬ ಇಬ್ಬರನ್ನು ಮದುವೆಯಾದನು. ಅವರ ಮಕ್ಕಳೇ ಪೌಲೋಮರು ಆತನಿಂದ ಕಾಲಕೇಯರು. ಮಹಾತ್ಮಳಾದ ಅದಿತಿಯು ದ್ವಾದಶಾದಿತ್ಯರನ್ನು ಪಡೆದಳು. ಈ ಆದಿತ್ಯರಿಗೆ ಮಕ್ಕಳಾಗಿ ಯಮ, ಯಮಿ, ವೈವಸ್ವತನೆಂಬ ಮನು, ಶನೈಶ್ವರ ಸಾವರ್ಣಿ ಎಂಬ ಮನು, ಚರ್ಷಣಿಗಳು, ಸನ್ನಿವೇಶ, ವಿಶ್ವರೂಪ ಎಂಬುವರು ಹುಟ್ಟಿದರು.

ಹದಿನೇಳನೆಯ ಅಧ್ಯಾಯವು

# ವೃತ್ರಾಸುರ ವೃತ್ತಾಂತ

ಸಪ್ತಮರುತ್ತುಗಳು, ಅಷ್ಟವಸುಗಳು ಏಕಾದಶರುದ್ರರು, ದ್ವಾದಶಾದಿತ್ಯರು, ಋಭುಗಳು, ವಿಶ್ವೇದೇವತೆಗಳು, ಮೊದಲಾದ ದೇವತೆಗಳೆಲ್ಲರಿಂದಲೂ ಓಲಗವನ್ನು ತೆಗೆದುಕೊಳ್ಳುತ್ತಾ ದೇವೇಂದ್ರನು ಸಿಂಹಾಸನದಲ್ಲಿ ಕುಳಿತಿದ್ದನು. ಹೀಗೆ ದೇವರಾಜನು ಮಹಾವೈಭವದಿಂದಿರುವಾಗ ದೇವಗುರುವಾದ ಬೃಹಸ್ಪತ್ಯಾಚಾರ್ಯನು ಸಭೆಗೆ ಬಂದನು. ತನಗೂ ದೇವತೆಗಳೆಲ್ಲರಿಗೂ ಪರಮಾಚಾರ್ಯನಾದ ಆತನು ಬಂದರೂ ದೇವೇಂದ್ರನು ಆತನನ್ನು ಗೌರವಿಸಲಿಲ್ಲ. ಆಗ ಆತನು ಮಹೇಂದ್ರನು ಗರ್ವದಿಂದ ತಿರಸ್ಕರಿಸಿದನು ಎಂದು ತಿಳಿದುಕೊಂಡು ಹಿಂತಿರುಗಿ ಹೊರಟು ಹೋದನು. ಆಮೇಲೆ ದೇವನಾಥನಿಗೆ ತಾನು ಮಾಡಿದುದು ತಪ್ಪು ಎಂದು ತಿಳಿಯಿತು. ತಾನು ಹೋಗಿ ತಲೆಯನ್ನು ಅವರ ಪಾದದಲ್ಲಿಟ್ಟು ಅವರ ಪ್ರಸಾದವನ್ನು ಸಂಪಾದಿಸಬೇಕು ಎಂದು ಕೊಂಡನು. ಆದರೆ ಹುಡುಕಿದರೂ ಸಿಕ್ಕಲಿಲ್ಲ.

ದೇವಗುರುವು ಮರೆಯಾದನು ಎಂದು ಸುದ್ದಿಯನ್ನು ಕೇಳಿದ ಕೂಡಲೇ ಅಸುರರು ಸುರರನ್ನು ಧ್ವಂಸ ಮಾಡಿದರು. ಏಟು ತಿಂದು ಮೈ ಮುರಿದುಕೊಂಡು ದೇವತೆಗಳೆಲ್ಲರೂ ಬ್ರಹ್ಮನ ಬಳಿಗೆ ಹೋಗಿ ಅತ್ತುಕೊಂಡರು.

ಆತನೂ ಅವರನ್ನು ಕಂಡು ಕನಿಕರದಿಂದ, " ಅಯ್ಯೋ ನಿಮಗಿಷ್ಟು ವಿವೇಕವಿಲ್ಲವಾಯಿತಲ್ಲಾ! ಎಂತಹ ಕೆಟ್ಟ ಕೆಲಸ ಮಾಡಿದಿರಿ ? ಬ್ರಹ್ಮಜ್ಞಾನಿಯಾದ ಗುರುವು ಬಂದರೆ ತಿರಸ್ಕರಿಸಿದಿರಿ. ಅದೇ ನಿಮ್ಮ ಸೋಲಿಗೆ ಕಾರಣವು. ಗುರುಭಕ್ತಿಯೇ ಸಕಲ ಶ್ರೇಯಸ್ಸಿಗೂ

ಕಾರಣವೆಂಬುವನ್ನು ಏಕೆ ಮರೆತಿರಿ? ಹಿಂದೆ ಗುರುತಿರಸ್ಕಾರದಿಂದ ಹೀನದಶೆಗೆ ಬಂದಿದ್ದ ದೈತ್ಯರು ಗುರುಸೇವೆಯಿಂದ ವೃದ್ಧಿಯನ್ನು ಪಡೆದುದನ್ನು ಕಾಣಿರಾ? ಆ ಶುಕ್ರಶಿಷ್ಯರು ಗುರುಭಕ್ತಿ ಸಂಪನ್ನರು. ಅವರಿಗೆ ಬ್ರಹ್ಮಲೋಕವೇ ಲಕ್ಷ್ಯವಿಲ್ಲ. ಅದರಿಂದ ನೀವು ವಿಪ್ರನೂ ತಪಸ್ವಿಯೂ ಆತ್ಮಜ್ಞಾನಿಯೂ ಆದ ವಿಶ್ವರೂಪನನ್ನು ಆಚಾರ್ಯ ನನ್ನಾಗಿ ವರಿಸಿ. ಆತನು ರಾಕ್ಷಸರ ದೌಹಿತ್ರನು (ಮಗಳ ಮಗ) ಅದರಿಂದ ಆತನಿಗೆ ರಾಕ್ಷಸರಲ್ಲಿ ಸಹಜವಾದ ಪಕ್ಷಪಾತವುಂಟು. ಅದನ್ನು ಸಹಿಸಿಕೊಂಡು ಆತನನ್ನು ಪೂಜಿಸಿದರೆ ಆತನು ನಿಮಗೆ ಬೇಕಾದ್ದನ್ನು ಮಾಡಿಕೊಡುವನು" ಎಂದನು.

ದೇವತೆಗಳು ಆಗಲೆಂದು ಆತನ ಬಳಿಗೆ ಹೋಗಿ "ಅಯ್ಯಾ, ನಾವು ನಿನಗೆ ಪಿತೃಗಳು. ಪಿತೃಗಳ ಶುಶ್ರೂಷಣವು ಉತ್ತಮೋತ್ತಮ ಧರ್ಮವು. ವೇದವನ್ನು ಕಲಿಸಿ ಮಂತ್ರಾರ್ಥಗಳನ್ನು ಅರಿಯಿಸಿದ ಆಚಾರ್ಯನು ಪರಮಾತ್ಮ ಸ್ವರೂಪನು. ಶರೀರವನ್ನು ಕೊಟ್ಟ ತಂದೆಯು ಬ್ರಹ್ಮಸ್ವರೂಪನು. ತಾಯಿಯು ಭೂಮಿಯು. ಒಡ ಹುಟ್ಟಿದವರು ಇಂದ್ರರು, ಅಕ್ಕತಂಗಿಯರು ದಯಾಸ್ವರೂಪರು, ಅತಿಥಿಯು ಧರ್ಮಸ್ವರೂಪನು, ಅಭ್ಯಾಗತನು ಅಗ್ನಿಸ್ವರೂಪನು, ಸಕಲ ಭೂತಗಳೂ ಭಗವಂತನಾದ ಶ್ರೀಹರಿಯ ಸ್ವರೂಪವೆನ್ನುವರು. ಆದರಿಂದ ನಿನಗೆ ಪಿತೃಗಳಾದ ನಮಗೆ ಉಂಟಾಗಿರುವ ಈ ಸಂಕಟ ವನ್ನು ನಿನ್ನ ತಪಸ್ಸಿನಿಂದ ಪರಿಹರಿಸು. ನೀನು ನಮಗೆ ಪುರೋಹಿತ ನಾಗು" ಎಂದು ಬೇಡಿದನು.

ವಿಶ್ವರೂಪನು ಪೌರೋಹಿತ್ಯವನ್ನು ಒಪ್ಪಿಕೊಳ್ಳಲು ಇಷ್ಟವಿಲ್ಲ ದಿದ್ದರೂ ತನಗೆ ಗುರುಗಳಾದ ದೇವತೆಗಳು ಕೇಳಿಕೊಳ್ಳುವರೆಂಬ ದಾಕ್ಷಿಣ್ಯದಿಂದ ಒಪ್ಪಿದನು, ನಾರಾಯಣ ಕವಚವನ್ನು ಅವರಿಗೆ ಉಪದೇಶ ಮಾಡಿ, ದೈತ್ಯರ ಸಾಂರಾಜ್ಯವನ್ನು ಮುರಿದು ದೇವೇಂದ್ರ

ನಿಗೆ ಮೊದಲಿನಂತೆ ಅಧಿಕಾರವು ಬರುವಂತೆ ಮಾಡಿದನು. ಆ ನಾರಾಯಣ ಕವಚವನ್ನು ಪರ್ವಕಾಲಗಳಲ್ಲಿ ಭಕ್ತಿಯಿಂದ ಕೇಳಿದರೆ, ಪಠಿಸಿದರೆ; ಅವನನ್ನು ಸಕಲ ಭೂತಗಳೂ ವಂದಿಸುವುವು. ಅವನಿಗೆ ಎಲ್ಲೂ ಯಾವ ಭಯವೂ ಇಲ್ಲವಾಗುವುದು.

ಆ ವಿಶ್ವರೂಪನಿಗೆ ಮೂರು ತಲೆಗಳಿದ್ದುವು. ಒಂದರಿಂದ ಸೋಮಪಾನ ಮಾಡುವನು; ಇನ್ನೊಂದರಿಂದ ಸುರಾಪಾನ ಮಾಡುವನು; ಮತ್ತೊಂದರಿಂದ ಅನ್ನವನ್ನು ತಿನ್ನುವನು. ಅವನು ಗುಟ್ಟಾಗಿ ರಾಕ್ಷಸರಿಗೆ ಯಜ್ಞಭಾಗಗಳನ್ನು ಕೊಡುತ್ತಿದ್ದನು. ಅದನ್ನು ತಿಳಿದು ದೇವೇಂದ್ರನು ಕೋಪದಿಂದ ಆತನ ತಲೆಗಳನ್ನು ಕಡಿದನು. ಆ ತಲೆಗಳಲ್ಲಿ ಸೋಮಪಾನ ಮಾಡುತ್ತಿದ್ದ ತಲೆಯು ಕಪಿಂಜಲವೆಂಬ ಹಕ್ಕಿಯಾಯಿತು. ಸುರಾಪಾನ ಮಾಡುತ್ತಿದ್ದ ತಲೆಯು ಕಲವಿಂಕವಾಯಿತು. ಮೂರನೆಯದು ತಿತ್ತಿರಿಯಾಯಿತು. ದೇವರಾಜನಿಗೆ ಬ್ರಹ್ಮಹತ್ಯೆಯು ಬಂತು. ಅದನ್ನು ಒಂದು ವರ್ಷ ತಾನು ಅನುಭವಿಸಿ ಆಮೇಲೆ ಅದನ್ನು ಭೂಮಿ, ನೀರು, ಗಿಡ, ಸ್ತ್ರೀಯರಿಗೆ ಹಂಚಿ ಕೊಟ್ಟನು. ತನ್ನ ಪಾಪವನ್ನು ಸ್ವೀಕರಿಸಿದುದಕ್ಕೆ ಅವರಿಗೆ ವರವನ್ನು ಕೊಟ್ಟನು. ಹಳ್ಳಕೊಳ್ಳಗಳು ತಮಗೆ ತಾವೇ ಸಮನಾಗುವಂತೆ ಭೂಮಿಗೂ, ಕಡಿದಷ್ಟೂ ಚಿಗುರಲೆಂದು ಗಿಡಗಳಿಗೂ, ಪ್ರಸವಕಾಲದವರೆಗೂ ಪುರುಷಸುಖವನ್ನು ಪಡೆಯಬಹುದೆಂದು ಸ್ತ್ರೀಯರಿಗೂ, ತಾನು ಸೇರಿದ ವಸ್ತುವನ್ನು ಬೆಳೆಸುವಂತೆ ನೀರಿಗೂ ವರವನ್ನು ಕೊಟ್ಟನು. ಭೂಮಿಯಲ್ಲಿ ಬಂಜರು, ವೃಕ್ಷಗಳಲ್ಲಿ ಗೋಂದು, ಸ್ತ್ರೀಯಲ್ಲಿ ಮುಟ್ಟು, ನೀರಿನಲ್ಲಿ ನೊರೆಯೂ ಆಗಿ ಈಗಲೂ ಆ ಪಾಪವಿರುವುದು.

ವಿಶ್ವರೂಪನ ತಂದೆಯಾದ ತ್ವಷ್ಟೃಬ್ರಹ್ಮನು ಮಗನ ಮರಣವನ್ನು ತಿಳಿದು ಕೋಪಗೊಂಡು ಇಂದ್ರನನ್ನು ಕೊಲ್ಲತಕ್ಕ ಮಗನಾಗ

ಲಿಂದ ಯಜ್ಞ ಮಾಡಿದನು. ಇಂದ್ರಶತ್ರು ಎನ್ನುವಾಗ ಸ್ವರವು ಬದಲಾಯಿಸಿ ಇಂದ್ರನನ್ನು ಕೊಲ್ಲತಕ್ಕವನು ಎಂಬುದು ಇಂದ್ರನು ಕೊಲ್ಲುವನು ಆಗಿಹೋಯಿತು. ಆದರೂ ಯಜ್ಞಕುಂಡದಿಂದ ಭಯಂಕರ ವಾದ ಒಂದು ಆಕೃತಿಯು ಹುಟ್ಟಿತು. ಅವನು ದಿನಕ್ಕೆ ಒಂದೊಂದು ಬಾಣವಷ್ಟು ಬೆಳೆದು, ಸುಟ್ಟ ಬೆಟ್ಟದಂತೆ, ಸಂಜೆಯ ಮೋಡದಂತೆ ಭಯಂಕರವಾಗಿದ್ದನು. ಕಣ್ಣುಗಳು ನಡುಹಗಲಿನಸೂರ್ಯನಂತೆ ತೀಕ್ಷ್ಣ ವಾಗಿದ್ದುವು. ಅವನ ತ್ರಿಶೂಲವು ಭೂಮ್ಯಾಕಾಶಗಳನ್ನು ಭೇದಿಸುವಂ ತಿತ್ತು. ಅವನನ್ನು ಕಂಡರೆ ಹೆದರಿ ಎಲ್ಲರೂ ಓಡುವರು. ಅವನು ಲೋಕ ವನ್ನೆಲ್ಲಾ ಆವರಿಸಿದನು ಎಂದು ಅವನಿಗೆ ವೃತ್ರ ಎಂದು ಹೆಸರಾಯಿತು.

ದೇವತೆಗಳು ಅವನನ್ನು ಕಂಡು ತಮ್ಮ ಅಸ್ತ್ರಶಸ್ತ್ರಗಳಿಂದ ಅವ ನನ್ನು ಹೊಡೆದರು. ಅವನು ಅದೆಲ್ಲವನ್ನೂ ಹಿಡಿಹಿಡಿದು ನುಂಗಿ ಬಿಟ್ಟನು. ಆಗ ದೇವತೆಗಳು ವಿಸ್ಮಯಪಟ್ಟು ಹೆದರಿ ಶ್ರೀಮನ್ನಾರಾ ಯಣನನ್ನು ಶರಣು ಹೊಕ್ಕರು. ಆತನು ಅವರ ಸ್ತುತಿಗಳಿಗೆ ಪ್ರಸನ್ನ ನಾಗಿ ದರ್ಶನವಿತ್ತು " ನೀವು ದಧೀಚಿಯ ಬಳಿಗೆ ಹೋಗಿರಿ. ವಿಶ್ವ ರೂಪನು ನಿಮಗೆ ಉಪದೇಶಿಸಿದ ನಾರಾಯಣ ಕವಚವನ್ನು ಆತನು ತನ್ನ ತಂದೆಯಿಂದ ಪಡೆದನು. ಆತನಿಗೆ ಅದನ್ನು ಕೊಟ್ಟವನು ದಧೀಚಿಯು: ಆತನನ್ನು ಪ್ರಾರ್ಥಿಸಿ ಆತನ ಮೂಳೆಗಳನ್ನು ಸಂಪಾ ದಿಸಿ ವಿಶ್ವಕರ್ಮನು ಆ ಮೂಳೆಗಳಿಂದ ವಜ್ರಾಯುಧವನ್ನು ಮಾಡಲಿ. ನನ್ನ ತೇಜಸ್ಸಿನಿಂದ ಕೂಡಿದ ಆ ವಜ್ರವು ವೃತ್ರನನ್ನು ಸಂಹರಿಸು ವುದು" ಎಂದು ಹೇಳಿದನು. ಅವರೂ ಹಾಗೇ ಮಾಡಿ ವಜ್ರವನ್ನು ಸಂಪಾದಿಸಿದರು.

ದೇವತೆಗಳು ದೇವೇಂದ್ರನನ್ನು ಮುಂದು ಮಾಡಿ ಹೊರಟರು. ದಾನವರು ವೃತ್ರನನ್ನು ಮುಂದು ಮಾಡಿ ಹೊರಟರು. ಇಬ್ಬರಿಗೂ ನರ್ಮದಾ ನದಿಯ ತೀರದಲ್ಲಿ ಭಯಂಕರವಾದ ಯುದ್ಧವು ನಡೆಯಿತು.

ಕ್ರಮವಾಗಿ ದೈತ್ಯರು ಸೋತು ಓಡಿದರು. ಆಗ ವೃತ್ರನು ಅವರನ್ನೆಲ್ಲಾ ತಡೆದನು. "ಎಲೈ ವೀರರೇ, ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ. ಅದನ್ನು ಯಾರೂ ತಪ್ಪಿಸಿಕೊಳ್ಳಲಾರರು. ಪರಲೋಕವನ್ನೂ ಕೀರ್ತಿಯನ್ನೂ ಕೊಡುವುದಾದರೆ ಮರಣವನ್ನು ಏಕೆ ಬೇಡವೆನ್ನಬೇಕು ? ಯೋಗದಿಂದ ದೇಹವನ್ನು ಬಿಡುವುದು, ಯುದ್ಧದಲ್ಲಿ ಎದುರು ನಿಂತು ಸಾಯುವುದು, ಈ ಎರಡು ಮರಣಗಳೂ ದೊರೆಯುವುದು ದುರ್ಲಭ" ಎಂದು ಹೇಳುತ್ತ ತನ್ನವರನ್ನು ತಡೆದನು. ಆದರೂ ದಾನವ ಗಣಗಳು ನಿಲ್ಲಲಿಲ್ಲ. ಓಡಿ ಹೋದರು.

ಆಗ ವೃತ್ರನು ತಾನೇ ದೇವ ಸೈನ್ಯಕ್ಕೆ ಎದುರಾಗಿ ನಿಂತು ಗರ್ಜಿಸಿದನು. "ಹೆದರಿದ ಹೇಡಿಗಳನ್ನು ಕೊಲ್ಲುವುದು ಶೂರರಿಗೆ ಸಲ್ಲದು. ಪ್ರಾಣದ ಮೇಲೆ ಆಸೆಯನ್ನು ತೊರೆದು ಯುದ್ಧ ಮಾಡುವುದಾದರೆ ಬನ್ನಿ" ಎಂದು ತನ್ನ ದೇಹದಿಂದಲೇ ಅವರನ್ನು ಹೆದರಿಸುತ್ತಾ ಯುದ್ಧಕ್ಕೆ ಬಂದನು. ಅವನನ್ನು ಕಂಡ ಮಾತ್ರದಿಂದಲೇ ದೇವ ಸೈನ್ಯವು ಕಂಗೆಟ್ಟು ಮೂರ್ಛೆಯನ್ನು ಪಡೆಯಿತು. ಹಾಗೆ ನೆಲದಲ್ಲಿ ಬಿದ್ದಿರುವ ದೇವತೆಗಳನ್ನು ತುಳಿದುಕೊಂಡು ಬರುತ್ತಿರುವ ವೃತ್ರನಿಗೆ ಇಂದ್ರನು ಎದುರಾಗಿ ಬಂದು ಗದೆಯನ್ನು ಪ್ರಯೋಗಿಸಿದನು. ಅವನು ಅದನ್ನೇ ಹಿಡಿದು ಐರಾವತವನ್ನು ಹೊಡೆದನು. ಅದು ಆ ಏಟು ತಡೆಯಲಾರದೆ ಗಿರ್ರನೆ ತಿರುಗಿ ಬಿಟ್ಟಿತು. ಆ ಏಟಿಗೆ ಅದಕ್ಕೆ ತಲೆಯೊಡೆದು ಅದು ಹಿಂದಕ್ಕೆ ಓಡಿತು. ಆಗ ವೃತ್ರನು ಇಂದ್ರನನ್ನು ಮತ್ತೆ ಹೊಡೆಯದೆ ಅವನು ಮತ್ತೆ ಚೇತರಿಸಿಕೊಳ್ಳುವವರೆಗೂ ಸುಮ್ಮನಿದ್ದು, ಇಂದ್ರನು ಚೇತರಿಸಿಕೊಂಡು ಬಂದ ಮೇಲೆ "ಎಲಾ ಮಹೇಂದ್ರ, ಗುರುವೂ ಬ್ರಾಹ್ಮಣನೂ ಒಡಹುಟ್ಟಿದವನೂ ಆದ ವಿಶ್ವರೂಪನನ್ನು ಕೊಂದು ಮೂರು ಹತ್ಯೆ ಮಾಡಿದ ಪಾಪಿಯೆ, ಪಿಶಾಚಿಗಳಿಗಿಂತಲೂ ನೀಚವಾದ ಕಾರ್ಯವನ್ನು ಮಾಡಿರುವೆ. ಇಗೋ, ನಿನ್ನನ್ನು

ತುಂಡು ತುಂಡಾಗಿ ಕಡಿದು ರಣಭೂಮಿಗೆ ಬಲಿ ಕೊಡುವೆನು. ನೀನೇ ಗೆದ್ದರೂ ನನಗೆ ಸಮ್ಮತ. ಆಗಲೂ ನನಗೆ ವೀರಸ್ವರ್ಗವು ಲಭಿಸುವುದು. ನನಗಾಗಿ ದಧೀಚಿ ಮಹರ್ಷಿಯು ಮೂಳೆಗಳಿಂದ ಮಾಡಿಸಿರುವ ವಜ್ರವೆಲ್ಲಿ ? ಅದನ್ನು ಪ್ರಯೋಗಿಸು. ನಿನ್ನ ವಜ್ರಾಯುಧವು ನನ್ನನ್ನು ಕೊಲ್ಲುವುದಾದರೆ, ನಾನು ಭಗವಂತನಾದ ಸಂಕರ್ಷಣನ ಚರಣಾರವಿಂದದಲ್ಲಿ ಮನಸ್ಸಿಟ್ಟು ಈ ಶರೀರವನ್ನು ಬಿಟ್ಟು ಯೋಗಿಗಳ ಸದ್ಗತಿಯನ್ನು ಪಡೆಯುವೆನು."

ಹೀಗೆಂದು ಹೇಳಿ, ಕಾಳಗದಲ್ಲಿ ಜಯಕ್ಕಿಂತಲೂ ಮೃತ್ಯುವೇ ಶ್ರೇಷ್ಠವೆಂದು ನಿಶ್ಚಯಿಸಿಕೊಂಡು ಶೂಲವನ್ನು ಹಿಡಿದು ದೇವೇಂದ್ರನ ಮೇಲೆ ನುಗ್ಗಿದನು. ಶೂಲವನ್ನು ಪ್ರಯೋಗಿಸಿದನು. ಸೂರ್ಯಮಂಡಲದಂತೆ ನೋಡಲಸಾಧ್ಯವಾಗಿ ಬರುತ್ತಿರುವ ಆ ಶೂಲವನ್ನು ವಜ್ರದಿಂದ ಹೊಡೆದನು. ಆ ವಜ್ರವು ಆ ಶೂಲವನ್ನೂ ಅದನ್ನು ಹಿಡಿದಿದ್ದ ಕೈಯನ್ನೂ ಕತ್ತರಿಸಿತು. ವೃತ್ರನು ಓಡಿ ಬಂದು ಇನ್ನೊಂದು ಕೈಯಿಂದ ಐರಾವತವನ್ನೂ ಇಂದ್ರನನ್ನೂ ಹೊಡೆದನು. ಇಂದ್ರನ ಕೈಯಲ್ಲಿದ್ದ ವಜ್ರಾಯುಧವು ಕಳಚಿ ಬಿದ್ದು ಹೋಗಿ ಆತನಿಗೆ ಅವಮಾನವಾಯಿತು. ವೃತ್ರನು ಅದನ್ನು ಕಂಡು "ಛೀ, ಇಂದ್ರ ವಜ್ರಾಯುಧವನ್ನು ತೆಗೆದುಕೊ, ನಾನು ನಿನ್ನ ಶತ್ರು. ಹೊಡಿ" ಎಂದು ಕೂಗಿದನು. ಮತ್ತೆ "ಇಂದ್ರ ಪರಮಾತ್ಮನನ್ನು ಬಿಟ್ಟು ನಾನು ಮಾಡುವೆನು ಎಂಬವರಿಗೆ ಜಯವಿಲ್ಲ. ನಾವು ಯಾರೂ ಸ್ವತಂತ್ರರಲ್ಲ. ಸರ್ವರನ್ನೂ ಆಡಿಸುವ ಕಾಲವೇ ಸರ್ವಕ್ಕೂ ಕಾರಣವು. ಯಂತ್ರದ ಬೊಂಬೆಗಳಂತೆ ಎಲ್ಲರೂ ಎಲ್ಲವೂ ಈಶ್ವರಾಧೀನವು. ಈಶ್ವರನೊಬ್ಬನೇ ಸ್ವತಂತ್ರನು. ಆಯುಸ್ಸು, ಐಶ್ವರ್ಯ, ಕೀರ್ತಿ ಮೊದಲಾದವು ಆಯಾ ಕಾಲದಲ್ಲಿ ಆಗುವುವು. ಅದರಿಂದ ಸೋತೆನಲ್ಲಾ ಎಂದು ಎದೆಗೆಡಬೇಡ. ವಿವೇಕಿಯು ಕೀರ್ತಿ-ಅಪಕೀರ್ತಿ, ಜಯ-ಅಪಜಯ, ಮೊದಲಾದವುಗಳಲ್ಲಿ

ಹೆದರಬಾರದು. ಅದೇ ಸಮವೃಷ್ಟಿಯು. ಅದನ್ನು ಪಡೆಯುವುದು ಹೇಗೆ ಎನ್ನುವೆಯಾ ? ಸತ್ತ್ವ, ರಜಸ್ಸು, ತಮಸ್ಸು ಎಂಬಿವೇ ಈ ಲೋಕದ ಹಾನಿ ವೃದ್ಧಿಗಳಿಗೆ ಕಾರಣವು. ಅವು ಮೂರೂ ಪ್ರಕೃತಿಗೆ ಸಂಬಂಧಪಟ್ಟವು. ಪರಮಾತ್ಮನು ಪ್ರಕೃತಿಯ ಆಚೆಯವನು ಎಂದು ತಿಳಿದರೆ, ಈ ಸಮವೃಷ್ಟಿಯು ಬರುವುದು. ನನ್ನನ್ನು ನೋಡು, ಆಯುಧವೂ ಅದನ್ನು ಹಿಡಿದ ತೋಳೂ ಹೋಗಿದ್ದರೂ ನಾನು ಯುದ್ಧ ಮಾಡುತ್ತಿಲ್ಲವೇ? ಶೂರರು ಪ್ರಾಣವೆಂಬ ಪಣವಿಟ್ಟು, ಆಯುಧಗಳೆಂಬ ದಾಳಗಳಿಂದ ಸೈನ್ಯವೆಂಬ ಚಾರಿಯನ್ನು ಹೂಡಿ ಆಡುವ ಯುದ್ಧವೆಂಬ ಪಗಡೆಯಾಟದಲ್ಲಿ ಸೋಲು ಯಾರಿಗೆ, ಗೆಲುವು ಯಾರಿಗೆ ಎಂದು ಯಾರೂ ತಿಳಿಯಲಾರರು" ಎಂದು ಬುದ್ಧಿಯನ್ನು ಹೇಳಿದನು.

ಅದನ್ನು ಕೇಳಿ ಇಂದ್ರನು ವೃತ್ರನನ್ನು "ಅಯ್ಯಾ, ನೀನು ರಾಕ್ಷಸನಾದರೂ ಭಗವಂತನಲ್ಲಿ ಭಕ್ತಿಯುಳ್ಳವನಾದುದರಿಂದ ನೀನೇ ಧನ್ಯನು! ಶ್ರೀಹರಿಯೆಂಬ ಅಮೃತಸಾಗರದಲ್ಲಿ ಓಲಾಡುತ್ತಿರುವ ನಿನಗೆ ಈ ಯುದ್ಧದ ಜಯವೆಂಬ ಹಳ್ಳದ ನೀರಿನಿಂದ ಆಗಬೇಕಾದುದೇನು?" ಎಂದು ಮನಃಪೂರ್ವಕವಾಗಿ ಹೊಗಳಿ ಅವನ ಮೇಲೆ ಯುದ್ಧ ಮಾಡಿದನು. ವೃತ್ರನು ಪರಿಘವೆಂಬ ಉಕ್ಕಿನ ಆಯುಧವನ್ನು ಪ್ರಯೋಗಿಸಲು, ಆ ಆಯುಧವನ್ನೂ ಅದನ್ನು ಹಿಡಿದ ಕೈಯನ್ನೂ ಇಂದ್ರನು ವಜ್ರದಿಂದ ಕತ್ತರಿಸಿದನು. ಹೀಗೆ ಎರಡು ತೋಳೂ ಹೋದರೂ ವೃತ್ರನು ಕಂಗೆಡದೆ ಬಾಯನ್ನು ನೆಲಕ್ಕಿಟ್ಟು ಅಬ್ಬರಿಸುತ್ತಾ ಇಂದ್ರನನ್ನೂ ಆತನೇರಿದ್ದ ಐರಾವತವನ್ನೂ ನಾಲಗೆಯಿಂದ ಹಿಡಿದು ಬಾಯೊಳಕ್ಕೆ ಎಳೆದುಕೊಂಡು ನುಂಗಿಬಿಟ್ಟನು. ಎಲ್ಲರೂ ಗಾಬರಿಯಾಗಿ ಕಿರುಚಿಕೊಂಡರು. ಆದರೂ ಇಂದ್ರನು ನಾರಾಯಣ ಕವಚದ ಬಲದಿಂದಲೂ ತನ್ನ ಯೋಗಬಲದಿಂದಲೂ ಸಾಯಲಿಲ್ಲ. ವಜ್ರಾಯುಧದಿಂದ ಅವನ ಹೊಟ್ಟೆಯನ್ನು ಸೀಳಿಕೊಂಡು ಹೊರಗೆ ಬಂದನು.

ಕೆಳಕ್ಕೆ ಬಿದ್ದ ವೃತ್ರನನ್ನು ಏರಿ ವಜ್ರಾಯುಧವನ್ನು ಅವನ ಕತ್ತಿನ ಮೇಲೆ ಪ್ರಯೋಗಿಸಿದನು. ಅದು ಒಂದು ಸಂವತ್ಸರ ಕಾಲ ಪ್ರಯತ್ನ ಪಟ್ಟು ಅವನ ತಲೆಯನ್ನು ಕತ್ತರಿಸಿತು.

ಆಗ ವೃತ್ರಾಸುರನ ದೇಹದಿಂದ ಆತ್ಮಜ್ಯೋತಿಯು ಎದ್ದು ಎಲ್ಲರೂ ನೋಡುತ್ತಿದ್ದ ಹಾಗೆಯೇ ಮಾಯವಾಯಿತು.

---

### ಹದಿನೆಂಟನೆಯ ಅಧ್ಯಾಯವು

## ಇಂದ್ರ ಚಿತ್ರಕೇತುಗಳ ವೃತ್ತಾಂತವು

ವೃತ್ರನ ವಧೆಯಾಯಿತೆಂದು ಮೂರು ಲೋಕಗಳೂ ಸಂತೋಷ ಪಟ್ಟುವು. ಆದರೆ ಇಂದ್ರನಿಗೆ ದಿಗಿಲಾಯಿತು. ಆತನು ಮೊದಲೇ ಬ್ರಹ್ಮಹತ್ಯೆಗೆ ಹೆದರಿ ವೃತ್ರನನ್ನು ಕೊಲ್ಲಲು ಒಪ್ಪಲಿಲ್ಲ. ಎಲ್ಲರೂ “ ದೇವರಾಜ, ಹೆದರಬೇಡ. ನಿನ್ನ ಬ್ರಹ್ಮಹತ್ಯೆಯನ್ನು ನಾವು ಕಳೆಯುವೆವು. ಪರಮಾತ್ಮನೂ ಪುರುಷೋತ್ತಮನೂ ಈಶ್ವರನೂ ಆದ ಶ್ರೀಮನ್ನಾರಾಯಣನನ್ನು ಅಶ್ವಮೇಧದಿಂದ ಆರಾಧಿಸು. ಎಂತಹ ಪಾಪ ಮಾಡಿದ್ದರೂ ಶುದ್ಧನಾಗುವೆ” ಎಂದು ಹೇಳಿ ಆತನಿಂದ ವೃತ್ರ ವಧೆಯನ್ನು ಮಾಡಿಸಿದರು.

ವೃತ್ರನು ಸಾಯುತ್ತಲೂ ಬ್ರಹ್ಮಹತ್ಯೆಯು ಇಂದ್ರನನ್ನು ಆಕ್ರಮಿಸಿತು. ಆತನಿಗೆ ಸುಖವು ತಪ್ಪಿಹೋಯಿತು. ಆ ಹತ್ಯೆಯು ಕ್ಷಯ ರೋಗದಿಂದ ಕೃಶವಾದ ಮುದುಕಿಯಾಗಿ ಕೆಂಪು ವಸ್ತ್ರವನ್ನುಟ್ಟು ನರೆತಿರುವ ಬಿಳಿಗೂದಲನ್ನು ಬಿಚ್ಚಿಕೊಂಡು, ನಿಲ್ಲು ನಿಲ್ಲು ಎಂದು ಕೂಗುತ್ತಾ ಇಂದ್ರನನ್ನು ಅಟ್ಟಿಸಿಕೊಂಡು ಬಂತು. ಇಂದ್ರನು ಅದನ್ನು ಕಂಡು ಹೆದರಿ, ಎಲ್ಲೆಲ್ಲಿ ಹೋದರೂ ಅಟ್ಟಿ ಬರುತ್ತಿರುವ ಆ

ಪ್ರಾರಬ್ಧ ಕಾಟವನ್ನು ತಪ್ಪಿಸಿಕೊಳ್ಳಲು ಮಾನಸ ಸರೋವರವನ್ನು ಸೂಕ್ಷ್ಮರೂಪದಿಂದ ಹೊಕ್ಕು, ಅಲ್ಲಿ ಒಂದು ಕಮಲನಾಳದ ತಂತು ವನ್ನು ಸೇರಿಕೊಂಡನು. ದೇವತೆಗಳಿಗೆ ಹವಿರ್ಭಾಗಗಳನ್ನು ತಂದು ಕೊಡುವವನು ಅಗ್ನಿಯು. ಆತನು ನೀರಿನಲ್ಲಿ ಪ್ರವೇಶಿಸುವಂತಿಲ್ಲ. ಹೀಗಾಗಿ ಇಂದ್ರನಿಗೆ ಯಾವ ಭೋಗವೂ ಇಲ್ಲವಾಯಿತು.

ಹೀಗೆ ಆತನು ಒಂದು ಸಾವಿರ ವರ್ಷ ಆ ಕಮಲನಾಳದಲ್ಲಿ ಅಡಗಿರಬೇಕಾಯಿತು. ಅಷ್ಟು ಕಾಲವೂ ನಹುಷ ಚಕ್ರವರ್ತಿಯು ಸ್ವರ್ಗವನ್ನು ಆಳಿದನು. ಕೊನೆಗೆ ಆತನಿಗೆ ಶಾಪವು ಬಂದು ಅಜಗರ ನಾದನು. ಆ ವೇಳೆಗೆ ಇಂದ್ರನಿಗೆ ಪರಮಾತ್ಮನ ಧ್ಯಾನದಿಂದಲೂ ಲಕ್ಷ್ಮೀದೇವಿಯ ಅನುಗ್ರಹದಿಂದಲೂ ದಿಗ್ದೇವತೆಗಳ ಕೃಪೆಯಿಂದಲೂ ಆ ಪಾಪವು ಕಳೆಯಿತು. ಆತನು ಹೊರಗ್ಗೆ ಬಂದು ಅಶ್ವಮೇಧ ವನ್ನು ಮಾಡಿದನು. ಹತ್ಯೆಯು ಶ್ರೀಮನ್ನಾರಾಯಣ ದಯೆಯಿಂದ ಸೂರ್ಯನ ಎದುರಿರುವ ಮಂಜಿನಂತೆ ಕರಗಿ ಹೋಯಿತು.

ಈಥೆಯನ್ನು ಕೇಳಿ ಪರೀಕ್ಷಿದ್ರಾಜನು "ವೃತ್ರಾಸುರನಿಗೆ ಭಗವಂತನಾದ ನಾರಾಯಣನಲ್ಲಿ ಭಕ್ತಿಯು ಹೇಗೆ ಬಂತು?" ಎಂದು ಕೇಳಿದನು. ಶ್ರೀ ಶುಕಮುನಿಯು ಹೇಳಿದನು:

ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ವ್ಯಾಸರೂ ನಾರದರೂ ದೇವಲರೂ ಹೇಳಿರುವ ಒಂದು ಇತಿಹಾಸವನ್ನು ಹೇಳುವೆನು ಕೇಳು: ಹಿಂದಿನ ಕಾಲದಲ್ಲಿ ಚಿತ್ರಕೇತುವೆಂಬ ಚಕ್ರವರ್ತಿಯಿದ್ದನು. ಆತನಿಗೆ ಬೇಕುಬೇಕಾದ ಐಶ್ವರ್ಯವೆಲ್ಲಾ ಇತ್ತು. ಆತನು ಅನೇಕ ಮಂದಿ ಮಡದಿಯರನ್ನು ಮದುವೆಯಾದರೂ ಮಕ್ಕಳಾಗಲಿಲ್ಲ. ಆತನಿಗೆ ತಾನು ಅಪುತ್ರನೆಂಬ ಚಿಂತೆಯು ಬಹಳವಾಯಿತು.

ಹೀಗೆ ಆತನು ವ್ಯಥಿಸುತ್ತಿರುವಾಗ ಆತನ ಬಳಿಗೆ ಅಂಗಿರಸ್ಸೆಂಬ ಮುನೀಂದ್ರನು ಬಂದನು. ಆತನು ಚಿತ್ರಕೇತುವಿನ ಚಿಂತೆಯನ್ನು

ತಿಳಿದು ಒಂದು ಯಜ್ಞವನ್ನು ಮಾಡಿಸಿ, "ಎಲೈ ರಾಜನೆ, ಯಜ್ಞಫಲವಾಗಿ ನಿನಗೆ ಒಬ್ಬ ಮಗನು ಆಗುವನು. ಅವನಿಂದ ನಿನಗೆ ಸುಖವೂ ದುಃಖವೂ ಆಗುವುದು" ಎಂದು ಹೇಳಿ ಹೊರಟು ಹೋದನು. ಯಜ್ಞದ ಫಲವಾಗಿ ಆತನಿಗೆ ಹಿರಿಯ ಹೆಂಡತಿಯಲ್ಲಿ ಒಬ್ಬ ಮಗನಾದನು. ಆಗ ಚಿತ್ರಕೇತುವಿಗೆ ಆದ ಸಂತೋಷವು ಅಷ್ಟಿಷ್ಟಲ್ಲ. ಹುಟ್ಟು ಬಡವನಿಗೆ ನಿಧಿಯು ಸಿಕ್ಕಿದಂತಾಯಿತು. ಆತನಿಗೂ ಆತನ ಹೆಂಡತಿಗೂ ಆ ಮಗುವನ್ನು ಎಷ್ಟು ಮುದ್ದಾಡಿದರೂ ಸಾಲದು. ಇದನ್ನು ಕಂಡು ಆತನ ಇತರ ಪತ್ನಿಯರಿಗೆ ಬಹು ಸಂಕಟವಾಯಿತು. ತಾವು ಬದುಕಿದ್ದರೂ ಸತ್ತಂತೆಯೇ ಸರಿ ಎನ್ನಿಸಿತು. ಅದರಿಂದ ಅವರು ಆ ಮಗುವಿಗೆ ಗುಟ್ಟಾಗಿ ವಿಷವನ್ನು ಹಾಕಿ ಕೊಂದರು.

ಸತ್ತ ಮಗುವನ್ನು ಕಂಡು ಚಿತ್ರಕೇತು ದಂಪತಿಗಳು ತಮ್ಮ ದುಃಖದಿಂದ ಲೋಕಗಳನ್ನೆಲ್ಲಾ ತುಂಬಿದರು. ಅವರ ರೋಧನವು ಕೊನೆಯಿಲ್ಲವಾಯಿತು. ಅಪಾರವಾದ ದುಃಖವು ಸಮುದ್ರವಾಗಿ ಚಿತ್ರಕೇತು ದಂಪತಿಗಳೂ ತಾವೂ ಅದರಲ್ಲಿ ಮುಳುಗಿ ತಮಗೆ ಬೇಕಾದವರನ್ನೂ ಮುಳುಗಿಸಿದರು.

ಆಗ ಆ ಅಪಾರವಾದ ಶೋಕರಾಶಿಯನ್ನು ಕಳೆಯಲು ಅಂಗಿರಸ್ಸು, ನಾರದರು ಇಬ್ಬರೂ ಬಂದರು. ಸತ್ತ ಮಗುವಿನ ಬಳಿ ಸತ್ತಂತೆ ಬಿದ್ದಿರುವ ಚಿತ್ರಕೇತುವನ್ನು ಒಳ್ಳೆಯ ಮಾತುಗಳಿಂದ ಎಚ್ಚರಗೊಳಿಸಿದರು. "ಅರಸ, ನದಿಯ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗುವ ಮರಳಿನ ಕಣಗಳು ಒಂದಕ್ಕೊಂದು ಸೇರುವುವು. ಒಂದನ್ನೊಂದು ಬಿಡುವುವು. ಎಲೈ ರಾಜನೆ, ಬೀಜದಿಂದ ಬೀಜವು ಹುಟ್ಟುವಂತೆ ತಂದೆತಾಯಿಗಳ ಶರೀರದಿಂದ ಪುತ್ರಶರೀರವು ಜನಿಸುವುದು. ಜನಿಸಿದುದು ಸಾಯುವುದು. ತಂದೆ ತಾಯಿ ಮಗ ಆದ ಜೀವವು ಶಾಶ್ವತವಾಗಿರುವುದು. ಜನನ ಮರಣಗಳು ಶರೀರಕ್ಕೆ ಅಲ್ಲದೆ ಜೀವನಿಗಲ್ಲ.

ಆದರಿಂದ ಈ ದುಃಖವನ್ನು ಬಿಡು. ಭಗವಂತನಾದ ವಾಸುದೇವನಲ್ಲಿ ಮನಸ್ಸಿಡು" ಎಂದು ಬೋಧಿಸಿದರು.

ರಾಜನು ಆ ಮಹರ್ಷಿಗಳಿಗೆ ಕೈ ಜೋಡಿಸಿ ನಮಸ್ಕಾರ ಮಾಡಿದನು : "ಭಗವಂತನಿಗೆ ಪ್ರಿಯರಾದ ಬ್ರಾಹ್ಮಣೋತ್ತಮರು ಮೂಢರಿಗೆ ತತ್ತ್ವವನ್ನು ಅರಿಯಿಸಲು ಭೂಮಿಯಲ್ಲಿ ಸಂಚರಿಸುತ್ತಿರುವರು ಎಂದು ಕೇಳಿರುವೆನು. ಪಶುಗಳಂತೆ ವಿಷಯ ಸುಖಗಳಲ್ಲಿ ಬಿದ್ದು ಬುದ್ಧಿ ಕೆಟ್ಟಿರುವ ನನಗೆ ತಾವು ಜ್ಞಾನದೀಪವನ್ನು ಕೊಟ್ಟು ಕಾಪಾಡಿ. ತಾವು ಯಾರು?'' ಎಂದು ಕೇಳಿಕೊಂಡನು. ಅಂಗಿರಸ್ಸು " ಎಲೈ ರಾಜನೆ, ನಿನಗೆ ಪುತ್ರನಾಗಲೆಂದು ಯಜ್ಞ ಮಾಡಿಸಿದವನು ನಾನು. ಈತನು ಬ್ರಹ್ಮಪುತ್ರನಾದ ನಾರದ ಮಹರ್ಷಿಯು. ಪೂರ್ವಕರ್ಮದ ವಾಸನೆಗಳು ಮನಸ್ಸಿನಲ್ಲಿದ್ದು ವಿಷಯಗಳ ಕಡೆಗೆ ಮನಸ್ಸನ್ನು ಓಡಿಸುವುವು. ಮನಸ್ಸು ಆ ವಿಷಯಗಳನ್ನು ಧ್ಯಾನಿಸಿ ಧ್ಯಾನಿಸಿ ಅದರನ್ನು ಪಡೆಯುವುದು. ಹಾಗೆ ಸಿಕ್ಕಿದಾಗ ಸುಖ, ಅದು ಹೋದಾಗ ದುಃಖ, ಎಂದು ಕೊಳ್ಳುವುದು ಮನಸ್ಸಿನ ಲಕ್ಷಣವು. ಈ ಮನಸ್ಸೇ ಶರೀರವೇ ನಾನು ಎಂಬ ಭ್ರಾಂತಿಯನ್ನು ಹುಟ್ಟಿಸುವುದು. ಅದರಿಂದ ನೀನು ಮನಸ್ಸನ್ನು ದಾಟಿ ಆತ್ಮವಸ್ತುವನ್ನು ಸೇರಿ ಶಾಂತಿಯನ್ನು ಪಡೆ" ಎಂದು ಬೋಧಿಸಿದನು. ನಾರದರು ಭಗವದನುಗ್ರಹವಿಲ್ಲದೆ ತತ್ತ್ವೋಪದೇಶವು ಪುರುಷನಿಗೆ ಫಲಿಸುವುದಿಲ್ಲವೆಂದು ಆತನಿಗೆ ಏಳು ದಿನಗಳೊಳಗಾಗಿ ಸಂಕರ್ಷಣ ಮೂರ್ತಿಯ ಸಾಕ್ಷಾತ್ಕಾರವನ್ನು ಮಾಡಿಕೊಡುವ ಮಹಾ ಮಂತ್ರವನ್ನು ಉಪದೇಶಿಸಿದರು. ಅನಂತರ ತಾವು ಹೇಳಬೇಕು ಎಂದಿರುವ ಮಾತನ್ನು ಮೃತನಾದ ಪುತ್ರನಿಂದಲೇ ಹೇಳಿಸಿ ಅವನಿಗೆ ವಿವೇಕವನ್ನುಂಟು ಮಾಡಲಿ, ಎಂದು ಆ ಸತ್ತ ಮಗನನ್ನು ತಮ್ಮ ತಪಶ್ಶಕ್ತಿಯಿಂದ ಬದುಕಿಸಿ, ಗೋಳಾಡುತ್ತಿರುವ ಆ ಬಂಧುಗಳನ್ನು ಆತನಿಗೆ ತೋರಿಸಿ, ಇವರನ್ನು ಸಮಾಧಾನಪಡಿಸು ಎಂದರು.

ಆ ಜೀವಿಸಿದ ಮಗುವು ಆ ನಾರದನ ಮಾತನ್ನು ಕೇಳಿ ನಕ್ಕಿತು. "ಇದೇನು ಅಜ್ಞಾನ?" ಮೃತನಾದ ಈ ದೇಹವನ್ನು ಬಿಟ್ಟ ಮೇಲೂ ನಾನು ಇವರ ಪುತ್ರನಾಗುವುದೆಂತು ? ಈ ಸಂಬಂಧವು ಜನ್ಮದಿಂದ. ಮರಣವಾದ ಮೇಲೆ ನಾನು ನಾನು, ನೀವು ನೀವು ಇನ್ನು ನನಗೂ ನಿಮಗೂ ಏನೂ ಸಂಬಂಧವಿಲ್ಲ. ನೀವು ದುಃಖಿಸಬೇಡಿರಿ'' ಎಂದು ನುಡಿದು ತನ್ನ ಲೋಕಕ್ಕೆ ತಾನು ಹೊರಟು ಹೋದನು. ಅದನ್ನು ಕೇಳಿ ಎಲ್ಲರೂ ದುಃಖವನ್ನು ಬಿಟ್ಟು ಸುಖಿಗಳಾದರು. ವಿಷವನ್ನಿಕ್ಕಿದ್ದವರು ತಮ್ಮ ಬಾಲಹತ್ಯೆಯನ್ನು ಕಳೆಯಲು ಯಮುನಾ ತೀರದಲ್ಲಿ ತಪಸ್ಸು ಮಾಡಿದರು. ಚಿತ್ರಕೇತುವು ನಾರದರು ಉಪದೇಶಿದ ಮಹಾ ಮಂತ್ರವನ್ನು ಏಳು ದಿನಗಳು ಜಪಿಸಿ ವಿದ್ಯಾಧರ ಚಕ್ರವರ್ತಿಯಾದನು. ಆತನಿಗೆ ಸಂಕರ್ಷಣ ಮೂರ್ತಿಯು ದರ್ಶನವನ್ನು ಕೊಟ್ಟನು. ಆತನೂ ಸಂಕರ್ಷಣನ ದಯೆಯಿಂದ ಕೃತಾರ್ಥನಾಗಿ ಗಗನದಲ್ಲಿ ಸಂಚರಿಸುತ್ತಿದ್ದನು.

ವಿದ್ಯಾಧರನಾದ ಚಿತ್ರಕೇತುವು ಒಮ್ಮೆ ಸಂಚಾರ ಮಾಡುತ್ತಾ ಕೈಲಾಸಕ್ಕೆ ಬಂದನು. ಅಲ್ಲಿ ಕೈಲಾಸದಲ್ಲಿ ತನ್ನ ತೊಡೆಯ ಮೇಲೆ ಪಾರ್ವತಿಯನ್ನು ಕುಳ್ಳಿರಿಸಿಕೊಂಡು ಎಡಗೈಯಿಂದ ತಬ್ಬಿಕೊಂಡಿರುವ ಪರಶಿವನನ್ನು ನೋಡಿ ಆತನಿಗೆ ನಗು ಬಂತು. 'ಎಲ್ಲರೂ ಏಕಾಂತದಲ್ಲಿ ಮಾಡುವ ಕೆಲಸವನ್ನು ಸಭೆಯಲ್ಲಿ ಮಾಡುವ ಈ ಪರಶಿವನಿಗೆ ಇಷ್ಟೂ ನಾಚಿಕೆಯಿಲ್ಲವಲ್ಲಾ ! ಎಂದುಬಿಟ್ಟನು.

ಪರಶಿವನು ಅದನ್ನು ಕೇಳಿದರೂ ಸುಮ್ಮನಿದ್ದನು. ಗೌರೀದೇವಿಯು "ನೀನು ಜಗದ್ಗುರುವಾದ ಪರಮೇಶ್ವರನನ್ನು ತಿರಸ್ಕರಿಸಿದೆ. ಅದರಿಂದ, ಎಲೈ ದುರ್ಬುದ್ಧಿಯೆ, ನೀನು ಪಾಪಿಯಾದ ರಾಕ್ಷಸನಾಗಿ ಹುಟ್ಟು" ಎಂದು ಶಾಪವನ್ನು ಕೊಟ್ಟಳು. ಚಿತ್ರಕೇತುವು ವಿಮಾನದಿಂದ ಇಳಿದು "ತಾಯಿ, ನಿನ್ನ ಅನುಗ್ರಹವಿರಲಿ. ನನಗೆ ಸುಖದುಃಖ

ಗಳೆರಡೂ ಒಂದೇ ಆದುದರಿಂದ ನಾನು ನಿನ್ನಲ್ಲಿ ಶಾಪಮೋಕ್ಷವನ್ನು ಬೇಡುವುದಿಲ್ಲ. ನಾನಾಡಿದ ತಪ್ಪು ಮಾತನ್ನು ಕ್ಷಮಿಸು" ಎಂದು ನಮಸ್ಕಾರ ಮಾಡಿದನು. ಭಗವದ್ಭಕ್ತನಾದ ಚಿತ್ರಕೇತುವು ಪ್ರತಿ ಶಾಪವನ್ನು ಕೊಡಲು ಶಕ್ತನಾದರೂ ಕೊಡಲಿಲ್ಲ. ಆ ಚಿತ್ರಕೇತುವೇ ರಾಕ್ಷಸನಿಗೆ ಪುತ್ರನಾಗಿ ಜನಿಸಿದನು. ಆದರೂ ಆತನಿಗೆ ಭಗವದ್ಭಕ್ತಿಯೂ ಆತ್ಮಜ್ಞಾನವೂ ಬಿಟ್ಟಿರಲಿಲ್ಲ.

ಇಂದ್ರನು ತನ್ನ ಮಕ್ಕಳನ್ನು ಉಳಿಸದೆ ಕೊಲ್ಲುತ್ತಿರುವುದು ಕಂಡು ದಿತಿದೇವಿಗೆ ಬಹಳ ಸಂಕಟವಾಯಿತು. "ನಶ್ವರಗಳಾದ ಶರೀರಗಳನ್ನು ಸತ್ಯವೆಂದು ನಂಬಿ ಮನಸ್ಸು ಬಂದಂತೆ ನಡೆಯುವ ಇಂದ್ರನ ಮದವನ್ನು ಅಣಗಿಸುವ ಮಗನನ್ನು ಪಡೆಯಬೇಕೆಂದು ಆಕೆಯು ಪತಿಯನ್ನು ಚೆನ್ನಾಗಿ ಶುಶ್ರೂಷೆ ಮಾಡಿದಳು. ಆಕೆಯ ಉಪಚಾರಗಳಿಗೆ ಒಲಿದು "ನಿನಗೇನು ಬೇಕು ಕೇಳು" ಎಂದನು. ಆಕೆಯು ವಿನಯವನ್ನು ಬಿಡದೆ 'ಇಂದ್ರನು ನನ್ನ ಇಬ್ಬರು ಮಕ್ಕಳನ್ನು ಕೊಂದಿರುವನು. ಅಂತಹ ಇಂದ್ರನನ್ನು ಗೆದ್ದು ಮರಣವಿಲ್ಲದೆ ಬದುಕುವ ಮಗನನ್ನು ನನಗೆ ಕೊಡು" ಎಂದು ಪ್ರಾರ್ಥಿಸಿದಳು. ಆತನು ಯೋಚಿಸಿ 'ನನ್ನ ಮಾತೂ ಸುಳ್ಳಾಗಬಾರದು. ಇಂದ್ರನೂ ಮಡಿಯಬಾರದು' ಎಂದುಕೊಂಡು ಮಡದಿಗೆ ಹೇಳಿದನು: 'ಎಲೌ, ನಾನು ನಿನಗೆ ಒಂದು ವ್ರತವನ್ನು ಉಪದೇಶಿಸುವೆನು. ಆ ವ್ರತವನ್ನು ಒಂದು ವರ್ಷದವರೆಗೂ ತಪ್ಪದೇ ಕ್ರಮವಾಗಿ ನಡೆಸಿದರೆ ಅವನು ಶತ್ರುವನ್ನು ಕೊಲ್ಲುವನು. ಇಲ್ಲವಾದರೆ ಅವನು ದೇವತೆಗಳ ಕಡೆಯವನಾಗುವನು ಎಂದು ಹೇಳಿ ಆಕೆಗೆ ಪುಂಸವನವೆಂಬ ವ್ರತವನ್ನು ಉಪದೇಶ ಮಾಡಿದನು.

ಆಕೆಯೂ ಭಕ್ತಿಯಿಂದ ವ್ರತವನ್ನು ನಡೆಸಿದಳು. ಮಹೇಂದ್ರನು ಆಕೆಯ ಉದ್ದೇಶವನ್ನು ತಿಳಿದು ವಿನಯದಿಂದ ಬಂದು ಆಕೆಗೆ ಸೇವೆ

ಷ್ನ ಮಾಡತೊಡಗಿದನು. ಹೇಗಾದರೂ ವ್ರತಲೋಪವಾದರೆ
ಕು ಎಂದು ಕಣ್ಣಿಟ್ಟು ಕಾಯುತ್ತಿದ್ದನು. ಹೀಗಿರುವಲ್ಲಿ ಒಂದು
ದಿತಿದೇವಿಯು ದೇವಮಾಯೆಗೆ ಸಿಕ್ಕಿ ಕಾಲು ತೊಳೆದುಕೊಳ್ಳದೆ
ಚಿಯಾಗಿ ಮಲಗಿ ನಿದ್ರಿಸಿದಳು. ಸಮಯವನ್ನು ಕಾದಿದ್ದ ಇಂದ್ರನು
ಯೋಗಮಾಯಾಬಲದಿಂದ ಆಕೆಯ ಗರ್ಭವನ್ನು ಹೊಕ್ಕು ಅಲ್ಲಿ
ವ ಮುದ್ದೆಯಂತೆ ಹೊಳೆಯುತ್ತಿರುವ ಪಿಂಡವನ್ನು ಏಳು
ಡಾಗಿ ಕಡಿದನು. ಕಡಿದರೂ ಸಾಯದೆ ಆ ಪಿಂಡಭಾಗಗಳು
ಲು, ಅಳಬೇಡ, ಅಳಬೇಡ, ಮರುದ, ಮಾರುದ ಎಂದು ಇನ್ನೂ
ೀಳು ತುಂಡಾಗಿ ಕತ್ತರಿಸಿದನು. ಅವೆಲ್ಲವೂ ಇಂದ್ರನಿಗೆ ಕೈ
ಗಿದು "ನಾವು ನಿನ್ನ ಸೋದರರು. ನೀನು ಹೇಳಿದಂತೆ ಕೇಳುವೆವು.
ನ್ನು ಕೊಲ್ಲಬೇಡ" ಎಂದು ಪ್ರಾರ್ಥಿಸಿದರು. ಇಂದ್ರನು ಹಾಗಾದರೆ
ಎಂದು ಸುಮ್ಮನಾದನು. ಆ ನಲವತ್ತೊಂಭತ್ತು ತುಂಡುಗಳೂ
ವತ್ತೊಂಭತ್ತು ದೇವತೆಗಳಾದವು. ಅವರಿಗೆ ಮಾತೃವಿನ ಕಡೆ
ಂದ ಬರಬೇಕಾಗಿದ್ದ ರಾಕ್ಷಸತ್ವವು ಬರಲಿಲ್ಲ. ಅವರು ಮಹಾ
ಷ್ಣುವಿನ ಅನುಗ್ರಹವನ್ನು ಪಡೆದು ಯಜ್ಞಭಾಗಗಳನ್ನು ಪಡೆದರು.
ಅವರೆಲ್ಲರೊಡನೆ ಇಂದ್ರನು ಗರ್ಭದಿಂದ ಹೊರಕ್ಕೆ ಬಂದನು.
ದೇವಿಯು ಎಚ್ಚತ್ತು ಆ ನಲವತ್ತೊಂಭತ್ತು ಮಕ್ಕಳನ್ನು ನೋಡಿ
ದಳು. ಇಂದ್ರನು ಆಕೆಗೆ ನಮಸ್ಕಾರಮಾಡಿ ತಾನು ಮಾಡಿದುದ
ಾ ಹೇಳಿ ನನ್ನ ಅಪರಾಧವನ್ನು ಕ್ಷಮಿಸು ಎಂದು ಆಕೆಯ ಆಶೀ
ದವನ್ನು ಪಡೆದು ಮರುತ್ತುಗಳನ್ನು ಕರೆದುಕೊಂಡು ತನ್ನ
ೀಕಕ್ಕೆ ಹೋದನು.

ಶುಕಮಹರ್ಷಿಯು ಪರೀಕ್ಷಿತ್ತಿನ ಕೋರಿಕೆಯಂತೆ ಆಪುಂಸವನ
ವನ್ನು ವಿಸ್ತಾರ ವರ್ಣಿಸಿದನು. ಆ ವ್ರತದಿಂದ ಲಕ್ಷ್ಮೀ

ನಾರಾಯಣನನ್ನು ಪೂಜಿಸಿದವನಿಗೆ ಎಲ್ಲಾ ಇಷ್ಟಾರ್ಥಗಳೂ ಕೈಗೂಡುವುವು.

---

ಹತ್ತೊಂಭತ್ತನೆಯ ಅಧ್ಯಾಯವು

## ಹಿರಣ್ಯಕಶಿಪುವಿನ ವೃತ್ತಾಂತ

ಪರೀಕ್ಷಿದ್ರಾಜನು ಕೇಳಿದನು: "ಎಲೈ ಶುಕಮುನಿಯೆ, ಭಗವಂತನು ಎಲ್ಲರಿಗೂ ಸಮನು, ಎಲ್ಲರಿಗೂ ಪ್ರಿಯನು, ಎಲ್ಲರಿಗೂ ಬೇಕಾದವನು. ಅವನೂ ಇಂದ್ರನಿಗೋಸ್ಕರ ದೈತ್ಯರನ್ನು ಶತ್ರುವಿನಂತೆ ಕೊಲ್ಲುವುದು ನ್ಯಾಯವೆ ? ಗುಣಾತೀತನಾದ ಪರಮೇಶ್ವರನಿಗೆ ದೇವತೆಗಳಲ್ಲಿ ವಿಶ್ವಾಸವೇಕೆ ? ದಾನವರಲ್ಲಿ ದ್ವೇಷವೇಕೆ ? ಇದನ್ನು ನನಗೆ ತಿಳಿಯ ಹೇಳು.''

ಶ್ರೀಶುಕನು ಹೇಳಿದನು: ಎಲೈ ರಾಜನೆ, ಭಗವದ್ಭಕ್ತಿ ವರ್ಧನವಾದ ಶ್ರೀಹರಿಯ ಅದ್ಭುತ ಚರಿತವನ್ನು ಕುರಿತು ಕೇಳಿದೆ. ಒಳ್ಳೆಯದೇ ಆಯಿತು. ಗುರುವಿಗೆ ನಮಸ್ಕಾರ ಮಾಡಿ ಹೇಳುವೆನು. ಭಗವಂತನು ನಿರ್ಗುಣನು. ಗುಣಮಯಿಯಾದ ಪ್ರಕೃತಿಗಿಂತಲೂ ಆಚೆ ಇರುವವನು. ಸತ್ತ್ವರಜಸ್ಸು ತಮಸ್ಸು ಎಂಬ ಗುಣಗಳು ಪ್ರಕೃತಿಯವೇ ಹೊರತು ಪರಮಾತ್ಮನವಲ್ಲ. ಆ ಗುಣಗಳಿಗೆ ಹಾನಿಯಾಗಲಿ ವೃದ್ಧಿಯಾಗಲಿ ಒಂದೇ ಸಲ ಎಲ್ಲಕ್ಕೂ ಆಗುವುದಿಲ್ಲ. ಸತ್ವವು ವೃದ್ಧಿಯಾದಾಗ ದೇವರ್ಷಿಗಳನ್ನೂ ರಜಸ್ಸು ಅಧಿಕವಾದಾಗ ಅಸುರರನ್ನೂ ತಮಸ್ಸು ಹೆಚ್ಚಾದಾಗ ಯಕ್ಷರಾಕ್ಷಸರನ್ನೂ ಸ್ವಾಮಿಯು ಪ್ರೋತ್ಸಾಹಿಸುವನು. ಸೃಷ್ಟಿಸಬೇಕೆಂದಾಗ ರಜೋಗುಣವನ್ನೂ ನಾನಾ ರೂಪವಾದ ಶರೀರಗಳಲ್ಲಿ ಕ್ರೀಡಿಸಬೇಕೆಂದಾಗ ಸತ್ತ್ವಗುಣವನ್ನೂ ಎಲ್ಲವನ್ನೂ ಮುಗಿಸ

ಬೇಕೆಂದಾಗ ತಮೋಗುಣವನ್ನೂ ಹೆಚ್ಚಿಸುವನು. ಲೋಕವೆಲ್ಲವೂ ಪ್ರಕೃತಿ ಪುರುಷ ಎಂಬ ಇಬ್ಬರಿಂದ ಆದುದು. ಆ ಇಬ್ಬರೂ ಕಾಲದಿಂದ ಆದವರು. ಆ ಕಾಲವನ್ನು ಮಾಡುವವನು ಪರಮೇಶ್ವರನು. ಆ ಕಾಲ ದಿಂದಲೇ ಪ್ರಕೃತಿಯಲ್ಲಿ ಗುಣಗಳು ಹೆಚ್ಚು ಕಡಿಮೆಯಾದಾಗ ಹೀಗೆ ಬೇರೆ ಬೇರೆ ಕಾರ್ಯಗಳಾಗುವುವು. ಅದರಿಂದ ಪರಮೇಶ್ವರನಿಗೆ ಪಕ್ಷಪಾತವಿಲ್ಲ. ಈ ವಿಷಯವಾಗಿ ನಾರದರು ಧರ್ಮರಾಜನಿಗೆ ಹೇಳಿದ ಒಂದು ಇತಿಹಾಸವನ್ನು ಹೇಳುವೆನು ಕೇಳು.

ಆತನು ಮಾಡಿದ ರಾಜಸೂಯ ಯಾಗದಲ್ಲಿ ಶಿಶುಪಾಲನು ಪೂಜ್ಯ ನಾದ ಶ್ರೀ ಕೃಷ್ಣನನ್ನು ಬಹುವಾಗಿ ದೂಷಿಸಿದನು. ಆದರೂ ಆತನ ತೇಜಸ್ಸು ಪರಮಾತ್ಮನಲ್ಲಿ ಐಕ್ಯವಾಯಿತು. "ಏಕಾಂತ ಭಕ್ತರಿಗೂ ದುರ್ಲಭವಾದ ಐಕ್ಯವು ಯಾವಾಗಲೂ ದ್ವೇಷಿಸುತ್ತಿದ್ದವನಿಗೆ ಆಯಿತು ಎಂಬುದು ಪರಮಾಶ್ಚರ್ಯವಲ್ಲವೆ? ನನಗೆ ಇದನ್ನು ತಿಳಿಯ ಹೇಳು" ಎಂದು ಧರ್ಮರಾಜನು ನಾರದನನ್ನು ಕೇಳಿದನು. ಆತನು ಹೀಗೆ ಹೇಳಿದನು: "ಧರ್ಮರಾಜ, ನಿಂದನ, ಪ್ರಾರ್ಥನ, ಸತ್ಕಾರ, ತಿರಸ್ಕಾರ, ಇವೆಲ್ಲವೂ ಶರೀರಕ್ಕೆ. ಆ ಶರೀರವು ಪ್ರಕೃತಿ ಪುರುಷ ರಿಂದ ಆದುದು. ಇಂತಹ ಶರೀರವನ್ನೇ ತಾನೆಂದು ಭಾವಿಸಿದಾಗ, ನಾನು, ನನ್ನದು ಎಂಬ ಅಹಂಕಾರ ಉದಿಸಿ, ಮಿಕ್ಕವು ಬೇರೆ, ತಾನು ಬೇರೆ, ಎಂದಾಗಿ, ದ್ವೇಷವೂ ಪ್ರೀತಿಯೂ ಹುಟ್ಟುವುವು. ಆ ಶರೀ ರಾಭಿಮಾನದಿಂದ ಶರೀರಕ್ಕೆ ಕೊಂಚ ನೋವಾದರೂ ತನಗೇ ಆಯಿ ತೆಂದು ಪ್ರಾಣಿಯು ತಿಳಿಯುವುದು. ಆದರೆ ಭಗವಂತನಿಗೆ ಅಂತಹ ದೇಹಾಭಿಮಾನವಾಗಲಿ, ಅದರಿಂದ ಆಗುವ ವಿಕಾರಗಳಾಗಲೀ ಇಲ್ಲ. ಇಂತಹ ನಿರ್ವಿಕಾರಿಯಾದ ಪರಮಾತ್ಮನಲ್ಲಿ ಮನಸ್ಸು ಲಯವಾದರೆ ಮುಕ್ತಿಯು ಉಂಟಾಗಿಯೇ ತೀರುವುದು. ಆ ಮನಸ್ಸನ್ನು ಸೇರಿಸು ವಿಕೆಯು ವೈರದಿಂದಾಗಬಹುದು. ವೈರಾಗ್ಯದಿಂದ ಆಗಬಹುದು.

ಭಯ ಸ್ನೇಹ ಕಾಮಗಳಿಂದಾಗಬಹುದು. ಹೇಗಾದರೂ ಫಲವು ಒಂದೇ ತಾನೇ ? ಆದರೂ ವೈರದಿಂದ ಪರಮಾತ್ಮನಲ್ಲಿ ಸೇರುವಷ್ಟು ಸುಲಭವಾಗಿ ಭಕ್ತಿಯಿಂದ ಆಗುವುದಿಲ್ಲ. ಗೋಪಸ್ತ್ರೀಯರು ಕಾಮದಿಂದ, ಕಂಸನು ಭಯದಿಂದ, ದ್ವೇಷದಿಂದ ಶಿಶುಪಾಲಾದಿಗಳು ಯಾದವರು ಸಂಬಂಧದಿಂದ, ಪಾಂಡವರಾದ ನೀವು ಸಂಬಂಧಿದಿಂದ ನಾವು ಭಕ್ತಿಯಿಂದ ಭಗವಂತನನ್ನು ಪಡೆದಿರುವೆವು. ಆದರಿಂದ ಹೇಗಾದರೂ ಪರಮ ಪುರುಷನಲ್ಲಿ ಮನಸ್ಸಿಡಬೇಕು. ಅಲ್ಲದೆ ನಿಮ್ಮ ಚಿಕ್ಕಮ್ಮನ ಮಕ್ಕಳಾದ ಶಿಶುಪಾಲನೂ ದಂತವಕ್ತ್ರನೂ ಯಾರೆಂದು ಕೊಂಡಿರುವೆ ? ಮಹಾವಿಷ್ಣುವಿನ ದ್ವಾರಪಾಲಕರು ವಿಪ್ರಶಾಪದಿಂದ ಹಾಗೆ ದುಷ್ಟರಾಗಿ ಹುಟ್ಟಿದ್ದರು. "

ಅದನ್ನು ಕೇಳಿ ಧರ್ಮರಾಜನು ಮತ್ತೆ 'ದೇವರ್ಷಿಯೆ' ಹರಿಭಕ್ತರಾದವರು ಹರಿಭಕ್ತರನ್ನು ತಿರಸ್ಕರಿಸುವುದು ಹೇಗೆ ? ವೈಕುಂಠದಲ್ಲಿ ದೇಹ, ಇಂದ್ರಿಯ, ಪ್ರಾಣ, ಮೊದಲಾದ ಹೆಚ್ಚು ಕಡಮೆಗಳಾಗುವ ಅಂಶಗಳೊಂದೂ ಇಲ್ಲದವರೇ ಇರುವರು ಎಂದು ಕೇಳಿರುವೆನು. ಆದರಿಂದ ಅವರಿಗೆ ರಾಗ ದ್ವೇಷಾದಿಗಳು ಹೇಗೆ ಬಂದುವು ? ಇದನ್ನು ವಿವರಿಸಿ ಹೇಳು' ಎಂದು ಕೇಳಿದನು. ನಾರದರು ಹೇಳಿದರು: *ಜಯವಿಜಯರು ಸನಕಾದಿಗಳ ಶಾಪದಿಂದ ರಾಕ್ಷಸರಾಗಿ ದಿತಿದೇವಿಯ ಮಕ್ಕಳಾಗಿ ಹುಟ್ಟಿದರು. ಅವರಲ್ಲಿ ಹಿರಿಯನಾದ ಹಿರಣ್ಯಕಶಿಪುವನ್ನು ಶ್ರೀಹರಿಯು ನರಸಿಂಹಾವತಾರ ಮಾಡಿ, ಕಿರಿಯವನಾದ ಹಿರಣ್ಯಾಕ್ಷನನ್ನು ವರಾಹಾವತಾರವನ್ನು ಮಾಡಿ ಸಂಹರಿಸಿದನು. ಹಿರಣ್ಯಕಶಿಪುವಿನ ವಧೆಗೆ ಅವನು ಮಾಡಿದ ಪುತ್ರದ್ವೇಷವೇ

---

* ಹಿಂದಿನ ಪುಟ ೫೦ರಲ್ಲಿ ಈ ವಿವರಗಳು ಬಂದಿವೆ. "ಕಾರ್ಯ ನಡೆಯ ಬೇಕಾಕಿತ್ತಾಗಿ ಇವೆಲ್ಲವೂ ಆಯಿತು" ಏಕೆ ? ಎಂಬುದನ್ನು ವಿವರಿಸಿ ಹೇಳಲು ಸಾಧ್ಯವಿಲ್ಲ.

ಕಾರಣವಾಯಿತು. ಅವರೇ ಮತ್ತೆ ರಾವಣ ಕುಂಭಕರ್ಣರಾಗಿ ಜನಿಸಿ ಶ್ರೀರಾಮನಿಂದ ಹತರಾದರು. ಅವರೇ ಮತ್ತೆ ಮೂರನೆಯ ಜನ್ಮದಲ್ಲಿ ಶಿಶುಪಾಲ ದಂತವಕ್ತ್ರರಾಗಿ ಹುಟ್ಟಿ ಶ್ರೀ ಕೃಷ್ಣನಿಂದ ಹತರಾಗಿ ಶಾಪಮುಕ್ತರಾಗಿ ವೈಕುಂಠವನ್ನು ಪಡೆದರು.

ಧರ್ಮರಾಜನು ಅದನ್ನು ಕೇಳಿ " ಎಲೈ ಭಗವಂತನೆ, ಎಲ್ಲರೂ ಮಕ್ಕಳನ್ನು ಪ್ರೀತಿಸುವರಲ್ಲಾ ! ಹೀಗಿರುವಲ್ಲಿ ಹಿರಣ್ಯಕಶಿಪುವಿಗೆ ಮಾತ್ರ ಪ್ರಹ್ಲಾದನಲ್ಲಿ ಏಕೆ ದ್ವೇಷವು ಬಂತು ? ಅದನ್ನು ಹೇಳು " ಎಂದು ಪ್ರಾರ್ಥಿಸಿದನು.

ನಾರದರು ಆ ಕಥೆಯನ್ನು ಹೇಳಿದರು: " ವರಾಹರೂಪಿಯಾದ ಭಗವಂತನು ತನ್ನ ತಮ್ಮನಾದ ಹಿರಣ್ಯಾಕ್ಷನನ್ನು ಕೊಂದನೆಂದು ಕೇಳಿ ಹಿರಣ್ಯಕಶಿಪುವು ಕೋಪದಿಂದಲೂ ದುಃಖದಿಂದಲೂ ಬಹು ಸಂಕಟಪಟ್ಟನು. ತನ್ನವರನ್ನೆಲ್ಲಾ ಕರೆದು "ವಿಷ್ಣುವು ಮಾಡಿದ ಅಕಾರ್ಯವನ್ನು ಕೇಳಿದಿರಾ ? ದೇವದಾನವರಿಗೆ ಸಮನಾದವನು ಹೀಗೆ ಮಾಡಬಹುದೇ ? ಇರಲಿ, ಆ ವಿಷ್ಣುವನ್ನು ಕೊಂದು ತಮ್ಮನಿಗೆ. ಅವನ ರಕ್ತದಿಂದ ತರ್ಪಣ ಕೊಡುವೆನು. ಆ ವಿಷ್ಣುವನ್ನು ಕೊಂದರೆ ದೇವತೆಗಳೆಲ್ಲರೂ ಬುಡವನ್ನು ಕಡಿದರೆ ಕೊಂಬೆಗಳೆಲ್ಲವೂ ಒಣಗುವಂತೆ ನಾಶವಾಗುವರು. ಆ ವಿಷ್ಣುವಿನ ಕಡೆ ಇದ್ದು ಅವನಿಗೆ ಯಜ್ಞಯಾಗ ಮೊದಲಾದವನ್ನು ಮಾಡುವವರನ್ನೆಲ್ಲ ಕೊಲ್ಲಿರಿ " ಎಂದು ಆಜ್ಞೆ ಮಾಡಿದನು. ದೈತ್ಯ ದಾನವಾದಿಗಳು ಸ್ವಭಾವವಾಗಿ ಹಿಂಸೆಯಲ್ಲಿ ಅಭಿರುಚಿ ಇರುವವರು. ಇನ್ನು ಅವರ ಒಡೆಯನ ಆಜ್ಞೆಯೂ ಆಯಿತು ಎಂದ ಮೇಲೆ ಕೇಳಬೇಕೆ ? ಅವರ ಹಾವಳಿಯೇ ಹಾವಳಿಯಾಯಿತು. ದೇವತೆಗಳೂ ಅವರಿಗೆ ಹೆದರಿ ದೇವಲೋಕವನ್ನು ಬಿಟ್ಟು ಓಡಿದರು.

ಹಿರಣ್ಯಕಶಿಪುವು ಹಿರಣ್ಯಾಕ್ಷನು ಹೋದನೆಂದು ಅಳುತ್ತಿರುವ

ತನ್ನ ತಾಯಿ, ಅವನ ಹೆಂಡತಿ, ಅವನ ಮಕ್ಕಳು ಎಲ್ಲರನ್ನೂ ಕೂರಿಸಿಕೊಂಡು ಸಂತೈಸಿದನು: " ವೀರರ ಸಾವಿಗಾಗಿ ಯಾರೂ ಅಳಬಾರದು. ವೀರರು ಸತ್ತು ವೀರಸ್ವರ್ಗವನ್ನು ಸೇರುವರು. ಅಲ್ಲದೆ, ಹಾದಿ ನಡೆಯುವವರು ಒಂದು ಅರವಟ್ಟಿಗೆಯಲ್ಲಿ ಸೇರಿದ್ದು ಮತ್ತೆ ತಮ್ಮ ತಮ್ಮ ಹಾದಿ ಹಿಡಿಯುವಂತೆ, ನಾನಾ ಜೀವರು ಒಂದೆಡೆ ಸೇರಿದ್ದು ಮತ್ತೆ ಕಾಲವು ಬಂದಾಗ ಬೇರೆಯಾಗುವರು. ಮರಣವನ್ನು ಪಡೆಯುವುದು ಶರೀರವೇ ಹೊರತು ಶರೀರದಲ್ಲಿರುವ ಆತ್ಮನಲ್ಲ. ಸಂಸಾರಕ್ಕೆ ಶರೀರವೇ ಆದರೂ ನೀರಿನಲ್ಲಿ ಹೋಗುತ್ತಿರುವವರಿಗೆ ದಡದಲ್ಲಿರುವ ಮರ ಮೊದಲಾದವು ಚಲಿಸುವಂತೆ ಕಾಣುವುದಿಲ್ಲವೇ ? ಹಾಗೆ ಶರೀರದ ಸಂಸಾರವು ಆತ್ಮನಿಗೆ ಎಂದು ಭ್ರಾಂತಿಯು ಬರುವುದು. ಹುಟ್ಟು, ಸಾವು, ಅಳು, ವಿವೇಕ, ಚಿಂತೆ ಎಂಬುವೇ ಸಂಸಾರದ ಸ್ವರೂಪವು. ಇದು ಯಾರಿಗೂ ತಪ್ಪಿದ್ದಲ್ಲ. ಅದರಿಂದ ಅಳಬೇಡಿ " ಎಂದು ಹಿಂದಿನ ಇತಿಹಾಸವೊಂದನ್ನು ಹೇಳಿ ಸಂತೈಸಿದನು.

ಆಮೇಲೆ ಹಿರಣ್ಯಕಶಿಪುವು ಯಾರಿಗೂ ಸೋಲದಂತೆ ವರವನ್ನು ಪಡೆಯಬೇಕೆಂದುಕೊಂಡು ಮಂದರಪರ್ವತದಲ್ಲಿ ಹೆಬ್ಬೆರಳ ತುದಿಯಲ್ಲಿ ನಿಂತು, ತೋಳುಗಳನ್ನು ಎತ್ತಿಕೊಂಡು, ಆಕಾಶವನ್ನೇ ನೋಡುತ್ತಾ ಅತ್ಯಂತ ಕಠಿಣವಾದ ತಪಸ್ಸು ಮಾಡಿದನು. ಅವನ ತಪಸ್ಸಿನ ಜ್ವಾಲೆಯು ಎಲ್ಲೆಲ್ಲೂ ಆವರಿಸಿ ಎಲ್ಲವನ್ನೂ ಸುಡುತ್ತ ಬಂತು. ಆಗ ದೇವತೆಗಳೆಲ್ಲರೂ ತಪೋಲೋಕಕ್ಕೆ ಹೋಗಿ ಚತುರ್ಮುಖನಿಗೆ ಹೇಳಿಕೊಂಡರು. ಆತನು ಮಹರ್ಷಿಗಳನ್ನು ಕರೆದುಕೊಂಡು ಹಿರಣ್ಯಕಶಿಪುವಿನ ಬಳಿಗೆ ಬಂದನು. ಅಲ್ಲಿ ಇರುವೆಗಳು ಮೈಯ ಮಾಂಸವನ್ನೆಲ್ಲಾ ಕಿತ್ತು ತಿಂದು ಅಸ್ಥಿ (ಮೂಳೆ) ಮಾತ್ರವೇ ಶೇಷವಾಗಿರುವ ಆ ದೈತ್ಯ ತಪಸ್ವಿಯನ್ನು ಕಂಡು ಕಮಂಡಲು-ಜಲವನ್ನು ಪ್ರೋಕ್ಷಿಸಲು, ಆತನು ಮೊದಲಿನಂತಾದನು. ಪ್ರಸನ್ನನಾಗಿ

ಬಂದಿರುವ ಚತುರ್ಮುಖನನ್ನು ಕಂಡು, ಆತನಪ್ಪಣೆಯಿಂದ ಹಿರಣ್ಯಾಕ್ಷನು ವರವನ್ನು ಬೇಡಿದನು. "ಎಲೈ ಸೃಷ್ಟಿಗೀಶ್ವರನೇ! ನಿನ್ನ ಹಾಗೆ ವರ ಕೊಡುವವರು ಇನ್ನಿಲ್ಲ. ಅದರಿಂದ ನೀನು ವರ ಕೊಡುವುದಾದರೆ, ನನಗೆ ನಿನ್ನ ಸೃಷ್ಟಿಯಲ್ಲಿರುವ ಯಾರಿಂದಲೂ ಮರಣವಾಗದಂತೆ ಅನುಗ್ರಹ ಮಾಡು. ಮನೆಯೊಳಗೆ, ಹೊರಗೆ, ಹಗಲು, ರಾತ್ರಿಗಳಲ್ಲಿ, ಭೂಮಿ, ಅಂತರಿಕ್ಷಗಳಲ್ಲಿ, ಅಸ್ತ್ರಶಸ್ತ್ರಗಳಿಂದ ನನಗೆ ಮರಣವಾಗಕೂಡದು. ನಿನ್ನ ಹಾಗೆ ನನಗೂ ಇಂದ್ರನೇ ಮೊದಲಾದ ಎಲ್ಲರ ಮೇಲೂ ನನಗೆ ಅಧಿಕಾರವಿರಲಿ. ತಪಸ್ಸಿದ್ಧರಾದವರ ಮಹಿಮೆಗಳೂ ಅಣಿಮಾದಿಗಳೂ ಉಂಟಾಗಲಿ" ಎಂದು ಬೇಡಿದನು. ಬ್ರಹ್ಮನು ಅವನಿಗೆ ಆ ವರಗಳನ್ನೆಲ್ಲಾ ಕೊಟ್ಟು ತನ್ನ ಲೋಕಕ್ಕೆ ಹೋದನು.

ಆ ದೈತ್ಯರಾಜನು ತಮ್ಮನ ಮೇಲೆ ದ್ವೇಷ ಮಾಡಿದ್ದ ದೇವತೆಗಳನ್ನೆಲ್ಲಾ ಜಯಿಸಿ ಅವರ ಐಶ್ವರ್ಯಗಳನ್ನು ಅವರ ಲೋಕಗಳನ್ನು ವಶಪಡಿಸಿಕೊಂಡು ಮೂರು ಲೋಕಕ್ಕೂ ತಾನೇ ಒಡೆಯನಾದನು. ಅವನಿಗೆ ಮೂರು ಲೋಕದಲ್ಲೂ ಎದುರೇ ಇಲ್ಲದಾಯಿತು. ಭೂಮಿಯು ಉಳದೆಯೇ ಬೆಳೆಯನ್ನು ಬೆಳೆಯಿತು. ಸಪ್ತಸಮುದ್ರಗಳೂ ಕಾಣಿಕೆಯನ್ನು ಕೊಟ್ಟುವು.

ಇಂದ್ರಾದಿಗಳು ಇವನ ಹಾವಳಿಯನ್ನು ತಡೆಯಲಾರದೆ ಮಹಾವಿಷ್ಣುವನ್ನು ಮರೆಹೊಕ್ಕರು. ಆತನು ದರ್ಶನವಿತ್ತು, ಆ ರಾಕ್ಷಸನು ನಾಶವಾಗುವುದು ಅವನು ತನ್ನ ಮಗನ ಮೇಲೆ ದ್ವೇಷ ಮಾಡಿದಾಗ. ಅದುವರೆಗೂ ತಡೆಯಿರಿ" ಎಂದು ಅಭಯವನ್ನು ಕೊಟ್ಟನು.

ಪ್ರಹ್ಲಾದನು ಸಾಮಾನ್ಯನಲ್ಲ. ಸಹಜವಾಗಿ ದಾನವರನ್ನು ಕಂಡರೆ ಆಗದ ದೇವತೆಗಳೂ ಆತನ ಗುಣವನ್ನು ಹೊಗಳುವರು. ಆತನು ಸದ್ಗುಣಿಯು - ಪರಮ ಭಾಗವತನು. ತಂದೆಯು ಅಂತಹ

ವನನ್ನು ದ್ವೇಷ ಮಾಡುವ ಪ್ರಸಂಗವು ಬಂದಿತು. ಅದನ್ನು ಹೇಳು ವೆನು ಕೇಳು.

---

ಇಪ್ಪತ್ತನೆಯ ಅಧ್ಯಾಯ

## ನರಸಿಂಹಾವತಾರ

ಹಿರಣ್ಯಕಶಿಪುವು ತನ್ನ ಮಕ್ಕಳನ್ನೂ ಇತರ ರಾಜಪುತ್ರರನ್ನೂ ವಿದ್ಯಾವಂತರನ್ನಾಗಿ ಮಾಡಿರಿ ಎಂದು ದೈತ್ಯ ಗುರುಗಳಾದ ಶುಕ್ರಾಚಾರ್ಯರ ಮಕ್ಕಳು ಚಂಡ, ಅಕರ್ಮರೆಂಬ ಆಚಾರ್ಯರಿಗೆ ಒಪ್ಪಿಸಿದನು. ಅವರು ಅವರೆಲ್ಲರಿಗೂ ರಾಕ್ಷಸರಿಗೆ ಉಚಿತಗಳಾದ ವಿದ್ಯೆಗಳನ್ನು ಕಲಿಸಿದರು. ಪ್ರಹ್ಲಾದನು ಹೇಳಿ ಕೊಟ್ಟು ಕಲಿಸಿದುದರಲ್ಲಿ ತಾನು ಬೇರೆ ಇತರರು ಬೇರೆ ಎಂಬ ದುರಾಭಿಮಾನವನ್ನು ಹೆಚ್ಚಿಸುವ ವಿದ್ಯೆಯನ್ನು ಬಿಟ್ಟು ಮಿಕ್ಕೆಲ್ಲವನ್ನೂ ಕಲಿತನು.

ಒಂದು ದಿನ ದೈತ್ಯೇಂದ್ರನು ಪ್ರಹ್ಲಾದನನ್ನು ಅಕ್ಕರೆಯಿಂದ ಕರೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮುದ್ದು ಮಾಡುತ್ತಾ "ಮಗು, ನೀನು ಕಲಿತಿರುವುದರಲ್ಲಿ ಶ್ರೇಷ್ಠವಾದುದು ಯಾವುದು ಹೇಳು" ಎಂದನು. ಪ್ರಹ್ಲಾದನು "ತಂದೆಯೇ, ಶ್ರೀಹರಿಯನ್ನು ಆಶ್ರಯಿಸಿ ಏಕಾಂತದಲ್ಲಿರುವುದಕ್ಕಿಂತ ಇನ್ನು ಯಾವುದೂ ಶ್ರೇಷ್ಠವಲ್ಲ ಎಂದನು. ಹಿರಣ್ಯಕಶಿಪುವು ಮಗನ ಮಾತನ್ನು ಕೇಳಿ ಅವನ ಮೇಲೆ ಕೋಪ ಮಾಡಿಕೊಳ್ಳದೆ ನಕ್ಕು, ಉಪಾಧ್ಯಾಯರನ್ನು ಕರೆದು "ನಿಮ್ಮ ಗುರುಕುಲದಲ್ಲಿ ಯಾರೋ ಸೇರಿಕೊಂಡು ಈ ಮಗುವಿಗೆ ನನ್ನ ಹಗೆಯಾದ ವಿಷ್ಣುವಿನ ಮೇಲೆ ಭಕ್ತಿಯುಂಟಾಗುವಂತೆ ಮಾಡಿದ್ದಾರೆ. ಅದನ್ನು ಬದಲಾಯಿಸಿ" ಎಂದು ಹೇಳಿ ಕಳುಹಿಸಿದರು.

ಆಚಾರ್ಯಪುತ್ರರಿಬ್ಬರೂ ಪ್ರಹ್ಲಾದನ ಭಕ್ತಿಯನ್ನು ತಪ್ಪಿಸಬೇಕು ಎಂದು ಬಹಳ ಪ್ರಯತ್ನಪಟ್ಟರು. “ಬಲ್ಲೆಯಾ ನಿನ್ನ ವಿಷ್ಣುವು ರಾಕ್ಷಸರೆಂಬ ವೃಕ್ಷಗಳನ್ನು ಕಡಿಯುವ ಕೊಡಲಿಯು. ಅವನು ನಿನ್ನ ಚಿಕ್ಕಪ್ಪನನ್ನು ಕೊಂದವನು” ಎಂದು ಬೇಕಾದ ಹಾಗೆ ಹೇಳಿ, ಧರ್ಮ ಅರ್ಥ ಕಾಮ ಶಾಸ್ತ್ರಗಳನ್ನು ಬೋಧಿಸಿದರು. ಆದರೆ ಆತನು ಮೋಕ್ಷ ಶಾಸ್ತ್ರವನ್ನು ಬಿಡಲಿಲ್ಲ. ಆಚಾರ್ಯ ಪುತ್ರರು ವಿನಯದಿಂದ ನಡೆದುಕೊಳ್ಳುವ ರಾಜಪುತ್ರನನ್ನು ನೋಡಿ ತಮ್ಮ ಕಾರ್ಯವು ಫಲಿಸಿತು ಎಂದು ಸಂತೋಷ ಪಟ್ಟುಕೊಂಡರು.

ಈ ಸಲ ದೈತ್ಯನಾಥನ ಬಳಿಗೆ ಹೋಗುವುದಕ್ಕಿಂತ ಮುಂಚೆ ಆಚಾರ್ಯ ಪುತ್ರರು ಪ್ರಹ್ಲಾದನನ್ನು ತಾಯಿಯ ಬಳಿಗೆ ಕಳುಹಿಸಿದರು. ಆಕೆಯು ಮಂಗಳ ಸ್ನಾನವನ್ನು ಮುಗಿಸಿ ಅಲಂಕಾರ ಮಾಡಿ ಕಳುಹಿಸಿದಳು. ಹಿರಣ್ಯ ಕಶಿಪುವು ವಿನಯದಿಂದ ಬಳಿಗೆ ಬಂದು ಭಕ್ತಿಯಿಂದ ಕಾಲಿಗೆರಗಿದ ಮಗನನ್ನು ಬಾಯಿ ತುಂಬಾ ಹರಸಿ ಎತ್ತಿಕೊಂಡನು. ಆನಂದಪಟ್ಟನು. ” ಈ ಸಲ ಹೇಳು ಮಗನೆ, ನೀನು ಕಲಿತಿರುವ ವಿದ್ಯೆಗಳಲ್ಲಿ ಶ್ರೇಷ್ಠವಾದುದು ಯಾವುದು ?” ಎಂದು ಕೇಳಿದನು. ಪ್ರಹ್ಲಾದನು ತನ್ನಂತರಂಗದಲ್ಲಿರುವುದನ್ನೇ ಹೇಳಿದನು. “ತಂದೆಯೇ, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ, ಎಂಬ ಒಂಭತ್ತು ವಿಧವಾಗಿ ಶ್ರೀಹರಿಯನ್ನು ಭಕ್ತಿ ಮಾಡುವುದೇ ಉತ್ತಮೋತ್ತಮ ವಿದ್ಯೆಯು” ಎಂದನು.

ಅದನ್ನು ಕೇಳಿ ದೈತ್ಯಪತಿಗೆ ಕೋಪ ಬಂತು. ತುಟಿಗಳು ಅಲುಗಿದುವು. ರೋಷದಿಂದ ಉರಿಯುತ್ತಾ ‘ಆಚಾರ್ಯಪುತ್ರರೆ, ಮಗನಿಗೆ ಏನು ಕಲಿಸಿದಿರಿ?’ ಎಂದು ರೇಗಿದನು. ಅವರು ‘ದೈತ್ಯೇಂದ್ರ, ಇದನ್ನು ನಾವು ಕಲಿಸಿಲ್ಲ. ಯಾರು ಕಲಿಸಿದರೋ ಅದೂ ಗೊತ್ತಿಲ್ಲ.

ಈ ದುರ್ಬುದ್ಧಿಯು ಇವನಿಗೆ ಸಹಜವಾಗಿ ಬಂದಂತಿದೆ. ಅದರಿಂದ ನಮ್ಮ ಮೇಲೆ ಕೋಪ ಮಾಡಬೇಡ' ಎಂದು ಕೈ ಮುಗಿದರು. ಆಗ ಆ ದಾನವ ಚಕ್ರವರ್ತಿಯು ಮಗನನ್ನೇ ಕೇಳಿದನು: “ ಎಲಾ, ಈ ದುರ್ಮತಿಯು ನಿನಗೆಲ್ಲಿಂದ ಬಂತು ?' ಮಗನು ವಿನಯವನ್ನು ಬಿಡದೆ ಹೇಳಿದನು: ' ಇದು ನನಗೆ ಸಹಜವಾಗಿ ಬಂದಿದೆ. ಯಾರೂ ಕಲಿಸಲಿಲ್ಲ.'

ಅದನ್ನು ಕೇಳಿ ಕೋಪದಿಂದ ಕುರುಡನಾಗಿ ಮಗನನ್ನು ತೊಡೆಯ ಮೇಲಿಂದ ತಳ್ಳಿಬಿಟ್ಟನು. “ಇನ್ನೂ ಐದು ವರ್ಷ! ಈಗಲೇ ತಾಯಿತಂದೆಗಳನ್ನು ಬಿಟ್ಟು, ಚಿಕ್ಕಪ್ಪನನ್ನು ಕೊಂದ ವಿಷ್ಣುವಿಗೆ ಭಕ್ತನಾದ ಇವನು ಇರುವುದೇ ? ಇವನು ಮಗನಾದರೂ ಪರಿಹರಿಸಲು ತಕ್ಕವನು. ಏನಾದರೂ ಮಾಡಿ ಇವನನ್ನು ಕೊಂದು ಹಾಕಿ ಎಂದು ಆಜ್ಞೆ ಮಾಡಿದನು.

ರಾಕ್ಷಸರು ಏನು ಮಾಡಿದರೂ ಆತನನ್ನು ಏನೂ ಮಾಡಲಾಗ ಲಿಲ್ಲ. ದಾನವೇಂದ್ರನು ತಾನೇ ಎದುರಿಗೆ ನಿಂತು ಆ ಮಗುವನ್ನು ದಿಗ್ಗಜಗಳಿಂದ ತುಳಿಸಿದನು. ಭಾರಿಯ ಹಾವುಗಳಿಂದ ಕಚ್ಚಿಸಿದನು. ಮಾಟ ಮಾಡಿಸಿದನು. ಬೆಟ್ಟಗಳಿಂದ ನೂಕಿಸಿದನು. ಗುಂಡಿ ತೆಗೆದು ಹೂಳಿದನು. ವಿಷವನ್ನು ಕುಡಿಸಿದನು. ಹಿಮ, ಬಿರುಗಾಳಿ, ಬೆಂಕಿ, ಸಮುದ್ರಗಳಲ್ಲಿ ಹಾಕಿಸಿದನು. ಏನು ಮಾಡಿದರೂ ಪ್ರಹ್ಲಾದನಿಗೆ ಏನೂ ಆಗಲಿಲ್ಲ.

ದೈತ್ಯೇಂದ್ರನಿಗೆ ಪ್ರಹ್ಲಾದನ ಯೋಚನೆಯೇ ಯೋಚನೆ ಯಾಯಿತು. “ಇದೇನು ವಿಚಿತ್ರ! ಇವನು ಯಾರಿಗೂ ಹೆದರುವುದಿಲ್ಲ. ಇವನೇ ನನಗೆ ಮೃತ್ಯುವಾಗಿರುವನಲ್ಲಾ !” ಎಂದು ಬಹಳ ವ್ಯಥೆ ಪಟ್ಟನು. ಆಚಾರ್ಯಪುತ್ರನು ಏಕಾಂತವಲ್ಲಿ ಆತನ ಬಳಿ ಹೋಗಿ ದೈತ್ಯೇಂದ್ರ, ನೀನು ಗೆಲ್ಲದವರಿಲ್ಲ. ಇಂತಹ ಏಕ ಶೂರನು ಈ

ಹುಡುಗನಿಗಾಗಿ ಇಷ್ಟು ಚಿಂತಿಸಬಾರದು. ಶುಕ್ರಾಚಾರ್ಯರು ಬಂದ ಮೇಲೆ ಅವರು ಇವನನ್ನು ಸುಲಭವಾಗಿ ತಿದ್ದುವರು. ಅದುವರೆಗೂ ನಮ್ಮಲ್ಲಿ ಇರಲಿ' ಎಂದರು. ದಾನವ ಚಕ್ರವರ್ತಿಯು 'ಹಾಗೂ ಮಾಡಿ' ಎಂದನು.

ಪ್ರಹ್ಲಾದನು ಮತ್ತೆ ಗುರುಕುಲಕ್ಕೆ ಹೋದನು. ಅಲ್ಲಿಯ ಹುಡುಗರು ಅವನನ್ನು ಆಟಕ್ಕೆ ಕರೆದರು. ಆತನು ಅವರಿಗೆ ಹರಿಭಕ್ತಿಯನ್ನು ಬೋಧಿಸಿದನು: "ದೇಹವು ನಾಶವಾಗುವುದಕ್ಕಿಂತ ಮುಂಚೆ ಪೂರ್ಣ ಸುಖವನ್ನು ಪಡೆಯಬೇಕು. ಮುಕುಂದನ ಚರಣಾಂಬುಜವನ್ನು ಆಶ್ರಯಿಸುವುದೊಂದೇ ಅದಕ್ಕೆ ದಾರಿಯು. ಅವರಿಂದ ಎಲೈ ದೈತ್ಯ ಪುತ್ರರಿರಾ! ಭೋಗಗಳಿಗಾಗಿ ಹಂಬಲಿಸುವ ಈ ದೈತ್ಯರ ಸಹವಾಸವನ್ನು ಬಿಟ್ಟು ಆದಿದೇವನಾದ ನಾರಾಯಣನನ್ನು ಸೇರಿ ಕೃತಾರ್ಥರಾಗಿರಿ. ರಾಕ್ಷಸ ಸ್ವಭಾವವನ್ನು ಬಿಟ್ಟು ಸರ್ವ ಭೂತಗಳಲ್ಲಿಯೂ ದಯೆಯಿಡಿರಿ. ಶ್ರೀಮನ್ನಾರಾಯಣನು ಒಲಿಯುವನು. ಪರಮಾತ್ಮನನ್ನು ತೋರಿಸಿ ಕೊಡುವ ವಿದ್ಯೆಯೇ ವಿದ್ಯೆಯು. ಅದನ್ನು ಕಲಿಯಿರಿ" ಎಂದು ಬೋಧಿಸಿದನು. ಅವರೆಲ್ಲರೂ ಆಶ್ಚರ್ಯಪಟ್ಟು "ನೀನು ಇದನ್ನೆಂತು ಕಲಿತೆ?" ಎಂದು ಕೇಳಿದರು. ಪ್ರಹ್ಲಾದನು ಹೇಳಿದನು:

ನನಗೆ ಪೂಜ್ಯರಾದ ನಾರದರು ಈ ಕಥೆಯನ್ನು ಹೇಳಿದ್ದರು. ಕೇಳಿ ನಮ್ಮ ತಂದೆಯು ತಪಸ್ಸಿಗಾಗಿ ಹೋದಾಗ ದೇವತೆಗಳು ಆತನು ಮಡಿದನೆಂದು ನಮ್ಮ ರಾಜಧಾನಿಯನ್ನು ಕೊಳ್ಳೆ ಹೊಡೆದರು. ಇಂದ್ರನು ನಮ್ಮ ತಾಯಿಯನ್ನು ಕೈಸೆರೆ ಹಿಡಿದು ಎಳೆದುಕೊಂಡು ಹೋದನು. ಆಗ ದಾರಿಯಲ್ಲಿ ನಾರದರು ಸಿಕ್ಕಿ "ಮಹೇಂದ್ರಾ, ಈಕೆಯನ್ನು ಬಿಡು ಈಕೆಯಲ್ಲಿ ಪರಮ ಭಾಗವತನಿರುವನು.'' ಎಂದು ಬಿಡಿಸಿಕೊಂಡು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರು ಗರ್ಭವತಿಯಾದ ನಮ್ಮ ತಾಯಿಗೆ ಭಾಗವತ ಧರ್ಮಗಳು

ನ್ನೆಲ್ಲಾ ಉಪದೇಶ ಮಾಡಿದನು. ಆದರೆ ಅದು ನನ್ನ ತಾಯಿಗೆ ಮರೆತುಹೋಯಿತು: ನನಗೆ ನೆನಪಿರುವುದು. ಮಿತ್ರರೆ, ಚಿನ್ನವನ್ನು ತೆಗೆಯುವವನು ಚಿನ್ನವಿರುವ ಕಲ್ಲುಗಳಲ್ಲಿ ಹುಡುಕಿ ಚಿನ್ನವನ್ನು ತೆಗೆಯುವಂತೆ, ವಿವೇಕಿಯಾದವನು ದೇಹವಲ್ಲಿರುವ ಆತ್ಮವನ್ನು ತಿಳಿದು ಗ್ರಹಿಸಬೇಕು. ಭಗವಂತನ ಪ್ರೀತಿಯನ್ನು ಸಂಪಾದಿಸುವುದಕ್ಕೆ ಭಾಗವತಧರ್ಮವೇ ಶ್ರೇಷ್ಠವಾದ ಸಾಧನವು. ಅದು ಒಂಭತ್ತು ವಿಧವಾಗಿರುವುದು. ಅದು ಪರಸು ಸೌಖ್ಯವನ್ನು ಸಂಪಾದಿಸಿ ಕೊಡುವುದು. ಎಲ್ಲಕ್ಕಿಂತ ಮುಖ್ಯವಾಗಿ ಸಕಲವನ್ನು ಭಗವಂತನೆಂಬ ಭಾವನೆಯಿಂದ ಕಾಣಿರಿ. ಅವಕ್ಕಿಂತ ದೊಡ್ಡದು ಇನ್ನಿಲ್ಲ"

ಹೀಗೆ ಹೇಳಿದ ಪ್ರಹ್ಲಾದನಿಂದ ದೈತ್ಯಬಾಲಕರೆಲ್ಲರೂ ವಿಷ್ಣುಭಕ್ತಿಯನ್ನು ಕಲಿತರು. ಚಂಡ, ಅಮರ್ಕರು ಅವನ್ನು ತಪ್ಪಿಸಲು ತಮ್ಮಿಂದ ಸಾಧ್ಯವಿಲ್ಲವೆಂದು ತಿಳಿದು ಹೋಗಿ ಎಲ್ಲವನ್ನೂ ದೈತ್ಯಪತಿಗೆ ತಿಳುಹಿಸಿದರು. ಆತನಿಗೆ ಆ ಮಗನ ನಡೆನಳಿಕೆಯನ್ನು ಕೇಳಿ ಕೋಪವು ತಾನೇ ತಾನಾಯಿತು. ಆತನನ್ನು ಕರೆಯಿಸಿಕೊಂಡನು. ಶಾಂತವಾಗಿ, ವಿನಯವಾಗಿ, ಕೈ ಮುಗಿದುಕೊಂಡು ನಿಂತಿರುವ ಮಗನನ್ನು ನೋಡಿ ಹಿರಣ್ಯಕಶಿಪುವು "ಲೋಕಗಳನ್ನೆಲ್ಲಾ ಗೆದ್ದಿರುವ ನನ್ನನ್ನು ಲಕ್ಷ್ಯ ಮಾಡದಿರುವೆಯಲ್ಲಾ ನಿನಗೆ ಯಾವ ಬಲವಿದೆಯೋ?" ಎಂದು ಹೆದರಿಸಿದನು. ಪ್ರಹ್ಲಾದನು ಹೆದರದೆ "ತಂದೆಯೇ!" ನನಗೆ ಶ್ರೀ ಹರಿಯೇ ಬಲವು. ನಿನಗೂ ಬಲಿಷ್ಠರೆಂದೆನಿಸುವ ಇತರರಿಗೂ ಅತನೇ ಬಲವು. ತಂದೆಯೇ, ನಿನ್ನ ಹಟವನ್ನು ಬಿಡು. ಮಹಾವಿಷ್ಣುವು ಯಾರಿಗೂ ಶತ್ರುವಲ್ಲ. ದುರ್ಮಾರ್ಗವನ್ನು ಹಿಡಿದ ಮನಸ್ಸು ಶತ್ರುವಲ್ಲದೆ ಬೇರೆ ಶತ್ರುಗಳು ಇನ್ನೆಲ್ಲುಂಟು? ಆದರಿಂದ ಮೊದಲು ನಿನ್ನ ಮನಸ್ಸನ್ನು ಗೆಲ್ಲು. ಆಗ ಎಲ್ಲೆಲ್ಲೂ ಇರುವ ಆ ಜಗದೀಶನು ಒಲಿಯುವನು ಎಂದನು.

ಹಿರಣ್ಯಕಶಿಪುವು ಕೋಪದಿಂದ ನ್ಯೈ ಮರೆತನು. ಹಾರಾಡುತ್ತಾ "ಎಲೆಲಾ ! ನನಗಿಂತಲೂ ಬೇರೆಯಾದ ಜಗದೀಶ್ವರನು ಒಬ್ಬನಿರುವನೇ ? ಅವನು ಎಲ್ಲೆಲ್ಲಿಯೂ ಇರುವುವಾದರೆ ಈ ಕಂಭದಲ್ಲಿಯೂ ಇರುವನೇ ? ಇದೋ ಈಗ ನಾನು ತಲೆಯನ್ನು ಕಡಿಯುವೆನು. ನಿನ್ನ ರಕ್ಷಕನಾದ ಹರಿಯು ಇರುವುದಾದರೆ, ಅವನು ಬಂದು ನಿನ್ನನ್ನು ಬಿಡಿಸಿಕೊಳ್ಳಲಿ'' ಎಂದು ಕೈಯ್ಯಲ್ಲಿದ್ದ ಕತ್ತಿಯನ್ನು ಝಳಪಿಸಿ, ಸಿಂಹಾಸನದಿಂದ ಎದ್ದು ಓಡಿಬಂದು ಆ ಪ್ರಹ್ಲಾದನನ್ನು ಹಿಡಿದುಕೊಂಡು ಒದರುತ್ತಾ, "ತೋರಿಸೋ, ನಿನ್ನ ಆ ಹರಿಯನ್ನು ತೋರಿಸೋ. ಈ ಕಂಭದಲ್ಲಿ ತೋರಿಸೋ" ಎಂದು ಕಂಭನನ್ನು ತನ್ನ ಮುಷ್ಟಿಯಿಂದ ಹೊಡೆದನು.

ಕೂಡಲೇ ಬ್ರಹ್ಮಾಂಡವು ಕಟಾಹವು ಬಿರಿಯುವಂತೆ ಮಹಾ ಭಯಂಕರವಾದ ಶಬ್ದವಾಯಿತು. ಹಿರಣ್ಯಕಶಿಪುವೂ ಆ ಶಬ್ದವನ್ನು ಕೇಳಿ ಹೆದರಿದನು. ಮಿಕ್ಕವರ ಮಾತೇನು ? ಕಂಭವು ಒಡೆಯಿತು. ಆಗ ಮೃಗವೂ ಅಲ್ಲದೆ ಮನುಷ್ಯನೂ ಅಲ್ಲದೆ ಅರ್ಧ ಮೃಗವಾದ ಶ್ರೀ ನರಸಿಂಹನು ಮಹಾರ್ಭಟದಿಂದ ಕಂಭನನ್ನು ಒಡೆದುಕೊಂಡು ಈಚೆಗೆ ಬಂದನು. ಅಬ್ಬಾ! ಆ ಭಯಂಕರವಾದ ರೂಪವನ್ನು ಯಾರು ನೋಡಬಹುದು! ಕಣ್ಣುಗಳು ಕರಗಿದ ಕನಕದಂತೆ ಉರಿಯುತ್ತಿವೆ. ಕೇಸರಿಯ ಕೇಸರಗಳು ನಿಮಿರಿ ನಿಂತು ಭಯಂಕರವಾಗಿದೆ. ನೆತ್ತಿಯು ಅಂತರಿಕ್ಷವನ್ನು ಭೇದಿಸುವಂತಿದೆ. ಸಾವಿರಾರು ತೋಳು, ಅವುಗಳಲ್ಲೆಲ್ಲಾ ದಿವ್ಯಾಯುಧಗಳು. ಆ ಆಯುಧಗಳಿಗಿಂತ ತೀವ್ರಗಳಾಗಿರುವ ಉಗುರುಗಳು. ದಾನವೇಂದ್ರನು ಗದೆಯನ್ನು ಹಿಡಿದು ನರಸಿಂಹನ ಮೇಲೆ ಬಿದ್ದನು, ಆದರೇನು ? ಬೆಂಕಿಯ ಮೇಲೆ ಬಿದ್ದ ಪತಂಗದಂತಾಯಿತು: ನರಸಿಂಹಸ್ವಾಮಿಯು ಗರುಡನು ಮಹಾ ಸರ್ಪವನ್ನು ಹಿಡಿಯುವಂತೆ ಅವನನ್ನು ಹಿಡಿದನು. ಕೊಂಚ ಹೊತ್ತು



ಶ್ರೀ ನರಸಿಂಹಾವತಾರವು
[ಮೈಸೂರು ಶಾಸನ ಇಲಾಖೆ ಕೃಪೆಯಿಂದ

ಆಟವಾಡಿದಂತೆ ಆಡಿಸಿ, ಕೊನೆಗೆ ಅವನನ್ನು ಹಿಡಿದು ಸಭಾಮಂಟಪದ ಹೊಸಲ ಮೇಲೆ ಕುಳಿತು ಅವನನ್ನು ತೊಡೆಯ ಮೇಲೆ ಹಾಕಿಕೊಂಡು ಉಗುರುಗಳಿಂದಲೇ ಸೀಳಿ ಅವನ ಕರುಳುಗಳನ್ನು ಎಳೆದು ಮಾಲೆ ಹಾಕಿಕೊಂಡನು. ಆ ನರಸಿಂಹನ ಘರ್ಜನೆಯನ್ನು ಕೇಳಿ ದಿಗ್ಗಜಗಳೂ ಕಿರಚಿಕೊಂಡ ಮೇಲೆ ಇನ್ನೇನು ?

ದೈತ್ಯನನ್ನು ವಧಿಸಿದ ಸ್ವಾಮಿಯು ಸಿಂಹಾಸನದಲ್ಲಿ ಕುಳಿತನು. ಎಲ್ಲರೂ ದೂರ ದೂರದಲ್ಲಿ ನಿಂತು ಹೊಗಳಿದರು, ಯಾರಿಗೂ ಸಮೀಪಕ್ಕೆ ಹೋಗಲು ಧೈರ್ಯವಾಗಲಿಲ್ಲ. ಆಗ ಎಲ್ಲರೂ ಸೇರಿ ಯಾರಿಗಾಗಿ ನರಸಿಂಹಾವತಾರವಾಯಿತೋ ಆ ಪ್ರಹ್ಲಾದನನ್ನೇ ಮುಂದಿಟ್ಟುಕೊಂಡು ಆತನ ಬಳಿ ಹೋದರು. ಶ್ರೀ ನರಸಿಂಹ ಸ್ವಾಮಿಯು ಪ್ರಹ್ಲಾದನನ್ನು ತಬ್ಬಿಕೊಂಡು ತಲೆಯ ಮೇಲೆ ಕೈ ಇಟ್ಟು "ಏನು ಬೇಕು ಕೇಳಿಕೊ" ಎಂದನು. ಪ್ರಹ್ಲಾದನು ನಮಸ್ಕಾರ ಮಾಡಿ "ಸ್ವಾಮಿ, ನಿನ್ನ ದಯೆಯೊಂದಲ್ಲದೆ ಮತ್ತೇನೂ ಬೇಕಿಲ್ಲ" ನಿನ್ನ ದಯೆಯಿಂದ ನನ್ನ ಮನಸ್ಸಿನಲ್ಲಿ ಏನೂ ಕೋರಿಕೆಗಳು ಹುಟ್ಟದಿರಲಿ, ಎಂದು ಪ್ರಾರ್ಥಿಸಿದನು. ಸ್ವಾಮಿಯು "ನೀನು ಈ ಮನ್ವಂತರದಲ್ಲಿ ದೈತ್ಯದಾನವ ಚಕ್ರವರ್ತಿಯಾಗಿ ಧರ್ಮದಿಂದ ರಾಜ್ಯವಾಳು" ಎಂದು ಆಜ್ಞೆ ಮಾಡಿ ತನ್ನ ಲೋಕಕ್ಕೆ ತೆರಳಿದನು. ಆತನಪ್ಪಣೆಯಂತೆ ಚತುರ್ಮುಖನು ಪ್ರಹ್ಲಾದನಿಗೆ ದೈತ್ಯ ರಾಜ್ಯಾಭಿಷೇಕವನ್ನು ಕ್ರಮವಾಗಿ ಮಾಡಿಸಿದನು:

ಹೀಗೆ ಮಹಾವಿಷ್ಣುವಿನ ದ್ವಾರಪಾಲಕರಾಗಿದ್ದ ಜಯವಿಜಯರು ದಿತಿಯ ಮಕ್ಕಳಾಗಿದ್ದು ಶ್ರೀಹರಿಯಲ್ಲಿ ವೈರವನ್ನು ಮಾಡಿ ಹತರಾದರು. ಅವರೇ ಮುಂದೆ ರಾವಣ ಕುಂಭಕರ್ಣರಾಗಿ ರಾಮಪರಾಕ್ರಮದಿಂದ ಹತರಾದರು. ಅವರೇ ಮತ್ತೆ ಶಿಶುಪಾಲ ದಂತವಕ್ತ್ರರಾಗಿ ಜನಿಸಿದ್ದು, ಶ್ರೀಕೃಷ್ಣನಲ್ಲಿ ದ್ವೇಷ ಮಾಡುತ್ತಿದ್ದು ಸಾಯುಜ್ಯವನ್ನು

ಪಡೆದರು. ಹೀಗೆ ಕೃಷ್ಣನಲ್ಲಿ ವೈರ ಮಾಡುವವರು ಭ್ರಮರಕೀಟ ನ್ಯಾಯದಿಂದ ಮುಕ್ತರಾಗುವರು" ಎಂದು ನರಸಿಂಹಾವತಾರದ ಕತೆಯನ್ನೂ ಹೇಳಿ ಮುಂದೆ ತ್ರಿಪುರ ದಹನದ ಕತೆಯನ್ನೂ ಹೇಳಿದನು.

---

ಇಪ್ಪತ್ತೊಂದನೆಯ ಅಧ್ಯಾಯವು

# ಭಾಗವತರೂ ಭಾಗವತ ಧರ್ಮವೂ

ನಾರದರು ಹೇಳಿದರು:—

ಒಂದೆ ದೇವಾಸುರರಿಗೆ ಯುದ್ಧವಾಯಿತು. ಶ್ರೀಮನ್ನಾರಾಯಣನ ಕೃಪೆಯಿಂದ ದೇವತೆಗಳಿಗೆ ಜಯವಾಗಿ ದೈತ್ಯರು ಸೋತರು. ಅವರೆಲ್ಲರೂ ಹೋಗಿ ಮಾಯಾವಿಗಳಲ್ಲಿ ಅಗ್ರಗಣ್ಯನಾದ ಮಯಾಸುರನನ್ನು ಮರೆಹೊಕ್ಕರು. ಅವನು ತನ್ನ ಚಾತುರ್ಯದಿಂದ ಚಿನ್ನ ಬೆಳ್ಳಿ ಕಬ್ಬಿಣಗಳಿಂದ ಮೂರು ಪಟ್ಟಣಗಳನ್ನು ಕಟ್ಟಿದನು. ಆ ಪಟ್ಟಣಗಳಿಗೆ ಬಂದು ಹೋಗುವುದಾಗಲೀ, ಅವುಗಳಲ್ಲಿ ಏನು ಇದೆ ಎನ್ನುವುದಾಗಲಿ ಯಾರಿಗೂ ತಿಳಿಯದು. ರಾಕ್ಷಸರು ಇಂತಹ ಆಕಾಶ ಮಾರ್ಗದಲ್ಲಿ ನೆಲಸಿ, ಯಾರೂ ಅರಿಯದಂತೆ ಸಂಚರಿಸುತ್ತಾ ಪೂರ್ವ ವೈರವನ್ನು ಸ್ಮರಿಸಿ ದೇವತೆಗಳನ್ನು ಧ್ವಂಸ ಮಾಡತೊಡಗಿದರು: ಆಗ ದೇವತೆಗಳೆಲ್ಲ ಹೋಗಿ ಕೈಲಾಸವಾಸಿಯಾದ ಪರಮೇಶ್ವರನನ್ನು ಆಶ್ರಯಿಸಿ ಈ ತ್ರಿಪುರರಿಂದ ನಮ್ಮನ್ನು ಕಾಪಾಡಬೇಕೆಂದರು.

ಆಗ ಪರಮೇಶ್ವರನು ಅವರಿಗೆ ಹೆದರಬೇಡಿರೆಂದು ಅಭಯವನ್ನಿತ್ತು ಆ ತ್ರಿಪುರರುಗಳ ಮೇಲೆ ಒಂದು ಬಾಣವನ್ನು ಬಿಟ್ಟನು. ಆ ಬಾಣವು ಸೂರ್ಯ ಮಂಡಲದಿಂದ ಹೊರಡುವ ಕಿರಣಗಳಂತೆ ಹರಡಿ ಹೋಗಿ ತ್ರಿಪುರಗಳನ್ನು ಮುತ್ತಿ ಅಲ್ಲಿದ್ದ ರಾಕ್ಷಸರನ್ನೆಲ್ಲ ಕೊಂದವು. ಆಗ ಮಾಯಾವಿಯಾದ ಮಾಯಾಸುರನು ತನ್ನ ಶಕ್ತಿಯಿಂದ ಒಂದು

ಅಮೃತ ಸರೋವರವನ್ನು ನಿರ್ಮಿಸಿ, ಈಶ್ವರ ಬಾಣಗಳಿಂದ ಸತ್ತಿದ್ದ ರಾಕ್ಷಸರನ್ನೆಲ್ಲಾ ಹೊತ್ತುಕೊಂಡು ಹೋಗಿ ಅದರಲ್ಲಿ ಹಾಕಿದನು. ಆ ಅಮೃತ ರಸವು ಸೋಕಿದ ಕೂಡಲೇ ರಾಕ್ಷಸ ವೀರರು ಮತ್ತೆ ವಜ್ರದಂತೆ ದೃಢಕಾಯರಾಗಿ ಮಹಾ ತೇಜಸ್ವಿಗಳಾಗಿ, ಮೇಘಗಳನ್ನು ಒಡೆದುಕೊಂಡು ಮಿಂಚುಗಳೊಡನೆ ಹೊರಡುವ ಸಿಡಿಲುಗಳಂತೆ ಎದ್ದರು. ಪರಶಿವನು ಅದನ್ನು ಕಂಡು "ಇದೇನು ? ನಾನು ಮಾಡಿದ ಕಾರ್ಯವು ವ್ಯರ್ಥವಾಯಿತು" ಎಂದು ಮನಗುಂದಿದನು.

ಮಹಾ ವಿಷ್ಣುವು ಆ ಪರಶಿವನಿಗೆ ಸಮಾಧಾನವನ್ನು ಹೇಳಿ, ಬ್ರಹ್ಮನನ್ನು ಕರು ಮಾಡಿಕೊಂಡು ತಾನು ಗೋವಾಗಿ ಆ ತ್ರಿಪುರವನ್ನು ಪ್ರವೇಶಿಸಿ ಅಮೃತ ಸರೋವರದ ಬಳಿಗೆ ಬಂದನು. ವಿಷ್ಣು ಮಾಯೆ ಯಿಂದ ಮೋಹಿತರಾದ ಕಾವಲುಗಾರರು ಅವನ್ನು ತಡೆಯಲಿಲ್ಲ. ಆ ಮಾಯಾ ಗೋವೂ ಕರುವೂ ನೀರು ಕುಡಿಯುವ ನೆವದಲ್ಲಿ ಅಮೃತ ಸರೋವರವನ್ನೆಲ್ಲಾ ಬರಿದು ಮಾಡಿಬಿಟ್ಟರು. ಇದನ್ನು ತಿಳಿದು ಮಯಾಸುರನು ಆಶ್ಚರ್ಯಪಟ್ಟು "ದೈವವನ್ನು ಮೀರಲು ಯಾರಿಗೂ ಸಾಧ್ಯವಲ್ಲ" ಎಂದು ಸುಮ್ಮನಾದನು.

ಆಗ ಶ್ರೀಹರಿಯು ಪರಮೇಶ್ವರನಿಗೆ ಯುದ್ಧಕ್ಕೆ ಬೇಕಾದುದೆಲ್ಲ ವನ್ನೂ ಸಿದ್ಧ ಮಾಡಿ ಕೊಟ್ಟು ಯುದ್ಧಕ್ಕೆ ಕಳುಹಿಸಿದನು. ಆತನು ಒಂದು ಶುಭ ಮುಹೂರ್ತದಲ್ಲಿ ಬಾಣ ಪ್ರಯೋಗ ಮಾಡಿ ಭೇದಿಸಲಶಕ್ಯವಾಗಿದ್ದ ತ್ರಿಪುರಗಳನ್ನು ಸುಟ್ಟು ಎಲ್ಲರ ಸ್ತುತಿಗೂ ಪಾತ್ರನಾದನು.

ನಾರದರು ವಿಷ್ಣುಭಕ್ತನಾಗಿ ಆತ್ಮಜ್ಞಾನವನ್ನು ಪಡೆದ ಪರಮ ಹಂಸನು ಹುಚ್ಚನಂತೆಯೂ, ಬಾಲಕನಂತೆಯೂ, ಮೂಕನಂತೆಯೂ ಕಾಣಿಸಿಕೊಳ್ಳುವನು" ಎಂದು ಹೇಳಿ ಹಿಂದೆ ಪ್ರಹ್ಲಾದನಿಗೂ ಹಂಸ ನಾದ ಅಜಗರನಿಗೂ ನಡೆದ ಸಂವಾದವನ್ನು ಕುರಿತು ಹೇಳಿದರು:--

ಹಿಂದೆ ಪರಮ ಭಾಗವತನಾದ ಪ್ರಹ್ಲಾದನು ಪ್ರಪಂಚವೆಂದರೇನು ನೋಡಬೇಕು ಎಂದು ಕೆಲವರು ಮಂತ್ರಿಗಳನ್ನು ಕರೆದುಕೊಂಡು ಸಂಚಾರ ಹೊರಟನು. ಬರುತ್ತಾ ಸಹ್ಯ ಪರ್ವತದ ತಪ್ಪಲಲ್ಲಿ ಹರಿಯುವ ಕಾವೇರಿ ನದಿಯ ತೀರದಲ್ಲಿ ಮಲಗಿರುವ ಒಬ್ಬ ಮುನಿಯನ್ನು ಕಂಡನು. ಆತನನ್ನು ಯಾರೂ ಇಂತಹವನೆಂದು ಗುರುತಿಸಲಾರದಂತಿದ್ದರೂ ಪ್ರಹ್ಲಾದನು ಆತನನ್ನು ಗೌರವಿಸಿ ಮಾತನಾಡಿಸಿದನು. "ಎಲೈ ಮಹಾತ್ಮನೆ, ನೀನು ಯಾವ ಪ್ರಯತ್ನವೂ ಮಾಡುವಂತೆ ತೋರುವುದಿಲ್ಲ. ನಿನ್ನ ಶರೀರವೋ ಭೋಗಿಯ ದೇಹದಂತೆ ದಪ್ಪವಾಗಿರುವುದು. ಭೋಗಿಯಾಗಬೇಕಾದರೆ ಧನವಿರಬೇಕು. ಧನವು ಪ್ರಯತ್ನದಿಂದ ಬರುವುದು. ನಿನ್ನನ್ನು ನೋಡಿದರೆ ಧನವಂತನಂತೆ ಕಾಣುವುದಿಲ್ಲ. ಧನವಿಲ್ಲದ ಮೇಲೆ ಭೋಗವಿಲ್ಲ. ಭೋಗವಿಲ್ಲದಿದ್ದರೂ ನಿನ್ನ ಶರೀರವು ಹೀಗೆ ಇರಲು ಕಾರಣವೇನು ? ನೀನು ಸಮರ್ಥನಾಗಿರುವೆಯಾದರೂ ಸುಮ್ಮನೆ ಮಲಗಿರುವೆಯೇಕೆ ?" ಎಂದು ವಿನಯದಿಂದ ಕೇಳಿದನು.

ಅಸುರೇಂದ್ರನನ್ನು ಕುರಿತು ಆ ಮುನಿಯು ಹೀಗೆ ಹೇಳಿದನು. "ಎಲೈ ದೈತ್ಯ ಚಕ್ರವರ್ತಿಯೆ, ನೀನು ಸಾಧುಸಮ್ಮತನು. ಜ್ಞಾನದೃಷ್ಟಿಯಿಂದ ನನ್ನನ್ನು ಕಂಡುಕೊಂಡೆ. ನಿನ್ನ ಹೃದಯವಲ್ಲಿ ಶ್ರೀಮನ್ನಾರಾಯಣನು ನಿನ್ನ ಭಕ್ತಿಯಿಂದ ತುಷ್ಟನಾಗಿ ನೆಲಸಿರುವನು. ಆದರಿಂದ ಅಲ್ಲಿ ಅಜ್ಞಾನವೆಂಬ ಕತ್ತಲಿಲ್ಲ. ಅಯ್ಯಾ, ನಿಮ್ಮಂತಹವರೊಡನೆ ಸಂಭಾಷಣೆ ಮಾಡಿದರೆ ಚಿತ್ತಶುದ್ಧಿಯುಂಟಾಗುವುದು. ಆದರಿಂದ ನೀನೇನು ಕೇಳಿದರೂ ಅದಕ್ಕೆ ಉತ್ತರವನ್ನು ಹೇಳುವೆನು. ನಾನು ಹಿಂದೆ ಅನೇಕ ಜನ್ಮಗಳನ್ನೆತ್ತಿ ಎತ್ತಿ ಈಗ ನರಜನ್ಮವನ್ನು ಪಡೆದೆನು. ಈ ಜನ್ಮದಲ್ಲಿ ಇತರರು ಮಾಡುತ್ತಿರುವ ಕರ್ಮಗಳನ್ನು ಕಂಡು ಇವು ನನಗೆ ಬೇಕಿಲ್ಲವೆಂದುಬಿಟ್ಟೆನು. ಏಕೆ ಎನ್ನುವೆಯಾ ?

ಜೀವನಿಗೆ ಸುಖವೇ ಸ್ವರೂಪವು. ಆದರೂ ಸುಖವು ಹೋಗಿರುವುದು ಎಂದು ಅವನ್ನೇ ಕೋರುತ್ತ ದುಡಿಯುವನು. ಅದೇ ಕಾಮವು. ಆ ಕಾಮವೇ ಎಲ್ಲಾ ಕರ್ಮಗಳನ್ನೂ ಮಾಡಿಸುವುದು. ಆ ಕಾಮವನ್ನು ಬಿಟ್ಟಲ್ಲದೆ ತನ್ನಲ್ಲಿರುವ ಸುಖವು ತನಗೆ ದೊರೆಯುವುದಿಲ್ಲ.* ಅದರಿಂದ ಎಲ್ಲವನ್ನೂ ಬಿಟ್ಟು ನನ್ನ ಸುಖದಲ್ಲಿ ನಾನು ಮಲಗಿರುವೆನು.

ನನಗೆ ಇದನ್ನೂ ಹೇಳಿಕೊಟ್ಟ ಗುರುಗಳು ಯಾರು, ಎನ್ನುವೆಯಾ? ದುಂಬಿ ಹಾವುಗಳು, ದುಂಬಿಯು ಪ್ರತಿಯೊಂದು ಹೂವಿನ ರಸವನ್ನೂ ಲೇಶಲೇಶವಾಗಿ ತಂದು ಜೇನು ತುಪ್ಪವನ್ನು ಮಾಡುವುದು. ಅದನ್ನೂ ಇತರರು ಅಪಹರಿಸುವರು. ಅಂತೆಯೇ ಧನ ಧನ ಎಂಬ ಪುರುಷನು ಅತಿ ಕಷ್ಟದಿಂದ ಕೊಂಚಕೊಂಚವಾಗಿ ಕೂಡಿಸಿಟ್ಟ ಧನವನ್ನು ಇತರರು ಹೊತ್ತುಕೊಂಡು ಹೋಗುವರು. ಇದನ್ನು ಜೇನು ನೊಣದಿಂದ ಕಲಿತು ಧನಕ್ಕಾಗಿ ಒದ್ದಾಡುವುದನ್ನು ಬಿಟ್ಟೆನು. ಹಾಗೆಯೇ ಹಾವು ತನಗೆ ಸಿಕ್ಕಿದಷ್ಟು ತಿಂದು, ಸಿಕ್ಕದಿದ್ದರೆ ಧೈರ್ಯವಾಗಿ ಸುಮ್ಮನಿರುವುದನ್ನು ಕಂಡು ಭೋಗ ವಿಚಾರದಲ್ಲಿ ಹೀಗಿರಬೇಕು ಎಂದು ಹಾಗೆಯೇ ಮಾಡಿದೆನು. ಹೀಗೆ ಅರ್ಥ ಕಾಮಗಳಿಂದ ಗೆದ್ದು ನಾನು ಸಂತೋಷವಾಗಿರುವೆನು. ಯಾವಾಗ ಏನು ಸಿಕ್ಕಿದರೆ ಅದನ್ನು ತಿನ್ನುವೆನು. ಸಿಕ್ಕದಿದ್ದರೆ ಸುಮ್ಮನಿರುವೆನು. ಪಟ್ಟೆಯ ವಸ್ತ್ರವಾಗಲಿ, ಹರಕು ಬಟ್ಟೆಯಾಗಲಿ, ಕೃಷ್ಣಾಜಿನವಾಗಲಿ, ಸಿಕ್ಕಿದುದನ್ನು ಹೊದೆದುಕೊಳ್ಳುವೆನು. ನೆಲ, ಹುಲ್ಲು, ಕಲ್ಲು, ಎಲೆ, ಉಪ್ಪರಿಗೆ, ಮಂಚ, ಹಂಸತೂಲಿಕಾತಲ್ಪ ಮೊದಲಾಗಿ ಎಲ್ಲಿಂದರಲ್ಲಿ ಮಲಗುವೆನು. ಅಭ್ಯಂಜನ ಮಾಡಿ ದಿವ್ಯ ಗಂಧವನ್ನು ಲೇಪಿಸಿಕೊಂಡು ವಸ್ತ್ರ ಪುಷ್ಪಮಾಲಿಗೆಗಳನ್ನು ಧರಿಸಿ ಆನೆ, ಕುದುರೆಗಳನ್ನು ಏರಿ ತಿರುಗುವುದೂ ಉಂಟು.

ಎಲೈ ರಾಜನೆ, ಲೋಕದವರು ವಿಷಯ ಬುದ್ಧಿಯುಳ್ಳವರು.

ಅದರಿಂದ ಲೋಕವನ್ನು ನಾನು ಬಯ್ಯುವುದಿಲ್ಲ; ಹೊಗಳುವುದೂ ಇಲ್ಲ; ಅವರಿಗೆ ಶ್ರೀ ಹರಿ ಭಕ್ತಿಯುಂಟಾಗಲಿ ಎಂದು ಮಾತ್ರ ಹಾರೈಸುವೆನು ಪ್ರಹ್ಲಾದ! ನೀನು ಭಾಗವತೋತ್ತಮನೆಂದು ನಿನಗೆ ಇದೆಲ್ಲವನೂ ಹೇಳಿದೆನು. ಪ್ರಹ್ಲಾದನು ಆತನ ಆಶೀರ್ವಾದವನ್ನು ಪಡೆದು ಮುಂದೆ ಹೋದನು.

ಇನ್ನು ಗೃಹಸ್ಥನಾದವನು ಹೇಗಿದ್ದರೆ ವಿಷ್ಣುಭಕ್ತಿಯನ್ನು ಪಡೆದು ಕೃತಾರ್ಥನಾಗುವನೋ ಅದನ್ನು ಹೇಳುವೆನು ಕೇಳು. ಗೃಹಸ್ಥನು ತನ್ನ ಅಂತರಂಗದಲ್ಲಿ ವೈರಾಗ್ಯಸಂಪನ್ನನಾಗಿರಬೇಕು. ಅದನ್ನು ಹೊರಗೆ ತೋರಿಸಿಕೊಳ್ಳಬಾರದು. ಯಾವುದರಲ್ಲಿಯೂ ಮಮಕಾರವನ್ನಿಡಬಾರದು. ಏನು ಸಿಕ್ಕಿದರೂ ಅದೆಲ್ಲವೂ ಭಗವಂತನು ಕೊಟ್ಟುದು ಎಂದು ಅವುಗಳನ್ನು ಉಪಯೋಗಿಸಿಕೊಂಡು ತನ್ನ ಕರ್ಮಗಳನ್ನು ಮಾಡಬೇಕು. ತನ್ನ ತನ್ನ ಸಂಸಾರದ ಹೊಟ್ಟೆಯು ತುಂಬುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರಕ್ಕೆ ಪ್ರಾಣಿಗೆ ಅಧಿಕಾರವುಂಟು. ಅಲ್ಲದೆ, ಹೆಚ್ಚಾಗಿ ಆಶಿಸಿದರೆ ಕಳ್ಳನಾಗಿ ದಂಡಕ್ಕೆ ಪಾತ್ರನಾಗುವನು. ಪ್ರಾಣಿಮಾತ್ರವೆಂದ ಮೇಲೆ ಎಲ್ಲವೂ ಒಂದೇಯೆಂದು ಕೋತಿ, ಇಲಿ, ಹಾವು, ಹಕ್ಕಿ, ನೊಣಗಳನ್ನೂ ತನ್ನ ಮಕ್ಕಳಂತೆ ನೋಡಬೇಕು. ಧನವನ್ನು ಗಳಿಸುವುದಕ್ಕಾಗಿ ಅತಿಯಾಗಿ ಆಯಾಸಪಡಬಾರದು. ಈ ದೇಹಾದಿಗಳಲ್ಲಿ ಹೆಚ್ಚಾಗಿ ಅಭಿಮಾನಪಡದೆ, ಅಧಿಕ ಪ್ರಯತ್ನವಿಲ್ಲದೆ ಸಿಕ್ಕುವ ಯಜ್ಞಶೇಷಗಳಾದ ಅನ್ನಾದಿಗಳಿಂದ ತನ್ನ ಶರೀರಯಾತ್ರೆಯನ್ನು ನಡೆಯಿಸುತ್ತಾ ಇರುವವನು ಮಹಾತ್ಮರ ಮಾರ್ಗವನ್ನು ಹಿಡಿಯುವನು. ಭಗವಂತನು ಆತನ ಭಕ್ತರು, ತಪಸ್ವಿಗಳು, ವಿದ್ವಾಂಸರು ಮೊದಲಾದವರಿಗೆ ತನ್ನ ಕೈಲಾದಷ್ಟು ಪೂಜೆ ಸೇವೆಗಳನ್ನು ಸಲ್ಲಿಸುತ್ತಾ ಇರಬೇಕು. ಪ್ರಾಣಿ ಮಾತ್ರಕ್ಕೆ ಹಿಂಸೆಯನ್ನು ಮಾಡದಿರುವುದೇ ಪರಮ ಧರ್ಮವು.

ಸಂತುಷ್ಟನಾಗಿರುವುದು ಎಲ್ಲದಕ್ಕಿಂತ ದೊಡ್ಡದು. ಪಾದರಕ್ಷೆಯನ್ನು ಮೆಟ್ಟಿದವನಿಗೆ ಕಲ್ಲುಮುಳ್ಳಿನ ಹಾದಿಯೂ ಸುಖವೇ ಆಗಿರುವಂತೆ ಸಂತುಷ್ಟನಿಗೆ ಎಲ್ಲೆಲ್ಲೂ ಸುಖವೇ ಆಗಿರುವುದು. ಆಸೆಯನ್ನು ಗೆದ್ದವನು ಸಂತುಷ್ಟನು. ಆಸೆಯನ್ನು ಗೆದ್ದಲ್ಲದೆ ಮನಸ್ಸು ಸಮಾಧಾನವಾಗುವುದಿಲ್ಲ. ಸಮಾಧಾನವಾದ ಮನಸ್ಸು ಶ್ರೀಹರಿಯನ್ನು ಸೇರುವುದು.

ಗರ್ವ, ಅಹಂಕಾರಾದಿಗಳಿಂದ ಮನಸ್ಸು ಕೆಡುವುದು, ಅಧೋಗತಿಗೆ ಕಾರಣವಾಗುವುದು. ಶ್ರೀ ಹರಿಭಕ್ತರನ್ನು ಸೇವಿಸಿದರೆ ಉತ್ತಮಗತಿಯು ದೊರೆಯುವುದು ಎಂಬುದಕ್ಕೆ ನಾನೇ ಸಾಕ್ಷಿಯು. ನಾನು ಹಿಂದಿನ ಕಲ್ಪದಲ್ಲಿ ಉಪಬರ್ಹಣನೆಂಬ ಗಂಧರ್ವನಾಗಿ ಜನಿಸಿದ್ದೆನು. ನಾನು ಬಹಳ ರೂಪವಂತನೆಂದು, ಒಳ್ಳೆಯ ಸಂಗೀತಗಾರನೆಂದು, ನನಗೆ ಬಹಳ ಗರ್ವವಿತ್ತು. ಒಮ್ಮೆ ಒಂದು ಯಾಗಕ್ಕೆ ಶ್ರೀ ಹರಿಚರಿತ್ರೆಯನ್ನು ಗಾನಮಾಡಲು ನನಗೆ ಕರೆಯು ಬಂತು. ಅಲ್ಲಿಗೆ ಹೋಗಿ ಯಾರನ್ನೂ ಲಕ್ಷಿಸದೆ ಗಾನ ಮಾಡುತ್ತಿರಲು, ಆ ಯಜಮಾನನಿಗೆ ಕೋಪ ಬಂದು "ಎಲಾ ಗಂಧರ್ವ, ನೀನು ಗರ್ವದಿಂದ ಮಹಾತ್ಮರನ್ನೂ ಗೌರವಿಸದೆ ಇರುವೆಯಾಗಿ ನೀನು ಭ್ರಷ್ಟನಾಗಿ ನೀಚ ಜನ್ಮವನ್ನು ಹೊಂದು" ಎಂದು ಶಪಿಸಿದರು. ಅದರಂತೆ ನಾನು ಭೂಮಿಯಲ್ಲಿ ದಾಸೀ ಪುತ್ರನಾಗಿ ಜನಿಸಿ, ಆ ಜನ್ಮದಲ್ಲಿ ಭಾಗವತರನ್ನು ಸೇವಿಸಿದೆನು. ಆ ಸೇವೆಯು ನನ್ನನ್ನು ಬ್ರಹ್ಮಪುತ್ರನನ್ನು ಮಾಡಿತು.

ಧರ್ಮರಾಜನು ಭಾಗವತರ ಚರಿತ್ರೆಯನ್ನೂ ಭಾಗವತ ಧರ್ಮಗಳನ್ನೂ ಕೇಳಿ ಸಂತುಷ್ಟನಾಗಿ ನಾರದರನ್ನೂ ಶ್ರೀ ಕೃಷ್ಣನನ್ನೂ ಪೂಜಿಸಿ ಕೃತಾರ್ಥನಾದನು.

ಇಪ್ಪತ್ತೆರಡನೆಯ ಅಧ್ಯಾಯವು

# ಗಜೇಂದ್ರ ಮೋಕ್ಷ

ಎಲೈ ಮಹಾರಾಜನೆ, ಈಗ ನಡೆಯುತ್ತಿರುವುದು ಶ್ವೇತವರಾಹ ಕಲ್ಪವು. ಈ ಕಲ್ಪದಲ್ಲಿ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ ಎಂಬ ಆರು ಮನುಗಳು ಆಗಿಹೋದರು. ಈಗ ಏಳನೆಯ ಮನುವಾದವೈವಸ್ವತನ ಮನ್ವಂತರವು* ನಡೆಯುತ್ತಿರುವುದು. ಸ್ವಾಯಂಭುವನು ತಪಸ್ಸು ಮಾಡುತ್ತಿದ್ದಾಗ ಅಸುರರೂ ರಾಕ್ಷಸರೂ ಹಸಿವಿನಿಂದ ಆತನನ್ನು ತಿನ್ನಲು ಬಂದರು. ಆಗ ಶ್ರೀಹರಿಯು ತಾನೇ ಬಂದು ಆತನನ್ನು ಕಾಪಾಡಿದನು. ನಾಲ್ಕನೆಯವನಾದ ತಾಮಸ ಮನುವಿನ ಕಾಲದಲ್ಲಿ ಓದುವವರಿಲ್ಲದೆ ವೇದಗಳೆಲ್ಲವೂ ಮರೆಯಾಗಿ ಹೋದುವು. ಆಗ ವೈಧೃತಿಗಳೆಂಬ ದೇವತೆಗಳು ಆ ವೇದಗಳನ್ನೆಲ್ಲಾ ತಮ್ಮ ತೇಜೋ ಬಲದಿಂದ ತಾವೇ ಕಲಿತುಕೊಂಡರು. ಅದೇ ಕಾಲದಲ್ಲಿ ಶ್ರೀ ಹರಿಯು ಮೊಸಳೆಯು ಹಿಡಿದಿದ್ದ ಗಜೇಂದ್ರನನ್ನು ಕಾಪಾಡಿದನು. ಆಗ ಗಜೇಂದ್ರನ ಉಪಾಖ್ಯಾನವು ಉತ್ತಮವಾದುದು, ಪುಣ್ಯಪ್ರದವಾದುದು, ಧನ್ಯವಾದುದು, ಯಶಸ್ಕರವಾದುದು, ಮಂಗಳಕರವಾದುದು, ಅದನ್ನು ಹೇಳುವೆನು ಕೇಳು.

ಕ್ಷೀರಸಮುದ್ರ ಮಧ್ಯದಲ್ಲಿ ತ್ರಿಕೂಟವೆಂದು ಪ್ರಸಿದ್ಧವಾದ ಮಹಾಪರ್ವತವೊಂದುಂಟು. ಅದಕ್ಕೆ ಮೂರು ಶಿಖರಗಳು. ಅವುಗಳಲ್ಲಿ ಒಂದು ಚಿನ್ನದ್ದು, ಇನ್ನೊಂದು ಬೆಳ್ಳಿಯದು, ಮತ್ತೊಂದು ಕಬ್ಬಿಣದ್ದು. ಆ ಬೆಟ್ಟದಲ್ಲಿ ನದಿಗಳು, ಮರಗಳು, ರತ್ನಗಳು, ಎಲ್ಲವೂ ಇರುವುವು. ಆ ಬೆಟ್ಟದ ತಪ್ಪಲಲ್ಲಿ ಸಿದ್ಧ, ಗಂಧರ್ವ ಮೊದ

* ಮನ್ವಂತರ ! ಒಬ್ಬ ಮನುವು ಸ್ಥಾಪಿಸಿದ ಆಡಳಿತವು ನಡೆಯುವಷ್ಟು ಕಾಲಕ್ಕೆ ಮನ್ವಂತರವೆಂದು ಹೆಸರು.

ಲಾದ ದೇವಜಾತಿಗಳು ಸಂತೋಷದಿಂದ ವಿಹರಿಸುವರು. ಕಾಡು ಮೃಗಗಳು ಹಿಂಡು ಹಿಂಡಾಗಿ ತಿರುಗಿಕೊಂಡಿರುವುವು. ಆ ಹಿಂಡುಗಳಲ್ಲಿ ಒಂದು ಆನೆಯ ಹಿಂಡು ಎಲ್ಲಕ್ಕಿಂತ ಪ್ರಬಲವಾಗಿತ್ತು. ಆ ಹಿಂಡಿನ ಸಲಗನು ಬಹಳ ಭಾರಿಯಾಗಿದ್ದು ಮಿಕ್ಕ ಮೃಗಗಳೆಲ್ಲವೂ ಅವನ್ನು ಕಂಡರೆ ಹೆದರಿಕೊಳ್ಳುತ್ತಿತ್ತು. ಅವರ ದಿಗಿಲಿಗೆ ಇತರ ದುಷ್ಟಮೃಗಗಳು ಅದು ಇರುವ ಕಡೆಯೇ ತಿರುಗುತ್ತಿರಲಿಲ್ಲ. ಅದರಿಂದ ಸಣ್ಣಪುಟ್ಟ ಮೃಗಗಳು ಧೈರ್ಯವಾಗಿ ಅಲ್ಲಿ ನೆಲಸಿದ್ದುವು.

ಒಂದು ದಿನ ಆ ಮದ್ದಾನೆಯು ತನ್ನ ನೆತ್ತಿಯಿಂದ ಮದಜಲವು ಸುರಿಯುತ್ತಿರಲು ಇತರ ಹೆಣ್ಣಾನೆ, ಗಂಡಾನೆ, ಮರಿಯಾನೆಗಳನ್ನು ಕಟ್ಟಿಕೊಂಡು ತನ್ನ ಭಾರಕ್ಕೆ ನೆಲವೇ ನಡುಗುತ್ತಿರಲು, ಸಂಚರಿಸುತ್ತಾ ಒಂದು ಕಮಲ ಸರೋವರದ ಬಳಿಗೆ ಬಂತು. ಬಿಸಿಲ ಬೇಗೆಯಿಂದ ದಣಿದಿದ್ದ ಆ ಗಜವೂ ಅದರ ಹಿಂಡೂ ಸರೋವರಕ್ಕೆ ಇಳಿದು ನೀರು ಕುಡಿದು, ನೀರಿನಲ್ಲಿ ಮುಳುಗಿ ಯಥೇಚ್ಛವಾಗಿ ಆಟವಾಡಿದುವು. ಹೀಗೆ ತನಗೆ ತೋರಿದಂತೆ ಆಟವಾಡುತ್ತಿದ್ದ ಆ ಮದ್ದಾನೆಯನ್ನು ನೀರಿನಲ್ಲಿದ್ದ ಭಾರಿಯ ಮೊಸಳೆಯೊಂದು ಹಿಡಿಯಿತು. ಆ ಆನೆಯೇನು ಸಾಮಾನ್ಯವೇ ; ಅದೂ ಆ ಮೊಸಳೆಯಿಂದ ಬಿಡಿಸಿಕೊಳ್ಳಲು ಬೇಕಾದಷ್ಟು ಹೋರಾಡಿತು. ಆದರೂ ಸಾಧ್ಯವಾಗಲಿಲ್ಲ. ಮೊಸಳೆಯು ಅತ್ತ ಕಡೆ ಎಳೆಯುವುದು; ಆನೆಯು ಇತ್ತ ಕಡೆ ಎಳೆಯುವುದು; ಹೀಗೆ ಒಂದು ಸಾವಿರ ವರ್ಷಗಳು ಆಗಿಹೋದುವು. ಆ ಆನೆ ಮೊಸಳೆಗಳ ಯುದ್ಧವನ್ನು ನೋಡಿ ದೇವತೆಗಳೂ ಆಶ್ಚರ್ಯಪಟ್ಟರು. ಆದರೂ ಅವನ್ನು ಬಿಡಿಸಲಾರದೆ ಹೋದರು.

ಬರುಬರುತ್ತಾ ಆನೆಗೆ ಶಕ್ತಿಯು ಕುಗ್ಗುತ್ತಾ ಬಂತು. ಮೊಸಳೆಗೆ ಸಾಮರ್ಥ್ಯವು ಹೆಚ್ಚುತ್ತಾ ಬಂತು. ಆಗ ಆನೆಯು ತಾನಿನ್ನು ಬದುಕುವಂತಿಲ್ಲ. ತನ್ನವರು ತನಗೆ ಸಹಾಯ ಮಾಡಲಾರರು ಎಂದು

ನಿಶ್ಚಯಿಸಿಕೊಂಡಿತು. ಆಗ ತಾನು ಸಾಯುವೆನೆಂದು ಗೊತ್ತು ಮಾಡಿಕೊಂಡಿತು. ಆಗ, ಅಂತಹ ಕಷ್ಟ ಕಾಲದಲ್ಲಿ ಅದಕ್ಕೆ ತನ್ನ ಹಿಂದಿನ ಜನ್ಮದ ನೆನಪಾಯಿತು. ತಾನು ಇಂದ್ರದ್ಯುಮ್ನನೆಂಬ ರಾಜ ನಾಗಿದ್ದುದು. ಆಗ ಶ್ರೀಹರಿಯನ್ನು ಪೂಜಿಸುತ್ತಿದ್ದುದು ಎಲ್ಲವೂ ನೆನಪಾಯಿತು. ಹಾಗೆ ಜ್ಞಾನೋದಯವಾಗಲು, ಆ ಗಜರಾಜನು "ಈಗಲೂ ಆ ಪರಮಾತ್ಮನನ್ನೇ ಮರೆಹೋಗಬೇಕು. ಪ್ರಾಣಿಗಳನ್ನು ಕೊಲ್ಲುವುದಕ್ಕೆ ಹುಡುಕಿಕೊಂಡು ಬರುವ ಮೃತ್ಯುವೂ ಯಾವ ಭಗ ವಂತನಿಗೆ ಹೆದರಿ ಓಡಿಹೋಗುವುದೋ ಆ ಪರಮೇಶ್ವರನನ್ನು ಮರೆ ಹೋಗುವೆನು. ಇದೇ ಸರಿಯು" ಎಂದು ನಿಶ್ಚಯಿಸಿಕೊಂಡನು. ಆ ವೇಳೆಗೆ ಸರಿಯಾಗಿ ಹಿಂದಿನ ಜನ್ಮದಲ್ಲಿ ತಾನು ಕಲಿತಿದ್ದ ಮಹಾ ವಿಷ್ಣುವಿನ ಸ್ತೋತ್ರವೂ ನೆನಪಾಯಿತು. ಅದನ್ನು ಹಾಡಿದನು.

" ಈ ಪ್ರಪಂಚವು ಜಡವಾದರೂ ಯಾವನಿಂದ ಚೇತನಗೊಳ್ಳು ವುದೋ ಅಂತಹ ಸರ್ವೇಶ್ವರನಿಗೆ ನಮಸ್ಕಾರವು. ಮಂಗಳಕರವಾದ ಯಾವನ ಪಾದಗಳನ್ನು ದರ್ಶನ ಮಾಡುವುದಕ್ಕಾಗಿ ಸಾಧುಗಳಾದ ಮುನೀಂದ್ರರು ಎಲ್ಲವನ್ನೂ ಬಿಡುವರೋ ಆ ಎಲ್ಲ ಪ್ರಾಣಿಗಳ ಆತ್ಮನೂ ಆದ ಪರಮೇಶ್ವರನೇ ನನಗೆ ಗತಿಯು. ಯೋಗಿಗಳು ಮಾತ್ರ ಯಾವ ನನ್ನು ಕಾಣುವರೊ ಆತನಿಗೆ ನಮಸ್ಕಾರವು. ಆತನು ನನ್ನನ್ನು ಕಾಪಾಡಲಿ" ಎಂದು ಭಕ್ತಿಯಿಂದ ಮೊರೆಯಿಟ್ಟನು. ಹೀಗೆ ಬ್ರಹ್ಮಾದಿ ಗಳಾದ ಇತರರನ್ನೆಲ್ಲ ಬಿಟ್ಟು ತನ್ನನ್ನೇ ಮರೆಹೊಕ್ಕ ಗಜರಾಜನನ್ನು ಕಾಪಾಡಲು ಶ್ರೀಹರಿಯು ತಾನೇ ಗರುಡನ ಮೇಲೆ ಕುಳಿತು ಓಡಿ ಬಂದು ಆತನಿಗೆ ದರ್ಶನವಿತ್ತನು. ಮೊಸಳೆಗೆ ಸಿಕ್ಕಿ ಕಳವಳಿಸುತ್ತ ಕರಗೆಟ್ಟಿರುವ ಗಜೇಂದ್ರನು ಗರುಡಾರೂಢನಾಗಿ ಬಂದಿರುವ ಶ್ರೀಹರಿಗೆ ಒಂದು ಕಮಲವನ್ನೊಪ್ಪಿಸಿ ಬಹು ಕಷ್ಟದಿಂದ "ನಾರಾಯಣ, ಅಖಿಲ ಗುರೋ, ಭಗವನ್ನಮಸ್ತೇ" ಎಂದನು.

ಶ್ರೀಹರಿಯು ಬೇಗನೆ ಇಳಿದು ಬಂದು ಆ ಆನೆಯನ್ನು ಮೊಸಳೆಯು ಹಿಡಿದಿದ್ದ ಹಾಗೆಯೇ ಈಚೆಗೆ ಎಳೆದು ಹಾಕಿದನು. ಆ ಮೊಸಳೆಯ ಬಾಯನ್ನು ತನ್ನ ಚಕ್ರದಿಂದ ಕತ್ತರಿಸಿ ಆ ಗಜೇಂದ್ರನನ್ನು ಬಿಡಿಸಿದನು.

ಗಜೇಂದ್ರ ಮೋಕ್ಷವಾಗುತ್ತಲೂ ದೇವಾದಿದೇವತೆಗಳೆಲ್ಲರೂ ಸಂತೋಷಪಟ್ಟರು ; ಎಲ್ಲಿಲ್ಲಿಯೂ ಹೂ ಮಳೆಗರೆಯಿತು. ಮೊಸಳೆಯು ಸಾಯುತ್ತಲೂ ಶಾಪದಿಂದ ಆ ರೂಪವನ್ನು ಪಡೆದಿದ್ದ ಹೂ ಹೂ ಎಂಬ ಗಂಧರ್ವನು ಆ ದೇಹದಿಂದ ಈಚೆಗೆ ಬಂದು ಭಗವಂತನನ್ನು ಕೊಂಡಾಡಿದನು. *ಗಜೇಂದ್ರನಿಗೂ ಭಗವಂತನ ಕೈಯು ಸೋಕುತ್ತಲೂ, ಅಜ್ಞಾನವು ಕಳೆದು ಸಾರೂಪ್ಯವೆಂಬ ಮುಕ್ತಿಯು ದೊರೆಯಿತು.*

ರಾಜನೆ, ಗಜೇಂದ್ರನ ವೃತ್ತಾಂತವನ್ನು ಕೇಳು. ಹಿಂದೆ ದ್ರವಿಡ ದೇಶದಲ್ಲಿ ಪಾಂಡ್ಯ ವಂಶದಲ್ಲಿ ಜನಿಸಿದ ಇಂದ್ರದ್ಯುಮ್ನನೆಂಬ ಹೆಸರಿನ ಅರಸೊಬ್ಬನಿದ್ದನು. ಆತನು ಪರಮ ವೈಷ್ಣವನು. ಆತನು ಮಲಯ ಪರ್ವತದಲ್ಲಿ ಆಶ್ರಮ ಮಾಡಿಕೊಂಡು ಜಡೆಗಳನ್ನು ಧರಿಸಿ ತಪಸ್ಸನ್ನು ಮಾಡುತ್ತ ಶ್ರೀಹರಿಯನ್ನು ಸೇವೆ ಮಾಡಿಕೊಂಡಿದ್ದನು. ಒಂದು ದಿನ ಅಗಸ್ತ್ಯ ಮುನೀಂದ್ರನು ಶಿಷ್ಯರನ್ನು ಕರೆದುಕೊಂಡು ಸಂಚಾರ ಬಂದನು. ಏಕಾಂತವಲ್ಲಿ ಮೌನವಾಗಿ ಕುಳಿತಿದ್ದ ಇಂದ್ರದ್ಯುಮ್ನನು ಆತನು ಬಂದನೆಂದು ಎದ್ದು ಪೂಜೆಯನ್ನು

---

*ಹೂ ಹೂ ಗಂಧರ್ವನು ಜಲಕ್ರೀಡೆಯಾಡುತ್ತಿದ್ದಾಗ ದೇವಲನೆಂಬ ಮಹರ್ಷಿಯು ಸ್ನಾನಕ್ಕಾಗಿ ಬಂದನು. ಗಂಧರ್ವನು ಅವನನ್ನು ಗೋಳು ಹುಯ್ದುಕೊಂಡು, ಆತನಿಂದ "ಮೊಸಳೆಯಾಗು" ಎಂದು ಶಾಪ ಪಡೆದನು.

---

*ಸಾರೂಪ್ಯವೆಂದರೆ ಭಗವಂತನಂತೆ ಆಗಿ ಭಗವಂತನ ರೂಪವನ್ನು ಪಡೆಯುವುದು.

ಒಪ್ಪಿಸಲಿಲ್ಲ. ಅದರಿಂದ ಅಗಸ್ತ್ಯರು ಕೋಪಗೊಂಡು "ಆನೆಯಂತೆ ಮದಿಸಿರುವ ಇವನೂ ಆನೆಯೇ ಆಗಲಿ" ಎಂದು ಶಾಪವನ್ನು ಕೊಟ್ಟರು. ಆ ರಾಜನು 'ಇದೂ ಒಂದು ಅದೃಷ್ಟ" ಎಂದು ಸುಮ್ಮ ನಾದನು. ಆ ರಾಜನು ಆನೆಯಾದರೂ ತನ್ನ ಹಿಂದಿನ ಜನ್ಮದ ನೆನಪು ಹೋಗಲಿಲ್ಲ. ಈ ಗಜೇಂದ್ರಮೋಕ್ಷವನ್ನು ಬೆಳಗಿನ ಜಾವ ದಲ್ಲಿ ಪಠಿಸುವವರಿಗೆ ಸ್ವರ್ಗವೂ ಯಶಸ್ಸೂ ಲಭಿಸುವುದು. ದುಸ್ವಪ್ನದ ದುಷ್ಟಫಲವು ನಾಶವಾಗುವುದು. ಸರ್ವಪಾಪಗಳೂ ಪರಿಹಾರವಾಗುವುವು.

---

### ಇಪ್ಪತ್ತನೂರನೆಯ ಅಧ್ಯಾಯವು

## ಸಮುದ್ರ ಮಥನವು

ಎಲೈ ರಾಜನೇ,

ಆರನೆಯ ಮನುವಾದ ಚಾಕ್ಷುಷನ ಮನ್ವಂತರದಲ್ಲಿ ಸಮುದ್ರ ಮಥನದ ಕಥೆಯು ನಡೆಯಿತು. ಅದನ್ನು ಹೇಳುವೆನು ಕೇಳು.

ದೇವಾಸುರರ ಯುದ್ಧದಲ್ಲಿ ಅನೇಕ ದೇವತೆಗಳು ರಾಕ್ಷಸ ರಿಂದ ಹತರಾದರು. ದೇವೇಂದ್ರನು ದುರ್ವಾಸರ ಶಾಪಕ್ಕೆ ಗುರಿ ಯಾಗಿ ತನ್ನ ಐಶ್ವರ್ಯವನ್ನೆಲ್ಲ ಕಳೆದುಕೊಂಡನು. ಯಜ್ಞಾದಿಗಳು ನಿಂತು ಹೋದವು. ಆಗ ಮಹೇಂದ್ರ ವರುಣಾದಿಗಳು ಸೇರಿ ಏನು ಮಾಡಬೇಕೋ ತಿಳಿಯಲಿಲ್ಲ. ಆಗ ಅವರೆಲ್ಲರೂ ಮೇರುಶಿಖರದಲ್ಲಿರುವ ಬ್ರಹ್ಮ ಸಭೆಗೆ ಹೋಗಿ, ಆ ಬ್ರಹ್ಮನಿಗೆ ಎಲ್ಲವನ್ನೂ ವಿಜ್ಞಾಪಿಸಿ ಕೊಂಡರು. ಆಗ ಮಂಕಾಗಿರುವ ದೇವತೆಗಳನ್ನು ನೋಡಿ, ಮನಸ್ಸಿ ನಿಂದಲೇ ಪುರುಷೋತ್ತಮನನ್ನು ಧ್ಯಾನಿಸಿ ನಗೆಮೊಗದಿಂದ ಅವರನ್ನು ನೋಡಿ ಹೀಗೆ ಹೇಳಿದನು:-"ನಾನು ಶಿವನು, ನೀವು, ಅಸುರರು, ಮನು ಷ್ಯರು, ಪ್ರಾಣಿಗಳು, ಮರಗಳು ಮೊದಲುಗೊಂಡು ಸರ್ವರೂ ಆ ಪರ

ಮಾತ್ಮನಿಂದಲೇ ಹುಟ್ಟಿದುವು. ಆದರಿಂದ ಆತನನ್ನೇ ಶರಣು ಹೋಗೋಣ. ಆತನಿಗೆ ಇವರನ್ನು ಕೊಲ್ಲಬೇಕು, ಇವರನ್ನು ರಕ್ಷಿಸಬೇಕು ಎಂಬ ಪಕ್ಷಪಾತವಿಲ್ಲ. ಆದರೂ ಸೃಷ್ಟಿಸ್ಥಿತಿ ಸಂಹಾರಗಳೆಂಬ ಕಾರ್ಯಗಳು ನಡೆಯಲೆಂದು, ಆಯಾ ಕಾಲ ಬಂದಾಗ ಸತ್ವರಜಸ್ಸು ತಮಸ್ಸುಗಳೆಂಬ ಗುಣಗಳನ್ನು ಧರಿಸುವನು. ಈಗ ಜಗತ್ತನ್ನು ಪಾಲಿಸುವ ಕಾಲವು ಬಂದಿರುವುದು. ಆದರಿಂದ ಆತನು ಸತ್ತ್ವಗುಣವನ್ನು ವಹಿಸಿ ನಮ್ಮ ಕಡೆ ಬರುವನು" ಎಂದು ಹೇಳಿ ಅವರೆಲ್ಲರನ್ನೂ ಕರೆದು ಕೊಂಡು ಭಗವಂತನ ಬಳಿಗೆ ಹೋಗಿ ಆ ಪುರುಷೋತ್ತಮನನ್ನು ವೇದವಾಕ್ಯಗಳಿಂದ ಹೊಗಳತೊಡಗಿದನು.

ದೇವತೆಗಳಿಗೆ ಬಲ ಅನ್ನ ಆಯುಸ್ಸುಗಳನ್ನು ಕೊಡುತ್ತ ಲೋಕದಲ್ಲಿರುವ ಸಸ್ಯಗಳನ್ನೂ ಪ್ರಜೆಗಳನ್ನೂ ಬೆಳೆಸುವ ಸೋಮನು ಯಾವ ಭಗವಂತನಿಗೆ ಕಣ್ಣಾಗಿರುವನೋ ಅಂತಹ ಆ ಪುರುಷೋತ್ತಮನು ನಮಗೆ ಪ್ರಸನ್ನವಾಗಲಿ. ಅಗ್ನಿಯು ಯಾರಿಗೆ ಮುಖವೋ ಆ ಪರಮ ಪುರುಷನು ನಮಗೆ ಪ್ರಸನ್ನನಾಗಲಿ. ವೇದಮಯನಾದ ಸೂರ್ಯನು ಯಾವನಿಗೆ ಕಣ್ಣಾಗಿರುವನೋ ಆ ನಾರಾಯಣನು ನಮಗೆ ಪ್ರಸನ್ನನಾಗಲಿ. "ಎಲೈ ಪರಮೇಶ್ವರನೆ, ನಮಗೆ ದರ್ಶನವನ್ನು ಕೊಡು; ಜಗದೀಶ್ವರನೆ, ನಿನಗೆ ಬೇಕಾದ ನಮ್ಮಿಂದ ಅಸಾಧ್ಯ ಕಾರ್ಯಗಳನ್ನು ಮಾಡಿಸುವ ನಿನಗೆ ನಮಸ್ಕಾರವು''

ಹೀಗೆ ಹೊಗಳುತ್ತಲೂ ನಾರಾಯಣನು ಬ್ರಹ್ಮಾದಿಗಳಿಗೆ ದರ್ಶನವನ್ನು ಕೊಟ್ಟನು. ಆ ಪುರುಷೋತ್ತಮನ ತೇಜಸ್ಸು ಅವರ ಕಣ್ಣುಗಳನ್ನು ಕುಕ್ಕಿತು. ಅವರು ಆತನನ್ನು ಕಣ್ಣುಗಳಿಂದ ನೋಡಲಾರದೆ ಹೋದರು. ಮತ್ತೆ ಆತನನ್ನು ಹೊಗಳಿ ಪಚ್ಚೆಯ ಮಣಿಯ ಕಾಂತಿಯಂತೆ ಕಾಂತಿಯುಳ್ಳ ಪರಮಪುರುಷನು ಎದುರಿಗೇ ನಿಂತಿರುವುದನ್ನು ಕಂಡರು. ಅತನ ಕಣ್ಣುಗಳು ಕಮಲದಂತಿದ್ದುವು. ಜೀವ

ರತ್ನಗಳಿಂದ ಆವ ಕಿರೀಟವು ಶಿರಸ್ಸಿನಲ್ಲಿ ಬೆಳಗುತ್ತಿತ್ತು. ಶ್ರೀ ಲಕ್ಷ್ಮಿ ಯೂ ವನಮಾಲೆಯೂ ಎದೆಯಲ್ಲಿ ವಿರಾಜಿಸುತ್ತಿದ್ದುವು. ಚಕ್ರಾದಿ ಆಯುಧಗಳೆಲ್ಲವೂ ಆತನನ್ನು ಸೇವಿಸುತ್ತಿದ್ದುವು. ಇಂತಹ ದಿವ್ಯ ವಾಂಗಳ ವಿಗ್ರಹನಾದ ಪರಮಾತ್ಮನಿಗೆ ಬ್ರಹ್ಮನು ರುದ್ರೇಂದ್ರಾದಿ ಸರ್ವ ದೇವಗಣ ಸಮೇತನಾಗಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಹೊಗಳಿದನು:—

"ಅಣುವಿಗೆ ಅಣುವಾಗಿರುವ ಮಹಾನುಭಾವನಾದ ನಿನಗೆ ನಮಸ್ಕಾರವು, ಮಡಕೆಯು ಆಗುವುದಕ್ಕೆ ಮೊದಲೇ ಆಗಲಿ, ಮಡ ಕೆಯು ಆಗಿರುವಾಗಲೇ ಆಗಲಿ, ಒಡೆದು ಹೋದಮೇಲೇ ಆಗಲಿ, ಮಣ್ಣೇ ಆಗಿರುವಂತೆ, ಈ ಜಗತ್ತು ಮೊದಲೂ ಮಧ್ಯದಲ್ಲಿಯೂ ಕೊನೆ ಯಲ್ಲಿಯೂ ನೀನೇ ಆದರೂ, ನೆಪಕ್ಕಾಗಿ ನಮ್ಮನ್ನು ಲೋಕ ಪಾಲಕ ರೆಂದು ನೇಮಿಸಿದುವೆ. ಎಲೈ ಮಹಿಮನೆ, ಹೀಗೆ ಜಗತ್ತಿನಲ್ಲೆಲ್ಲಾ ತುಂಬಿರುವ ನಿನ್ನನ್ನೂ ಕಾಷ್ಠವನ್ನು ಮಥಿಸಿ ಅಗ್ನಿಯನ್ನೂ, ಗೋವು ಗಳಲ್ಲಿ ಕರೆದು ಹಾಲನ್ನೂ ಭೂಮಿಯನ್ನೂ ಬೇಸಾಯ ಮಾಡಿ ಧಾನ್ಯ ವನ್ನು ಭೂಮಿಯನ್ನು ಅಗೆದು ನೀರನ್ನು ಪಡೆಯುವಂತೆ ತಮ್ಮ ಬುದ್ಧಿ ಯಿಂದ ಕಂಡುಹಿಡಿಯುವರು. ಬೆಂಕಿಯಿಂದ ಹಾರುವ ಕಿಡಿಗಳಂತೆ ನಾವೆಲ್ಲರೂ ನಿನ್ನಿಂದ ಹುಟ್ಟಿದವರು. ಆದ್ದರಿಂದ ಈಗೇನು ಮಾಡಿ ದರೆ ಸರಿಯೋ ಅದನ್ನು ನಮಗೆ ಉಪದೇಶ ಮಾಡು" ಎಂದು ಬೇಡಿ ಕೊಂಡರು.

ಆಗ ಪ್ರಸನ್ನನಾದ ಪರಮೇಶ್ವರನು ಅವರನ್ನು ಕುರಿತು ಹೇಳಿ ದನು "ಎಲೈ ಬ್ರಹ್ಮಾದಿ ದೇವತೆಗಳಿರಾ ! ನೀವು ಈಗ ದೈತ್ಯ ದಾನವರೊಡನೆ ಸಂಧಿ ಮಾಡಿಕೊಳ್ಳಿ. ಕಾಲವು ಅನುಕೂಲವಾಗಿದೆ ಯಾಗಿ ಅವರು ನಿಮ್ಮೊಡನೆ ಸೇರುವರು. ಕೆಲಸವಾಗಲೆಂದು ಶತ್ರು ಗಳನ್ನೂ ಸೇರಿಸಿಕೊಳ್ಳಬೇಕು. ಬುಟ್ಟಿಯಲ್ಲಿ ಸಿಕ್ಕಿರುವ ಹಾವು ಇಲಿ

ಯೊಡನೆಯೂ ಸ್ನೇಹ ಬೆಳಸುವುದಲ್ಲವೇ ? ಹಾಗೆ ಅವರನ್ನೂ ಸೇರಿಸಿ ಕೊಂಡು ನೀವು ಆದಷ್ಟು ಬೇಗ ಅಮೃತವನ್ನು ಪಡೆಯುವುದಕ್ಕೆ ಯತ್ನ ಮಾಡಿರಿ. ಆ ಅಮೃತವನ್ನು ಕುಡಿದವರು ಅಮರರಾಗುವರು. ಕ್ಷೀರಸಮುದ್ರದಲ್ಲಿ ಸಕಲ ಮೂಲಿಕೆಗಳನ್ನೂ ಹಾಕಿ, ಮಂದರವನ್ನು ಕಡೆಗೋಲು ಮಾಡಿ, ಅದಕ್ಕೆ ವಾಸುಕಿಯನ್ನೇ ಹಗ್ಗವಾಗಿ ಸುತ್ತಿ ಕಡೆಯಿರಿ. ಉಪಾಯ ಮಾಡಿ ಮಂಥನದಿಂದ ಹುಟ್ಟುವ ಅಮೃತ ವನ್ನು ಪಡೆದುಕೊಳ್ಳಿ. ಯುಕ್ತಿಯಿಂದ ಕಾರ್ಯವು ಕೈಗೂಡುವಂತೆ ಶಕ್ತಿಯಿಂದ ಸಿದ್ಧಿಸುವುದಿಲ್ಲ. ಕಡೆಯುವಾಗ ಮೊದಲು ಕಾಲಕೂಟವೇ ಹುಟ್ಟುವುದು. ಅದಕ್ಕೆ ಹೆದರಬೇಡಿ. ಕಾಮಕ್ರೋಧಗಳನ್ನು ಬಿಟ್ಟು ಕೆಲಸ ಮಾಡಿಕೊಳ್ಳಿ" ಎಂದು ಹೇಳಿ ಕಳುಹಿಸಿ ಕೊಟ್ಟನು.

ಇಂದ್ರಾದಿ ದೇವತೆಗಳು ಭಗವಂತನ ಅಪ್ಪಣೆಯಂತೆ ಆಗ ರಾಕ್ಷಸ ರಾಜನಾಗಿದ್ದ ಬಲಿಚಕ್ರವರ್ತಿಯ ಬಳಿಗೆ ಹೋದರು. ರಾಕ್ಷ ಸೇಂದ್ರನೂ ಅವನ ಕಡೆಯವರೂ ಇಂದ್ರನು ಹೇಳಿದ ಸಮುದ್ರಮಂಥ ನದ ವಿಚಾರವನ್ನು ಕೇಳಿ ಆಗಬಹುದು ಎಂದರು. ದೇವ ದಾನವರಿಗೆ ಮೈತ್ರಿಯು ಏರ್ಪಟ್ಟಿತು. ಇಬ್ಬರೂ ಸೇರಿ ಮಂದರ ಪರ್ವತವನ್ನು ಕಿತ್ತರು. ಅದರ ದಾರಿಯಲ್ಲಿ ತರುವಾಗ ಅಸಾಧ್ಯವಾಗಲು ಸ್ವಾಮಿಯು ತಾನೇ ಬಂದು ಗರುಡನಿಗೆ ಹೇಳಿ ಆ ಪರ್ವತವನ್ನು ತರಿಸಿ ಕ್ಷೀರ ಸಮುದ್ರದಲ್ಲಿಟ್ಟನು.

ದೇವಾಸುರರ ನಾಯಕರು ಹೋಗಿ ವಾಸುಕಿಗೆ ಅಮೃತದಲ್ಲಿ ಒಂದು ಪಾಲು ಕೊಡುವಂತೆ ಹೇಳಿ, ಹಗ್ಗವಾಗಲು ಆತನನ್ನು ಒಪ್ಪಿ ಸಿದರು. ಅದರಂತೆ ಆತನನ್ನು ಕರೆತಂದು ಮಂದರ ಪರ್ವತಕ್ಕೆ ಸುತ್ತಿದರು. ಶ್ರೀಹರಿಯು ದೇವತೆಗಳೊಡನೆ ವಾಸುಕಿಯನ್ನು ತಲೆಯ ಕಡೆ ಹಿಡಿದುಕೊಂಡನು. ದಾನವರು "ಕೂಡದು ಕೂಡದು. ನಾವು ಪೂರ್ವದೇವರು. ದೇವತೆಗಳಿಗಿಂತ ಹಿರಿಯರು. ನಾವು

ಬಾಲವನ್ನು ಹಿಡಿಯುವುದಿಲ್ಲ. ನಾವು ವೇದಗಳನ್ನು ಓದಿ, ಪೂಜ್ಯ
ರೆಂದು ಪ್ರಖ್ಯಾತರಾಗಿ ಬಾಲವನ್ನು ಹಿಡಿಯುವುದೇ ?" ಎಂದು
ಸುಮ್ಮನಿರಲು, ಸ್ವಾಮಿಯು "ಚಿಂತೆಯಿಲ್ಲ. ನಾವೇ ಬಾಲವನ್ನು
ಹಿಡಿಯೋಣ" ಎಂದು ದೇವತೆಗಳೊಡನೆ ಬಾಲವನ್ನು ಹಿಡಿದು
ಕೊಂಡನು. ದಾನವರು ಶಿರಸ್ಸಿನ ಕಡೆ ಹಿಡಿದರು. ಇಬ್ಬರೂ ಕ್ಷೀರ
ಸಮುದ್ರವನ್ನು ಕಡಯಲಾರಂಭಿಸಿದರು. ಕಡಗೋಲಾಗಿದ್ದ ಮಂದರ
ಪರ್ವತವು ನಿಲ್ಲುವುದಕ್ಕೆ ಸ್ಥಾನವಿಲ್ಲದೇ ಮುಳುಗಿ-ಹೋಯಿತು.

ಅದನ್ನು ಕಂಡು ದೇವ ದಾನವರು ಮಂದರ ಗಿರಿಯನ್ನು ಎತ್ತ
ಲಾರದೆ ಮೊಂಕಾದರು, ಆಗ ಮಹಾ ವಿಷ್ಣುವು ಅತ್ಯದ್ಭುತವಾದ
ಕೂರ್ಮ ರೂಪವನ್ನು ತಳೆದು ನೀರಿನೊಳಕ್ಕೆ ಇಳಿದು ಬೆಟ್ಟವನ್ನು
ಬೆನ್ನಿನ ಮೇಲೆ ಇಟ್ಟುಕೊಂಡು ಮೇಲಕ್ಕೆ ಎತ್ತಿದನು. ಹೀಗೆ ಆದಿ
ಕೂರ್ಮ ರೂಪದಿಂದ ಮಂದರವನ್ನು ಹೊತ್ತುಕೊಂಡೇ ದೇವ ದಾನ
ವರ ಶರೀರಗಳನ್ನು ಬಲ ರೂಪನಾಗಿ ಪ್ರವೇಶಿಸಿ ಅವರ ಬಲ ಪರಾಕ್ರ
ಮಗಳನ್ನು ಹೆಚ್ಚಿಸಿದನು. ನಿದ್ರಾರೂಪದಿಂದ ವಾಸುಕಿಯನ್ನು
ಪ್ರವೇಶಿಸಿದನು. ಹೆಚ್ಚಿನ ಬಲದಿಂದ ದೇವ ದಾನವರು ಕೊಬ್ಬಿ
ಮಂದರ ಪರ್ವತವನ್ನು ಕಡೆಯುತ್ತಿದ್ದರೂ ಆ ಕೂರ್ಮನಿಗೆ ನವೆಗಾಗಿ
ಕೆರೆಯುತ್ತಿರುವಂತೆ ಇತ್ತು. ಆ ಕಡೆಗೋಲನ್ನು ಹೀಗೆ ಬೆನ್ನ ಮೇಲೆ
ಹೊತ್ತಿರುವ ಕೂರ್ಮನಾದ ನಾರಾಯಣನೇ ಸಹಸ್ರ ಬಾಹುವಾಗಿ
ಆಕಾಶದಲ್ಲಿ ನಿಂತು ಆ ಕಡೆಗೋಲನ್ನು ಹಿಡಿದಿದ್ದನು. ಹೀಗೆ ಕಡೆ
ಯುವಾಗ ಆ ನಾರಾಯಣನು ಎಲ್ಲೆಲ್ಲೂ ತಾನೇ ತಾನಾಗಿ, ತುಂಬಿ
ರಲು ಎಲ್ಲರೂ ಬಲೋನ್ಮತ್ತರಾಗಿ ಕಡೆದರು.

ಆ ಸಮಯದಲ್ಲಿ ಆಯಾಸ ಪಟ್ಟ ವಾಸುಕಿಯ ಸಾವಿರ ಬಾಯಿ
ಗಳಿಂದ ಮಹಾ ಘೋರವಾದ ವಿಷವು ಹೊರಬಿದ್ದು, ಸಮೀಪದಲ್ಲಿದ್ದ
ದಾನವೇಂದ್ರರನ್ನೆಲ್ಲಾ ಕಾಳ್ಗಿಚ್ಚಿನಂತೆ ಬೇಯಿಸಿತು. ಆ ವಿಷ

ಜ್ವಾಲೆಯು ದೇವತೆಗಳಿಗೂ ತಟ್ಟಿದ್ದರೂ ಅದು ಅವರನ್ನು ಅಷ್ಟಾಗಿ ಪೀಡಿಸಲಿಲ್ಲ. ಹೀಗೆ ಕಷ್ಟವಾಗಿರುವುದನ್ನೂ ಗಮನಿಸದೆ ದೇವ ದಾನವರು ಎಷ್ಟೋ ಕಡೆದರೂ ಅಮೃತವು ಹುಟ್ಟಲಿಲ್ಲ.

ಆಗ ಶ್ರೀ ಮಹಾ ವಿಷ್ಣುವು ತೋಳುಗಳಿಂದ ವಾಸುಕಿಯನ್ನು ಹಿಡಿದು, ಉರುಳದಂತೆ ಮಂದರ ಗಿರಿಯನ್ನೂ ನಿಲ್ಲಿಸಿಕೊಂಡು ಮಥಿಸುತ್ತಿರಲು ಆತನೂ ಪರ್ವತದಂತೆಯೇ ಇದ್ದನು. ಭಗವಂತನು ಹೀಗೆ ಮಥಿಸಲು ಭಯಂಕರವಾದ ಹಾಲಾಹಲವೆಂಬ ವಿಷವು ಮೊದಲು ಹುಟ್ಟಿತು. ಆಗ ಸಮುದ್ರದಲ್ಲಿರುವ ಜಲಚರಗಳಿರಲಿ, ಮೂರು ಲೋಕವೂ ಅದರ ವೇಗವನ್ನು ತಡೆಯಲಾರದೆ ಕಂಗೆಟ್ಟಿತು ಆಗ ದೇವ ದಾನವಾದಿ ಸರ್ವರೂ ಹೋಗಿ ಕಾಲನಾದ ಮಹಾ ರುದ್ರನನ್ನು ಆಶ್ರಯಿಸಿದರು: "ಸರ್ವ ಸ್ವರೂಪನಾದ ಮಹಾ ದೇವನೆ ನಮಗೆ ಒದಗಿರುವ ಭಯವನ್ನು ತಪ್ಪಿಸು" ಎಂದು ನಾನಾ ವಿಧವಾಗಿ ಪ್ರಾರ್ಥಿಸಿದರು.

ಅವರ ವ್ಯಸನವನ್ನು ಕಂಡು ಮಹಾ ದೇವನು ಕನಿಕರಿಸಿದನು. "ಪ್ರಾಣ ರಕ್ಷಣಕ್ಕಾಗಿ ಮರೆ ಹೊಕ್ಕಿರುವ ಇವರನ್ನು ಕಾಪಾಡುವುದೇ ಧರ್ಮವು. ಸಮರ್ಥನಾದವನಿಗೆ ದೀನರಾದವರ ಕಷ್ಟವನ್ನು ಕಳೆಯುವುದಕ್ಕಿಂತ ಬೇರೆ ಯಾವ ಲಾಭವುಂಟು ? ಭಗವಂತನ ಮಾಯೆಗೆ ಸಿಕ್ಕಿ ಪ್ರಾಣಿಗಳು ಒಬ್ಬರನ್ನೊಬ್ಬರು ದ್ವೇಷಿಸುವರು. ಹೀಗಿರಲು ಪ್ರಾಣವನ್ನು ಕೊಟ್ಟಾದರೂ ಇತರರನ್ನು ಕಾಪಾಡುವವರೇ ಸಾಧುಗಳು. ಅಂತಹ ಸಾಧುಗಳಿಗೆ ಭಗವಂತನಾದ ವಾಸುದೇವನೂ ನಾನೂ ಇಬ್ಬರೂ ಒಲಿಯುವೆವು. ಆದರಿಂದ ಅಂತಹ ಸಾಧುಗಳ ಕರ್ಮವನ್ನು ಈಗ ನಾನೇ ಮಾಡುವೆನು." ಎಂದು ತನ್ನ ಸತಿಗೆ ಹೇಳಿ, ಆ ಮಹಾ ರುದ್ರನು ಸಕಲ ಲೋಕಗಳನ್ನೂ ಆವರಿಸಿ ಬರುತ್ತಿರುವ ಹಾಲಾಹಲ ಮಹಾ ವಿಷವನ್ನು ಕೈಗೆ ತೆಗೆದುಕೊಂಡು

ಕುಡಿದುಬಿಟ್ಟನು. ಅಬ್ಬಾ! ಆ ವಿಷದ ಪ್ರಭಾವವಾದರೂ ಎಂತ ಹುದು! ಭಗವಂತನಾದ ಮಹಾ ದೇವನ ಕೊರಳಲ್ಲಿ ನಿಂತು, ತಾನು ನಿಂತ ಭಾಗವನ್ನು ತನ್ನ ಹಾಗೆಯೇ ಕಪ್ಪು ಮಾಡಿತು. ಆತನು ಮಾಡಿದ ಅದ್ಭುತ ಕಾರ್ಯವನ್ನು ಸರ್ವರೂ ಹೊಗಳಿದರು.

---

ಇಪ್ಪತ್ತನಾಲ್ಕನೆಯ ಅಧ್ಯಾಯವು

## ಶ್ರೀಹರಿಯು ಅಮೃತವನ್ನು ಹಂಚಿದುದು

ಬಂದಿದ್ದ ಕಷ್ಟವನ್ನು ಪರಶಿವನು ಕಳೆಯಲು, ದೇವ ದಾನವ ರೆಲ್ಲ ಮತ್ತೆ ಕ್ಷೀರಸಮುದ್ರವನ್ನು ಕಡೆಯಲಾರಂಭಿಸಿದರು. ಆಗ ಯಜ್ಞಕ್ಕೆ ಬೇಕಾದ ಹಾಲು ಮೊಸರು ತುಪ್ಪಗಳನ್ನು ಕೊಡುವ ಕಾಮ ಧೇನುವು ಜನಿಸಿದಳು. ಆಕೆಯನ್ನು ಮಹರ್ಷಿಗಳು ತಮಗಿರಲಿ ಎಂದರು. ಅನತಂತರ ಚಂದ್ರನಂತೆ ಬೆಳ್ಳಗಿರುವ ಉಚ್ಚೈಶ್ರವವೆಂಬ ಕುದುರೆಯು ಹುಟ್ಟಿತು. ಅದನ್ನು ಬಲೀಂದ್ರನು ತನಗಿರಲಿ ಎಂದನು. ಇಂದ್ರನು ಭಗವಂತನು ಹೇಳಿದ್ದ ಮಾತನ್ನು ನೆನೆದು ತನಗಾಸೆ ಯಿದ್ದರೂ ಸುಮ್ಮನಿದ್ದನು. ಅನಂತರ ಕೈಲಾಸದಂತೆ ಬೆಳ್ಳಗೂ ಎತ್ತ ರವಾಗಿಯೂ ನಾಲ್ಕು ದಂತಗಳುಳ್ಳದ್ದಾಗಿಯೂ ಇರುವ ಐರಾವತ ವೆಂಬ ಆನೆಯು ಬಂತು. ಅದನ್ನು ಇಂದ್ರನು ತೆಗೆದುಕೊಂಡನು. ಕೌಸ್ತುಭವೆಂಬ ಕೆಂಪು ಹುಟ್ಟಿತು. ಅದನ್ನು ಶ್ರೀಹರಿಯು ತನ್ನ ಎದೆಗೆ ಧರಿಸಿದನು. ಅನಂತರ ಕಲ್ಪವೃಕ್ಷಗಳೂ ಅಪ್ಸರೆಯರೂ ಹುಟ್ಟಿದರು. ಇವರೆಲ್ಲರೂ ಆದ ಮೇಲೆ ಮಹಾ ಲಕ್ಷ್ಮಿಯು ಜನ್ಮಿಸಿದಳು.

ಆಕೆಯು ಕ್ಷೀರ ಸಮುದ್ರದ ಮೇಲಿಂದ ಎದ್ದು ಬರುತ್ತಿದ್ದರೆ ಸ್ಫಟಿಕ ಪರ್ವತದ ಮೇಲೆ ಮಿಂಚಿನ ಬಳ್ಳಿಯಾಡುತ್ತಿರುವುದೋ

ಎನ್ನಿಸಿತು. ದೇವ ದಾನವಾದಿ ಸರ್ವರೂ ನಾವು ಇಂತಹ ರೂಪ ರಾಶಿಯನ್ನು ಕಂಡಿರಲಿಲ್ಲ ಎಂದು ಆಶ್ಚರ್ಯಪಟ್ಟರು. ಕೂಡಲೇ ಆಕೆ ಗೆಂದು ಮಹೇಂದ್ರನು ಅದ್ಭುತವಾದ ಒಂದು ಮಹಾಸನವನ್ನು ತಂದು ಹಾಕಿದನು. ಮಹಾ ನದಿಗಳೆಲ್ಲವೂ ಚಿನ್ನದ ಕುಂಭಗಳಿಂದ ಶುಚಿ ಯಾದ ಜಲವನ್ನು ಭೂದೇವಿಯು ಅಭಿಷೇಕಕ್ಕೆ ಬೇಕಾದ ಸಕಲ ಮೂಲಿಕೆಗಳನ್ನೂ ಗೋವುಗಳು ಪಂಚಗವ್ಯಗಳನ್ನು ವಸಂತನು ಫಲ ಪುಷ್ಪಗಳನ್ನೂ ತಂದು ಒಪ್ಪಿಸಿದರು. ಮಹರ್ಷಿಗಳು ಆಕೆಗೆ ಪಟ್ಟಾ ಭಿಷೇಕವನ್ನು ಮಾಡಿದರು. ಗಂಧರ್ವರು ಶುಭವಾಗಿ ಹಾಡಿದರು. ಅಪ್ಸರೆಯರು ನರ್ತನ ಮಾಡಿದರು. ಮೇಘಗಳು ವಾದ್ಯಗಳಾಗಿ ಸಂಗೀತವನ್ನು ರಚಿಸಿದುವು. ಮಂತ್ರಘಾತವಾಗುತ್ತಿರಲು ದಿಗ್ಗಜ ಗಳು ಪೂರ್ಣಕಲಶದಿಂದ ಅಭಿಷೇಕ ಮಾಡಿದುವು. ಆಗ ಸಮುದ್ರ ರಾಜನು ಎರಡು ಪೀತಾಂಬರಗಳನ್ನೂ ವರುಣನು ವೈಜಯಂತಿ ಮಾಲೆ ಯನ್ನೂ ವಿಶ್ವಕರ್ಮನು ವಿಚಿತ್ರವಾದ ಭೂಷಣಗಳನ್ನೂ ಸರಸ್ವ ತಿಯು ಹಾರವನ್ನೂ ಬ್ರಹ್ಮನು ಪದ್ಮವನ್ನೂ ನಾಗರುಕುಂಡಲುಗಳನ್ನೂ ತಂದೊಪ್ಪಿಸಿದರು.

ಆ ದೇವಿಯು ಹೀಗೆ ಕಾಣಿಕೆಗಳನ್ನು ಒಪ್ಪಿಸಿಕೊಂಡು ನೈದಿ ಲೆಯ ಮಾಲೆಯನ್ನು ಹಿಡಿದು ಸ್ವಯಂವರಕ್ಕಾಗಿ ಹೊರಟಳು. ಓಡಾ ಡುತ್ತಿರುವ ಬಂಗಾರದ ಬಳ್ಳಿಯಂತೆ ಮೆರೆಯುತ್ತಾ ಒಬ್ಬೊಬ್ಬರ ನ್ನಾಗಿ ನೋಡಿಕೊಂಡು ಬಂದು ಸರ್ವಗುಣ ಸಂಪನ್ನನಾದ ಮಹಾ ವಿಷ್ಣುವನ್ನು ವರಿಸಿದಳು. ಜಗತ್ಪತಿಯಾದ ಶ್ರೀಮನ್ನಾರಾಯಣನು ಜಗನ್ಮಾತೆ ಭಾಗ್ಯದೇವತೆಯೂ ಆದ ಶ್ರೀ ದೇವಿಯನ್ನು ತನ್ನ ಹೃದ ಯದಲ್ಲಿ ಇಟ್ಟುಕೊಂಡನು. ಅಲ್ಲಿದ್ದವರೆಲ್ಲರೂ ಸಂತೋಷದಿಂದ ಮಂಗಳ ವಾದ್ಯಗಳನ್ನು ಬಾರಿಸಿಕೊಂಡು ಗಾನ ನರ್ತನಗಳನ್ನು ಮಾಡಿದರು.

ಹೀಗೆ ಲಕ್ಷ್ಮೀ ಸ್ವಯಂವರವಾಗುತ್ತಲೂ ಮತ್ತೆ ಸಮುದ್ರ ಮಥನಕ್ಕೆ ಆರಂಭವಾಯಿತು. ಆಗ ಕನ್ಯೆಯೂ ಕಮಲಲೋಚನೆಯೂ ಆದ ವಾರುಣೀ ದೇವಿಯು ಜನಿಸಿ ಬಂದಳು. ಆಕೆಯನ್ನು ಶ್ರೀ ಹರಿಯು ದಾನವರಿಗಿತ್ತನು. ಮರಳಿ ಮಂಥನ ಮಾಡಲು, ಆ ಸಮುದ್ರ ಮಧ್ಯದಿಂದೊಬ್ಬ ಮಹಾಪುರುಷನು ಜನಿಸಿ ಎದ್ದು ಬಂದನು. ನೀಲಮೇಘಶ್ಯಾಮಳನಾಗಿ ತರುಣನಾಗಿ ಮಾಲೆಯನ್ನು ಧರಿಸಿ ಸರ್ವಾಭರಣ ಭೂಷಿತನಾಗಿ ವಿಷ್ಣುವಿನ ಅಂಶದಿಂದ ಸಂಭೂತನಾದ ಆತನೇ ಧನ್ವಂತರಿಯೆಂದು ವಿಖ್ಯಾತನಾದನು. ಮಹಾನುಭಾವನು. ಆತನೇ ಲೋಕಕ್ಕೆ ಆಯುರ್ವೇದವನ್ನು ಕರುಣಿಸಿದವನು. ಆತನ ಕೈಯಲ್ಲಿ ಅಮೃತ ಕಲಶವಿತ್ತು. ಆ ಕಲಶವನ್ನು ಕಂಡ ಕೂಡಲೇ ದೈತ್ಯದಾನವರು ಕಡೆಯುತ್ತಿದ್ದುದನ್ನು ಬಿಟ್ಟು ಆತನ ಮೇಲೆ ಬಿದ್ದು ಆ ಅಮೃತಕಲಶವನ್ನು ಕಿತ್ತುಕೊಂಡು ಹೋದರು. ಅದನ್ನು ಕಂಡು ದೇವತೆಗಳು ಖಿನ್ನರಾಗಿ ಶ್ರೀಹರಿಯನ್ನು ಶರಣು ಹೊಕ್ಕರು.

ಇತ್ತ ದೈತ್ಯದಾನವವೀರರು ಅಮೃತವನ್ನು ಕುಡಿಯಲು, ನಾನು ಮುಂದು-ನಾನು ಮುಂದು ಎಂದು ಜಗಳವಾಡಲಾರಂಭಿಸಿದರು. ಕೆಲವರು "ನಾವೇ ಕುಡಿಯುವುದು ನ್ಯಾಯವಲ್ಲ. ದೇವತೆಗಳಿಗೂ ಭಾಗವನ್ನು ಕೊಡಬೇಕು" ಎಂದರು. ಹೀಗೆ ಎಲ್ಲರೂ ಒಬ್ಬರಿಂದೊಬ್ಬರು ಅಮೃತಕಲಶವನ್ನು ಹಾರಿಸುತ್ತಾ ಒದ್ದಾಡುತ್ತಿರುವಾಗ, ಶ್ರೀಹರಿಯು ಮೋಹಿನಿಯಾಗಿ ಅವರೆದುರು ಸುಳಿದನು. ಆಕೆಯ ವಯಸ್ಸು ತೇಜಸ್ಸು ಮೊದಲಾದುವುಗಳನ್ನು ಕಂಡು ಅವರ ಮನಸ್ಸು ಹುಚ್ಚು ಹುಚ್ಚಾಯಿತು. ಎಲ್ಲರೂ ಆಕೆಯ ಬಳಿಗೆ ಹೋಗಿ ಅಮೃತಕಲಶವನ್ನು ಆಕೆಯ ಬಳಿಯಿಟ್ಟು "ಇದನ್ನು ನಮ್ಮೆಲ್ಲರಿಗೂ ನ್ಯಾಯವಾಗಿ ಪಕ್ಷಪಾತವಿಲ್ಲದೆ ಹಂಚು" ಎಂದು ಕೇಳಿಕೊಂಡರು.



ಮೋಹಿನಿಯ ಅವತಾರ

ಮೋಹಿನಿಯು ಕಪಟದಿಂದ "ನಾನು ಪಂಚಿಸಿದರೋ ?" ಎಂದಳು. ದೈತ್ಯರು ಆ ವೇಳೆಗಾಗಲೇ ಆಕೆಯ ರೂಪಕ್ಕೆ ಸೋತು ಹೋಗಿದ್ದುದರಿಂದ "ನೀನು ಏನು ಮಾಡಿದರೂ ನಮಗೆ ಒಪ್ಪಿಗೆ" ಎಂದರು. ಆಕೆಯು "ಹಾಗಾದರೆ ಸರಿ" ಎಂದು ಅಮೃತಕಳಶವನ್ನು ತೆಗೆದುಕೊಂಡಳು.

ಮರುದಿನ ದೇವದಾನವರೆಲ್ಲರೂ ಮಂಗಳಸ್ನಾನಮಾಡಿ ಸರ್ವಾಲಂಕಾರ ಭೂಷಿತರಾಗಿ ದೇವಪೂಜಾ ದಾನ, ಮೊದಲಾದುವುಗಳನ್ನು ಮಾಡಿ ಬಂದು ಶೃಂಗಾರವಾಗಿರುವ ಮಂಟಪದಲ್ಲಿ ಪೂರ್ವಾಭಿಮುಖರಾಗಿ ಕುಳಿತರು. ಮೋಹಿನಿಯು ಬೆಡಗಿನಿಂದ ಬಂದು ದೇವತೆಗಳನ್ನೂ ದಾನವರನ್ನೂ ಬೇರೆ ಬೇರೆ ಸಾಲುಗಳಾಗಿ ಕುಳ್ಳಿರಿಸಿದಳು. ದಾನವರು ತಮಗೂ ಹಂಚುವಳು ಎಂದು ಕಾದು ಕುಳಿತಿದ್ದರು.

ಮೋಹಿನಿಯು ದೇವತೆಗಳಿಗೆ ಅಮೃತವನ್ನು ಹಂಚುತ್ತಿರುವಾಗ ರಾಹುವು ದೇವವೇಷದಿಂದ ದೇವತೆಗಳ ನಡುವೆ ಕುಳಿತಿದ್ದನು. ಅಕ್ಕಪಕ್ಕಗಳಲ್ಲಿದ್ದ ಸೂರ್ಯ ಚಂದ್ರರು ಅವನನ್ನು ಗುರ್ತಿಸಿ ಮೋಹಿನಿಗೆ ಹೇಳಲು ಆಕೆಯು ಅವನ ತಲೆಯನ್ನು ಹಾರಿಸಿದಳು. ಅವನು ಅಮೃತವನ್ನು ಕುಡಿದಿದ್ದಕ್ಕಾಗಿ ಸಾಯಲಿಲ್ಲ. ಅವನೇ ಇಂದಿಗೂ ಪರ್ವಕಾಲಗಳಲ್ಲಿ ಸೂರ್ಯ ಚಂದ್ರರನ್ನು ಹಿಡಿಯುವವನು.

---

### ಇಪ್ಪತ್ತೈದನೆಯ ಅಧ್ಯಾಯವು

## ದೇವಾಸುರರ ಯುದ್ಧವು

ದೈತ್ಯರು ಶತ್ರುಗಳಾದ ದೇವತೆಗಳು ಅಮೃತವನ್ನು ಪಡೆದರಲ್ಲಾ ಎಂದು ಸಂಕಟಪಟ್ಟು ಅವರ ಮೇಲೆ ಯುದ್ಧಕ್ಕೆ ಬಂದರು ಅಮೃತಪಾನಮಾಡಿದ್ದ ದೇವತೆಗಳು ಧೈರ್ಯವಾಗಿ ಯುದ್ಧಕ್ಕೆ ನಿಂತ

ರು. ಕ್ಷೀರಸಮುದ್ರದ ದಡದಲ್ಲಿ ದೇವದಾನವರಿಗೆ ಭಾರಿಯಾದ ಭಯಂಕರವಾದ ಯುದ್ಧವಾಯಿತು.

ದಾನವ ಸೇನೆಗೆ ಮುಖ್ಯ ನಾಯಕನಾದ ಬಲಿಯು ಮಾಯಾಸುರನಿಂದ ನಿರ್ಮಿತವಾದ ವಹಾಯಸಾಮಯವಾದ ರಥವನ್ನೇರಿ ಯುದ್ಧಕ್ಕೆ ಬಂದನು. ದೇವನಾಯಕನಾದ ಇಂದ್ರನು ಐರಾವತವನ್ನೇರಿ ಬಂದನು. ಎರಡು ಸೇನೆಗಳೂ ಇಬ್ಬರು ನಾಯಕರೂ ಅಪಾರವಾದ ಪರಾಕ್ರಮದಿಂದ ಹೋರಾಡಿದರು.

ಎರಡು ಕಡೆಗಳಲ್ಲಿಯೂ ಅದ್ಭುತವಾಗಿ ಯುದ್ಧಮಾಡಿ ಅನೇಕಾನೇಕರು ಹತರಾಗಿ ಬಿದ್ದರು. ಎರಡು ಕಡೆಯೂ ರಕ್ತವು ನದಿಯಾಗಿ ಹರಿಯಿತು.

ಕೊನೆಗೆ ಬಲಿಯು ಮಾಯಾ ಯುದ್ಧಕ್ಕೆ ಆರಂಭಿಸಿದನು ಬೆಟ್ಟಗಳು ದೇವಸೇನೆಗಳ ಮೇಲೆ ಬೀಳಲಾರಂಭಿಸಿದವು. ದೊಡ್ಡ ದೊಡ್ಡ ಮೋಡಗಳು ದೇವಸೇನೆಯನ್ನು ಮುಚ್ಚಿ ಸಿಡಿಲುಗಳನ್ನು ಕಾರಿದುವು. ಬೆಂಕಿಯ ಮಳೆಯನ್ನು ಕರೆದುವು. ಬೆಂಕಿಯನ್ನು ಬಿರುಗಾಳಿಯು ರೇಗಿಸಿತು. ಹೀಗೆ ಬೆಂಕಿಯು ತಾನೇ ತಾನಾಗಿ ಸುಡುವ ದೇವಸೇನೆಯನ್ನು ಮಹಾ ಸಮುದ್ರಗಳು ಬಂದು ಆವರಿಸಿದುವು. ಹೀಗೆ ದೈತ್ಯರು ತಮ್ಮ ಮಾಯೆಯನ್ನು ಪ್ರಯೋಗಿಸಲು ದೇವತೆಗಳು ಹೆದರಿ ಹಿಂದು ಮುಂದು ತೋರದೆ ನಿಂತರು. ಅವರಿಗೆ ಆ ಮಾಯೆಗೆ ಏನು ಮಾಡಬೇಕೋ ತಿಳಿಯದೆ "ಶ್ರೀಹರಿ, ನೀನೇಗತಿ" ಯೆಂದು ಸುಮ್ಮನಾದರು. ಆಗ ಶ್ರೀಹರಿಯು ಗರುಡಾರೂಢನಾಗಿ ಕಾಣಿಸಿಕೊಂಡನು. ಕೂಡಲೇ ರಾಕ್ಷಸರ ಮಾಯೆಗಳೆಲ್ಲವೂ ಮಾಯವಾಗಿ ಹೋದವು.

ಅದನ್ನು ಕಂಡು ಕಾಲನೇಮಿಯೆಂಬ ರಾಕ್ಷಸನು ರೇಗಿ ಶ್ರೀಹರಿಯ ಮೇಲೆ ಶೂಲವನ್ನು ಪ್ರಯೋಗಿಸಿದನು. ಜಗದೀಶ್ವರನಾದ

ಮಹಾ ವಿಷ್ಣುವು ಅವನ್ನು ಹಾಗೆ ಒಡಿದು ಅದರಿಂದಲೇ ಅವನನ್ನು ಕೊಂದನು.

ಮಾಯೆಗಳೆಲ್ಲವೂ ತಪ್ಪಿದ ಮೇಲೆ ದೇವತೆಗಳು ಸೈನ್ಯದ ಮೇಲೆ ಬಿದ್ದು ಹೊಡೆದರು. ಬಲಿಯನ್ನು ಪುರಂದರನು ಎದುರಿಸಿ, "ಎಲೈ ಮಾಯಾವಿ, ನಿನ್ನ ತಲೆಯನ್ನು ಈಗಲೇ ಕಡಿಯುವೆನು" ಎಂದು ರೋಷದಿಂದ ಮುಂದೆ ನುಗ್ಗಿದನು. ಬಲಿಯು "ಇಂದ್ರ, ಯುದ್ಧದಲ್ಲಿ ಸುಖದುಃಖ, ಜಯಾಪಜಯಗಳು ಯಾರಿಗೂ ತಪ್ಪಿದ್ದಲ್ಲ. ಆದ್ದರಿಂದ ಪಂಡಿತರಾದವರು ಗೆದ್ದಾಗ ಹಿಗ್ಗುವುದಿಲ್ಲ, ಸೋತಾಗ ತಗ್ಗುವುದಿಲ್ಲ" ಎಂದು ಯುದ್ಧಕ್ಕೆ ಬಂದನು, ಬಲಿಯು ಪ್ರಬಲ ಪ್ರರಾಕ್ರಮ ಶಾಲಿ ಯಾದರೂ ಇಂದ್ರನ ವಜ್ರಾಯುಧಕ್ಕೆ ಬಲಿಯಾದನು.

ಅದನ್ನು ಕಂಡು ಜಂಬಾಸುರನು ಮುಂದೆ ಬಂದನು. ಆ ಶೂರನು ಗದೆಯಿಂದ ಹೊಡೆಯಲು ಐರಾವತವು ಆ ಏಟು ತಡೆಯ ಲಾರದೆ ಮುಂಡಿಯೂರಿ ನೆಲದಮೇಲೆ ಬಿದ್ದು ಕೂಗಿಕೊಂಡಿತು. ಅವನೂ ವಜ್ರಾಯುಧಕ್ಕೆ ಬಲಿಯಾದನು.

ಜಂಜನ ಬಂಧುಗಳಾದ ನಮುಚಿ, ಬಲಪಾಕ ಮೊದಲಾದ ದಾನವರು ಬಂದರು. ಅವರು ಇಂದ್ರ ಇಂದ್ರನ ರಥ, ಅವನ ಸಾರಥಿ ಮೊದಲಾದವನನ್ನೆಲ್ಲಾ ಶರಪಂಜರದಲ್ಲಿ ಮುಚ್ಚಿಬಿಟ್ಟರು. ದೇವತೆಗಳು ಇಂದ್ರನೇನಾದನೋ ಎಂದು ಅಂಜಿ ಕೂಗಿಕೊಂಡರು. ಇಂದ್ರನು ಆ ಶರಪಂಜರದಿಂದ ಹೊರಗೆ ಬಂದು ವಜ್ರಾಯುಧವನ್ನು ಪ್ರಯೋಗಿಸಿ ಬಲ, ಪಾಕರೆಂಬ ಇಬ್ಬರು ರಾಕ್ಷಸರನ್ನು ಕಡಿದನು. ನಮುಚಿಯ ಮೇಲೆ ವಜ್ರಾಸ್ತ್ರವನ್ನು ಪ್ರಯೋಗಿಸಿದರೆ ಅದು ಅವನ ಕತ್ತಿನ ಚರ್ಮವನ್ನೂ ಕಡಿಯಲಿಲ್ಲ.

ವಜ್ರಾಯುಧವು ವ್ಯರ್ಥವಾದುದನ್ನು ಕಂಡು ಇಂದ್ರನಿಗೆ ಆಶ್ಚ ರ್ಯವಾಯಿತು. ಪರ್ವತಗಳ ರೆಕ್ಕೆಗಳನ್ನು ಕಡಿದವಜ್ರವು ಏಕೆನಿಸ್ಸಾರ

ವಾಯಿತು' ಎಂದು ಚಿಂತಿಸುತ್ತಿರುವಾಗ ಆ ಅಶರೀರವಾಣಿಯು "ಇಂದ್ರ ಇವನಿಗೆ ವರವಿದೆ. ಒಣಗಿದುದು ಹಸಿಯದು, ಇವೆರಡೂ ಇವನನ್ನು ಕೊಲ್ಲಲಾರವು" ಎಂದು ಹೇಳಿತು. ಆಗ ಮಹೇಂದ್ರನು ಯೋಚಿಸಿ ಒಣಗಿದ್ದೂ ಅಲ್ಲದೆ ಹಸಿಯದೂ ಅಲ್ಲದೆ ಇರುವನೊರೆಯಿಂದಹೊಡೆದು ಆ ನಮುಚಿಯ ತಲೆಯನ್ನು ಕತ್ತರಿಸಿದನು.

ಹೀಗೆ ಪ್ರಮುಖರಾದ ದಾನವ ನಾಯಕರೆಲ್ಲರೂ ಮಡಿದುದನ್ನು ಕಂಡು ಬ್ರಹ್ಮನು ನಾರದರನ್ನು ಕರೆದು "ಹೋಗಿ ದೇವದಾನವರಿಗೆ ಸಂಧಿಯನ್ನು ಮಾಡಿ ಬಾ" ಎಂದು ಕಳುಹಿಸಿದನು. ಅವರು ಬಂದು "ದೇವತೆಗಳಿರಾ, ನೀವು ಶ್ರೀಮನ್ನಾರಾಯಣನ ಸಹಾಯದಿಂದ ಅಮೃತವನ್ನು ಪಡೆದಿರಿ. ಬೇಕಾದ ಐಶ್ವರ್ಯವೂ ನಿಮ್ಮದಾಯಿತು. ಇನ್ನು ಯುದ್ಧವನ್ನು ನಿಲ್ಲಿಸಿ" ಎಂದು ಹೇಳಿದರು. ಅದರಂತೆ ದೇವತೆಗಳು ತಮ್ಮ ಕಡೆಯವರಿಂದ ಹೊಗಳಿಸಿಕೊಳ್ಳುತ್ತಾ ಸ್ವರ್ಗಲೋಕಕ್ಕೆ ಹೋದರು.

ನಾರದರು ದೈತ್ಯರಿಗೂ ಬುದ್ಧಿ ಹೇಳಿದರು. ಅದರಂತೆ ಅವರು ಯುದ್ಧದಲ್ಲಿ ಮಡಿದಿದ್ದ ಬಲಿಯನ್ನು ಅಸ್ತಗಿರಿಗೆ ತೆಗೆದುಕೊಂಡು ಹೋದರು. ಆಗ ಶುಕ್ರಾಚಾರ್ಯನು ಬಲೀಂದ್ರನನ್ನೂ ರಣದಲ್ಲಿ ಮೃತರಾಗಿದ್ದ ಇತರರನ್ನು ತನ್ನ ಸಂಜೀವಿನೀ ವಿದ್ಯಾಬಲದಿಂದ ಬದುಕಿಸಿದನು.

ಶ್ರೀಹರಿಯು ಸ್ತ್ರೀರೂಪದಿಂದ ದಾನವರನ್ನು ಮೋಹಗೊಳಿಸಿ ದೇವತೆಗಳಿಗೆ ಅಮೃತವನ್ನು ಹಂಚಿದನು ಎಂದು ಕೇಳಿ ಆ ರೂಪವನ್ನು ತಾನೂ ನೋಡಬೇಕೆಂದು ಮಹಾದೇವನು ಪಾರ್ವತಿಯನ್ನೂ, ಪರಿವಾರವನ್ನೂ ಕರೆದುಕೊಂಡು ಆತನ ಬಳಿಗೆ ಬಂದನು. ಶ್ರೀಮನ್ನಾರಾಯಣನು ಪಾರ್ವತೀ ಪರಮೇಶ್ವರರನ್ನು ಆದರದಿಂದ ಪೂಜಿಸಿದನು. ಆಗ ಪರಶಿವನು "ಎಲೈ ನಾರಾಯಣನೆ, ಚಿನ್ನವು ತಾನು ಒಂದೇ

ಆದರೂ ಒಡವೆಗಳ ರೂಪದಿಂದ ನಾನಾ ವಿಧವಾಗಿ ಕಾಣುವಂತೆ ಒಬ್ಬನೇ ಒಬ್ಬನಾದ ನೀನು ಪ್ರಪಂಚವಾಗಿ ಬಗೆಬಗೆಯ ರೂಪದಿಂದ ಕಾಣುವೆ. ನೀನು ಹೊಸದಾಗಿ ಸ್ತ್ರೀ ರೂಪವನ್ನು ಧರಿಸಿದೆಯಂತೆ. ನಾನು ಅದನ್ನು ನೋಡಬೇಕೆಂದಿರುವೆನು" ಎಂದು ಪ್ರಾರ್ಥಿಸಿದನು. ವಿಷ್ಣುವು ಆಗಲೆಂದು ಮತ್ತೆ ಸ್ತ್ರೀಯಾಗಿ ಬಂದನು. ಆ ಹೆಣ್ಣೆಂದರೇನು ಸಾಮಾನ್ಯದ ಹೆಣ್ಣೆ! ಆ ಹೆಣ್ಣಿನ ರೂಪವನ್ನು ಕಂಡು ಪರಶಿವನಿಗೂ ಭ್ರಾಂತಿಯಾಯಿತು. ಪಾರ್ವತಿಯು ಜೊತೆಯಲ್ಲಿಯೇ ಇರುವಳೆಂಬು ದನ್ನೂ ಮರೆತು ಆ ಹೆಣ್ಣನ್ನು ಹಿಡಿದುಕೊಳ್ಳಲು ಹೋದನು. ಆದರೇನು ? ಪರಾಶಿವನು ಸಾಮಾನ್ಯನೇ ? ಒಂದಷ್ಟು ಹೊತ್ತಿನಲ್ಲಿ ಆತನ ಕಾಮವು ಅಡಗಿ "ಮಹಾ ವಿಷ್ಣುವಿನ ಮಾಯೆಯು ಎಷ್ಟು ದೊಡ್ಡದು!" ಎಂದು ಆಶ್ಚರ್ಯಪಟ್ಟನು.

ಶ್ರೀಹರಿಯು ತನ್ನ ಮೋಹಿನೀ ರೂಪವನ್ನು ಉಪಸಂಹರಿಸಿ ಮಹಾದೇವನನ್ನು ಮತ್ತೆ ಪೂಜಿಸಿದನು. ಆತನೂ ಶ್ರೀಹರಿಗೆ ಪೂಜೆ ಯನ್ನು ಒಪ್ಪಿಸಿ, ಭಕ್ತರನ್ನು ಕೈ ಬಿಡದೆ ಕಾಪಾಡುವ ಆ ಭಗವಂತ ನನ್ನು ಹೊಗಳುತ್ತಾ ಕೈಲಾಸಕ್ಕೆ ಹೋದನು.

- -

ಇಪ್ಪತ್ತಾರನೆಯ ಅಧ್ಯಾಯವು

## ಮನ್ವಂತರ ವರ್ಣನೆ

ಆರು ಮನ್ವಂತರಗಳನ್ನು ವರ್ಣಿಸಿದ ಶುಕಮುನೀಂದ್ರನು ಪರೀಕ್ಷಿದ್ರಾಜನಿಗೆ ಉಳಿದ ಮನ್ವಂತರಗಳನ್ನೂ ಹೇಳಿದನು. ಏಳನೆಯ ಮನ್ವಂತರವು ಸೂರ್ಯನ ಮಗಳಾದ ವೈವಸ್ವತನದು. ಅದೇ ಈಗ ನಡೆ ಯುತ್ತಿರುವುದು. ಈ ಮನ್ವಂತರದಲ್ಲಿ ಕಶ್ಯಪನಿಂದ ಅದಿತಿ ದೇವಿಯಲ್ಲಿ ಭಗವಂತನು ವಾಮನನಾಗಿ ಅವತಾರ ಮಾಡಿದನು.

ಮುಂದಿನ ಮನ್ವಂತರಗಳನ್ನು ಕೇಳು. ಸೂರ್ಯನಿಂದ ಛಾಯಾ ದೇವಿಯಲ್ಲಿ ಹುಟ್ಟಿದ ಸಾವರ್ಣಿಯು ಎಂಟನೆಯ ಮನುವು. ವರುಣ ಪುತ್ರನಾದ ದಕ್ಷಸಾವರ್ಣಿಯು ಒಂಭತ್ತನೆಯ ಮನುವು. ಮಹಾತ್ಮ ನಾದ ಬ್ರಹ್ಮಸಾವರ್ಣಿಯು ಹತ್ತನೆಯ ಮನುವು. ಮಹಾನುಭಾವ ನಾದ ಧರ್ಮಸಾವರ್ಣಿಯು ಹನ್ನೊಂದನೆಯ ಮನುವು. ಭದ್ರ ಸಾವರ್ಣಿಯು ಹದಿಮೂರನೆಯ ಮನುವು.

ಹೀಗೆ ಈವರೆಗೆ ಕಳೆದು ಹೋದ ಮನ್ವಂತರಗಳು ಆರು. ಈಗ ನಡೆಯುತ್ತಿರುವುದೊಂದು. ಮುಂದೆ ಬರತಕ್ಕುವು ಏಳು. ಒಟ್ಟು ಮನ್ವಂತರಗಳು ಹದಿನಾಲ್ಕು. ಈ ಹದಿನಾಲ್ಕು ಮನ್ವಂತರಗಳಾಗುವ ವೇಳೆಗೆ ಯುಗಗಳು ಒಂದು ಸಾವಿರ ಬಾರಿ ಮರಳಿರುವುವು. ಹೀಗೆ ಒಂದು ಸಾವಿರ ಯುಗಗಳ ಕಾಲಕ್ಕೆ ಕಲ್ಪವೆಂದು ಹೆಸರು.

ಪ್ರತಿ ಮನ್ವಂತರದಲ್ಲಿಯೂ ಮನು, ಮನುಪುತ್ರರು, ಸಪ್ತರ್ಷಿ ಗಳು, ಇಂದ್ರ, ದೇವತೆಗಳು, ಭಗವಂತನ ಅವತಾರ, ಎಂಬ ಆರುವರು ಅಧಿಕಾರಿಗಳು. ಇವರು ಮನ್ವಂತರ ಮನ್ವಂತರಕ್ಕೂ ಬೇರೆಬೇರೆಯಾಗು ವರು. ಮನು ಮೊದಲಾದ ಐವರೂ ಭಗವದವತಾರನ ಆಜ್ಞೆಯಂತೆ ನಡೆಯುವರು. ಕೃತತ್ರೇತಾ ದ್ವಾಪರ ಕಲಿಯೆಂಬ ನಾಲ್ಕುಯುಗವು ಮುಗಿದಾಗ ಯುಗಪ್ರಲಯವಾಗುವುದು. ಆಗ ವೇದಗಳು ಮರೆಯಾ ಗುವುವು. ಆಗ ಸಪ್ತರ್ಷಿಗಳು ತೀವ್ರವಾದ ತಪಸ್ಸು ಮಾಡಿ ಅವನ್ನು ಮತ್ತೆ ಹೊರಕ್ಕೆ ತರುವರು. ಇದು ಋಷಿಗಳು ಮಾಡುವ ಕಾರ್ಯವು. ಮನುವು ತನ್ನ ಆಳ್ವಿಕೆಗೆ ಒಳಗಾದ ಭೂಮಂಡಲದಲ್ಲಿ ಸನಾತನವಾದ ಧರ್ಮವನ್ನು ಸ್ಥಾಪಿಸುವನು. ಇದು ಅತನ ಕಾರ್ಯವು. ಹಾಗೆ ಆತನು ಸ್ಥಾಪಿಸಿದ ಧರ್ಮವು ಹೆಚ್ಚು ಕಡಿಮೆಯಾಗದಂತೆ ಕಾಪಾಡಿಕೊಂಡು ಹೋಗುವುದು ಮನುಪುತ್ರ ಮಾಡುವ ಕಾರ್ಯವು. ನಡೆಯುವ ಯಜ್ಞ ಯಾಗಗಳಲ್ಲಿ ಹವಿರ್ಭಾಗಗಳನ್ನು ಗ್ರಹಿಸಿ ಲೋಕವನ್ನು ಕಾಪಾಡು

ವೂಮ ದೇವತೆಗಳ ಕಾರ್ಯವು. ಮೂರು ಲೋಕಗಳಿಗೂ ಅಧಿಪತಿಯಾಗಿದ್ದುಕೊಂಡು ಕಾಲಕಾಲಕ್ಕೆ ಮಳೆಗರೆಯುತ್ತಾ ಲೋಕವನ್ನು ಕಾಪಾಡಿಕೊಂಡು ಹೋಗುವುದು ಇಂದ್ರನ ಕಾರ್ಯವು. ಯುಗಯುಗಕ್ಕೆ ಅನುಸಾರವಾಗಿ ಜ್ಞಾನವನ್ನು ಉಪದೇಶ ಮಾಡುವುದು, ಭಗವಂತನ ಅವತಾರವಾಗಿ ಹುಟ್ಟಿದ ಪುರುಷನು ಮಾಡುವ ಕಾರ್ಯವು.

ಭಗವಂತನು ಬ್ರಹ್ಮ, ಮರೀಚಿ, ಮೊದಲಾದವರ ರೂಪದಿಂದ ಸೃಷ್ಟಿಸುವನು. ಇಂದ್ರಾದಿ ರೂಪದಿಂದ ತಪ್ಪಿದವರನ್ನು ಶಿಕ್ಷಿಸುವನು. ಕಾಲರೂಪನಾಗಿ ಎಲ್ಲವನ್ನೂ ಮುಗಿಸುವನು. ಇಂತಹ ಭಗವಂತನು ನಾಮರೂಪಗಳೆಂಬ ಮಾಯೆಗೆ ಸಿಕ್ಕಿದವನಿಗೆ ದೊರಕುವುದಿಲ್ಲ.

### ಇಪ್ಪತ್ತೇಳನೆಯ ಅಧ್ಯಾಯವು

## ವಾಮನಾವತಾರವು

ದೇವಾಸುರ ಯುದ್ಧದಲ್ಲಿ ಪರಾಜಿತನಾಗಿ ಮೃತನಾದ ಬಲಿಯು ಶುಕ್ರಾಚಾರ್ಯನ ಕೃಪೆಯಿಂದ ಬದುಕಿ, ಆತನನ್ನೇ ನಂಬಿ ಸೇವಿಸಿದನು. ಆ ಶ್ರದ್ಧಾ ಭಕ್ತಿಗಳಿಗೆ ಒಲಿದು ಶುಕ್ರಾಚಾರ್ಯನು ಆ ಬಲಿಯಿಂದ ವಿಶ್ವಜಿದ್ಯಾಗವನ್ನು ಕ್ರಮವಾಗಿ ಮಾಡಿಸಿದನು. ಆ ಯಾಗದ ಪೂರ್ಣಾಹುತಿಯ ಕಾಲದಲ್ಲಿ ಅಗ್ನಿಕುಂಡದಿಂದ ಇಂದ್ರನ ಕುದುರೆಗಳಂತೆ ಹಸುರಾದ ಕುದುರೆಗಳನ್ನು ಕಟ್ಟಿ, ಸಿಂಹಧ್ವಜದಿಂದ ಅಲಂಕೃತವಾಗಿರುವ ಚಿನ್ನದ ರಥವೊಂದು ಬಂತು. ಆ ರಥದಲ್ಲಿ ದಿವ್ಯವಾದ ಧನುಸ್ಸು ಸೊಗಸಾದ ಅಕ್ಷಯತೂಣೀರ (ಬತ್ತಳಿಕೆ)ಗಳು ದೃಢವಾದ ಕವಚವೂ ಇದ್ದುವು. ಬ್ರಹ್ಮನು ಬಾಡದಿರುವ ಕಮಲಮಾಲೆಯನ್ನು ಕೊಟ್ಟನು. ಶುಕ್ರನು ಶಂಖವನ್ನು ಕೊಟ್ಟನು. ಹೀಗೆ ಬಲಿಯು ಶುಕ್ರಾಚಾರ್ಯನ ಕೃಪೆಯಿಂದ ಯುದ್ಧ ಸಾಧನಗಳನ್ನು ಸಂಪಾದಿಸಿಕೊಂಡು, ಆತನಿಗೆ

ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಆಶೀರ್ವಾದವನ್ನು ಪಡೆದು, ತನ್ನ ತಾತನಾದ ಪ್ರಹ್ಲಾದನಿಗೂ ನಮಸ್ಕರಿಸಿ ಆತನ ಅಪ್ಪಣೆಯನ್ನು ಪಡೆದು ಇಂದ್ರನ ಮೇಲೆ ಯುದ್ಧಕ್ಕೆ ಹೊರಟನು. ಆತನಿಗೆ ಸಮನಾದ ಬಲ, ಐಶ್ವರ್ಯ, ಅಲಂಕಾರಗಳನ್ನುಳ್ಳ ದೈತ್ಯವೀರರು ನೋಟಗಳಿಂದಲೇ ಆಕಾಶಗಳನ್ನು ಕುಡಿಯುವರೋ, ದಿಕ್ಕುಗಳನ್ನು ದಹಿಸುವರೋ ಎಂಬಂತೆ ಆತನ ಜೊತೆಯಲ್ಲಿ ಹೊರಟರು.

ದೇವಗಂಗೆಯು ಬಳಸಿರುವ ಆ ಅಮರಾವತಿಯನ್ನು ಬಲಿಯು ಮುತ್ತಿ, ಶುಕ್ರಾಚಾರ್ಯನಿತ್ತಿದ್ದ ಶಂಖವನ್ನು ಗಟ್ಟಿಯಾಗಿ ಊದಿದನು. ಆ ಧ್ವನಿಯನ್ನು ಕೇಳಿ ದೇವಾಂಗನೆಯರೆಲ್ಲರೂ ಹೆದರಿದರು. ಆಗ ದೇವೇಂದ್ರನು ತನ್ನ ಗುರುವಾದ ಬೃಹಸ್ಪತಿಯನ್ನು ಕರೆಸಿಕೊಂಡು, ಏನು ಮಾಡಬೇಕು ಎಂದು ಕೇಳಿದನು. ದೇವಗುರುವು "ದೇವೇಂದ್ರ, ನೀನೆಂದುಕೊಂಡಿರುವುದು ಸರಿ. ಭೃಗುವಂಶದ ಶುಕ್ರಾಚಾರ್ಯನು ತನ್ನ ತಪಸ್ಸನ್ನು ತುಂಬಿ ಈತನನ್ನು ಕಳುಹಿಸಿರುವನು. ಸರ್ವೇಶ್ವರನಾದ ಶ್ರೀಹರಿಯಲ್ಲದೆ, ನೀನಾಗಲಿ, ನಿನ್ನಂತಹವರಾಗಲಿ ಈತನ ಎದುರು ನಿಲ್ಲಲು ಸಾಧ್ಯವಿಲ್ಲ. ಆದರಿಂದ, ನೀವು ಸದ್ಯದಲ್ಲಿ ಸ್ವರ್ಗವನ್ನು ಬಿಟ್ಟು ಹೊರಟು ಹೋಗಿ, ಶತ್ರುವು ಸೋಲುವ ಕಾಲವನ್ನು ಕಾಯುತ್ತಿ ಕೊಂಡಿರಿ. ಈಗ ಬ್ರಹ್ಮವಾದಿಗಳ ಅನುಗ್ರಹದಿಂದ ಈತನು ಹೆಚ್ಚುತ್ತಿರುವ ಪರಾಕ್ರಮವುಳ್ಳವನಾಗಿರುವನು. ಅವರನ್ನು ಅವಮಾನಗೊಳಿಸಿದಾಗ ಸಂಪೂರ್ಣವಾಗಿ ನಾಶವಾಗುವನು. ಅದುವರೆವಿಗೂ ಮರೆಯಾಗಿರಿ'' ಎಂದು ಹೇಳಿದನು. ಅದರಂತೆಯೇ ಇಂದ್ರಾದಿ ದೇವತೆಗಳೆಲ್ಲರೂ ವೇಷಾಂತರಗಳಿಂದ ಸ್ವರ್ಗವನ್ನು ಬಿಟ್ಟು ಹೊರಟು ಹೋದರು.

ಬಲಿಯು ಅಮರಾವತಿಯನ್ನೂ ಮೂರು ಲೋಕಗಳನ್ನೂ ಆಕ್ರಮಿಸಿದನು. ಶುಕ್ರಾಚಾರ್ಯನು ತಮ್ಮ ಭಕ್ತನಾದ ಬಲಿಯಿಂದ ನೂರು

ಅಶ್ವಮೇಧಗಳನ್ನು ಮಾಡಿಸಿದನು. ತನ್ನ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿತಾಗಿ ಬಲಿಯು ಬಲೀಂದ್ರನಾದನು.

ಇಂದ್ರನು ತನ್ನ ಐಶ್ವರ್ಯಗಳನ್ನೆಲ್ಲ ಕಳೆದುಕೊಂಡು ಅನಾಥನಾದುದು ಕಂಡು ಆತನ ತಾಯಾದ ಅದಿತಿದೇವಿಗೆ ಬಹು ದುಃಖವಾಯಿತು. ಆಕೆಯ ಗಂಡನಾದ ಕಶ್ಯಪಮುನಿಯು ಹೆಂಡತಿಗೆ ಸಮಾಧಾನವನ್ನು ಹೇಳಿ ಏನಾಗಬೇಕು ಹೇಳು ಎಂದು ಕೇಳಿದನು. ಆಕೆಯು "ದೇವಾ, ದೇವತೆಗಳೂ ದಾನವರೂ ಇಬ್ಬರೂ ನಿನ್ನ ಮಕ್ಕಳೇ ಆದ್ದರಿಂದ ನೀನು ಒಂದೇ ಸಮನಾಗಿರುವೆ. ಆದರೂ ನಿನ್ನ ಭಕ್ತರಾದ ನನ್ನ ಮಕ್ಕಳು ಐಶ್ವರ್ಯವನ್ನೂ ಪದವಿಯನ್ನೂ ಕಳೆದುಕೊಂಡಿರುವರು. ಅವರ ಶ್ರೇಯಸ್ಸನ್ನು ಚಿಂತಿಸು. ಪ್ರಬಲರು ಆಕ್ರಮಿಸಿರುವ ಐಶ್ವರ್ಯಾದಿಗಳು ಮತ್ತೆ ಕೈ ಸೇರುವಂತೆ ನನ್ನ ಮಕ್ಕಳನ್ನೂ ಅನುಗ್ರಹಿಸು" ಎಂದು ಪ್ರಾರ್ಥಿಸಿದಳು.

ಕಶ್ಯಪ ಮುನೀಂದ್ರನು ಅದನ್ನು ಕೇಳಿ ನಕ್ಕನು; "ದೇವಿ ನೀನು ಬಲ್ಲವಳು. ಆದರೂ ಸ್ನೇಹಪಾಶವು ನಿನ್ನನ್ನೂ ಕಟ್ಟಿರುವುದಲ್ಲಾ ! ಇದೇ ಮಹಾವಿಷ್ಣುವಿನ ಮಾಯೆಯೆಂಬುದು. ಪತಿಪುತ್ರಾದಿಗಳೆಂಬ ಮಮಕಾರಕ್ಕೆ ಮೋಹವೇ ಕಾರಣವು. ಆಗಲಿ, ಎಲೌ ಪತ್ನಿಯೆ, ಭಗವಂತನೂ ಪುರುಷೋತ್ತಮನೂ ಜನಾರ್ದನನೂ ಸರ್ವಪ್ರಾಣಿಗಳಲ್ಲಿಯೂ ಇರುವವನೂ ಜಗದ್ಗುರುವೂ ಆದ ವಾಸುದೇವನನ್ನು ಆರಾಧಿಸು. ಶ್ರೀಹರಿಯು ದೀನರಲ್ಲಿ ಕರುಣೆಯುಳ್ಳವನು. ಆತನು ತಪ್ಪದೆ ನಿನ್ನ ಕೋರಿಕೆಯನ್ನು ನೆರವೇರಿಸಿ ಕೊಡುವನು. ನಿನ್ನ ಕೋರಿಕೆಯನ್ನು ಪಡೆದುಕೊಳ್ಳಲು ಭಗವತ್ಸೇವೆಯೊಂದೇ ದಾರಿ " ಎಂದನು.

ಅದಿತಿಯು 'ಬ್ರಹ್ಮನೇ' ಆ ಭಗವಂತನನ್ನು ಹೇಗೆ ಸೇವಿಸಬೇಕೋ ಆ ವಿಧಿಯನ್ನು ಹೇಳು " ಎಂದು ಕೇಳಿದಳು. ಕಶ್ಯಪನು

ತನಗೆ ಬ್ರಹ್ಮನು ಉಪದೇಶಿಸಿದ್ದ ಪಯೋವ್ರತವನ್ನು ಆಕೆಗೆ ಉಪದೇಶಿಸಿದನು. ನಿತ್ಯಕರ್ಮಗಳನ್ನು ನೆರವೇರಿಸಿ ಭೂಮಿಯಲ್ಲಿ ಸೂರ್ಯನಲ್ಲಿ ಜಲದಲ್ಲಿ ಅಗ್ನಿಯಲ್ಲಿ ಗುರುವಿನಲ್ಲಿ ಶ್ರೀಹರಿಯನ್ನು ಪೂಜಿಸಬೇಕು. ಓಂ ನಮೋ ಭಗವತೇ ವಾಸುದೇವಾಯ ಎಂಬ ದ್ವಾದಶಾಕ್ಷರೀ ಮಂತ್ರವನ್ನು ಜಪಿಸಬೇಕು. ಹಾಲಿನಲ್ಲಿ ಬೇಯಿಸಿದ ಶಾಲ್ಯನ್ನವನ್ನು ನೈವೇದ್ಯ ಮಾಡಬೇಕು. ತುಪ್ಪ ಬೆಲ್ಲಗಳಿಂದ ಹೋಮ ಮಾಡಬೇಕು. ಬ್ರಾಹ್ಮಣ ಭೋಜನಮಾಡಬೇಕು. ನಿತ್ಯವೂ ಸ್ವಾಮಿಗೆ ಹಾಲಿನ ಅಭಿಷೇಕಮಾಡಬೇಕು'' ಎಂದು ಆ ವಿಧಗಳನ್ನೆಲ್ಲಾ ಬೋಧಿಸಿದನು. "ಫಾಲ್ಗುಣ ಮಾಸದಲ್ಲಿ ಪಾಡ್ಯದ ದಿನ ಆರಂಭಿಸಿ ತ್ರಯೋದಶಿಯ ವರೆಗೂ ಹೀಗೆ ವ್ರತಮಾಡು. ಹದಿಮೂರನೆಯ ದಿನ ತಿಳಿದವರನ್ನು ಇಟ್ಟುಕೊಂಡು ಮಹಾ ವಿಷ್ಣುವಿಗೆ ಪಂಚಾಮೃತಾಭಿಷೇಕವನ್ನು ಮಾಡಿ ಕ್ರಮವಾಗಿ ಪೂಜೆಯನ್ನೊಪ್ಪಿಸಿ ವಿಷ್ಣುಸೂಕ್ತದಿಂದ ಹೋಮ ಮಾಡು. ಆ ಕಾಲಕ್ಕೆ ಯಾರೇ ಬಂದರೂ ತಪ್ಪದೇ ಅವರಿಗೆಲ್ಲಾ ಭೋಜನ ಮಾಡಿಸಿ ವ್ರತವನ್ನು ಪೂರ್ಣ ಮಾಡು. ಶುದ್ಧ ಭಾವದಿಂದ ನಿಯಮದಿಂದ ಆ ಪರಮೇಶ್ವರನನ್ನು ಆರಾಧಿಸು. ಈ ವ್ರತವೇ ಸರ್ವ ಯಜ್ಞವು, ಸರ್ವವ್ರತವು, ತಪಸ್ಸಾರವು, ಸರ್ವದಾನಗಳನ್ನೂ ಮಾಡಿದರೆ ಯಾವ ಫಲವು ದೊರೆಯುವುದೋ ಅದು ಇದರಿಂದ ಲಭಿಸುವುದು. ಇದರಿಂದ ಈಶ್ವರನು ತಪ್ಪದೆ ತೃಪ್ತನಾಗುವನು. ಎಲೆ ಭದ್ರೆ, ನಿನಗೆ ತಪ್ಪದೆ ವರವನ್ನು ಕೊಡುವನು" ಎಂದು ಉಪದೇಶಿಸಿದನು

ಅದಿತಿಯು ಅದೇ ರೀತಿಯಾಗಿ ಆ ವ್ರತವನ್ನು ಕೊಂಚವೂ ತಪ್ಪದೆ ನೆರವೇರಿಸಿದಳು. ಆಕೆಯ ಭಕ್ತಿಗೆ ಮೆಚ್ಚಿ ಪೀತಾಂಬರನೂ ಚತುರ್ಬಾಹುವೂ ಆದ ಆದಿಪುರುಷನು ಪ್ರತ್ಯಕ್ಷನಾದನು. ಆಕೆಯು ಆನಂದದಿಂದ ಆತನಿಗೆ ಪ್ರಣಾಮ ಮಾಡಿದಳು. ಆನಂದವು ಮನಸ್ಸನ್ನು ತುಂಬಿದಂತೆ ಕಣ್ಣುಗಳನ್ನು ಆನಂದಾಶ್ರುಗಳು ತುಂಬಿದುವು. ಆಕೆಯು



ವಾಮನಾವತಾರ ಮತ್ತು ತ್ರಿವಿಕ್ರಮಾವತಾರ

ಬಾಯಿಂದ ಏನೂ ಮಾತೇ ಹೊರಡದಂತಾಯಿತು. ಆದರೂ ಕಷ್ಟದಿಂದ "ಯಜ್ಞೇಶ, ಯಜ್ಞಪುರುಷ, ಶ್ರವಣಮಂಗಳ ನಾಮಧೇಯ, ನೀನು ದೀನನಾಥನು, ನಮ್ಮನ್ನು ಕಾಪಾಡು" ಎಂದು ಪ್ರಾರ್ಥಿಸಿದಳು.

ಸರ್ವಾಂತರ್ಯಾಮಿಯಾದ ಭಗವಂತನಿಗೆ ಅದಿತಿಯ ಹೃದಯದಲ್ಲಿರುವ ದುಃಖವು ತಿಳಿಯದೆ? ಆತನು ನಗುತ್ತಾ "ನಿನ್ನ ಮಕ್ಕಳು ಮತ್ತೆ ಐಶ್ವರ್ಯವನ್ನು ಪಡೆದು ಸ್ವರ್ಗಲೋಕದಲ್ಲಿ ಸುಖವಾಗಿರುವುದನ್ನು ನೋಡಬೇಕೆಂದಿರುವೆ. ನೀನು ಶ್ರದ್ಧಾಭಕ್ತಿಗಳಿಂದ ಆಚರಿಸಿರುವ ಈ ವ್ರತವು ವ್ಯರ್ಥವಾಗುವುದಿಲ್ಲ. ನಾನು ನಿನ್ನ ಉದರದಲ್ಲಿ ಜನಿಸಿ ನಿನ್ನ ಮಕ್ಕಳೆಲ್ಲರನ್ನೂ ಕಾಪಾಡುವೆನು. ಈ ರಹಸ್ಯವನ್ನು ಯಾರಿಗೂ ಹೇಳಬೇಡ" ಎಂದು ಅಭಯವನ್ನು ಕೊಟ್ಟನು.

ಅದಿತಿಯು ಹೀಗೆ ದುರ್ಲಭವಾದ ವರವನ್ನು ಹೊಂದಿ, ಸಂತೋಷದಿಂದ ಪತಿಯ ಬಳಿಗೆ ಓಡಿದಳು. ಆತನೂ ಭಗವಂತನ ಅಂಶವು ತನ್ನನ್ನು ಸೇರಿರುವುದನ್ನು ಅರಿತು, ಅದನ್ನು ಪತ್ನಿಗೆ ಕೊಟ್ಟನು. ಭಗವಂತನು ಅಧಿತಿಗರ್ಭದಲ್ಲಿ ಉದಯಿಸಿದೇವತೆಗಳನ್ನು ಕಾಪಾಡುವನೆಂದು ಬ್ರಹ್ಮನೂ ಅರಿತು "ಸಮುದ್ರದಲ್ಲಿ ಬಿದ್ದವರಿಗೆ ಆಧಾರವಾಗುವ ಹಡಗಿನಂತೆ ಸ್ವರ್ಗವನ್ನು ಕಳೆದುಕೊಂಡ ದೇವತೆಗಳಿಗೆ ನೀನೇ ಆಧಾರನು" ಎಂದು ಆತನನ್ನು ಹೊಗಳಿದನು.

ಅದಿತಿಯು ಕಾಲಕ್ರಮದಲ್ಲಿ ಒಬ್ಬ ಮಗನನ್ನು ಹೆತ್ತಳು. ಆ ಮಗುವಿನ ಎದೆಯಲ್ಲಿದ್ದ ಶ್ರೀವತ್ಸವೆಂಬ ಮಚ್ಚೆಯೂ ಪದ್ಮನಯನಗಳೂ ಆತನು ಮಹಾವಿಷ್ಣುವೆಂದು ಕೂಗಿ ಹೇಳುವಂತಿದ್ದುವು ಆತನ ಮೈಯ ಕಾಂತಿಯಿಂದ ಆ ಮನೆಯೆಲ್ಲಾ ಬೆಳಕಾಯಿತು. ಹೀಗೆ ಭಾದ್ರಪದ ಶುದ್ಧ ದ್ವಾದಶಿಯ ದಿನ ಶ್ರವಣ ನಕ್ಷತ್ರದ ಮೊದಲನೆಯ ಪಾದದಲ್ಲಿ ಭಗವಂತನು ವಾಮನ ರೂಪದಿಂದ ಅವತರಿಸಿದನು. ಆ ಕಾಲದಲ್ಲಿ ದೇವದೇವತೆಗಳೆಲ್ಲರೂ ಗಾನಮಾಡುತ್ತ ಆನಂದದಿಂದ ನರ್ತಿಸುತ್ತಾ

ಅದಿತಿಯು ಆಶ್ರಮದಲ್ಲಿ ಹೂ ಮಳೆಯನ್ನು ಕರೆದರು. ಕಶ್ಯಪನೂ ಬಂದು ಜಯಜಯ ಎಂದು ಹೊಗಳಿದನು.

ಮಗುವು ತಂದೆತಾಯಿಗಳು ನೋಡುತ್ತಿದ್ದ ಹಾಗೆಯೇ ಬೆಳೆದು ಚಿಕ್ಕ ಹುಡುಗನಾದನು. ಮಹರ್ಷಿಗಳೆಲ್ಲರೂ ಉಪನಯನ ಯೋಗ್ಯನಾಗಿರುವ ವಾಮನನನ್ನು ಕಂಡು ಆಶ್ಚರ್ಯಪಟ್ಟರು. ಆತನಿಗೆ ಉಪನಯನವೂ ಆಯಿತು. ಆಗ ಸೂರ್ಯನೇ ಸಾಕ್ಷಾತ್ತಾಗಿ ಬಂದು ಗಾಯತ್ರಿಯನ್ನು ಉಪದೇಶಮಾಡಿದನು. "ಬೃಹಸ್ಪತಿಯು ಯಜ್ಞೋಪವೀತವನ್ನು ಕೊಟ್ಟನು ಭೂಮಿಯು ಕೃಷ್ಣಾಜಿನವನ್ನು, ಸೋಮನು ದಂಡವನ್ನು, ತಾಯಿಯು ಕೌಪೀನವನ್ನು, ಅಂತರಿಕ್ಷನು ಛತ್ರವನ್ನು, ಕಮಂಡಲವನ್ನು ಬ್ರಹ್ಮನು, ದರ್ಭೆಯನ್ನು ಸಪ್ತರ್ಷಿಗಳೂ, ಅಕ್ಷಮಾಲೆಯನ್ನು ಸರಸ್ವತಿಯೂ ಕೊಟ್ಟರು. ಕುಬೇರನು ಭಿಕ್ಷಾಪಾತ್ರೆಯನ್ನೂ ಇತ್ತನು. ಹೀಗೆ ಸರ್ವ ದೇವತೆಗಳಿಂದಲೂ ಪುರಸ್ಕೃತನಾದ ವಟುವು ಬ್ರಹ್ಮರ್ಷಿಗಳು ತುಂಬಿರುವ ಸಭೆಯಲ್ಲಿ ಅವರಿಗಿಂತ ತೇಜಸ್ವಿಯಾಗಿ ಶೋಭಿಸಿದನು. ವಾಮನನು ನಿತ್ಯವೂ ಅಗ್ನಿಕಾರ್ಯವನ್ನು ಎರಡು ಹೊತ್ತೂ ಮಾಡುತ್ತಿದ್ದನು.

---

## ಇಪ್ಪತ್ತೆಂಟನೆಯ ಅಧ್ಯಾಯವು

# ತ್ರಿವಿಕ್ರಮಾವತಾರವು

ನರ್ಮದಾತೀರದಲ್ಲಿ ಭೃಗುಕಚ್ಛವೆಂಬ ಒಂದು ಪುಣ್ಯಕ್ಷೇತ್ರವುಂಟು. ಅಲ್ಲಿ ಬಲೀಂದ್ರನು ತನ್ನ ಗುರುವಾದ ಶುಕ್ರಾಚಾರ್ಯನನ್ನು ಮುಂದು ಮಾಡಿಕೊಂಡು ಅಶ್ವಮೇಧಗಳನ್ನು ಮಾಡಿದನು. ಒಂದು ಯಾಗವು ನಡೆಯುತ್ತಿರುವಾಗ ವಾಮನನು ಬಾಲಸೂರ್ಯನಂತೆ ಬೆಳಗುತ್ತಾ ಅಲ್ಲಿಗೆ ಬಂದನು. ಆತನ ತೇಜಸ್ಸು ಅಲ್ಲಿರುವವರ ತೇಜಸ್ಸನ್ನೆಲ್ಲ

ವಿಹಾರಿತ್ತು, ಎಲ್ಲರೂ ಆಶ್ಚರ್ಯದಿಂದ ಆತನನ್ನೇ ನೋಡುತ್ತಿದ್ದರು. ಕೊಡೆ ಕಮಂಡಲಗಳನ್ನು ಹಿಡಿದು, ಮೌಂಜೀ ಕೃಷ್ಣಾಜಿನಗಳಿಂದ ಒಪ್ಪುತ್ತಾ ಉತ್ತರೀಯವನ್ನು ಹೊದೆದು ಬರುತ್ತಿರುವ ವಟುವಾಮನನನ್ನು ಕಂಡು ಯಜಮಾನನಾದ ಬಲೀಂದ್ರನು ಆತನ ಋತ್ವಿಕ್ಕುಗಳೂ ಶುಕ್ರಾಚಾರ್ಯ ನಾದಿಯಾಗಿ ಎದ್ದು ಹೋಗಿ ಆತನನ್ನು ಎದುರುಗೊಂಡು ಕರೆತಂದರು. ಬಲಿಯು ರೂಪಸಂಪನ್ನನಾದ ಆತನನ್ನು ಕಂಡು ಬಹು ಸಂತೋಷ ಪಟ್ಟು ಆತನಿಗೆ ಆಸನವನ್ನು ಕೊಟ್ಟು ಕೈಗೆ ಕಾಲಿಗೆ ಅರ್ಘ್ಯಪಾದ್ಯ ಗಳನ್ನು ಕೊಟ್ಟು ಪೂಜಿಸಿದನು. ಆತನ ಪಾದತೀರ್ಥವನ್ನು ತಲೆಯಲ್ಲಿ ಪ್ರೋಕ್ಷಿಸಿಕೊಂಡನು. " ಬ್ರಹ್ಮನ್, ನಿನಗೆ ಸ್ವಾಗತವು, ನಿನಗೆ ನಮ ಸ್ಕಾರವು, ನಿನಗಾಗಿ ಏನು ಮಾಡಲಿ ? ನಿನ್ನನ್ನು ನೋಡಿದರೆ ಬ್ರಹ್ಮರ್ಷಿಗಳೆಲ್ಲರ ತಪಸ್ಸೇ ರೂಪ ಪಡೆದು ಬಂದಂತಿರುವುದು. ನೀನು ಬಂದೆಯಾಗಿ ನನ್ನ ಯಜ್ಞವು ಸಫಲವಾಯಿತು. ನಿನಗೇನು ಬೇಕು ಕೇಳು" ಎಂದು ಕೈಮುಗಿದನು.

ವಾಮನನು ಬಲೀಂದ್ರನ ಆ ನುಡಿಗಳನ್ನು ಕೇಳಿ ಸಂತುಷ್ಟನಾಗಿ ನುಡಿದನು: "ರಾಜೇಂದ್ರ, ಭೃಗುವಂಶದ ಶುಕ್ರಾಚಾರ್ಯರಲ್ಲಿಯೂ ಕುಲ ವೃದ್ಧನೂ ಪ್ರಶಾಂತನೂ ಆದ ಪ್ರಹ್ಲಾದನಲ್ಲಿಯೂ ಆತ್ಮವಿದ್ಯೆಯನ್ನು ಅಭ್ಯಾಸಮಾಡಿರುವ ನೀನು ಆಡಿದುದು ಸತ್ಯವೂ ಆಗಿರುವುದು. ಈ ನಿಮ್ಮ ಕುಲದಲ್ಲಿ ಹೇಡಿಯೂ ಜಿಪುಣನೂ ಕೊಡುವೆನೆಂದು ಹೇಳಿ ಇಲ್ಲ ವೆನ್ನುವವನೂ ಇಲ್ಲ. ಆಕಾಶವನ್ನು ಬೆಳಗುವ ಚಂದ್ರನಂತೆ ನಿಮ್ಮ ಕುಲವನ್ನು ಪ್ರಹ್ಲಾದನು ಬೆಳಗುತ್ತಿರುವನು. ಅಷ್ಟೇನು ? ಹಿರಣ್ಯಾ ಕ್ಷನು ಗದಾಯುಧನಾಗಿ ಲೋಕಗಳನ್ನೆಲ್ಲಾ ತಿರುಗಿದಾಗ ಅವನನ್ನು ಎದುರಿಸುವವರೇ ಇರಲಿಲ್ಲ. ಅವನನ್ನೇ ವಿಷ್ಣುವು ಗೆದ್ದರೂ ಆತನ ಪರಾಕ್ರಮವನ್ನು ಸ್ಮರಿಸಿಕೊಂಡು ಅಬ್ಬಾ ಎನ್ನುತ್ತಿದ್ದನು. ಆತನ ವಧೆ ಯನ್ನು ಕೇಳಿ ಹಿರಣ್ಯಕಶಿಪುವು ಆ ವಿಷ್ಣುವನ್ನೇ ಕೊಲ್ಲುವೆನೆಂದು

ವೈಕುಂಠಕ್ಕೇ ಹೋದನು. ಯಮನಂತೆ ಶೂಲಪಾಣಿಯಾಗಿ ಬರುತ್ತಿರುವ ಆ ದೈತ್ಯೇಂದ್ರನನ್ನು ಕಂಡು ಮಾಯಾವಿ ಶ್ರೇಷ್ಠನಾದ ವಿಷ್ಣುವು "ನಾನು ಹೋದ ಹೋದಲ್ಲಿಗೆ ಇವನು ಬರುವನು. ಅದರಿಂದ ನಾನು ಇವನ ಹೃದಯವನ್ನು ಪ್ರವೇಶಿಸುವೆನು. ಆಗ ಇವನು ನನ್ನನ್ನು ನೋಡಲಾರನು" ಎಂದು ಓಡಿಬರುತ್ತಿರುವ ಶತ್ರುವಿನ ಉಸಿರನ್ನು ಹಿಡಿದು ಆತನ ಹೃದಯದೊಳಕ್ಕೆ ಹೊಕ್ಕುಬಿಟ್ಟನು. ಆ ದೈತ್ಯರಾಜನು ಅಲ್ಲಿ ವಿಷ್ಣುವಿಲ್ಲದಿರುವುದನ್ನು ನೋಡಿ, ಎಲ್ಲೆಲ್ಲಿ ಹುಡುಕಿದರೂ ಆತನು ಸಿಕ್ಕದಿರಲು "ಹುಂ! ಆ ವಿಷ್ಣುವೂ ಸತ್ತು ಹೋಗಿರಬೇಕು. ನಾನಿನ್ನು ಕೋಪವೈರಗಳನ್ನು ಬಿಡಬೇಕು. ಕೋಪವೆಂಬುದು ಅಜ್ಞಾನದಿಂದ ಉಂಟಾಗುವುದು. ಅಹಂಕಾರದಿಂದ ಬೆಳೆಯುವುದು. ದೇಹವಿರುವವರೆಗೂ ಇದ್ದು ವೈರವನ್ನು ಬೆಳೆಸುವುದು" ಎಂದು ಕೋಪವೈರಗಳನ್ನು ಬಿಟ್ಟು ಶಾಂತನಾದನು. ನಿನ್ನ ತಂದೆಯೂ ಪ್ರಹ್ಲಾದನ ಮಗನೂ ಆದ ವಿರೋಚನನು ಬ್ರಾಹ್ಮಣವೇಷಧಾರಿಗಳಾಗಿ ಬಂದು ಯಾಚಿಸಿದ ದೇವತೆಗಳಿಗೆ ತನ್ನ ಆಯುಸ್ಸನ್ನೇ ಕೊಟ್ಟನು. ನಿಮ್ಮ ಹಿಂದಿನ ಹಿರಿಯರಾದ ಶೂರರೂ ಕೀರ್ತಿವಂತರೂ ಬ್ರಾಹ್ಮಣೋತ್ತಮರೂ ಆಚರಿಸುತ್ತಿದ್ದ ಧರ್ಮಗಳನ್ನೆಲ್ಲ ಆಚರಿಸಿರುವೆ. ಎಲೈ ದಾನಿಶ್ರೇಷ್ಠನೆ, ನೀನು ನನಗೆ ಮೂರು ಹೆಜ್ಜೆಗಳಷ್ಟು ಮಾತ್ರ ನೆಲವನ್ನು ಕೊಡು. ತನಗೆ ಬೇಕಾದುದಕ್ಕಿಂತಲೂ ಹೆಚ್ಚಾಗಿ ಬಯಸುವವನು ಕಳ್ಳನೆನಿಸಿಕೊಂಡು ದಂಡಕ್ಕೆ ಗುರಿಯಾಗುವನು. ಅದರಿಂದ ತಿಳಿದವರು ತಮಗೆ ಬೇಕಾದಷ್ಟು ಮಾತ್ರವೇ ಕೇಳುವರು" ಎಂದನು.

ಬಲೀಂದ್ರನು ಅದನ್ನು ಕೇಳಿ, "ಕುಮಾರ" ನಿನ್ನ ಮಾತು ಧರ್ಮವನ್ನು ಅರಿತ ಹಿರಿಯರು ಒಪ್ಪುವಂಥದು. ಆದರೂ ನಾನು ಚಕ್ರವರ್ತಿಯು, ದ್ವೀಪದ್ವೀಪಾಂತರಗಳನ್ನೂ ಕೊಡಬಲ್ಲವನು. ನನ್ನನ್ನು ಇಷ್ಟು ಕೊಂಚ ಕೇಳುವುದು ಸರಿಯಲ್ಲ. ಇನ್ನೂ ಅಷ್ಟು ಕೇಳು ಎಂದನು.

ಅದನ್ನು ಕೇಳಿ ವಟುವು "ಅಯ್ಯಾ, ಮೂರಡಿ ನೆಲದಿಂದ ತೃಪ್ತಿಯನ್ನು ಪಡೆಯದವನು ನವವರ್ಷಗಳೂ ಸಪ್ತದ್ವೀಪಗಳೂ ತನ್ನದಾದರೆ ತಾನೇ ತೃಪ್ತಿಪಟ್ಟಾನೆ ? ಅರ್ಥದಲ್ಲಿಯೂ ಕಾಮದಲ್ಲಿಯೂ ತೃಪ್ತರಾದವರೂ ಉಂಟೆ ? ತಾನಾಗಿ ಲಭಿಸಿದಷ್ಟರಿಂದ ಸಂತುಷ್ಟನಾದವನು ಸುಖವಾಗಿರುವನು. ಅಸಂತುಷ್ಟನಿಗೆ ಮೂರು ಲೋಕಗಳು ಸಿಕ್ಕಿದರೂ ಸುಖವುಂಟೆ ? ಸಿಕ್ಕಿದಷ್ಟರಲ್ಲಿ ಸಂತುಷ್ಟನಾಗುವ ಬ್ರಾಹ್ಮಣನಿಗೆ ತೇಜಸ್ಸು ಹೆಚ್ಚುವುದು. ಅಸಂತುಷ್ಟ ಬ್ರಾಹ್ಮಣನ ತೇಜಸ್ಸು ನೀರಿನಿಂದ ಆರುವ ಬೆಂಕಿಯಂತೆ ಆರಿಹೋಗುವುದು. ಅದರಿಂದ ನಾನು "ಕೇಳಿದಷ್ಟು ನನಗೆ ಸಾಕು" ಎಂದನು. ಬಲೀಂದ್ರನು ನಕ್ಕು "ನಿನ್ನ ಇಷ್ಟ" ಎಂದು, ದಾನ ಕೊಡಲು ನೀರನ್ನು ತೆಗೆದುಕೊಂಡನು.

ಶುಕ್ರಾಚಾರ್ಯನು ಆಗ ಬಲಿಯನ್ನು ಕರೆದು ಹೇಳಿದನು. "ಅಯ್ಯಾ, ಇವನು ಸಾಮಾನ್ಯನಲ್ಲ. ಕಶ್ಯಪನಿಂದ ಅದಿತಿಯಲ್ಲಿ ಜನಿಸಿ ದೇವಕಾರ್ಯವನ್ನು ಸಾಧಿಸಲು ಬಂದಿರುವ ವಿಷ್ಣುವೀತನು ಈತನು ಕೇಳಿದುದನ್ನು ಕೊಡುವೆನೆಂದು ನೀನು ಕೆಟ್ಟೆ. ಇದರಿಂದ ದೈತ್ಯರಿಗೆಲ್ಲಾ ಆಪತ್ತು ಬರುವುದರಿಂದ ಇದನ್ನೇ ನಾನು ಒಪ್ಪುವುದಿಲ್ಲ. ಈ ನಿನ್ನ ಪದವಿಯನ್ನೂ ಐಶ್ವರ್ಯವನ್ನೂ ಸೌಭಾಗ್ಯವನ್ನೂ ತೇಜಸ್ಸನ್ನೂ ಯಶಸ್ಸನ್ನೂ ನಿನ್ನಿಂದ ತೆಗೆದುಕೊಂಡು ಈ ಮಾಯಾ ವಟುವು ಇಂದ್ರನಿಗೆ ಕೊಡುವನು. ಈತನು ಬ್ರಹ್ಮಾಂಡವನ್ನೇ ಶರೀರವಾಗುಳ್ಳವನು. ಮೂರೇ ಹೆಜ್ಜೆಗಳಿಂದ ಈ ಲೋಕಲೋಕಗಳನ್ನೆಲ್ಲಾ ಆಕ್ರಮಿಸುವನು. ಎಲ್ಲವನ್ನೂ ವಿಷ್ಣುವಿಗೆ ಕೊಟ್ಟು ನೀನು ಬದುಕುವುದಾದರೂ ಹೇಗೆ ? ಈತನು ಮೊದಲನೆಯ ಹೆಜ್ಜೆಯಿಂದ ಭೂಮಿಯನ್ನೂ ಎರಡನೆಯ ಹೆಜ್ಜೆಯಿಂದ ಆಕಾಶವನ್ನೂ ಆಕ್ರಮಿಸಿದರೆ ಮೂರನೆಯ ಹೆಜ್ಜೆಗೆ ಎಡೆಯೇ ಇಲ್ಲವಾಗುವುದಲ್ಲ ? ಆಗ ನೀನು ಆಡಿದ ಮಾತಿಗೆ ತಪ್ಪುವೆ, ನಿನಗೆ ನರಕವು ಆಗೇ ಆಗುವುದು.

ಲೋಕದಲ್ಲಿ ತನ್ನ ಜೀವಿತಕ್ಕೆ ಸಂಚಕಾರ ತರುವಂತಹ ದಾನವು ದಾನವಲ್ಲ. ಧರ್ಮಕ್ಕೆ, ಯಶಸ್ಸಿಗೆ, ಅರ್ಥಕ್ಕೆ, ಕಾಮಕ್ಕೆ, ಸ್ವಜನರಿಗೆ ಎಂದು ತನಗೆ ಬಂದ ಹಣವನ್ನು ಐದು ಪಾಲಾಗಿ ಹಂಚುವವನು ಇಹ ಪರಗಳೆರಡರಲ್ಲಿಯೂ ಸುಖಪಡುವನು. ವೇದವು "ಕೊಡುವೆನೆಂಬುದು ಸತ್ಯ, ಇಲ್ಲವೆಂಬುದು ಅಸತ್ಯ" ಎಂದಿತು. ಜೀವನವೆಂಬ ವೃಕ್ಷಕ್ಕೆ ಸತ್ಯವೆಂಬುದು ಪುಷ್ಪ ಫಲಗಳಂತೆ. ವೃಕ್ಷವು ಜೀವಿಸಿದ್ದರಲ್ಲವೇ ಪುಷ್ಪ ಫಲಗಳು ! ಆದರಿಂದ ಜೀವನ ವೃಕ್ಷವು ಬದುಕಿರಲೆಂದು ಅನೃತವನ್ನು ಆಶ್ರಯಿಸಬೇಕು. ಕಿತ್ತೊಗೆದ ಗಿಡವು ಒಣಗಿಹೋಗುವಂತೆ, ಅನೃತ ವನ್ನು ಆಶ್ರಯಿಸಿದವನೂ ನಾಶವಾಗುವನು. ಓಂ ಎಂದು ಕೊಡು ವೆನು ಎಂದಾಗ ಸರ್ವಸ್ವವನ್ನು ಕೊಡಬೇಕಾಗುವುದು. ಇಲ್ಲದಿದ್ದರೆ ಅದು ಸುಳ್ಳಾಗುವುದು. ಆದರಿಂದ ಕೊಡುವಾಗ ಮಿತವಾಗಿ ಇಷ್ಟೇ ಕೊಡುವೆನು ಎಂದವನು ನಾಶವಾಗುವುದಿಲ್ಲ. ಕೇಳಿದವರಿಗೆ ಎಲ್ಲವನ್ನೂ ಕೊಟ್ಟವನು ತನಗೇ ಇಲ್ಲದಂತೆ ಮಾಡಿಕೊಂಡು ಕೆಡುವನು. ಹಾಗೆಯೇ ಏನೂ ಇಲ್ಲವೆನ್ನುವವನು ಅಪಕೀರ್ತಿ ಪಡೆದು ಬದುಕಿದ ಹೆಣವೆನ್ನಿಸಿ ಕೊಳ್ಳುವನು. ಆದರಿಂದ ಸ್ತ್ರೀಯರಲ್ಲಿ, ವಿನೋದದಲ್ಲಿ, ವಿವಾಹಕ್ಕಾಗಿ ಜೀವನಕ್ಕಾಗಿ, ಪ್ರಾಣಸಂಕಟದಲ್ಲಿ, ಗೋಬ್ರಾಹ್ಮಣರಿಗಾಗಿ, ಹಿಂಸೆ ಯನ್ನು ತಪ್ಪಿಸುವುದಕ್ಕಾಗಿ ಸುಳ್ಳನ್ನು ಹೇಳಬಹುದು. ಆದರಿಂದ ನೀನು ಸರ್ವಸ್ವ ದಾನ ಮಾಡಬೇಡ'' ಎಂದನು.

ಬಲೀಂದ್ರನು ತನ್ನ ಕುಲಕ್ಕೆ ಆಚಾರ್ಯನಾದ ಶುಕ್ರನು ಹೇಳಿದು ದನ್ನು ಕೇಳಿ ಒಂದು ಗಳಿಗೆ ಸುಮ್ಮನಿದ್ದನು. ಮತ್ತೆ ಮನಸ್ಸನ್ನು ಸಮಾ ಧಾನ ಮಾಡಿಕೊಂಡು ಗುರುವನ್ನು ಕುರಿತು ಹೀಗೆ ಹೇಳಿದನು: ಆಚಾರ್ಯ, ನೀನು ಹೇಳಿದುದು ಗೃಹಸ್ಥರಿಗೆ ಸರಿಯಾದ ಧರ್ಮವು: ಅದನ್ನು ಅನುಸರಿಸಿ ನಡೆದರೆ ಅರ್ಥ, ಕಾಮ, ಯಶಸ್ಸು, ಜೀವನಗಳೆ ಲ್ಲವೂ ಕುಂದಿಲ್ಲದೆ ಇರುವುವು. ಆದರೆ ಪ್ರಹ್ಲಾದನ ಮೊಮ್ಮಗನಾದ

ನಾನು ಕೊಡುವೆನೆಂದು ಹೇಳಿ ಕಳ್ಳನಂತೆ ಈಗ ಮಾತಿಗೆ ತಪ್ಪಲೇ ? ಭೂ ದೇವಿಯು " ಸತ್ಯಕ್ಕಿಂತ ಧರ್ಮವಿಲ್ಲ: ಅಸತ್ಯಕ್ಕಿಂತ ಅಧರ್ಮ ವಿಲ್ಲ. ಸುಳ್ಳುಗಾರನನ್ನು ಬಿಟ್ಟು ಇನ್ನು ಏನೇ ಆದರೂ ನಾನು ಹೊರಬಲ್ಲೆನು'' ಎಂದಳಂತೆ. ಬಹು ಕಷ್ಟವಾಗಿ ದುಃಖ ಸಮುದ್ರ ವೆನಿಸಿದ ನರಕಗಳಿಗೆ ನಾನು ಹೆದರುವುದಿಲ್ಲ. ನನ್ನ ಪದವಿಯು ಹೋಗುವುದು ಎಂದು ಹೆದರುವುದಿಲ್ಲ. ಮೃತ್ಯುವೇ ಬಂದರೂ ಹೆದ ರುವುದಿಲ್ಲ. ಆದರೆ ಬ್ರಾಹ್ಮಣರಿಗೆ ಆಸೆ ಹುಟ್ಟಿಸಿ ಮೋಸ ಮಾಡುವು ದಕ್ಕೆ ಮಾತ್ರ ಹೆದರುವೆನು.

ಅಲ್ಲದೆ, ಆಚಾರ್ಯ, ಗಳಿಸಿದುದು ಎಲ್ಲವೂ ಸಾಯುವಾಗ ಇಲ್ಲ ವಾಗುವುದು. ಅದರಿಂದ ಇರುವಾಗಲೇ ದಾನ ಮಾಡಿ ಸಂತೋಷ ಪಡೋಣ. ಸಾಧುಗಳು ತಮ್ಮ ಪ್ರಾಣಗಳನ್ನು ಕೊಟ್ಟೂ ಭೂತ ಸಂತೋಷವನ್ನು ಸಾಧಿಸಿರುವರಲ್ಲವೆ ? ಗುರುವೇ ನಮ್ಮ ಪೂರ್ವಿ ಕರು ಆಕ್ರಮಿಸಿದ್ದ ಲೋಕ ಲೋಕಗಳನ್ನೆಲ್ಲಾ ನುಂಗಿದ ಕಾಲನು ಅವರ ಯಶಸ್ಸನ್ನು ಮಾತ್ರ ನುಂಗಲಾರದೆ ಹೋದನಲ್ಲವೇ ? ಎಲೈ ಬ್ರಹ್ಮರ್ಷಿಯೆ, ಯುದ್ಧದಲ್ಲಿ ಹಿಂತಿರುಗದೆ ದೇಹವನ್ನು ಬಿಡುವ ರುಂಟು; ಆದರೆ ಸತ್ಪಾತ್ರನು ಸಿಕ್ಕಿದಾಗ ಸರ್ವವನ್ನೂ ಕೊಡುವವರೂ ಉಂಟೆ? ಶುದ್ಧವಾದ ಮನಸ್ಸಿನಿಂದ ದಾನ ಮಾಡುವವನಿಗೆ ದುರ್ಗತಿ ಯಾದರೆ ಅದೂ ಶ್ಲಾಘ್ಯವೇ! ನೀನು ಬ್ರಹ್ಮವಿತ್ತು (ಎಂದರೆ ಬ್ರಹ್ಮ ವನ್ನು ಬಲ್ಲವನು) ನಿನ್ನಲ್ಲಿ ನಾನು ಏನು ಹೇಳಬೇಕು ? ಅದರಿಂದ ಈ ವಟುವಿಗೆ ಅವನು ಬೇಡಿದುದನ್ನು ಕೊಡುವೆನು. ಎಲೈ ಮುನೀಂದ್ರನೆ, ನಿನ್ನಂತಹ ವೇದಶಾಸ್ತ್ರ ಪಂಡಿತರು ಯಾವನನ್ನು ಯಜ್ಞಾದಿಗಳಿಂದ ಅರ್ಚಿಸುವಿರೋ ಆ ವಿಷ್ಣುವೇ ಈತನಾಗಿದ್ದರೂ ಸರಿ; ಈತನು ವಿಷ್ಣು ವಲ್ಲದಿದ್ದರೂ ಸರಿ, ಈತನಿಗೆ ಭೂದಾನವನ್ನು ಕೊಡುವೆನು. ಒಂದು ವೇಳೆ ಈತನು ಕಪಟದಿಂದ ನನ್ನನ್ನು ಕಟ್ಟಿ ಕೆಡಹಿದರೂ ಬ್ರಾಹ್ಮಣ

ವೇಷಧಾರಿಯಾದ ಈ ವಿಷ್ಣುವನ್ನು ನಾನು ಹಿಂಸಿಸುವುದಿಲ್ಲ. ಅಥವಾ ತನ್ನ ಕೀರ್ತಿಯನ್ನು ಉಳಿಯಿಸಿಕೊಳ್ಳುವನಾದರೆ ಯುದ್ಧದಲ್ಲಿ ನನ್ನನ್ನು ಕೊಂದು ಈ ಲಕ್ಷ್ಮಿಯನ್ನು ತೆಗೆದುಕೊಳ್ಳುವನು; ಅಥವಾ ನನ್ನಿಂದ ಏಟು ತಿಂದು ಬೀಳುವನು."

ಹೀಗೆ ತನ್ನ ಮಾತನ್ನು ಕೇಳದೆ ಸತ್ಯಸಂಧನಾಗುವೆನು ಎಂದ ಶಿಷ್ಯನಿಗೆ ಶುಕ್ರಾಚಾರ್ಯನು ದೈವದಿಂದ ಪ್ರೇರಿತನಾಗಿ ಶಾಪವನ್ನು ಕೊಟ್ಟನು: "ಎಲಾ, ಪಂಡಿತನೆಂದುಕೊಂಡವನೆ, ಧರ್ಮವನ್ನು ಹೇಳಿವರೂ ಕೇಳೆಯಾ ? ನನ್ನ ಮಾತನ್ನು ಮೀರುವೆಯಾ ? ನಿನ್ನ ಸಂಪತ್ತೆಲ್ಲವೂ ಹಾಳಾಗಲಿ" ಎಂದನು. ಆದರೂ ಬಲೀಂದ್ರನು ಸತ್ಯವನ್ನು ಬಿಡಲಿಲ್ಲ. ವಟು ವಾಮನನನ್ನು ಪೂಜಿಸಿದನು. ಹೆಂಡತಿಯಾದ ವಿಂಧ್ಯಾವಳಿಯನ್ನು ಕಲಶವನ್ನು ತರುವಂತೆ ಹೇಳಿದನು. ತಾನೇ ಆತನ ಕಾಲುಗಳನ್ನು ತೊಳೆದು ಆ ನೀರನ್ನು ತಲೆಯಲ್ಲಿ ಧರಿಸಿದನು. ವಿಂಧ್ಯಾವಳಿಯೂ, ಬಲೀಂದ್ರನೂ ವಾಮನನಿಗೆ ಧಾರಾಪೂರ್ವಕವಾಗಿ ದಾನವನ್ನಿತ್ತನು.

ಸಕಲ ದೇವತೆಗಳೂ ಆತನನ್ನು ಕಂಡು ಆಶ್ಚರ್ಯಪಟ್ಟರು. ಬಲೀಂದ್ರನ ಮೇಲೆ ಹೂವಿನ ಮಳೆಗರೆದರು. ದೇವದುಂದುಭಿಗಳು ಪದೇಪದೇ ಮೊಳಗಿದುವು. ಎಲ್ಲರೂ "ಅಬ್ಬಾ, ಇಂತಹ ದಾನಿಯುಂಟೆ ? ತನ್ನ ಶತ್ರುವೆಂದು ತಿಳಿದಿದ್ದರೂ ತನ್ನ ಸರ್ವಸ್ವವನ್ನೂ ಆತನಿಗೆ ಕೊಟ್ಟನಲ್ಲಾ ಅಸಾಧ್ಯವಾದುದನ್ನು ಮಾಡಿದವನು ಈತನು" ಎಂದು ಆತನನ್ನು ಬಾಯಿ ತುಂಬಾ ಹೊಗಳಿದರು.

ದಾನವಾದ ಕೂಡಲೇ ವಾಮನನು ತನ್ನ ಸ್ವರೂಪವನ್ನು ಧರಿಸಿದನು. ಆ ಸ್ವರೂಪವು ಅದ್ಭುತವಾಗಿತ್ತು. ಅದರಲ್ಲಿ ಭೂಮಿ, ಆಕಾಶ, ದಿಕ್ಕುಗಳು, ಅಂತರಿಕ್ಷ, ಪಾತಾಳ, ಸಮುದ್ರ, ತಿರ್ಯಂಗ್ಜಂತುಗಳು, ಮನುಷ್ಯರು, ದೇವತೆಗಳು, ಮುನಿಗಳು, ಎಲ್ಲರೂ ಇದ್ದರು.

ಆ ವಿಶ್ವರೂಪದಲ್ಲಿ ಬಲಿಯು ತನ್ನ ಋತ್ವಿಕ್ಕುಗಳು ಆಚಾರ್ಯರು ಮೊದಲಾಗಿರುವ ಯಜ್ಞಮಂಟಪವನ್ನು ಕಂಡನು. ವಿಶ್ವವೇ ಅಲ್ಲಿ ಕಾಣಿಸಿತು.

ಆ ಭಗವಂತನ ಚರಣದ ಕೆಳಗೆ ಪಾತಾಳವನ್ನೂ ಪಾದಗಳಲ್ಲಿ ಭೂಮಿಯನ್ನೂ ಮೀಗಾಲುಗಳಲ್ಲಿ ಪರ್ವತಗಳನ್ನೂ ಮೊಣಕಾಲುಗಳಲ್ಲಿ ಪಕ್ಷಿಗಳನ್ನೂ ತೊಡೆಗಳಲ್ಲಿ ವಾಯುಮಂಡಲವನ್ನೂ ಕಂಡನು. ನಾಭಿಯಲ್ಲಿ ಆಕಾಶವನ್ನೂ ಹೊಟ್ಟೆಯಲ್ಲಿ ಏಳು ಸಮುದ್ರಗಳನ್ನೂ, ಎದೆಯಲ್ಲಿ ನಕ್ಷತ್ರ ಮಂಡಲವನ್ನೂ ಹೃದಯದಲ್ಲಿ ಧರ್ಮವನ್ನೂ ಸ್ತನಗಳಲ್ಲಿ ಋತುವನ್ನೂ ಸತ್ಯವನ್ನೂ ಕಂಡನು. ಕಂಠದಲ್ಲಿ ಸಾಮಾದಿ ಸಮಸ್ತ ವೇದಗಳನ್ನೂ ಕಂಡನು. ಆತನ ಭುಜಗಳಲ್ಲಿ ಇಂದ್ರಾದಿಗಳಿದ್ದರು. ನಡುವಿನ ಕೆಳಗೆ ರಾಕ್ಷಸ ಕುಲವೆಲ್ಲವೂ ಇತ್ತು.

ಸರ್ವಾತ್ಮಕನಾದ ಭಗವಂತನ ಶರೀರದಲ್ಲಿ ಬ್ರಹ್ಮಾಂಡವೆಲ್ಲವೂ ಇರುವುದನ್ನು ಕಂಡು ಅಸುರರೆಲ್ಲರೂ ಭಯಭ್ರಾಂತರಾದರು. ಮಹಾವಿಷ್ಣುವಿನ ಅಸ್ತ್ರಗಳೆಲ್ಲವೂ ಆತನ ಮಗ್ಗುಲಲ್ಲಿಯೇ ಇದ್ದುವು

ಇಂತಹ ವಿಶ್ವರೂಪನು ಒಂದೇ ಒಂದು ಪಾದದಿಂದ ಬಲೀಂದ್ರನ ಆಳ್ವಿಕೆಗೆ ಒಳಪಟ್ಟ ಅಧೋಲೋಕವನ್ನೆಲ್ಲಾ ಅಳೆದನು. ಅಂತರಿಕ್ಷವನ್ನೆಲ್ಲಾ ಆಕ್ರಮಿಸಿರುವ ದೇಹವುಳ್ಳ ಆತನ ಎರಡನೆಯ ಹೆಜ್ಜೆಯು ಊರ್ಧ್ವ ಲೋಕವನ್ನೆಲ್ಲಾ ಆಕ್ರಮಿಸಿತು. ಆ ಭಗವಂತನು ಮೂರನೆಯ ಪಾದವನ್ನು ಇಡುವುದಕ್ಕೆ ಸ್ಥಳವೇ ಇಲ್ಲವಾಯಿತು.

ಭಗವಂತನಾದ ತ್ರಿವಿಕ್ರಮನ ಎರಡನೆಯ ಪಾದವು ಊರ್ಧ್ವ ಲೋಕವನ್ನು ಸೇರಿತು. ಅಲ್ಲಿದ್ದವರನ್ನೆಲ್ಲಾ ಕರೆದುಕೊಂಡು ಬಂದು ಚತುರ್ಮುಖ ಬ್ರಹ್ಮನು ತನ್ನ ಕಮಂಡಲುವಿನಲ್ಲಿದ್ದ ಜಲದಿಂದ ಆ ಪಾದವನ್ನು ತೊಳೆದನು. ಆ ಪಾದೋದಕವೇ ದೇವ ಗಂಗೆಯು.

ವಾಮನನು ತ್ರಿವಿಕ್ರಮನಾಗಿ ಬಲಿಯ ಸರ್ವಸ್ವವನ್ನೂ ಅಪಹರಿಸಿದನೆಂದು ದಾನವರು ರೇಗಿ ಸರ್ವಾಯುಧಗಳೊಡನೆ ಆ ವಿಷ್ಣು

ವಿನ ಮೇಲೆ ಬಿದ್ದರು. ವಿಷ್ಣುದೂತರು ಅವರನ್ನು ಸದೆಬಡಿದರು. ಆಗ ಬಲೀಂದ್ರನು ಶುಕ್ರಾಚಾರ್ಯರ ಶಾಪವನ್ನು ನೆನೆದು ತನ್ನವರಿಗೆ "ಕಾಲವು ನಮಗೆ ಪ್ರತಿಕೂಲವಾಗಿದೆ. ಸುಮ್ಮನಾಗಿ" ಎಂದು ಸಮಾಧಾನ ಮಾಡಿದನು.

ಆಗ ಬಲಿಯನ್ನು ಕುರಿತು ವಾಮನನು ಹೇಳಿದನು "ದಾನವೇಂದ್ರ, ಸೂರ್ಯಚಂದ್ರರು ಎಲ್ಲಿಯವರೆಗೂ ಪ್ರಕಾಶಿಸುವರೋ ಅದಷ್ಟು ಭೂಮಿಯೂ ಒಂದು ಹೆಜ್ಜೆಗಾಯಿತು. ಮೂರನೆಯ ಹಜ್ಜೆಯನ್ನು ಎಲ್ಲಿಡಲಿ ತೋರಿಸು. ಇಲ್ಲವಾದರೆ ನೀನು ನರಕಕ್ಕೆ ಹೋಗಬೇಕಾದೀತು" ಎಂದನು. ಕೂಡಲೇ ಗರುಡನು ಆ ವಿಷ್ಣುವಿನ ಆಜ್ಞೆಯಿಂದ ಆ ಬಲೀಂದ್ರನನ್ನು ವರುಣಪಾಶಗಳಿಂದ ಕಟ್ಟಿದನು.

ಬಲೀಂದ್ರನು ಆ ಕಟ್ಟುಗಳಿಂದಲೂ ವಾಮನಾವತಾರಿಯಾದ ವಿಷ್ಣುವಿನ ಮರುಕ್ತಿಗಳಿಂದಲೂ ಕೋಪಗೊಳ್ಳಲಿಲ್ಲ. ಹೆದರಲಿಲ್ಲ. ಖಿನ್ನನಾಗಲಿಲ್ಲ. ಗಂಭೀರನಾಗಿ ಹೀಗೆ ಹೇಳಿದನು "ಎಲೈ ಮಹಾಪುರುಷನೆ ವಂಚಿಸಿದವನು ನೀನು. ಆದರೂ ನನ್ನ ಮಾತು ಸತ್ಯವಾಗಲಿ. ಇದೋ, ಈ ನನ್ನ ತಲೆಯ ಮೇಲೆ ನಿನ್ನ ಮೂರನೆಯ ಹಜ್ಜೆಯನ್ನಿಡು ನೀನು ನನ್ನನ್ನು ದಂಡಿಸುತ್ತಿರುವುದೂ ನನಗೆ ಗೌರವವೇ! ನಿನ್ನ ಪರಮ ಭಕ್ತನಾದ ಪ್ರಹ್ಲಾದನ ಮೊಮ್ಮಗನೆಂದು ನನಗೆ ಈ ರೀತಿಯಾಗಿ ಮಾಡಿ ಜ್ಞಾನವನ್ನು ಅನುಗ್ರಹಿಸುವೆ" ಎಂದನು.

ಆ ವೇಳೆಗೆ ಪರಮಭಾಗವತನಾದ ಪ್ರಹ್ಲಾದನು ಬಂದನು. ವರುಣಪಾಶಗಳಿಂದ ಬದ್ಧನಾಗಿರುವ ಮೊಮ್ಮಗನನ್ನೂ ವಿಶ್ವವನ್ನೆಲ್ಲಾ ತುಂಬಿ ನಿಂತಿರುವ ಮಹಾವಿಷ್ಣುವನ್ನೂ ನೋಡಿ ಶ್ರೀಹರಿಗೆ ಭಕ್ತಿಯಿಂದ ಸಮಸ್ತ ಪೂಜೆಯನ್ನೂ ಮಾಡಿ ಹೇಳಿದನು. "ಎಲೈ ಭಗವಂತನೆ, ಇಂದ್ರಪದವಿಯನ್ನು ಬಲಿಗೆ ಕೊಟ್ಟವನೂ ನೀನೆ! ಅದನ್ನೀಗ ಹಿಂದಕ್ಕೆ ತೆಗೆದುಕೊಂಡವನೂ ನೀನೇ! ಆ ಪದವಿಯಿಂದ

ಈ ನನ್ನ ಮಗುವು ಮದೋನ್ಮತ್ತನಾಗಿ ಕೆಡವಂತೆ ನೀನು ಅವನ್ನು ಪರಿಹರಿಸಿ ಪರಮೋಪಕಾರ ಮಾಡಿದೆ. ಇಂತಹ ನಿನಗೆ ನಮಸ್ಕಾರವು" ಪರಮ ಪತಿವ್ರತೆಯಾದ ವಿಂಧ್ಯಾವಳಿಯು ನಮಸ್ಕಾರ ಮಾಡಿ "ದೇವಾ, ಇನ್ನೂ ಈತನಿಗೆ ತಾನು ಕೊಡುವವನು, ಕೊಟ್ಟವನು ಎಂಬ ಸ್ವಾಭಿಮಾನವಿದೆ. ಅದರಿಂದ ನೀನು ಬಂಧನವನ್ನು ವಿಧಿಸಿರುವೆ. ಆ ಎರಡನ್ನೂ ಕಳೆದು ಕಾಪಾಡು" ಎಂದು ಕಣ್ಣೀರಿಡುತ್ತ ಕೈ ಮುಗಿದು ಕೇಳಿಕೊಂಡಳು.

ಚತುರ್ಮುಖನು "ಎಲೈ ಗಜನ್ನಾಯಕ, ಸರ್ವಸ್ವವನ್ನು ದಾನ ಮಾಡಿರುವ ಈತನ ದಂಡಕ್ಕೆ ಅರ್ಹನಲ್ಲ. ಈತ ದುಃಖವನ್ನು ಸಾಕು ಮಾಡು" ಎಂದು ಪ್ರಾರ್ಥಿಸಿದನು.

ಅವನ್ನು ಕೇಳಿ ಶ್ರೀ ತ್ರಿವಿಕ್ರಮನು ನುಡಿದನು. "ಎಲೈ ಬ್ರಹ್ಮನೆ, ಧನಾಧಿ ಮದದಿಂದ ನನ್ನನ್ನು ತಿರಸ್ಕಾರ ಮಾಡುವರೆಂದು ನಾನು ಒಲಿದವನ ಸರ್ವಸ್ವವನ್ನೂ ಅಪಹರಿಸುವೆನು. ಬಲಿಯು ಸರ್ವಸ್ವವನ್ನೂ ನನಗೆ ಕೊಟ್ಟು ಯಾರೂ ಗೆಲ್ಲಲಾರದ ನನ್ನ ಮಾಯೆಯನ್ನು ಗೆದ್ದನು. ಅದರಿಂದ ಯಾರೂ ಪಡೆಯಲಾಗದ ಪದವಿಯನ್ನು ಕೊಡುವೆನು. ಈತನು ಮುಂದಿನ ಮನ್ವಂತರದಲ್ಲಿ ಇಂದ್ರನಾಗಲಿ. ಅದುವರೆಗೆ ವಿಶ್ವಕರ್ಮನು ನಿರ್ಮಿಸಿರುವ ಸುತಲ ಲೋಕದಲ್ಲಿರಲಿ" ಎಂದು ಹೇಳಿ, "ಬಲೀಂದ್ರ, ನೀನು ಸುತಲ ಲೋಕದಲ್ಲಿರು. ಅಲ್ಲಿ ನಾನು ನಿನ್ನ ದ್ವಾರಪಾಲಕನಾಗಿರುವೆನು" ಎಂದು ಹೇಳಿ ಭಕ್ತ ಶಿರೋಮಣಿಯಾದ ಪ್ರಹ್ಲಾದನನ್ನೂ ಬಲೀಂದ್ರನನ್ನೂ ರಾಕ್ಷಸಕುಲವನ್ನೂ ಕರೆದುಕೊಂಡು ಸುತಲ ಲೋಕಕ್ಕೆ ಹೋದನು.

ಆಗ ವಾಮನನು ಯಜ್ಞಮಂಟಪದಲ್ಲಿದ್ದ ಶುಕ್ರಾಚಾರ್ಯನನ್ನು ಕರೆದು "ಯಜ್ಞವನ್ನು ಪೂರ್ತಿಗೊಳಿಸು" ಎಂದನು. ಆತನು "ನೀನೇ ಯಜ್ಞನು. ನೀನೇ ಬಂದ ಮೇಲೆ ಯಜ್ಞವು ಅಪೂರ್ಣವಾದುದೆಂತು?

ನಿನ್ನ ನಾಮ ಸ್ಮರಿಸಿದರೆ ಎಲ್ಲಾ ಕರ್ಮಗಳೂ ಪೂರ್ಣವಾಗುವವಲ್ಲವೇ? ನಿನ್ನ ಆಜ್ಞೆಯಿಂದ ಕರ್ಮವನ್ನು ಮುಗಿಸುವೆನೆಂದು ಹಾಗೇ ಮಾಡಿದನು.

ವಾಮನನು ತಾನು ಬಲಿಯಿಂದ ಪಡೆದ ಎಲ್ಲವನ್ನೂ ಇಂದ್ರನಿಗೆ ಇತ್ತನು. ಚತುರ್ಮುಖನು ಅದಿತಿ ಕಶ್ಯಪರಿಗೆ ಸಂತೋಷವಾಗಲೆಂದು ವಾಮನಮೂರ್ತಿಗೆ ಉಪೇಂದ್ರ ಪಟ್ಟಾಭಿಷೇಕವನ್ನು ಮಾಡಿದನು. ಸರ್ವರೂ ಸಂತೋಷದಿಂದ ತಮ್ಮ ತಮ್ಮ ಲೋಕಗಳಿಗೆ ತೆರಳಿದರು. ಈ ಬಲೀಂದ್ರನ ಉಪಾಖ್ಯಾನವನ್ನು ಪಠಿಸಿದವರ ಕರ್ಮಗಳೆಲ್ಲವೂ ಸಂಪೂರ್ಣವಾಗುವುವು.

---

### ಇಪ್ಪತ್ತೊಂಭತ್ತನೆಯ ಅಧ್ಯಾಯವು

## ಮತ್ಸ್ಯಾವತಾರವು

ಪರೀಕ್ಷಿದ್ರಾಜನು ಶ್ರೀ ಶುಕಮುನೀಂದ್ರನನ್ನು ಕೇಳಿದನು. " ಎಲೈ ಭಗವಂತನೆ, ಹಿಂದೆ ಶ್ರೀ ಮಹಾವಿಷ್ಣುವು ಮತ್ಸ್ಯಾವತಾರವನ್ನು ಮಾಡಿದನೆಂದು ಹೇಳಿದೆಯಲ್ಲ! ಆ ಕಥೆಯನ್ನು ಹೇಳು. ಆತನು ಸರ್ವೇಶ್ವರನಾದರೂ ಎಲ್ಲರೂ ಹೇಸುವ ಮೀನಿನ ರೂಪವನ್ನೇಕೆ ಧರಿಸಿದನು. ಅದನ್ನು ಹೇಳು ಕೇಳುವವರಿಗೆಲ್ಲಾ ಶುಭವಾಗಲಿ."

ಆಗ ಶುಕಮುನಿಯು ಹೇಳಿದನು: —

" ಭಗವಂತನು ಸರ್ವೋತ್ತಮನು ನಿಜ. ಆದರೂ, ರಾಜನೆ, ಆತನು ವಾಯುವಿನಂತೆ ಎಲ್ಲಾ ಭೂತಗಳಲ್ಲಿಯೂ ಸಂಚರಿಸುವನು. ಬುದ್ಧಿಗೆ ಸತ್ವ, ರಜಸ್ಸು, ತಮಸ್ಸು ಎಂದು ಮೂರು ಗುಣಗಳು. ಆ ಗುಣಗಳಿಗೆ ವಶವಾದಾಗ ಉತ್ತಮ, ಮಧ್ಯಮ, ಅಧಮ, ಎಂದು ಭೇದಗಳು. ಆದರೆ ಪರಮಾತ್ಮನು ಗುಣಗಳಿಗೆ ಅಧೀನನಲ್ಲ. ಅದರಿಂದ ಆತನಿಗೆ ಯಾವುದೂ ಹೆಚ್ಚಲ್ಲ. ಯಾವುದೂ ಕಡಿಮೆಯಲ್ಲ. ಅದರಿಂದ

ಮತ್ಸ್ಯಾವತಾರ ಮಾಡಿದೆನೆಂದು ದುಃಖವಿಲ್ಲ. ಇನ್ನು ಅವತಾರ ಕಥೆಯನ್ನು ಕೇಳು.

ಹಿಂದಣ ಕಲ್ಪದ ಕಡೆಯಲ್ಲಿ ಬ್ರಹ್ಮನ ಹಗಲು ಮುಗಿಯಿತು. ಆಗ ಆಗಬೇಕಾದ ನೈಮಿತ್ತಿಕ ಪ್ರಲಯವಾಗಿ ಭೂಮಿ ಮೊದಲಾದ ಲೋಕಗಳೆಲ್ಲವೂ ನೀರಿನಲ್ಲಿ ಮುಳುಗುವ ಕಾಲವು ಬಂದಿತು. ಆಗ ದ್ರವಿಡ ದೇಶದಲ್ಲಿ ಸತ್ಯವ್ರತನೆಂಬ ರಾಜನು ಆಳುತ್ತಿದ್ದನು. ಆತನು ಪರಮ ವಿಷ್ಣುಭಕ್ತನು. ಜಲಾಹಾರಿಯಾಗಿ ಮಹಾವಿಷ್ಣುವನ್ನು ಕುರಿತು ತಪಸ್ಸು ಮಾಡುತ್ತಿದ್ದನು.

ಆತನೊಮ್ಮೆ ಕೃತಮಾಲಾ ನದಿಯಲ್ಲಿ ಜಲತರ್ಪಣವನ್ನು ಮಾಡುತ್ತಿದ್ದಾಗ ಒಂದು ಮೀನು ಮರಿಯು ಆತನ ಕೈಗೆ ಬಂತು. ಅದನ್ನು ಆತನು ಬಿಟ್ಟು ಬೇರೆ ನೀರು ತೆಗೆದುಕೊಂಡನು. ಆಗ ಆ ಮೀನು ಮರಿಯು "ಅಯ್ಯಾ, ನೀರಿನಲ್ಲಿ ನನ್ನ ಕುಲದವರಿಂದ ನನಗೆ ಭಯವುಂಟು. ಅದರಿಂದ ನನ್ನನ್ನು ಕಾಪಾಡು'' ಎಂದಿತು. ಸತ್ಯ ವ್ರತನು ಅದನ್ನು ಕಂಡು ಕಲಶೋದಕದಲ್ಲಿಟ್ಟನು. ಮರುದಿನವೇ ಅದು ಆ ಕಲಶದ ತುಂಬಾ ಆಗಿತ್ತು. ಅದು ನನಗೆ ತಕ್ಕಂತೆ ಒಂದು ಸ್ಥಳವನ್ನು ಮಾಡಿ ಕೊಡು ಎನಲು, ಆತನು ಒಂದು ದೊಡ್ಡ ಪಾತ್ರೆಯ ಲ್ಲಿಟ್ಟನು. ಒಂದು ಮುಹೂರ್ತದೊಳಗಾಗಿ ಅದು ಮೂರು ಮೊಳ ದಷ್ಟು ಬೆಳೆಯಿತು. ಆಗ ಅದನ್ನು ತೆಗೆದುಕೊಂಡು ಹೋಗಿ ಸರೋ ವರದಲ್ಲಿ ಬಿಟ್ಟನು. ಅದೂ ಸಾಲದೆ ಹೋಗಲು, ಕೊನೆಗೆ ಸಮುದ್ರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಬಿಟ್ಟನು.

ಆಗ ಆತನಿಗೆ ಆಶ್ಚರ್ಯವಾಗಿ " ಎಲೈ ಮತ್ಸ್ಯರೂಪದಿಂದಿರುವ ಮಹಾಪುರುಷನೇ, ನೀನು ಯಾರು ? ನೀನು ನಿಜವಾಗಿಯೂ ಮಹಾ ವಿಷ್ಣುವೇ ಇರಬೇಕು ಎನ್ನಿಸುವುದು. ಈಗ ನೀನು ಏಕೆ ಈ ರೂಪವನ್ನು ಧರಿಸಿರುವೆಯೋ ದಯವಿಟ್ಟು ಹೇಳು" ಎಂದು ಪ್ರಾರ್ಥಿ

ಸಿದನು. ಆಗ ಮತ್ಸ್ಯವು ಆತನಿಗೆ ಹೀಗೆ ಹೇಳಿತು: “ ಅಯ್ಯಾ, ಇಂದಿಗೆ ಏಳನೆಯ ದಿನಕ್ಕೆ ಪ್ರಲಯವಾಗುವುದು. ಪ್ರಲಯ ಸಮುದ್ರದಲ್ಲಿ ಮೂರು ಲೋಕಗಳೂ ಮುಳುಗಿ ಹೋಗುವುವು. ಆಗ ಒಂದು ದೊಡ್ಡ ಹಡಗನ್ನು ನಿನಗಾಗಿ ಕಳುಹಿಸುವೆನು. ಆ ವೇಳೆಗೆ ನೀನು ಭೂಮಿಯಲ್ಲಿರುವ ಎಲ್ಲಾ ಬಗೆಯ ಬೀಜಗಳನ್ನೂ ಸಿದ್ಧ ಮಾಡಿ ಕೊಂಡಿರು. ಅವೆಲ್ಲವನ್ನೂ ತೆಗೆದುಕೊಂಡು ಸಪ್ತರ್ಷಿಗಳೊಡನೆ ನೀನು ಹಡಗನ್ನೇರು. ನಾನೂ ಆ ವೇಳೆಗೆ ಅಲ್ಲಿಗೆ ಬರುವೆನು. ನಿನ್ನ ಹಡಗನ್ನು ನನ್ನ ಕೊಂಬಿಗೆ ಹೆಬ್ಬಾವಿನಿಂದ ಕಟ್ಟು. ಬ್ರಹ್ಮನ ರಾತ್ರಿಯು ಕಳೆದು ಮತ್ತೆ ಲೋಕೋದಯವಾಗುವವರೆಗೂ ನಾನು ಆ ಹಡಗನ್ನು ಎಳೆದುಕೊಂಡು ಸಮುದ್ರವಲ್ಲಿ ತಿರುಗುತ್ತಿರುವೆನು. ಕೊನೆಗೆ ನನ್ನ ಅನುಗ್ರಹದಿಂದ ಪರಬ್ರಹ್ಮವೆಂದರೇನು ? ಅದರ ಮಹಿಮೆಯೇನು? ಎಂಬುದನ್ನು ತಿಳಿಯುವೆ” ಎಂದು ಹೇಳಿ, ಆ ಮಹಾಮತ್ಸ್ಯವು ಅಂತರ್ಧಾನವಾಯಿತು.

ಸತ್ಯವ್ರತರಾಜನು ಮಹಾವಿಷ್ಣುವಿನ ಆಜ್ಞೆಯಾದಂತೆ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಪೂರ್ವಾಗ್ರವಾಗಿ ದರ್ಭೆಗಳನ್ನು ಹಾಸಿಕೊಂಡು ಈಶಾನ್ಯಮುಖವಾಗಿ ಕುಳಿತು ಮತ್ಸ್ಯಭಗವಂತನನ್ನು ಧ್ಯಾನಿಸುತ್ತಿದ್ದನು. ಮಹಾ ಮೇಘಗಳು ಎದ್ದು ಬಂದು ಮಳೆಗರೆದು ಭೂಮಿಯನ್ನು ಮುಳುಗಿಸಿದುವು. ಆಗ ಹಡಗು ಬರಲು ಸತ್ಯವ್ರತನು ಸಪ್ತರ್ಷಿಗಳೊಡನೆ ತಾನು ತಂದಿದ್ದ ಬೀಜಗಳನ್ನು ತೆಗೆದುಕೊಂಡು ನಾವೆಯನ್ನು ಏರಿದನು. ಭಗವಂತನನ್ನು ಧ್ಯಾನಿಸಲು ಚಿನ್ನದಂತೆ ಹೊಳೆಯುತ್ತಾ ಬಹಳ ಭಾರಿಯಾದ ಒಂದು ಕೊಂಬುಳ್ಳ ಮೀನು ಬಂತು. ಅದರ ಕೊಂಬಿಗೆ ಹೆಬ್ಬಾವಿನಿಂದ ಹಡಗನ್ನು ಬಿಗಿಯಲು, ಆ ಮೀನು ಆ ಹಡಗನ್ನು ಎಳೆದುಕೊಂಡು ಹೋಯಿತು.

ಸತ್ಯವ್ರತನು ಮತ್ಸ್ಯರೂಪನಾದ ಭಗವಂತನನ್ನು ವಿಶೇಷ

ವಾಗಿ ಹೊಗಳಲು, ಆತನ ಸ್ತುತಿಗೆ ಪ್ರಸನ್ನನಾದ ಆ ಭಗವಂತನು ಆತನಿಗೆ ಅತಿ ರಹಸ್ಯವಾದ ಮತ್ಸ್ಯಪುರಾಣವನ್ನು ಸಂಪೂರ್ಣವಾಗಿ ಉಪದೇಶಿಸಿದನು.

ಇತ್ತ ಬ್ರಹ್ಮನು ತನ್ನ ರಾತ್ರಿಯಾಗಲು ನಿದ್ರಾವಶನಾಗಿ ಮಲಗಿದನು. ಆತನ ಉಸಿರಿನಿಂದ ವೇದಗಳು ಆಚೆಗೆ ಬರುತ್ತಿರಲು ಹಯಗ್ರೀವನೆಂಬ ಅಸುರನು ಆ ವೇದಗಳನ್ನು ಕದ್ದುಕೊಂಡು ಹೋದನು. ಮತ್ಸ್ಯಮೂರ್ತಿಯು ಆ ಹಯಗ್ರೀವಾಸುರನನ್ನು ಅಟ್ಟಿಕೊಂಡು ಹೋಗಿ ಅವನನ್ನು ಕೊಂದು ಅವನು ಕದ್ದಿದ್ದ ವೇದಗಳನ್ನು ತಂದು ಚತುರ್ಮುಖ ಬ್ರಹ್ಮನಿಗೆ ಕೊಟ್ಟನು.

ಆ ಮಾಯಾಮತ್ಸ್ಯಮೂರ್ತಿಯು ನಮ್ಮನ್ನು ಕಾಪಾಡಲಿ.

---

### ಮೂವತ್ತನೆಯ ಅಧ್ಯಾಯವು

## ಅಂಬರೀಷ ಚರಿತ್ರೆಯು

ಪ್ರಲಯವಾದಾಗ ಎಲ್ಲವೂ ಜಲರಾಶಿಯಾಯಿತು ಎಂದು ಹೇಳಿದೆನಲ್ಲವೆ ? ಆಗ ಎಲ್ಲವೂ ಪರಮಾತ್ಮನೇ ಆಗಿತ್ತು. ಆತನಲ್ಲದೇ ಬೇರೆ ಇನ್ನೇನೂ ಇರಲಿಲ್ಲ. ಆ ಪರಮಾತ್ಮನ ನಾಭಿಯಲ್ಲಿ ಚಿನ್ನದ ಕಮಲವೊಂದು ಹುಟ್ಟಿತು. ಅದರಲ್ಲಿ ಚತುರ್ಮುಖ ಬ್ರಹ್ಮನು ಹುಟ್ಟಿದನು. ಆತನ ಮನಸ್ಸಿನಿಂದ ಮರೀಚಿ ಬ್ರಹ್ಮನು, ಆತನ ಮನಸ್ಸಿನಿಂದ ಕಶ್ಯಪ ಬ್ರಹ್ಮನು ಆತನಿಂದ ಅದಿತಿ ದೇವಿಯಲ್ಲಿ ಸೂರ್ಯ ಜನಿಸಿದನು. ಹಿಂದಿನ ಮನ್ವಂತರದಲ್ಲಿ ಸತ್ಯವ್ರತನೆಂಬ ರಾಜನಾಗಿದ್ದವನು ಈಗ ಆ ಸೂರ್ಯನ ಮಗನಾಗಿ ಹುಟ್ಟಿದನು. ಆತನೇ ವೈವಸ್ವತನು. ಆತನಿಗೆ ಶ್ರಾದ್ಧದೇವನೆಂದು ಇನ್ನೊಂದು ಹೆಸರೂ ಉಂಟು.

ಆತನಿಗೆ ಬಹು ದಿನವಾದರೂ ಮಕ್ಕಳಾಗಲಿಲ್ಲ. ಅದಕ್ಕಾಗಿ

ಕುಲಗುರುವಾದ ವಸಿಷ್ಠನು ಆತನಿಂದ ಒಂದು ಯಾಗವನ್ನು ಮಾಡಿಸಿದನು. ಆತನ ಪತ್ನಿಗೆ ಹೆಣ್ಣು ಮಗುವಾಗಬೇಕೆಂದು ಆಶೆಯಿತ್ತಾಗಿ ಆ ಯಾಗದ ಫಲವಾಗಿ ಆದ ಮಗುವು ಹೆಣ್ಣೇ ಆಯಿತು. ಆ ಮಗುವೇ ಇಳೆಯು. ಮನುವು ಇದೇಕೆ ಹೀಗಾಯಿತು ಎಂದು ವ್ಯಸನಪಡಲು ವಸಿಷ್ಠ ಮಹಾಮುನಿಯು ಭಗವಂತನನ್ನು ಆರಾಧಿಸಿ ಆ ಕನ್ಯೆಯನ್ನು ಗಂಡು ಮಾಡಿದನು. ಆ ಗಂಡುಮಗುವಿಗೆ ಸುದ್ಯುಮ್ನನೆಂದು ಹೆಸರಾಯಿತು.

ಅವನು ಒಮ್ಮೆ ಕುದುರೆಯನ್ನೇರಿ ಬೇಟೆಗೆ ಹೋದನು. ಅಲ್ಲಿ ಪಾರ್ವತೀವನವನ್ನು ಪ್ರವೇಶಿಸಿ ಅವನೂ ಅವನ ಕುದುರೆಯೂ ಹೆಣ್ಣಾದರು. ಹೀಗೆ ಹೆಣ್ಣಾದ ಸುದ್ಯುಮ್ನಳು ಚಂದ್ರನ ಮಗನಾದ ಬುಧನ ಆಶ್ರಯಕ್ಕೆ ಬಂದಳು. ಅಲ್ಲಿ ಇಬ್ಬರೂ ಒಬ್ಬರನ್ನೊಬ್ಬರು ಮೋಹಿಸಿ ಮದುವೆಯಾಗಿ ಪುರೂರವನೆಂಬ ಮಗನನ್ನು ಪಡೆದರು.

ಸುದ್ಯುಮ್ನ ಸ್ತ್ರೀಯು ಮತ್ತೆ ವಸಿಷ್ಠನ ಮೊರೆಹೋಗಲು ಆತನು ಶಂಕರನನ್ನು ಆರಾಧಿಸಿದನು. ಅದರ ಫಲವಾಗಿ ಸುದ್ಯುಮ್ನನು ಒಂದು ತಿಂಗಳು ಸ್ತ್ರೀಯಾಗಿಯೂ ಒಂದು ತಿಂಗಳು ಪುರುಷನಾಗಿಯೂ ಇರುವುದು ಎಂದು ಆಯಿತು. ಆ ಸುದ್ಯುಮ್ನನು ಕೆಲಕಾಲ ರಾಜ್ಯವಾಳುತ್ತಿದ್ದು ತನ್ನ ಮಗನಾದ ಪುರೂರವನಿಗೆ ರಾಜ್ಯವನ್ನು ಕೊಟ್ಟು ತಾನು ತಪಸ್ಸಿಗೆ ಹೊರಟು ಹೋದನು.

ಸುದ್ಯುಮ್ನನು ಹೀಗೆ ತಪಸ್ಸಿಗೆ ಹೋಗಲು ವೈವಸ್ವತನು ಮತ್ತೆ ಪುತ್ರಾರ್ಥಿಯಾಗಿ ಶ್ರೀಮನ್ನಾರಾಯಣನನ್ನು ಆರಾಧಿಸಿದನು. ಆತನಿಗೆ ಇಕ್ಷ್ವಾಕು ಮೊದಲಾದ ಹತ್ತು ಮಂದಿ ಮಕ್ಕಳಾದರು. ಅವರಲ್ಲಿ ಒಬ್ಬೊಬ್ಬರೂ ಕೀರ್ತಿವಂತರು. ಕೀರ್ತಿವಂತರಾದ ಮಕ್ಕಳು ಮೊಮ್ಮಕ್ಕಳನ್ನು ಳ್ಳವರು.

ಆ ಮನುಪುತ್ರರಲ್ಲಿ ದಿಷ್ಟನೆಂಬುವನ ವಂಶದಲ್ಲಿ ಅವನಿಂದ

ಹನ್ನೆರಡನೆಯವನಾಗಿ ಮರುತ್ತನು ಹುಟ್ಟಿದನು. ಆ ಮರುತ್ತನು ಮಾಡಿದಂತಹ ಯಾಗವನ್ನು ಇನ್ನೂ ಯಾರೂ ಇದುವರೆಗೂ ಮಾಡಲಿಲ್ಲ. ಆ ಯಾಗದಲ್ಲಿ ಪಾತ್ರೆಗಳು ಮೊದಲುಗೊಂಡು ಎಲ್ಲವೂ ಚಿನ್ನದ್ದಾಗಿದ್ದುವು. ಆತನ ಯಾಗದಲ್ಲಿ ಇಂದ್ರನು ಹೆಚ್ಚು ಮರೆಯುವಷ್ಟು ಸೋಮರಸವನ್ನು ಪಾನ ಮಾಡಿದನು. ಬ್ರಾಹ್ಮಣರು ಆತನು ಕೊಟ್ಟ ದಕ್ಷಿಣೆಯನ್ನು ಹೊರಲಾರದೆ ದಾರಿಯಲ್ಲಿಯೇ ಎಸೆದು ಹೋದರು. ಸಪ್ತ ಮರುತ್ತುಗಳು ದಿನವೂ ಸಂತರ್ಪಣೆಯಲ್ಲಿ ಭಕ್ಷ್ಯಭೋಜ್ಯಗಳನ್ನು ಬಡಿಸುತ್ತಿದ್ದರು. ಯಜ್ಞಮಂಟಪದಲ್ಲಿ ದೇವತೆಗಳು ಯಾವಾಗಲೂ ಇರುತ್ತಿದ್ದರು.

ಮನುಪುತ್ರನಾದ ಶರ್ಯಾತಿಯು ಬ್ರಹ್ಮಜ್ಞಾನಿಯು. ಆತನ ಮಗಳು ಸುಕನ್ಯೆಯು. ಒಂದು ದಿನ ಶರ್ಯಾತಿಯು ಚ್ಯವನನ ಆಶ್ರಮಕ್ಕೆ ಹೋದನು. ಅಲ್ಲಿ ಸುಕನ್ಯೆಯು ಹುತ್ತದ ನಡುವೆ ಮಿಂಚು ಹುಳುಗಳಂತೆ ಹೊಳೆಯುತ್ತಿದ್ದ ಎರಡು ಬೆಳಕು ಕಂಡು ಅವುಗಳನ್ನು ಕಡ್ಡಿಯಿಂದ ತಿವಿದಳು. ಅವುಗಳಿಂದ ರಕ್ತವು ಬಂತು. ರಾಜನ ಸೇನೆಯಲ್ಲಿ ಎಲ್ಲರಿಗೂ ಮಲಮೂತ್ರಗಳು ಕಟ್ಟಿ ಹೋದುವು. ಅನುಭವಿಸಲು ಅಸಾಧ್ಯವಾದ ಯಾತನೆಗಳಾಯಿತು.

ಶರ್ಯಾತಿಯು ಅದನ್ನು ಕಂಡು ಚ್ಯವನಮಹರ್ಷಿಗೆ ಏನೋ ಅಪರಾಧವಾಗಿರಬೇಕೆಂದುಕೊಂಡು ವಿಚಾರಿಸಿದನು. ಸುಕನ್ಯೆಯು ತಾನು ಮಾಡಿದ ಚೇಷ್ಟೆಯನ್ನು ಹೇಳಿದಳು. ಆಗ ಆ ರಾಜನು ಆ ಹುತ್ತದ ಬಳಿಗೆ ಹೋಗಿ ಆ ಹುತ್ತದಲ್ಲಿದ್ದ ಚ್ಯವನಮಹರ್ಷಿಯನ್ನು ಕ್ಷಮಿಸಬೇಕೆಂದು ಕೇಳಿದನು. ಆತನು ನನ್ನ ಕಣ್ಣು ಕಿತ್ತ ಹುಡುಗಿಯು ನನ್ನನ್ನು ಮದುವೆಯಾದರೆ ಕ್ಷಮಿಸುವೆನೆಂದನು. ಸುಕನ್ಯೆಯು ಆಗಲೆಂದು ಆತನು ವೃದ್ಧನಾದರೂ ಆತನನ್ನು ಮದುವೆಯಾದಳು.

ತಾನು ರಾಜಪುತ್ರಿಯಾದರೂ ಆತನಿಗೆ ಎಲ್ಲಾ ಉಪಚಾರಗಳನ್ನೂ ಮಾಡುತ್ತ ಗಂಡನನ್ನು ಮೆಚ್ಚಿಸಿದಳು.

ಒಂದು ದಿನ ಅಶ್ವಿನೀ ದೇವತೆಗಳು ಆತನ ಆಶ್ರಮಕ್ಕೆ ಬಂದರು. ಆತನು ಅವರನ್ನು ಕುರಿತು "ನೀವು ದೇವವೈದ್ಯರು. ನನ್ನ ಹೆಂಡತಿ ಯೊಪ್ಪುವಂತೆ ನನಗೆ ಯೌವನ ಸೌಂದರ್ಯಗಳನ್ನು ಕೊಟ್ಟರೆ ನಿಮಗೆ ಯಜ್ಞಗಳಲ್ಲಿ ಸೋಮಭಾಗವು ಲಭಿಸುವಂತೆ ವರವನ್ನು ಕೊಡುವೆನು" ಎಂದನು. ಅವರು ಆಗಲೆಂದು ಆತನನ್ನು ಕರೆದುಕೊಂಡು ಬಂದು ಕೊಳದಲ್ಲಿ ಮುಳುಗಿಸಿದರು. ಆ ಮೂವರೂ ಹೊರಗೆ ಬಂದಾಗ ಮೂವರೂ ತರುಣರಾಗಿದ್ದರು. ದಿವ್ಯಾಲಂಕಾರಸಂಪನ್ನರಾಗಿದ್ದರು. ಸುಕನ್ಯೆಯು ಅವರು ಮೂವರನ್ನು ಕಂಡು, ಅವರಲ್ಲಿ ತನ್ನ ಪತಿ ಯಾರೆಂಬುವನ್ನು ತಿಳಿಯದೆ "ಅಶ್ವಿನೀ ದೇವತೆಗಳೆ, ದಯಮಾಡಿ ನನ್ನ ಪತಿಯನ್ನು ನನಗೆ ಕೊಡಿ" ಎಂದು ಕೇಳಿಕೊಂಡಳು. ಆಗ ಅವರು ಚ್ಯವನನನ್ನು ತೋರಿಸಿ ತಾವು ಸ್ವರ್ಗಕ್ಕೆ ತೆರಳಿದರು. ಹೀಗೆ ಪುನಃ ಯೌವನವನ್ನು ಪಡೆದ ಗಂಡನನ್ನು ಸುಕನ್ಯೆಯು ತೋರಿಸಿದಳು. ಆತನೂ ಸಂತುಷ್ಟನಾಗಿ ಚ್ಯವನಮಹರ್ಷಿಯನ್ನು ಇಟ್ಟುಕೊಂಡು ಯಜ್ಞವನ್ನು ಮಾಡಿದನು. ಆ ಯಜ್ಞದಲ್ಲಿ ಅಶ್ವಿನೀ ದೇವತೆಗಳಿಗೆ ಸೋಮಭಾಗವು ಸಿಕ್ಕಿತೆಂದು ಇಂದ್ರನು ಆ ಯಾಗ ಮಾಡಿಸಿದ ಚ್ಯವನನನ್ನು ಕೊಲ್ಲುವೆನೆಂದು ವಜ್ರವನ್ನೆತ್ತಿದನು. ಆ ವಜ್ರವನ್ನೆತ್ತಿದ ಕೈಯು ಹಾಗೇ ಅಲ್ಲಾಡದೆ ಚ್ಯವನನ ಪ್ರಭಾವದಿಂದ ನಿಂತು ಹೋಯಿತು. ಆಗ ಅಲ್ಲಿದ್ದ ದೇವತೆಗಳೆಲ್ಲ ಇನ್ನು ಮುಂದೆ ಅಶ್ವಿನೀ ದೇವತೆಗಳಿಗೂ ಸೋಮ ಭಾಗವು ಸಲ್ಲಬಹುದು ಎಂದು ಸಮ್ಮತಿ ಸಿದರು.

ಈ ಶರ್ಯಾತಿಯ ವಂಶದಲ್ಲಿಯೇ ಹುಟ್ಟಿದ ರೈವತನು ತನ್ನ ಮಗ ಳಾದ ರೇವತಿಗೆ ವರನಾರು ಎಂದು ಕೇಳಲು ಬ್ರಹ್ಮ ಲೋಕಕ್ಕೆ ಹೊರ

ಟನು. ಆಗ ಅಲ್ಲಿ ಗಂಧರ್ವ ಗಾನವಾಗುತ್ತಿತ್ತು. ಅದನ್ನು ಮುಗಿಸಿಕೊಂಡು ಬ್ರಹ್ಮನೊಡನೆ ಮಾತನಾಡುವ ವೇಳೆಗೆ ಭೂ ಲೋಕದಲ್ಲಿ ಇಪ್ಪತ್ತೇಳು ಚತುರ್ಯುಗಗಳು ಕಳೆದು ಹೋದುವು. ಆತನು ಭೂಮಿಗೆ ಬರುವ ವೇಳೆಗೆ ಕೃಷ್ಣಾವತಾರವಾಗಿತ್ತು. ತನ್ನ ಮಗಳನ್ನು ಆತನು ಬಲರಾಮನಿಗೆ ಕೊಟ್ಟನು.

ಮನುಪುತ್ರನಾದ ನಭಗನ ಮಗನು ನಾಭಾಗನು. ಆತನು ವಿದ್ಯಾರ್ಥಿಯಾಗಿ ಗುರುಕುಲದಲ್ಲಿ ಬಹು ಕಾಲವಿದ್ದುಬಿಟ್ಟನು. ಅವನಿನ್ನು ಬರುವುದಿಲ್ಲವೆಂದು ಅವನ ಅಣ್ಣಂದಿರು ತಂದೆಯ ಆಸ್ತಿಯನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡರು. ಅವನು ಬಂದು ಕೇಳಲು ತಂದೆಯನ್ನು ನಿನಗಾಗಿ ಬಿಟ್ಟಿರುವೆವು. ನೀನು ಆತನನ್ನು ತೆಗೆದುಕೋ ಎಂದರು. ತಂದೆಯು ಅದನ್ನು ಕೇಳಿ " ಈಗ ಅಂಗಿರರು ಸತ್ರವನ್ನು ಮಾಡುತ್ತಿರುವರು. ಆರನೆಯ ದಿನ ಅವರು ಏನು ಮಾಡಬೇಕೋ ತಿಳಿಯದೆ ಪೇಚಾಡುವರು. ಆಗ ನೀನು ವಿಶ್ವೇದೇವತೆಗಳ ಈ ಎರಡು ಸೂಕ್ತಗಳನ್ನು ಹೇಳಿ ಕೊಡು. ಅವರು ತಮ್ಮ ಯಾಗದಲ್ಲಿ ಉಳಿದುದೆಲ್ಲವನ್ನೂ ನಿನಗೆ ಕೊಡುವರು" ಎಂದನು.

ನಾಭಾಗನು ಹಾಗೇ ಮಾಡಿದನು. ಅಂಗಿರರು ಸಂತುಷ್ಟರಾಗಿ ಯಜ್ಞದಲ್ಲಿ ಮಿಕ್ಕ ಧನವನ್ನೆಲ್ಲಾ ಅವನಿಗೆ ಕೊಟ್ಟರು. ಅವನು ಅದನ್ನು ತೆಗೆದುಕೊಳ್ಳಲು ಹೋದರೆ, ಆಗ ಅಲ್ಲಿ ಕೃಷ್ಣಪುರುಷನೊಬ್ಬನು ಕಾಣಿಸಿಕೊಂಡು "ಯಾಗ ಭೂಮಿಯಲ್ಲಿ ಉಳಿದುದೆಲ್ಲ ನನ್ನದು. ಹೌದೋ ಅಲ್ಲವೋ ನಿಮ್ಮ ತಂದೆಯನ್ನು ಕೇಳಿ ನೋಡು" ಎಂದನು. ನಾಭಾಗನು ತಂದೆಯನ್ನು ಕೇಳಿ ಬಂದು "ನೀನು ಹೇಳಿದುದು ಸರಿ" ಎಂದನು. ಆ ಪುರುಷನು " ನೀನು ಸತ್ಯವಾಡಿದೆ. ಅದರಿಂದ ನೀನು ವಂದನಕ್ಕೆ ಅರ್ಹನು. ಈ ಧನವನ್ನೆಲ್ಲ ತೆಗೆದುಕೊ. ಜೊತೆಗೆ ಬ್ರಹ್ಮ

ಜ್ಞಾನವನ್ನು ಕೊಡುವೆನು" ಎಂದು ಅನುಗ್ರಹಿಸಿ ಪುರುಷರೂಪದಿಂದ ಬಂದ ರುದ್ರನು ಮರೆಯಾದನು.

ಆ ನಾಭಾಗನ ಮಗನು ಅಂಬರೀಷನು. ಆತನು ಇತರರಿಗೆ ದುರ್ಲಭವಾದ ಅಖಂಡ ಭೂಮಂಡಲದ ಆಧಿಪತ್ಯವನ್ನೂ, ಅಖಂಡ ವಾದ ಐಶ್ವರ್ಯ ವೈಭವಗಳನ್ನೂ ಪಡೆದಿದ್ದರೂ ಅದೆಲ್ಲವನ್ನೂ ಕನ ಸೆಂದುಕೊಂಡ ಮಹಾನುಭಾವನು. ಆತನು ಸಂಪತ್ತುಗಳು ಬಂದರೂ ಹೋದರೂ ದುಃಖವನ್ನೇ ಉಂಟು ಮಾಡುವುವು ಎಂದು ತಿಳಿದು, ಭಗವಂತನಾದ ವಾಸುದೇವನಲ್ಲಿಯೂ ಆತನ ಭಕ್ತರಲ್ಲಿಯೂ ಭಕ್ತಿ ಯನ್ನಿಟ್ಟು ಜಗತ್ತನ್ನೆಲ್ಲಾ ಮಣ್ಣು ಹೆಂಟೆಯಂತೆ ಕಾಣುತ್ತಿದ್ದನು. ಆತನು ಸರಸ್ವತೀ ನದಿಯ ತೀರದಲ್ಲಿ ಅನೇಕ ಮಹರ್ಷಿಗಳನ್ನು ಬರ ಮಾಡಿಕೊಂಡು ಅನೇಕ ಅಶ್ವಮೇಧಗಳನ್ನು ಮಾಡಿ ಯಜ್ಞಪತಿಯಾದ ಈಶ್ವರನನ್ನು ಆರಾಧಿಸಿದನು. ಅನನ್ಯ ಭಕ್ತನಾದ ಆತನ ಏಕಾಂತ ಭಕ್ತಿಯಿಂದ ಪ್ರೀತನಾದ ಶ್ರೀಹರಿಯು ಆತನ ರಕ್ಷಣಕ್ಕೆಂದು ಚಕ್ರಾ ಯುಧವನ್ನು ಕೊಟ್ಟನು.

ಆತನು ಒಂದು ಸಲ ಶ್ರೀಹರಿಗೆ ಪ್ರೀತಿಯಾಗಲೆಂದು ಒಂದು ಸಂವತ್ಸರ ದ್ವಾದಶೀ ವ್ರತವನ್ನು ಮಾಡಿದನು. ವ್ರತವು ಮುಗಿಯಲು ಕಾರ್ತಿಕ ಮಾಸದಲ್ಲಿ ಮೂರು ರಾತ್ರಿ ಉಪವಾಸ ಮಾಡಿ, ಯಮುನಾ ತೀರದ ಮಧುವನದಲ್ಲಿ ಶ್ರೀಹರಿಯನ್ನು ಅರ್ಚಿಸಿದನು. ಆಗ ಮಾಡ ಬೇಕಾದ ದಾನ ಸಂತರ್ಪಣೆಗಳನ್ನೆಲ್ಲಾ ಮಾಡಿ ಆತನು ಪಾರಣೆಗೆ ಏಳಬೇಕೆಂದಿರುವಾಗ ದುರ್ವಾಸರು ಬಂದರು. ಅವರಿಗೆ ಸತ್ಕಾರ ವನ್ನೊಪ್ಪಿಸಿ ಭೋಜನಕ್ಕೆ ಬರಬೇಕೆಂದು ಪ್ರಾರ್ಥಿಸಿದನು. ಆತನು ಆಗಲೆಂದು ನಿತ್ಯಕರ್ಮಕ್ಕಾಗಿ ಯಮುನಾ ನದಿಗೆ ಹೋದನು.

ಆತನು ಬರುವುದು ಹೊತ್ತಾಯಿತು. ದ್ವಾದಶಿಯು ಅರ್ಧ ಮುಹೂರ್ತ ಮಾತ್ರ ಉಳಿಯಿತು. ಆಗ ಅಂಬರೀಷನು ಧರ್ಮಜ್ಞ

ರಾದ ಬ್ರಾಹ್ಮಣರನ್ನು ಕರೆದು ವಿಚಾರ ಮಾಡಿದನು. "ದ್ವಾದಶಿಯಲ್ಲಿ ಪಾರಣೆಯನ್ನು ಮಾಡದಿದ್ದರೆ ದೋಷ. ಅತಿಥಿಯನ್ನು ಬಿಟ್ಟು ಪಾರಣೆ ಮಾಡಿದರೆ ದೋಷ. ಹೀಗಾಗಿದೆ. ಏನು ಮಾಡಿದರೆ ಈ ಎರಡು ದೋಷವೂ ಇಲ್ಲವಾಗುವುದೋ ಅದನ್ನು ಯೋಚಿಸಿ ಹೇಳಿ. ನನಗೆ ಶ್ರೇಯಸ್ಸಾಗಲಿ" ಎಂದನು. ಅವರು ಚೆನ್ನಾಗಿ ಪರಿಶೀಲಿಸಿ, "ಜಲ ಪಾನ ಮಾಡಿ ಪಾರಣೆಯನ್ನು ಸಾಧಿಸು. ಅತಿಥಿಯು ಬಂದ ಮೇಲೆ ಭೋಜನ ಮಾಡು" ಎಂದರು. ರಾಜನು ಅದರಂತೆಯೇ ಮಾಡಿ ಅತಿಥಿ ಯನ್ನು ನಿರೀಕ್ಷಿಸುತ್ತಿದ್ದನು.

ದುರ್ವಾಸರು ಬಂದರು. ರಾಜನು ಸತ್ಕಾರ ಮಾಡಿದರೂ ಆತನು ತನ್ನನ್ನು ಬಿಟ್ಟು ಪಾರಣೆಯನ್ನು ಸಾಧಿಸಿದುದೇ ತಪ್ಪು ಎನ್ನಿಸಿ ಅವರು ಕೋಪಗೊಂಡರು. "ಧರ್ಮಭ್ರಷ್ಟ, ಫಲವನ್ನು ಅನುಭ ವಿಸು'' ಎಂದು ಒಂದು ಜಟೆಯನ್ನು ಕಿತ್ತು ಜಡಿದರು. ಅದರಿಂದ ಒಂದು ಮಾರಿಯು ಹುಟ್ಟಿ ಅಂಬರೀಷನನ್ನು ಕಡಿಯುವೆನೆಂದು ಜ್ವಾಲಾ ಮಾಲಿನಿಯಾಗಿ ಭೂಮಿಯು ನಡುಗುವಂತೆ ಅಂಬರೀಷನ ಮೇಲೆ ಬಿತ್ತು. ಅಂಬರೀಷನು ನಿಂತ ಕಡೆಯೇ ನಿಂತನು. ಅಂಬರೀಷನ ರಕ್ಷಣೆಗಾಗಿ ಕಾದಿದ್ದ ಚಕ್ರಾಯುಧವು ಕೆರಳಿರುವ ಹೆಬ್ಬಾವನ್ನು ಸುಡುವ ಕಾಳ್ಗಿಚ್ಚಿನಂತೆ, ಉರಿಯುತ್ತಿರುವ ಮಾರಿಯನ್ನು ಸುಟ್ಟುರು ಹಿತು. ಆ ದುರ್ವಾಸನ ಮೇಲೆ ಬಿತ್ತು.

ದುರ್ವಾಸನು ಕೆಟ್ಟೆನೆಂದು ಹೆದರಿ ಓಡಿದನು. ಎಲ್ಲೆಲ್ಲಿ ಹೋದರೂ ಅಟ್ಟಿಕೊಂಡು ಬರುತ್ತಿರುವ ಆ ಸುದರ್ಶನ ಚಕ್ರವನ್ನು ಕಂಡು ಅಧೋಲೋಕ, ಊರ್ಧ್ವಲೋಕಗಳನ್ನೆಲ್ಲಾ ಅಲೆದನು. ಚಕ್ರವು ಬಿಡಲಿಲ್ಲ. ಬ್ರಹ್ಮ ಲೋಕಕ್ಕೆ ಹೋದನು. ಚಕ್ರವು ಅಲ್ಲಿಗೂ ಹೋಯಿತು. ಬ್ರಹ್ಮನು ದುರ್ವಾಸನನ್ನು ಕುರಿತು, "ಇದು ಮಹಾ ವಿಷ್ಣುವಿನ ಚಕ್ರ. ನಾವೆಲ್ಲಾ ಆತನ ಆಜ್ಞಾಧಾರಿಗಳು. ನಾವು ಇದನ್ನು

ತಡೆಯಲಾರೆವು" ಎಂದನು. ಕೈಲಾಸಕ್ಕೆ ಹೋದನು. ಪರಶಿವನೂ ಹಾಗೇ ಹೇಳಿದನು. ಆ ಮುನಿಯು ವೈಕುಂಠಕ್ಕೆ ಹೋದನು. "ಅಚ್ಯುತ, ಅನಂತ, ನಿನ್ನ ಭಕ್ತನಿಗೆ ಅಪರಾಧ ಮಾಡಿದೆನು. ನನ್ನನ್ನು ಕಾಪಾಡು. ತಪ್ಪಾಯಿತು" ಎಂದು ಬೇಡಿಕೊಂಡನು. ಆತನು "ಮುನೀಂದ್ರ, ನಾನು ಯಾವಾಗಲೂ ಭಕ್ತರ ಅಡಿಯಾಳು. ಲೋಕದಲ್ಲಿ ಸಾಧುಗಳ ಮೇಲೆ ಕೈ ಮಾಡಿದವರು ತಾವೇ ಕೆಡುವರು. ಸತ್ಪುರುಷರಿಗೆ ತಪಸ್ಸೂ ವಿದ್ಯೆಯೂ ಶ್ರೇಯಸ್ಸಾಧನೆಗಳೇ ಆದರೂ ದುಷ್ಟರಿಗೆ ಅವೇ ಕೇಡನ್ನು ಮಾಡುವುವು. ನೀನು ತಪ್ಪು ಮಾಡಿರುವುದು ಅಂಬರೀಷ ರಾಜನಿಗೆ. ಆತನಿಗೆ ಮರೆಹೋಗು. ಮನ್ನಿಸೆನ್ನು. ನಿನಗೆ ಭದ್ರವಾಗಲಿ. ನಿನಗೆ ಶಾಂತಿಯಾಗಲಿ" ಎಂದು ಕಳುಹಿಸಿಕೊಟ್ಟನು.

ಚಕ್ರಾಗ್ನಿಯು ಸುಡುತ್ತಿರಲು ದುರ್ವಾಸನು ಬಂದು ಅಂಬರೀಷನ ಪಾದಗಳನ್ನು ಹಿಡಿದನು. ಆ ರಾಜನು ಆ ಉಪಚಾರದಿಂದ ನಾಚಿ, ಆತನ ವ್ಯಸನವನ್ನು ತೀರಿಸಬೇಕೆಂದು ಭಕ್ತಿಯಿಂದ ಶ್ರೀವಿಷ್ಣು ಚಕ್ರವನ್ನು ಪ್ರಾರ್ಥಿಸಿದನು: "ಎಲೈ ಚಕ್ರರಾಜನೆ, ಅಚ್ಯುತಪ್ರಿಯನೆ, ಲೋಕನಾಯಕನೆ, ಬ್ರಾಹ್ಮಣನಿಗೆ ಒಳ್ಳೆಯದಾಗಲಿ. ತೇಜೋಮಯನೆ, ಪೌರುಷಪ್ರಿಯನೆ, ನಮ್ಮ ಕುಲಕ್ಕೆ ದೇವಸ್ವರೂಪನಾಗಿರುವ ಈ ದುರ್ವಾಸರಿಗೆ ಭದ್ರವಾಗುವಂತೆ ಅನುಗ್ರಹಿಸು" ಎಂದು ಬಹಳವಾಗಿ ಕೊಂಡಾಡಿದನು. ಚಕ್ರವು ಶಾಂತವಾಯಿತು.

ದುರ್ವಾಸರಿಗೂ ಶಾಂತವಾಯಿತು. ಆತನು ರಾಜನನ್ನು ಹೊಗಳಿ ಆಶೀರ್ವದಿಸಿದನು: "ವಿಷ್ಣು ಭಕ್ತರ ಪ್ರಭಾವವು ಎಷ್ಟು ದೊಡ್ಡದು! ನಾನು ಪಾಪವನ್ನು ಮಾಡಿದ್ದರೂ ನನಗೆ ಮಂಗಳವನ್ನು ಕೋರಿದೆಯಲ್ಲಾ! ರಾಜನೆ, ನೀನು ನಿಜವಾಗಿ ಕರುಣಾಸಮುದ್ರನು" ಎಂದು ಕೊಂಡಾಡಿದನು.

ದುರ್ವಾಸರು ಲೋಕ ಲೋಕಗಳನ್ನು ಸುತ್ತಿ ಬರುವುದಕ್ಕೆ ಒಂದು ವರ್ಷವಾಯಿತು. ಅಷ್ಟು ಕಾಲವೂ ರಾಜನು ಜಲಾಹಾರಿಯಾಗಿ

ದ್ದನು. ರಾಜನು ಆತನಿಗೆ ಭೋಜನವನ್ನು ಮಾಡಿಸಿ ತಾನೂ ಭೋಜನ ಮಾಡಿದನು. ದುರ್ವಾಸರು "ಎಲೈ ಭಾಗವತ ಶಿರೋಮಣಿಯೇ, ನಿನ್ನ ದರ್ಶನದಿಂದಲೇ ನನಗೆ ಪ್ರೀತಿಯುಂಟಾಯಿತು. ನಿನ್ನಿಂದ ಅನುಗ್ರಹೀತ ನಾದೆನು. ನಿನ್ನ ದರ್ಶನ ಸ್ಪರ್ಶನ ಆಲಾಪ ಆತಿಥ್ಯಗಳಿಂದ ಸಂತುಷ್ಟ ನಾದೆನು" ಎಂದು ಹೇಳಿ ಸತ್ಯಲೋಕಕ್ಕೆ ಹೋದರು.

ಅಂಬರೀಷನು ಸಕಾಲದಲ್ಲಿ ತನ್ನಂತೆಯೇ ಗುಣವಂತರಾದ ಪುತ್ರರಿಗೆ ರಾಜ್ಯವನ್ನಿತ್ತು ತಾನು ಮೋಕ್ಷಕ್ಕೆ ಸಂದನು.

---

ಮುವ್ವತ್ತೊಂದನೆಯ ಅಧ್ಯಾಯವು

# ಇಕ್ಷ್ವಾಕು ವಂಶದ ಚರಿತ್ರೆ

ವೈವಸ್ವತ ಮನುವು ಒಮ್ಮೆ ಸೀತನು. ಆತನ ಮೂಗಿನ ಹೊಳ್ಳೆ ಯಿಂದ ಇಕ್ಷ್ವಾಕುವು ಹುಟ್ಟಿದನು. ಆತನಿಗೆ ನೂರು ಮಕ್ಕಳಾದರು. ಆತನು ಅಷ್ಟಕಾ ಶ್ರಾದ್ಧವನ್ನು ಮಾಡಬೇಕೆಂದು ಹಿರಿಯ ಮಗನನ್ನು ಕರೆದು 'ಪರಿಶುದ್ಧವಾದ ಮಾಂಸವನ್ನು ತೆಗೆದುಕೊಂಡುಬಾ" ಎಂದನು. ಆತನು ಕಾಡಿಗೆ ಹೋಗಿ ಶ್ರಾದ್ಧಯೋಗ್ಯಗಳಾದ ಮೃಗಗಳನ್ನು ಕೊಂದನು. ಅಷ್ಟರಲ್ಲಿ ಆತನಿಗೆ ಬಹಳ ಆಯಾಸವಾಗಲು ಒಂದು ಮೊಲವನ್ನು ತಿಂದು ಉಳಿದುದನ್ನು ತಂದನು. ವಸಿಷ್ಠ ಮುನಿಯು "ಮಾಂಸವು ಎಂಜಲು. ಶ್ರಾದ್ಧಯೋಗ್ಯವಲ್ಲ"ಎಂದನು ಇಕ್ಷ್ವಾಕುವು ಆ ಅಕಾರ್ಯವನ್ನು ಮಾಡಿದನೆಂದು ಅವನನ್ನು ದೇಶದಿಂದ ಹೊರಡಿಸಿದನು. ಅವನಿಗೆ ಮೊಲವನ್ನು ತಿಂದನೆಂದು ಶಶಾದನೆಂಬ ಅಡ್ಡಹೆಸರಾಯಿತು.

ತಂದೆಯು ಲೋಕಾಂತರವನ್ನೈದಿದ ಮೇಲೆ ದೇಶಾಂತರ ಹೋಗಿದ್ದ ಶಶಾದನು ಬಂದು ಸಿಂಹಾಸನವನ್ನೇರಿದನು. ಆತನ ಮಗನು ಪುರಂಜಯನು. ದೇವಾಸುರರಿಗೆ ಅತಿ ಭಯಂಕರವಾದ ಯುದ್ಧವಾಯಿತು. ಪರಾಜಿತರಾದ ದೇವತೆಗಳು ಶ್ರೀಹರಿಯ ಬಳಿ ಸಾರಲು ಆತನು, "ಇಂದ್ರನು ವೃಷಭವಾಗಿ ಪುರಂಜಯನನ್ನು ಕೂರಿಸಿ

ಕೊಂಡು ಯುದ್ಧಕ್ಕೆ ಹೋದರೆ ನಿಮಗೆ ಗೆಲುವಾಗುವುದು" ಎಂದನು. ಅವರೂ ಅದರಂತೆ ಮಾಡಿದರು. ಅದರಿಂದ ಆ ರಾಜನಿಗೆ ಇಂದ್ರ ವಾಹನ, ಕಕುತ್‌ಸ್ಥ, ಎಂದೂ ಹೆಸರಾಯಿತು.

ಆ ಪುರಂಜಯನ ವಂಶದಲ್ಲಿ ಆತನಿಂದ ಹದಿಮೂರನೆಯವನಾಗಿ ಯುವನಾಶ್ವನಾದನು. ಆತನು ತನಗೆ ಮಕ್ಕಳಾಗಲೆಂದು ಪುತ್ರ ಕಾಮೇಷ್ಟಿ ಯಾಗವನ್ನು ಮಾಡಿದನು. ಒಂದು ರಾತ್ರಿ ಯುವನಾಶ್ವನು ಬಾಯಾರಿಕೆಯುನ್ನು ತಡೆಯಲಾರದೆ ಹೋಗಿ, ಅಭಿಮಂತ್ರಿಸಿದ್ದ ಕಲಶೋದಕವನ್ನು ಕುಡಿದುಬಿಟ್ಟನು. ಮಂತ್ರ ಪ್ರಭಾವದಿಂದ ಅವನೇ ಬಸುರಾದನು. ಸಕಾಲದಲ್ಲಿ ಅವನ ಹೊಟ್ಟೆಯುನ್ನು ಸೀಳಿಕೊಂಡು ಒಬ್ಬ ಮಗನು ಹುಟ್ಟಿದನು. ಆ ಮಗು ಸ್ತನ್ಯಕ್ಕಾಗಿ ಅಳುವಾಗ ಇಂದ್ರನು ಬಂದು ತನ್ನ ಬೆರಳನ್ನು ಮಗುವಿನ ಬಾಯಲ್ಲಿಟ್ಟನು. ಆ ಮಗುವೇ ಮಾಂಧಾತನು. ಆತನು ರಾಜನಾಗಿದ್ದಾಗ ದುಷ್ಟರಾದ ರಾವಣಾದಿಗಳೂ ಆತನಿಗೆ ಹೆದರುತ್ತಿದ್ದರು. ಅದರಿಂದ ಆತನಿಗೆ ತ್ರಸದ್ದಸ್ಯುವೆಂದು (ಕಳ್ಳರೂ ಹೆದರುವರು) ಅಡ್ಡ ಹೆಸರಾಯಿತು. ಸೂರ್‍ಯನು ಎಲ್ಲಿ ಉದಿಸುವನೋ ಎಲ್ಲಿ ಮುಳುಗುವನೋ ಆ ಭೂಮಿಯೆಲ್ಲವೂ ಮಾಂಧಾತನದಾಗಿತ್ತು. ಆತನಿಗೆ ಐವತ್ತು ಹೆಣ್ಣು ಮಕ್ಕಳೂ ಮೂವರೂ ಗಂಡು ಮಕ್ಕಳೂ ಆದರು.

ಸೌಭರಿಯೆಂಬ ಮುನಿಯು ಜಲದಲ್ಲಿ ಮುಳುಗಿಕೊಂಡು ತಪಸ್ಸು ಮಾಡಿದನು. ಕ್ರೀಡಿಸುತ್ತಿದ್ದ ಮೀನ ದಂಪತಿಗಳನ್ನು ಕಂಡು ಆತನಿಗೆ ತಾನೂ ಸಂಸಾರ ಮಾಡಬೇಕು ಎನ್ನಿಸಿತು. ಆಗ ರಾಜನ ಬಳಿಗೆ ಬಂದು ನನಗೆ ಮದುವೆ ಮಾಡಿಸು ಎಂದನು. ಮಾಂಧಾತನು ಆತನಿಗೆ ಸ್ವಾಗತವನ್ನಿತ್ತು ಸತ್ಕರಿಸಿ, "ನನ್ನ ಮಕ್ಕಳಲ್ಲಿ ನಿನ್ನನ್ನು ಒಲಿದವಳನ್ನು ಮದುವೆಯಾಗು'' ಎಂದನು. ಆತನು ಆಗಲೆಂದು ಕನ್ಯಾಂತಃಪುರಕ್ಕೆ ಹೋದನು. ಅಲ್ಲಿ ತನ್ನ ತಪೋಬಲದಿಂದ ನವಮನ್ಮಥನಂತೆ ತೋರಿಸಿಕೊಂಡನು. ಐವತ್ತು ಜನರೂ ಅವನನ್ನು ಒಲಿದು ಮದುವೆಯಾದರು.

ಆತನು ತಾನೂ ಐವತ್ತು ಶರೀರಗಳನ್ನು ಧರಿಸಿ ಏಕಕಾಲದಲ್ಲಿ ಅವರೊಡನೆ ಸಂಸಾರ ಮಾಡಿದನು. ಆತನ ಸೌಖ್ಯವನ್ನು ಕಂಡು ಮಾಂಧಾತನು ಚಕ್ರವರ್ತಿಯಾದ ತನಗೂ ಅಂತಹ ಸೌಖ್ಯವಿಲ್ಲವೆಂದುಕೊಂಡನು.

ಆ ಮಾಂಧಾತನ ಮಗನಾದ ಪುರುಕುತ್ಸನಿಗೆ ಸರ್ಪರಾಜರು ತಮ್ಮ ತಂಗಿಯಾದ ನರ್ಮದೆಯೆಂಬ ನಾಗಕನ್ನಿಕೆಯನ್ನು ಕೊಟ್ಟು ಆತನನ್ನು ತಮ್ಮ ಲೋಕಕ್ಕೆ ಕರೆದುಕೊಂಡುಹೋದರು. ವಿಷ್ಣುಭಕ್ತನಾದ ಆತನು ಅಲ್ಲಿ ಸರ್ಪಗಳನ್ನು ಹಿಂಸಿಸುತ್ತಿದ್ದ ಗಂಧರ್ವರನ್ನೆಲ್ಲಾ ಸಂಹರಿಸಿದನು. ಅದರಿಂದ ಸಂತುಷ್ಟರಾದ ಸರ್ಪರು "ನಿನ್ನನ್ನು ಸ್ಮರಿಸಿದವರಿಗೆ ನಮ್ಮ ಭಯವಿಲ್ಲ" ಎಂದು ವರವನ್ನು ಕೊಟ್ಟರು.

ಅವನಿಂದ ಆರನೆಯವನೇ ತ್ರಿಶಂಕುವೆಂಬ ಸತ್ಯವ್ರತನು. ಶಾಪದಿಂದ ಚಂಡಾಲನಾಗಿ ವಿಶ್ವಾಮಿತ್ರನ ಮಹಿಮೆಯಿಂದ ನಕ್ಷತ್ರವಾಗಿರುವವನೂ ಆತನೇ! ಈತನ ಮಗನು ಹರಿಶ್ಚಂದ್ರನು. ವಶಿಷ್ಠ-ವಿಶ್ವಾಮಿತ್ರರು ಈತನಿಗಾಗಿ ಒಬ್ಬರಿಗೊಬ್ಬರು ಶಾಪವನ್ನು ಕೊಟ್ಟು ಕೋಳಿಕೊಕ್ಕರೆಗಳಾಗಿ ಬಹು ವರ್ಷ ಯುದ್ಧಮಾಡಿದರು. ಈತನು "ನನಗೆ ಮಗನಾದರೆ ಅವನನ್ನು ನಿನಗೇ ಒಪ್ಪಿಸುವೆನು" ಎಂದು ಹರಕೆಯನ್ನು ಕಟ್ಟಿಕೊಂಡು ವರುಣನ ಅನುಗ್ರಹದಿಂದ ರೋಹಿತನೆಂಬ ಮಗನನ್ನು ಪಡೆದನು. ಕೊನೆಗೆ ಆ ಮಗನನ್ನು ವರುಣನಿಗೆ ಬಲಿ ಮಾಡಲಾರದೆ ಶುನಶ್ಶೇಫನನ್ನು ತಂದು ವರುಣನಿಗೆ ಒಪ್ಪಿಸಿ ನರಮೇಧವನ್ನು ಮಾಡಿದನು. ಯಜ್ಞದಿಂದ ಪ್ರೀತನಾದ ವರುಣನು ಆತನಿಗೆ ಬಂದಿದ್ದ ಜಲೋದರವನ್ನು ತಪ್ಪಿಸಿದನು: ಮಹೇಂದ್ರನು ಚಿನ್ನದ ರಥವನ್ನು ಕೊಟ್ಟನು. ವಿಶ್ವಾಮಿತ್ರನು ಆತನಿಗೆ ಲಯಯೋಗವನ್ನು ಕೊಟ್ಟನು. ಆ ಯೋಗದಿಂದ ಮನಸ್ಸನ್ನು ಪೃಥ್ವಿಯಲ್ಲಿ, ಪೃಥ್ವಿಯನ್ನು ಜಲದಲ್ಲಿ, ಜಲವನು ತೇಜಸ್ಸಿನಲ್ಲಿ, ತೇಜಸ್ಸನ್ನು ವಾಯುವಿನಲ್ಲಿ, ವಾಯುವನ್ನು ಆಕಾಶದಲ್ಲಿ, ಆಕಾಶವನ್ನು ಅಹಂಕಾರದಲ್ಲಿ, ಅಹಂಕಾರವನ್ನು ಮಹತ್ತತ್ವದಲ್ಲಿ, ಅದನ್ನು ಜ್ಞಾನ ಕಲೆಯಲ್ಲಿ ಲಯಗೊಳಿಸಿ ಆ ಜ್ಞಾನ ಕಲೆಯಿಂದ

ಅಜ್ಞಾನವನ್ನು ದಹಿಸಿ ಆನಂದಮಯವಾಗಿ ಮೋಕ್ಷವನ್ನು ಪಡೆದನು.

ಹರಿಶ್ಚಂದ್ರನಿಂದ ಒಂಭತ್ತನೆಯವನು ಸಗರನು. ಆತನು ಗರ್ಭದಲ್ಲಿದ್ದಾಗ ಆತನ ಸವತಿ ತಾಯಿಯರು ವಿಷ ಹಾಕಿದ್ದರು. ಆ ವಿಷದೊಡನೆ ಹುಟ್ಟಿದನೆಂದು ಆತನಿಗೆ ಆ ಹೆಸರಾಯಿತು. ಆತನು ತಾಳಜಂಘರು, ಯವನರು, ಶಕರು, ಹೈಹಯರು, ಬರ್ಬರರು, ಮೊದಲಾದವರನ್ನೆಲ್ಲಾ ಗೆದ್ದು ಅಶ್ವಮೇಧಗಳಿಂದ ಶ್ರೀಹರಿಯನ್ನು ಆರಾಧಿಸಿದನು. ಒಮ್ಮೆ ಆತನ ಯಾಗದ ಕುದುರೆಯನ್ನು ಇಂದ್ರನು ಕದ್ದನು. ಸಗರಪುತ್ರರು ಕುದುರೆಯನ್ನು ಹುಡುಕಿಕೊಂಡು ಹೊರಟು ಭೂಮಿಯಲ್ಲಿ ಎಲ್ಲಿಯೂ ಕಾಣದೆ, ಭೂಮಿಯನ್ನು ಅಗೆದು ಪಾತಾಳ ಲೋಕಕ್ಕೆ ಹೋದರು. ಆ ಗುಂಡಿಗಳಲ್ಲಿ ನೀರು ನಿಂತು ಸಾಗರವಾಯಿತು. ಪಾತಾಳದಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲ ಮುನೀಂದ್ರನ ಬಳಿಯಲ್ಲಿ ಕುದುರೆಯನ್ನು ಕಂಡು ಅವಿವೇಕದಿಂದ ಆತನ ಮೇಲೆ ಬಿದ್ದು ಆತನ ಕೋಪಾಗ್ನಿಯಿಂದ ಸುಟ್ಟು ಬೂದಿಯಾದರು.

ಸಗರನ ಇನ್ನೊಬ್ಬ ಮಗನು ಅಸಮಂಜನು. ಆತನು ಊರಿನ ಮಕ್ಕಳನ್ನೆಲ್ಲಾ ಸರಯೂ ನದಿಗೆ ತಳ್ಳಿದನು. ಅದರಿಂದ ರಾಜನು ಪುತ್ರನೆಂಬುದನ್ನೂ ಗಣಿಸದೆ ದೇಶಭ್ರಷ್ಟನನ್ನು ಮಾಡಿದನು ; ಆತನು ಬದುಕಿದೆನೆಂದು ತನ್ನ ತಪೋಬಲದಿಂದ ಸತ್ತಿದ್ದ ಮಕ್ಕಳನ್ನೆಲ್ಲಾ ಬದುಕಿಸಿಕೊಟ್ಟು ತಾನು ತಪಸ್ಸಿಗೆ ಹೋದನು.

ಆತನ ಮಗನಾದ ಅಂಶುಮಂತನು ಹೋಗಿ ಕಪಿಲ ಮುನಿಯ ದರ್ಶನಮಾಡಿ, ಸಗರವೃತ್ತಾಂತವನ್ನು ಅರಿತನು. ಗಂಗಾಜಲದಲ್ಲಿ ಅವರ ಬೂದಿಯನ್ನು ಕದಡಿದರೆ ಅವರಿಗೆ ಸದ್ಗತಿಯಾಗುವುದೆಂದು ತಿಳಿದು ಆತನ ಅನುಗ್ರಹವನ್ನು ಪಡೆದು ಕುದುರೆಯನ್ನು ತಂದು ತನ್ನ ತಾತನ ಯಜ್ಞವನ್ನು ಸಾಂಗಗೊಳಿಸಿದನು.

ಅಂಶುಮಂತನ ಮೊಮ್ಮಗನಾದ ಭಗೀರಥನು ಗಂಗೆಯನ್ನು ತರಲು ತಪಸ್ಸುಮಾಡಿದನು. ಆಕೆಯು ಪ್ರತ್ಯಕ್ಷಳಾಗಿ "ನಾನು

ಬರುವೆನು. ನನ್ನ ಪ್ರವಾಹದ ರಭಸವನ್ನು ತಡೆಯಲು ಒಬ್ಬನನ್ನು ಗೊತ್ತುಮಾಡು" ಎಂದಳು. ಭಗೀರಥನು ಪರಮೇಶ್ವರನನ್ನು ಒಪ್ಪಿಸಿದನು. ಗಂಗೆಯು ಪರಮೇಶ್ವರನ ಜಟಾಭಾರಕ್ಕೆ ಇಳಿದು ಅಲ್ಲಿಂದ ಭೂಮಿಗೆ ಬಂದು, ಭಗೀರಥನ ಹಿಂದೆ ಪಾತಾಳಕ್ಕೆ ಹೋಗಿ ಆತನ ಹಿರಿಯರ ಬೂದಿಯನ್ನು ಕದಡಿ ಅವರಿಗೆ ಸದ್ಗತಿಯನ್ನು ಕೊಟ್ಟಳು.

ಆತನಿಂದ ಐದನೆಯವನು ಋತುಪರ್ಣನು. ಇವನೇ ನಳನಿಂದ ಅಶ್ವವಿದ್ಯೆಯನ್ನು ಕಲಿತವನು. ಆತನಿಂದ ನಾಲ್ಕನೆಯವನೇ ಸುದಾಸನ ಮಗನಾದ ಕಲ್ಮಾಷಪಾದನು. ಆತನು ಒಮ್ಮೆ ಕಾಡಿನಲ್ಲಿ ಬೇಟೆಯಾಡುವಾಗ ಒಬ್ಬ ರಾಕ್ಷಸನನ್ನು ಕೊಂದನು. ಅವನ ಸೋದರನು ಇವನಿಗೆ ಪ್ರತೀಕಾರ ಮಾಡಬೇಕೆಂದು ಇವನಲ್ಲಿ ಅಡುಗೆಯವನಾಗಿ ಸೇರಿದನು. ಒಂದು ದಿನ ಅವನು ವಸಿಷ್ಠಮುನಿಗೆ ನರಮಾಂಸವನ್ನು ಬಡಿಸಿದನು. ಆತನು ಅದನ್ನು ತಿಳಿದು ರಾಜನಿಗೆ ರಾಕ್ಷಸನಾಗು ಎಂದು ಶಾಪವನ್ನು ಕೊಟ್ಟನು. ರಾಕ್ಷಸನು ಮಾಡಿದ ಅಪರಾಧವಿದು ಎಂದು ತಿಳಿಯಲು ರಾಜನಿಗೆ ಹನ್ನೆರಡುವರ್ಷ ಮಾತ್ರ ರಾಕ್ಷಸನಾಗಿರಲೆಂದು ಶಾಪವನ್ನು ಹ್ರಸ್ವಮಾಡಿದನು ರಾಜನು ಕ್ರುದ್ಧನಾಗಿ ವಸಿಷ್ಠನಿಗೆ ಶಾಪ ಕೊಡುವೆನೆಂದು ನೀರನ್ನು ತೆಗೆದುಕೊಂಡನು. ಅಷ್ಟರಲ್ಲಿ ಅವನ ಹೆಂಡತಿಯು ಬೇಡವೆಂದು ತಡೆದಳು. ಆಗ ಆ ರಾಜನು ಆ ನೀರನ್ನು ಎಲ್ಲಿ ಹಾಕಿದರೂ ಪ್ರಾಣಿಗಳಿಗೆ ತೊಂದರೆಯಾಗುವುದೆಂದು ತನ್ನ ಕಾಲಿನ ಮೇಲೇ ಬಿಟ್ಟುಕೊಂಡನು. ಕಾಲು ಕಪ್ಪಾಯಿತು. ಆಗ ಆತನಿಗೆ ಕಲ್ಮಾಷಪಾದ ರಾಯನೆಂದು ಹೆಸರಾಯಿತು.

ಅವನು ರಾಕ್ಷಸನಾಗಿದ್ದಾಗ ಕ್ರೀಡಿಸುತ್ತಿದ್ದ ಬ್ರಾಹ್ಮಣನನ್ನು ಆಹಾರಾರ್ಥವಾಗಿ ಹಿಡಿದುಕೊಂಡನು. ಆತನ ಹೆಂಡತಿಯು ಎಷ್ಟು ಕೇಳಿಕೊಂಡರೂ ಬಿಡದೆ ತಿಂದೇಬಿಟ್ಟನು. ಅದರಿಂದ ಆಕೆಯು "ನೀನು ಹೆಂಡತಿಯನ್ನು ಸೇರಿದಾಗ ನಿನಗೂ ಮರಣವಾಗಲಿ" ಎಂದು ಶಾಪ ಕೊಟ್ಟಳು. ಹನ್ನೆರಡುವರ್ಷ ಕಳೆದು ಮತ್ತೆ ಮಾನವನಾದಾಗ ಸ್ತ್ರೀ

ಸಂಗ ಮಾಡಲಿಲ್ಲವಾಗಿ ಆತನು ಅಪುತ್ರನಾದನು.

ಆತನ ಹೆಂಡತಿಯು ಆತನಪ್ಪಣೆಯಂತೆ ಅವನಿಗೆ ಕ್ಷೇತ್ರಜಪುತ್ರನನ್ನು ಕೊಟ್ಟಳು. ಆತನು ಅಶ್ಮಕನು. ಅವನ ಮಗನು ಮೂಲಕನು. ಆತನ ಕಾಲದಲ್ಲಿ ಪರಶುರಾಮನು ಕ್ಷತ್ರಿಯ ಕುಲವನ್ನು ನಿರ್ಮೂಲ ಮಾಡಿದನು. ಅವನನ್ನು ಆಗ ಹೆಂಗಸರು ಕಾಪಾಡಿದರು. ಆದರಿಂದ ಅವನಿಗೆ ನಾರೀಕವಚನೆಂದು ಹೆಸರಾಯಿತು. ಅವನಿಂದ ನಾಲ್ಕನೆಯವನು ಖಟ್ವಾಂಗನು. ಅವನು ದೇವತೆಗಳಿಗೆ ಯುದ್ಧದಲ್ಲಿ ಜಯವನ್ನು ಸಂಪಾದಿಸಿಕೊಟ್ಟನು. ಅವರು ವರವನ್ನು ಕೇಳು ಎನ್ನಲು ನನಗೆ ಆಯುಸ್ಸು ಎಷ್ಟಿದೆ ಹೇಳಿ ಎಂದನು. "ಒಂದು ಮುಹೂರ್ತ ಮಾತ್ರ" ಎಂದು ಅವರು ಹೇಳಲು ಕೂಡಲೇ ವಿಮಾನದಲ್ಲಿ ತನ್ನ ರಾಜಧಾನಿಗೆ ಬಂದು ಆತ್ಮಧ್ಯಾನದಲ್ಲಿದ್ದು ಮುಕ್ತನಾದನು.

ಖಟ್ವಾಂಗನಿಂದ ಐದನೆಯವನು ದಶರಥ ಮಹಾರಾಜನು. ಮಹಾವಿಷ್ಣುವನ್ನು ಮಕ್ಕಳಾಗಿ ಪಡೆದ ಮಹಾನುಭಾವನು ಆತನು. ರಾವಣಾರಿಯಾದ ಶ್ರೀರಾಮನಿಂದ ಮುಂದಕ್ಕೆ ಇಪ್ಪತ್ತೊಂದು ಮಂದಿ ರಾಜರಾದರು. ಕೊನೆಯವನಾದ ಮರುವು ಯೋಗಮಹಿಮೆಯಿಂದ ಚಿರಾಯುವಾಗಿದ್ದುಕೊಂಡು ಕಲಿಯುಗಾಂತರದಲ್ಲಿ ನಷ್ಟವಾಗುವ ಸೂರ್ಯವಂಶವನ್ನು ಮತ್ತೆ ಬೆಳಸುವನು.

ಇಕ್ಷ್ವಾಕು ಪುತ್ರನಾದ ನಿಮಿಯ ವಂಶವೂ ಪ್ರಸಿದ್ಧವಾದುದು. ಅದನ್ನೂ ಹೇಳುವೆನು ಕೇಳು. ಆ ನಿಮಿರಾಜನು ಯಾಗವನ್ನು ಮಾಡಬೇಕೆಂದುಕೊಂಡು ತನ್ನ ಕುಲಗುರುವಾದ ವಸಿಷ್ಠನ ಬಳಿಗೆ ಹೋದನು. ಆತನು "ನಾನು ಇಂದ್ರನ ಯಾಗಕ್ಕೆ ಬರುವೆನೆಂದು ಮಾತು ಕೊಟ್ಟಿದ್ದೇನೆ. ಅದು ಮುಗಿಸಿಕೊಂಡು ಬರುವೆನು" ಎಂದನು. ನಿಮಿಯು ಯಾಗವನ್ನು ಮುಂದುವರಿಸಲು ಇಷ್ಟಪಡದೆ ಬೇರೆಯವರನ್ನು ಕರೆಸಿಕೊಂಡು ಯಾಗವನ್ನು ಮಾಡಿದನು. ವಸಿಷ್ಠನು ಹಿಂದಿರುಗಿ ಬಂದು "ನನ್ನನ್ನು ಬಿಟ್ಟು ಯಾಗ ಮಾಡಿದ ನಿನ್ನ ಶರೀರವು ಬಿದ್ದುಹೋಗಲಿ"

ಎಂದನು. ನಿಮಿಯು "ನಾನು ಕರೆದರೂ ನನ್ನ ಯಾಗಕ್ಕೆ ಬರದ ನಿನ್ನ ಶರೀರವೂ ಬಿದ್ದುಹೋಗಲಿ" ಎಂದನು. ಇಬ್ಬರೂ ದೇಹವನ್ನು ಬಿಟ್ಟರು. ವಸಿಷ್ಠನು ಮತ್ತೆ ಮಿತ್ರಾವರುಣರಿಂದ ಊರ್ವಶಿಯಲ್ಲಿ ಹುಟ್ಟಿದನು. ನಿಮಿಯು ದೇವತೆಗಳು ಶರೀರವನ್ನು ಕೊಡುವೆನೆಂದರೂ ಬೇಡವೆಂದು ಸೂಕ್ಷ್ಮನಾಗಿ ಪ್ರಾಣಿಗಳ ಕಣ್ಣುಗಳಲ್ಲಿ ವಾಸಿಸುತ್ತಾ ಅವರವರ ರೆಪ್ಪೆಗಳನ್ನು ಮುಚ್ಚಿ ತೆರೆಯಿಸುವವನಾದನು.

ಬಳಿಕ ಮಹರ್ಷಿಗಳು ಆತನ ದೇಹವನ್ನು ಕಡೆದು ಒಬ್ಬ ಮಗನನ್ನು ಪಡೆದರು. ಆ ಮಗನಿಗೆ ವಿದೇಹ, ಜನಕ, ಮಿಥಿಲ ಎಂದು ಹೆಸರಾಯಿತು. ಇವನಿಂದ ಮುಂದೆ ಸುಮಾರು ನಲವತ್ತು ತಲೆಗಳ ವರೆಗೂ ವಂಶವು ಬೆಳೆಯಿತು. ಅವರೆಲ್ಲರೂ ಮಹಾ ಯೋಗಿಗಳಾದ ಯಾಜ್ಞವಲ್ಕ್ಯರೇ ಮೊದಲಾದವರ ಅನುಗ್ರಹದಿಂದ ಬ್ರಹ್ಮಜ್ಞಾನ ಸಂಪನ್ನರಾಗಿದ್ದರು.

---

ಮುವ್ವತ್ತೆರಡನೆಯ ಅಧ್ಯಾಯವು

## ಚಂದ್ರವಂಶ

ಚತುರ್ಮುಖನ ಮಗನಾದ ಅತ್ರಿಯಿಂದ ಚಂದ್ರನು ಹುಟ್ಟಿದನು. ಬ್ರಹ್ಮನು ಅವನನ್ನು ಬ್ರಾಹ್ಮಣರಿಗೂ ವನಸ್ಪತಿಗಳಿಗೂ ನಕ್ಷತ್ರಗಳಿಗೂ ಒಡೆಯನನ್ನಾಗಿ ಮಾಡಿದನು. ಅವನು ಮೂರು ಲೋಕಗಳನ್ನೂ ಗೆದ್ದು ರಾಜಸೂಯವನ್ನು ಮಾಡಿದನು. ಹಾಗೆಯೇ ದೇವಗುರುವಾದ ಬೃಹಸ್ಪತಿಯ ಹೆಂಡತಿಯನ್ನೂ ಬಲವಂತವಾಗಿ ಆಕ್ರಮಿಸಿಕೊಂಡನು. ದೇವಗುರುವು ಕೇಳಿಕೊಂಡರೂ ಅವಳನ್ನು ಬಿಡಲಿಲ್ಲ. ಅದಕ್ಕಾಗಿ ದೇವದಾನವರ ಯುದ್ಧವೂ ನಡೆದುಹೋಯಿತು. ರುದ್ರನೂ ಮಹೇಂದ್ರನೂ ಗುರುವಿನ ಪಕ್ಷವನ್ನು ಹಿಡಿದರು. ದೈತ್ಯಗುರುವಾದ ಶುಕ್ರನು ಬೃಹಸ್ಪತಿಯ ಮೇಲಣ ದ್ವೇಷದಿಂದ ತನ್ನ ಶಿಷ್ಯರನ್ನೆಲ್ಲಾ ಕರೆದುಕೊಂಡುಬಂದು ಚಂದ್ರನ ಪಕ್ಷವನ್ನು ಹಿಡಿದನು. ಯುದ್ಧವು ಭಯಂಕರವಾಗಲು ಸುರಾ

ಸುರರೂ ನಾಶವಾಗುವರೆಂದು, ಬೃಹಸ್ಪತಿಯ ತಂದೆಯಾದ ಅಂಗಿರಸ್ಸು ಬ್ರಹ್ಮನ ಬಳಿಗೆಹೋಗಿ ಎಲ್ಲವನ್ನೂ ಬಿನ್ನವಿಸಿದನು. ಆತನು ಬಂದು ಚಂದ್ರನನ್ನು ಛೀಮಾರಿ ಹಾಕಿ ತಾರೆಯನ್ನು ಬೃಹಸ್ಪತಿಗೆ ಕೊಡಿಸಿದನು.

ಆ ವೇಳೆಗೆ ಅವಳು ಬಸುರಿಯಾಗಿದ್ದಳು. "ಗುರುವು ಆ ಗರ್ಭವನ್ನು ಬಿಟ್ಟುಬಿಡು" ಎಂದು ರೇಗಿದನು. ತಾರೆಯು ಹೊಟ್ಟೆಯಿಂದ ತೆಗೆದುಹಾಕಿದಳು. ಆ ಗರ್ಭವು ಚಿನ್ನದಂತೆ ಹೊಳೆಯುವ ಕುಮಾರನಾಯಿತು. ಹಾಗೆ ಕಾಂತಿಮಯವಾಗಿರುವ ಮಗನನ್ನು ಕಂಡು ಗುರು ಚಂದ್ರರಿಬ್ಬರೂ 'ನನ್ನದು, ನನ್ನದು' ಎಂದು ವಿವಾದಮಾಡಿದರು. ಕೊನೆಗೆ ತಾರೆಯು 'ಈ ಮಗನು ಚಂದ್ರನಿಗೆ ಸೇರಬೇಕು' ಎಂದಳು. ಅವನೇ ಬುಧನು.

ಮನುವಿನ ಮಗಳಾದ ಇಳೆಯು ಪುರುಷನಾಗಿ ಮತ್ತೆ ಸ್ತ್ರೀಯಾದನಲ್ಲವೆ? ಆ ಇಳೆಯನ್ನು ಮದುವೆಯಾಗಿ ಬುಧನು ಪುರೂರವನನ್ನು ಪಡೆದನು. ಆತನ ರೂಪು, ಗುಣ, ಔದಾರ್ಯ, ಶೀಲ, ಸಂಪತ್ತು, ಪರಾಕ್ರಮಗಳನ್ನು ಕೇಳಿ, ಉರ್ವಶಿಯೆಂಬ ಅಪ್ಸರೆಯು ಅವನನ್ನು ಒಲಿದುಬಂದು ಮದುವೆಯಾದಳು. ಅವಳಿಗೆ ನಿತ್ಯವೂ ಬರಿಯ ತುಪ್ಪವೇ ಆಹಾರ. ಅವಳು ಎರಡು ಕುರಿಮರಿಗಳನ್ನು ಸಾಕಿದ್ದಳು. ಆ ಕುರಿಮರಿಗಳಿಗೆ ಕೊಂಚ ನೋವಾದರೂ ಅವಳು ಸೈರಿಸಲಾರಳು: "ನನ್ನನ್ನು ನೀನು ಅಸಮಯದಲ್ಲಿ ವಸ್ತ್ರಹೀನನಾಗಿ ನೋಡಬಾರದು" ಎಂದು ಹೇಳಿ ಅವನೊಡನೆ ಸುಖವಾಗಿದ್ದಳು.

ಹೀಗೆ ಬಹುದಿನವಾದ ಮೇಲೆ, ದೇವೇಂದ್ರನು ಗಂಧರ್ವರನ್ನು ಕರೆದು ಉರ್ವಶಿಯನ್ನು ಕರೆದುಕೊಂಡು ಬನ್ನಿ ಎಂದನು. ಅವರು ಒಂದು ರಾತ್ರಿ ಬಂದು ಉರ್ವಶಿಯ ಕುರಿಮರಿಗಳನ್ನು ಮಾಯೆಯಿಂದ ಹೊತ್ತುಕೊಂಡು ಹೋದರು. ಅವುಗಳು ಕಿರಿಚಿಕೊಂಡುವು. ಆಗ ಪುರೂರವನು ವಿವಸ್ತ್ರನಾಗಿದ್ದನು. ಆದರೂ ಊರ್ವಶಿಯು "ನನ್ನ ಮಕ್ಕಳನ್ನು ನೀಗುವೆಯಾ?" ಎಂದು ಬಯ್ದಳು. ಆ ಬಿರುನುಡಿಯನ್ನು

ಕೇಳಿ ಕೋಪಗೊಂಡು ಪುರೂರವನು ಇದ್ದಹಾಗೆಯೇ ಎದ್ದು ಆ ಗಂಧರ್ವರನ್ನು ಅಟ್ಟಿಕೊಂಡು ಹೋದನು. ಆಗ ಗಂಧರ್ವರು ಮಿಂಚಾಗಿ ಮಿಂಚಿ ಕುರಿಗಳನ್ನು ಬಿಟ್ಟು ಮಾಯವಾದರು. ಅವನು ವಸ್ತ್ರಹೀನನಾಗಿರುವುದನ್ನು ಕಂಡು ಉರ್ವಶಿಯು ಮಾತಿಗೆ ತಪ್ಪಿದನೆಂದು ಹೊರಟು ಹೋದಳು.

ಪುರೂರವನಿಗೆ ಉರ್ವಶಿಯ ಹುಚ್ಚು ಹಿಡಿಯಿತು. ಅವನು ಭೂಮಿಯನ್ನೆಲ್ಲಾ ಹುಚ್ಚನಂತೆ ಅಲೆದನು: ಹಾಗೆ ಎಷ್ಟೋ ದಿನ ಅಲೆದ ಮೇಲೆ ಅವಳು ಕುರುಕ್ಷೇತ್ರದಲ್ಲಿ ಸಿಕ್ಕಿದಳು. ಅರಸನು ಅವಳನ್ನು ಕಂಡು "ನೀನು ಒಲಿಯದಿದ್ದರೆ ನಾನು ಸತ್ತು ಹೋಗುವೆನು" ಎಂದು ಅತ್ತುಕೊಂಡನು. ಉರ್ವಶಿಯು, "ಇನ್ನು ಮೇಲೆ ವರ್ಷಕ್ಕೊಂದು ದಿನ ನಾನು ನಿನ್ನ ಬಳಿಗೆ ಬರುವೆನು. ನೀನು ಗಂಧರ್ವರನ್ನು ಮೆಚ್ಚಿಸಿದರೆ ನಾನು ನಿನ್ನವಳಾಗಿಯೇ ಇರುವೆನು" ಎಂದಳು. ಅವನು ಗಂಧರ್ವರನ್ನು ಮೆಚ್ಚಿಸಲು, ಅವರು ಒಂದು ಅಗ್ನಿಸ್ಥಾಲಿಯನ್ನು ಕೊಟ್ಟರು. ಅದನ್ನು ತಂದು ಅಶ್ವತ್ಥವೃಕ್ಷದಲ್ಲಿಟ್ಟು ಬಹುಕಾಲ ಆಕೆಯ ಧ್ಯಾನದಲ್ಲಿ ಇದ್ದುಬಿಟ್ಟನು.

ಹೀಗಿರುವಾಗ ಕೃತಯುಗವು ಕಳೆದು ತ್ರೇತಾಯುಗವು ಬಂತು. ಆಗ ಆತನಿಗೆ ಸ್ಥಾಲೀಪಾಕ ಮಾಡಬೇಕೆಂಬ ಬುದ್ಧಿಯು ಬಂತು. ಆಗ ಅಗ್ನಿಸ್ಥಾಲಿಯಿಟ್ಟಿದ್ದ ಕಡೆ ನೋಡಿದರೆ ಅದು ಶಮೀ (ಬನ್ನಿ) ವೃಕ್ಷವಾಗಿತ್ತು. ಅಲ್ಲಿಂದ ಅರಣಿಗಳನ್ನು ತಂದು ಮಥಿಸಲು, ಅಲ್ಲಿ ಯಜ್ಞೇಶ್ವರನ ಉದಯವಾಯಿತು. ಪುರೂರವನು ಆ ಅಗ್ನಿಯನ್ನು ದಕ್ಷಿಣಾಗ್ನಿ, ಅಹವನೀಯ, ಗಾರ್ಹಪತ್ಯ ಎಂದು ಮೂರು ಭಾಗಮಾಡಿ ಯಜ್ಞದಿಂದ ಶ್ರೀಹರಿಯನ್ನು ಆರಾಧಿಸಿ ಗಂಧರ್ವ ಲೋಕವನ್ನು ಸೇರಿ ಉರ್ವಶಿಯನ್ನು ಪಡೆದನು.

ಪೂರ್ವದಲ್ಲಿ ಎಂದರೆ ಕೃತಯುಗದಲ್ಲಿ ಸರ್ವ ವಾಙ್ಮಯವಾದ ಪ್ರಣವವೇ ವೇದವು. ನಾರಾಯಣನೊಬ್ಬನೇ ದೇವನು. ಒಂದೇ

ಅಗ್ನಿಯು. ಒಂದೇ ಜಾತಿಯು. ತ್ರೇತಾಯುಗದ ಆರಂಭದಲ್ಲಿ ಪುರೂರವನು ವೇದಗಳನ್ನೂ ಅಗ್ನಿಗಳನ್ನೂ ವಿಭಾಗಮಾಡಿದನು.

ಪುರೂರವನಿಗೆ ಆಯು ಮುಂತಾದ ಆರು ಮಂದಿ ಮಕ್ಕಳಾದರು. ಅವರಲ್ಲಿ ವಿಜಯನೆಂಬವನ ವಂಶದಲ್ಲಿ ಅವನಿಂದ ನಾಲ್ಕನೆಯವನಾಗಿ ಜಹ್ನುವು ಹುಟ್ಟಿದನು. ಆತನು ದೇವಗಂಗೆಯನ್ನು ಆಪೋಶನ ಮಾಡಿ ಕಿವಿಯಿಂದ ಬಿಟ್ಟವನು. ಅವನಿಂದ ಐದನೆಯ ತಲೆಯವನು ಕುಶನಾಭನು. ಆತನ ಮಗನು ಗಾಧಿಯು. ಆತನ ಮಗಳಾದ ಸತ್ಯವತಿಯನ್ನು ಋಚೀಕನೆಂಬ ಮಹರ್ಷಿಯು ಮೈಯೆಲ್ಲ ಬೆಳ್ಳಗಿದ್ದು ಒಂದು ಕಿವಿ ಮಾತ್ರ ಕಪ್ಪಾಗಿರುವ ಸಾವಿರ ಕುದುರೆಗಳನ್ನು ಕೊಟ್ಟು ಮದುವೆಯಾದನು. ಸತ್ಯವತಿಯೂ ಅವಳ ತಾಯಿಯೂ ಆತನನ್ನು ತಮಗೆ ಮಕ್ಕಳಾಗಬೇಕೆಂದು ಪ್ರಾರ್ಥಿಸಿದರು. ಆತನು ಎರಡು ಹವಿಸ್ಸುಗಳನ್ನು ಅಭಿಮಂತ್ರಿಸಿ ಕೊಟ್ಟನು. ತಾಯಿ ಮಗಳು ಒಬ್ಬರ ಹವಿಸ್ಸನ್ನು ಒಬ್ಬರು ಸೇವಿಸಿದರು. ಅದರಿಂದ ತಾಯಿಯು ವಿಶ್ವಾಮಿತ್ರನೆಂಬ ಮಹಾ ಬ್ರಾಹ್ಮಣನನ್ನು ಪಡೆದಳು : ಸತ್ಯವತಿಯ ಗರ್ಭದಲ್ಲಿ ಜಮದಗ್ನಿಯು ಹುಟ್ಟಿದನು. ಆತನ ಮಗನೇ ದುಷ್ಟಕ್ಷತ್ರಿಯರನ್ನೆಲ್ಲಾ ನಾಶಮಾಡಿದವನು. ಆ ಕಥೆಯನ್ನು ಕೇಳು.

ಹೈಹಯ ವಂಶದ ಕಾರ್ತವೀರ್ಯನು ದತ್ತಾತ್ರೇಯ ಮುನೀಂದ್ರನನ್ನು ಸೇವಿಸಿ ಒಂದು ಸಾವಿರ ತೋಳುಗಳನ್ನೂ ಶತ್ರುಗಳಿಗೆ ಸೋಲದಿರುವಿಕೆಯನ್ನೂ ಪಡೆದನು. ಆತನ ಇಂದ್ರಿಯ ಶಕ್ತಿ, ಮನಶ್ಶಕ್ತಿ, ಸಂಪತ್ತು, ತೇಜಸ್ಸು ವೀರ್ಯ ಯೋಗ ಬಲಾದಿಗಳು ಇನ್ನು ಯಾರಿಗೂ ಇರಲಿಲ್ಲ : ಆತನು ರಾವಣನನ್ನೂ ಸೋಲಿಸಿ ಸೆರೆಗೆ ಹಾಕಿದ್ದನು.

ಆತನೊಂದು ದಿನ ಸಂಚಾರ ಮಾಡುತ್ತ ಜಮದಗ್ನಿಯ ಆಶ್ರಮಕ್ಕೆ ಬಂದನು. ಅಲ್ಲಿ ಆ ಮುನೀಂದ್ರನು ತನ್ನಲ್ಲಿದ್ದ ಕಾಮಧೇನುವಿನಿಂದ ಬೇಕಾದ ಔತಣವನ್ನು ಮಾಡಿಸಿದನು. ಆ ಕಾಮಧೇನುವನ್ನು ಅರಸನು ತನಗೆ ಬೇಕು ಎಂದು ಅದನ್ನು ಹಿಡಿದುಕೊಂಡು ಹೋದನು.

ಅದೇ ಕಾರಣವಾಗಿ ಪರಶುರಾಮನಿಗೂ ಕಾರ್ತವೀರ್ಯನಿಗೂ ಯುದ್ಧವಾಗಿ ಅರಸನು ಮಡಿದನು.

ಅನಂತರ ಪರಶುರಾಮನು ಈ ರಾಜಹತ್ಯವನ್ನು ಕಳೆದುಕೊಳ್ಳಲು ಸಂವತ್ಸರ ಕಾಲ ತೀರ್ಥಯಾತ್ರೆಯನ್ನು ಮಾಡಿ ಬಂದನು. ಕಾರಣಾಂತರದಿಂದ ಜಮದಗ್ನಿಯು ಮಕ್ಕಳನ್ನು ನಿಮ್ಮ ತಾಯಿಯನ್ನು ಕೊಲ್ಲಿರಿ ಎಂದನು. ಅವರು ಒಪ್ಪಲಿಲ್ಲ. ಪರಶುರಾಮನು ತಂದೆಯಪ್ಪಣೆಯಂತೆ ತಾಯನ್ನೂ ಸಹೋದರರನ್ನೂ ಕೊಂದನು. ಮತ್ತೆ ಜಮದಗ್ನಿಯು ಪ್ರಸನ್ನನಾಗಿ ಅವನಿಗೆ ವರವನ್ನು ಕೊಟ್ಟು ತಾಯನ್ನೂ ಸೋದರರನ್ನೂ ಬದುಕಿಸಿದನು.

ಕಾರ್ತವೀರ್ಯನ ಮಕ್ಕಳು ಸಮಯವನ್ನು ಸಾಧಿಸಿ ರಾಮನಿಲ್ಲದಾಗ ಜಮದಗ್ನಿಯ ಆಶ್ರಮಕ್ಕೆ ಬಂದು ಆತನ ತಲೆಯನ್ನು ಕಡಿದರು. ರಾಮನು ಬಂದು ಅದನ್ನು ತಿಳಿದು ರೇಗಿ, ಈ ದುಷ್ಟ ಕ್ಷತ್ರಿಯರ ವಂಶವೇ ಇಲ್ಲದಂತೆ ಮಾಡುವೆನು ಎಂದು ಹೊರಟು ಇಪ್ಪತ್ತೊಂದು ಸಲ ಹುಡುಕಿ ಹುಡುಕಿ ದುಷ್ಟ ಕ್ಷತ್ರಿಯರನ್ನು ಕೊಂದನು. ಆ ಕ್ಷತ್ರಿಯರ ರಕ್ತದಿಂದ ಸ್ಯಮಂತ ಪಂಚಕವೆಂಬ ಕ್ಷೇತ್ರದಲ್ಲಿ ಒಂಬತ್ತು ಮಡುಗಳಾಯಿತು. ಅನಂತರ ಸರಸ್ವತೀ ತೀರದಲ್ಲಿ ಯಾಗಮಾಡಿ ಭೂಮಿಯನ್ನೆಲ್ಲಾ ಬ್ರಾಹ್ಮಣರಿಗೆ ದಾನ ಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡನು.

ಪುರೂರವನ ಮಗನಾದ ಆಯುವಿಗೆ ನಹುಷನೇ ಆದಿಯಾದ ಐವರು ಮಕ್ಕಳಾದರು. ಆ ಐವರ ವಂಶವೂ ಬೇಕಾದ ಹಾಗೆ ಬೆಳೆಯಿತು. ಆಶ್ವಲಾಯನರ ಕುಲಪತಿಯಾದ ಶೌನಕ, ಆಯುರ್ವೇದ ಪ್ರವರ್ತಕನಾದ ಧನ್ವಂತರಿ, ಮೊದಲಾದವರು ಈ ಕುಲದವರು. ಆಯುವಿನ ಮಗನಾದ ರಜಿಯು ದೈತ್ಯರನ್ನು ಗೆದ್ದು ಸ್ವರ್ಗವನ್ನು ಇಂದ್ರನಿಗೆ ಕೊಟ್ಟನು. ಇಂದ್ರನು ಆ ಸ್ವರ್ಗ ಸಾಮ್ರಾಜ್ಯವನ್ನು ತಾನು ಕಾಪಾಡಲಾರನೆಂದು ರಜಿಗೇ ಕೊಟ್ಟನು. ರಜಿಯ ಅನಂತರದಲ್ಲಿ ಆತನ ಪುತ್ರರು ಇಂದ್ರನಿಗೆ ಸಾಮ್ರಾಜ್ಯವನ್ನು ಕೊಡುವುದಿಲ್ಲ ಎಂದರು.

ಆಗ ದೇವಗುರುವು ಅಭಿಚಾರ (ಮಾಟ) ಮಾಡಿ ಅವರಿಗೆ ಬುದ್ಧಿ ಕೆಡುವಂತೆ ಮಾಡಿದನು. ಅವರು ಬುದ್ಧಿ ಕೆಟ್ಟು ಅಧರ್ಮವನ್ನು ಮಾಡಿದರು. ಮಹೇಂದ್ರನು ಅವರನ್ನು ಆಗ ಸಂಹರಿಸಿದನು.

ನಹುಷನಿಗೆ ಯಯಾತಿ ಮುಂತಾದ ಆರು ಮಂದಿ ಮಕ್ಕಳಾದರು. ದೇವೇಂದ್ರನು ವೃತ್ರವಧೆಮಾಡಿ ಆ ಪಾಪದಿಂದ ಭೀತನಾಗಿ ಓಡಿಹೋದಾಗ ನಹುಷನು ಇಂದ್ರನಾಗಿದ್ದನು. ಇಂದ್ರಪತ್ನಿಯಾದ ಶಚಿಯನ್ನು ಕಾಮಿಸಿದನು. ಅದೇ ಕಾರಣವಾಗಿ, ಬ್ರಾಹ್ಮಣ ಶಾಪವನ್ನು ಪಡೆದು ಅಜಗರನಾದನು.

ಯಯಾತಿಯು ಶುಕ್ರಾಚಾರ್ಯನ ಮಗಳು ದೇವಯಾನಿಯನ್ನೂ ವೃಷಪರ್ವನ ಮಗಳು ಶರ್ಮಿಷ್ಠೆಯನ್ನೂ ಮದುವೆಯಾಗಿ ಸಾವಿರಾರು ಕಾಲ ಧರ್ಮದಿಂದ ರಾಜ್ಯವಾಳಿದನು. ದೇವಯಾನಿಯು ಬ್ರಾಹ್ಮಣ ಕನ್ಯೆಯಾದರೂ ಬೃಹಸ್ಪತಿಯ ಮಗನಾದ ಕಚನ ಶಾಪದಿಂದ ಕ್ಷತ್ರಿಯನಾದ ಯಯಾತಿಯ ಹೆಂಡತಿಯಾದಳು. ಅಸುರ ಚಕ್ರವರ್ತಿಯಾದ ವೃಷಪರ್ವನ ಮಗಳು ಶರ್ಮಿಷ್ಠೆಯು ದೇವಯಾನಿಯೊಡನೆ ಕಲಹ ಮಾಡಿ ಸೋತು ಅವಳಿಗೆ ದಾಸಿಯಾದಳು. ಆತನಿಗೆ ದೇವಯಾನಿಯಲ್ಲಿ ಯದು, ತುರ್ವಸು ಎಂಬ ಇಬ್ಬರು, ಶರ್ಮಿಷ್ಠೆಯಲ್ಲಿ ದ್ರುಹ್ಯ, ಅನು, ಪೂರು, ಎಂಬ ಮೂವರು ಮಕ್ಕಳಾದರು.

ಶರ್ಮಿಷ್ಠೆಯ ಮೇಲೆ ಕ್ರೋಧದಿಂದ ದೇವಯಾನಿಯು ತಂದೆಯ ಬಳಿ ಹೋಗಿ ಗಂಡನಿಗೆ ಮುಪ್ಪುಬರುವಂತೆ ಶಾಪ ಕೊಡಿಸಿದಳು. ಮತ್ತೆ ಶುಕ್ರಾಚಾರ್ಯನೇ ದಯಮಾಡಿ "ನಿನ್ನ ಮಕ್ಕಳಲ್ಲಿ ಯಾರಾದರೂ ನಿನ್ನ ಮುಪ್ಪು ತೆಗೆದುಕೊಂಡು ತನ್ನ ಯೌವನವನ್ನು ಕೊಟ್ಟರೆ, ನೀನು ಅದನ್ನು ಉಪಯೋಗಿಸಿಕೊ" ಎಂದನು. ಮಿಕ್ಕವರೆಲ್ಲರೂ ಆಗುವುದಿಲ್ಲವೆಂದರು. ಪುರುವು ಮಾತ್ರ ತನ್ನ ಯೌವನವನ್ನು ತಂದೆಗೆ ಕೊಟ್ಟು ಆತನ ಮುಪ್ಪನ್ನು ವಹಿಸಿಕೊಂಡನು.

ಆತನು ಬಹುಕಾಲ ಸ್ತ್ರೀಲೋಲನಾಗಿದ್ದು ಕೊನೆಗೆ ಅದರಲ್ಲಿ

ಬೇಸರಪಟ್ಟನು "ಛೀ, ಕಾಮವನ್ನು ಎಷ್ಟು ಸೇವಿಸಿದರೂ, ತೃಪ್ತ ವಾಗುವುದಿಲ್ಲ. ತುಪ್ಪವನ್ನು ಸುರಿದರೆ ಪ್ರಜ್ವಲಿಸುವ ಅಗ್ನಿಯಂತೆ ಅದು ಇನ್ನೂ ಹೆಚ್ಚುವುದು" ಎಂದು ತಿಳಿದು, ಪುರುವಿನ ಯೌವನವನ್ನು ಅವನಿಗೇ ಕೊಟ್ಟು ತಾನು ಮುದುಕನಾದನು. ತಂದೆಯ ವರದಿಂದ ಪುರುವಿನ ವಂಶವು ಬೇಕಾದಹಾಗೆ ಬೆಳೆಯಿತು.

ಪುರುವಿನಿಂದ ಹದಿನೇಳನೆಯವನು ದುಷ್ಯಂತನು. ಆತನು ಮೇನಕಾ ವಿಶ್ವಾಮಿತ್ರರ ಮಗಳಾಗಿ ಕಣ್ವಮುನಿಯಿಂದ ಪಾಲಿತಳಾದ ಶಕುಂತಲೆಯನ್ನು ಮದುವೆಯಾಗಿ ಭರತನೆಂಬ ಪುತ್ರನನ್ನು ಪಡೆದನು. ಆತನು ಶ್ರೀಹರಿಯಂಶದಿಂದ ಹುಟ್ಟಿದವನು. ಆತನು ಸಾವಿರಾರು ಅಶ್ವಮೇಧಗಳನ್ನು ಮಾಡಿದ ಮಹಾನುಭಾವನು. ಹದಿನಾಲ್ಕು ಲಕ್ಷ ಆನೆಗಳನ್ನು ಚಿನ್ನದಿಂದ ಅಲಂಕರಿಸಿ ದಾನಮಾಡಿದನು.

ಆತನ ವಂಶದಲ್ಲಿ ಆತನಿಂದ ಐದನೆಯವನಾಗಿ ರಂತಿದೇವನು ಹುಟ್ಟಿದನು. ಆತನು ಪರಮವಿರಾಗಿಯು. ತಾನಾಗಿ ದೊರೆತಷು ಮಾತ್ರದಿಂದ ಜೀವಿಸುತ್ತಿದ್ದನು. ಹಸಿದು ಬಂದವರಿಗೆ ತನ್ನಲ್ಲಿ ಇದ್ದುದ ನ್ನೆಲ್ಲಾ ಕೊಟ್ಟುಬಿಡುವನು. ಹೀಗಿರುವ ಆತನಿಗೆ ಒಂದು ಸಲ ನಲವ ತ್ತೆಂಟುದಿನ ಏನೂ ಸಿಕ್ಕಲಿಲ್ಲ. ನಲವತ್ತೊಂಭತ್ತನೆಯ ದಿನ ಕೊಂಚ ಆಹಾರ ಸಾಮಾಗ್ರಿಗಳು ದೊರೆತುವು. ಆ ವೇಳೆಗೆ ಪ್ರಾಣವು ಗಂಟಲಿಗೆ ಬರುವ ಹಾಗಾಗಿತ್ತು. ಆತನು ಊಟಕ್ಕೆ ಕುಳಿತುಕೊಳ್ಳುವ ವೇಳೆಗೆ ಒಬ್ಬ ಅತಿಥಿಯು ಬಂದನು. ಎಲ್ಲರೂ ಭಗವತ್ಸ್ವರೂಪವೆಂದು ತಿಳಿ ದಿದ್ದ ರಂತಿದೇವನು ಅವನಿಗೆ ತನ್ನ ಭೋಜನವನ್ನು ಕೊಟ್ಟನು ಮಿಕ್ಕ ಆಹಾರವನ್ನು ತೆಗೆದುಕೊಳ್ಳುವಷ್ಟರಲ್ಲಿ ಒಬ್ಬ ಶೂದ್ರನು ಅತಿಥಿಯಾಗಿ ಬಂದನು. "ನೀನೇ ಶ್ರೀಹರಿ" ಯೆಂದು ಇದ್ದದ್ದನ್ನು ಅವನಿಗೆ ಬಡಿಸಿದನು. ಇನ್ನೊಬ್ಬನು ನಾಯಿಗಳೊಡನೆ ಬಂದು "ನಾವು ಬಹಳ ಹಸಿದಿದ್ದೇವೆ. ನಮಗನ್ನವನ್ನಿಡು" ಎಂದು ಕೇಳಿಕೊಂಡನು. ಉಳಿದಿದ್ದ ಅನ್ನವನ್ನೆಲ್ಲಾ

ಅತಿ ಮರ್ಯಾದೆಯಿಂದ ಅವನಿಗೆ ಕೊಟ್ಟು ಆ ನಾಯಿಗಳಿಗೂ ಅವನಿಗೂ ನಮಸ್ಕಾರಮಾಡಿದನು.

ಇನ್ನಷ್ಟು ನೀರು ಉಳಿದಿತ್ತು. ಅದನ್ನು ಕುಡಿಯಬೇಕು ಎನ್ನುವುದರೊಳಗಾಗಿ ಒಬ್ಬ ಚಂಡಾಲನು ಬಂದು "ನಾನು ನೀಚ. ನನಗೆ ಬಾಯಾರಿಕೆ. ನೀರು ಕೊಟ್ಟು ಕಾಪಾಡು" ಎಂದನು. ಆತನು "ಕುಡಿ ನಿನಗೆ ತೃಪ್ತಿಯಾಗಲಿ. ಈ ತೆರದ ಕಷ್ಟವನ್ನು ಕಳೆಯುವುದೇ ನನಗೆ ಅತಿ ಪ್ರಿಯವಾದುದು. ಮೋಕ್ಷವೂ ಅದಕ್ಕಿಂತ ಹೆಚ್ಚಿನದಲ್ಲ" ಎಂದು ಆ ನೀರನ್ನು ಆತನಿಗೆ ಕೊಟ್ಟುಬಿಟ್ಟನು.

ಆಗ ಬ್ರಹ್ಮಾದಿಗಳೆಲ್ಲರೂ ಆತನಿಗೆ ದರ್ಶನ ಕೊಟ್ಟು ತಾವೇ ಆ ಅತಿಥಿಗಳ ರೂಪದಿಂದ ಬಂದಿದ್ದೆವೆಂದು ಹೇಳಿ ಅವನಿಗೆ ಅನುಗ್ರಹ ಮಾಡಿದರು. ಆತನು ಅವರ ಅನುಗ್ರಹಗಳನ್ನು ಪರಿಗ್ರಹಿಸದೆ, ಪರ ವಾಸುದೇವನಲ್ಲಿ ಮನಸ್ಸಿಟ್ಟು ಮೋಕ್ಷವನ್ನು ಪಡೆದನು.

ಆ ಭರತನ ಕುಲದಲ್ಲಿಯೇ ಪ್ರತೀಪನು ಹುಟ್ಟಿದನು. ಆತನ ಮಗನು ಶಂತನುವು. ಆತನು ಮುದುಕರನ್ನು ಮುಟ್ಟಿದರೂ ಅವರು ತರುಣರಾಗುತ್ತಿದ್ದರು. ಆತನಿಗೆ ಗಂಗೆಯಲ್ಲಿ ಭೀಷ್ಮನು ಆದನು. ಸತ್ಯವತಿಯಲ್ಲಿ ವಿಚಿತ್ರವೀರ್ಯ ಚಿತ್ರಾಂಗದರೆಂಬ ಮಕ್ಕಳಾದರು. ಅವರ ಮಕ್ಕಳು ಧೃತರಾಷ್ಟ್ರ ಪಾಂಡುಗಳು. ಧೃತರಾಷ್ಟ್ರನ ಮಕ್ಕಳು ಕೌರವರು ಪಾಂಡುವಿನ ಮಕ್ಕಳು ಪಾಂಡವರು. ಪಾಂಡವರ ಅರ್ಜುನನಿಗೆ ಅಭಿಮನ್ಯುವು ಮಗನು. ನಿನ್ನ ಮಗನಾದ ಜನಮೇಜಯನಾದ ಮೇಲೆ ಮುಂದೆ ಇಪ್ಪತ್ತುನಾಲ್ಕನೆಯ ತಲೆಯವರೆಗೂ ನಿಮ್ಮ ವಂಶವು ನಡೆಯುವುದು. ಕೊನೆಯ ಕ್ಷೇಮಕನಾದ ಮೇಲೆ ಕ್ಷತ್ರಕುಲವು ನಾಶವಾಗುವುದು. ಪೂರುವಿನ ವಂಶದ ಬೃಹದ್ರಥರು ಭೂಮಿಯನ್ನು ಸಾವಿರಾರು ವರ್ಷ ಆಳುವರು.

ಪೂರುವಿನ ಅಣ್ಣಂದಿರ ವಂಶಗಳೂ ಬೆಳೆದುವು. ಅವರಲ್ಲಿ ಯದುವಿನ ವಂಶದಲ್ಲಿ ಪರಮಾತ್ಮನು ಮಾನವನಾಗಿ ಹುಟ್ಟಿದನು. ಆ ಯದು

ವಿನ ವಂಶವು ಆ ಕಾರಣದಿಂದ ಪರಮ ಪವಿತ್ರವಾದುದು. ಆ ವಂಶದ ಕಥೆಯನ್ನು ಕೇಳಿದವರ ಸಕಲ ಪಾಪಗಳೂ ನಿವಾರಣವಾಗುವುವು. ಯದುವಿನ ವಂಶದಲ್ಲಿ ಕಾರ್ತವೀರ್ಯನು ಪ್ರಸಿದ್ಧನಾದವನು. ಆತನ ಸ್ಮರಣಮಾತ್ರದಿಂದಲೇ ನಷ್ಟವಾದ ವಸ್ತುಗಳೆಲ್ಲ ಲಭಿಸುವುವು.

ಇದೇ ವಂಶದಲ್ಲಿ ಆಹುಕನಿಗೆ ದೇವಕ ಉಗ್ರಸೇನ ಎಂಬ ಇಬ್ಬರು ಮಕ್ಕಳಾದರು. ದೇವಕನಿಗೆ ದೇವಕಿ ಮೊದಲಾದ ಏಳು ಮಂದಿ ಹೆಣ್ಣು ಮಕ್ಕಳಿದ್ದರು. ಚಿತ್ರರಥನ ಮಗನಾದ ವಿದೂರಥನಿಗೆ ವಸುದೇವ ಮುಂತಾದ ಹತ್ತುಮಂದಿ ಮಕ್ಕಳಾದರು. ಆ ವಸುದೇವನ ಜನ್ಮಕಾಲ ದಲ್ಲಿ ದೇವದುಂದುಭಿಗಳೂ ಆನಕ (ಇತರ) ವಾದ್ಯಗಳೂ ಮೊಳಗಿದುವು ಎಂದು ಆತನಿಗೆ ಆನಕದುಂದುಭಿಯೆಂದು ಹೆಸರಾಯಿತು. ಈತನ ತಂಗಿಯೇ ಕುಂತಿಯು. ಈ ವಸುದೇವನು ದೇವಕನ ಮಕ್ಕಳು ಏಳು ಮಂದಿಯನ್ನೂ ಮದುವೆಯಾದನು. ಈ ವಸುದೇವನ ತಂಗಿಯರಾದ ಶ್ರುತದೇವಿ, ಶ್ರುತಶ್ರವಸೆಯರಲ್ಲಿ ದಂತವಕ್ತ್ರ ಶಿಶುಪಾಲರು ಹುಟ್ಟಿದರು. ಉಗ್ರಸೇನನ ಮಗನೇ ಕಂಸನು.

ವಸುದೇವನು ದೇವಕಿಯಲ್ಲಿ ಎಂಟು ಮಂದಿ ಪುತ್ರರನ್ನು ಪಡೆದನು. ಅವರಲ್ಲಿ ಎಂಟನೆಯವನು ಶ್ರೀಕೃಷ್ಣನು. ಆತನೇ ಭೂಭಾರವನ್ನು ಇಳುಹುವುದಕ್ಕೆ ಹುಟ್ಟಿದ ಮಹಾವಿಷ್ಣುವು.

# ಶ್ರೀ ಕೃಷ್ಣಾವತಾರವು

ರಾಜನೆ, ವಾಸುದೇವನ ಕಥೆಯು ಗಂಗಾಸ್ನಾನದಂತೆ ಹೇಳಿದವನು ಕೇಳಿದವನು ಹೇಳಿಸಿದವನು ಎಲ್ಲರನ್ನೂ ಪಾವನಮಾಡುವುದು. ಮುಂದಿನ ಕಥೆಯನ್ನು ಕೇಳು.

ಭೂದೇವಿಯು ತನ್ನಲ್ಲಿ ದುಷ್ಟಕ್ಷತ್ರಿಯರಾಗಿ ಹುಟ್ಟಿದ ರಾಕ್ಷಸರ ಭಾರದಿಂದ ಬಹಳ ಬಳಲಿದಳು. ಆಕೆಯು ಗೋರೂಪವನ್ನು ಧರಿಸಿ ಚತುರ್ಮುಖ ಬ್ರಹ್ಮನ ಬಳಿಗ ಹೋಗಿ ತನ್ನ ದುಃಖವನ್ನು ಹೇಳಿಕೊಂಡಳು. ಆತನು ದೇವತೆಗಳೆಲ್ಲರನ್ನೂ ಆಕೆಯನ್ನೂ ಕರೆದುಕೊಂಡು ಹೋಗಿ ವೈಕುಂಠಕ್ಕೆ ಮಹಾವಿಷ್ಣುವಿಗ ಎಲ್ಲವನ್ನೂ ಬಿನ್ನವಿಸಿದನು. ಆತನು "ನಾನು ದೇವಕೀವಸುದೇವರ ಮಗನಾಗಿ ಹುಟ್ಟಿ ಭೂಭಾರವನ್ನು ಇಳುಹುವೆನು. ದೇವತೆಗಳೆಲ್ಲರೂ ಸಹಾಯಕರಾಗಿ ಹುಟ್ಟಲಿ" ಎಂದು ಹೇಳಿ ಭೂಮಿದೇವಿಗೆ ಅಭಯಪ್ರದಾನಮಾಡಿದನು.

ಯಾದವರಿಗೆ ಒಡೆಯನಾದ ಉಗ್ರಸೇನನು ಮಧುರಾಪುರದಲ್ಲಿ ಆಳುತ್ತಿದ್ದನು. ಅವನ ಮಗನು ಕಂಸನು ಅವನು ತಂದೆಯ ಮಾತನ್ನು ಕೇಳದ ದುಷ್ಟನು. ಅವನು ತಾನೇ ರಾಜನೆಂಬಂತೆ ನಡೆಯುತ್ತಿದ್ದನು. ಅವರ ಚಿಕ್ಕಪ್ಪನಾದ ದೇವಕನ ಮಗಳು ದೇವಕಿಗೆ ಮದುವೆಯಾಗಬೇಕಾಗಿತ್ತು. ಯಾದವರಲ್ಲಿ ಭೋಜ, ವಾರ್ಷ್ಣೇಯ, ಮೊದಲಾದ ಗುಂಪುಗಳು ಉಂಟು. ಅದರಲ್ಲಿ ಕಂಸನು ಭೋಜನು. ಅವನು ತನ್ನ ತಂಗಿಯನ್ನು ವೃಷ್ಣಿಕುಲದ ವಸುದೇವನಿಗೆ ಕೊಟ್ಟು ಮದುವೆಮಾಡಿದನು.

ಮದುವೆಯಾದ ಮೇಲೆ ದಂಪತಿಗಳಿಗೆ ಮೆರವಣಿಗೆಯಾಯಿತು. ಮಧುರೆಯಲ್ಲಿ ಸಂಭ್ರಮವೋ ಸಂಭ್ರಮ ಚಿನ್ನದ ರಥದಲ್ಲಿ ದಂಪತಿಗಳು ಕುಳಿತಿದ್ದಾರೆ. ಕಂಸನು ತಾನೇ ರಥವನ್ನು ನಡೆಯಿಸುತ್ತಿದ್ದಾನೆ.

ಥಟ್ಟನೆ ಆಕಾಶದಲ್ಲಿ ಏನೋ ವಾಣಿಯು ನುಡಿಯಿತು. ಎಲ್ಲರೂ ಕಿವಿಗೊಟ್ಟು ಕೇಳಿದರು. " ಮೂರ್ಖ, ಇವಳ ಎಂಟನೆಯ ಮಗನು ನಿನ್ನನ್ನು ಕೊಲ್ಲುವನು. " ಎಂದು ಸ್ಪಷ್ಟವಾಗಿ ನುಡಿದುದನ್ನು ಎಲ್ಲರೂ ಕೇಳಿದರು. ಕಂಸನು ಕತ್ತಿಯನ್ನು ಎಳೆದು ದೇವಕಿಯನ್ನು ಕೊಲ್ಲುವೆನೆಂದು ತುರುಬನ್ನು ಹಿಡಿದನು.

ವಸುದೇವನು ಅಡ್ಡವಾದನು "ಮದುಮಗಳನ್ನು ಕೊಲ್ಲುವುದೇ? ಎಲೈ ವೀರ, ಮೃತ್ಯುವು ದೇಹವು ಬಂದಾಗಲೇ ಬಂದಿರುವುದು. ಈಗಲೋ ಇನ್ನು ನೂರುವರ್ಷಕ್ಕೋ ಬಂದೇ ತೀರಬೇಕಾದುದಲ್ಲವೆ ಆ ಮೃತ್ಯು? ನೀನು ಇವಳನ್ನು ಕೊಲ್ಲಬೇಡ. ಇವಳಿಗಾದ ಮಕ್ಕಳನ್ನೆಲ್ಲಾ ನಿನಗೆ ನಾನು ತಂದುಕೊಡುವೆನು. ಇವಳ ಮಕ್ಕಳಿಂದ ನಿನಗೆ ಭಯವಲ್ಲದೆ ಇವಳಿಂದ ಅಲ್ಲವಲ್ಲ? " ಎಂದು ನಯವಾಗಿ ಹೇಳಿ ಕಂಸನನ್ನು ಒಪ್ಪಿಸಿದನು. ದೇವಕಿಯ ಕೊಲೆಯು ತಪ್ಪಿತು.

ವರ್ಷದಲ್ಲಿ ದೇವಕಿಯು ಬಸುರಾಗಿ ಒಂದು ಗಂಡು ಮಗುವನ್ನು ಹೆತ್ತಳು. ವಸುದೇವನು ಬಹುಕಷ್ಟದಿಂದ ದೇವಕಿಯನ್ನೊಪ್ಪಿಸಿ ಆ ಮಗುವನ್ನು ತೆಗೆದುಕೊಂಡುಹೋಗಿ ಕಂಸನಿಗೆ ಕೊಟ್ಟನು. ಕಂಸನು, ವಸುದೇವನ ಸತ್ಯಪರತೆಯನ್ನು ಕಂಡು ಸಂತೋಷಪಟ್ಟು "ಈ ಬಾಲಕನಿಂದ ನನಗೆ ಭಯವಿಲ್ಲ. ಭಯವಿರುವುದು ಎಂಟನೆಯ ಗರ್ಭದಿಂದಲ್ಲವೆ? ಈ ಮಗುವು ಎಲ್ಲಾದರೂ ಚೆನ್ನಾಗಿರಲಿ.' ಎಂದು ಕಳುಹಿಸಿಕೊಟ್ಟನು.

ಒಮ್ಮೆ ನಾರದರು ಮಥುರೆಗೆಬಂದರು. ಮಾತನಾಡುತ್ತ "ಕಂಸ, ನೀನು ಕಾಣೆ, ನೀನೂ ನಿನ್ನ ಕಡೆಯವರೂ ರಾಕ್ಷಸರು. ಈ ವೃಷ್ಣಿ ವಸುದೇವ, ಅವನ ಕಡೆಯವರೆಲ್ಲರೂ ದೇವತೆಗಳು. ಅವರಿಂದ ನಿನಗೆ ಭಯವು ತಪ್ಪಿದ್ದಲ್ಲ. ನಿನ್ನ ಇಷ್ಟ " ಎಂದು ಹೇಳಿಹೋದರು. ಕಂಸನು ಯೋಚಿಸಿ ದೇವಕಿ ವಸುದೇವರನ್ನು ಸೆರೆಯಲ್ಲಿಟ್ಟನು. ಅವರ ಮೊದ

ಲನೆಯ ಮಗುವನ್ನು ಕೊಲ್ಲಿಸಿದನು ಯಾದವರಲ್ಲಿ ವಿಷ್ಣುವು ಹುಟ್ಟು ವನು ಎಂದುಕೊಂಡು ಅವರ ಮನೆಗಳಲ್ಲಿ ಹುಟ್ಟುವ ಮಕ್ಕಳನ್ನೆಲ್ಲಾ ಕೊಲ್ಲಿಸುತ್ತ ಬಂದನು. ಅನೇಕ ಯಾದವ ಕುಟುಂಬಗಳು ಕಂಸನಿಗೆ ಹೆದರಿ ದೇಶಾಂತರಗಳಿಗೆ ಹೊರಟುಹೋದರು. ಕೆಲವರು ಮಾತ್ರ ಕಂಸನನ್ನೇ ಅನುಸರಿಸಿಕೊಂಡು ಮಥುರೆಯಲ್ಲಿಯೇ ಇದ್ದರು.

ದೇವಕಿಯು ವರ್ಷಕ್ಕೊಂದರಂತೆ ಮಕ್ಕಳನ್ನು ಹೆತ್ತಳು. ಆರು ಮಕ್ಕಳು ಕಂಸನಿಗೆ ಬಲಿಯಾದರು. ಏಳನೆಯ ಗರ್ಭಕ್ಕೆ ಅನಂತ ನೆಂಬ ವಿಷ್ಣುವಿನ ಹಂತದ ನಾಗೇಂದ್ರನು ಬಂದನು. ಯೋಗಮಾಯಾ ದೇವಿಯು ಮಹಾವಿಷ್ಣುವಿನ ಅಪ್ಪಣೆಯಿಂದ ಆ ಗರ್ಭವನ್ನು ದೇವಕಿ ಯಿಂದ ತೆಗೆದು ವಸುದೇವನ ಮೊದಲನೆಯ ಹೆಂಡತಿಯಾದ ರೋಹಿಣಿ ಯಲ್ಲಿಟ್ಟಳು. ಅಲ್ಲಿ ಅದು ಬಲರಾಮನಾಯಿತು.

ಕಾಲವು ಬಂತು. ವಸುದೇವ ದೇವಕಿಯರು ಭಕ್ತಿಯಿಂದ ಆರಾ ಧಿಸುತ್ತಿದ್ದ ವಿಷ್ಣುವು ಅವರಲ್ಲಿ ಅನುಗ್ರಹಮಾಡಿದನು. ದೇವಕಿಯು ಗರ್ಭವನ್ನು ಧರಿಸಿದಳು. ಗರ್ಭಿಣಿಯು ಹೊಸ ತೇಜಸ್ಸಿನಿಂದ ವಿರಾಜಿ ಸಿದಳು. ಕಂಸನಿಗೂ ಆಕೆಯ ತೇಜಸ್ಸನ್ನು ಕಂಡು ದಿಗಿಲಾಯಿತು. ಅವನಿಗೆ “ಈಕೆಯು ಈಗ ವಿಶೇಷ ತೇಜಸ್ಸಿನಿಂದ ಕೂಡಿರುವಳು. ಈ ವಿಶೇಷ ತೇಜಸ್ಸು ಮಹಾವಿಷ್ಣುವಿನದೇ ಇರಬೇಕು. ಹಾಗಲ್ಲಿ ನಾನೇಕೆ ಇವಳನ್ನು ಕೊಂದುಬಿಡಬಾರದು ?” ಎನ್ನಿಸಿತು. ಆದರೂ ಹಾಗೆಮಾಡದೆ, ಇದೆಲ್ಲ ಆ ಮಾಯಾವಿಯಾದ ವಿಷ್ಣುವಿನ ಆಟ ಎಂದು ಆತನ ಮೇಲೆ ಅಪಾರವಾದ ವೈರವನ್ನು ಮಾಡಿದನು. ಆ ವೈರದಲ್ಲಿ ಅವನಿಗೆ ಯಾವಾಗಲೂ ವಿಷ್ಣುವಿನದೇ ಯೋಚನೆಯಾಯಿತು. ಕುಳಿ ತಿರಲಿ, ನಿಂತಿರಲಿ, ಮಲಗಿರಲಿ, ಓಡಾಡುತ್ತಿರಲಿ, ಏನುಮಾಡುತ್ತಿದ್ದ ರೂ ಅವನಿಗೆ ವಿಷ್ಣುವಿನ ಚಿಂತೆಯೇ ಆಗಿ, ಎಲ್ಲಿನೋಡಿದರಲ್ಲಿ ಅವನಿಗೆ ವಿಷ್ಣುವು ಕಾಣುತ್ತಾ ಬಂದನು.

ಇತ್ತ ಚತುರ್ಮುಖನು ದೇವತೆಗಳನ್ನೆಲ್ಲಾ ಕರೆದುಕೊಂಡು ಬಂದು ದೇವಕೀ ಗರ್ಭದಲ್ಲಿದ್ದ ಮಹಾವಿಷ್ಣುವನ್ನು ಹೊಗಳಿದನು. "ದೇವ, ನಮಗೆ ಮಾತುಕೊಟ್ಟಿದ್ದಂತೆ ನೀನು ದೇವಕಿಯ ಗರ್ಭಕ್ಕೆ ಬಂದೆ. ಲೋಕವೆಲ್ಲವೂ, ಲೋಕದಲ್ಲಿರುವ ಜಡಗಳೂ ಪ್ರಾಣಿಗಳೂ ಸರ್ವವೂ ಆಗಿರುವುದು ಆಕಾಶ, ವಾಯು, ತೇಜಸ್ಸು, ಜಲ, ಭೂಮಿ, ಯೆಂಬ ಪಂಚಭೂತಗಳಿಂದ. ಆ ಪಂಚಭೂತಗಳು ಆಗಿರುವುದು ನಿನ್ನಿಂದ. ನೀನೊಬ್ಬನೇ ಸರ್ವೇಶ್ವರನು. ಈ ಜಗತ್ತೆಂಬ ಅನಾದಿ ಯಾದ ವೃಕ್ಷಕ್ಕೆ ನಿನ್ನ ಮಾಯೆಯೇ ಮೂಲವು, ಅದಕ್ಕೆ ಸುಖದುಃಖ ಗಳೆಂಬ ಎರಡು ಹಣ್ಣುಗಳು. ಸತ್ವ ರಜಸ್ಸು ತಮಸ್ಸು ಎಂಬ ಮೂರು ತಾಯಿಬೇರುಗಳು. ಇದಕ್ಕೆ ಯಾವಾಗಲೂ ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ರುಚಿಗಳು. ಹತ್ತು ಪ್ರಾಣಗಳೆಂಬ ಎಲೆಗಳು. ಜೀವ ಈಶ್ವರರೆಂಬ ಎರಡು ಹಕ್ಕಿಗಳು ಇದನ್ನು ಆಶ್ರಯಿಸಿರುವುವು. ಇಂತಹ ಸಂಸಾರ ವೃಕ್ಷವನ್ನು ಹುಟ್ಟಿಸುವವನೂ ಕಾಪಾಡುವವನೂ ನಾಶಗೊಳಿಸುವವನೂ ನೀನೇ! ಎಲೈ ಶ್ರೀಹರಿಯೆ, ಈಗ ನಮ್ಮ ಭಾಗ್ಯವು ಲಭಿಸಿತು. ನಿನ್ನ ಅವತಾರವಾಯಿತಾಗಿ ಈ ಭೂಮಿಯ ಭಾರವು ಕಳೆಯಿತು. ಹಿಂದೆ ಮತ್ಸ್ಯಾದಿ ಅವತಾರಗಳನ್ನೆತ್ತಿ ನಮ್ಮ ನ್ನೆಲ್ಲಾ ಕಾಪಾಡಿದಂತೆ ಈಗಲೂ ಅವತರಿಸಿ ಭೂಭಾರವನ್ನು ಇಳುಹು" ಎಂದು ಪ್ರಾರ್ಥನೆಮಾಡಿ ಎಲ್ಲರೊಡನೆ ಹಿಂತಿರುಗಿದನು.

ಭಗವಂತನು ಭೂಮಿಯಲ್ಲಿಅವತಾರಮಾಡುವ ಕಾಲವು ಬಂತು. ದಿಕ್ಕುಗಳು ನಿರ್ಮಲವಾಗಿ ಬೆಳಗಿದುವು: ನದಿಗಳಲ್ಲ ಜಲವು ತಿಳಿಯಾ ಯಿತು. ತಂಗಾಳಿಯು ಸುಗಂಧದಿಂದ ಕೂಡಿ ಸುಖವಾಗುವಂತೆ ಬೀಸಿ ಎಲ್ಲರ ಮನಸ್ಸಿನಲ್ಲಿಯೂ ಆನಂದವು ಉಕ್ಕಿತು. ಅರ್ಧರಾತ್ರಿಯಾಗಿ ಕಗ್ಗತ್ತಲು ಹಬ್ಬಿರುವ ಸಮಯದಲ್ಲಿ ಶ್ರೀ ಕೃಷ್ಣನು ಅವತರಿಸಿದನು. ಆ ಶಿಶುವು ಕೂಡಲೇ ತನ್ನ ಮಹಾವಿಷ್ಣುರೂಪದಿಂದ ತಾಯಿತಂದೆ

ಗಳಿಗೆ ದರ್ಶನಕೊಟ್ಟನು. ವಸುದೇವನು "ಎಲೈ ಪುರುಷೋತ್ತಮನೆ, ನೀನೇ ನಿನ್ನ ಮಾಯೆಯಿಂದ ಮೂರು ಲೋಕಗಳನ್ನು ಸಲಹುವುದಕ್ಕಾಗಿ ಬಿಳಿದಾದ ಸತ್ವಗುಣವನ್ನೂ, ಸೃಷ್ಟಿಸುವುದಕ್ಕಾಗಿ ಕೆಂಪಾದ ರಜೋಗುಣವನ್ನೂ ಸಂಹರಿಸುವುದಕ್ಕಾಗಿ ಕರಿದಾದ ತಮೋಗುಣವನ್ನೂ ಧರಿಸುವೆ." ಎಂದು ಸ್ತುತಿಸಿದನು ತಾಯಿಯಾದ ದೇವಕಿಯು, "ಸಾಕ್ಷಾದ್ವಿಷ್ಣುವೇ! ಕ್ರೂರನಾದ ಕಂಸನಿಂದ ಹೆದರುತ್ತಿರುವ ನಮ್ಮನ್ನು ನೀನು ಕಾಪಾಡು" ಎಂದು ಬೇಡಿಕೊಂಡಳು ಭಗವಂತನು "ನೀವು ಪೂರ್ವದಲ್ಲಿ ಪೃಶ್ನೀಸುತಪಸ್ಸುಗಳೆಂಬ ದಂಪತಿಗಳಾಗಿದ್ದಿರಿ. ಆಗ ನನ್ನಂತಹ ಮಗನಾಗಬೇಕು ಎಂದು ಪ್ರಾರ್ಥಿಸಿದಿರಿ. ಆಮೇಲೆ ನೀವು ಅದಿತಿ ಕಶ್ಯಪರಾದಿರಿ. ಈಗ ದೇವಕೀವಸುದೇವರಾಗಿದ್ದೀರಿ. ಈ ಮೂರು ಜನ್ಮದಲ್ಲೂ ನಾನು ನಿಮ್ಮ ಮಗನಾಗಿದ್ದೇನೆ" ಎಂದು ಹೇಳಿ ವಸುದೇವನನ್ನು ಕರೆದು "ನೀನು ಕಂಸನಿಗೆ ಅಷ್ಟು ಹೆದರುವುದಾದರೆ, ನನ್ನನ್ನು ಗೋಕುಲಕ್ಕೆ ತೆಗೆದುಕೊಂಡು ಹೋಗು. ಅಲ್ಲಿ ನನ್ನನ್ನು ಯಶೋದಾದೇವಿಯ ಮಗ್ಗುಲಲ್ಲಿಟ್ಟು ಆಕೆಯು ಹೆತ್ತಿರುವ ಯೋಗಮಾಯೆಯನ್ನು ಬೇಗನೆ ಇಲ್ಲಿಗೆ ಕರೆದುಕೊಂಡು ಬಾ. ಬಾಗಿಲುಗಳೆಲ್ಲವೂ ತಮಗೆ ತಾವೇ ತೆರೆಯುವುವು. ಯಮುನಾ ನದಿಯು ದಾರಿಯನ್ನು ಬಿಡುವುದು" ಎಂದು ಹೇಳಿ ಭಗವಂತನು ಮತ್ತೆ ಮಗುವಾದನು.

ವಸುದೇವನು ಮಗುವನ್ನೆತ್ತಿಕೊಂಡು ಹೊರಟನು. ಬಾಗಿಲುಗಳು ತಮ್ಮಷ್ಟಕ್ಕೆ ತಾವೇ ತೆಗೆದುಕೊಂಡುವು. ಜನಸಂಚಾರವಿಲ್ಲದಂತೆ ಮೋಡಗಳು ಕವಿದು ಸಣ್ಣಗೆ ಮಳೆಗರೆದುವು. ಆದಿಶೇಷನು ತನ್ನ ಸಾವಿರ ಹೆಡೆಗಳನ್ನೂ ಬಿಚ್ಚಿ ಭಗವಂತನಿಗೆ ಕೊಡೆ ಹಿಡಿದನು. ತುಂಬಿ ಹರಿಯುವ ನದಿಯು ದಾರಿಕೊಟ್ಟಿತು. ವಸುದೇವನು ಮಗುವನ್ನು ತರುವ ವೇಳೆಗೆ ನಂದಗೋಕುಲದಲ್ಲಿ ಎಲ್ಲರೂ ಮೈಮರೆತಿದ್ದರು. ಆತನು ತಾನು ತಂದ ಗಂಡು ಮಗುವನ್ನು ಯಶೋದೆಯ ಮಗ್ಗುಲಲ್ಲಿ ಇಟ್ಟು



ಶ್ರೀ ವೇಣು ಗೋಪಾಲ

(ಮೈಸೂರು ಶಾಸನ ಇಲಾಖೆಯ ಕೃಪೆಯಿಂದ)

ಆಕೆಯು ಹೆತ್ತಿದ್ದ ಹೆಣ್ಣು ಮಗುವನ್ನು ತಂದು ದೇವಕಿಗೆ ಕೊಟ್ಟನು. ಎಲ್ಲವೂ ಮೊದಲಿನಂತೆಯೇ ಇತ್ತು.

ಮಗುವು ಅತ್ತಿತು. ಅದನ್ನು ಕೇಳಿ ಕಾವಲುಗಾರರು ಎದ್ದರು. ಅವರು ಓಡಿಹೋಗಿ ಕಂಸನಿಗೆ ಹೇಳಿದರು. ಅವನೂ ಎದ್ದು ಓಡೋಡಿ ಬಂದನು. ದೇವಕಿಯು ಇದು ಹೆಣ್ಣುಮಗು ಎಂದು ಹೇಳುತ್ತಿದ್ದರೂ ಆ ಮಗುವನ್ನು ಕಿತ್ತುಕೊಂಡುಹೋಗಿ, ಎಳ್ಳಷ್ಟು ಕರುಣವಿಲ್ಲದೆ ಬಂಡೆಯಮೇಲೆ ಒಗೆದನು. ಆ ಹೆಣ್ಣುಮಗುವು ಅವನ ಕೈಯಿಂದ ಗಗನಕ್ಕೆ ಹಾರಿ ಅಷ್ಟಭುಜದುರ್ಗಿಯಾಗಿ ಕಾಣಿಸಿಕೊಂಡಳು. ಆ ದೇವಿಯು "ಮೂರ್ಖ! ನಿನ್ನ ಹಿಂದಣ ಶತ್ರುವು ನಿನ್ನ ಮೃತ್ಯುವಾಗಿ ಆಗಲೇ ಹುಟ್ಟಿರುವನು" ಎಂದು ನುಡಿದು ಮಾಯವಾದಳು.

ಕಂಸನು ಆಗ ತಾನು ಮಾಡಿದ ದುಷ್ಕಾರ್ಯಗಳನ್ನು ನೆನೆದು ದುಃಖಪಟ್ಟು ತಂಗಿಯನ್ನೂ ಮೈದುನನನ್ನೂ ಸೆರೆಯಿಂದ ಬಿಡಿಸಿ ಅವರನ್ನು ಸಮಾಧಾನಪಡಿಸಿ ತನ್ನ ಮನೆಗೆ ನಡೆದನು. ಆಗಲೇ ತನ್ನ ಮಂತ್ರಿಗಳನ್ನು ಕರೆಯಿಸಿಕೊಂಡು ನಡೆದುದೆಲ್ಲವನ್ನೂ ಹೇಳಿದನು. ಆ ದೈತ್ಯರು ಎಲ್ಲೆಲ್ಲಿರುವ ಮಕ್ಕಳನ್ನೆಲ್ಲಾ ಕೊಲ್ಲುವೆವೆಂದರು. ಕಂಸನೂ ಅದಕ್ಕೆ ಒಪ್ಪಿದನು.

---

## ಮೂವತ್ತನಾಲ್ಕನೆಯ ಅಧ್ಯಾಯ

## ಬಾಲಲೀಲೆ

ನಂದಗೋಪನು ತನಗೆ ಗಂಡುಮಗುವಾಯಿತೆಂದು ಹಿಗ್ಗಿದನು. ಊರವರಿಗೆಲ್ಲಾ ಬೇಕಾದ ಹಾಗೆ ಊಟೋಪಚಾರಗಳನ್ನು ಮಾಡಿಸಿದನು. ದಾನಧರ್ಮಗಳನ್ನು ಮಾಡಿದನು.

ನಂದನು ಕಂಸನಿಗೆ ವರ್ಷಕ್ಕೊಂದು ಸಲ ಕಾಣಿಕೆಯನ್ನು ಒಪ್ಪಿ

ಸಬೇಕಾಗಿತ್ತು. ಅದರಿಂದ ಆ ಕಾಣಿಕೆಯನ್ನು ತೆಗೆದುಕೊಂಡು ಮಧು ರೆಗೆ ಬಂದನು. ರಾಜನಿಗೆ ಕಾಣಿಕೆಯನ್ನು ಒಪ್ಪಿಸಿಯಾಯಿತು. ವಸು ದೇವನನ್ನು ನೋಡಬೇಕೆಂದು ಬಂದನು. ಆತನನ್ನೂ ನೋಡಿದಾಯಿತು. ಆತನು "ನಂದ, ನಿನಗೆ ಗಂಡುಮಗುವಾಯಿತಲ್ಲಾ ಎಂದು ನಮಗೆಲ್ಲಾ ಬಹಳ ಸಂತೋಷವಾಯಿತು. ಆ ಮಗುವನ್ನು ಚೆನ್ನಾಗಿ ಕಾಪಾಡಿಕೊ" ಎಂದು ಏನೂ ತಿಳಿಯದವನಂತೆ ಹೇಳಿದನು. "ಕಂಸನು ಮಕ್ಕಳನ್ನು ಕೊಲ್ಲಿಸುತ್ತಿರುವನು ಎಚ್ಚರಿಕೆ" ಎಂದು ಹೇಳಬೇಕು ಎನ್ನಿಸಿತು. ಆದರೂ ಆ ಮಾತು ಹೇಳದೆ, "ಶಕುನಗಳು ಚೆನ್ನಾಗಿಲ್ಲ. ಮನೆಯ ಕಡೆ ಭದ್ರವಾಗಿ ನೋಡಿಕೊ" ಎಂದು ಹೇಳಿ ಕಳುಹಿಸಿಕೊಟ್ಟನು. ನಂದನು ಆತನಿಗೆ ಆದ ಅನ್ಯಾಯವನ್ನು ಕುರಿತು ಅಯ್ಯೋಪಾಪ ಎಂದು ತಾನೂ ಸಂಕಟಪಟ್ಟು, ಸಮಾಧಾನ ಹೇಳಿ ಊರಿಗೆ ಹೋದನು.

ಇತ್ತ ಕಂಸನು ಮಕ್ಕಳ ಕೊಲೆಗಾಗಿ ಕಳುಹಿಸಿದವರಲ್ಲಿ ಪೂತನಿ ಎಂಬ ರಾಕ್ಷಸಿಯು ಗೋಕುಲಕ್ಕೆ ಬಂದಳು. ರಾಕ್ಷಸರು ಕಾಮ ರೂಪಿಗಳು. ಎಂದರೆ ಬೇಕಾದ ರೂಪವನ್ನು ಧರಿಸಬಲ್ಲವರು. ಅವಳೂ ಒಳ್ಳೆಯ ರೂಪವತಿಯಾಗಿ ಬೇಕು ಬೇಕಾದ ಒಡವೆಗಳನ್ನು ಧರಿಸಿ ಬಂದಳು. ನಂದನ ಮನೆಗೆ ಹೋಗಿ ಅಲ್ಲಿ ತೊಟ್ಟಿಲಲ್ಲಿದ್ದ ಮಗುವನ್ನು ನೋಡಿದಳು. ಆ ಮಗುವನ್ನು ಎಲ್ಲರಂತೆ ಎತ್ತಿಕೊಂಡಳು. ಯಶೋ ದಾಗೆ ಪ್ರೀತಿಯಿದ್ದವಳಂತೆ, ಆ ಮಗುವಿಗೆ ಸ್ತನ್ಯವನ್ನು ಕೊಡುವು ದಕ್ಕೆ ಹೋದಳು. ಆ ಮಾಯಾ ಶಿಶುವು ಅವಳ ಸ್ತನ್ಯವನ್ನು ಕುಡಿ ಯುವ ನೆಪದಲ್ಲಿ ಅವಳ ಪ್ರಾಣವನ್ನೇ ಹೀರಿತು. ಅವಳು ಆ ಪ್ರಾಣ ಸಂಕಟವನ್ನು ತಡೆಯಲಾರದೆ, ವಿಕಾರವಾಗಿ ಕೂಗಿಕೊಂಡು ಕೈಕಾಲು ಬಡಿದು ಪ್ರಾಣಬಿಟ್ಟಳು. ಎಲ್ಲರೂ ಏನಿದು ಎಂದು ಬರುವವೇಳೆಗೆ ಅಲ್ಲಿ ಒಬ್ಬಳು ರಾಕ್ಷಸಿಯ ದೇಹವು ಬಿದ್ದಿದೆ. ಬೆಟ್ಟದ ಹಾಗಿರುವ ಆ ದೇಹದ ಮೇಲೆ ಮಗುವು ತೊಟ್ಟಿಲಲ್ಲಿರುವಷ್ಟು ಸುಖವಾಗಿ ಮಲಗಿದೆ.

ಯಶೋದೆಯೂ ಅವಳ ಗೋಪಿಯರೂ ಮಗುವನ್ನು ತಟ್ಟನೆ ಎತ್ತಿಕೊಂಡರು. ಅವಕ್ಕೆ ನಿವಾಳಿಸಿ ಆರತಿಯೆತ್ತಿದರು. ಮಂತ್ರಗಳನ್ನು ಹೇಳಿ ರಕ್ಷೆಯನ್ನು ಕಟ್ಟಿದರು. ಅಲ್ಲಿ ಬಿದ್ದಿದ್ದ ಘೋರವಾದ ಪೂತನಾದೇಹವನ್ನು ಕೊಡಲಿಗಳಿಂದ ಕಡಿದು ದೂರವಾಗಿ ಸಾಗಿಸಿ ಬೆಂಕಿಹಾಕಿ ಸುಟ್ಟರು.

ಈ ಅದ್ಭುತ ಶಿಶುವಿಗೆ ಮೂರು ತಿಂಗಳು ತುಂಬಿತು. ಬೋರಲು ಬಿದ್ದನೆಂದು ಮಗನಿಗೆ ಆರತಿ ಅಕ್ಷತೆಗಳು ಆಯಿತು. ಆ ದಿನ ಅಂಗಳದ ತುಂಬಾ ಗಾಡಿಗಳು ಬಂದು ನಿಂತಿವೆ. ನೆಂಟರು ಇಷ್ಟರು ಎಲ್ಲರೂ ಬಂದಿದ್ದಾರೆ. ಮಗುವಿಗೆ ನಿದ್ದೆ ಬಂತು. ಅಂಗಳದ ಗಾಡಿಗಳಲ್ಲಿ ಒಂದರಕೆಳಗೆ ತೊಟ್ಟಿಲು ಕಟ್ಟಿತ್ತು. ಯಶೋದೆಯು ಅದರಲ್ಲಿ ಮಗುವನ್ನು ಮಲಗಿಸಿ ಬೇರೆ ಕೆಲಸಗಳಿಗೆ ಹೋದಳು. ಕಂಸನು ಕಳುಹಿಸಿದ್ದ ರಾಕ್ಷಸರಲ್ಲಿ ಶಕಟನೆಂಬವನು ಬಂದು ಆ ಗಾಡಿಯಲ್ಲಿ ಸೇರಿಕೊಂಡು ಆ ಮಗುವನ್ನು ಕೊಲ್ಲುವೆನು ಎಂದುಕೊಂಡನು. ಅಷ್ಟರಲ್ಲಿ ಆ ಮಾಯಾ ಶಿಶುವು ಎಚ್ಚರಗೊಂಡಿತು. ಬಂಡಿಯನ್ನು ಒದೆಯಿತು. ಆ ಮಗುವಿನ ಒಂದು ಒದೆಗೆ ಗಾಡಿಯು ತಲೆಕೆಳಗಾಯಿತು: ಮುರಿದುಬಿತ್ತು. ಆ ರಾಕ್ಷಸನೂ ಸತ್ತನು.

ಗಾಡಿಯು ಮುರಿದು ಬಿತ್ತು ಎಂದು ಗಾಬರಿಗೊಂಡು ಎಲ್ಲರೂ ಓಡಿಬಂದರು. ಮಗುವಿಗೆ ಏನೂ ಅಪಾಯವಾಗದಿರುವುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ತಿಳಿದ ಹಿರಿಯರು ಮಗುವಿಗೆ ರಕ್ಷೆ ಇಡಿಸಿ, ವಿಪತ್ತು ಕಳೆಯಿತು ಎಂದು ಸಂತೋಷಪಟ್ಟರು.

ಇನ್ನೊಂದು ದಿನ ಯಶೋದೆಯು ಮಗುವನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಡಿಸುತ್ತಿರುವಾಗ ಇದ್ದಕ್ಕಿದ್ದಂತೆಯೇ ಮಗುವು ಬೆಟ್ಟದಷ್ಟು ಭಾರವಾಯಿತು. ಇದೇನು ಎಂದು ಆಕೆಯು ಮಗುವನ್ನು ನೆಲದಮೇಲೆ ಇಟ್ಟಳು. ಅಲ್ಲಿಯೇ ಅದು ಮಲಗಿಕೊಂಡಿತು. ತಾಯಿಯು

ಮಗು ಮಲಗಿಕೊಂಡಿದೆಯೆಂದು ಬೇರೆ ಕೆಲಸಕ್ಕೆ ಹೋದಳು. ಆ ಹೊತ್ತಿಗೆ ಸರಿಯಾಗಿ ಕಂಸನು ಕಳುಹಿಸಿದ್ದ ತೃಣಾವರ್ತನೆಂಬ ರಾಕ್ಷಸನು ಸುಂಟರಗಾಳಿಯಾಗಿ ಬಂದು ಆ ಮಗುವನ್ನು ಎತ್ತಿಕೊಂಡು ಹೋದನು.

ಆ ಗಾಳಿಯಿಂದ ಎದ್ದ ಧೂಳಿಯು ಜನರ ಕಣ್ಣುಗಳನ್ನು ಮುಚ್ಚಿಸಿತು. ಗಾಳಿಯ ಸದ್ದು ಭಯಂಕರವಾಯಿತು. ಕತ್ತಲೆ ಮುಸುಕಿತು. ಯಶೋದೆಯು ಗಾಬರಿಯಿಂದ ಓಡಿಬಂದು ನೋಡಿದರೆ ತಾನು ಬಿಟ್ಟಿದ್ದ ಕಡೆ ಮಗುವಿರಲಿಲ್ಲ. ಅವಳ ಗಾಬರಿಯು ಹೆಚ್ಚಿತು. ಏನು ಮಾಡಬೇಕೋ ತಿಳಿಯದೆ ಅತ್ತಳು. ಅವಳ ಅಳುವುದನ್ನು ಕೇಳಿ ಇತರ ಗೊಲ್ಲತಿಯರೂ ಬಂದರು. ಅವರೂ ಅತ್ತರು.

ಇತ್ತ ಮಗುವನ್ನು ಎತ್ತಿಕೊಂಡು ಹೋದ ಗಾಳಿರಾಕ್ಷಸನು ಆ ಮಗುವನ್ನು ಹೊರಲಾರದೆ ಹೋದನು. ಅವನಿಗೆ ಕತ್ತಿಗೆ ಕಲ್ಲನ್ನು ಕಟ್ಟಿಕೊಂಡಷ್ಟು ಕಷ್ಟವಾಯಿತು. ಹಾಗೆಯೆ ಆ ಮಗುವೇ ಅವನ ಕತ್ತು ಹಿಸುಕಿತು. ಅವನು ಮಗುವಿನ ಕೈಯಿಂದ ಸತ್ತುಹೋದನು. ಅವನ ದೇಹವು ಬೆಟ್ಟವು ಬಿದ್ದಹಾಗೆ ಗೋಕುಲದ ಮಗ್ಗುಲಲ್ಲಿ ಬಿತ್ತು. ಮಗುವು ಆ ದೇಹದಮೇಲೆ ಏನೂ ಇಲ್ಲದೆ ಆಡುತ್ತಿರುವುದನ್ನು ಕಂಡು ಜನರು ಎತ್ತಿಕೊಂಡುಹೋಗಿ ತಾಯಿಗೆ ಕೊಟ್ಟರು. ಮಗು ಬದುಕಿ ಬಂದನಲ್ಲ ಎಂದು ಎಲ್ಲರೂ ಸಂತೋಷಪಟ್ಟರು. ನಂದಗೋಪನು ವಸುದೇವನು ಅಪಶಕುನಗಳನ್ನು ಕುರಿತು ಹೇಳಿದ್ದುದನ್ನು ನೆನೆಸಿಕೊಂಡನು.

ಹೀಗಿರುವಾಗ ಯಾದವರ ಕುಲ ಪುರೋಹಿತನೂ ಮಹಾ ತಪಸ್ವಿಯೂ ಆದ ಗರ್ಗಮುನಿಯು ಬಂದನು. ನಂದಗೋಪನು ಆತನಿಗೆ ಸಲ್ಲಬೇಕಾದ ಉಪಚಾರಗಳನ್ನೆಲ್ಲ ಸಲ್ಲಿಸಿದನು. ಆತನು ಜೋತಿಶ್ಶಾಸ್ತ್ರವನ್ನು ವಿರಚಿಸಿದವನು. ಆತನೇ ತನ್ನ ಮಗನಿಗೂ ವಸುದೇವನ (ರೋಹಿಣಿಯ) ಮಗನಿಗೂ ನಾಮಕರಣಾದಿಗಳನ್ನು ಮಾಡಲಿ ಎಂದು

ನಂದಗೋಪನಿಗೆ ಆಸೆಯಾಯಿತು. ಆದರೆ ಆತನು ಕೃಷ್ಣನು ನಂದನ
ಮಗನಲ್ಲ ವಸುದೇವನ ಮಗನೆಂದು ಬಲ್ಲನಾದ್ದರಿಂದ ನಾಮಕರಣಾದಿ
ಗಳು ಗುಟ್ಟಾಗಿ ನಡೆಯಿತು. ರೋಹಿಣಿಯ ಮಗನಿಗೆ ಬಲರಾಮನೆಂದೂ
ಯಶೋದಾಪುತ್ರನು ಕಪ್ಪಗಿದ್ದುದರಿಂದ ಕೃಷ್ಣನೆಂದೂ ಹೆಸರಿಟ್ಟರು.

ರಾಮಕೃಷ್ಣರು ಬೆಳೆದರು. ಅಂಬೆಗಾಲಿಡುತ್ತಿದ್ದವರು ತಪ್ಪು
ಹೆಜ್ಜೆಗಳನ್ನಿಟ್ಟು ನಡೆಯುವಂತಾದರು ಅವರ ಆಟಗಳನ್ನು ಕಂಡವ
ರೆಲ್ಲರೂ ಸಂತೋಷಪಡುವರು. ಯಾರಿಗೇ ಆಗಲಿ ಆತನ ಆಟಗಳು
ಬೇಡವೆನ್ನಿಸುತ್ತಿರಲಿಲ್ಲ. ಇಬ್ಬರೂ ಬೆಳೆದು ಬೀದಿಯಲ್ಲಿ ತಿರುಗುವ
ಮಟ್ಟಿಗೂ ಆದರು. ಜತೆ. ಅವರ ತುಂಟತನವೂ ಬೆಳೆಯಿತು. ಗೋಪಿ
ಯರು ಯಶೋದೆಯ ಬಳಿಗೆ ಬಂದು ದೂರು ಹೇಳುವ ಮಟ್ಟಿಗೂ
ಆಯಿತು. ದೂರು ಹೇಳಿದರೂ ಯಾವ ಗೋಪಿಗೂ ರಾಮಕೃಷ್ಣರು
ಮನೆಗೆ ಬರುವುದು ಬೇಡ ಎಂದು ಮಾತ್ರ ಅನ್ನಿಸದು

ಮತ್ತೊಮ್ಮೆ ರಾಮಕೃಷ್ಣರು ಗೋಪಕುಮಾರರೊಡನೆ ಆಡು
ತ್ತಿರುವಾಗ, ಕೃಷ್ಣನು ಮಣ್ಣು ತಿಂದನು. ತಮ್ಮನು ಮಣ್ಣು ತಿಂದನೆಂದು
ಅಣ್ಣನೇ ದೂರು ಹೇಳಿದನು, ತಾಯಿಯು "ಹೌದೋ" ಎಂದು ಗದರಿಸಿ
ಕೊಂಡಳು. ಕೃಷ್ಣನು "ಇಲ್ಲಮ್ಮ, ಬೇಕಾದರೆ ನೀನೇ ನೋಡು."
ಎಂದು ಬಾಯನ್ನು ತೆರೆದು ತೋರಿಸಿದನು

ಯಶೋದೆಯು ನೋಡಿದಳು. ಕೃಷ್ಣನ ಬಾಯಲ್ಲಿ ಜಗತ್ತೆಲ್ಲವೂ
ಕಂಡಿತು. ಸ್ಥಾವರಗಳು ಜಂಗಮಗಳು, ಆಕಾಶ, ದಿಕ್ಕುಗಳು, ಪರ್ವತ
ಗಳು, ಸಮುದ್ರಗಳು, ಭೂಗೋಳ, ಅಗ್ನಿ ಸೂರ್ಯ, ಚಂದ್ರ, ನಕ್ಷತ್ರ
ಗಳು ಮೊದಲಾಗಿ ಸರ್ವವನ್ನೂ ಕಂಡಳು ಆಕೆಗೆ ಅದನ್ನು ಕಂಡು
ಆಶ್ಚರ್ಯವಾಯಿತು. "ಇವನು ನನ್ನ ಮಗನೋ ಭಗವಂತನೋ?"
ಎಂದು ಸಂಶಯವಾಯಿತು. ಆಕೆಗೆ ತಾನು ಯಾರು ಏನು ಎಂಬು
ದೆಲ್ಲಾ ಮರೆತುಹೋಯಿತು. ಭಗವಂತನು ಈ ರೂಪವಾಗಿ ಬಂದಿರುವ

ನೆನ್ನಿಸಿತು. 'ಭಗವಂತ' ಎಂದು ಕೈಮುಗಿದಳು. ಮತ್ತೆ ಆತನ ಮಾಯೆ ಆಕೆಯನ್ನು ಹಿಡಿಯಿತು. ಎಲ್ಲವನ್ನೂ ಮರೆತು ಮಗುವನ್ನು ತಬ್ಬಿ ಕೊಂಡಳು. ಆಕೆಗೆ ಎಲ್ಲವೂ ಮರೆತುಹೋಯಿತು.

(ಅಷ್ಟವಸುಗಳಲ್ಲಿ ಪ್ರಧಾನನಾದ ದ್ರೋಣನು ಹೆಂಡತಿಯಾದ ಧರೆ ಯೊಡನೆ ಭೂಮಿಯಲ್ಲಿ ಅವತರಿಸುವ ಭಗವಂತನ ಸೇವೆಗಾಗಿ ನಂದ, ಯಶೋದೆಯರಾಗಿ ಹುಟ್ಟಿದ್ದರು)

ಒಂದಾನೊಂದು ದಿನ ಯಶೋದೆಯು ಮೊಸರು ಕಡೆಯುತ್ತಿ ದ್ದಳು. ಮಗನ ಬಾಲಲೀಲೆಗಳನ್ನು ನೆನೆಸಿಕೊಂಡು ಹಾಡುತ್ತ ಎಲ್ಲ ವನ್ನು ಮರೆತುಬಿಟ್ಟಿದ್ದಳು. ಶ್ರೀಕೃಷ್ಣನು ಅಮ್ಮಾ ಹಾಲುಕೊಡು ಎಂದು ಬಂದು ಅವಳನ್ನು ಪೀಡಿಸಿದನು. ಮಗನ ಮುಖವನ್ನು ನೋ ಡುತ್ತಲೂ ಅವಳಿಗೆ ಏನೂ ಬೇಡವಾಯಿತು. ಮೊಸರು ಕಡೆಯುವು ದನ್ನು ಬಿಟ್ಟು ಅವನನ್ನು ತಬ್ಬಿಕೊಂಡು ಮುದ್ದಾಡಿದಳು. ಅಷ್ಟರಲ್ಲಿ ಒಲೆಯಮೇಲೆ ಇಟ್ಟಿದ್ದ ಹಾಲು ಉಕ್ಕುತ್ತಿರುವುದು ಕಂಡಿತು. ಅದನ್ನು ಇಳುಹುವುದಕ್ಕಾಗಿ ಅವನನ್ನು ಬಿಟ್ಟುಹೋದಳು.

ಕೃಷ್ಣನು ತಾಯಿಯು ತನ್ನ ಬಿಟ್ಟುಹೋದಳೆಂದು ಕೋಪ ಮಾಡಿಕೊಂಡನು. ಅತ್ತನು. ಒಂದು ಕಲ್ಲು ತೆಗೆದುಕೊಂಡು ಮೊಸರಿನ ಮಡಕೆಯನ್ನು ಹೊಡೆದನು. ಅಲ್ಲಿದ್ದ ಬೆಣ್ಣೆಯನ್ನು ತೆಗೆದುಕೊಂಡು ತಿಂದನು. ತಾಯಿಯು ಹಾಲಿನ ಮಡಕೆ ಇಳುಹಿ ಬಂದು ನೋಡಿದರೆ, ಇವನು ಬೆಣ್ಣೆಯನ್ನು ಕೋತಿಗೆ ಇಡುತ್ತಿದ್ದಾನೆ.

ಅವಳಿಗೆ ಕೋಪ ಬಂತು. ಅವನನ್ನು ಹಿಡಿದು ಬುದ್ಧಿ ಕಲಿಸ ಬೇಕೆಂದುಕೊಂಡಳು. ಹಿಂದಿನಿಂದ ಬರುತ್ತಿರುವ ತಾಯಿಯನ್ನು ಕಂಡು ಶ್ರೀಕೃಷ್ಣನು ಓಡಿದನು. ಅವನನ್ನು ಹಿಡಿಯಬೇಕೆಂದು ಅವಳೂ ಓಡಿದಳು. ಕೊನೆಗೆ ಕೃಷ್ಣನು ಸಿಕ್ಕಿದನು. ತಾಯಿಯ ಕೈಯ ಲ್ಲಿರುವ ಕಡೆಗೋಲನ್ನು ಕಂಡು ಹೆದರಿ ಅತ್ತನು. ಅವಳು ಅದನ್ನು

ಬಿಸುಟ್ಟು, ಅವನನ್ನು ಕಟ್ಟಿಹಾಕಬೇಕೆಂದು ಹಗ್ಗವನ್ನು ತೆಗೆದು ಕೊಂಡಳು.

ಆ ಮಗುವನ್ನು ಕಟ್ಟುವುದಕ್ಕೆ ಒಂದು ಹಗ್ಗ ಸಾಲದಾಯಿತು. ಇನ್ನೊಂದು ತಂದಳು ಅದೂ ಸಾಲದಾಯಿತು. ಇನ್ನೊಂದು ಬಂತು. ಅದೂ ಸಾಲದು. ಮನೆಯಲ್ಲಿರುವ ಹಗ್ಗಗಳನ್ನೆಲ್ಲಾ ತಂದರೂ ಸಾಲ ದಾಯಿತು. ಆ ವೇಳೆಗೆ ಅಲ್ಲಿಗೆ ಗೊಲ್ಲತಿಯರು ಬಂದರು. ಅವರು ಈ ಆಶ್ಚರ್ಯವನ್ನು ಕಂಡು ನಕ್ಕರು. ಯಶೋದೆಗೂ ಆಶ್ಚರ್ಯವಾಯಿತು. ಕೊನೆಗೆ ಅಂತೂ ಹಗ್ಗವಲ್ಲಿ ಕಟ್ಟದುವಾಯಿತು. ಮಗನನ್ನು ಒಂದು ಒರಳಿಗೆ ಕಟ್ಟಿಹಾಕಿ ತಾಯಿಯು ಮನೆ ಕೆಲಸಕ್ಕೆ ಹೋದಳು.

ಕೃಷ್ಣನು ಒರಳನ್ನು ಎಳೆದುಕೊಂಡು ಹೊರಟನು. ಅವರ ಮನೆಯ ಅಂಗಳದವಲ್ಲಿ ಎರಡು ಮತ್ತಿಮರಗಳು ಇದ್ದುವು. ಆ ಮರಗಳು ಶಾಪದಿಂದ ಆ ರೂಪವನ್ನು ಪಡೆದ ನಳಕೂಬರ ಮಣಿಗ್ರೀವರೆಂಬ ಇಬ್ಬರು ಯಕ್ಷರು. ಕುಬೇರನ ಮಕ್ಕಳು. ಅವರು ಒಂದು ದಿನ ಹೆಂಗ ಸರನ್ನು ಕಟ್ಟಿಕೊಂಡು ಚೈತ್ರರಥವೆಂಬ ಉದ್ಯಾನವಲ್ಲಿ ಕುಣಿಯುತ್ತಿ ದ್ದರು. ಆಗ ನಾರದರು ಅತ್ತ ಬಂದರು. ಅವರನ್ನು ಕಂಡರೂ, ಅವರು ಬೆತ್ತಲೆಯಾಗಿಯೇ ಕುಣಿಯುತ್ತಿದ್ದರು. ಆಗ ನಾರದರು “ಇವರು ಲೋಕಪಾಲಕನ ಮಕ್ಕಳು. ಆದರೂ ಹೀಗೆ ಮದಾಂಧರಾಗಿರುವರು. ಅದರಿಂದ ಇವರು ಮರಗಳಾಗಿ ಹುಟ್ಟಲಿ. ಇವರಿಗೆ ಪೂರ್ವಸ್ಮರಣೆ ಯಿರಲಿ. ದೇವಮಾನ ನೂರುವರ್ಷ ಹೀಗೆ ಇದ್ದು ಶ್ರೀಹರಿಯ ಕೃಪೆಯಿಂದ ಪೂರ್ವ ಜನ್ಮವನ್ನು ಪಡೆದು ಚೆನ್ನಾಗಿರಲಿ” ಎಂದು ಹೊರಟು ಹೋದರು.

ಆ ಮರಗಳಾದ ಯಕ್ಷರು ಶ್ರೀ ಹರಿಯು ಬಂದಾನೇ ಎಂದು ಕಾದಿದ್ದರು. ಶ್ರೀ ಕೃಷ್ಣನು ಅವರನ್ನು ಅನುಗ್ರಹಿಸಲು ಅತ್ತ ಕಡೆ ಹೊರಟನು. ಒರಳು ಆ ಮರಗಳ ನಡುವೆ ಸಿಕ್ಕಿಕೊಂಡಿತು. ಆದಷ್ಟು

ಮಾತ್ರವೇ ಸಾಕಾಗಿ ಆ ಮರಗಳು ಉರುಳಿದುವು. ಆ ರೂಪವಾಗಿದ್ದ ಯಕ್ಷರು ಬಂದು ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ಆತನ ಅನುಗ್ರಹವನ್ನು ಪಡೆದು ಹೊರಟು ಹೋದರು.

ಮರಗಳು ಉರುಳಿದಾಗ ಆದ ಶಬ್ದವನ್ನು ಕೇಳಿ ಎಲ್ಲರೂ ಓಡಿ ಬಂದರು. ನೂರಾರು ವರ್ಷಗಳ ಹೆಮ್ಮರಗಳು ಉರುಳಿ ಬಿದ್ದು ಪುಡಿ ಪುಡಿಯಾಗಿರುವುದನ್ನು ನೋಡಿ ಎಲ್ಲರಿಗೂ ಗಾಬರಿಯಾಯಿತು.

ನಂದನು ಮಗನಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿ ಯೋಚಿಸಿದನು: "ಇಲ್ಲಿ ಏಕೋ ಪದೇ ಪದೇ ಏನಾದರೂ ಆಗುತ್ತಲೇ ಇದೆ. ಇನ್ನು ಈ ಬೃಹದ್ವನವನ್ನು ಬಿಟ್ಟು ಬೃಂದಾವನಕ್ಕಾದರೂ ಹೋಗಬೇಕು." ಎಂದು ಕೊಂಡನು ಎಲ್ಲರನ್ನೂ ಕೇಳಿದನು. ಎಲ್ಲರೂ ಆಗಬಹುದು ಎಂದರು. ಮುದುಕರಿಂದ ಹುಡುಗರವರೆಗೆ ಎಲ್ಲರನ್ನೂ ಕರೆದುಕೊಂಡು, ಮುಂದೆ ಮಂದೆಗಳನ್ನು ಅಟ್ಟಿಕೊಂಡು, ತಮ್ಮ ಆಸ್ತಿ ಪಾಸ್ತಿಗಳನ್ನೆಲ್ಲಾ ಗಾಡಿಗಳಲ್ಲಿ ತುಂಬಿಕೊಂಡು ಬೃಂದಾವನಕ್ಕೆ ಹೊರಟರು. ಯಮುನಾ ನದಿಯ ತೀರದಲ್ಲಿ, ಗೋವರ್ಧನ ಗಿರಿಯ ತಪ್ಪಲಲ್ಲಿ, ಹುಲ್ಲು ಕಟ್ಟಿಗೆ ಮೊದಲಾದವುಗಳಿಂದ ತುಂಬಿರುವ ಬೃಂದಾವನವು ಅವರಿಗೆ ಬಲು ಮೆಚ್ಚಿಕೆಯಾಯಿತು.

---

## ಮೂವತ್ತ ನಾಲ್ಕನೆಯ ಅಧ್ಯಾಯ

# ಬೃಂದಾವನ ಲೀಲೆಗಳು

ಬೃಂದಾವನಕ್ಕೆ ಬಂದ ಮೇಲೆ ರಾಮಕೃಷ್ಣರು ತಮ್ಮ ವಯಸ್ಸಿನ ಬಾಲಕರೊಡನೆ ಕರುಗಳನ್ನು ಅಟ್ಟಿಕೊಂಡು ಬೆಟ್ಟಗುಡ್ಡಗಳಿಗೆ ಹೋಗುವುದಕ್ಕೆ ಮೊದಲಾಯಿತು. ಒಂದು ದಿನ ಅವರು ಹೀಗೆ ಕರುಗಳನ್ನು ಅಟ್ಟಿಕೊಂಡು ಗೊಲ್ಲಹುಡುಗರೊಡನೆ ಹೋಗುತ್ತಿರುವಾಗ ವತ್ಸನೆಂಬ

ದೈತ್ಯನು ಅಲ್ಲಿಗೆ ಬಂದನು. ಅವನು ಕರುವಾಗಿ ಕರುಗಳ ನಡವೆ ಸೇರಿದನು. ಆದರೆ ಶ್ರೀಕೃಷ್ಣನ ಕಣ್ಣು ಆ ಕರುವು ಕಳ್ಳ ಕರು ಎಂದು ಹಿಡಿಯಿತು. ಅಣ್ಣನಿಗೆ ಹೇಳಿ, ಮೆಲ್ಲಗೆ ಅವರ ಬಳಿ ಹೋಗಿ ಅದರ ಹಿಂಗಾಲುಗಳನ್ನು ಹಿಡಿದು ಗರಗರನೆ ತಿರುಗಿಸಿ ಅವನ್ನು ಒಂದು ಬೇಲದ ಮರದ ಮೇಲೆ ಎಸೆದನು. ಬೇಲದ ಕಾಯೂ ಬಿತ್ತು. ಅದ ರೊಡನೆ ಸತ್ತ ರಾಕ್ಷಸನ ದೇಹವೂ ಬಿತ್ತು.

ಇನ್ನೊಂದು ದಿನ ಅಣ್ಣ ತಮ್ಮಂದಿರು ಬುತ್ತಿಯನ್ನು ಕಟ್ಟಿ ಕೊಂಡ ತಿರುಗುತ್ತಿದ್ದರು. ಬಿಸಿಲಾಗಿ ಬಾಯಾರಿದ ಕರುಗಳ ಗುಂಪಿಗೆ ನೀರು ಕುಡಿಸಲೆಂದು ನದೀ ತೀರಕ್ಕೆ ಹೋದರು. ಅಲ್ಲಿ ಬಂಡೆಯು ಗಾತ್ರದ ಬಕನೊಂದು ಕುಳಿತಿತ್ತು. ಅದು ಓಡಿ ಬಂದು ಕೃಷ್ಣನನ್ನು ಹಿಡಿದು ನುಂಗಿತು. ಎಲ್ಲರೂ ಇನ್ನೇನು ಗತಿಯೆಂದು ಹೆದರಿ ಹೋದರು. ಆದರೇನು ? ಬಕನು ಶ್ರೀಕೃಷ್ಣನನ್ನು ನುಂಗಲಾದೀತೆ ? ಅವನಿಗೆ ಗಂಟಲು ಹಿಡಿಯಿತು. ಬೆಂಕಿಯನ್ನು ನುಂಗಿದಂತಾಗಿ, ತಡೆದು ಕೊಳ್ಳಲಾರದೆ ಉಗಿದು ಬಿಟ್ಟನು. ತನ್ನೊಡೆಯನಾದ ಕಂಸನ ಅಪ್ಪಣೆ ಯನ್ನು ನೆರವೇರಿಸಬೇಕೆಂದು ಮತ್ತೆ ಕೃಷ್ಣನನ್ನು ಕುಕ್ಕಲು ಬಂದನು. ಕೃಷ್ಣನು ತಾನೇ ಹೋಗಿ ಆ ಬಕನ ಕೊಕ್ಕು ಹಿಡಿದು ಜೊಂಡು ಹುಲ್ಲನ್ನು ಸೀಳುವಂತೆ ಸೀಳಿಬಿಟ್ಟನು.

ಇನ್ನೊಂದು ದಿನ ರಾಮಕೃಷ್ಣರು ತಮ್ಮ ಮಿತ್ರರೊಡನೆ ವನ ಭೋಜನಕ್ಕೆ ಹೊರಟರು. ಗುಂಪಿಗೆ ಗುಂಪೇ ಸಂತೋಷದಿಂದ ಕುಣಿಯುತ್ತಿದೆ. ಆ ಹುಡುಗಾಟಗಳೇನು ? ಆ ಕೂಗುಗಳೇನು ? ಆ ನಗುವೇನು ? ಕೊಳಲು ಕೊಂಬುಗಳೇನು ? ಹೀಗೆ ಕುಣಿದು ಕುಪ್ಪ ಳಿಸುತ್ತಾ ಅವರು ವನಕ್ಕೆ ಹೋದರು. ಹೀಗೆ, ಎಲ್ಲರೂ ಸಂತೋಷ ದಲ್ಲಿ ಮುಳುಗಿ ಮೈಮರೆತಿರುವಾಗ, ಅಘಾಸುರನು ಬಂದನು. ಅಮೃತ ವನ್ನು ಕುಡಿದು ಅಮರರಾದ ದೇವತೆಗಳೂ ಅವನಿಗೆ ಹೆದರುವರು.

ಅವನು ಪೂತನೆಯ ಅಣ್ಣನು. ಬಕಾಸುರನ ತಮ್ಮನು. ಕೃಷ್ಣನನ್ನು ಕೊಂದು ಸತ್ತ ಅಕ್ಕತಂಗಿಯರಿಗೆ ಸಂತೋಷವನ್ನುಂಟುಮಾಡಬೇಕೆಂದು ಅವನು ಹೆಬ್ಬಾವಾಗಿ ಕರುಗಳೂ, ಬಾಲಕರೂ, ಬರುವ ದಾರಿಯಲ್ಲಿ ಬಾಯಿ ತೆರೆದುಕೊಂಡು ಮಲಗಿದನು. ತೆರೆದ ಬಾಯಿಯ ಕೆಳತುಟಿಯು ನೆಲದ ಮೇಲೆ ಇದ್ದರೆ ಮೇಲಿನ ತುಟಿಯು ಮೋಡಗಳನ್ನು ಮುಟ್ಟುತ್ತಿತ್ತು. ಹಲ್ಲುಗಳು ಕೋಡುಗಲ್ಲುಗಳಂತಿದ್ದವು. ಗೋಪಾಲಕರು ನಿಜವನ್ನರಿಯದೆ ಅದನ್ನು "ಹೆಬ್ಬಾವಿನ ಬಾಯೋ? ಏನೋ?" ಎಂದು ಕೊಂಡರು. ಅವರು ಹತ್ತಿರಕ್ಕೆ ಬರುತ್ತಿದ್ದ ಹಾಗೆಯೇ ಆ ಹೆಬ್ಬಾವು ಅವರನ್ನು ಬಾಯೊಳಕ್ಕೆ ಸೆಳೆದುಕೊಂಡಿತು. ಅವರನ್ನು ರಕ್ಷಿಸಲು ಕೃಷ್ಣನೂ ಅದರ ಬಾಯೊಳಕ್ಕೆ ನುಗ್ಗಿದನು. ನೇರವಾಗಿ ಹೋಗಿ ಆ ರಾಕ್ಷಸನ ಗಂಟಲಲ್ಲಿ ನಿಂತು ಬೆಳೆದನು ಉಸಿರಾಡುವುದಕ್ಕೆ ಅವಕಾಶವಿಲ್ಲದೆ ಅವನು ಪ್ರಾಣವನ್ನು ಬಿಟ್ಟನು. ಹೀಗೆ ಹೆಬ್ಬಾವಿನ ರೂಪವಾಗಿದ್ದ ಅಘಾಸುರನು ಸಾಯಲು ಕೃಷ್ಣನು ಕರುಗಳನ್ನೂ ಗೋಪ ಬಾಲಕರನ್ನೂ ಕರೆದುಕೊಂಡು ಹಿಂತಿರುಗಿ ಬಂದನು. ಆ ಮಹಾ ಸರ್ಪ ಶರೀರದಿಂದ ಒಂದು ದೊಡ್ಡ ಬೆಳಕು ಬಂದು ಕೃಷ್ಣನನ್ನು ಸೇರಿತು. ೫

ಮತ್ತೊಮ್ಮೆ ಶ್ರೀ ಕೃಷ್ಣನು ಮಿತ್ರರನ್ನೂ, ಕರುಗಳನ್ನೂ ಕರೆದುಕೊಂಡು ಯಮುನಾ ತೀರದ ಮರಳು ದಿಣ್ಣೆಗಳಲ್ಲಿ ಆಡುತ್ತ ನಿಂತನು. ಹಾಗೆ ಬಹಳ ಹೊತ್ತು ಇದ್ದ ಮೇಲೆ ಎಲ್ಲರೂ ಬುತ್ತಿಗಳನ್ನು ತಿಂದು ನೀರು ಕುಡಿದು ವಿಶ್ರಮಿಸಿಕೊಂಡರು. ಕರುಗಳೂ ಹತ್ತಿರದಲ್ಲಿಯೇ ಇದ್ದುವು.

ಚತುರ್ಮುಖನು ಶ್ರೀಕೃಷ್ಣನನ್ನು ನೋಡಿ ಆತನ ಮಹಿಮೆಯನ್ನು ಇನ್ನೂ ನೋಡಬೇಕೆಂದು ಕರುಗಳನ್ನೂ ಗೋಪಾಲಕರನ್ನೂ ಮರೆಮಾಡಿದನು. ಕೃಷ್ಣನು ಅಷ್ಟು ಹೊತ್ತು ಹುಡುಕಿನೋಡಿ, ಚತು

ರ್ಮುಖನು ಅವುಗಳನ್ನು ಮರೆಮಾಡಿರುವನೆಂದು ತಿಳಿದು ಎಷ್ಟು ಕರು ಗಳಿದ್ದುವೋ, ಎಷ್ಟು ಹುಡುಗರಿದ್ದರೋ ಅಷ್ಟು ಕರುಗಳೂ ಅಷ್ಟು ಹುಡುಗರೂ ತಾನೇ ಆದನು. ಅದೇ ರೂಪದಿಂದಲೇ ಗೋಕುಲಕ್ಕೆ ಬಂದು ಮನೆಮನೆಗೂ ಹೋದನು. ಹೀಗೆ ಒಂದು ವರ್ಷ ಕಳೆಯಿತು. ಚತುರ್ಮುಖನು ಬಂದು ಸರ್ವರೂಪನಾಗಿರುವ ಶ್ರೀ ಕೃಷ್ಣನನ್ನು ಕಂಡು ಆಶ್ಚರ್ಯಪಟ್ಟು "ನನ್ನ ಮಾಯೆಯೆಲ್ಲಿ? ಶ್ರೀ ಮಹಾ ವಿಷ್ಣು ವಾದ ಈತನ ಮಾಯೆಯೆಲ್ಲಿ?'' ಎಂದು ಬಂದು ಆತನಿಗೆ ನಮಸ್ಕಾರ ಮಾಡಿದನು: "ಎಲೈ ಮಹಾ ಮಹಿಮನೆ, ಮನ್ನಿಸು. ಅಗ್ನಿಯಲ್ಲಿ ಹುಟ್ಟಿದ ಜ್ವಾಲೆಯು ಅಗ್ನಿಯಲ್ಲೇ ತನ್ನ ಶಕ್ತಿಯನ್ನೆಂತು ತೋರ ಲಾರದೋ ಹಾಗೆಯೇ ನಾನೂ ನಿನ್ನನ್ನು ಮರುಳು ಗೊಳಿಸಲಾರೆನು. ನನ್ನ ಅಪರಾಧವನ್ನು ಕ್ಷಮಿಸು" ಎಂದನು. ಶ್ರೀ ಕೃಷ್ಣನ ಅಪ್ಪಣೆ ಯನ್ನು ಪಡೆದು ಸತ್ಯಲೋಕಕ್ಕೆ ಹೋದನು.

ಚತುರ್ಮುಖನ ಮಾಯೆಯಿಂದ ಮರೆಯಾಗಿದ್ದ ಗೊಲ್ಲ ಹುಡು ಗರು ಶ್ರೀ ಕೃಷ್ಣನನ್ನು ಕಂಡಕೂಡಲೇ "ನಾವು ನೀನು ಬರಲಿಲ್ಲವೆಂದು ಒಂದು ತುತ್ತೂ ತಿಂದಿಲ್ಲ. ಬಾ. ಊಟ ಮಾಡೋಣ" ಎಂದರು. ಕೃಷ್ಣನು ನಗುತ್ತಾ ಅವರೊಡನೆ ಊಟಮಾಡಿ ಸಂಜೆಯಾಗುತ್ತಲೂ ಅವರೊಡನೆ ಕರುಗಳನ್ನು ಅಟ್ಟಿಕೊಂಡು ಗೋಕುಲಕ್ಕೆ ಬಂದನು.

ರಾಮಕೃಷ್ಣರು ದೊಡ್ಡವರಾದರು. ಕರುಗಳನ್ನು ಕಾಯು ತ್ತಿದ್ದವರಿಗೆ ದನ ಕಾಯುವ ವಯಸ್ಸಾಯಿತು. ಅವರಿಬ್ಬರೂ ಹಸುಗಳ ಮಂದೆಯನ್ನು ಮುಂದೆ ಬಿಟ್ಟುಕೊಂಡು ತಾವು ಕೊಳಲನ್ನೂದುತ್ತಾ ಹೋಗುವರು. ಗೋಪ ಬಾಲಕರು ಕೃಷ್ಣಲೀಲೆಗಳನ್ನು ವರ್ಣಿಸುತ್ತಾ ಹಿಂದೆ ಹೋಗುವರು. ಎಲ್ಲರೂ ಗೋವರ್ಧನ ಗಿರಿಯ ಸುತ್ತ ಮುತ್ತಿನ ಬೃಂದಾವನ ಪ್ರಾಂತಗಳಲ್ಲಿ ಸುತ್ತುವರು. ಶ್ರೀಕೃಷ್ಣನೊಮ್ಮೆ ಅಲ್ಲಿ ಕೂಗುವ ಹಕ್ಕಿಗಳ, ದುಂಬಿಗಳ, ಧ್ವನಿಯನ್ನು ಅನುಕರಿಸುವನು.

ಇನ್ನೊಮ್ಮೆ ಕ್ರೂರ ಮೃಗಗಳು ಕೂಗಿದಾಗ ಹೆದರಿಕೊಂಡವನಂತೆ ಅವಿತುಕೊಳ್ಳುವನು. ಇನ್ನೊಮ್ಮೆ ಆಟವಾಡಿ ಬಳಲಿ ಗೋಪಾಲಕರ ತೊಡೆಯ ಮೇಲೆ ಮಲಗಿದ ಅಣ್ಣನ ಕಾಲುಗಳನ್ನು ಒತ್ತುವನು. ಇನ್ನೊಮ್ಮೆ ಅಣ್ಣನೊಡನೆ ಕುಣಿಯುವನು, ಹಾಡುವನು. ಇನ್ನೊಮ್ಮೆ ಇಬ್ಬರೂ ಸೇರಿ ಸೆಗೆದಾಡುವ, ಕುಸ್ತಿ ಮಾಡುವ, ಗೋಪಾಲರನ್ನು ಕಂಡು ಭಲೇ ಎನ್ನುವರು. ಮತ್ತೊಮ್ಮೆ ತಾನೇ ಮಲ್ಲಯುದ್ಧದಲ್ಲಿ ಬಳಲಿ ಗೋಪ ಬಾಲಕರ ತೊಡೆಗಳ ಮೇಲೆ ತಲೆಯಿಟ್ಟು ಮಲಗು ವನು. ಅವರಿಂದ ಕಾಲು ಒತ್ತಿಸಿಕೊಳ್ಳುವನು, ಬೀಸಣಿಗೆಯಿಂದ ಬೀಸಿಸಿಕೊಳ್ಳುವನು ಹೀಗೆ ಆ ಹಳ್ಳಿಯ ಹುಡಗರೊಡನೆ ತಾನೂ ಹಳ್ಳಿಯ ಹುಡುಗನಂತೆ ಆಟವಾಡುತ್ತಿದ್ದನು.

ಒಂದ ದಿನ ಗೋಪ ಬಾಲಕರು ರಾಮಕೃಷ್ಣರ ಬಳಿಗೆ ಬಂದು "ಮಿತ್ರರೇ, ಇಲ್ಲೊಂದು ತಾಳೆಯ ವನವಿದೆ, ಅಲ್ಲಿ ದೊಡ್ಡ ದೊಡ್ಡ ತಾಳೆಯ ಮರಗಳು ಇವೆ: ಅಲ್ಲಿ ಹಣ್ಣುಗಳು ಬೀಳುತ್ತಲೂ ಇರುತ್ತವೆ. ಬಿದ್ದೂ ಇರುತ್ತವೆ, ಆದರೆ ಅಲ್ಲಿ ಧೇನುಕನೆಂಬ ದೈತ್ಯನಿದ್ದಾನೆ. ಅವನು ಕತ್ತೆಯ ಆಕಾರನಾಗಿದ್ದಾನೆ. ತನ್ನಂತೆಯೇ ಇರುವ ತನ್ನ ನೆಂಟನೊಡನೆ ಅಲ್ಲಿ ಸೇರಿಕೊಂಡು, ಇತರರು ಯಾರೂ ಅಲ್ಲಿಗೆ ಬರ ದಂತೆ ಮಾಡಿರುವನು. ನೋಡು, ಆ ತಾಳೇ ಹಣ್ಣುಗಳ ಸುಗಂಧವು ಇಲ್ಲಿಯವರೆಗೂ ಹಬ್ಬಿರುವುದು" ಎಂದರು. ರಾಮಕೃಷ್ಣರು ನಡೆಯಿರಿ ಎಂದು ಅವರೊಡನೆ ಆ ತಾಳೆಯ ತೋಪಿಗೆ ಹೋದರು.

ಬಲರಾಮನು ಒಂದು ಭಾರಿಯ ಮರವನ್ನು ಹಿಡಿದು ಅಲ್ಲಾಡಿಸಿ ದನು. ಹಣ್ಣುಗಳು ಬೇಕಾದ ಹಾಗೆ ಉದುರಿದುವು. ಹುಡುಗರು ಅದನ್ನು ಕೇಕೆ ಹಾಕಿಕೊಂಡು ತಿಂದರು. ಈ ಗದ್ದಲವನ್ನು ಕೇಳಿ ಧೇನುಕನೂ ಅವನ ಪರಿವಾರದವರೂ ಬಂದರು. ಧೇನುಕನು ಬಂದು ಬಲರಾಮನನ್ನು ಒದ್ದನು. ಬಲರಾಮನು ಅವನ ಹಿಂಗಾಲುಗಳನ್ನು

ಒಂದೇ ಕೈಯಿಂದ ಹಿಡಿದು ಗರಗರನೆ ತಿರುಗಿಸಿ ಒಂದು ಮರದ ಮೇಲೆ ಎಸೆದನು. ಆ ಧೇನುಕನು ರಾಮನ ಕೈಗೆ ಸಿಕ್ಕಿದಾಗಲೇ ಸತ್ತನು. ಅವನ ದೇಹವು ಬಿದ್ದ ಪೆಟ್ಟಿಗೆ ಆ ಮರವು ಮುರಿದು ಇನ್ನೊಂದರ ಮೇಲೆ ಬಿತ್ತು. ಅದು ಮುರಿದು ಇನ್ನೊಂದರ ಮೇಲೆ ಬಿತ್ತು. ಹೀಗೆ ಹಲವಾರು ಮರಗಳು ಉರುಳಿದುವು.

ಧೇನುಕನ ಪರಿವಾರದವರಿಗೂ ಧೇನುಕನ ಗತಿಯೇ ಆಯಿತು. ರಾಮಕೃಷ್ಣರ ಪರಾಕ್ರಮವನ್ನು ಕಂಡು ದೇವತೆಗಳು ಸಂತೋಷದಿಂದ ಪೂಮಳೆಗರೆದರು. ಅಂದಿನಿಂದ ಆ ದೈತ್ಯನ ಹಾವಳಿ ಇಲ್ಲವಾಯಿತು. ಆ ವನದಲ್ಲಿ ಗೋಪರು ನಿರ್ಭಯವಾಗಿ ಹಣ್ಣು ತಿಂದರು: ಹಸುಗಳು ಸಂತೋಷವಾಗಿ ಹುಲ್ಲು ಮೇದುವು.

ಹೀಗೆ ಬೃಂದಾವನದಲ್ಲಿ ಸುಖ ಸಂತೋಷಗಳಿಂದ ಸಂಚರಿಸುತ್ತಿದ್ದ ಶ್ರೀ ಕೃಷ್ಣನೊಮ್ಮೆ ಗೋಪಾಲಕರೊಡನೆ ಕಾಳಿಂದಿಯ ಮಡುವಿಗೆ ಹೋದನು. ಆ ಮಡುವಿನಲ್ಲಿ ಕಾಳಿಯನೆಂಬ ಒಂದು ಮಹಾ ಸರ್ಪವಿತ್ತು. ಆ ಸರ್ಪದ ವಿಷದಿಂದ ಆ ಮಡುವಿನ ನೀರೆಲ್ಲವೂ ಕುದಿಯುವುದು. ಆ ಭಾಗದಲ್ಲಿ ಆಕಾಶದಲ್ಲಿ ಹಾರಿಬಂದ ಪಕ್ಷಿಗಳೂ ಆ ವಿಷವೇಗವನ್ನು ಸಹಿಸಲಾರದೆ ಸತ್ತು ಬೀಳುವುವು. ಆ ಮಡುವಿನ ತಡಿಗೆ ಬಂದ ಪ್ರಾಣಿಗಳೂ ಕೂಡ ವಿಷದ ಗಾಳಿಯು ಸೋಕುತ್ತಲೂ ಮಡಿದುಬೀಳುವುವು. ಗೋ ಗೋಪಾಲಕರೂ ಅದೇ ಗತಿಯನ್ನು ಅನುಭವಿಸಿದರು. ಆ ಸ್ಥಳಕ್ಕೆ ಬರುತ್ತಲೂ ಅವರಿಗೆ ಬಹಳ ಆಯಾಸವಾಯಿತು: ಬಾಯಾರಿಕೆಯಾಯಿತು: ಬೇಗನೆ ಹೋಗಿ ನದಿಯ ನೀರನ್ನು ಕುಡಿದರು: ಅದರ ಫಲವಾಗಿ ಎಲ್ಲಿಯವರಲ್ಲಿ ಬಿದ್ದು ಪ್ರಾಣ ಬಿಟ್ಟರು.

ಶ್ರೀಕೃಷ್ಣನು ಅವನ್ನು ಕಂಡು "ಸರಿ, ಕಾಳಿಯನನ್ನು ಇಲ್ಲಿಂದ ಹೊರಡಿಸುವ ಕಾಲ ಬಂತು" ಎಂದುಕೊಂಡನು.



**ಕಾಳಿಂಗಮರ್ದನ**

(ಮೈಸೂರು ಶಾಸನ ಇಲಾಖೆಯ ಕೃಪೆಯಿಂದ)

ಆ ವಿಷದ ಮಡುವು ಆತನಿಗೇನು ಮಾಡೀತು? ಮಗ್ಗುಲಲ್ಲಿದ್ದ ಒಂದು ಈಚಲು ಮರವನ್ನೇರಿ; ಮಡುವಿಗೆ ದುಮುಕಿದನು. ಆ ಮಡುವನ್ನು ಕಲಕಿದನು. ವಿಶಾಲವೂ ಆಳವೂ ಆದ ಆ ಮಡುವು ಆತನ ಹೊಡೆತಕ್ಕೆ ಅಲ್ಲಾಡಿಹೋಯಿತು: ಮಹಾಶಬ್ದದಿಂದ ದೊಡ್ಡದೊಡ್ಡ ತೆರೆಗಳನ್ನು ಎಸೆಯುತ್ತ ಮೊರೆಯಿತು.

ಆ ಮಡುವಿನಲ್ಲಿದ್ದ ಕಾಳಿಯನು ಅಲ್ಲಿ ಆದ ಕಲ್ಲೋಲದಿಂದ ಕೋಪಗೊಂಡು ತಾನಿರುವೆಡೆಯಿಂದ ಈಚೆಗೆ ಬಂದನು. ತಾನಿರುವ ಮಡುವನ್ನು ಧೈರ್ಯವಾಗಿ ಕಲಕುತ್ತಿರುವ ಆ ಹುಡುಗನನ್ನು ನೋಡಿ ಅವನನ್ನು ಸುತ್ತಿಕೊಂಡು ಹೆಡೆಗಳಿಂದ ಹೊಡೆದು ಹೊಡೆದು ಕಚ್ಚಿದನು. ಶ್ರೀಕೃಷ್ಣನ ದೇಹಕ್ಕೆ ಸುತ್ತಿಕೊಂಡನು. ಶ್ರೀಕೃಷ್ಣನು ಇರಲೆಂದು ಒಂದು ಗಳಿಗೆ ಹಾಗೆಯೇ ಇದ್ದನು.

ಅತ್ತ ಗೋಕುಲದಲ್ಲಿ ಅಪಶಕುನಗಳಾದುವು. ಬೆಂಕಿಯ ಮಳೆಯಾಯಿತು. ಅಲ್ಲಿನವರು ಹೆದರಿ ಹಸುಗಳನ್ನೂ ಹುಡುಗರನ್ನೂ ಹುಡುಕಿಕೊಂಡು ಓಡಿ ಬಂದರು. ಹೆಜ್ಜೆಗಳ ಗುರುತಿನಿಂದ ಅವರ ಹಾದಿಯನ್ನು ಗುರುತಿಸಿಕೊಂಡು, ಕಾಳಿಯ ಮಡುವಿಗೆ ಹೋದರು. ಅವರ ಜೊತೆಯಲ್ಲಿದ್ದ ಬಲರಾಮನು ಮಾತ್ರ ಧೈರ್ಯವಾಗಿದ್ದನು. ಮಿಕ್ಕವರೆಲ್ಲರಿಗೂ ಕೃಷ್ಣನೇನಾಗಿರುವನೋ ಎಂದು ದಿಗಿಲು.

ಅವರು ಹೆದರಿದುದಕ್ಕೆ ತಕ್ಕಂತೆ ಕೃಷ್ಣನು ಹಾವಿಗೆ ಸಿಕ್ಕಿ ಬಿದ್ದಿದ್ದಾನೆ. ಆ ಹಾವಾದರೂ ಹಾವೇ? ಭಾರಿಯಾಗಿ ತೊಲೆಯ, ತುಂಡಿನಂತಿರುವ ಹಾವು. ಅದನ್ನೂ ಅದರ ಸುತ್ತುಗಳಲ್ಲಿ ಸಿಕ್ಕಿರುವ ಕೃಷ್ಣನನ್ನೂ ಕಂಡು ಗೋಕುಲಕ್ಕೆ ಗೋಕುಲವೇ ಅಯ್ಯೋ ಎಂದಿತು. ಹೆಂಗಸರು ಮಕ್ಕಳಿರಲಿ, ಗೋಪಾಲಕರಿರಲಿ, ನಂದನೇ ಅಲ್ಲಾಡಿಹೋದನು. ಎಲ್ಲರೂ ತಾವೂ ಮಡುವಿನಲ್ಲಿ ಬಿದ್ದು ಹೋಗುವುದೆಂದು ಹೊರಟರು. ರಾಮನು ಅವರನ್ನೆಲ್ಲಾ ಕಷ್ಟದಿಂದ ತಡೆದು ನಿಲ್ಲಿಸಿದನು.

ಶ್ರೀ ಕೃಷ್ಣನು ಇದೆಲ್ಲವನ್ನೂ ಕಂಡು ಇನ್ನು ಸುಮ್ಮನಿರಬಾರದೆಂದು ತನ್ನ ಶರೀರವನ್ನು ಬೆಳೆಸಿದನು. ಆ ದೇಹವು ಬೆಟ್ಟದಷ್ಟಾಯಿತು ಬೆಳೆದ ಆ ಶರೀರದ ಒತ್ತಡವನ್ನು ತಡೆಯಲಾರದೆ ಕಾಳಿಯನ ಹಿಡಿತವು ಸಡಿಲಿತು: ಆ ಹಾವು ಜಾರಿ ಬಿದ್ದು ಹೋಯಿತು. ಆದರೂ ಆ ಸರ್ಪವು ಹೆಡೆಗಳನ್ನು ಬಿಚ್ಚಿಕೊಂಡು ನಿಮಿರಿ ನಿಂತು ಮೂಗಿನ ಹೊಳ್ಳೆಗಳಿಂದ ವಿಷವನ್ನು ಉಗುಳುತ್ತಾ, ರೋಷದಿಂದ ಮೊರೆಯುತ್ತ, ಬೆಂಕಿಯ ಕೆಂಡದಂತಿರುವ ಕಣ್ಣುಗಳಿಂದ ದುರದುರನೆ ನೋಡುತ್ತ, ಹೆಡೆ ಹೆಡೆಯಿಂದಲೂ ಕವಲು ನಾಲಗೆಗಳನ್ನು ಚಾಚುತ್ತ, ಶ್ರೀಕೃಷ್ಣನನ್ನು ನೋಡುತ್ತ ನಿಂತಿತು. ಶ್ರೀ ಕೃಷ್ಣನು ಅದನ್ನು ಹಿಡಿಯಬೇಕೆಂದು ಅದರ ಸುತ್ತಲೂ ಸುಳಿದಾಡಿದನು. ಅದೂ ಶ್ರೀ ಕೃಷ್ಣನನ್ನು ಹಿಡಿಯಬೇಕೆಂದು ಹೊಂಚಿ ನಿಂತಿತು.

ಶ್ರೀ ಕೃಷ್ಣನು ಹಾರಿ ಅದರ ಹೆಡೆಯನ್ನೇರಿದನು. ಹಾವು ಅವನನ್ನು ಕೆಡಹಿಕೊಳ್ಳಬೇಕೆಂದು ಯತ್ನಿಸಿತು. ಸಾಧ್ಯವಾಗಲಿಲ್ಲ. ಕೃಷ್ಣನು ಆ ಕಾಳಿಯನ ಹರಡಿದ ತಲೆಗಳ ಮೇಲೆ ಕುಣಿಯಲು ಮೊದಲುಮಾಡಿದನು. ದಿವ್ಯ ರತ್ನಗಳಿಂದ ಕೂಡಿ ಮೆರೆಯುತ್ತಿದ್ದ ಹೆಡೆಗಳು ಕೃಷ್ಣನ ಕಾಲು ತುಳಿತಕ್ಕೆ ಸಿಕ್ಕಿ ಮುರಿದು ಹೋದುವು. ಶ್ರೀಕೃಷ್ಣನ ಪಾದಗಳು ಕೆಂಪಾಗಿ ಚಿಗುರಿದಂತಾದುವು. ಮುರಿದ ಹೆಡೆಗಳು ರಕ್ತವನ್ನು ಕಾರಿದುವು. ಕಣ್ಣುಗಳು ಮುಚ್ಚಿಹೋದುವು ಹೀಗಾಗಿ ಜೋಲುತ್ತಿರುವ ಹೆಡೆಗಳನ್ನು ಹೊತ್ತುಕೊಂಡು ನಿರ್ಬಲನಾದ ಕಾಳಿಯನು "ಪುರುಷೋತ್ತಮನೇ. ನೀನೇ ಗತಿ" ಎಂದು ಮನಸ್ಸಿನಿಂದಲೇ ನಮಸ್ಕಾರ ಮಾಡಿದನು. ಮದಗರ್ವಿತನಾದ ಕಾಳಿಯನಿಗೆ ಚೆನ್ನಾಗಿ ದಂಡನೆಯಾಯಿತೆಂದು ದೇವತೆಗಳು ಹಿಗ್ಗಿ ಪುಷ್ಪವೃಷ್ಟಿಯನ್ನು ಮಾಡಿದರು.

ಇತ್ತ ಕಾಳಿಯನ ಪತ್ನಿಯರು ಇನ್ನು ಸಾವಕಾಶ ಮಾಡಿದರೆ



ಗೋವರ್ಧನೋದ್ಧರಣ

(ಮೈಸೂರು ಶಾಸನ ಇಲಾಖೆಯ ಕೃಪೆಯಿಂದ)

ತಮ್ಮ ಪತಿಯು ಉಳಿಯುವಂತಿಲ್ಲವೆಂದು ಮಕ್ಕಳು ಮರಿಗಳನ್ನೆಲ್ಲಾ ಮುಂದಿಟ್ಟುಕೊಂಡು ಜಗತ್ಪತಿಯಾದ ಶ್ರೀಕೃಷ್ಣನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕೈಮುಗಿದು ನಾನಾ ವಿಧವಾಗಿ ಹೊಗಳಿದರು. "ದುಷ್ಟರನ್ನು ನಿಗ್ರಹಿಸುವುದಕ್ಕಾಗಿಯೇ ಹುಟ್ಟಿರುವ ಎಲೈ ಸ್ವಾಮಿಯೆ, ನೀನು ನಮ್ಮ ಪತಿಯನ್ನು ದಂಡಿಸಿದುದು ನ್ಯಾಯವೇ ಆದರೂ, ಇದು ದಂಡವಲ್ಲ; ಅನುಗ್ರಹ. ನಮ್ಮನ್ನೂ ನಮ್ಮ ಮಕ್ಕಳನ್ನೂ ನೋಡಿ ಇವನನ್ನು ಸಲಹು'' ಎಂದು ಬೇಡಿಕೊಂಡರು. ಆಗ ಕೃಷ್ಣನು ಅವರಿಗೆ ಮಂಗಳವಾಗಲೆಂದು ಕೆಳಗಿಳಿದನು.

ಆ ವೇಳೆಗೆ ಕಾಳಿಯನಿಗೆ ಮೂರ್ಛೆಯು ಬಂದಿತ್ತು. ಕೃಷ್ಣನು ಇಳಿದ ಮೇಲೆ ಮೆಲ್ಲನೆ ಚೇತರಿಸಿಕೊಂಡು ಕಣ್ಣು ಬಿಟ್ಟು ಕೃಷ್ಣನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, "ನನ್ನನ್ನು ಕ್ಷಮಿಸು, ನಾನು ಹುಟ್ಟಿರುವುದು ಜ್ಞಾನವಿಲ್ಲದ ಸರ್ಪಜಾತಿಯಲ್ಲಿ. ಈ ಜಾತಿಯೇ ಬಹು ಕೋಪವುಳ್ಳದು ನೀನು ನಿನ್ನ ಮಾಯೆಯನ್ನು ತೆಗೆದು ನನ್ನನ್ನು ಕಾಪಾಡು" ಎಂದು ಬೇಡಿಕೊಂಡನು. ಆಗ ಕೃಷ್ಣನು "ನೀನು ಇನ್ನು ಮುಂದೆ ಇಲ್ಲಿರಬೇಡ. ನಿನ್ನ ಪರಿವಾರವನ್ನೆಲ್ಲಾ ಕರೆದುಕೊಂಡು ರಮಣಕ ದ್ವೀಪಕ್ಕೆ ಹೋಗು. ನಿನ್ನ ತಲೆಯ ಮೇಲೆ ನನ್ನ ಕಾಲಿನ ಗುರುತುಗಳಿವೆ. ಗರುಡನು ನಿನ್ನನ್ನೂ ನಿನ್ನ ಪರಿವಾರದವರನ್ನೂ ಬಾಧಿಸುವುದಿಲ್ಲ" ಎಂದು ಅನುಗ್ರಹ ಮಾಡಿದನು. ಹಿಂದೆ ಕಾಳಿಂಗನು ಗರುಡನನ್ನು ಕಚ್ಚುವುದಕ್ಕೆ ಹೋಗಿ ಆತನ ರೆಕ್ಕೆಯ ಹೊಡೆತದಿಂದ ನೊಂದು ರಮಣಕ ದ್ವೀಪದಿಂದ ಓಡಿ ಬಂದು ಈ ಮಡುವನ್ನು ಸೇರಿದ್ದನು. ಗರುಡನು ಅಲ್ಲಿದ್ದ ಒಂದು ಭಾರಿಯ ಮೀನನ್ನು ಸೌಭರಿಯು ಬೇಡವೆಂದರೂ ಭಕ್ಷಿಸಿ, "ಮತ್ತೆ ನೀನಿಲ್ಲಿ ಬಂದರೆ ಸತ್ತು ಹೋಗುವೆ" ಎಂದು ಆತನಿಂದ ಶಾಪವನ್ನು ಹೊಂದಿದ್ದನಾಗಿ ಅಲ್ಲಿಗೆ ಬರುತ್ತಿರಲಿಲ್ಲ. ಈಗ ಗರುಡನ ಭಯವಿಲ್ಲವೆಂದು ಅನುಗ್ರಹವಾಗಲು, ಕಾಳಿಂಗನು

ತನ್ನವರೊಂದಿಗೆ ಶ್ರೀ ಕೃಷ್ಣನಿಗೆ ನಮಸ್ಕಾರ ಮಾಡಿ ಹೊರಟು ಹೋದನು.

ಕಾಳಿಯನು ಹೋಗುತ್ತಲೂ ಮಡುವಿನ ನೀರೆಲ್ಲಾ ಮತ್ತೆ ನಿರ್ಮಲವಾಯಿತು. ಆ ನಿರ್ಮಲೋದಕದಿಂದ ಶ್ರೀ ಕೃಷ್ಣನು ಎದ್ದು ಬಂದನು. ಆ ವಿಷದ ನೀರನ್ನು ಕುಡಿದು ಬಿದ್ದು ಹೋಗಿದ್ದ ಗೋವುಗಳೂ ಗೋಪಾಲಕರೂ ಮತ್ತೆ ನಿದ್ದೆ ಮಾಡಿದವರಂತೆ ಮೇಲಕ್ಕೆದ್ದರು. ನದಿಯಿಂದ ಬರುತ್ತಿರುವ ಕೃಷ್ಣನನ್ನು ಯಶೋದೆಯು ತಬ್ಬಿಕೊಂಡಳು. ಎಲ್ಲರೂ ಬಂದು ಮೃತನಾಗಿ ಬದುಕಿ ಬಂದವನನ್ನು ಬರಮಾಡಿ ಕೊಳ್ಳುವಂತೆ ಸ್ವೀಕರಿಸಿದರು. ಎಲ್ಲರೂ ಆಯಾಸಪಟ್ಟಿದ್ದರಿಂದ ಆ ರಾತ್ರಿ ಅಲ್ಲಿಯೇ ಇರುವುದೆಂದುಕೊಂಡರು.

ಎಲ್ಲರೂ ಮಲಗಿರುವಾಗ ನಟ್ಟಿರುಳಿನಲ್ಲಿ ಆ ಕಾಡಿನಲ್ಲಿ ಕಾಳ್ಗಿಚ್ಚು ಎದ್ದಿತು. ಭಯಂಕರವಾದ ಗಾಳಿಯು ಬೀಸಿ ಆ ಕಿಚ್ಚು ಒಂದೇ ಗಳಿಗೆಯಲ್ಲಿ ಎಲ್ಲವನ್ನೂ ಆವರಿಸಿತು. ಎಲ್ಲರೂ ಗಾಬರಿಯಾದರು. ಶ್ರೀ ಕೃಷ್ಣನು ಅವರ ಮೊರೆ ಕೇಳಿ ಆ ಕಾಳ್ಗಿಚ್ಚನ್ನು ನುಂಗಿ ಅವರಿಗೆ ಕ್ಷೇಮವಾಗುವಂತೆ ಮಾಡಿದನು.

---

## ಮೂವತ್ತೈದನೆಯ ಅಧ್ಯಾಯವು

# ಬೃಂದಾವನ ಲೀಲೆಗಳು

ಬೃಂದಾವನದಲ್ಲಿ ಬೇಸಿಗೆಯು ಬಂತು. ಗಿಡಗಳು ಚಿಗುರಿದುವು. ಝಿಲ್ಲಿಗಳ ಝೇಂಕಾರವು ಎಲ್ಲೆಲ್ಲಿಯೂ ತುಂಬಿತು. ನದಿಗಳು ತಗ್ಗಿದುವು. ಬಿಸಿಲು ತಾನೇ ತಾನಾಯಿತು. ರಾಮಕೃಷ್ಣರು ಮಿತ್ರರೊಡನೆ ವನಗಳಲ್ಲಿ ಬೇಕಾದ ಹಾಗೆ ವಿಹರಿಸಿದರು.

ಒಂದು ದಿನ ಅವರು ಆಟವಾಡುತ್ತಿರುವಾಗ ಪ್ರಲಂಬನೆಂಬ

ಅಸುರನು ಅವರನ್ನು ಕೊಲ್ಲಬೇಕೆಂದು ಅಲ್ಲಿಗೆ ಬಂದು ಸೇರಿಕೊಂಡನು. ಶ್ರೀ ಕೃಷ್ಣನಿಗೆ ಅವನು ಇಂತಹವನೆಂದು ಗೊತ್ತಿದ್ದರೂ ಅವನನ್ನು ಆಟಕ್ಕೆ ಸೇರಿಸಿಕೊಂಡನು. ಗೋಪಾಲಕರು ಎರಡು ಗುಂಪಾಗಿ ಸೋತವರಿಗೆ ಗೆದ್ದವರಿಗೆ ಕುದುರೆ ಕೊಡಬೇಕೆಂದು ಗೊತ್ತು ಮಾಡಿಕೊಂಡು ಆಡಿದರು. ಒಂದೊಂದು ಗುಂಪಿನವರು ಒಂದೊಂದು ಸಲ ಸೋಲುತ್ತಾ ಗೆಲ್ಲುತ್ತಾ ಆಡುತ್ತಿರುವಾಗ, ಒಂದು ಸಲ ರಾಮನ ಗುಂಪಿನವರು ಗೆದ್ದರು. ಕೃಷ್ಣನ ಗುಂಪಿನಲ್ಲಿದ್ದ ಪ್ರಲಂಬನು ರಾಮನನ್ನು ಹೊರಬೇಕಾಯಿತು. ಇದೇ ಸಮಯವೆಂದು ಅವನು ಅವನನ್ನು ಹೊತ್ತುಕೊಂಡು ಕುದುರೆಯ ಹಾಗೆ ಓಡಿದನು. ಅವನಿಗೆ ರಾಮನನ್ನು ಹೊರುವುದು ಕಷ್ಟವಾಯಿತು. ಆಗ ತನ್ನ ಮಾಯಾರೂಪವನ್ನು ಬಿಟ್ಟು ನಿಜರೂಪವನ್ನು ಧರಿಸಬೇಕಾಯಿತು. ರಾಕ್ಷಸ ರೂಪದಿಂದ ರಾಮನನ್ನು ಹೆಗಲ ಮೇಲೆ ಹೊತ್ತುಕೊಂಡು ಆಕಾಶಕ್ಕೆ ಹಾರಿದನು. ರಾಮನು ಕಳ್ಳಾಟವನ್ನು ಕಂಡು ಹೆದರದೆ, ತನ್ನ ಮುಷ್ಟಿಯಿಂದ ಪ್ರಲಂಬನನ್ನು ಹೊಡೆದನು. ಆ ವಜ್ರ ಮುಷ್ಟಿಯ ಏಟು ಸಾಮಾನ್ಯವೆ? ರಾಕ್ಷಸನು ತಲೆಯೊಡೆದು ಕೆಳಕ್ಕೆ ಬಿದ್ದು ಸತ್ತನು.

ಒಂದು ದಿನ ಅವರು ಕಾಯುತ್ತಿದ್ದ ಪಶುಗಳೆಲ್ಲವೂ ಹುಲ್ಲು ಹುಡುಕಿಕೊಂಡು ಮುಂಜಾರಣ್ಯವೆಂಬ ಒಂದು ಕಾಡನ್ನು ಹೊಕ್ಕವು ಆಟವಾಡುತ್ತಿದ್ದ ಗೋಪಾಲಕರು ಅವನ್ನು ನೋಡಲಿಲ್ಲ. ಕೊನೆಗೆ ಪಶುಗಳು ಇಲ್ಲದಿರುವುದನ್ನು ಕಂಡು ಹುಡುಕಿಕೊಂಡು ಹೊರಟರು. ಶ್ರೀ ಕೃಷ್ಣನು ಹಸುಗಳನ್ನು ಹೆಸರಿಡಿದು ಕೂಗುತ್ತಲೂ ಅವು ದೂರದಿಂದ ಅಂಬಾ ಎಂದು ಕೂಗಿದುವು. ಅಲ್ಲಿ ಹೋಗಿ ನೋಡಿದರೆ, ಅವು ಕಾಡುಕಿಚ್ಚಿಗೆ ಸಿಕ್ಕಿವೆ. ಗೋಪಾಲಕರು ಅದನ್ನು ಕಂಡು ಹಾ ಎಂದು ಗಾಬರಿಯಾದರು. ಶ್ರೀ ಕೃಷ್ಣನು ಅವರಿಗೆ ಧೈರ್ಯ ಹೇಳಿ, ಹಸುಗಳೆಲ್ಲವನ್ನೂ ಸುಖವಾಗಿ ಕರೆತಂದನು.

ಬಿಸಿಲುಗಾಲವು ಕಳೆದು ಮಳೆಗಾಲವು ಬಂತು ಆಕಾಶದಲ್ಲಿ ಮೋಡಗಳು ತುಂಬಿ, ಮಿಂಚುಗಳನ್ನು ಬೆಳಗಿ, ಸಿಡಿಲುಗಳಿಂದ ಅಬ್ಬರಿಸಿದುವು. ಸೂರ್ಯನು ಅದುವರೆಗೂ ತಾನು ಹೀರಿದ್ದ ನೀರನ್ನು ಮಳೆಯಾಗಿ ಕರೆಯಲು ಆರಂಭಿಸಿದನು. ಹೊಸನೀರು ಹೊಲ ಗದ್ದೆಗಳಿಗೂ ಸರ್ವ ಪ್ರಾಣಿಗಳಿಗೂ ಸಂತೋಷವನ್ನು ತಂದಿತು. ನವಿಲುಗಳು ಕುಣಿದುವು. ನೇರಲು ಮರಗಳು ಹಣ್ಣುಗಳಿಂದ ಜಗ್ಗಿದುವು.

ಶ್ರೀ ಕೃಷ್ಣನೂ ರಾಮನೂ ಗೋಪಾಲಕರೊಡನೆ ಆ ಕಾಲದಲ್ಲಿಯೂ ಕಾಡಿನಲ್ಲಿ ಸುಖವಾಗಿ ವಿಹರಿಸಿದರು. ಮಳೆಯು ಬಲವಾದಾಗ ಗುಹೆಗಳಲ್ಲಿಯೋ ದೊಡ್ಡ ಮರಗಳ ಕೆಳಗೋ ನಿಲ್ಲುವರು. ಬೆಟ್ಟದಿಂದ ಇಳಿಯುವ ನೀರಿನ ಮಗ್ಗುಲಲ್ಲಿ ಕುಳಿತು ಮೊಸರನ್ನದ ಬುತ್ತಿಯನ್ನು ತಿನ್ನುವರು. ಕೆಸರಿನಲ್ಲಿ ನೀರಿನಲ್ಲಿ ಕುಣಿದಾಡುವರು ಹೀಗೇ ಮಳೆಗಾಲವೂ ಕಳೆದು ಶರತ್ಕಾಲವು ಬಂತು.

ಹರಿಯುವ ನದಿಗಳ ನೀರು ತಿಳಿಯಾಯಿತು. ಆಕಾಶದಲ್ಲಿ ಕರಿಯ ಮೋಡಗಳು ಪರಿಶುದ್ಧರಾದ ಮುನಿಗಳಂತೆ ಬೆಳ್ಳಗಾದುವು. ಕೆಸರುಗಳು ಒಣಗಿದುವು. ಚಂದ್ರನು ಬೆಳ್ಳಗೆ ಬೆಳಗಿದನು. ಗದ್ದೆಗಳು ಬೆಳೆದು ಮನೋಹರವಾದುವು. ಕೊಳಗಳಲ್ಲಿ ತಾವರೆಗಳು ಅರಳಿ ನೋಡುವುದಕ್ಕೆ ಎರಡು ಕಣ್ಣು ಸಾಲದು ಎಂಬಂತಾದುವು. ವ್ಯಾಪಾರಿಗಳು ದೂರದೇಶದ ವ್ಯಾಪಾರಗಳಿಗೆ ಹೊರಟರು.

ಶ್ರೀಕೃಷ್ಣನು ತಲೆಯಲ್ಲಿ ನವಿಲುಗರಿಯನ್ನು ಕಿವಿಗಳಲ್ಲಿ ಬೆಟ್ಟದಾವರೆಯನ್ನು ಕೊರಳಲ್ಲಿ ವನಮಾಲೆಯನ್ನು ಮೈಯಲ್ಲಿ ಪೀತಾಂಬರವನ್ನು ಧರಿಸಿ, ಕೊಳಲನ್ನು ಮಧುರವಾಗಿ ಬಾರಿಸಿದನು. ಆ ಕೊಳಲಿನ ನಾದವು ಕಾಡಿನಿಂದ ಬಂದು ಊರನ್ನು ಹೊಕ್ಕು ಅಲ್ಲಿದ್ದ ಗೋಪಿಯರ ಮನಸ್ಸನ್ನು ಕಲಕಿತು. ಆ ಕೊಳಲು ಕೃಷ್ಣನನ್ನು ಕಂಡವರು ಆತನ ಮುಖವನ್ನು ನೋಡುವುದು ಬಿಟ್ಟು ಇನ್ನೇನೂ ಬೇಡ

ವೆಂದವು. ವನಕೆರುಗಳೂ ಬಂದು ಆತನನ್ನು ಸುತ್ತಿಕೊಂಡು ಆ ಕೊಳ ಲನ್ನು ಕೇಳುವುವು. ಗೋಪಾಲಕರಂತೂ ನಿಂತಲ್ಲಿ ನಿಲ್ಲುವರು. ಅಷ್ಟರಿರಲಿ, ಯಮುನೆಯು ಹರಿಯುವುದನ್ನು ಬಿಟ್ಟು ನಿಂತು ಕೇಳು ವಳು. ಗೋವರ್ಧನ ಗಿರಿಯು ಆ ದಿವ್ಯ ವೇಣುಗಾನವನ್ನು ಕೇಳಿ ಸುಖಿಸಿ ತಲೆಯನ್ನು ಆಲ್ಲಾಡಿಸುವುದು. ಅಷ್ಟೇನು ? ಆ ವೇಣು ಗಾನವನ್ನು ಕೇಳಿದವರೆಲ್ಲ ಶ್ರೀಕೃಷ್ಣನನ್ನು ನೆನೆಯುವರು. ಆಗ ಅವರಿಗೆ ಆತನೇ ಎದುರು ನಿಂತಂತಾಗುವುದು. ಆ ಮನೋಹರ ರೂಪವನ್ನು ನೋಡಿ ವ್ಯೈಮರೆಯುವರು. ಕೃಷ್ಣಾ ಎಂದು ಕೃಷ್ಣನ ಧ್ಯಾನ ದಲ್ಲಿದ್ದು ಬಿಡುವರು.

ಮಾರ್ಗಶಿರ ಮಾಸವು ಬಂತು. ನಂದವ್ರಜದ ಕನ್ನೆಯರು ಕಾತ್ಯಾಯನೀವ್ರತವನ್ನು ಮಾಡಿದರು. ಅವರು ದಿನವೂ ಬೆಳಗಾಗುವ ವೇಳೆಗೆ ಯಮುನೆಯಲ್ಲಿ ಸ್ನಾನಮಾಡಿ, ಮರಳಿನಲ್ಲಿ ಮಾಡಿದ ಗೌರೀ ದೇವಿಯನ್ನು ಅರ್ಚಿಸುವರು. ಅವರು ಬೆಳಗಿನ ಜಾವದಲ್ಲಿ ನದಿಗೆ ಹೋಗುವಾಗ ಶ್ರೀಕೃಷ್ಣನ ಚರಿತ್ರೆಗಳನ್ನು ಹಾಡಿಕೊಂಡು ಹೋಗುವರು.

ಆ ಕನ್ನೆಯರೆಲ್ಲರೂ ಒಂದು ದಿನ ತಮ್ಮ ಬಟ್ಟೆಗಳನ್ನೆಲ್ಲಾ ದಡ ದಲ್ಲಿ ಬಿಚ್ಚಿಟ್ಟು ನದಿಗಿಳಿದು ಜಲಕ್ರೀಡೆಯಾಡುತ್ತಿದ್ದರು. ಶ್ರೀಕೃಷ್ಣನು ಅಲ್ಲಿಗೆ ಹೋಗಿ ಅವರ ಬಟ್ಟೆಗಳನ್ನೆಲ್ಲಾ ಮರದ ಮೇಲಿಟ್ಟು ತಾನೊಂದು ಮರವನ್ನೇರಿ ಕುಳಿತನು. ಅವರು ಜಲಕ್ರೀಡೆಯನ್ನು ಮುಗಿಸಿಕೊಂಡು ಬಂದು ತಮ್ಮ ಬಟ್ಟೆಗಳು ಇಲ್ಲದಿರುವುದನ್ನು ಕಂಡು ಗಾಬರಿಯಾದರು. ಶ್ರೀಕೃಷ್ಣನು ಆ ಬಟ್ಟೆಗಳು ಮರದ ಮೇಲಿರುವು ದನ್ನು ತೋರಿಸಿದನು. "ನೀವೆಲ್ಲಾ ವ್ರತಮಾಡುವವರು ಅದು ಹೇಗೆ ಬೆತ್ತಲೆಯಾಗಿ ನೀರಿಗೆ ಇಳಿದಿರಿ? ಆ ಪಾಪಕ್ಕಾಗಿ ಎರಡು ಕೈಗಳನ್ನು ಎತ್ತಿ ತಪ್ಪಾಯಿತೆಂದು ನದಿಗೆ ಕೈಮುಗಿದು, ನಿಮ್ಮ ನಿಮ್ಮ ಬಟ್ಟೆಗಳನ್ನು

ನೀವು ತೆಗೆದುಕೊಳ್ಳಿ'' ಎಂದನು. ನಾಚಿ ನೀರಾಗಿ ಹೋಗಿದ್ದ ಆ ಹುಡು ಗಿಯರು ಯತ್ನವಿಲ್ಲದೆ ಹಾಗೇ ಮಾಡಿದರು.

ಇನ್ನೊಮ್ಮೆ ದನಗಳನ್ನು ಕಾಯುತ್ತಿರುವಾಗ ಗೋಪಾಲಕರಿಗೆ ಹಸಿವು ತಾನೇ ತಾನಾಯಿತು. ಆಗ ಶ್ರೀಕೃಷ್ಣನು ಬೃಂದಾವನದ ಸಮೀಪದಲ್ಲಿ ಯಜ್ಞಮಾಡುತ್ತಿದ್ದ ಬ್ರಾಹ್ಮಣರ ಬಳಿ ಹೋಗಿ ನನ್ನ ಹೆಸರು ಹೇಳಿ ಅನ್ನವನ್ನು ಕೇಳಿ ಎಂದನು. ಗೋಪಾಲರು ಹೋಗಿ ಕೇಳಲು, ಅವರು ಶ್ರೀಕೃಷ್ಣನೇ ಪರಮಾತ್ಮನು ಎಂಬುದನ್ನು ಗಮನಿ ಸದೆ ಸುಮ್ಮನಿದ್ದು ಬಿಟ್ಟರು. ಆದರೆ ಆ ಬ್ರಾಹ್ಮಣ ಪತ್ನಿಯರು ಶ್ರೀಕೃಷ್ಣನು ಪರಮಾತ್ಮನೆಂಬುದನ್ನು ಗುರುತು ಹಿಡಿದು, ಬೇಕು ಬೇಕಾದುದನ್ನೆಲ್ಲಾ ಕೊಟ್ಟು ಅವರನ್ನು ಸಂತೋಷಪಡಿಸಿ ಶ್ರೀಕೃಷ್ಣ ಬಲರಾಮರಿಗೂ ರುಚಿ ರುಚಿಯಾದ ತಿಂಡಿ ಊಟಗಳನ್ನು ತಾವೇ ಹೊತ್ತುಕೊಂಡು ಬಂದು ಅವರಿಗೆ ಬಡಿಸಿದರು. ಅವರು ಪರಮಾತ್ಮನ ಅನುಗ್ರಹನನ್ನು ಪಡೆದು ಕೃತಾರ್ಥರಾದರು. ಅದನ್ನು ಕಂಡು ಬ್ರಾಹ್ಮ ಣರೂ ಪಶ್ಚಾತ್ತಾಪಪಟ್ಟು ಮರುಗಿ, ಶ್ರೀ ಕೃಷ್ಣನ ಬಳಿಗೆ ಬಂದು ತಮ್ಮ ತಪ್ಪನ್ನು ಒಪ್ಪಿಕೊಂಡು ಅವನ ಕೃಪೆಯಿಂದ ಕೃತಾರ್ಥರಾದರು.

ಗೋಪರೆಲ್ಲರೂ ವರ್ಷಕ್ಕೊಂದು ಸಲ ಇಂದ್ರನ ಪ್ರೀತಿಗಾಗಿ ಒಂದು ಯಾಗವನ್ನು ಮಾಡುತ್ತಿದ್ದರು. ಆ ವರ್ಷವೂ ಅದಕ್ಕಾಗಿ ಎಲ್ಲವನ್ನೂ ಸಿದ್ಧಪಡಿಸಿಕೊಳ್ಳುತ್ತಿರುವಾಗ ಶ್ರೀಕೃಷ್ಣನು ಏನೂ ತಿಳಿ ಯದವನಂತೆ ಹೋಗಿ ತಂದೆಯಾದ ನಂದನನ್ನು "ಇಷ್ಟೆಲ್ಲಾ ಸಿದ್ಧವಾ ಗುತ್ತಿರುವುದು ಏಕೆ?" ಎಂದು ಕೇಳಿದನು. ಆತನು, "ಲೋಕದಲ್ಲಿ ಬೆಳೆಯಾಗಲು ಮಳೆಯು ಕಾರಣ: ಮಳೆಯಾಗುವುದು ಇಂದ್ರನ ಕೃಪೆ ಯಿಂದ. ಅದರಿಂದ ಆತನಿಗಾಗಿ ಈ ಯಾಗವನ್ನು ಮಾಡುವೆವು" ಎಂದನು. ಕೃಷ್ಣನು "ನಾವು ವೈಶ್ಯರು, ಪಶುಪಾಲನದಿಂದ ಜೀವಿ ಸುವವರು. ನಮಗೆ ಮನೆಯಿಲ್ಲ. ಮಠವಿಲ್ಲ. ಬೆಟ್ಟಗುಡ್ಡಗಳು ನಮಗೆ

ಆಶ್ರಯವು. ನಮಗೆ ಈ ಇಂದ್ರನ ಕೃಪೆಯಿಂದ ಆಗಬೇಕಾದುದೇನು? ಅದರಿಂದ, ಈಗ ನೀವು ಕೂಡಿಹಾಕಿರುವ ಪದಾರ್ಥಗಳಿಂದ ಗೋವರ್ಧನಗಿರಿಗೆ ಪೂಜೆಮಾಡಿ. ಗೋವುಗಳಿಗೆ ಯಥೇಚ್ಛವಾಗಿ ಹಸಿಯ ಹುಲ್ಲನ್ನು ಹಾಕಿ. ಎಲ್ಲರಿಗೂ ಸಮೃದ್ಧಿಯಾಗಿ ಊಟಹಾಕಿ. ಗೋವುಗಳನ್ನೂ ಗಿರಿಯನ್ನೂ ಪ್ರದಕ್ಷಿಣೆಮಾಡಿ'' ಎಂದನು. ನಂದನೇ ಮೊದಲಾದ ಗೋಪರೆಲ್ಲಾ ಶ್ರೀಕೃಷ್ಣನ ಮಾತೇ ಸರಿಯೆಂದು ಹಾಗೆಯೇ ಮಾಡಿದರು. ಗೋವುಗಳಿಗೆ ಬೇಕಾದಷ್ಟು ಹಸಿಯ ಹುಲ್ಲು ಹಾಕಿದರು. ಸಿಂಗರಿಸಿದ ಎತ್ತುಗಳನ್ನು ಬಂಡಿಗಳಿಗೆ ಕಟ್ಟಿದರು. ಗೋಗಣಗಳನ್ನು ಮುಂದೆ ಬಿಟ್ಟುಕೊಂಡು, ಅವುಗಳ ಹಿಂದೆ ತಾವೆಲ್ಲರೂ ಬಂಡಿಗಳಲ್ಲಿ ಕುಳಿತು, ಶ್ರೀಕೃಷ್ಣನ ಮಹಿಮೆಗಳನ್ನು ಕೊಂಡಾಡುತ್ತಾ ಗೋವರ್ಧನಗಿರಿಯನ್ನೇ ಪ್ರದಕ್ಷಿಣೆ ಮಾಡಿದರು.

ತನಗೆ ಎಂದಿನಂತೆ ಪೂಜೆ ಮಾಡಲಿಲ್ಲವೆಂದು ಮಹೇಂದ್ರನಿಗೆ ಕೋಪ ಬಂತು. ತನ್ನ ಕೈಕೆಳಗಿದ್ದ ಮೇಘಗಳನ್ನು ಕರೆದು, "ಹೋಗಿ ನಂದವ್ರಜದಲ್ಲಿ ಅತಿವೃಷ್ಟಿ ಮಾಡಿರಿ. ಆ ವ್ರಜವೆಲ್ಲವೂ ಕೊಚ್ಚಿ ಹೋಗಲಿ'' ಎಂದು ಆಜ್ಞೆಮಾಡಿದನು. ಆ ಮೇಘಗಳು ಅವಕಾಶ ಸಿಕ್ಕಿತಲ್ಲಾ ಎಂದು ಬೃಂದಾವನವನ್ನು ಮುತ್ತಿದುವು. ಮಿಂಚೂ ಗುಡುಗೂ ತಾನೇ ತಾನಾಗಿ ಹೋಯಿತು. ಒಂದೇ ಗಳಿಗೆಯೊಳಗಾಗಿ ಎಲ್ಲೆಲ್ಲೂ ನೀರೇ ನೀರಾಗಿ ಹೋಯಿತು. ಹಳ್ಳ ತಿಟ್ಟು ಎನ್ನುವುದೇ ಇಲ್ಲದೇ ಎಲ್ಲವೂ ಒಂದೇ ರೀತಿಯಾಗಿ ಜಲಮಯವಾಗಿ ಹೋಯಿತು. ಗೋವುಗಳು, ಗೋಪರು, ಎಲ್ಲರೂ ನೀರಿನ ಹೊಡೆತವನ್ನೂ ಚಳಿಯನ್ನೂ ಸೈರಿಸಲಾರದೆ ನಡುಗಿ ಹೋದರು. ವ್ರಜಕ್ಕೆ ವ್ರಜವೇ, ಗೋವುಗಳು, ಕರುಗಳು, ಬಾಲಕರು, ಗೋಪಿಯರು, ಗೋಪರು, ಎಲ್ಲರೂ ಶ್ರೀಕೃಷ್ಣನ ಮರೆಹೊಕ್ಕರು. "ಈ ಅಕಾಲದಲ್ಲಿ ಈ ಅತಿವೃಷ್ಟಿಯುಂಟೆ?'' ಎಂದು ಮರುಗಿದರು

ಶ್ರೀಕೃಷ್ಣನು "ಇದು ಇಂದ್ರನ ಕೆಲಸ. ಇದನ್ನೇ ನೆವ ಮಾಡಿಕೊಂಡು ಅವನ ಗರ್ವವನ್ನು ಇಳಿಸಬೇಕು'' ಎಂದು ಗೊತ್ತುಮಾಡಿಕೊಂಡನು. ಅವರೆಲ್ಲರಿಗೂ "ಹೆದರ ಬೇಡಿ" ಎಂದು ಧೈರ್ಯಹೇಳಿ, ಒಂದು ನಾಯಿಕೊಡೆಯನ್ನು ಎತ್ತುವಷ್ಟು ಸುಲಭವಾಗಿ ಒಂದೇ ಕೈಯ್ಯಿಂದ ಆ ಗೋವರ್ಧನ ಗಿರಿಯನ್ನು ಎತ್ತಿದನು. "ಬನ್ನಿ, ಈ ಕಳಿಯಲ್ಲಿ ಎಲ್ಲರೂ ಇರಿ. ಇಲ್ಲಿ ಗಾಳಿಯ ಭಯವಿಲ್ಲ. ಮಳೆಯ ಭೀತಿಯಿಲ್ಲ. ಈ ಬೆಟ್ಟವು ಬೀಳುವುದಿಲ್ಲ." ಎಂದು ಹೇಳಿ, ಅವರೆಲ್ಲರನ್ನೂ ಅವರವರ ಗೋಧನಗಳನ್ನೂ ಅಲ್ಲಿ ಇಟ್ಟನು.

ಮಳೆಯು ಏಳು ದಿನ ಒಂದೇ ಸಮನಾಗಿ ಕರೆಯಿತು. ಆ ಏಳು ದಿನಗಳೂ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಚತ್ರಿಯಂತೆ ಹಿಡಿದುಕೊಂಡು ನಿಂತಲ್ಲಿಯೇ ನಿಂತು ಕೊಂಡಿದ್ದನು. ಅವನ್ನು ಕಂಡು ಇಂದ್ರನಿಗೆ ನಾಚಿಕೆಯಾಯಿತು. ಮಳೆಯನ್ನು ನಿಲ್ಲಿಸಿದನು. ಮಳೆ ನಿಂತು, ಮೋಡವು ಚದುರಿ, ಎಲ್ಲವೂ ತಿಳಿಯಾಗುತ್ತಲೂ, ಆತನು ಎಲ್ಲರನ್ನೂ "ಇನ್ನು ಹೋಗೋಣ" ಎಂದು ಹೊರಕ್ಕೆ ಕರೆತಂದು, ಗೋವರ್ಧನವನ್ನು ಮತ್ತೆ ಅದು ಮೊದಲಿದ್ದ ಎಡೆಯಲ್ಲಿಟ್ಟನು.

ಆತನ ಆ ಅದ್ಭುತ ಕರ್ಮವನ್ನು ಕಂಡು ಎಲ್ಲರೂ ವಿಸ್ಮಯಪಟ್ಟು ನಂದನನ್ನು ಕುರಿತು, ''ನಿನ್ನ ಮಗನ ವಿಚಾರವೇನು ? ಈತನು ಸಾಮಾನ್ಯನಲ್ಲ. ನಿನಗೆ ಗೊತ್ತಿದ್ದರೆ ಈತನ ವಿಷಯವನ್ನು ನಮಗೂ ತಿಳಿಸು" ಎಂದರು. ಆತನು ತನ್ನ ಗುರುವಾದ ಗರ್ಗ್ಯಾಚಾರ್ಯನು ಹೇಳಿದ್ದುದನ್ನು ನೆನೆದುಕೊಂಡು, "ಈತನು ನಾರಾಯಣನಂತೆ. ಈತನು ಕೃತಯುಗದಲ್ಲಿ ಬೆಳ್ಳಗೂ ತ್ರೇತಾಯುಗದಲ್ಲಿ ಕೆಂಪಗೂ ದ್ವಾಪರದಲ್ಲಿ ಹಳದಿಯಾಗಿಯೂ, ಈಗ ಕಪ್ಪಗೂ ಇರುವನಂತೆ. ಈತನಿಗೆ ನಾನಾ ನಾಮಗಳೂ ನಾನಾ ರೂಪಗಳೂ ಉಂಟಂತೆ.'' ಎಂದು ತನಗೆ

ಗೊತ್ತಿದ್ದುದನ್ನೆಲ್ಲಾ ಹೇಳಿದನು. ಅವರೆಲ್ಲರೂ ಅದನ್ನು ನಂಬಿದರು. ಎಲ್ಲರೂ ಶ್ರೀಕೃಷ್ಣನನ್ನು ಬೇಕಾದ ಹಾಗೆ ಅರ್ಚಿಸಿದರು.

ಇಂದ್ರನು ಇದೆಲ್ಲವನ್ನೂ ಕಂಡು ತಾನು ಮಾಡಿದುದು ತಪ್ಪಾಯಿತೆಂದುಕೊಂಡನು. ಕಾಮಧೇನುವನ್ನು ಕರೆದುಕೊಂಡು ಬಂದು ನಾಚಿಕೆಯಿಂದ ಶ್ರೀ ಕೃಷ್ಣನನ್ನು ಕಂಡು ತಪ್ಪಾಯಿತೆಂದು ನಮಸ್ಕಾರ ಮಾಡಿದನು. "ದೇವ, ನನಗೆ ಮತ್ತೆ ಇಂತಹ ದುರ್ಬುದ್ಧಿಯುಂಟಾಗದಿರಲಿ. ಭೂಭಾರವನ್ನು ಇಳುಹಬೇಕೆಂದು ಅವತರಿಸಿರುವ ಮಹಾವಿಷ್ಣುವು ನೀನು. ನಾನು ನಿನ್ನ ಪಾದ ಸೇವಕನು. ನನ್ನ ಅಪರಾಧವನ್ನು ಮನ್ನಿಸು." ಎಂದು ಬೇಡಿಕೊಂಡನು. ಹೀಗೆ ಆತನ ಅನುಗ್ರಹವನ್ನು ಪಡೆದು, ಆತನ ಅಪ್ಪಣೆ ಪಡೆದು ಕಾಮಧೇನುವಿನ ಕ್ಷೀರದಿಂದ ಆತನಿಗೆ ಅಭಿಷೇಕ ಮಾಡಿ ಇಂದ್ರ ಪಟ್ಟವನ್ನು ಕಟ್ಟಿದನು. ಬ್ರಹ್ಮಾಂಡವೆಲ್ಲವೂ ಆಗ ಸಂತೋಷ ಪಟ್ಟಿತು.

ನಂದಗೋಪನು ಒಮ್ಮೆ ಏಕಾದಶಿಯ ದಿನ ಶ್ರೀ ಹರಿಸ್ವಾಮಿಯನ್ನು ಉಪವಾಸದಿಂದ ಅರ್ಚಿಸಿದನು. ಮರುದಿನ ದ್ವಾದಶಿಯ ಪಾರಣೆಯನ್ನು ಬೇಗ ಮುಗಿಸಬೇಕೆಂದು ನದಿಯ ಸ್ನಾನಕ್ಕೆ ಹೋದನು. ಆಗ ಮೂರನೆಯ ಜಾವ. ಅದು ಅಸುರ ವೇಳೆ. (ಅಂದರೆ ಇನ್ನೂ ದೇವತೆಗಳ ಸಂಚಾರ ಕಾಲವು ಆರಂಭವಾಗಿರಲಿಲ್ಲ.) ಆಗ ನೀರನ್ನು ಮುಟ್ಟಕೂಡದು. ಹಾಗೆ ಆ ವೇಳೆಯಲ್ಲಿ ನೀರನ್ನು ಮುಟ್ಟಿದನೆಂದು ವರುಣದಾಸನು ಆತನನ್ನು ವರುಣಲೋಕಕ್ಕೆ ಎಳೆದುಕೊಂಡು ಹೋದನು. ನಂದನನ್ನು ಕಾಣದೆ ಎಲ್ಲರೂ ರಾಮಕೃಷ್ಣರನ್ನು ಕೂಗಿಕೊಂಡರು. ಕೂಡಲೇ ಕೃಷ್ಣನು ತಾನೂ ನೀರಿಗೆ ಬಿದ್ದು ವರುಣಲೋಕಕ್ಕೆ ಹೋದನು.

ವರುಣನು ಶ್ರೀಕೃಷ್ಣನು ಬಂದನೆಂದು ಸಂಭ್ರಮವಾಗಿ ಆತನಿಗೆ ಪೂಜೆಯನ್ನು ಮಾಡಿ ನಂದನನ್ನು ಕಳುಹಿಸಿಕೊಟ್ಟನು. ನಂದನು

ವರುಣಲೋಕದ ವೈಭವಗಳನ್ನೂ ವರುಣನು ಶ್ರೀಕೃಷ್ಣನನ್ನು ಪೂಜಿಸಿ ದುದನ್ನೂ ಎಲ್ಲರಿಗೂ ಹೇಳಿದನು. ಎಲ್ಲರೂ ಶ್ರೀಕೃಷ್ಣನನ್ನು ಕೊಂಡಾಡಿದರು. ಅವರ ಸ್ತುತಿಗೆ ಮೆಚ್ಚಿ ಶ್ರೀಕೃಷ್ಣನು ಅವರಿಗೆ ವೈಕುಂಠ ಲೋಕವನ್ನು ತೋರಿಸಿದನು.

(ಇಲ್ಲಿಂದ ಮುಂದೆ ರಾಸಕ್ರೀಡೆಯ ವರ್ಣನೆಯಿದೆ. ಅದನ್ನು ಬೇಕೆಂದು ಇಲ್ಲಿ ಬಿಟ್ಟಿದೆ.)

---

## ಮೂವತ್ತಾರನೆಯ ಅಧ್ಯಾಯವು

# ರಾಮಕೃಷ್ಣರು ಮಧುರೆಗೆ ಹೋಗುವುದು

ಶ್ರೀಕೃಷ್ಣನು ಬೆಳದಿಂಗಳು ತುಂಬಿ ಮನೋಹರವಾಗಿರುವ ರಾತ್ರಿಗಳಲ್ಲಿ ಯಮುನಾ ತೀರದಲ್ಲಿ ಕುಳಿತು ಕೊಳಲು ಊದುವನು. ಆಗ ವ್ರಜದಲ್ಲಿದ್ದ ಗೋಪಿಯರು ಬಂದು ಆತನ ಸುತ್ತಲೂ ಕುಳಿತು ಕೊಳ್ಳುವರು. ವಿನೋದವಾಗಿ ಮಾತುಕಥೆಗಳನ್ನು ಆಡುವರು. ಪರಿಹಾಸ್ಯಗಳನ್ನು ಮಾಡುವರು. ಒಮ್ಮೊಮ್ಮೆ ಕೃಷ್ಣನು ಅವರೆಲ್ಲರೂ ನೋಡುತ್ತಿದ್ದ ಹಾಗೆಯೇ ಎಲ್ಲಿಯೋ ಓಡಿ ಬಿಡುವನು. ಆಗ ಅವರು ಆತನ ಪಾದಗಳ ಗುರುತು ಹಿಡಿದು ಅವನನ್ನು ಹುಡುಕುವರು. ಹಾಗೆ ಹುಡುಕುವಾಗಲೇ ಒಂದಾನೊಂದು ದಿನ ಗೋಪಿಕಾ ಗೀತೆಯು ಹುಟ್ಟಿದುದು.* ಗೋಪಿಯರು "ಶ್ರೀಕೃಷ್ಣ, ನೀನು ಹುಟ್ಟಿದೆಯೆಂದು ನಮ್ಮ ವ್ರಜವು ವೈಕುಂಠಕ್ಕಿಂತ ಹೆಚ್ಚಾಯಿತು. ಮಹಾ ಲಕ್ಷ್ಮಿಯು ಇಲ್ಲಿಯೇ ನೆಲಸಿದಳು. ನೋಡು, ನಾವೆಲ್ಲರೂ ನಿನ್ನಲ್ಲಿಯೇ ನಮ್ಮ ಪ್ರಾಣ

---

* **ಗೋಪಿಕಾ ಗೀತೆಯು ೧೯ ಶ್ಲೋಕಗಳನ್ನುಳ್ಳ ಹಾಡು. ಇದರಲ್ಲಿ ಗೋಪಿಯರ ವಿರಹವನ್ನು ಬಹಳ ಚೆನ್ನಾಗಿ ವರ್ಣಿಸಿದೆ.**

ಗಳನ್ನು ಇಟ್ಟುಕೊಂಡಿರುವೆವು. ನಮ್ಮನ್ನು ಕಾಪಾಡು" ಎಂದು ಸ್ವಾಮಿಯನ್ನು ಅಂಗಲಾಚಿ ಬೇಡಿಕೊಂಡರು. ಆ ಭಕ್ತಿಗೆ ಒಲಿದು ಪರಮಾತ್ಮನು ಅವರಿಗೆ ಪ್ರಸನ್ನನಾದನು.*

ಮತ್ತೊಮ್ಮೆ ವ್ರಜದಲ್ಲಿರುವವರೆಲ್ಲರೂ ಸರಸ್ವತೀ ನದಿಯ ತೀರದಲ್ಲಿರುವ ಅಂಬಿಕಾ ವನಕ್ಕೆ ಹೋದರು. ಅಲ್ಲಿ ನದಿಯಲ್ಲಿ ಸ್ನಾನಮಾಡಿ, ಈಶ್ವರನನ್ನೂ ಪಾರ್ವತಿಯನ್ನೂ ಭಕ್ತಿಯಿಂದ ಪೂಜಿಸಿದರು. ಪಾರ್ವತೀ ಪರಮೇಶ್ವರರು ಪ್ರಸನ್ನರಾಗಲಿ ಎಂದು ಬೇಕುಬೇಕಾದ ಹಾಗೆ ದಾನಗಳನ್ನು ಮಾಡಿದರು: ನಂದನೇ ಮೊದಲಾದ ಹಿರಿಯರೆಲ್ಲ ಉಪವಾಸಮಾಡಿ, ಬರಿಯ ನೀರನ್ನು ಕುಡಿದು, ಸರಸ್ವತೀ ತೀರದಲ್ಲಿ ಇದ್ದರು.

ಅವರೆಲ್ಲರೂ ಮಲಗಿರುವಾಗ ಒಂದು ಹೆಬ್ಬಾವು ಬಂದು ನಂದನನ್ನು ಹಿಡಿದು ನುಂಗಲಾರಂಭಿಸಿತು. ಅವನ ಕೂಗು ಕೇಳಿ ಗೋಪಾಲಕರು ಎದ್ದು ಬಂದು ಅದನ್ನು ಕೊಳ್ಳಿಗಳಿಂದ ಹೊಡೆದರೂ ಅದು ಬಿಡಲಿಲ್ಲ. ಆಗ ಶ್ರೀಕೃಷ್ಣನು ಎದ್ದು ಬಂದು ಅದನ್ನು ಹೊಡೆದು ಕೊಂದನು. ಆ ಅಜಗರವಾಗಿದ್ದ ವಿದ್ಯಾಧರನು ಬಂದು "ಸ್ವಾಮಿ, ನನ್ನನ್ನು ಕಾಪಾಡಿದೆ. ನಾನು ಸೌಂದರ್ಯ ಮದದಿಂದ ಅಂಗಿರಸರೆಂಬ ಋಷಿಗಳನ್ನು ಪರಿಹಾಸ್ಯಮಾಡಿ ಈ ಜನ್ಮವನ್ನು ಪಡೆದಿದ್ದೆನು. ಈಗ ಶಾಪವು ಕಳೆಯಿತು. ನಾನು ಶುದ್ಧನಾದೆನು. ಪುರುಷೋತ್ತಮನೆ! ನನಗೆ ಅಪ್ಪಣೆಯನ್ನು ಕೊಡು" ಎಂದು ನಮಸ್ಕಾರಮಾಡಿ ತನ್ನ ಲೋಕಕ್ಕೆ ಹೋದನು.

ಆ ಸರಸ್ವತೀ ತೀರದಲ್ಲಿ ಅವರು ಇನ್ನೂ ಕೆಲವು ದಿನವಿದ್ದರು.

* ಶ್ರೀರಾಮಾವತಾರ ಮಾಡಿದಾಗ ದಂಡಕಾರಣ್ಯದ ಋಷಿಗಳು ಶ್ರೀರಾಮನನ್ನು ಆಲಂಗಿಸಬೇಕು ಎಂದು ಕೊಂಡರಂತೆ. ಆಗ ಶ್ರೀರಾಮನು "ನೀವು ಕೃಷ್ಣಾವತಾರ ಕಾಲದಲ್ಲಿ ಗೋಪಿಗಳಾಗಿ ಹುಟ್ಟಿ" ಎಂದನಂತೆ.

ಒಂದು ರಾತ್ರಿ ಗೋಪಿಕೆಯರೆಲ್ಲರೂ ಮನೋಹರವಾಗಿ ಗಾನ ಮಾಡು ತ್ತಿದ್ದರು. ಗಾಳಿಯು ನೈದಿಲೆಗಳ ಗಂಧವನ್ನು ಹೊತ್ತು ಬೀಸುತ್ತಿತ್ತು. ಚಂದ್ರನು ಆಕಾಶದಲ್ಲಿ ಮೆರೆಯುತ್ತಿದ್ದನು. ಶ್ರೀ ರಾಮಕೃಷ್ಣರೂ ಆ ಸ್ತ್ರೀಯರ ನಡುವೆ ನಿಂತು ಸೊಗಸಾಗಿ ಹಾಡಿದರು. ಆ ಗಾನವನ್ನು ಕೇಳಿ ಎಲ್ಲರೂ ಮೈಮರೆತಿದ್ದರು.

ಆ ಸಮಯದಲ್ಲಿ ಶಂಖಚೂಡನೆಂಬ ಯಕ್ಷನು ಅಲ್ಲಿಗೆ ಬಂದು ಅಲ್ಲಿದ್ದ ಸ್ತ್ರೀಯರಲ್ಲಿ ಕೆಲವರನ್ನು ಹಿಡಿದು ಅವರನ್ನು ಎಳೆದುಕೊಂಡು ಹೋಗಲು ಯತ್ನಿಸಿದನು. ಅದನ್ನು ಕಂಡು ರಾಮಕೃಷ್ಣರು ಅವನನ್ನು ಅಟ್ಟಿಕೊಂಡು ಹೋದರು. ಮರಗಳನ್ನು ಮುರಿದುಕೊಂಡು ಅಟ್ಟಿ ಕೊಂಡು ಬರುತ್ತಿರುವ ರಾಮಕೃಷ್ಣರನ್ನು ಕಂಡು ಅವನು ಹೆಂಗಸ ರನ್ನು ಅಲ್ಲಿಯೇ ಬಿಟ್ಟು ಓಡಿಹೋದನು. ಶ್ರೀಕೃಷ್ಣನು ಅವನನ್ನು ಹಿಡಿದು ಕೊಂದು ಅವನ ತಲೆಯಲ್ಲಿದ್ದ ರತ್ನವನ್ನು ತಂದು ಅದನ್ನು ಅಣ್ಣನಾದ ಬಲರಾಮನಿಗೆ ಕೊಟ್ಟನು.

ಇನ್ನೊಮ್ಮೆ ಗೋಕುಲಕ್ಕೆ ಒಂದು ಮಹಾ ವೃಷಭವು ಬಂತು. ಅದನ್ನು ನೋಡಿದ ಕೂಡಲೇ ಎಲ್ಲರೂ ಹೆದರಿದರು: ಗೋವುಗಳು ಓಡಿ ಹೋದುವು. ಅದರ ಗರ್ಜನೆಯನ್ನು ಕೇಳಿದವರ ಗರ್ಭಗಳು ಬಿದ್ದು ಹೋದುವು. ಅದು ಕೋಟೆಯ ಗೋಡೆಯನ್ನೂ ಕೊಂಬುಗಳಿಂದ ತಿವಿದು ಕಿತ್ತು ಹಾಕುವುದು. ಬೆಟ್ಟದಂತಿರುವ ಆ ಗೂಳಿಯನ್ನು ಕಂಡು ಶ್ರೀಕೃಷ್ಣನು ಅದನ್ನು ರೇಗಿಸಿ ತನ್ನ ಕಡೆಗೆ ಬರುವಂತೆ ಮಾಡಿಕೊಂಡು ಅದನ್ನು ಹಿಡಿದು ಲೀಲಾಜಾಲವಾಗಿ ಸಂಹರಿಸಿದನು.

ಹೀಗೆ ವೃಷಭಾಸುರನನ್ನು ಸಂಹಾರ ಮಾಡಿದಮೇಲೆ ನಾರ ದರು ಹೋಗಿ ಕಂಸನಿಗೆ "ಕೃಷ್ಣನೇ ದೇವಕೀ ವಸುದೇವರ ಪುತ್ರನು. ನಿನ್ನ ವೈರಿಯು" ಎಂದು ಹೇಳಿದರು. ಅದನ್ನು ಕೇಳಿ ಕಂಸನು ಮತ್ತೆ

ದೇವಕೀ ವಸುದೇವರನ್ನು ಬಂಧನದಲ್ಲಿಟ್ಟನು. ಆ ರಾಮಕೃಷ್ಣರನ್ನು ಸಂಹರಿಸಿ ಬಾ." ಎಂದು ಕೇಶಿಯೆಂಬ ದಾನವನನ್ನು ಕಳುಹಿಸಿದನು.

ಆ ಕೇಶಿಯು ಭಾರಿಯ ಕಾಡು ಕುದುರೆಯಾಗಿ ಬಂದನು: ಆ ಕುದುರೆಯು ಒಂದು ಸಲ ಕಾಲನ್ನು ನೆಲಕ್ಕೆ ಬಡಿದರೆ ನೆಲವು ನಡಗುವುದು ಅದು ಕೆನೆದರೆ ಕೇಳಿದವರ ಕಿವಿಯು ಕಿವುಡಾಗುವುದು. ಬಾಲವನ್ನೆತ್ತಿ ಬೀಸಿದರೆ ಮೇಘಮಂಡಲವು ಕೆದರಿ ಹೋಗುವುದು. ಹೀಗೆ ಅದ್ಭುತವಾದ ಕುದುರೆಯು ರಾಮಕೃಷ್ಣರನ್ನು ಹುಡುಕಿಕೊಂಡು ಬೃಂದಾವನಕ್ಕೆ ಬಂತು.

ರಾಮಕೃಷ್ಣರು ಅದನ್ನು ಎದುರಿಸಿದರು. ಅದು ಕೃಷ್ಣನನ್ನು ಹಿಂಗಾಲುಗಳಿಂದ ಒದೆಯಿತು. ಆತನು ಆ ಒದೆತವನ್ನು ತಪ್ಪಿಸಿಕೊಂಡು, ಥಟ್ಟನೆ ಅದರ ಹಿಂಗಾಲುಗಳನ್ನು ಹಿಡಿದು ಗರ್ರನೆ ಸುತ್ತಿಸಿ, ದೂರಕ್ಕೆ ಎಸೆದನು: ಆ ಕುದುರೆಯು ಮತ್ತೆ ಅಲ್ಲಿಂದ ಎದ್ದು ಬಂದು ಕೃಷ್ಣನನ್ನು ಕಚ್ಚಿಬಿಡುವೆನೆಂದು ಬಾಯಿ ತೆರೆದುಕೊಂಡು ಬಂದಿತು. ಶ್ರೀಕೃಷ್ಣನು ಆ ತೆರೆದ ಬಾಯೊಳಕ್ಕೆ ತನ್ನ ಎಡಗೈಯನ್ನು ಚುಚ್ಚಿದನು. ಆ ಕಾಡು ಕುದುರೆಯ ಹಲ್ಲುಗಳು ಉದುರಿದುವು. ನೀಡಿದ ಕೈಯ್ಯು ಅದರ ಗಂಟಲ ತುಂಬಾ ಆಗಿ ನಿಂತು ಉಸಿರು ಕಟ್ಟಿತು. ಕುದುರೆಯು ಒದ್ದಾಡಿ ಬಿದ್ದು ಸತ್ತುಹೋಯಿತು. ಅದನ್ನು ಕಂಡು ಗಗನದಲ್ಲಿ ಸಂಚರಿಸುವ ದೇವತೆಗಳೂ ನಾರದರೂ ಬಂದು ಆತನನ್ನು ಸಂತೋಷವಾಗಿ ಹೊಗಳಿದರು.

ಇನ್ನೊಮ್ಮೆ ಗೋಪಬಾಲಕರೆಲ್ಲರೂ ತೋಳ ಕುರಿ ಆಟವನ್ನು ಆಡಿದರು. ಕೆಲವರು ತೋಳಗಳಾದರು. ಕೆಲವರು ಕುರಿಗಳಾದರು. ಕೆಲವರು ಕುರುಬರಾದರು. ಅವರು ಹೀಗೆ ಆಟವಾಡುತ್ತಿರುವಾಗ ವ್ಯೋಮನೆಂಬ ಅಸುರನು ಬಂದು ಸೇರಿಕೊಂಡು ಕುರಿಗಳಾಗಿರುವ ಗೋಪಾಲಕರನ್ನು ಅಟ್ಟಿಕೊಂಡು ಹೋಗಿ ಒಂದು ಗವಿಯಲ್ಲಿಟ್ಟು

ಅದರ ಬಾಗಿಲಿಗೆ ಬಂಡೆಯನ್ನು ಮುಚ್ಚಿದನು. ಇದನ್ನು ಶ್ರೀಕೃಷ್ಣನು ಕಂಡುಕೊಂಡು ಅವನನ್ನು ಹಿಡಿದು, ಸಂಹರಿಸಿ, ಅವನು ಸೆರೆಯಲ್ಲಿಟ್ಟಿದ್ದ ಬಾಲಕರನ್ನೆಲ್ಲಾ ಬಿಡಿಸಿಕೊಂಡು ಬಂದನು.

ಹೀಗೆ ಶ್ರೀಕೃಷ್ಣನು ಬೃಂದಾವನದಲ್ಲಿ ಇರುವಾಗ, ಕಂಸನು ಅಕ್ರೂರನನ್ನು ರಾಮಕೃಷ್ಣರನ್ನು ಕರೆದುಕೊಂಡು ಬಾರೆಂದು ಕಳುಹಿಸಿ ಕೊಟ್ಟನು: ಅವರಿಬ್ಬರನ್ನೂ ಮಥುರೆಗೆ ಕರೆಯಿಸಿಕೊಂಡು ಅಲ್ಲಿ ಅವರನ್ನು ಸಂಹರಿಸಬೇಕು ಎಂಬುದು ಅವನ ಇಷ್ಟವಾಗಿತ್ತು. ಅಕ್ರೂರನಿಗೆ ಅದು ತಿಳಿದಿದ್ದರೂ ರಾಜಾಜ್ಞೆಯನ್ನು ಮೀರಲಾರದೆ ಆ ಕಾರ್ಯಕ್ಕೆ ಒಪ್ಪಿಕೊಂಡನು. ಅಲ್ಲದೆ ಆತನಿಗೆ ಶ್ರೀರಾಮಕೃಷ್ಣರ ದರ್ಶನ ಮಾಡಬೇಕೆಂಬ ಹಂಬಲವೂ ಬಹಳವಾಗಿತ್ತು.

ದಾರಿಯಲ್ಲಿ ಬರುತ್ತಾ ಅಕ್ರೂರನು ಯೋಚಿಸಿದನು. "ನಾನು ನಿಜವಾಗಿಯೂ ಪುಣ್ಯವಂತನಿರಬೇಕು. ಉತ್ತಮೋತ್ತಮವಾದ ತಪಸ್ಸನ್ನು ಆಚರಿಸಬೇಕು. ಇಲ್ಲದಿದ್ದರೆ ಶ್ರೀಕೃಷ್ಣನ ದರ್ಶನವಾಗುವುದೇ? ನನಗೆ ದಾರಿಯಲ್ಲಿ ಶುಭಶಕುನಗಳು ಆಗುತ್ತಿವೆ. ಅದರಿಂದ ನನಗೆ ಶ್ರೀಕೃಷ್ಣನ ದರ್ಶನವು ಆಗೇ ಆಗುವುದು. ಗೋಕುಲದಲ್ಲಿ ಶ್ರೀಕೃಷ್ಣನ ರೂಪದಿಂದ ಭಗವಂತನೇ ಅವತರಿಸಿರುವನು. ಮಹಾತ್ಮರಿಗೆ ಮಾತ್ರ ದೊರೆಯುವ ಆತನ ದರ್ಶನವು ಇಂದು ನನಗೆ ಲಭಿಸುವುದು. ಆ ಪುರುಷೋತ್ತಮನ ದರ್ಶನವಾಗುತ್ತಿದ್ದ ಹಾಗೆಯೇ ರಥದಿಂದ ಇಳಿದು ಓಡಿಹೋಗಿ ಆತನ ಪಾದಕಮಲಗಳಿಗೆ ವಂದಿಸುವೆನು. ಆತನು ತನ್ನ ಬಲಗೈಯನ್ನು ನನ್ನ ತಲೆಯ ಮೇಲೆ ಇಡುವನು. ಆತನು ದಿವ್ಯಜ್ಞಾನಿಯಲ್ಲವೆ? ನಾನು ಕಂಸನ ಕಡೆಯಿಂದ ಬಂದವನೇ ಆದರೂ ನಾನು ತನ್ನ ಭಕ್ತನು ಎಂಬುದನ್ನು ಆತನು ಬಲ್ಲನು. ಅಲ್ಲದೆ ಭಗವಂತನಿಗೆ ತನ್ನವರು, ಪರರು ಎಂಬ ಭೇದವು ತಾನೇ ಎಲ್ಲುಂಟು?" ಎಂದು

ಮೊದಲಾಗಿ ಯೋಚನೆ ಮಾಡುತ್ತಾ ರಥದಲ್ಲಿ ಕುಳಿತು, ಸಂಜೆಯ ವೇಳೆಗೆ ಗೋಕುಲಕ್ಕೆ ಬಂದನು.

ಆ ವ್ರಜದ ಬಾಗಿಲಲ್ಲಿಯೇ ಶ್ರೀಕೃಷ್ಣನ ಪಾದಗಳು ಮರಳಿನಲ್ಲಿ ಮೂಡಿರುವುದು ಕಾಣಿಸಿತು. ವಜ್ರ, ಅಂಕುಶ, ಮುಂತಾದ ಲಕ್ಷಣಗಳಿಂದ ರಮಣೀಯವಾಗಿರುವ ಆ ಪಾದಪದ್ಮಗಳನ್ನು ಕಂಡು ಅಕ್ರೂರನಿಗೆ ಪರಮ ಸಂತೋಷವಾಯಿತು. ಮೈ ಜುಮ್ಮೆಂದಿತು: "ಮುಕುಂದನ ಪಾದಗಳಿವು: ಗೋವಿಂದನ ಪಾದಪದ್ಮಗಳಿವು." ಎಂದು ರಥದಿಂದ ಧುಮುಕಿ ಬಂದು ಆ ಪಾದಗಳಿದ್ದ ಮರಳಿನಲ್ಲಿ ಬಿದ್ದು ಹೊರಳಾಡಿದನು. ಅವನಿಗೆ ರಾಮಕೃಷ್ಣರ ದರ್ಶನವನ್ನು ಪಡೆಯಬೇಕೆಂಬ ಆಸೆಯು ತಾನೇ ತಾನಾಯಿತು. "ಆ ಪುರುಷ ಶ್ರೇಷ್ಠರು ಎಲ್ಲಿರುವರು?'' ಎಂದು ವಿಚಾರಿಸಿಕೊಂಡು ಅವರು ಹಾಲು ಕರೆಯುತ್ತ ಕುಳಿತಿದ್ದ ಬಳಿಗೆ ಬಂದನು.

ಅವರನ್ನು ಕಂಡಕೂಡಲೇ ಅಕ್ರೂರನು ಅವರ ಬಳಿಗೆ ಓಡಿ ಹೋಗಿ ಅವರಿಗೆ ನಮಸ್ಕಾರ ಮಾಡಿದನು. ತಾನು ಯಾರು ಎಂಬುದನ್ನು ಹೇಳಿಕೊಳ್ಳುವುದೂ ಆತನಿಗೆ ಮರೆತು ಹೋಯಿತು. ಕೃಷ್ಣನು ಆತನನ್ನು ಬಾಚಿ ತಬ್ಬಿಕೊಂಡನು. ಆತನ ಕಂಠದಲ್ಲಿದ್ದ ತುಲಸೀ ಮಾಲೆಯ ಸುಗಂಧವು ಅಕ್ರೂರನ ಮೂಗನ್ನು ತುಂಬಿತು. ಆತನ ಹಸ್ತಕಮಲವು ಅಕ್ರೂರನ ತಲೆಯ ಮೇಲೆ ನಿಂತಿತು. ಆತನ ಸುಂದರ ರೂಪವು ಅಕ್ರೂರನ ಕಣ್ಣುಗಳಿಗೆ ಹಬ್ಬವನ್ನು ಮಾಡಿತು. ಆತನ ಆಲಿಂಗನವು ಅಕ್ರೂರನ ಮೈಮರೆಸಿತು.

ಬಲರಾಮನೂ ಆ ಅಕ್ರೂರನನ್ನು ಆದರಿಸಿದನು. ಆಲಂಗಿಸಿದನು. ಅಣ್ಣತಮ್ಮಂದಿರು ಆತನನ್ನು ಉಪಚಾರಮಾಡಿ ಮನೆಗೆ ಕರೆದುಕೊಂಡು ಹೋಗಿ ಕೈಕಾಲುಗಳಿಗೆ ನೀರುಕೊಟ್ಟು, ಆಯಾಸವು ಪರಿಹಾರವಾಗುನಂತೆಮಾಡಿ, ಸುಖಭೋಜನ ಮಾಡಿಸಿದರು. ತಾಂಬೂಲ

ವನ್ನೂ, ಗಂಧಪುಷ್ಪಗಳನ್ನೂ ಕೊಟ್ಟರು. ಎಲ್ಲದಕ್ಕಿಂತಲೂ ಆ ಅಣ್ಣ ತಮ್ಮಂದಿರ ಉಪಚಾರದ ಮಾತುಗಳು ಅಕ್ರೂರನನ್ನು ಬಹುವಾಗಿ ಮೆಚ್ಚಿಸಿದುವು. ಹೀಗೆ ಸತ್ಕಾರವನ್ನು ಪಡೆದು ಸುಖವಾಗಿ ಕುಳಿತಿರುವ ಅಕ್ರೂರನನ್ನು ನಂದನೂ ವಿಶ್ವಾಸದಿಂದ ಮಾತನಾಡಿಸಿದನು.

ಅಕ್ರೂರನು ಸಕಾಲದಲ್ಲಿ ತಾನು ಬಂದಿರುವುದು ಏಕೆ ಎಂಬುದನ್ನು ತಿಳಿಸಿದನು. ಆತನು ಯಾವುದನ್ನೂ ಮುಚ್ಚಿಡಲಿಲ್ಲ. "ಸ್ವಾಮಿ, ನೀನು ವಸುದೇವನ ಮಗನು. ಕಂಸನನ್ನು ಕೊಲ್ಲುವುದಕ್ಕಾಗಿಯೇ ಹುಟ್ಟಿರುವವನೆಂದು ನಾರದರಿಂದ ಕಂಸನಿಗೆ ಗೊತ್ತಾಗಿ ಹೋಗಿದೆ. ನಿಮ್ಮನ್ನು ಈ ಧನುರ್ಯಾಗಕ್ಕೆ ಬರಮಾಡಿಕೊಂಡು, ಏನಾದರೂ ಮಾಡಿ ನಿಮ್ಮನ್ನು ಕೊಲ್ಲಬೇಕು ಎಂದಿರುವನು" ಎಂದು ಹೇಳಿದನು. ಶ್ರೀಕೃಷ್ಣನೂ ರಾಮನೂ ಅದನ್ನು ಕೇಳಿ ನಕ್ಕು ಇರಲಿ ಎಂದು ನಂದ ಗೋಪಾದಿಗಳಿಗೂ ತಿಳಿಸಿದರು. ನಂದಗೋಪನು ವರ್ಷವರ್ಷವೂ ತಾನು ಕೊಡಬೇಕಾದ ಕಪ್ಪಕಾಣಿಕೆಗಳನ್ನು ತೆಗೆಸಿಕೊಂಡು ಹೊರಟನು.

ಶ್ರೀರಾಮಕೃಷ್ಣರು ಮಧುರೆಗೆ ಹೋಗುವರೆಂಬ ಸುದ್ದಿಯನ್ನು ಕೇಳಿ ವ್ರಜಕ್ಕೆ ವ್ರಜವೇ ನಡುಗಿ ಹೋಯಿತು. ಗೋಪಿಯರು ಕೃಷ್ಣನು ಹೊರಟು ಹೋಗುವನು ಎಂದು ಹೆದರಿ ಎಲ್ಲವನ್ನೂ ಮರೆತುಬಿಟ್ಟರು. ಅವರಿಗೆ ತಲೆಬಾಚಿಕೊಳ್ಳುವುದು, ಮಡಿಯುಡುವುದೂ ಕೂಡ ಬೇಡವಾಯಿತು. ಅವರಿಗೆ ತಮ್ಮ ಪ್ರಾಣವೇ ಮೇಲಕ್ಕೆದ್ದು ಹೊರಟು ಹೋಗುವುದೋ ಎನ್ನಿಸಿತು. "ಗೋವಿಂದ, ದಾಮೋದರ, ಮಾಧವ ಹೊರಟು ಹೋಗುವೆಯಾ?" ಎಂದು ಗಟ್ಟಿಯಾಗಿ ಅತ್ತುಬಿಟ್ಟರು.

ಮರುದಿನ ಸೂರ್ಯೋದಯವಾಯಿತು. ಅಕ್ರೂರನ ರಥವು ಸಿದ್ಧವಾಯಿತು. ಗೋಪರೆಲ್ಲರೂ ಹಾಲು, ಮೊಸರು, ತುಪ್ಪಗಳನ್ನು ಗಡಿಗೆಗಳಲ್ಲಿ ತುಂಬಿಕೊಂಡು, ಆ ಗಡಿಗೆಗಳನ್ನು ಅಡ್ಡೆಯಲ್ಲಿಟ್ಟು ಸಿದ್ಧ

ರಾದರು. ನಂದಗೋಪಾದಿ ಹಿರಿಯರು ಬಂಡಿಗಳನ್ನು ಕಟ್ಟಿಸಿದರು. ರಾಮಕೃಷ್ಣರು ರಥವನ್ನೇರಿದರು. ಎಲ್ಲರೂ ಹೊರಟರು.

ಅದುವರೆಗೂ ತಮ್ಮ ದುಃಖವನ್ನು ತಡೆದಿದ್ದ ಗೋಪಿಯರು ರಾಮಕೃಷ್ಣರನ್ನು "ಹೊರಟೇ ಹೋಗುವಿರಾ? ಎಂದು ಕೇಳಿ ಗೋಳೋ ಎಂದು ಅತ್ತುಬಿಟ್ಟರು. ಶ್ರೀಕೃಷ್ಣನು ಅವರಿಗೆಲ್ಲ ಸಮಾಧಾನವನ್ನು ಹೇಳಿ ತನ್ನ ಜೊತೆಯ ಆಟಗಾರರಾದ ಗೋಪಬಾಲಕರಿಗೆ ಉಪಚಾರ ಹೇಳಿ ಹೊರಟನು. ಅವರೂ ಶ್ರೀಕೃಷ್ಣನಿದ್ದ ರಥದ ಧ್ವಜವು ಕಾಣು ವವರೆಗೂ ಅಲ್ಲಿಯೇ ನಿಂತಿದ್ದು ಆಮೇಲೆ ಹೇಗೆ ಹೇಗೋ ತಮ್ಮ ದುಃಖವನ್ನು ತಡೆದುಕೊಂಡು ಹಿಂತಿರುಗಿದರು.

ದಾರಿಯಲ್ಲಿ ಯಮುನಾ ನದಿಯು ಸಿಕ್ಕಿತು. ಅಲ್ಲಿ ಸ್ನಾನಕ್ಕಾಗಿ ಇಳಿದ ಅಕ್ರೂರನು ಸ್ನಾನಮಾಡುವಾಗ ನೀರಿನಲ್ಲಿ ಒಮ್ಮೆ ಶ್ರೀರಾಮ ಕೃಷ್ಣರನ್ನು ಕಂಡನು. ಇದೇನು ಅಚ್ಚರಿಯೆಂದುಕೊಂಡು ಇನ್ನೊಮ್ಮೆ ಮುಳುಗಿದರೆ ವೈಕುಂಠದ ದರ್ಶನವಾಯಿತು. ಅಲ್ಲಿ ಸಾವಿರಾರು ಹೆಡೆ ಗಳ ಅನಂತನ ಮೇಲೆ ಮಲಗಿರುವ ಶ್ರೀಮನ್ನಾರಾಯಣನ ದರ್ಶನ ವಾಯಿತು. ಸಪರಿವಾರನಾದ ಆ ಮಹಾ ವಿಷ್ಣುವಿನ ದರ್ಶನದಿಂದ ಆತನಿಗೆ ಆದ ಆನಂದವು ಅಷ್ಟಿಷ್ಟಲ್ಲ. ''ಪ್ರಭುವೆ, ನೀನೇ ಸರ್ವವೂ ಆಗಿರುವೆ. ಒಬ್ಬೊಬ್ಬರು ಒಂದೊಂದು ವಿಧವಾಗಿ ಪೂಜಿಸಿದರೂ ಬೆಟ್ಟ ಗಳಿಂದ ಇಳಿದು ಬರುವ ನದಿಗಳೆಲ್ಲವೂ ಸಮುದ್ರವನ್ನೇ ಸೇರುವಂತೆ, ಎಲ್ಲಾ ಪೂಜೆಗಳೂ ನಿನಗೇ ಸೇರುವುವು. ನೀನು ನಿನ್ನ ಮಾಯೆಯಿಂದ ಈ ಜಗತ್ತಾಗಿ ಕಾಣಿಸುವೆ. ಸತ್ವ. ರಜಸ್ಸು, ತಮಸ್ಸು, ಎಂದು ನಿನ್ನ ಮಾಯೆಯು ಮೂರು ರೂಪವಾಗಿರುವುದು. ಅದನ್ನೇ ಬಲ್ಲವರು ಗುಣವೆನ್ನುವರು. ಆ ಗುಣಗಳ ಪ್ರವಾಹವೇ ಈ ಸಂಸಾರವು. ನೀನು ಗುಣಗಳಿಗೆ ಆಚೆಯಿರುವವನು. ದುಷ್ಟರನ್ನು ಸಂಹಾರಮಾಡಿ, ಶಿಷ್ಟ ರನ್ನು ಉದ್ಧರಿಸುವುದಕ್ಕಾಗಿ ನಾನಾ ಅವತಾರಗಳನ್ನು ಮಾಡುವ

ಪುರುಷೋತ್ತಮನೆ, ನಿನಗೆ ನಮಸ್ಕಾರವು ನಿನ್ನನ್ನು ತಿಳಿಯದವರು ದೇಹವೇ ನಾನು ಎಂದುಕೊಂಡು ತೊಳಲುವರು. ನಾನೂ ಅಂತಹ ಅಜ್ಞಾನಿಯು. ನಿನ್ನ ಅನುಗ್ರಹವಾದಲ್ಲದೆ ನನ್ನನ್ನು ಅಜ್ಞಾನವು ಬಿಡದು. ಎಲ್ಲೆಲ್ಲಿಯೂ ತುಂಬಿರುವ ವಾಸುದೇವನೇ, ನಿನಗೆ ನಮಸ್ಕಾರವು. ಇದೋ ನಿನಗೆ ಶರಣಾಗತನಾಗಿರುವೆನು. ನನ್ನನ್ನು ಕಾಪಾಡು." ಎಂದು ಹೊಗಳಿ ನಮಸ್ಕಾರ ಮಾಡಿದನು.

ಅಕ್ರೂರನು ಹೀಗೆ ಮಹಾವಿಷ್ಣು ದರ್ಶನವನ್ನು ಪಡೆದು ಕೃತಾರ್ಥನಾಗಿ ರಾಮಕೃಷ್ಣರನ್ನು ಭಕ್ತಿಯಿಂದ ಮಧುರೆಗೆ ಕರೆತಂದನು. ದಾರಿಯುದ್ದಕ್ಕೂ ಜನರು ರಾಮಕೃಷ್ಣರ ದರ್ಶನವನ್ನು ಪಡೆದು ಕೃತಾರ್ಥರಾದರು. ಎಲ್ಲರೂ ಮಧುರಾನಗರದ ಉಪವನದಲ್ಲಿಳಿದರು. ಅಕ್ರೂರನು ರಾಮಕೃಷ್ಣರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಬೇಕೆಂದು ಬಹಳ ಪ್ರಯತ್ನ ಮಾಡಿದನು. ಅವರು ಮರುದಿನ ಬರುವುದಾಗಿ ಹೇಳಿ ಅವನನ್ನು ಕಳುಹಿಸಿಕೊಟ್ಟರು. ಅಕ್ರೂರನು ರಾಮಕೃಷ್ಣರು ಬಂದ ವೃತ್ತಾಂತವನ್ನು ಕಂಸನಿಗೆ ತಿಳುಹಿಸಿ ತನ್ನ ಮನೆಗೆ ಹೋದನು.

## ಮೂವತ್ತೇಳನೆಯ ಅಧ್ಯಾಯವು

# ಉಗ್ರಸೇನ ಪಟ್ಟಾಭಿಷೇಕವು

ಮರುದಿನ ಮಧ್ಯಾಹ್ನದ ಮೇಲೆ ಶ್ರೀಕೃಷ್ಣನು ರಾಮನನ್ನೂ ಗೋಪಾಲಕರನ್ನೂ ಕರೆದುಕೊಂಡು ಮಧುರೆಯನ್ನು ಪ್ರವೇಶಿಸಿದನು. ರಾಜಧಾನಿಯು ಧನುರ್ಯಾಗಕ್ಕಾಗಿ ಪೂರ್ಣವಾಗಿ ಶೃಂಗಾರವಾಗಿತ್ತು. ನೋಡಿದವರ ಕಣ್ಣು ಮನಗಳನ್ನು ಸೆಳೆಯುವಂತಿತ್ತು. ರಾಮಕೃಷ್ಣರು

ಬರುತ್ತಿರುವುದನ್ನು ನೋಡಿ ಊರಿನವರೆಲ್ಲರೂ ರಾಜಬೀದಿಗಳಲ್ಲಿ ಸೇರಿದರು.

ಬರುವ ದಾರಿಯಲ್ಲಿ ಕಂಸನಿಗೆ ಮಡಿಯನ್ನು ಒಪ್ಪಿಸುವ ಅಗಸನು ಸಿಕ್ಕಿದನು. ಕೃಷ್ಣನು ಬೇಕೆಂದು ಅವನನ್ನು ತಡೆಗಟ್ಟಿ "ನಮ್ಮಿಬ್ಬರಿಗೂ ಉತ್ತಮ ವಸ್ತ್ರಗಳನ್ನು ಕೊಡು" ಎಂದನು. ರಜಕನು ರೇಗಿದನು. ಅವನನ್ನು ಕೊಂದು ಅವನಲ್ಲಿದ್ದ ಅರಮನೆಯ ಬಟ್ಟೆಗಳನ್ನು ತೆಗೆದುಕೊಂಡು ರಾಮಕೃಷ್ಣರು ತಾವೂ ಸಿಂಗರಿಸಿಕೊಂಡು ತಮ್ಮ ಜೊತೆಯಲ್ಲಿದ್ದವರಿಗೂ ಕೊಟ್ಟರು. ನೆಯಿಗೆಯವನೊಬ್ಬನು ತಾನಾಗಿ ಬಂದು ರಾಮಕೃಷ್ಣರಿಗೆ ಉತ್ತಮ ವಸ್ತ್ರಾಲಂಕಾರಗಳನ್ನು ಕೊಟ್ಟನು. ಅವರು ಅಲ್ಲಿಂದ ಸುಧಾಮನೆಂಬ ಹೂವಾಡಿಗನ ಮನೆಗೆ ಹೋದರು. ಅವನು ಅವರಿಗೆ ಬೇಕಾದ ಹಾಗೆ ಉಪಚಾರಮಾಡಿ ಹೂ ಮಾಲೆಗಳನ್ನು ಒಪ್ಪಿಸಿದನು. ಹಾಗೆಯೇ ಕಂಸನಿಗೆ ಸುಗಂಧಗಳನ್ನು ಒಪ್ಪಿಸುವ ಕುಬ್ಜೆಯನ್ನು ಅಡ್ಡಗಟ್ಟಿ ಆ ಗಂಧಗಳನ್ನು ತೆಗೆದುಕೊಂಡು ಮೈಗೆಲ್ಲಾ ಹಚ್ಚಿಕೊಂಡರು. ಶ್ರೀಕೃಷ್ಣನು ಅವಳ ಕುಬ್ಜತ್ವವನ್ನು ನೀಗಿದನು. ಅವರನ್ನು ಕಂಡಕಂಡವರೆಲ್ಲರೂ ಭಕ್ತಿಯಿಂದ ಕಾಣಿಕೆಗಳನ್ನು ಒಪ್ಪಿಸಿದರು.

ಹಾಗೆಯೇ ವಿಚಾರಿಸಿಕೊಂಡು ರಾಮಕೃಷ್ಣರು ಧನುರ್ಯಾಗವು ನಡೆಯುವ ಕಡೆಗೆ ಹೋದರು. ಅಲ್ಲಿ ಶಸ್ತ್ರಪಾಣಿಗಳಾದ ರಾಜಭಟರ ಕಾವಲಿನಲ್ಲಿದ್ದ ಆ ಧನುಸ್ಸನ್ನು ಶ್ರೀಕೃಷ್ಣನು; ಇತರರು ಬೇಡವೆನ್ನುತ್ತಿದ್ದರೂ ತಡೆಯದೆ, ತೆಗೆದುಕೊಂಡು ಅದನ್ನು ಕಬ್ಬಿನ ಜಲ್ಲೆಯನ್ನು ಮುರಿಯುವಂತೆ ಮುರಿದನು. ಆಗ ಆದ ಶಬ್ದವು ಮಥುರೆಯನ್ನೆಲ್ಲಾ ನಡುಗಿಸಿತು. ಕಾವಲಿದ್ದ ರಾಜಭಟರು ಆತನ ಮೇಲೆ ಬಿದ್ದರು. ರಾಮಕೃಷ್ಣರು ಮುರಿದ ಧನುಸ್ಸಿನ ತುಂಡುಗಳನ್ನೇ ತೆಗೆದುಕೊಂಡು ಹೊಡೆದು

ಆ ಸೈನಿಕರೆಲ್ಲರನ್ನೂ ಸದೆಬಡಿದರು. ಆ ವೇಳೆಗೆ ಸಂಜೆಯಾಯಿತು. ಅವರೆಲ್ಲರೂ ಹಿಂದಿರುಗಿ ತಮ್ಮ ಬಿಡಾರಕ್ಕೆ ಬಂದರು.

ಕಂಸನಿಗೆ ರಾಮಕೃಷ್ಣರ ತುಂಟತನದ ಸುದ್ದಿಯು ತಿಳಿಯಿತು. ಅವನಿಗೆ ಆ ರಾತ್ರಿ ಊಟವು ಬೇಕಾಗಲಿಲ್ಲ. ನಿದ್ದೆಯು ಬರಲಿಲ್ಲ. ಕಣ್ಣು ಮುಚ್ಚಿದರೆ ಕೆಟ್ಟ ಕನಸು. ಹೀಗೆ ರಾತ್ರಿಯನ್ನು ಕಷ್ಟದಿಂದ ಕಳೆದು ಮರುದಿನ ಜಟ್ಟಿಗಳ ಕಾಳಗವನ್ನು ನೋಡಲು ಬಂದನು. ಅವನು ಸಿಂಹಾಸನದಲ್ಲಿ ಕುಳಿತಿದ್ದರೂ ಅವನಿಗೆ ಏನೋ ದಿಗಿಲು.

ರಾಮಕೃಷ್ಣರು ಅರಮನೆಗೆ ಬಂದರು. ಹೆಬ್ಬಾಗಿಲಲ್ಲಿ ಕುವಲಯ ಪೀಡವೆಂಬ ಮದ್ದಾನೆಯು ನಿಂತಿತ್ತು. ಕಂಸನ ಅಪ್ಪಣೆಯಂತೆ ಮಾವಟಿಗನು ಆ ಆನೆಯನ್ನು ಅವರ ಮೇಲೆ ಬಿಟ್ಟನು. ಅದು ಬಂದು ಕೃಷ್ಣನನ್ನು ಸೊಂಡಿಲಿನಿಂದ ಹಿಡಿದುಕೊಂಡಿತು. ಕೃಷ್ಣನು ತಪ್ಪಿಸಿಕೊಂಡು ಅದರ ಬಾಲವನ್ನು ಹಿಡಿದು ಸೆಳೆದನು. ಆ ವೇಗಕ್ಕೆ ಅದು ಇಪ್ಪತ್ತೈದು ಮಾರು ಹಿಂದಕ್ಕೆ ಹೋಯಿತು. ಮತ್ತೆ ಬಾಲವನ್ನು ಹಿಡಿದು, ಅದು ಅತ್ತ ಇತ್ತ ತಿರುಗುವುದಕ್ಕೆ ಬಿಡದೆ ಗೋಳು ಹೊಯ್ದುಕೊಂಡು ಅದನ್ನು ನೆಲಕ್ಕೆ ಉರುಳಿಸಿದನು. ಹೀಗೆ ಅದನ್ನು ರೇಗಿಸಿ ಕೊನೆಗೆ ಅದರ ಸೊಂಡಿಲು ಹಿಡಿದು ಮತ್ತೆ ನೆಲಕ್ಕೆ ಬೀಳಿಸಿ, ಅದನ್ನು ಕೊಂದು, ಅದರ ದಂತಗಳನ್ನು ಕಿತ್ತುಕೊಂಡು, ಆ ಆನೆಯ ಸುತ್ತಲೂ ಇದ್ದ ಭಟರನ್ನು ಕೊಂದನು. ಕಂಸನು ಆ ಅದ್ಭುತ ಕರ್ಮವನ್ನು ಕಂಡು ಹೆದರಿದನು.

ರಾಮಕೃಷ್ಣರನ್ನು ಕಂಡು ಸರ್ವರೂ ಮೆಚ್ಚಿಕೊಂಡರು. ಅವರು ಮುಂದಕ್ಕೆ ಬರುತ್ತಿದ್ದ ಹಾಗೆಯೇ ಕಂಸನ ಜಟ್ಟಿಗಳಲ್ಲಿ ಪ್ರಖ್ಯಾತನಾದ ಚಾಣೂರನು ಮುಂದೆ ಬಂದನು. “ಎಲೈ ರಾಮಕೃಷ್ಣರೇ, ನೀವಿಬ್ಬರೂ ಮಲ್ಲಯುದ್ಧದಲ್ಲಿ ಬಹು ಸಮರ್ಥರಂತೆ! ಬನ್ನಿ ನಮ್ಮೊಡನೆ ಕಾಳಗ ಮಾಡಿ. ನಮ್ಮ ಅರಸನಿಗೆ ಸಂತೋಷವಾಗಲಿ.'' ಎಂದು

ಜಟ್ಟಿ ಕಾಳಗಕ್ಕೆ ಕರೆದರು. ಕೃಷ್ಣನು "ನೀವು ಮಲ್ಲಯುದ್ಧದಲ್ಲಿ ನಿಪುಣರು. ನಾವು ಇನ್ನೂ ಬಾಲಕರು" ಎಂದನು. ಚಾಣೂರನು ಬಲವಂತ ಮಾಡಿದನು. ರಾಮಕೃಷ್ಣರು ಒಪ್ಪಿ ಕೃಷ್ಣನು ಚಾಣೂರನ ಮೇಲೂ, ರಾಮನು ಮುಷ್ಟಿಕನ ಮೇಲೂ ಯುದ್ಧಮಾಡಲು ನಿಂತರು.

ಚಾಣೂರನು ಭಾರಿಯ ಆಳು. ಬಾಲಕನಾದ ಕೃಷ್ಣನಿಗೆ ಏನಾಗುವುದೋ ಎಂದು ಎಲ್ಲರಿಗೂ ದಿಗಿಲಾಯಿತು. ಆದರೇನು ? ಪರ್ವತಾಕಾರರಾಗಿದ್ದ ಚಾಣೂರ ಮುಷ್ಟಿಕರು ರಾಮಕೃಷ್ಣರ, ಏಟು ತಡೆಯಲಾರದೆ ಕತ್ತರಿಸಿದರು. ಸೋಲುತ್ತಾ ಸೋಲುತ್ತಾ ಕೊನೆಗೆ ರಕ್ತಗಳನ್ನು ಕಾರಿ ನೆಲದ ಮೇಲೆ ಬಿದ್ದು ಸತ್ತರು. ಉಳಿದ ಜಟ್ಟಿಗಳು ಗುಂಪು ಕಟ್ಟಿಕೊಂಡು ಬಂದು ಬಂದು ರಾಮಕೃಷ್ಣರ ಮೇಲೆ ಬಿದ್ದರು. ಅವರೂ ಏಟು ತಿಂದು ಹೆದರಿ ಓಡಿ ಹೋದರು.

ಅದನ್ನು ಕಂಡು ಕಂಸನಿಗೆ ದುಃಖವೂ, ಕೋಪವೂ ಆಯಿತು. ಕೂಗಿಕೊಂಡನು. "ಈ ದುಷ್ಟರನ್ನು ಊರುಬಿಟ್ಟು ಓಡಿಸಿ ನಂದನನ್ನು ಸೆರೆಗೆ ಹಾಕಿ, ವಸುದೇವನನ್ನು ಸಂಹರಿಸಿ. ಇವರ ಆಕಳುಗಳನ್ನೆಲ್ಲಾ ಹಿಡಿದು ಅರಮನೆಗೆ ಸೇರಿಸಿ" ಎಂದು ಹುಚ್ಚುಹುಚ್ಚಾಗಿ ಕೂಗಿದನು. ಆ ಮಾತುಗಳನ್ನು ಕೇಳಿ ಶ್ರೀಕೃಷ್ಣನು ಕಂಸನು ಕುಳಿತಿದ್ದ ಎತ್ತರವಾದ ಮಂಚದ ಮೇಲಕ್ಕೆ ಹಾರಿ ಅವನನ್ನು ಹಿಡಿದುಕೊಂಡನು: ಅವನು ತಪ್ಪಿಸಿಕೊಂಡು ಕತ್ತಿ ಗುರಾಣಿಗಳನ್ನು ತೆಗೆದುಕೊಂಡನು. ಶ್ರೀಕೃಷ್ಣನು ಹಾವನ್ನು ಹಿಡಿಯುವ ಗರುಡನಂತೆ ಆ ಕಂಸನನ್ನು ಮತ್ತೆ ಹಿಡಿದು ಕೂದಲನ್ನು ಹಿಡಿದು ಕೆಳಕ್ಕೆ ನೂಕಿ ತಾನೂ ಅವನ ಮೇಲೆ ಬಿದ್ದನು. ಅದಷ್ಟಕ್ಕೇ ಕಂಸನು ಸತ್ತನು. ಅದನ್ನು ಕಂಡು ಅವನ ತಮ್ಮಂದಿರು ಎಂಟು ಮಂದಿ ಕೃಷ್ಣನ ಮೇಲೆ ಬಿದ್ದರು. ರಾಮನೂ ಜತೆ ಸೇರಲು, ರಾಮಕೃಷ್ಣರಿಬ್ಬರೂ ಆ ಎಂಟು ಜನರನ್ನು ಹೊಡೆದು

ಕೊಂದರು. ಕಂಸವಧೆಯಾಗುತ್ತಲೂ ದೇವತೆಗಳೆಲ್ಲರೂ ಸಂತೋಷ ಪಟ್ಟು ಹೂವಿನ ಮಳೆಗರೆದರು.

ಶ್ರೀಕೃಷ್ಣನು ಅಣ್ಣನೊಡನೆ ನೇರವಾಗಿ ದೇವಕೀ ವಸುದೇವರ ಬಳಿಗೆ ಹೋಗಿ, ಅವರನ್ನು ಬಂಧನದಿಂದ ಬಿಡಿಸಿ, ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಅವರು ಮಕ್ಕಳನ್ನು ಕಂಡು ಪಟ್ಟ ಸಂತೋಷಕ್ಕೆ ಮೇರೆಯಿಲ್ಲವಾಯಿತು. ಕೃಷ್ಣನು ತಾಯಿತಂದೆಗಳಿಗೆ ಬೇಕಾದಷ್ಟು ವಿಧವಾಗಿ ಉಪಚಾರಗಳನ್ನು ಹೇಳಿ; ತಾತನಾದ ಉಗ್ರಸೇನನಿಗೆ, ''ನಾವು ಯದುವಂಶದವರು. ನಮಗೆ ಯಯಾತಿಯ ಶಾಪವುಂಟು. ಅದರಿಂದ ನಾವು ಸಿಂಹಾಸನವನ್ನು ಏರುವಂತಿಲ್ಲ. ನೀನೇ ದೊರೆಯಾಗಬೇಕು'' ಎಂದು ಹೇಳಿ ಪಟ್ಟವನ್ನು ಕಟ್ಟಿದನು. ಇಂದ್ರನು ಕೃಷ್ಣನಪ್ಪಣೆಯೆಂದು ತನ್ನ ಸುಧರ್ಮಾ ಎಂಬ ರಾಜಮಂಟಪವನ್ನು ಕಳುಹಿಸಿದನು: ರಾಮಕೃಷ್ಣರಿಬ್ಬರೂ ಸಾಕುತಂದೆಯಾದ ನಂದನಿಗೆ ಬೇಕಾದಹಾಗೆ ಉಪಚಾರಮಾಡಿ ಆತನನ್ನು ವ್ರಜಕ್ಕೆ ಕಳುಹಿಸಿ ಕೊಟ್ಟರು.

ವಸುದೇವನು ತನ್ನ ಪುರೋಹಿತನಾದ ಗರ್ಗಮುನೀಂದ್ರನನ್ನು ಬರಮಾಡಿಕೊಂಡು ರಾಮಕೃಷ್ಣರಿಗೆ ಉಪನಯನವನ್ನು ಮಾಡಿಸಿದನು. ಉಪನಯನವಾದಮೇಲೆ ಅವರಿಬ್ಬರೂ ಕಾಶೀನಗರದಲ್ಲಿದ್ದ ಅವಂತಿಯ ಸಾಂದೀಪನ ಎಂಬ ಮಹರ್ಷಿಯ ಗುರುಕುಲವನ್ನು ಸೇರಿ ಅಲ್ಲಿ ವಿದ್ಯೆ



**ಚಾಣೂರ ಮುಷ್ಟಿಕರನ್ನೂ, ಕುವಲಯಾಪೀಡವನ್ನೂ ವಧಿಸಿದುದು**

ಸ್ಸೆಲ್ಲಾ ಸಾಂಗವಾಗಿ ಕಲಿತರು. ಅರವತ್ತುನಾಲ್ಕು ದಿನಗಳಲ್ಲಿ ಅರವತ್ತು ನಾಲ್ಕು ವಿದ್ಯೆಗಳನ್ನು ಸಂಪೂರ್ಣವಾಗಿ ಕಲಿತ ಶಿಷ್ಯರನ್ನು ಕಂಡು ಗುರುವು ಬಹಳ ಸಂತೋಷಪಟ್ಟನು. ಗುರುದಕ್ಷಿಣೆಯಾಗಿ ಆತನಿಗೆ, ಹಿಂದೆ ಸಮುದ್ರದಲ್ಲಿ ಹೋಗಿದ್ದ ಆತನ ಮಗನನ್ನು ತಂದು ಕೊಟ್ಟರು. ಆ ಮಗನನ್ನು ಸಮುದ್ರದಲ್ಲಿ ಶಂಖರೂಪಧಾರಿಯಾಗಿ ಸಂಚರಿಸುವ ಪಂಚಜನನೆಂಬ ರಾಕ್ಷಸನು ಎಳೆದುಕೊಂಡು ಹೋಗಿದ್ದನು. ಕೃಷ್ಣನು ಅವನನ್ನು ಹಿಡಿದು ಅವನ ಹೊಟ್ಟೆಯನ್ನು ಸೀಳಿದರೆ ಅವನು ಅಲ್ಲಿರಲಿಲ್ಲ. ಅಲ್ಲಿ ಒಂದು ಶಂಖವಿತ್ತು. ಅದನ್ನು ತೆಗೆದುಕೊಂಡು ರಾಮನನ್ನು ಕರೆದುಕೊಂಡು ಯಮಪುರಿಗೆ ಹೋಗಿ ಅಲ್ಲಿದ್ದ ಸಾಂದೀಪನಪುತ್ರನನ್ನು ಕರೆದುತಂದು ಗುರುವಿಗೆ ಒಪ್ಪಿಸಿ ಆತನ ಆಶೀರ್ವಾದವನ್ನು ಪಡೆದನು.

ಕಂಸನಿಗೆ ಹೆದರಿ ದೇಶಾಂತರಕ್ಕೆ ಓಡಿಹೋಗಿದ್ದ ಭೋಜರು, ಯದುಗಳು, ವೃಷ್ಣಿಗಳು ಮೊದಲಾದವರೆಲ್ಲರೂ ಕಂಸವಧೆಯಾದ ಮೇಲೆ ಬಂದು ಮಧುರೆಯನ್ನು ಸೇರಿದರು. ಅವರಲ್ಲಿ ವೃಷ್ಣಿಕುಲದ ಉದ್ಧವನು ಶ್ರೀಕೃಷ್ಣನಿಗೆ ಬಹಳ ಬೇಕಾದವನಾದನು. ಗುರುಕುಲದಿಂದ ಬಂದ ಕೃಷ್ಣನು ಆತನನ್ನು ಗೋಕುಲಕ್ಕೆ ಅಲ್ಲಿ ಯಶೋದಾನಂದರಿಗೂ ಗೋಪಗೋಪಿಯರಿಗೂ ಸಮಾಧಾನ ಹೇಳಿಬಾರೆಂದು ಕಳುಹಿಸಿದನು. ಅವರೂ ಉದ್ಧವನನ್ನು ಶ್ರೀಕೃಷ್ಣನೆಂದೇ ಭಾವಿಸಿ



**ವೇಣುಗೋಪಾಲ**

ಆತನ ನುಡಿಗಳನ್ನು ಕೇಳಿ ಕೃಷ್ಣನು ತನ್ನುನ್ನು ಮರೆತಿಲ್ಲವೆಂದು ಸಮಾಧಾನ ಪಡೆದರು.

ಶ್ರೀಕೃಷ್ಣನು ತನ್ನ ದುಷ್ಟ ಸಂಹಾರ ಕಾರ್ಯವನ್ನು ಸಾಧಿಸಲು ಸಾಧನರಾದ ಪಾಂಡವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರಲು ತನ್ನ ಚಿಕ್ಕಪ್ಪನಾದ ಅಕ್ರೂರನನ್ನು ಕಳುಹಿಸಿದನು. ಆತನು ಅಲ್ಲಿಗೆ ಹೋಗಿ ಅಲ್ಲಿನ ಹಿರಿಯರನ್ನೂ ಬಂಧುಗಳನ್ನೂ ಮಿತ್ರರನ್ನೂ ಕಂಡನು. ಅಲ್ಲಿಯೇ ಕೆಲವು ತಿಂಗಳು ಇದ್ದು ಪಾಂಡವರನ್ನು ಕಂಡೂ ಸೈರಿಸದ ದುರ್ಯೋಧನನ ಕೆಟ್ಟ ನಡತೆಯನ್ನು ಸಂಪೂರ್ಣವಾಗಿ ತಿಳಿದು ಕುಂತೀದೇವಿಗೂ ಧೃತರಾಷ್ಟ್ರನಿಗೂ ಸಮಯಕ್ಕೆ ತಕ್ಕಂತೆ ಬುದ್ಧಿ ವಾದಗಳನ್ನು ಹೇಳಿದನು. ಧೃತರಾಷ್ಟ್ರನು ಪುತ್ರಪ್ರೇಮದಿಂದ ಯಾರ ಮಾತೂ ಕೇಳುವುದಿಲ್ಲವೆಂಬುದನ್ನು ಗೊತ್ತುಮಾಡಿಕೊಂಡು ಬಂದು ಶ್ರೀಕೃಷ್ಣನಿಗೆ ಅರಿಕೆ ಮಾಡಿದನು.

---

## ಮೂವತ್ತೆಂಟನೆಯ ಅಧ್ಯಾಯವು

# ದ್ವಾರಕೆಗೆ ಬಂದುದು

ಕಂಸನಿಗೆ ಅಸ್ತಿ ಪ್ರಾಸ್ತಿ ಎಂಬ ಇಬ್ಬರು ಹೆಂಡಿರು. ಅವರಿಬ್ಬರೂ ಮಗಧ ದೇಶಕ್ಕೆ ಒಡೆಯನಾದ ಜರಾಸಂಧನ ಮಕ್ಕಳು. ಆ ಹೆಣ್ಣು ಮಕ್ಕಳ ಗೋಳು ನೋಡಲಾರದೆ ಜರಾಸಂಧನು ಶೋಕರೋಷಗಳಿಂದ "ಯಾದವರ ಕುಲವನ್ನೇ ನಿರ್ಮೂಲ ಮಾಡುವೆ"ನೆಂದು ಶಪಥ ಮಾಡಿದನು. ಯಾದವರ ರಾಜಧಾನಿಯಾದ ಮಧುರೆಗೆ ಅಪಾರವಾದ ಸೈನ್ಯದೊಡನೆ ಬಂದು ಮುತ್ತಿಗೆ ಹಾಕಿದನು. ಅವನ ಸೈನ್ಯವು ಇಪ್ಪತ್ತಮೂರು ಅಕ್ಷೌಹಿಣಿ. ಅದನ್ನು ಕಂಡು ಕೃಷ್ಣನು ತನ್ನ ಅವ

ಶಾಪದ ಕಾರ್ಯವು ಪ್ರಾರಂಭವಾಯಿತು ಎಂದುಕೊಂಡನು. ಆತನು ಹಾಗೆ ಯೋಚಿಸುತ್ತಿದ್ದ ಹಾಗೆಯೇ ಅಂತರಿಕ್ಷದಿಂದ ಎರಡು ರಥಗಳು ಬಂದುವು. ಅವುಗಳಲ್ಲಿ ದಿವ್ಯಾಯುಧಗಳು ತುಂಬಿದ್ದುವು. ಶ್ರೀರಾಮ ಕೃಷ್ಣರು ಕವಚಗಳನ್ನು ತೊಟ್ಟು ಆ ರಥಗಳನ್ನು ಏರಿ ಯುದ್ಧಕ್ಕೆ ಸಿದ್ಧರಾದರು. ದಾರುಕ ಎಂಬುವನು ಶ್ರೀಕೃಷ್ಣನ ಸಾರಥಿಯಾದನು.



## ಕಂಸವಧೆ

ಶ್ರೀಕೃಷ್ಣನು ತನ್ನ ಪಾಂಚಜನ್ಯವನ್ನು ಊದಿದನು. ಯುದ್ಧವು ಆರಂಭವಾಯಿತು. ಯಾದವರೇ ಸೋಲಬಹುದೋ ಎಂಬಂತಿದ್ದ ಯುದ್ಧವು ಶ್ರೀಕೃಷ್ಣನ ಸಾಹಸದಿಂದ ಯಾದವರಿಗೆ ಅನುಕೂಲವಾಯಿತು. ಜರಾಸಂಧನ ಅಪಾರವಾದ ಸೈನ್ಯವು ಛಿನ್ನಭಿನ್ನವಾಗಿ ಮುರಿಯಿತು. ಜರಾಸಂಧನೂ ಪೆಟ್ಟುತಿಂದು ಬಳಲಿದನು. ಬಲರಾಮನು ಆತನನ್ನು ಹಿಡಿದು ಎಳೆತಂದನು. ಶ್ರೀಕೃಷ್ಣನು "ಇವನು ಬದುಕಿದ್ದರೆ ಇನ್ನೂ ಸೇನೆಯನ್ನು ತರುವನು. ಭೂಭಾರವು ಅಧಿಕವಾಗುವುದು" ಎಂದು ಅವನನ್ನು ಬಿಡಿಸಿದನು. ಸೈನ್ಯವನ್ನೆಲ್ಲ ನೀಗಾಡಿಕೊಂಡ ಜರಾಸಂಧನು ಓಡಿಹೋದನು.

ಮೂರು ತಿಂಗಳು ಎನ್ನುವುದರಲ್ಲಿ ಜರಾಸಂಧನು ಮತ್ತೆ ಯುದ್ಧಕ್ಕೆ ಬಂದನು. ಮತ್ತೆ ಇಪ್ಪತ್ತಮೂರು ಅಕ್ಷೌಹಿಣೀ ಸೇನೆಯು ಬಂತು. ಆ ಸೇನೆಯು ಯಮುನಾ ತೀರದಲ್ಲಿ ಬೀಡು ಬಿಟ್ಟಿದ್ದಾಗ ಶ್ರೀಕೃಷ್ಣನ ಸಲಹೆಯಂತೆ ಯಾದವ ಸೇನೆಯು ಮೂರು ಪಾಲಾಗಿ ಆ ಸೇನೆಯ

ಮೇಲೆ ಬೆಳಗಾಗುವುದಕ್ಕೆ ಮುಂಚೆಯೇ ಬಿತ್ತು. ಶತ್ರು ಸೇನೆಯು ಇನ್ನೂ ಸಿದ್ಧವಾಗಿರಲಿಲ್ಲ. ಆದರಿಂದ ಯಾದವರಿಗೆ ಜಯವು ಸುಲಭ ವಾಗಿ ಸಿಕ್ಕಿತು. ಮಗಧನ ಸೇನೆಯು ಸೋತು ಹೋಯಿತು: ಐದು ಗಾವುದಗಳ ದೂರ ಯಾದವರು ಅದನ್ನು ಓಡಿಸಿಕೊಂಡು ಹೋದರು. ಜರಾಸಂಧನು ಆನೆ, ಕುದುರೆ, ಆಯುಧಗಳು, ರಥ, ಧನ, ಕನಕ, ವಸ್ತ್ರ, ಭೂಷಣಗಳು ಎಲ್ಲವನ್ನೂ ಬಿಟ್ಟು ಓಡಿಹೋದನು. ಅದೆಲ್ಲ ವನ್ನೂ ತಂದು ಶ್ರೀಕೃಷ್ಣನು ಉಗ್ರಸೇನನಿಗೆ ಒಪ್ಪಿಸಿದನು.

ಜರಾಸಂಧನು ಸೋತನೆಂದು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಶೋಣಿತಪುರದಲ್ಲಿ ಬಾಣಾಸುರನು ಆಳುತ್ತಿದ್ದನು. ಜರಾಸಂಧನೂ ಅವನೂ ಮಿತ್ರರು. ಅವನ ಸಹಾಯವನ್ನು ಪಡೆದು ಮತ್ತೆ ಯುದ್ಧಕ್ಕೆ ಬಂದನು. ಅರವತ್ತು ಸಾವಿರ ಆನೆಗಳು, ಇಪ್ಪತ್ತು ಸಾವಿರ ವಾಯು ವೇಗ ಮನೋವೇಗಗಳುಳ್ಳ ಕುದುರೆಗಳು, ಹತ್ತು ಸಾವಿರ ರಥಗಳು, ಮಾಯಾ ಯುದ್ಧ ವಿಶಾರದರಾದ ಮುನ್ನೂರು ಮಂದಿ ದೈತ್ಯ ವೀರರು, ಕುಂಭಾಂಡ ಕೂರ್ಪಕರ್ಣರೆಂಬ ಇಬ್ಬರು ಮಂತ್ರಿಗಳೂ ಉಳ್ಳ ಆ ಸೈನ್ಯವು ಬಂದು ಮಥುರೆಯನ್ನು ಮುತ್ತಿತು. ಆ ರಾಕ್ಷಸ ಸೇನೆಯು ಯಾದವರನ್ನು ಗೋಳಾಡಿಸಿತು. ಆ ದೈತ್ಯರ ಮಾಯೆಗೆ ಸಿಕ್ಕಿ ಅವರು ಬಹುವಾಗಿ ಕಷ್ಟಪಟ್ಟರು. ಆಗ ಶ್ರೀಕೃಷ್ಣನು ಸಾತ್ಯಕಿ ಕೃತವರ್ಮರನ್ನು ಕರೆದುಕೊಂಡು ಯುದ್ಧಕ್ಕೆ ಬಂದನು. ಬಲರಾಮನು ಮತ್ತೊಂದು ಕಡೆಯಿಂದ ಬಂದನು. ವರಾಹ ಧ್ವಜವುಳ್ಳ ಜರಾಸಂಧನೂ, ತಾಳ ಧ್ವಜವುಳ್ಳ ಬಲರಾಮನೂ ಕಾದಾಡಿದರು. ಅಸ್ತ್ರ ಶಸ್ತ್ರಗಳ ಯುದ್ಧ ವಾದ ಮೇಲೆ ಇಬ್ಬರಿಗೂ ಗದಾಯುದ್ಧವಾಯಿತು ಮಲ್ಲಯುದ್ಧ ವಾಯಿತು. ಜರಾಸಂಧನು ಸೋತನು.

ಸಾತ್ಯಕಿಯು ಕುಂಭಾಂಡನನ್ನು ಸಂಹರಿಸಿದನು. ಅದನ್ನು ಕಂಡು ಕೃತವರ್ಮನೊಡನೆ ಯುದ್ಧಮಾಡುತ್ತಿದ್ದ ಕೂಪಕರ್ಣನು

ಹೇಳದೆ ಕೇಳದೆ ಓಡಿದನು. ಶ್ರೀಕೃಷ್ಣನು ತಾನೊಬ್ಬನೇ ನೂರು ಮಂದಿಯೊಡನೆ ಯುದ್ಧ ಮಾಡಿದನು. ತಮ್ಮ ನಾಯಕರು ಓಡಿದುವನ್ನೂ ಶ್ರೀಕೃಷ್ಣನ ಪರಾಕ್ರಮವನ್ನೂ ಕಂಡು ದಾನವ ಸೇನೆಯೂ ಓಡಿತು. ಹೀಗೆ ಅಸಹಾಯನಾದ ಜರಾಸಂಧನನ್ನು ಬಲರಾಮನು ಹಿಡಿದು ತನ್ನ ಮುಸಲದಿಂದ ಹೊಡೆದು ಕೊಲ್ಲುವುದರಲ್ಲಿದ್ದನು. ಅಷ್ಟರಲ್ಲಿ "ಬಲ ರಾಮ, ಈ ಜರಾಸಂಧನು ನಿನ್ನಿಂದ ಸಾಯುವವನಲ್ಲ" ಎಂದು ಆಕಾಶ ವಾಣಿಯು ನುಡಿಯಲು, ಬಲರಾಮನು ಅವನನ್ನು ಬಿಟ್ಟನು. ಅವನು ಸೋತು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ಗೆದ್ದು ಬಂದ ರಾಮ ಕೃಷ್ಣರನ್ನೂ ಯಾದವರನ್ನೂ ಎಲ್ಲರೂ ಬೇಕಾದ ಹಾಗೆ ಗೌರವಿಸಿ ದರು.

ಶ್ರೀಕೃಷ್ಣನು ತನ್ನವರನ್ನೆಲ್ಲಾ ಕರೆದುಕೊಂಡು ದಕ್ಷಿಣ ದಿಕ್ಕಿನ ಲ್ಲಿದ್ದ ಗೋಮಂತವೆಂಬ ಗಿರಿದುರ್ಗವನ್ನು ಸಾಧಿಸಲು ಹೊರಟನು. ಅಲ್ಲಿ ಆಶ್ರಮವನ್ನು ಮಾಡಿಕೊಂಡಿದ್ದ ಪರಶುರಾಮನನ್ನು ಕಂಡು ಆತ ನಿಗೆ ನಮಸ್ಕಾರ ಮಾಡಿದನು. ಆತನು "ಗೋಮಂತ ದುರ್ಗದ ಮಗ್ಗ ಲಲ್ಲಿ ಕರವೀರಪುರವಿರುವುದು. ಅಲ್ಲಿ ಸೃಗಾಲ ವಾಸುದೇವನು ರಾಜ್ಯ ವಾಳುತ್ತಿರುವನು. ಅವನನ್ನು ಗೆದ್ದು ಗೋಮಂತಕ್ಕೆ ಹೋಗಿ" ಎಂದು ಸಲಹೆಯಿತ್ತನು. ಅದರಂತೆ ರಾಮಕೃಷ್ಣರು ಹೋಗಿ ಕರವೀರಪುರವನ್ನು ಮುತ್ತಿದರು. ಅಲ್ಲಿ ಸೃಗಾಲ ವಾಸುದೇವನಿಗೂ ಶ್ರೀಕೃಷ್ಣನಿಗೂ ಭಾರಿಯ ಯುದ್ಧವಾಗಿ ಶ್ರೀಕೃಷ್ಣನೇ ಗೆದ್ದನು. ಸೃಗಾಲ ವಾಸು ದೇವನು ಹತನಾದನು.

ಶ್ರೀಕೃಷ್ಣನು ಗೋಮಂತದಲ್ಲಿರುವಾಗ ಪಕ್ಷಿರಾಜನಾದ ಗರು ಡನು ಮಹಾ ವಿಷ್ಣುವಿನ ಕಿರೀಟವನ್ನು ತಂದು ಒಪ್ಪಿಸಿದನು: ಅದನ್ನು ಸ್ವೀಕರಿಸಿ ಗರುಡನನ್ನು ಬೀಳ್ಕೊಟ್ಟು ಕರವೀರಪುರಕ್ಕೆ ಬರುವವೇಳೆಗೆ ಸೃಗಾಲನ ಸ್ನೇಹಿತನಾಗಿದ್ದ ಜರಾಸಂಧನು ಮತ್ತೆ ಸೇನೆಯನ್ನು ಕಟ್ಟಿ

ಕೊಂಡು ಯುದ್ಧಕ್ಕೆ ಬಂದನು. ಈ ಸಲ ಏಳುದಿನ ಒಂದೇ ಸಮನಾಗಿ ಯುದ್ಧವಾಯಿತು. ಆದರೂ ಜರಾಸಂಧನು ಗೆಲ್ಲಲಿಲ್ಲ.

ಹೀಗೆ ಹದಿನೇಳು ಸಲ ಜರಾಸಂಧನು ಸೋತರೂ ಹದಿನೆಂಟನೆಯ ಸಲವೂ ಅವನು ದಂಡೆತ್ತಿ ಬರಲು ಸನ್ನದ್ಧನಾದನು. ಅಷ್ಟರಲ್ಲಿ ಕಾಲಯವನನು ತನ್ನ ಮೂರು ಕೋಟಿ ಮ್ಲೇಚ್ಛ ಸೇನೆಯೊಡನೆ ಬಂದು ಮಥುರೆಯನ್ನು ಮುತ್ತಿದನು. ಅವನು ತನ್ನಂತಹ ಶೂರರೇ ಇಲ್ಲವೆಂದು ಗರ್ವಪಡುತ್ತಿದ್ದನು. ರಾಮಕೃಷ್ಣರ ಪರಾಕ್ರಮವನ್ನು ಕೇಳಿ ಅವರೊಡನೆ ಯುದ್ಧಕ್ಕೆ ಬಂದನು.

ಕಾಲಯವನನು ಗರ್ಗ್ಯಮುನಿಯ ವರದಿಂದ ಯಾದವರನ್ನು ನಾಶಮಾಡಲು ಹುಟ್ಟಿದವನು ಎಂದು ಬಲ್ಲ ಶ್ರೀಕೃಷ್ಣನು ಅವನನ್ನು ಉಪಾಯದಿಂದ ಗೆದ್ದನು. ಅವನು ಕಾಣುವಂತೆ ಶ್ರೀಕೃಷ್ಣನು ಒಬ್ಬನೇ ಒಬ್ಬನು ಮಥುರೆಯಿಂದ ಹೊರಟನು. ಕಾಲಯವನನು ಶತ್ರುವು ತಲೆ ತಪ್ಪಿಸಿಕೊಂಡು ಹೋಗುತ್ತಿರುವನೆಂದು ಅವನನ್ನು ಅಟ್ಟಿಸಿಕೊಂಡು ಬಂದನು. ಶ್ರೀಕೃಷ್ಣನು ಹೆದರಿದವನಂತೆ ಮುಂದೆ ಓಡಿದನು. ಅವನನ್ನು ಹಿಡಿದು ಅವನೊಡನೆ ಯುದ್ಧಮಾಡಬೇಕೆಂದು ಕಾಲಯವನನು ಅವನನ್ನು ಅಟ್ಟಿ ಬಂದನು: ಶ್ರೀಕೃಷ್ಣನು ಅವನನ್ನು ಹೀಗೆ ಉಪಾಯದಿಂದ ಎಳೆದುಕೊಂಡು ಹೋಗಿ ಒಂದು ಗುಹೆಯನ್ನು ಹೊಕ್ಕನು. ಇವನೂ ಹೋಗಿ ಆ ಗುಹೆಯಲ್ಲಿ ಮಲಗಿದ್ದವನನ್ನು "ಇವನೇ ಕೃಷ್ಣ" ನೆಂದುಕೊಂಡು ಕಾಲಿನಿಂದ ಒದೆದನು. ಮಲಗಿದ್ದವನು ಎದ್ದು ಕೋಪದಿಂದ ನೋಡಲು ಕಾಲಯವನನು ಆ ತೇಜಸ್ಸಿನಿಂದ ಹತನಾದನು.

ಮಲಗಿದ್ದವನು ಮುಚಕುಂದನು. ಒಂದೆ ಪ್ರಸಿದ್ಧನಾದ ಮಾಂಧಾತೃ ಮಹಾರಾಜನ ಮಗನು. ಆತನು ದಾನವರಿಗೆ ಸೋತಿದ್ದ ಇಂದ್ರಾದಿ ದೇವತೆಗಳ ಸೇನಾಧಿಪತಿಯಾಗಿ ಶತ್ರುಗಳನ್ನು ಗೆದ್ದು ಶಿವಪುತ್ರನಾದ ಕುಮಾರಸ್ವಾಮಿಯು ದೇವಸೇನಾಪತಿಯಾಗಿ ಬರುವ

ವರೆಗೂ ದೇವತೆಗಳನ್ನು ಕಾಪಾಡಿದನು. ಆಗ ತನಗೆ ಆದ ಆಯಾಸವನ್ನು ಕಳೆಯುವುದಕ್ಕಾಗಿ ಆತನು ಆ ಗುಹೆಯಲ್ಲಿ ಮಲಗಿದ್ದನು. ಶ್ರೀಕೃಷ್ಣನನ್ನು ಕಾಣುತ್ತಲೇ ಆತನಿಗೆ "ಈತನೇ ಮಹಾ ವಿಷ್ಣು"ವೆಂದು ತಿಳಿಯಿತು. ಆತನನ್ನು ಸ್ತೋತ್ರಗಳಿಂದ ಮೆಚ್ಚಿಸಿದನು. ಆಗ ಶ್ರೀಕೃಷ್ಣನು "ಎಲೈ ಮುಚುಕುಂದನೆ, ನೀನು ಏಕಾಂತ ಭಕ್ತನು. ಯೋಗ ಮಾಡಿದ್ದರೂ ಭಕ್ತರಲ್ಲದವರಿಗೆ ಮತ್ತೆ ಸಂಸಾರವು ಬರುವುದು. ಆದರಿಂದ ನೀನು ಭಕ್ತನಾದ ಬ್ರಾಹ್ಮಣನಾಗಿ ಒಂದು ಜನ್ಮವನ್ನು ಕಳೆದು ಮುಕ್ತಿಯನ್ನು ಪಡೆ" ಎಂದು ಅನುಗ್ರಹಮಾಡಿ ಅವನನ್ನು ಕಳುಹಿಸಿ ಮಥುರೆಗೆ ಬಂದು ಮ್ಲೇಚ್ಛ ಸೇನೆಗಳೆಲ್ಲವನ್ನೂ ಓಡಿಸಿದನು.

ಹೀಗೆ ಪದೇಪದೇ ಶತ್ರುಗಳು ಬಂದು ಮುತ್ತುತ್ತಿರುವ ಮಧುರೆಯನ್ನು ಬಿಡುವುದು ಒಳ್ಳೆಯದು ಎಂದು ಯೋಚಿಸಿ, ಸಮುದ್ರ ಮಧ್ಯದಲ್ಲಿ ದ್ವಾರಕಾ ಎಂಬ ಪಟ್ಟಣವನ್ನು ನಿರ್ಮಾಣ ಮಾಡಿಸಿದನು: ವಿಶ್ವಕರ್ಮನೆಂಬ ದೇವಶಿಲ್ಪಿಯು ಆ ನಗರವನ್ನು ರಚಿಸಿದನು. ಇಂದ್ರಾದಿ ದೇವತೆಗಳೆಲ್ಲರೂ ಆ ನಗರಕ್ಕೆ ಬೇಕುಬೇಕಾದುದನ್ನೆಲ್ಲಾ ತಂದು ತುಂಬಿದರು. ಕಾಲಯವನನ ಸೈನ್ಯವು ಬಿಟ್ಟುಹೋದ ಧನಕನಕಾದಿಗಳನ್ನೆಲ್ಲ ಸಾಗಿಸಿಕೊಂಡು ದ್ವಾರಕಾ ನಗರಕ್ಕೆ ಯಾದವರು ಬರುತ್ತಿರುವಾಗ ಜರಾಸಂಧನು ಬಂದು ಆಕ್ರಮಿಸಿದನು. ಆ ಸಲ ರಾಮಕೃಷ್ಣರು ಅವನೊಡನೆ ಯುದ್ಧಮಾಡದೆ ಹೆದರಿದವರಂತೆ ಓಡಿಹೋದರು. ಜರಾಸಂಧನು ಅವರನ್ನು ಬಹಳ ದೂರ ಓಡಿಸಿಕೊಂಡು ಹೋದನು. ಅವರಿಬ್ಬರೂ ಅವನನ್ನು ಸೆಳೆದುಕೊಂಡು ಬಹಳ ದೂರ ಹೋಗಿ, ಯಾವಾಗಲೂ ಮಳೆಗರೆಯುತ್ತಿರುವ ಪ್ರವರ್ಷಣವೆಂಬ ಬೆಟ್ಟವನ್ನು ಹತ್ತಿ ಮರೆಯಾದರು. ಜರಾಸಂಧನು ಬೆಟ್ಟದಲ್ಲಿ ಎಲ್ಲಿಯೂ ಅವರನ್ನು ಹಿಡಿಯಲಾರದೆ ಬೆಟ್ಟಕ್ಕೇ ಬೆಂಕಿಯನ್ನು ಹಾಕಿ, ತನ್ನ ಶತ್ರುಗಳು ಹತರಾದರೆಂದು ನೆಮ್ಮದಿಯಾಗಿ ಹಿಂದಿರುಗಿದನು. ರಾಮ

ಕೃಷ್ಣರು ಆ ಬೆಂಕಿಯಿಂದ ತಪ್ಪಿಸಿಕೊಂಡು ಬಂದು ದ್ವಾರಕೆಯನ್ನು ಸೇರಿದರು.

---

## ಮೂವತ್ತೊಂಭತ್ತನೆಯ ಅಧ್ಯಾಯವು

# ಕಲ್ಯಾಣ ಲೀಲೆಗಳು

ವಿದರ್ಭ ದೇಶದಲ್ಲಿ ಭೀಷ್ಮಕನೆಂಬ ರಾಜನಿದ್ದನು. ಆತನು ಮಹಾತ್ಮನು. ಆತನಿಗೆ ಐದು ಮಂದಿ ಗಂಡು ಮಕ್ಕಳೂ ಒಬ್ಬ ಮಗಳೂ ಇದ್ದರು. ಆಕೆಯೇ ರುಕ್ಮಿಣೀ ದೇವಿಯು. ಆಕೆಯು ಮಹಾ ಲಕ್ಷ್ಮಿಯಂತಹ ರೂಪವತಿಯು. ಶ್ರೀಕೃಷ್ಣನ ರೂಪ, ಪರಾಕ್ರಮ, ವಿದ್ಯಾ, ಸಂಪತ್ತುಗಳನ್ನು ಕೇಳಿ ಆತನನ್ನೇ ಮದುವೆಯಾಗಬೇಕೆಂದು ಸಂಕಲ್ಪ ಮಾಡಿದ್ದಳು. ಎಲ್ಲರೂ ಆಕೆಗೆ ಶ್ರೀಕೃಷ್ಣನೇ ಸರಿಯಾದ ಪತಿಯೆಂದು ನಿಶ್ಚಯಿಸಿದರು. ಆದರೆ ಆಕೆಯ ಅಣ್ಣನಾದ ರುಕ್ಮಿಯು ಮಾತ್ರ ಅವಳನ್ನು ಶಿಶುಪಾಲನಿಗೆ ಕೊಡಬೇಕೆಂದು ನಿಶ್ಚಯಿಸಿದ್ದನು

ಆಕೆಯು ಶ್ರೀಕೃಷ್ಣನಿಗೆ ಬ್ರಾಹ್ಮಣನ ಮೂಲಕವಾಗಿ ಒಂದು ಪತ್ರವನ್ನು ಕಳುಹಿಸಿದಳು: "ನಾನು ನಿನ್ನನ್ನು ಪತಿಯನಾಗಿ ವರಿಸಿರುವೆನು. ನನ್ನನ್ನು ನಿನಗೆ ಒಪ್ಪಿಸಿಕೊಂಡಿರುವೆನು. ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸು. ನಮ್ಮ ಅಣ್ಣನು ನನ್ನನ್ನು ಶಿಶುಪಾಲನ ಪಾಲು ಮಾಡಬೇಕೆಂದಿರುವನು. ಸಿಂಹಪತ್ನಿಯನ್ನು ಜಂಬುಕವು (ನರಿ) ಮುಟ್ಟದಂತೆ ನೋಡಿಕೊ. ವಿವಾಹದ ದಿನ ನಗರದ ಹೊರಗಿರುವ ಗೌರೀ ದೇವಾಲಯಕ್ಕೆ ಪೂಜೆಗೆ ಬರುವೆನು. ಅದು ಸಕಾಲ." ಎಂದು ಅದರಲ್ಲಿ ಬರೆದಿತ್ತು.

ಶ್ರೀಕೃಷ್ಣನು ಆ ಪತ್ರವನ್ನು ಕಂಡು ರುಕ್ಮಿಣಿಯನ್ನು ಎದುರಿಗೆ ಕಂಡಂತೆ ಸಂತೋಷಗೊಂಡನು. ಆಗಲಿ ಎಂದು ಒಪ್ಪಿಕೊಂಡು ಆ ಪತ್ರವನ್ನು ತಂದಿದ್ದ ಬ್ರಾಹ್ಮಣನನ್ನು ಮರ್ಯಾದೆಗಳಿಂದ ಕಳುಹಿಸಿ ಕೊಟ್ಟನು.

ಮದುವೆಗೆ ಗೊತ್ತಾದ ದಿನವನ್ನು ತಿಳಿದು ಕೃಷ್ಣನು ಕುಂಡಿನ ಪುರಕ್ಕೆ ನಾಲ್ಕು ಕುದುರೆಗಳನ್ನು ಕಟ್ಟಿದ ರಥವನ್ನೇರಿ ಬಂದನು. ಸಪರಿವಾರನಾಗಿ ಬಂದ ಶ್ರೀಕೃಷ್ಣನನ್ನು ನೋಡಿ ರುಕ್ಮಿಯ ಹೊರತು ಮಿಕ್ಕವರೆಲ್ಲರೂ ಸಂತೋಷಪಟ್ಟರು.

ಮದುವೆಯದಿನ ಗೌರೀ ಪೂಜೆಗೆಂದು ರಾಜಪುತ್ರಿಯು ಹೊರಟಳು. ಆಕೆಯು ಪೂಜೆಮಾಡಿ ದೇವಾಲಯದಿಂದ ಹೊರಕ್ಕೆ ಬರುವುದಕ್ಕೂ ಕೃಷ್ಣನು ಬರುವುದಕ್ಕೂ ಸರಿಹೋಯಿತು. ಶ್ರೀಕೃಷ್ಣನು ರುಕ್ಮಿಣಿಯನ್ನು ಹೊತ್ತುಕೊಂಡು ಬಂದು ತನ್ನ ರಥದಲ್ಲಿಟ್ಟುಕೊಂಡು ಹೊರಟು ಹೋದನು.

ರುಕ್ಮಿಯು ಸೇನೆಯೊಡನೆ ಆತನನ್ನು ಅಟ್ಟಿಕೊಂಡು ಬಂದನು. ಯಾದವ ಸೇನೆಯು ಅಡ್ಡವಾಯಿತು. ರುಕ್ಮಿಯನ್ನೂ, ರುಕ್ಮಿಯೊಡನೆ ಬಂದಿದ್ದ ಅವನ ಸ್ನೇಹಿತರನ್ನೂ, ಶ್ರೀಕೃಷ್ಣನು ಸೋಲಿಸಿದನು. ರುಕ್ಮಿಯು ಕೈಸೆರೆ ಸಿಕ್ಕಿದನು. ಬಲರಾಮನು ಶ್ರೀಕೃಷ್ಣನಿಗೆ ಹೇಳಿ ಅವನ ಸೆರೆಯನ್ನು ತಪ್ಪಿಸಿದನು.

ದ್ವಾರಕಾಪುರದಲ್ಲಿ ಶ್ರೀಕೃಷ್ಣನು ರುಕ್ಮಿಣಿಯನ್ನು ಮಹಾ ವೈಭವದಿಂದ ಮದುವೆಯಾದನು. ಯಾದವರೂ, ಯಾದವರ ಬಂಧುಗಳೂ, ಆ ಮದುವೆಯಿಂದ ಬಹು ಸಂತೋಷಪಟ್ಟರು. ರುಕ್ಮಿಣಿಯು ಶ್ರೀಕೃಷ್ಣನಿಂದ ಪ್ರದ್ಯುಮ್ನನೆಂಬ ಸುಕುಮಾರನನ್ನು ಪಡೆದಳು. ಶಂಬರನೆಂಬ ಅಸುರನು ಆ ಮಗುವು ತನ್ನ ಮೃತ್ಯುವೆಂದು ತಿಳಿದು ಅದನ್ನು ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಎಸೆದನು. ಒಂದು ಮೀನು ಆ ಮಗು

ವನ್ನು ನುಂಗಿತು. ಆ ಮಗುವು ಮೀನಿನ ಹೊಟ್ಟೆಯಲ್ಲಿ ಸುಖವಾಗಿತ್ತು. ಬೆಸ್ತರು ಆ ಮೀನನ್ನು ಹಿಡಿದು, ಅದು ದೊಡ್ಡದಾಗಿ ಚೆನ್ನಾಗಿರುವುದೆಂದು ಶಂಬರಾಸುರನಿಗೆ ಒಪ್ಪಿಸಿದರು. ಅವನು ಅದನ್ನು ಪಾಕಶಾಲೆಗೆ ಕಳುಹಿಸಿದನು. ಅಲ್ಲಿ ಅದನ್ನು ಕತ್ತರಿಸಿದರೆ, ಒಂದು ಮಗುವು ಸಿಕ್ಕಿತು. ಆ ಅಡುಗೆ ಮನೆಯವರು ಅದನ್ನು ಮಾಯಾವತಿಗೆ ಒಪ್ಪಿಸಿದರು. ಮಾಯಾವತಿಯು ಶಂಬರನಿಗೆ ಸೆರೆ ಸಿಕ್ಕಿದ್ದ ರತಿಯು. ರತಿಯು ಆ ಮಗುವು ತನ್ನ ಗಂಡನಾದ ಮನ್ಮಥನೆಂದು ನಾರದರಿಂದ ತಿಳಿದು, ಅದನ್ನು ಗುಟ್ಟಾಗಿ ಸಾಕಿದಳು.

ಆ ಮಗುವು ಬೆಳೆದು ಹುಡುಗನಾಗಿ ತರುಣನಾಗಿ ಮದುವೆಯಾಗುವ ವಯಸ್ಸಿನವನಾದನು. ಆಗ ಮಾಯಾವತಿಯು ತಾನು ಯಾರು ಅವನು ಯಾರು ?" ಎಂಬುದನ್ನು ತಿಳಿಸಿ ಅವನನ್ನು ಮದುವೆಯಾದಳು. ಅವನಿಗೆ ಶಂಬರನ ಮಾಯಾ ವಿದ್ಯೆಗಳಿಗಿಂತ ಅತಿಶಯವಾದ ಮಾಯಾ ವಿದ್ಯೆಯನ್ನು ಹೇಳಿಕೊಟ್ಟಳು: ಆಗ ಅವನು ಶಂಬರನ ಮೇಲೆ ಯುದ್ಧಮಾಡಿ ಅವನ ಮಾಯೆಗಳನ್ನೆಲ್ಲಾ ಧ್ವಂಸ ಮಾಡಿ ಅವನನ್ನು ಸಂಹರಿಸಿದನು ಅವನೇ ಪ್ರದ್ಯುಮ್ನನು. ಹೀಗೆ ಶತ್ರುವನ್ನು ನಾಶ ಮಾಡಿ, ತನ್ನ ಹಿಂದಿನ ಜನ್ಮದ ಹೆಂಡತಿಯನ್ನು ಕರೆದುಕೊಂಡು ಅವನು ತನ್ನ ತಾಯಿತಂದೆಗಳಾದ ರುಕ್ಮಿಣೀ ಶ್ರೀಕೃಷ್ಣರಲ್ಲಿಗೆ ಬಂದನು. ಆತನನ್ನು ನೋಡಿದವರೆಲ್ಲರೂ ಶ್ರೀಕೃಷ್ಣನೇ ಎಂದುಕೊಂಡರು. ರುಕ್ಮಿಣಿಗೆ ಅವನನ್ನು ನೋಡುತ್ತಿದ್ದ ಹಾಗೆಯೇ ಕಳೆದು ಹೋಗಿದ್ದ ತನ್ನ ಮಗನೇ ಅವನೆಂದು ತಿಳಿದುಹೋಯಿತು. ಆ ವೇಳೆಗೆ ಶ್ರೀಕೃಷ್ಣನು ತನ್ನ ತಾಯಿತಂದೆಗಳನ್ನು ಕರೆದುಕೊಂಡು ಬಂದನು. ಎಲ್ಲರೂ ಪ್ರದ್ಯುಮ್ನನನ್ನು ಕಂಡು ಸಂತೋಷಪಟ್ಟರು.

ಯಾದವರಲ್ಲಿ ಸತ್ರಾಜಿತನು ಪ್ರಸಿದ್ಧನು. ಅವನು ಬಹು ಕಾಲ ಸೂರ್ಯನನ್ನು ಆರಾಧಿಸಿ, ಆತನ ಕೃಪೆಯಿಂದ ಸ್ಯಮಂತಕವೆಂಬ ಮಣಿ

ಯನ್ನು ಪಡೆದನು. ಆ ಮಣಿಯನ್ನು ಧರಿಸಿದ್ದರೆ ಸತ್ರಾಜಿತನೂ ಸೂರ್ಯನಂತೆಯೇ ಹೊಳೆಯುತ್ತಿದ್ದನು. ಆ ಮಣಿಯು ದಿನದಿನವೂ ಎಂಟು ಭಾರದ ಚಿನ್ನವನ್ನು ಕೊಡುವುದು. (ಒಂದು ಭಾರವೆಂದರೆ ಸುಮಾರು ಎರಡೂ ಮುಕ್ಕಾಲು ಮಣ) ಶ್ರೀಕೃಷ್ಣನು "ಇಂಥಾ ದಿವ್ಯ ಮಣಿಯು ಅರಸನ ಬಳಿ ಇರಬೇಕು. ಆದರಿಂದ ನೀನು ಇದನ್ನು ಉಗ್ರಸೇನನಿಗೆ ಕೊಡು" ಎಂದನು. ಸತ್ರಾಜಿತನು ಹೇಗೆ ಕೊಟ್ಟಾನು ?

ಒಂದು ದಿನ ಸತ್ರಾಜಿತನ ತಮ್ಮನು ಆ ಮಣಿಯನ್ನು ಧರಿಸಿಕೊಂಡು ಬೇಟೆಗೆ ಹೋದನು. ಅಲ್ಲಿ ಅವನನ್ನು ಒಂದು ಸಿಂಹವು ಕೊಂದಿತು. ಆ ಸಿಂಹವನ್ನು ಕೊಂದು ಜಾಂಬುವಂತನು ಆ ಮಣಿ ತೆಗೆದುಕೊಂಡು ಹೋದನು. ಸತ್ರಾಜಿತನು ಮಣಿಯ ಮೇಲಿನ ಆಸೆಯಿಂದ ಪ್ರಸೇನನನ್ನು ಶ್ರೀಕೃಷ್ಣನು ಕೊಂದುಬಿಟ್ಟನು ಎಂದುಕೊಂಡು ಎಲ್ಲರಲ್ಲಿಯೂ ಹೇಳಿಕೊಂಡು ಬಂದನು.

ಶ್ರೀಕೃಷ್ಣನು ಈ ಕೆಟ್ಟ ಸುದ್ದಿಯನ್ನು ಕೇಳಿ, ಈ ಅಪವಾದವನ್ನು ಪರಿಹರಿಸಿಕೊಳ್ಳಬೇಕೆಂದು ಮಣಿಯನ್ನು ಹುಡುಕಿಕೊಂಡು ಹೊರಟನು.

ಪ್ರಸೇನನನ್ನು ಸಿಂಹವು ಕೊಂದಿರುವುದೂ, ಸಿಂಹವನ್ನು ಕರಡಿಯು ಕೊಂದಿರುವುದೂ ಗೊತ್ತಾಯಿತು. ಆ ಕರಡಿಯ ಹೆಜ್ಜೆಯ ಗುರುತುಗಳು ಒಂದು ಭಾರಿಯ ಕತ್ತಲೆಯ ಗವಿಗೆ ಕರೆದುಕೊಂಡು ಹೋದುವು. ಶ್ರೀಕೃಷ್ಣನು ಆ ಗವಿಯೊಳಕ್ಕೆ ನುಗ್ಗಿದನು. ಬಹುದೂರ ಹೋದ ಮೇಲೆ ಅಲ್ಲೊಂದು ಕರಡಿಯು ಆ ಮಣಿಯನ್ನು ಇಟ್ಟುಕೊಂಡು ಮಗುವನ್ನು ಆಡಿಸುತ್ತಿತ್ತು. ಆ ಕರಡಿಯು ಕೃಷ್ಣನನ್ನು ಕಂಡು ಕಿರಿಚಿಕೊಂಡಿತು. ಅದನ್ನು ಕೇಳಿ ಜಾಂಬುವಂತನು ತಾನೇ ಓಡಿ ಬಂದನು. ಕೃಷ್ಣನನ್ನು ಕಂಡು ಕೋಪದಿಂದ ಅವನ ಮೇಲೆ ಬಿದ್ದನು. ಇಬ್ಬರಿಗೂ ಇಪ್ಪತ್ತೆಂಟು ದಿನ ಹಣಾಹಣಿ ಯುದ್ಧವಾಯಿತು. ಆಗ

ಆತನ ಮುಷ್ಟಿಯ ಪೆಟ್ಟುಗಳಿಂದ ನೊಂದ ಜಾಂಬವಂತನು ಶ್ರೀಕೃಷ್ಣನು ತನ್ನ ಸ್ವಾಮಿಯಾದ ರಾಮನೇ ಎಂಬುವನ್ನು ಮನಗಂಡನು. ಆ ಮಣಿಯನ್ನೂ ತನ್ನ ಮಗಳಾದ ಜಾಂಬುವತಿಯನ್ನೂ ಆತನಿಗೆ ಒಪ್ಪಿಸಿ ತನ್ನ ಅಪರಾಧವನ್ನು ಮನ್ನಿಸಬೇಕೆಂದು ಬೇಡಿಕೊಂಡನು.

ಮಣಿಯನ್ನೂ ಕನ್ಯಾಮಣಿಯನ್ನೂ ತಂದ ಶ್ರೀಕೃಷ್ಣನನ್ನು ಕಂಡು ದ್ವಾರಕಾ ವಾಸಿಗಳೆಲ್ಲರೂ ಸಂತೋಷಪಟ್ಟರು. ಕೃಷ್ಣನು ರಾಜ ಸಭೆಗೆ ಸತ್ರಾಜಿತನನ್ನು ಕರೆಯಿಸಿ, ಅಲ್ಲಿ ಆ ಮಣಿಯನ್ನು ಆತನಿಗೆ ಕೊಟ್ಟನು. ಆತನು ತಾನು ನಿಂದೆಗೆ ಗುರಿಯಾದೆನೆಂದು ಸಂಕಟಪಟ್ಟು ಕೊಂಡು ಕೃಷ್ಣನಿಗೆ ತನ್ನ ಮಗಳಾದ ಸತ್ಯಭಾಮೆಯನ್ನು ಸ್ಯಮಂತಕ ದೊಡನೆ ಒಪ್ಪಿಸಿದನು. ಕೃಷ್ಣನು ಸತ್ಯಭಾಮೆಯನ್ನು ಅಂಗೀಕರಿಸಿ ಸ್ಯಮಂತಕವನ್ನು ಅವನಿಗೇ ಕೊಟ್ಟನು.

ಈ ವೇಳೆಗೆ ಕುಂತಿಯೂ ಪಾಂಡವರೂ ಅರಗಿನ ಮನೆಯಲ್ಲಿ ಬೆಂದುಹೋದರೆಂದು ವರ್ತಮಾನವು ಬಂತು. ಅದನ್ನು ವಿಚಾರಿಸಿ ಕೊಂಡು ಬರಲು ಶ್ರೀಕೃಷ್ಣನು ಹಸ್ತಿನಾವತಿಗೆ ಹೋದನು. ಆ ಸಮಯ ವನ್ನು ಸಾಧಿಸಿ ಶತಧನ್ವ ಎಂಬುವನನ್ನು ಸತ್ರಾಜಿತನನ್ನು ಘಾತಿಸಿ ಆ ಮಣಿಯನ್ನು ಹೊತ್ತುಕೊಂಡು ಹೋದನು. ಸತ್ಯಭಾಮೆಯು ತಂದೆಯ ದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ, ಹಸ್ತಿನಾವತಿಗೆ ಹೋಗಿ ನಡೆದುದೆಲ್ಲವನ್ನೂ ಶ್ರೀಕೃಷ್ಣನಿಗೆ ತಿಳುಹಿಸಿದಳು. ಆತನು ಅಲ್ಲಿಂದ ಬಂದು ಶತಧನ್ವನನ್ನು ಹುಡುಕಿಕೊಂಡು ಹೋಗಿ ಕೊಂದು ಸತ್ರಾಜಿತ ನಿಗೆ ತಿಥಿಗಳನ್ನು ಮಾಡಿದನು. ಶತಧನ್ವನನ್ನು ಕೊಂದರೂ ಮಣಿಯು ಅವನಲ್ಲಿ ಇರಲಿಲ್ಲ.

ಮಣಿಯನ್ನು ಶತಧನ್ವನು ಅಕ್ರೂರನ ಬಳಿ ಇಟ್ಟಿದ್ದನು. ಅಕ್ರೂ

ರನು "ಶತಧನ್ವನ ಗತಿಯೇ ನನಗೂ ಆದೀತು" ಎಂದು ದ್ವಾರಕೆಯನ್ನು ಬಿಟ್ಟು ಓಡಿಹೋದನು. ದ್ವಾರಕೆಯಲ್ಲಿ ಮಳೆಗಳು ಕ್ರಮವಾಗಿ ಆಗುವುದು ತಪ್ಪಿತು. ಅಕ್ರೂರನು ಇರುವ ಕಡೆ ಮಳೆಗಳು ಸರಿಯಾಗಿ ಆಗುವುದನ್ನು ತಿಳಿದಿದ್ದ ಕೃಷ್ಣನು ಅವನನ್ನು ಒಳ್ಳೆಯ ಮಾತುಗಳಿಂದ ಆದರಿಸಿ ಕರೆಯಿಸಿಕೊಂಡು, ಮಣಿಯು ಅವನ ಬಳಿಯಲ್ಲೇ ಇರಲಿ ಎಂದು ಹೇಳಿ, ಎಲ್ಲರನ್ನೂ ಸಂತೋಷಗೊಳಿಸಿದನು.

ದ್ರೌಪದಿಯ ಸ್ವಯಂವರವನ್ನು ಮಾಡಿಕೊಂಡು ಬಂದ ಪಾಂಡವರು ಇಂದ್ರಪ್ರಸ್ಥದಲ್ಲಿ ನೆಲಸಿದರು. ಅವರನ್ನು ನೋಡುವುದಕ್ಕೆಂದು ಅಲ್ಲಿಗೆ ಹೋದ ಶ್ರೀಕೃಷ್ಣನು ಧರ್ಮರಾಯನ ಬಲವಂತದಿಂದ ಅಲ್ಲಿ ನಾಲ್ಕು ತಿಂಗಳು ಇದ್ದನು. ಆಗ ಯಮುನಾನದಿಯ ತೀರದಲ್ಲಿ ಸೂರ್ಯನ ಮಗಳಾದ ಕಾಳಿಂದಿಯು ಆತನನ್ನು ವರಿಸಿದಳು.

ಆತನು ಅಲ್ಲಿದ್ದಾಗಲೇ ಖಾಂಡವವನದ ದಹನವು ನಡೆಯಿತು. ಅಲ್ಲಿ ಕೃಷ್ಣಾರ್ಜುನರ ಮರೆಹೊಕ್ಕು ಬದುಕಿದ ದಾನವ ಶಿಲ್ಪಿಯಾದ ಮಯಾಸುರನು ಧರ್ಮರಾಜನಿಗೆ ವಿಚಿತ್ರವೂ ಅದ್ಭುತವೂ ಆದ ರಾಜಸಭೆಯನ್ನು ಮಾಡಿಕೊಟ್ಟನು. ಅಲ್ಲಿ ಕೃಷ್ಣನು ಆ ಕಾಳಿಂದಿಯನ್ನು ಮದುವೆ ಮಾಡಿಕೊಂಡನು.

ಆ ಕಾಲದಲ್ಲಿ ಅವಂತಿ ದೇಶವನ್ನು ವಿಂದ ಅನುವಿಂದರು ಪಾಲಿಸುತ್ತಿದ್ದರು. ಅವರಿಗೆ ಮಿತ್ರವಿಂದೆಯೆಂಬ ತಂಗಿಯಿದ್ದಳು. ಅವಳಿಗೆ ಶ್ರೀಕೃಷ್ಣನನ್ನು ಮದುವೆಯಾಗಬೇಕೆಂಬ ಆಸೆಯಿತ್ತು. ಆದರೆ ಅವಳ ಅಣ್ಣಂದಿರು ದುರ್ಯೋಧನನ ಮಿತ್ರರು. ಆದರಿಂದ ಅವಳು ಶ್ರೀಕೃಷ್ಣನನ್ನು ಮದುವೆಯಾಗಕೂಡದು ಎಂದು ತಡೆದರು. ಕೃಷ್ಣನು ಅವಳನ್ನು ಸ್ವಯಂವರಮಂಟಪದಿಂದ ಎತ್ತಿಕೊಂಡು ಬಂದು ಮದುವೆಯಾದನು. ಹಾಗೆಯೇ ಕೋಸಲಾಧಿಪತಿಯಾದ ನಗ್ನಜಿತ್ತಿನ ಮಗಳಾದ ಸತ್ಯೆಯನ್ನೂ ಮದುವೆಯಾದನು.

ಆ ಕಥೆಯು ವಿಚಿತ್ರವಾದುದು. ಅದನ್ನು ಕೇಳು. ಆ ನಗ್ನ ಜಿತ್ತಿನ ಬಳಿ ಏಳು ಗೂಳಿಗಳಿದ್ದುವು. ಅವು ಮನುಷ್ಯರ ವಾಸನೆಯನ್ನೂ ಸಹಿಸದಂತಹ ರಾಕ್ಷಸ ಗೂಳಿಗಳು. ಅವನ್ನು ಯಾರು ಗೆದ್ದು ಅವಕ್ಕೆ ಮೂಗುದಾರ ಹಾಕುವರೋ ಅವರಿಗೆ ತನ್ನ ಮಗಳಾದ ಸತ್ಯೆಯನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದ್ದನು. ಕೃಷ್ಣನು ಹೋಗಿ ಅನೇಕರನ್ನು ಗೋಳಾಡಿಸಿದ್ದ ಅವುಗಳನ್ನು ಗೆದ್ದು ಸತ್ಯೆಯನ್ನು ಮದುವೆಯಾದನು. ಆತನು ಅವಳನ್ನು ಕರೆದುಕೊಂಡು ದ್ವಾರಕೆಗೆ ಹೋಗುತ್ತಿರುವಾಗ ಅವಳನ್ನು ಮದುವೆಯಾಗಲು ಪ್ರಯತ್ನಪಟ್ಟು ಹತಾಶರಾಗಿದ್ದ ರಾಜಪುತ್ರರೆಲ್ಲರೂ ಸೇರಿ ಆತನ ಮೇಲೆ ಬಿದ್ದರು. ಜೊತೆಯಲ್ಲಿದ್ದ ಅರ್ಜುನನು ಅವರನ್ನೆಲ್ಲಾ ಸೋಲಿಸಿದನು. ಹೀಗೆಯೇ ತನ್ನ ಇನ್ನೊಬ್ಬ ಸೋದರತ್ತೆಯ ಮಗಳು ಭದ್ರೆಯನ್ನೂ ಮದ್ರ ರಾಜನ ಮಗಳಾದ ಲಕ್ಷಣೆಯನ್ನೂ ಮದುವೆಯಾದನು.*

ರಾಜನೆ, ಇನ್ನೂ ಕೇಳು. ಭೂಮಿಯಲ್ಲಿ ವರಾಹನಿಂದ ಹುಟ್ಟಿದ ನರಕನೆಂಬ ಅಸುರರಾಜನು ಪ್ರಾಗ್ಜ್ಯೋತಿಷ ಪುರವನ್ನು ರಾಜಧಾನಿಯನ್ನು ಮಾಡಿಕೊಂಡಿದ್ದನು. ಆತನ ಕೋಟೆಯನ್ನು ಮುರನೆಂಬ ಇನ್ನೊಬ್ಬ ಅಸುರನು ಕಾವಲು ಕಾಯುತ್ತಿದ್ದನು. ಆ ಪುರದ ಸುತ್ತಲೂ ಪರ್ವತಗಳು, ಶಸ್ತ್ರಗಳು, ಸರಸಳಿಗಳು, ನೀರಿನ ಕಂದಕ, ಇವೆಲ್ಲವೂ ಪ್ರಾಕಾರಗಳಾಗಿದ್ದುವು. ಅವನಿಗೆ ಸಮುದ್ರದಲ್ಲಿ ಹುಟ್ಟಿದ ಆನೆಗಳ ಸೇನೆಯಿತ್ತು. ಇಂತಹ ಪ್ರಬಲ ದುರ್ಗವನ್ನೂ, ಸೇನೆಯನ್ನೂ ಪಡೆದು ಅವನು ಸೊಕ್ಕಿ ರಾಜರಾಜರ ಮೇಲೆ ಬಿದ್ದು ಯುದ್ಧಮಾಡಿ ಅವರ ಪುತ್ರಿಯರನ್ನೆಲ್ಲಾ ಹೊತ್ತುಕೊಂಡು ಹೋಗಿ ಸೆರೆಯನ್ನು ಹಾಕಿಕೊಂಡಿ

* ರುಕ್ಮಿಣಿ, ಜಾಂಬುವತಿ, ಸತ್ಯಭಾಮೆ, ಸತ್ಯೆ, ಭದ್ರೆ, ಲಕ್ಷಣೆ, ಕಾಳಿಂದಿ, ಮಿತ್ರವಿಂದೆ, ಈ ಎಂಟು ಮಂದಿಯೂ ಕೃಷ್ಣನ ಅಷ್ಟಮಹಿಷಿಯರು.

ದ್ದನು. ಕೊನೆಗೊಂದು ದಿನ ಸ್ವರ್ಗಕ್ಕೆ ಹೋಗಿ ಇಂದ್ರನ ಬಿಳುಗೊಡೆಯನ್ನೂ, ಸ್ವರ್ಗಕ್ಕೆ ಅಲಂಕಾರವೆನಿಸಿಕೊಂಡಿದ್ದ ಪಚ್ಚೆಯ ಪರ್ವತವನ್ನೂ ದೇವೇಂದ್ರನ ತಾಯಿಯಾದ ಅದಿತಿ ದೇವಿಯ ಕಿವಿಯ ಓಲೆಗಳನ್ನೂ ಹೊತ್ತುಕೊಂಡು ಹೋದನು. ಇಂದ್ರನು ತಾನೇ ಬಂದು ಶ್ರೀಕೃಷ್ಣನಿಗೆ ಅದನ್ನೆಲ್ಲಾ ಹೇಳಿ "ನರಕಾಸುರನನ್ನು ಕೊಂದು ನಮ್ಮ ತಾಯಿಯ ಓಲೆಗಳನ್ನು ತಂದು ಕೊಡಬೇಕು." ಎಂದು ಪ್ರಾರ್ಥಿಸಿದನು. ಕೃಷ್ಣನು ಆಗಲೆಂದು ಸತ್ಯಭಾಮೆಯನ್ನು ಕರೆದೂಕೊಂಡು ಹೊರಟನು.

ಕೃಷ್ಣನು ಆ ನರಕನ ನಗರದ ಸುತ್ತಲೂ ಇದ್ದ ಪರ್ವತ ಪ್ರಾಕಾರಗಳನ್ನು ಗದೆಯಿಂದಲೂ, ಶಸ್ತ್ರ ಪ್ರಾಕಾರವನ್ನು ಬಾಣಗಳಿಂದಲೂ, ಸುದರ್ಶನ ಚಕ್ರದಿಂದ ಆಗ್ನಿ ವಾಯು ಜಲ ಪ್ರಾಕಾರಗಳನ್ನೂ, ಖಡ್ಗದಿಂದ ಮುರನ ಪಾಶಗಳ ಪ್ರಾಕಾರವನ್ನೂ ಭೇದಿಸಿದನು. ಶ್ರೀಕೃಷ್ಣನ ಪಾಂಚಜನ್ಯದ ಧ್ವನಿಯನ್ನು ಕೇಳಿ ಅಲ್ಲಿದ್ದವರೆಲ್ಲರೂ ಹೆದರಿದರು. ಕಾವಲಿಗಿದ್ದ ಐದು ತಲೆಗಳ ಮುರಾಸುರನು ನೀರಿನಿಂದ ಎದ್ದು ಬಂದು ಕೃಷ್ಣನನ್ನು ಎದುರಿಸಿದನು. ಅವನೂ ಅವನ ಮಕ್ಕಳು ಐವರೂ ಪೀಠನೆಂಬ ಸೇನಾಧಿಪತಿಯೂ ಕೃಷ್ಣನ ಬಾಣಗಳಿಗೆ ತುತ್ತಾದರು. ಆಗ ಭೂ ಪುತ್ರನಾದ ನರಕಾಸುರನು ತಾನೇ ಒಂದು ಘೋರವಾದ ಯುದ್ಧವನ್ನು ಮಾಡಿ ಮಡಿದನು:

ಆಗ ಅವನ ತಾಯಿಯಾದ ಭೂ ದೇವಿಯು ಅವನ ಮಗನಾದ ಭಗದತ್ತನನ್ನು ಕರೆತಂದು "ಸ್ವಾಮಿ, ಇವನನ್ನು ರಕ್ಷಿಸು" ಎಂದು ಕೇಳಿಕೊಂಡಳು. ನರಕನು ತಂದಿದ್ದ ಬಿಳುಗೊಡೆ, ಪಚ್ಚೆಯ ಪರ್ವತ, ಅದಿತಿಯ ಓಲೆಗಳನ್ನೆಲ್ಲ ಕೊಟ್ಟಳು. ಆಗ ಆಕೆಯ ಪ್ರಾರ್ಥನೆಯನ್ನು ಮನ್ನಿಸಿ ಶ್ರೀಕೃಷ್ಣನು ದುರ್ಗವನ್ನು ಪ್ರವೇಶಿಸಿದನು. ಅಲ್ಲಿ ನರಕಾಸುರನು ಹಿಡಿದು ತಂದಿದ್ದ ರಾಜಪುತ್ರಿಯರೆಲ್ಲರೂ ಕೃಷ್ಣನನ್ನು ವರಿಸಿ

ವರು. ಅವರನ್ನೂ ನರಕಾಸುರನ ಐಶ್ವರ್ಯವನ್ನೂ ದ್ವಾರಕೆಗೆ ಕಳುಹಿಸಿದನು.

ಕೃಷ್ಣನು ದೇವಮಾತೆಯಾದ ಅದಿತಿಯ ಕುಂಡಲಗಳನ್ನು ಕೊಟ್ಟು ಬರುವುದಕ್ಕಾಗಿ ಸತ್ಯಭಾಮೆಯೊಡನೆ ಗರುಡಾರೂಢನಾಗಿ ದೇವಲೋಕಕ್ಕೆ ಹೋದನು. ಅಲ್ಲಿ ವಿಹಾರಕ್ಕಾಗಿ ನಂದನಕ್ಕೆ ಹೋಗಲು ಅಲ್ಲಿ ಸತ್ಯಭಾಮೆಯು ಪಾರಿಜಾತವನ್ನು ಕಂಡು ಅದು ತನಗೆ ಬೇಕೆಂದಳು. ಅದಕ್ಕಾಗಿ ದೇವತೆಗಳೊಡನೆ ಯುದ್ಧ ಮಾಡಬೇಕಾಗಿ ಬಂತು. ಯುದ್ಧ ಮಾಡಿ ಅವರನ್ನೆಲ್ಲಾ ಸೋಲಿಸಿ ಅದನ್ನು ತೆಗೆದುಕೊಂಡು ದ್ವಾರಕೆಗೆ ಬಂದನು.

ಆಗ ನರಕಾಸುರನಲ್ಲಿದ್ದ ಹದಿನಾರು ಸಾವಿರ ಮಂದಿಯನ್ನೂ ಮದುವೆಯಾಗಿ, ತಾನೂ ಅಷ್ಟು ರೂಪದಿಂದ ಅವರೆಲ್ಲರೊಡನೆ ಸಂಸಾರ ಮಾಡಿಕೊಂಡಿದ್ದನು.

---

## ನಲವತ್ತನೆಯ ಅಧ್ಯಾಯವು

# ಅನಿರುದ್ಧ ವೃತ್ತಾಂತವು

ಶ್ರೀ ಕೃಷ್ಣನನ್ನು ಸಂತೋಷವಾಗಿ ಸೇವಿಸುತ್ತಾ ಆತನಿಗೆ ಅತಿ ಪ್ರಿಯೆಯರಾಗಿದ್ದ ಅಷ್ಟಮಹಿಷಿಯರೂ ಹತ್ತು ಹತ್ತು ಜನ ಗಂಡು ಮಕ್ಕಳನ್ನೂ ಒಬ್ಬೊಬ್ಬ ಮಗಳನ್ನೂ ಪಡೆದರು. ಹಿರಿಯ ಹೆಂಡತಿಯಾದ ರುಕ್ಮಿಣಿಯ ಹಿರಿಯ ಮಗನಾದ ಪ್ರದ್ಯುಮ್ನನು ತನ್ನ ಸೋದರ ಮಾವನಾದ ರುಕ್ಮಿಯು ತನ್ನ ಮಗಳಾದ ರುಕ್ಮವತಿಗೆ ಏರ್ಪಡಿಸಿದ್ದ ಸ್ವಯಂವರದಲ್ಲಿ ಸೇರಿದ್ದ ರಾಜರನ್ನೆಲ್ಲಾ ಗೆದ್ದು ಅವಳನ್ನು ಮದುವೆಯಾದನು. ಅವಳಲ್ಲಿ ಪ್ರದ್ಯುಮ್ನನಿಗೆ ಅನಿರುದ್ಧನೆಂಬ ಮಗನಾದನು.

ರುಕ್ಮಿಯ ತಂಗಿಯ ಮೇಲಣ ದಾಕ್ಷಿಣ್ಯಕ್ಕಾಗಿ ಅವನಿಗೆ ತನ್ನ ಮಗನ ಮಗಳಾದ ಲೋಚನಾದೇವಿಯನ್ನು ಕೊಟ್ಟು ಮದುವೆ ಮಾಡಿದನು. ಆ ಕಾಲದಲ್ಲಿ ಒಂದು ವಿಶೇಷವು ನಡೆಯಿತು.

ಆ ಮದುವೆಯಲ್ಲಿ ರಾಮಕೃಷ್ಣರನ್ನು ಕಂಡರೆ ಆಗದ ಅನೇಕ ರಾಜರು ಸೇರಿದ್ದರು. ಅವರೆಲ್ಲರೂ ಹೇಗಾದರೂ ಇವರನ್ನು ಸೋಲಿಸ ಬೇಕೆಂದು ರುಕ್ಮಿಯ ಬಳಿಗೆ ಹೋಗಿ "ಬಲರಾಮನಿಗೆ ಪಗಡೆಯೆಂದರೆ ಬಹಳ ಹುಚ್ಚು. ಅವನಿಗೆ ಆಡುವುದಕ್ಕೆ ಬರುವುದಿಲ್ಲ" ಎಂದರು. ರುಕ್ಮಿಯೂ ಅದರಂತೆಯೇ ಅವನನ್ನು ಪಗಡೆಗೆ ಕರೆದನು.

ಮೊದಮೊದಲು ಬಲರಾಮನು ಸೋತನು. ಅವನ್ನು ಕಂಡು ಕಳಿಂಗರಾಜನು ಅಪಹಾಸ್ಯ ಮಾಡಿ ನಕ್ಕನು. ಆಗ ಬಲರಾಮನಿಗೆ ಕೋಪ ಬಂತು. ಅಲ್ಲಿಂದ ಆಟ ಆಟದಲ್ಲಿಯೂ ಬಲರಾಮನು ಗೆದ್ದರೂ ರುಕ್ಮಿಯು ಗಂಡಾಗುಂಡಿ ಮಾಡಿ ಈ ಆಟದಲ್ಲಿ ನಾನು ಗೆದ್ದೆ ಎಂದು ಹೇಳುತ್ತಾ ಬಂದನು. ಕೊನೆಗೆ ಆಕಾಶವಾಣಿಯು "ಗೆದ್ದವನು ಬಲರಾಮ" ಎಂದರೂ ರುಕ್ಮಿಯು ಅದನ್ನು ಕೇಳಲಿಲ್ಲ; "ನೀವೆಲ್ಲ ಗೊಲ್ಲರು, ಭಾವಯ್ಯ! ನಿಮಗೆ ಈ ಆಟವೇನು ಗೊತ್ತು? ವನ ಕಾಯುವುದು ನಿಮಗೆ ಗೊತ್ತು!" ಎಂದು ಹಾಸ್ಯ ಮಾಡಿದನು.

ಬಲರಾಮನು ರೇಗಿ ತನ್ನ ಪರಿಘಾಯುಧವನ್ನು ತೆಗೆದುಕೊಂಡನು. ಒಂದೇ ಏಟಿಗೆ ರುಕ್ಮಿಯನ್ನು ಸಂಹರಿಸಿದನು. ತನ್ನನ್ನು ಹಲ್ಲುಕಿರಿದು ಹಾಸ್ಯ ಮಾಡಿದ್ದ ಕಳಿಂಗರಾಜನ ಹಲ್ಲು ಮುರಿದನು. ಇತರರನ್ನು ಹೊಡೆದು ಓಡಿಸಿದನು.

ಹಿಂದೆ ಸರ್ವಸ್ವವನ್ನೂ ಸ್ವಾಮಿಗೆ ಒಪ್ಪಿಸಿದ ಬಲೀಂದ್ರನ ಕಥೆಯನ್ನು ಕೇಳಿದೆಯಲ್ಲವೆ? ಆತನಿಗೆ ನೂರು ಜನ ಪುತ್ರರು. ಹಿರಿಯನಾದ ಬಾಣನಿಗೆ ಸಾವಿರ ತೋಳು. ಆತನು ಪರಮ ಶಿವಭಕ್ತನು. ಆತನ ಪೂಜೆಯಿಂದ ಸಂತೋಷಗೊಂಡ ಪರಶಿವನು ತಾನು ಬಾಣನ

ಪುರವನ್ನು ಪಾಲಿಸುವೆನೆಂದು ವರವನ್ನು ಕೊಟ್ಟನು. ಬಾಣನು ಬಹು ಪರಾಕ್ರಮಿಯು. ಅವನಿಗೆ ಬರುಬರುತ್ತಾ ತೋಳತೀಟೆಯು ಹೆಚ್ಚಾಯಿತು. ಒಂದು ದಿನ ಶಿವನನ್ನು ಚೆನ್ನಾಗಿ ಪೂಜೆ ಮಾಡಿ "ದೇವಾ, ನನ್ನೊಡನೆ ಕಾಳಗಮಾಡುವ ಸಮರ್ಥನೇ ಇಲ್ಲ!" ಎಂದು ಹೇಳಿಕೊಂಡನು. ಪರಶಿವನು "ಚಿಂತಿಸಬೇಡ, ನಿನ್ನ ರಥದ ಧ್ವಜವು ತಾನಾಗಿ ಮುರಿದು ಬಿದ್ದಾಗ ನಿನಗೆ ಸಮನಾದ ಪುರುಷನು ಬಂದು ನಿನ್ನ ಕೊಬ್ಬನ್ನು ಇಳಿಸುವನು" ಎಂದನು. ಅದನ್ನು ಕೇಳಿ ಬಾಣನಿಗೆ ಸಂತೋಷವಾಯಿತು. ದಿನವೂ ಎದ್ದು ಬಂದು ಧ್ವಜವು ಮುರಿದು ಬಿತ್ತೇ? ಎಂದು ನೋಡುತ್ತಿದ್ದನು.

ಆ ಬಾಣಾಸುರನಿಗೆ ಉಷೆ ಎಂಬ ಮಗಳಿದ್ದಳು. ಅವಳು ಚೆಲುವೆಯೆಂದರೆ ಚೆಲುವೆ. ಅವಳಿಗೆ ಒಂದು ದಿನ ಪ್ರದ್ಯುಮ್ನನ ಪುತ್ರನಾದ ಅನಿರುದ್ಧನೊಡನೆ ಸುಖಿಸಿದಂತೆ ಕನಸಾಯಿತು. ಅದನ್ನು ಮಂತ್ರಿಪುತ್ರಿಯಾದ ಚಿತ್ರಲೇಖೆಗೆ ಹೇಳಿದಳು. ಅವಳು ಲೋಕ ಲೋಕದಲ್ಲಿರುವ ವೀರಪುರುಷರನ್ನೂ ಸುಂದರ ಪುರುಷರನ್ನೂ ಚಿತ್ರದಲ್ಲಿ ಬರೆದು ತೋರಿಸಿದಳು. ಪ್ರದ್ಯುಮ್ನ ಪುತ್ರನಾದ ಅನಿರುದ್ಧನನ್ನು ಉಷೆಯು "ಇವನೇ ನನ್ನ ಕಾಂತ" ಎಂದು ಗುರುತಿಸಿದಳು. ಯೋಗಬಲವುಳ್ಳ ಚಿತ್ರಲೇಖೆಯು ಆಕಾಶ ಮಾರ್ಗದಿಂದ ಬಂದು ದ್ವಾರಕೆಯ ಅರಮನೆಯಲ್ಲಿ ಮಲಗಿದ್ದ ಅನಿರುದ್ಧನನ್ನು ಮಂಚದೊಡನೆ ತೆಗೆದುಕೊಂಡು ಹೋಗಿ ಶೋಣಿತ ಪುರದಲ್ಲಿದ್ದ ಉಷೆಗೆ ತೋರಿಸಿದಳು. ಅವಳು ಅವನನ್ನು ತನ್ನ ಅಂತಃಪುರದಲ್ಲಿಯೇ ಇಟ್ಟುಕೊಂಡು ಸುಖವಾಗಿದ್ದಳು.

ಕೊನೆಗೆ ಗುಟ್ಟು ರಟ್ಟಾಯಿತು. ಬಾಣಾಸುರನು ತಾನೇ ಕನ್ಯಾಂತಃಪುರಕ್ಕೆ ಹೋಗಿ ಅಲ್ಲಿದ್ದ ಅನಿರುದ್ಧನನ್ನು ಕಂಡನು. ಕೋಪಗೊಂಡು ಅವನನ್ನು ನಾಗಪಾಶಗಳಿಂದ ಕಟ್ಟಿ ಸೆರೆಯಲ್ಲಿಟ್ಟನು.

ಈ ಸುದ್ದಿಯು ನಾರದರಿಂದ ಶ್ರೀಕೃಷ್ಣನಿಗೆ ತಿಳಿಯಿತು.



ಯಾದವರೆಲ್ಲರನ್ನೂ ಕರೆದುಕೊಂಡು ಶ್ರೀ ಕೃಷ್ಣನು ಶೋಣಿತ ಪುರದ ಮೇಲೆ ದಂಡಯಾತ್ರೆ ಮಾಡಿದನು. ಬಾಣನು ಸಸೈನ್ಯನಾಗಿ ಯುದ್ಧಕ್ಕೆ ಬಂದನು. ದಾನವ ಯಾದವ ಯುದ್ಧವು ಭಯಂಕರವಾಗಿ, ದೇವತೆಗಳೂ ಕೂಡ ಅದನ್ನು ನೋಡುವುದಕ್ಕೆ ಬರುವಷ್ಟು ಆಯಿತು. ಬಾಣನ ಪುರಪಾಲಕನಾದ ಪರಶಿವನು ಶ್ರೀ ಕೃಷ್ಣನ ಮೇಲೆ ಯುದ್ಧಕ್ಕೆ ಬಂದನು. ನೋಡು ನೋಡುತ್ತಿದ್ದ ಹಾಗೆಯೇ ಯಾದವರಿಗೆ ಜಯ ವಾಯಿತು. ಶ್ರೀ ಕೃಷ್ಣನು ರುದ್ರನನ್ನು ಕಟ್ಟಿಹಾಕಿದನು. ಪ್ರದ್ಯುಮ್ನನು ಕುಮಾರನನ್ನು ಓಡಿಸಿದನು. ಬಾಣಾಸುರನ ಮಂತ್ರಿಗಳು ಸಾತ್ಯಕಿಯಿಂದ ಮಡಿದರು. ಬಾಣನ ಸೈನ್ಯವು ಹೆದರಿ ಓಡಿಹೋಯಿತು. ಆಗ ಬಾಣಾಸುರನು ತಾನೇ ಬಂದು ಯುದ್ಧಕ್ಕೆ ನಿಂತು ಶ್ರೀಕೃಷ್ಣನ ಏಟು ತಡೆಯಲಾರದೆ ಓಡಿಹೋದನು.

ಆಗ ಮಹೇಶ್ವರನು ಮೂರು ಕಾಲು ಮೂರು ತಲೆಗಳಿಂದ ಕೂಡಿ ಕ್ರೂರವಾಗಿರುವ ಮಾಹೇಶ್ವರ ಜ್ವರವನ್ನು ನಿರ್ಮಾಣ ಮಾಡಿ ಸೈನ್ಯದ ಮೇಲೆ ಬಿಟ್ಟನು. ಅದನ್ನು ಕಂಡು ಕೃಷ್ಣನು ವೈಷ್ಣವ ಜ್ವರವನ್ನು ನಿರ್ಮಿಸಿದನು. ಅದಕ್ಕೆ ಮಾಹೇಶ್ವರ ಜ್ವರವು ಸೋತು, ಶ್ರೀ ಕೃಷ್ಣನನ್ನು ಶರಣು ಹೊಕ್ಕು ಉಳಿದು ಕೊಂಡಿತು.

ಆಮೇಲೆ ಮತ್ತೆ ಬಾಣಾಸುರನು ಯುದ್ಧಕ್ಕೆ ಸಿದ್ಧನಾಗಿ ಬಂದನು. ಶ್ರೀಕೃಷ್ಣನು ಚಕ್ರವನ್ನು ಪ್ರಯೋಗಿಸಿ ಅವನ ಬಾಹುಗಳನ್ನು ಕಡಿಯುತ್ತ ಬಂದನು: ಆಗ ರುದ್ರನು ತನ್ನ ಭಕ್ತನು ಕೆಟ್ಟು ಹೋಗುವನೆಂದು ಅಡ್ಡ ಬಂದನು. "ಎಲೈ ಪರಮಾತ್ಮನೆ, ಈ ಬಾಣನು ಬಹುಕಾಲದಿಂದ ನನ್ನನ್ನು ಆಶ್ರಯಿಸಿರುವನು. ನನಗೆ ಪರಮ ಪ್ರಿಯನಾದ ಭಕ್ತನು. ಹಿಂದೆ ಇವನ ತಂದೆಯಾದ ಬಲಿಯನ್ನೂ ಇವನ ತಾತನಾದ ಪ್ರಹ್ಲಾದನನ್ನೂ ಕಾಪಾಡಿದಂತೆ ಇವನನ್ನೂ ಕಾಪಾಡಬೇಕು." ಎಂದು ಹೇಳಿಕೊಂಡನು. ಶ್ರೀ ಕೃಷ್ಣನು ಹಿಂದೆ ಪ್ರಹ್ಲಾದ

ನಿಗೆ ನಿನ್ನ ವಂಶದವರನ್ನು ಕೊಲ್ಲುವುದಿಲ್ಲವೆಂದು ಕೊಟ್ಟಿದ್ದ ವರವನ್ನು ನೆನೆದು, ಅವನ ಅಹಂಕಾರವನ್ನು ಮುರಿಯಲು ಅವನ ತೋಳುಗಳನ್ನೆಲ್ಲಾ ಕತ್ತರಿಸಿ, ನಾಲ್ಕನ್ನು ಮಾತ್ರ ಬಿಟ್ಟನು.

ಬಾಣಾಸುರನು ಸೋತು ಅನಿರುದ್ಧನನ್ನು ಸೆರೆಯಿಂದ ಬಿಟ್ಟು ಉಷಾದೇವಿಯೊಡನೆ ಕರೆತಂದು ಶ್ರೀಕೃಷ್ಣನಿಗೆ ಒಪ್ಪಿಸಿದನು. ಕೃಷ್ಣನು ಪರಶಿವನನ್ನು ಬೀಳ್ಕೊಂಡು ಮೊಮ್ಮಗನನ್ನೂ ಮೊಮ್ಮಗಳನ್ನೂ ಕರೆದುಕೊಂಡು ದ್ವಾರಕೆಗೆ ಬಂದನು.

---

## ನಲವತ್ತೊಂದನೆಯ ಅಧ್ಯಾಯವು

## ಇತರ ಲೀಲೆಗಳು

ಒಂದು ದಿನ ಯಾದವ ಬಾಲಕರು ಉದ್ಯಾನವಲ್ಲಿ ಆಟವಾಡುವಾಗ ಒಂದು ಹಾಳು ಬಾವಿಯಲ್ಲಿ ಒಂದು ಭಾರಿಯ ಹೆಂಟೆಗೊದ್ದವನ್ನು ಕಂಡರು. ಅವರು ಬಹಳ ಪ್ರಯತ್ನ ಪಟ್ಟರೂ ಅದನ್ನು ಮೇಲಕ್ಕೆತ್ತಲು ಆಗಲಿಲ್ಲ. ಆಗ ಅವರು ಹೋಗಿ ಶ್ರೀ ಕೃಷ್ಣನನ್ನು ಕರೆದು ತಂದರು. ಆತನು ಅದನ್ನು ಎಡಗೈಯಿಂದ ಮೇಲಕ್ಕೆ ಎತ್ತಿದನು. ಕೈ ಸೋಕುತ್ತಲೇ ಅದು ವಸ್ತ್ರ ಭೂಷಣ ಪುಷ್ಪಮಾಲೆಗಳನ್ನು ಧರಿಸಿದ ದೇವತೆಯಾಯಿತು. ಶ್ರೀ ಕೃಷ್ಣನು ಏನೂ ಅರಿಯದವನಂತೆ “ಮಹಾಪುರುಷ, ನೀನು ಯಾರು?” ಎಂದು ಕೇಳಿದನು.

ಅದಕ್ಕೆ ಆ ದೇವಪುರುಷನು ಹೀಗೆ ಹೇಳಿದನು: “ಎಲೈ ಪ್ರಭುವೆ ನಾನು ಇಕ್ಷ್ವಾಕುವಿನ ಮಗನಾದ ನೃಗನು. ನಾನು ಅನಂತವಾಗಿ ಗೋದಾನಗಳನ್ನು ಮಾಡಿದೆನು. ಉತ್ತಮವಾದ ಗೋವುಗಳನ್ನು ಉತ್ತಮರನ್ನು ಹುಡುಕಿ ದಾನ ಮಾಡಿದರೂ ಒಂದು ದಿನ ಅಚಾತುರ್ಯದಿಂದ

ಒಬ್ಬ ಬ್ರಾಹ್ಮಣನ ಹಸುವು ನನ್ನ ದಾನದ ಆಕಳ ಹಿಂಡಿನಲ್ಲಿ ಸೇರಿ ಹೋಯಿತು. ಅದನ್ನು ನಾನೂ ಅರಿಯದೆ ದಾನ ಮಾಡಿದೆನು. ದಾನ ತೆಗೆದುಕೊಂಡವನು ಅದನ್ನು ಅಟ್ಟಿಕೊಂಡು ಹೋಗುತ್ತಿರುವ ಆ ಆಕಳಿನ ಯಜಮಾನನು ಬಂದು ನನ್ನದು ಎಂದನು. ಇಬ್ಬರೂ ಕಾದಾಡುತ್ತ ನನ್ನ ಬಳಿಗೆ ಬಂದರು. ನಾನು ''ಅಜ್ಞಾನದಿಂದ ಆದ ಅಪರಾಧವನ್ನು ಮನ್ನಿಸಿ.'' ಎಂದು ಎಷ್ಟು ಕೇಳಿಕೊಂಡರೂ ಇಬ್ಬರೂ ಅದೇ ಹಸುವು ಬೇಕು ಎಂದರು. ಆ ಮಾತು ಮುಗಿಯುವುದರೊಳಗೆ ನನಗೆ ಮರಣ ವಾಯಿತು. ಯಮನು ''ನಿನಗೆ ಅಪಾರವಾದ ಪುಣ್ಯವಿದೆ. ಅಲ್ಪವಾದ ಪಾಪವಿದೆ. ಯಾವುದನ್ನು ಮೊದಲು ಅನುಭವಿಸುವೆ?'' ಎಂದು ಕೇಳಿದನು ನಾನು ಪಾಪದ ಅನುಭವವೇ ಮೊದಲು ಆಗಿ ಹೋಗಲಿ ಎಂದೆನು. ಅರಿಯದೆ ಇನ್ನೊಬ್ಬನ ಆಕಳನ್ನು ದಾನ ಮಾಡಿದೆನೆಂದು ನನಗೆ ಪಾಪ ಬಂತು. ಪಾಪದ ಫಲವಾಗಿ ಈ ಹೆಂಟೆಗೊದ್ದನಾಗಿ ದ್ದೆನು. ಈಗ ನಿನ್ನ ದಯೆಯಿಂದ ಇದು ತೀರಿತು. ಇನ್ನು ಪುಣ್ಯಲೋಕ ಗಳನ್ನು ಅನುಭವಿಸಲು ಹೋಗುವೆನು. ಅಪ್ಪಣೆಯನ್ನು ಕೊಡು.'' ಎಂದು ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿದನು. ಆ ವೇಳೆಗೆ ವಿಮಾನವು ಬಂತು. ಅದನ್ನು ಹತ್ತಿ ಸ್ವರ್ಗಕ್ಕೆ ಹೋದನು.

* * * *

ಬಲರಾಮನು ಒಮ್ಮೆ ನೆಂಟರಿಷ್ಟರನ್ನು ನೋಡಬೇಕೆಂದು ನಂದಗೋಕುಲಕ್ಕೆ ಹೋದನು. ಅಲ್ಲಿ ಯಶೋದೆಯನ್ನೂ ನಂದನನ್ನೂ ನೋಡಿ ಅವರಿಗೆ ನಮಸ್ಕಾರ ಮಾಡಿದನು. ಇತರರಾದ ತನ್ನ ನೆಂಟ ರನ್ನೂ ಗೆಳೆಯರನ್ನೂ ನೋಡಿ ಅವರವರಿಗೆ ತಕ್ಕಂತೆ ಉಪಚಾರಮಾಡಿ, ಅವರ ಉಪಚಾರವನ್ನೂ ಆದರದಿಂದ ಕೈಗೊಂಡನು.

ಆತನು ಅಲ್ಲಿರುವಾಗ ವಸಂತಋತುವು ಬಂತು. ಆ ರಾತ್ರಿಗಳಲ್ಲಿ ತನ್ನ ಬಂಧುಗಳೂ ಮಿತ್ರರೂ ಆದ ಗೋಪಗೋಪಿಯರೊಡನೆ

ಯಮುನಾ ನದಿಯ ತೀರದಲ್ಲಿ ವಿಹರಿಸುತ್ತಿದ್ದನು. ಆಗ ವರುಣನು ವಾರುಣಿಯನ್ನು ಕರೆದು ''ನಮ್ಮ ಬಲರಾಮನಿಗೆ ಸಂತೋಷವಾಗುವ ಹಾಗೆ ಮಾಡು'' ಎಂದನು. ಆಕೆಯು ಅದರಂತೆ ಮರಮರವೂ ಸುಗಂಧ ಮದ್ಯವನ್ನು ಕರೆಯುವಂತೆ ಮಾಡಿದಳು. ಬಲರಾಮನೂ ಆತನ ಪರಿವಾರವೂ ಆ ಮದ್ಯವನ್ನು ಕುಡಿದು ಬೇಕಾದ ಹಾಗೆ ವಿಹರಿಸಿದರು. ಆಗ ಆತನಿಗೆ ಜಲಕ್ರೀಡೆಯಾಡಬೇಕು ಎನ್ನಿಸಿತು. ನದಿಯನ್ನು ಹತ್ತಿರಕ್ಕೆ ಬಾ ಎಂದು ಕರೆದನು. ನದಿಯು ಬರಲಿಲ್ಲ. ಆತನಿಗೆ ಕೋಪ ಬಂತು. ತನ್ನ ನೇಗಿಲನ್ನು ಎತ್ತಿ ಆ ನದಿಗೆ ಹಾಕಿ ಎಳೆದನು. ಕೂಡಲೇ ಯಮುನೆಯು ಬಂದು "ತಪ್ಪಾಯಿತು, ಮನ್ನಿಸು'' ಎಂದು ಕೇಳಿಕೊಂಡಳು. ಆಕೆಯನ್ನು ಕ್ಷಮಿಸಿ ಆ ಜಲದಲ್ಲಿ ನೀರಾಟವಾಡಿದನು. ಆತನು ಅಲ್ಲಿಂದ ಏಳುವ ವೇಳೆಗೆ ವರುಣನು ಎರಡು ನೀಲಿಯ ವಸ್ತ್ರಗಳನ್ನೂ, ಬೆಲೆಯಾದ ಒಡವೆಗಳನ್ನೂ, ಗಮಗಮಿಸುವ ಹೂಮಾಲೆಗಳನ್ನೂ ಕಳುಹಿಸಿದನು. ಈಗಲೂ ಬಲರಾಮನು ಸೆಳೆದಾಗ ಆದ ಕೊಂಕು ನದಿಯಲ್ಲಿ ಕಾಣುವುದು.

* * * *

ರಾಮಕೃಷ್ಣರು ಸುಖವಾಗಿರುವಾಗ ಪೌಂಡ್ರಕನು "ವಾಸುದೇವನು ನಾನು ಮಹಾ ವಿಷ್ಣುವಿನ ಅಂಶದಿಂದ ಹುಟ್ಟಿದವನು ನಾನು, ನೀನಲ್ಲ" ಎಂದು ಶ್ರೀಕೃಷ್ಣನ ಮೇಲೆ ದಂಡೆತ್ತಿ ಬಂದನು. ಅವನೂ ಶಂಖ, ಚಕ್ರ, ಗದಾ, ಶಾರ್ಙಗಳನ್ನು ಧರಿಸಿದ್ದನು. ಶ್ರೀವತ್ಸವೆಂಬ ಗುರುತನ್ನು ತಳೆದಿದ್ದನು. ಶ್ರೀಕೃಷ್ಣನಿಗೂ ಪೌಂಡ್ರಕನಿಗೂ ಯುದ್ಧವಾಯಿತು. ಯುದ್ಧದಲ್ಲಿ ಪೌಂಡ್ರಕನೂ ಅವನ ಸಹಾಯವಾಗಿ ಬಂದಿದ್ದ ಕಾಶೀರಾಯನೂ ಮಡಿದರು.

ಕಾಶೀರಾಯನ ಮಗನಾದ ಸುದಕ್ಷಿಣನು ತನ್ನ ತಂದೆಯನ್ನು ಕೊಂದನೆಂದು ಕೃಷ್ಣನನನ್ನು ಕೊಲ್ಲಬೇಕೆಂದು ಮಾಟವನ್ನು ಮಾಡಿ

ವನು. ಆ ಮಾಟದ ಭೂತವು ಪಿಶಾಚಿಗಳ ಗುಂಪನ್ನು ಕಟ್ಟಿಕೊಂಡು ದಾರಿಯುದ್ದಕ್ಕೂ ಸಿಕ್ಕಿದುದನ್ನೆಲ್ಲ ಸುಟ್ಟುಕೊಂಡು ದ್ವಾರಕೆಯ ಬಳಿಗೆ ಬಂತು. ಶ್ರೀಕೃಷ್ಣನು ಅದನ್ನು ತಿಳಿದು ಅದರ ಮೇಲೆ ತನ್ನ ಚಕ್ರವನ್ನು ಬಿಟ್ಟನು. ಅದು ಆ ಭೂತವನ್ನೂ ಅದರಿಂದ ಆಗಿದ್ದ ಬೆಂಕಿಯನ್ನೂ ಕೊಂದು ಸುದಕ್ಷಿಣನನ್ನೂ ಅವನ ರಾಜಧಾನಿಯನ್ನೂ ಸುಟ್ಟು ಹಿಂತಿರುಗಿ ಬಂತು.

*　　*　　*　　*

ಶ್ರೀಕೃಷ್ಣನು ನರಕಾಸುರನನ್ನು ಗೆದ್ದು ಕೊಂದನೆಂಬ ಸುದ್ದಿಯು ಅವನ ಮಿತ್ರನಾದ ದ್ವಿವಿದನೆಂಬ ವಾನರ ವೀರನಿಗೆ ತಿಳಿಯಿತು. ಅವನು ರಾಮಾಯಣದ ಕಾಲದವನು. ಆ ಕಾಲದಲ್ಲಿ ಶ್ರೀರಾಮನಿಗೆ ಪರಮ ಮಿತ್ರನಾದ ಸುಗ್ರೀವನಿಗೆ ಮಂತ್ರಿಯಾಗಿದ್ದವನು. ಅವನು ತನ್ನ ಮಿತ್ರನನ್ನು ನೆನೆದು ರಾಮಕೃಷ್ಣರ ಮೇಲೆ ಯುದ್ಧಕ್ಕೆ ಬಂದನು. ಅವನು ದೇಶದ ತುಂಬಾ ಹಾವಳಿಯನ್ನು ಮಾಡಿ ಬಲರಾಮನು ವಿಹಾರ ಮಾಡುತ್ತಿದ್ದ ರೈವತಕ ಗಿರಿಗೆ ಹೋದನು. ಅಲ್ಲಿ ಬಲರಾಮನನ್ನು ಲಕ್ಷಿಸದೆ ಅವಮಾನಮಾಡಿ ಆತನಿಂದ ಮರಣವನ್ನು ಹೊಂದಿದನು.

*　　*　　*　　*

ಕೌರವರ ದುರ್ಯೋಧನನ ಮಗಳು ಲಕ್ಷಣೆಗೆ ಸ್ವಯಂವರವಾಯಿತು. ಜಾಂಬುವತಿಯ ಪುತ್ರನಾದ ಸಾಂಬನು ಸ್ವಯಂವರಕ್ಕೆ ಹೋಗಿ ಅವಳನ್ನು ಎತ್ತಿಕೊಂಡು ಹೋದನು. ದುರ್ಯೋಧನಾದಿಗಳು ಕೋಪಗೊಂಡು ಹಿಂದಟ್ಟಿ ಬಂದು ಅವನನ್ನು ಹಿಡಿದರು. ಮಹಾಪರಾಕ್ರಮಿಯಾದ ಅವನನ್ನು ಕೌರವ ವೀರರೆಲ್ಲರೂ ಸೇರಿ ಹಿಡಿದು ಕಟ್ಟಿದರು. "ಈ ಯಾದವರು ನಾವು ಅನುಗ್ರಹಮಾಡಿ ಕೊಟ್ಟ ರಾಜ್ಯ

ವನ್ನು ಆಳುತ್ತಿರುವವರು: ಇವರಿಗೆ ಇಷ್ಟು ಸೊಕ್ಕೇ ?" ಎಂದು ಹಾರಾಡಿದರು. ಇದನ್ನು ಕೇಳಿ ಯಾದವರು ಕೌರವರ ಮೇಲೆ ಯುದ್ಧಕ್ಕೆ ಹೊರಟರು.

"ಬಂಧುಗಳಿಗೆ ಯುದ್ಧವು ಸರಿಯಲ್ಲ" ಎಂದು ಸಮಾಧಾನ ಮಾಡಲು ಬಲರಾಮನು ತಾನೇ ಹಸ್ತಿನಾಪುರಕ್ಕೆ ಬಂದನು. ಕೌರವರು ಹೋಗಿ ಆತನನ್ನು ಎದುರುಗೊಂಡು ಬೇಕಾದ ಮರ್ಯಾದೆಗಳನ್ನೆಲ್ಲಾ ಮಾಡಿ ಕರೆದುಕೊಂಡು ಬಂದರು. ಸಾಂಬನ ಸುದ್ದಿಯು ಬಂದಾಗ ಮಾತ್ರ ಕೌರವರು ರೇಗಿ "ಕಾಲಿನದು ತಲೆಯ ಮೇಲೆ ಬಂದಂತಾಯಿತು. ನಾವು ಈ ಯಾದವರನ್ನು ಮುಂದಕ್ಕೆ ತಂದವರು. ಇವರು ಈಗ ನಮ್ಮ ಸಮಾನರಾದರು.'' ಎಂದು ಬಾಯಿ ಹಿಡಿಸಲಾರದ ಮಾತುಗಳನ್ನು ಆಡಿದರು.

ಅದನ್ನು ಕೇಳಿ ಬಲರಾಮನು ರೇಗಿದನು. ''ಅಬ್ಬಾ! ನಮ್ಮನ್ನು ಈ ಮಾತು ಆಡುವಂತಾದಿರಾ!" ಎಂದು ಕೋಪದಿಂದ ನೇಗಿಲನ್ನೆತ್ತಿದನು: "ಹಸ್ತಿನಾವತಿಯನ್ನು ಮೀಟಿ ಗಂಗೆಯಲ್ಲಿ ಮುಳುಗಿಸುವೆನು" ಎಂದು ನೇಗಿಲನ್ನು ಪ್ರಯೋಗಿಸಿದನು. ನಗರವೆಲ್ಲಾ ಸಮುದ್ರದ ಮೇಲೆ ತೇಲುವ ಹಡಗಿನಂತೆ ಅಲ್ಲಾಡಿ ಹೋಯಿತು. ಆಗ ಕೌರವಾದಿಗಳು ಹೆದರಿ ಲಕ್ಷಣಾ ದೇವಿಯನ್ನು ಸಾಂಬನಿಗೆ ಕೊಟ್ಟು ಮದುವೆ ಮಾಡಿ ಬೇಕಾದ ಬಳುವಳಿಗಳನ್ನು ಕೊಟ್ಟು ಕಳುಹಿಸಿ ಕೊಟ್ಟರು.

* " * *

ಇನ್ನೊಮ್ಮೆ ನಾರದರು ಶ್ರೀಕೃಷ್ಣನ ದರ್ಶನಕ್ಕಾಗಿ ಬಂದರು. "ಶ್ರೀಕೃಷ್ಣ, ನೀನು ನರಕಾಸುರನನ್ನು ಸಂಹರಿಸಿ, ಅವನು ಸೆರೆಯಿಟ್ಟಿದ್ದ ಹದಿನಾರು ಸಾವಿರ ಸ್ತ್ರೀಯರನ್ನೆಲ್ಲಾ ಮದುವೆಯಾದೆ ಎಂದು ಕೇಳಿದೆನು. ನೀನು ಒಬ್ಬನೇ ಒಬ್ಬನು ಅವರಲ್ಲೆಲ್ಲಾ ಸಂಸಾರ ಮಾಡಿಕೊಂಡಿರುವುದು ಹೇಗೆ ? ಎಂದು ನೋಡಲು ಬಂದಿರುವೆನು.''

ಎಂದರು. ಆತನು "ಆಗಲಿ. ಮನೆಮನೆಗೂ ಹೋಗಿ ನೋಡಿ ಬನ್ನಿ" ಎಂದನು.

ಹದಿನಾರು ಸಾವಿರ ಮಂದಿಗೂ ಹದಿನಾರು ಸಾವಿರ ಮನೆಗಳು ಪ್ರತ್ಯೇಕ ಪ್ರತ್ಯೇಕವಾಗಿದ್ದುವು. ಒಂದೊಂದು ಮನೆಯೂ ಒಂದೊಂದು ಅರಮನೆಯಂತಿತ್ತು. ಶ್ರೀಕೃಷ್ಣನ ಅಪ್ಪಣೆಯಂತೆ ನಾರದರು ಮನೆ ಮನೆಗೂ ಹೋದರು. ಮನೆಮನೆಯಲ್ಲಿಯೂ ಒಬ್ಬೊಬ್ಬ ಕೃಷ್ಣನಿದ್ದನು. ಮನೆಮನೆಯಲ್ಲಿಯೂ ಕೃಷ್ಣನು ಬಂದು ನಾರದರನ್ನು ಆದರಿಸಿದನು. ಆಗ ನಾರದರು ಮತ್ತೆ ಶ್ರೀಕೃಷ್ಣನನ್ನು ಕಂಡು ''ಮಾನುಷ ವೇಷ ವನ್ನು ಧರಿಸಿದ ನಿನ್ನ ಯೋಗ ಮಾಯೆಯನ್ನು ಕಂಡೆನು. ಎಲೈ ಯೋಗೇಶ್ವರನೆ, ನಿನ್ನ ಮಾಯೆಯು ಯೋಗಿಗಳಿಗೂ ತಿಳಿಯಲು ಅಸಾ ಧ್ಯವು. ಇನ್ನು ಅಪ್ಪಣೆಯನ್ನು ಕೊಡು. ಲೋಕಪಾವನಗಳಾದ ನಿನ್ನ ಲೀಲೆಗಳನ್ನು ಹಾಡಿಕೊಂಡು, ನಿನ್ನ ಯಶಸ್ಸಿನಿಂದ ತುಂಬಿರುವ ಲೋಕಗಳನ್ನು ಸಂಚರಿಸುವೆನು.'' ಎಂದು ಆತನ ಅಪ್ಪಣೆಯನ್ನು ಪಡೆದು ಹೊರಟು ಹೋದರು.

* * * *

ಒಂದು ದಿನ ಶ್ರೀಕೃಷ್ಣನು ರಾಜ ಸಭಾ ಮಂಟಪದಲ್ಲಿ ಕುಳಿತಿ ದ್ದಾಗ ಒಬ್ಬಾನೊಬ್ಬ ಪುರುಷನು ಬಂದು, ಆತನಿಗೆ ನಮಸ್ಕಾರಮಾಡಿ ಹೇಳಿಕೊಂಡನು. "ಪ್ರಭುವೆ, ಜರಾಸಂಧನು ಇಪ್ಪತ್ತು ಮಂದಿ ರಾಜ ರನ್ನು ಹಿಡಿದುಕೊಂಡು ಹೋಗಿ ಗಿರಿವ್ರಜವೆಂಬ ತನ್ನ ದುರ್ಗದಲ್ಲಿ ಸೆರೆಹಾಕಿಕೊಂಡಿರುವನು. ನೀನು ಅವತಾರ ಮಾಡಿರುವ ಮಹಾ ವಿಷ್ಣುವು. ನಮ್ಮನ್ನು ಕಾಪಾಡು. ನಾವು ಅವನು ಯಾವಾಗ ಏನು ಮಾಡುವನೋ ಎಂದು ಭಯಪಡುತ್ತ, ಬದುಕಿದ್ದರೂ ಸತ್ತಂತಾಗಿರು ವೆವು. ನೀನು ಕಾಪಾಡಬೇಕು'' ಎಂದು ಪ್ರಾರ್ಥಿಸಿದನು. ಆ ವೇಳೆಗೆ ಸರಿಯಾಗಿ ಧರ್ಮರಾಜನು ರಾಜಸೂಯ ಯಾಗವನ್ನು ಮಾಡುವ ನೆಂಬ ಸುದ್ದಿಯೂ ಬಂತು.

ಯಾದವರು ಜರಾಸಂಧನ ಸುದ್ದಿಯನ್ನು ಕೇಳಿ ರೇಗಿದರು. ಧರ್ಮರಾಜನ ರಾಜಸೂಯಕ್ಕಿಂತಲೂ, ಜರಾಸಂಧನ ಮೇಲೆ ಯುದ್ಧ ಮಾಡುವುದೇ ಅವರಿಗೆ ಹೆಚ್ಚು ಬೇಕಾಯಿತು. ಅದನ್ನು ಕೃಷ್ಣನು ಕಂಡು ಮಂತ್ರಿ ಶ್ರೇಷ್ಠನಾದ ಉದ್ಧವನನ್ನು ಕರೆದು ಏನು ಮಾಡ ಬೇಕು ಹೇಳು ಎಂದನು. ಆತನು ''ದೇವ, ಈಗ ನಾವೇ ಯುದ್ಧಕ್ಕೆ ಹೋಗುವುದಕ್ಕಿಂತ ಧರ್ಮರಾಜನ ರಾಜಸೂಯಕ್ಕೆ ಹೋಗುವುದೇ ಸರಿ. ರಾಜಸೂಯ ಮಾಡುವ ರಾಜನು ಸಕಲ ದಿಕ್ಕುಗಳನ್ನೂ ಜಯಿ ಸಲೇಬೇಕು. ಅದರಿಂದ ಆತನು ಮಾಡಲೇ ಬೇಕಾದ ಈ ಕಾರ್ಯದಲ್ಲಿ ನಾವೂ ಸಹಾಯಮಾಡಿ, ಗಿರಿವ್ರಜದಲ್ಲಿರುವ ರಾಜರನ್ನು ಸೆರೆಬಿಡಿಸಿ ಕೀರ್ತಿಯನ್ನು ಪಡೆಯಬೇಕು'' ಎಂದನು.

ಎಲ್ಲರೂ ಆ ಮಾತಿಗೆ ಒಪ್ಪಿದರು. ಶ್ರೀಕೃಷ್ಣನೂ ಆ ರಾಜದೂತ ನನ್ನು ಕರೆದು "ನಿಮ್ಮ ಸೆರೆಯನ್ನು ಬಿಡಿಸುವೆನು'' ಎಂದು ರಾಜರಿಗೆ ಹೇಳಿ ಕಳುಹಿಸಿದನು. ಎಲ್ಲರನ್ನೂ ಕರೆದುಕೊಂಡು ಇಂದ್ರಪ್ರಸ್ಥ ಪುರಕ್ಕೆ ಹೋದನು. ಪಾಂಡವರು ಆತನನ್ನು ಪರಮ ಪ್ರೀತಿಯಿಂದ ಬರಮಾಡಿಕೊಂಡರು.

---

## ನಲವತ್ತೆರಡನೆಯ ಅಧ್ಯಾಯವು

# ದುಷ್ಟಕ್ಷತ್ರಿಯ ವಧೆ

ಶ್ರೀಕೃಷ್ಣನು ಇಂದ್ರಪ್ರಸ್ಥದಲ್ಲಿರುವಾಗಲೇ ಖಾಂಡವ ವನ ದಹನ ವಾದುದು. ಅಗ್ನಿಯು ಬ್ರಾಹ್ಮಣ ರೂಪದಿಂದ ಬಂದು ಯಮುನಾ ತೀರದಲ್ಲಿದ್ದ ಕೃಷ್ಣಾರ್ಜುನರನ್ನು ತನಗೆ ಭೋಜನವನ್ನು ಕೊಡ ಬೇಕೆಂದು ಕೇಳಿದನು. ಅವರು ಆಗಲಿ ಎಂದರು. ಆಗ ಆತನು ತನ್ನ

ನಿಜಸ್ವರೂಪವನ್ನು ತೋರಿಸಿಕೊಂಡು ''ನಾನು ಅಗ್ನಿಯು. ನನಗೆ ಅಜೀರ್ಣವಾಗಿದೆ. ಖಾಂಡವವನವನ್ನು ತಿಂದರೆ ನನ್ನ ರೋಗವು ಹೋಗುವುದು. ಆದರೆ ಆ ವನವು ಇಂದ್ರನದು: ನಾನು ಅದನ್ನು ಸುಡು ವುದಕ್ಕೆ ಹೋದರೆ ಆತನು ಅಡ್ಡಬರುವನು. ನೀವಿಬ್ಬರೂ ನನಗೆ ಖಾಂಡವವನ್ನು ಸುಡಲು ಸಹಾಯರಾಗಬೇಕು." ಎಂದು ಕೇಳಿ ಕೊಂಡನು. ಕೃಷ್ಣಾರ್ಜುನರು ಆಗಲೆಂದರು. ಅಗ್ನಿಯು ಅವರ ಸಹಾಯ ದಿಂದ ಗೆದ್ದನು.

ಆಗ ಆ ಖಾಂಡವವನದಲ್ಲಿ ಇದ್ದ ಮಯಾಸುರನು ಸುಟ್ಟು ಹೋಗಬೇಕಾಗಿತ್ತು. ಅವನು ಕೃಷ್ಣಾರ್ಜುನರ ಮೊರೆ ಹೊಕ್ಕು ಉಳಿದುಕೊಂಡನು. ತನ್ನನ್ನು ಬದುಕಿಸಿದರೆಂದು ಅವರ ಅಪ್ಪಣೆಯ ಪ್ರಕಾರ ಅದ್ಭುತವಾದ ಒಂದು ರಾಜ ಸಭಾ ಮಂಟಪವನ್ನು ಧರ್ಮ ರಾಜನಿಗೆ ಕಟ್ಟಿಕೊಟ್ಟನು.

ಧರ್ಮರಾಜನು ರಾಜಸೂಯವನ್ನು ಮಾಡಲು ಶ್ರೀಕೃಷ್ಣನು ಸಂಪೂರ್ಣ ಸಹಾಯ ಮಾಡಿದನು. ಜರಾಸಂಧನು ಸುಲಭವಾಗಿ ಸೋಲುವವನಲ್ಲವೆಂದು ತಾನೇ ಭೀಮಾರ್ಜುನರೊಡನೆ ಗಿರಿವ್ರಜಕ್ಕೆ ಹೋದನು. ಕೃಷ್ಣ ಭೀಮಾರ್ಜುನರು ಬ್ರಾಹ್ಮಣ ವೇಷಧಾರಿಗಳಾಗಿ ದ್ದರು. ಜರಾಸಂಧನು ಅವರನ್ನು ಗೌರವಿಸಿ ಏನಾಗಬೇಕು ಎಂದು ಕೇಳಿದನು. ಕೃಷ್ಣನು "ನಾವು ಯುದ್ಧಕ್ಕೆ ಬಂದಿರುವೆವು. ಈತನು ಭೀಮನು, ಈತನು ಅರ್ಜುನನು. ನಾನು ಕೃಷ್ಣನು" ಎಂದನು. ಜರಾಸಂಧನಿಗೆ ಆ ಮಾತು ಕೇಳಿ ಕೋಪ ಬಂತು. ಆದರೂ ನಕ್ಕು ''ಕೃಷ್ಣ, ನೀನು ಹೇಡಿ. ಹೆದರಿ ಮಥುರೆಯನ್ನು ಬಿಟ್ಟು ದ್ವಾರಕೆಯನ್ನು ಸೇರಿದವನು. ಈ ಅರ್ಜುನನು ನನಗೆ ಚಿಕ್ಕವನು. ಆದರಿಂದ ನಾನು ಭೀಮನೊಡನಾದರೆ ಯುದ್ಧಮಾಡುವೆನು'' ಎಂದನು.

ಅದೇ ಸರಿಯೆಂದಾಯಿತು. ಭೀಮ ಜರಾಸಂಧರಿಗೆ ಯುದ್ಧವು

ಆರಂಭವಾಯಿತು. ಮೊದಲು ಗದಾಯುದ್ಧವಾಯಿತು. ಆ ಮೇಲೆ ಮುಷ್ಟಿ ಯುದ್ಧವಾಯಿತು. ಕೊನೆಗೆ ಕೃಷ್ಣನು ''ಜರಾಸಂಧನು ಜರೆಯು ಸೇರಿಸಿದ ಎರಡು ಹೋಳುಗಳು. ಅವನನ್ನು ಸಿಗಿದು ಎರಡು ಪಾಲು ಮಾಡಿದರೆ ಅವನು ಸಾಯುವನು.'' ಎಂಬ ಗುಟ್ಟನ್ನು ಭೀಮ ಸೇನನಿಗೆ ಉಪಾಯವಾಗಿ ತಿಳಿಸಿದನು. ಭೀಮನು ಅದರಂತೆ ಜರಾ ಸಂಧನನ್ನು ಹಿಡಿದು ಎರಡು ಪಾಲಾಗಿ ಸಿಗಿದು ಹಾಕಿದನು. ಅವನು ಮಡಿದನೆಂದು ಲೋಕಕ್ಕೆ ಲೋಕವೇ ಸಂತೋಷಪಟ್ಟಿತು. ಜರಾ ಸಂಧನ ಮಗನಾದ ಸಹದೇವನಿಗೆ ಪಟ್ಟಾಭಿಷೇಕಮಾಡಿ, ಸೆರೆಯಲ್ಲಿದ್ದ ರಾಜರನ್ನೆಲ್ಲಾ ಬಿಡಿಸಿ, ಕೃಷ್ಣನು ಭೀಮಾರ್ಜುನರೊಡನೆ ಇಂದ್ರ ಪ್ರಸ್ಥಕ್ಕೆ ಬಂದನು.

ಧರ್ಮರಾಜನು ಶ್ರೀಕೃಷ್ಣನನ್ನು ಮುಂದುಮಾಡಿಕೊಂಡು ರಾಜ ಸೂಯವನ್ನು ನೆರವೇರಿಸಿದನು. ವ್ಯಾಸಾದಿ ಮಹರ್ಷಿಗಳು, ಭೀಷ್ಮಾದಿ ಮಹಾ ಶೂರರು, ಎಲ್ಲರೂ ಆ ಯಾಗದಲ್ಲಿ ಭಾಗವಹಿಸಿದರು. ಯಾಗವು ನಿರ್ವಿಘ್ನವಾಗಿ ನೆರವೇರಿತು. ಆ ಯಾಗದಲ್ಲಿ ಅಗ್ರಪೂಜೆಯು ಆಗ ಬೇಕಾಗಿತ್ತು. ಸಹದೇವನು ''ಯಾದವ ಶ್ರೇಷ್ಠನಾದ ಶ್ರೀಕೃಷ್ಣನು ಅಗ್ರಪೂಜೆಗೆ ಅರ್ಹನು.'' ಎಂದನು. ಎಲ್ಲರೂ ಆಗಬಹುದು ಎಂದರು. ಶಿಶುಪಾಲನು ಮಾತ್ರ ಅದನ್ನು ಒಪ್ಪಲಿಲ್ಲ. "ಯಯಾತಿರಾಯನು ಯದು ವಂಶದವರಿಗೆ ಸಿಂಹಾಸನವು ಬೇಡ'' ಎಂದು ಶಾಪವನ್ನು ಕೊಟ್ಟಿರುವು ದನ್ನು ಮರೆತಿರಾ ? ಈ ಯಾದವರು ಸಮುದ್ರದಲ್ಲಿ ಸೇರಿಕೊಂಡ ಕಳ್ಳರು, ಹೀಗಿರಲು ಯಾದವರಲ್ಲಿ ಒಬ್ಬನಾದ ಕೃಷ್ಣನಿಗೆ ಅಗ್ರಪೂಜೆ ಎಂದರೇನು ?" ಎಂದು ಹಾರಾಡಿದನು.

ಎರಡು ಕಡೆಯವರಿಗೂ ಮಾತಿಗೆ ಮಾತು ಬೆಳೆದು ಕೈಗೆ ಕೈ ಸೇರುವಂತಾಯಿತು. ಶಿಶುಪಾಲನು ಶ್ರೀಕೃಷ್ಣನ ಮೇಲೆ ಬೀಳಲು ಎದ್ದನು. ಅದುವರೆಗೆ ಸುಮ್ಮನಿದ್ದ ಶ್ರೀಕೃಷ್ಣನು ತನ್ನ ಚಕ್ರದಿಂದ ಶಿಶು

ಪಾಲನ ಶಿರವನ್ನು ಅರಿದನು. ಆಗ ಆ ಸಭೆಯಲ್ಲಿ ಎಲ್ಲರೂ ನೋಡುತ್ತಿರುವ ಹಾಗೆಯೇ ಕೊಳ್ಳಿಯ ಹಾಗಿರುವ ಭಾರಿಯ ತೇಜಸ್ಸೊಂದು ಶಿಶುಪಾಲನ ದೇಹದಿಂದ ಹೊರಟು ಶ್ರೀಕೃಷ್ಣನ ದೇಹವನ್ನು ಸೇರಿತು. ಅದನ್ನು ಕಂಡು ಅವನ ಕಡೆಯವರೆಲ್ಲಾ ಹೆದರಿ ಓಡಿಹೋದರು.

ಅಗ್ರಪೂಜೆಯು ನಡೆಯಿತು. ಯಾಗವು ಪರಿಪೂರ್ಣವಾಯಿತು. ದುರ್ಯೋಧನನು ಮಾತ್ರ ಆ ಯಾಗದಿಂದ ಸಂತುಷ್ಟನಾಗಲಿಲ್ಲ. ಉಳಿದವರೆಲ್ಲರೂ ಸಂತೋಷಪಟ್ಟರು.

ಆ ಯಾಗದ ವೈಭವವನ್ನು ಏನು ಹೇಳೋಣ! ಭೀಮನು ಪಾಕಶಾಲೆಯ ಅಧ್ಯಕ್ಷನು. ದುರ್ಯೋಧನನು ಧನಾಧ್ಯಕ್ಷನು. ಸಹದೇವನು ಸ್ವಾಗತಾಧ್ಯಕ್ಷನು. ನಕುಲನು ಪದಾರ್ಥಗಳನ್ನು ತರುವವನು. ದ್ರೌಪದಿಯ ಅಣ್ಣನಾದ ಧೃಷ್ಟದ್ಯುಮ್ನನು ಬಡಿಸುವುದಕ್ಕೆ, ಕರ್ಣನು ದಾನ ಮಾಡುವುದಕ್ಕೆ, ಅರ್ಜುನನು ಅತಿಥಿಗಳ ಸೇವೆಗೆ ನಿಂತರು. ಶ್ರೀಕೃಷ್ಣನು ಬಂದ ಬ್ರಾಹ್ಮಣರಿಗೆ ಅರ್ಘ್ಯಪಾದ್ಯಗಳನ್ನು ಕೊಡಲು ನಿಂತನು. ಇಂತಹ ಯಾಗವನ್ನು ನೋಡಿ ದೇವತೆಗಳು ಸಂತುಷ್ಟರಾಗಿ ಹೂಮಳೆ ಕರೆದುದರಲ್ಲಿ ಆಶ್ಚರ್ಯವೇನು ?

ಯಾಗವೆಲ್ಲವೂ ಮುಗಿದ ಮೇಲೆ ಎಲ್ಲರೂ ಸೇರಿ ವಸಂತವನ್ನು ಆಡಿದರು. ಧರ್ಮರಾಜನು ಸರ್ವರೊಡನೆ ಅವಭೃತವನ್ನು ಆಚರಿಸಿದನು. ಎಲ್ಲರೂ ರಾಜಸೂಯವನ್ನೂ, ಅದನ್ನು ಮಾಡಿದವನನ್ನೂ ಮನಸಾರೆ ಹೊಗಳಿದರು.

ಧರ್ಮರಾಜನು ಶ್ರೀಕೃಷ್ಣನನ್ನೂ, ಕೌರವಾದಿಗಳನ್ನೂ ಒಂದು ವರ್ಷಕಾಲ ತನ್ನಲ್ಲಿಯೇ ಇರಿಸಿ ಕೊಂಡಿದ್ದನು. ಆ ಧರ್ಮರಾಜನ ವೈಭವವನ್ನು ನೋಡಿ ದುರ್ಯೋಧನನು ಸಂಕಟಪಟ್ಟನು. ಒಂದು ದಿನ ದುರ್ಯೋಧನನು ಆ ಮಯ ನಿರ್ಮಿತವಾದ ಸಭೆಯಲ್ಲಿ ಭ್ರಾಂತಿಗೊಂಡು ನೀರಿದ್ದೆಡೆ ನೀರು ಕಾಣದೆ ಬಿದ್ದು ನೆನೆದು ಹೋದನು.

ಸೇರಿಲ್ಲದ ಕಡೆ ಸೇರಿದ್ದಂತೆ ಭಾವಿಸಿ ನಡೆದನು. ಅದನ್ನು ಕಂಡು ಭೀಮನೂ ದ್ರೌಪದಿಯೂ ಘಕಘಕನೆ ನಕ್ಕರು. ಕೌರವನಿಗೆ ಬಹಳ ಸಿಟ್ಟು ಬಂತು. ಪಾಂಡವರ ಮೇಲೆ ದ್ವೇಷವು ಮೂಡಿತು. ಶ್ರೀಕೃಷ್ಣನು ''ಸರಿ, ಈ ದ್ವೇಷ ಬೀಜವು ಬೆಳೆದು ದೀರ್ಘವೈರವಾಗಿ ಯುದ್ಧ ವಾಗುವುದು. ಭೂಭಾರವು ಇಳಿಯುವುದಕ್ಕೆ ಕಾರಣವಾಗುವುದು'' ಎಂದು ಸುಮ್ಮನಿದ್ದನು.

ಇತ್ತ ಶ್ರೀಕೃಷ್ಣನು ಇಂದ್ರಪ್ರಸ್ಥದಲ್ಲಿ ಇರುವಾಗ ಅತ್ತ ಸಾಲ್ವನು ದ್ವಾರಕೆಯ ಮೇಲೆ ದಂಡೆತ್ತಿ ಬಂದನು. ಆ ಸಾಲ್ವನ ಕಥೆಯು ವಿಚಿತ್ರವಾದುದು. ರುಕ್ಮಿಣಿಯನ್ನು ಕೃಷ್ಣನು ಹೊತ್ತುಕೊಂಡು ಬಂದಾಗ ರುಕ್ಮಿ, ಶಿಶುಪಾಲ, ಜರಾಸಂಧರಂತೆ ಸಾಲ್ವನೂ ಯಾದವ ರಿಂದ ಪರಾಜಿತನಾದನು. ಆಗ ಸಾಲ್ವನು ಎಲ್ಲರೆದುರಿಗೆ "ಭೂಮಿಯಲ್ಲಿ ಯಾದವರಿಲ್ಲದಂತೆ ಮಾಡುವೆನು.'' ಎಂದು ಪ್ರತಿಜ್ಞೆ ಮಾಡಿದನು. ಅದನ್ನು ಸಾರ್ಥಕಗೊಳಿಸಿಕೊಳ್ಳಲು ಪರಶಿವನನ್ನು ಕುರಿತು ಘೋರ ವಾದ ತಪಸ್ಸುಮಾಡಿ, ಬಹು ಕಷ್ಟದಿಂದ ಆತನನ್ನು ಒಲಿಸಿಕೊಂಡನು. ಆತನ ದಯೆಯಿಂದ ಆ ಸಾಲ್ವನಿಗೆ ಸೌಭವೆಂಬ ವಿಮಾನವು ಸಿಕ್ಕಿತು. ಅದನ್ನು ಮಾಡಿದವನು ಮಯಾಸುರನು. ಆ ವಿಮಾನವು ಲೋಹ ಮಯವಾದುದು. ಬೇಕೆಂದ ಕಡೆಗೆ ಹೋಗಬಲ್ಲುದು. ಯಾರ ಕಣ್ಣಿಗೂ ಕಾಣದು. ಇಂತಹ ವಿಮಾನವನ್ನು ಹತ್ತಿ ದ್ವಾರಕೆಯ ಮೇಲೆ ಸಾಲ್ವನು ದಂಡೆತ್ತಿ ಬಂದನು.

ಪ್ರದ್ಯುಮ್ನನು ಸಾಲ್ವನನ್ನು ಎದುರಿಸಿದನು. ಸಾಲ್ವನು ಮಾಯಾ ಯುದ್ಧದಲ್ಲಿ ನಿಪುಣ. ಪ್ರದ್ಯುಮ್ನನು ಅವನ ಮಾಯೆಗಳನ್ನೆಲ್ಲ ಧ್ವಂಸ ಮಾಡಿದರೂ ಅವನನ್ನು ಗೆಲ್ಲಲಾಗಲಿಲ್ಲ. ಅವನ ಮಂತ್ರಿಯಾದ ದ್ಯುಮಂ ತನನ್ನು ಮಾತ್ರ ಗೆದ್ದು ಸಂಹರಿಸಿದನು. ಸಾಲ್ವ–ಪ್ರದ್ಯುಮ್ನರ ಯುದ್ಧವು ಇಪ್ಪತ್ತೇಳು ದಿನ ನಡೆಯಿತು.

ಅಷ್ಟರಲ್ಲಿ ಇಂದ್ರಪ್ರಸ್ಥಕ್ಕೆ ಹೋಗಿದ್ದ ಶ್ರೀಕೃಷ್ಣನು ಹಿಂತಿರುಗಿ ಬಂದನು. ಅತನಿಗೂ ಸಾಲ್ವನಿಗೂ ದೊಡ್ಡ ಯುದ್ಧವಾಯಿತು. ಯುದ್ಧ ಮಧ್ಯದಲ್ಲಿ ಸಾಲ್ವನು ತನ್ನ ಮಾಯೆಯಿಂದ ವಸುದೇವನನ್ನು ನಿರ್ಮಿಸಿ, "ನೋಡು ಕೃಷ್ಣ, ನಿಮ್ಮಪ್ಪನ ಗತಿಯನ್ನು ನೋಡು.'' ಎಂದು ಆತನು ನೋಡುತ್ತಿದ್ದ ಹಾಗೆಯೇ ಆ ಮಾಯಾ ವಸುದೇವನನ್ನು ಕಡಿದನು. ಶ್ರೀಕೃಷ್ಣನೂ, ಹೀಗಾಯಿತಲ್ಲ ಎಂದು ಒಂದು ಗಳಿಗೆ ಶೋಕಿಸಿದನು. ಅಷ್ಟರಲ್ಲಿ ಆ ಮಾಯೆಯು ಮಾಯವಾಗಿ ಹೋಗಲು ಶ್ರೀಕೃಷ್ಣನು ಮತ್ತೆ ಯುದ್ಧಕ್ಕೆ ಸಿದ್ಧವಾದನು. ಸಾಲ್ವನು ತನ್ನ ವಿಮಾನವನ್ನು ಏರಿ ಬಾಣಗಳಿಂದ ಯಾದವರ ಸೈನ್ಯವನ್ನು ಘಾತಿಸಿದನು. ಶ್ರೀಕೃಷ್ಣನು ಪ್ರತಿಯಾಗಿ ಬಾಣಗಳನ್ನು ಹೊಡೆದು ಅವನ ಬಿಲ್ಲನ್ನು ಕತ್ತರಿಸಿದನು. ಗದೆಯಿಂದ ಅವನ ವಿಮಾನವನ್ನು ಭಂಗಪಡಿಸಿದನು. ವಿಮಾನವು ತುಂಡುತುಂಡಾಗಿ ಬಿದ್ದು ಹೋಗಲು ಸಾಲ್ವನು ನೆಲದ ಮೇಲೆಯೇ ನಿಂತು ಗದೆಯನ್ನು ಎತ್ತಿಕೊಂಡು ಕೃಷ್ಣನನ್ನು ಹೊಡೆಯಲು ಬಂದನು. ಗದೆಯನ್ನು ಹಿಡಿದ ಅವನ ತೋಳನ್ನು ಭಲ್ಲದಿಂದ ಕತ್ತರಿಸಿ, ಅದ್ಭುತವಾದ ಚಕ್ರಾಯುಧವನ್ನು ಪ್ರಯೋಗಿಸಿ ಶ್ರೀಕೃಷ್ಣನು ಅವನ ಶಿರವನ್ನು ಅರಿದನು. ದೇವತೆಗಳೆಲ್ಲರೂ ಸಂತೋಷಪಟ್ಟು ದೇವವಾದ್ಯಗಳನ್ನು ಬಾರಿಸಿದರು.

ಸಾಲ್ವನು ಹತನಾದುದನ್ನು ಕಂಡು ದಂತವಕ್ರನು ಮುಂದೆ ಬಂದನು. "ಎಲಾ ಗೊಲ್ಲಕೃಷ್ಣ, ನೀನು ನನಗೆ ಸೋದರ ಮಾವನು. ಆದರೂ ನಿನ್ನನ್ನು ಸಂಹರಿಸಿ ನನ್ನ ಮಿತ್ರರಾದ ಶಿಶುಪಾಲಾದಿಗಳ ಸಾಲವನ್ನು ತೀರಿಸುವೆನು" ಎಂದು ಕೆಟ್ಟ ಮಾತು ಆಡುತ್ತಾ ಗದೆಯಿಂದ ಶ್ರೀಕೃಷ್ಣನ ತಲೆಯ ಮೇಲೆ ಹೊಡೆದನು. ಶ್ರೀಕೃಷ್ಣನು ಮರುಮಾತಾಡದೆ ತನ್ನ ಗದೆಯಿಂದ ಅವನ ಎದೆಯನ್ನು ಹೊಡೆದನು. ದಂತವಕ್ರನು ಆ ಏಟು ತಡೆಯಲಾರದೆ ರಕ್ತವನ್ನು ಕಾರಿ ಕೆಳಗೆ

ಬಿದ್ದು ಸತ್ತನು. ಅವನ ದೇಹದಿಂದ ಹೊರಟ ಅದ್ಭುತ ತೇಜಸ್ಸೊಂದು ಕೃಷ್ಣನನ್ನು ಪ್ರವೇಶಿಸಿತು.

ಅನಂತರ ದಂತವಕ್ರನ ತಮ್ಮನಾದ ವಿಡೂರಥನು ಯುದ್ಧಕ್ಕೆ ಬಂದು ಶ್ರೀಕೃಷ್ಣನ ಚಕ್ರಕ್ಕೆ ಬಲಿಯಾದನು.

ಹೀಗೆ ಶ್ರೀಕೃಷ್ಣನು ಶತ್ರು ಸಂಹಾರಮಾಡಿ ದ್ವಾರಕೆಯಲ್ಲಿ ಸುಖದಿಂದಿರುವಾಗ ಕೌರವರು ಪಾಂಡವರ ಮೇಲೆ ಯುದ್ಧಕ್ಕೆ ಎಲ್ಲ ವನ್ನೂ ಅಣಿಮಾಡಿಕೊಳ್ಳುತ್ತಿರುವರೆಂದು ಸುದ್ದಿಯು ಬಂತು. ಬಲ ರಾಮನು "ಕೌರವ ಪಾಂಡವರಿಬ್ಬರೂ ಬಂಧುಗಳು. ನಾನು ಇಬ್ಬರ ಕಡೆಗೂ ಸೇರುವುದಿಲ್ಲ'' ಎಂದು ತೀರ್ಥಯಾತ್ರೆ ಮಾಡುವ ನೆಪದಿಂದ ಹೊರಟನು. ಜೊತೆಯಲ್ಲಿ ಬ್ರಾಹ್ಮಣರನ್ನು ಕರೆದುಕೊಂಡು ಸರಸ್ವತೀ ಯಮುನಾ ಗಂಗಾ ನದಿಗಳನ್ನು ಅನುಸರಿಸಿಕೊಂಡು ಹೋಗುತ್ತ ಅಲ್ಲಲ್ಲಿ ಸಿಕ್ಕಿದ ತೀರ್ಥಗಳನ್ನೆಲ್ಲಾ ಸೇವಿಸಿದನು. ನೈಮಿಶಾರಣ್ಯಕ್ಕೆ ಬಂದ ಬಲರಾಮನನ್ನು ಸತ್ರಯಾಗ ಮಾಡುತ್ತಿದ್ದ ಋಷಿಗಳು ಬಂದು ಎದುರುಗೊಂಡು ಕರೆದುಕೊಂಡು ಹೋದರು. ಎಲ್ಲರೂ ಗೌರವಿಸಿದರೂ ಸೂತ ಪುರಾಣಿಕನು ಮಾತ್ರ ಬಲರಾಮನಿಗಾಗಿ ಎದ್ದು ಗೌರವಿಸಲಿಲ್ಲ. ಅದರಿಂದ ಕ್ರುದ್ಧನಾಗಿ ಬಲರಾಮನು ಅವನನ್ನು "ಧರ್ಮಪಾಲಕರಾದ ನಮ್ಮನ್ನೂ ಗೌರವಿಸದ ಈ ದುರ್ಮತಿಯು ವಧೆಗೆ ಅರ್ಹನು' ಎಂದು ಹೊಡೆದು ಕೊಂದು ಬಿಟ್ಟನು.

ಅದನ್ನು ಕಂಡು ಎಲ್ಲರಿಗೂ ಸಂಕಟವಾಯಿತು. ಆಗ ''ಎಲೈ ಬಲರಾಮನೆ, ನಮ್ಮ ಯಾಗವು ಮುಗಿಯುವವರೆಗೂ ಈತನಿಗೆ ಆಚಾರ್ಯ ಪೀಠವನ್ನೂ ಆಯುಸ್ಸನ್ನೂ ಶರೀರದ ಆಯಾಸವಿಲ್ಲದಿರುವಿಕೆ ಯನ್ನೂ ನಾವೇ ಕೊಟ್ಟಿದ್ದೆವು. ಈಗ ನೀನು ಇವನನ್ನು ಕೊಂದಿ ರುವೆ. ನೀನಾಗಿ ಈ ಬ್ರಹ್ಮ ಹತ್ಯೆಗೆ ಶಿಕ್ಷೆಯನ್ನು ವಿಧಿಸಿಕೊಂಡು ಲೋಕವನ್ನು ಅನುಗ್ರಹಿಸು. ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿ

ಕೊಂಡು ಶುದ್ಧವಾಗಬೇಕೆಂಬುದನ್ನು ಲೋಕವು ನಿನ್ನಿಂದ ಕಲಿಯಲಿ'' ಎಂದರು. ಅದನ್ನು ಕೇಳಿ ಬಲರಾಮನು ''ಅಯ್ಯಾ ಮುನಿಗಳಿರಾ! ರೋಮಹರ್ಷಣನಿಗೆ ದೀರ್ಘಾಯುವೂ ಇಂದ್ರಿಯ ಬಲಸಂಪನ್ನನೂ ಆದ ಉಗ್ರಶ್ರವನೆಂಬ ಮಗನಾಗಿ ನಿಮಗೆ ಪುರಾಣಗಳನ್ನು ಹೇಳುವನು. ನೀವು ಹೇಳಿದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆನು'' ಎಂದನು.

ಅವಕ್ಕೆ ಅವನು ''ಪ್ರತಿ ಪರ್ವಕಾಲವಲ್ಲಿಯೂ ಪಲ್ವನೆಂಬ ರಾಕ್ಷಸನು ಬಂದು ನಮ್ಮ ಯಾಗವನ್ನು ಕೆಡಿಸುತ್ತಿರುವನು. ಅವನನ್ನು ಕೊಂದರೆ ನಮಗೆ ಮಹೋಪಕಾರವಾಗುವುದು. ಆಮೇಲೆ ನೀನು ಹನ್ನೆರಡು ತಿಂಗಳು ಈ ಭಾರತ ವರ್ಷವನ್ನು ಯಾತ್ರೆ ಮಾಡು. ನೀನು ಶುದ್ಧನಾಗುವೆ" ಎಂದರು. ಅದನ್ನು ಅಂಗೀಕರಿಸಿ ಬಲರಾಮನು ಅಲ್ಲಿಯೇ ಪರ್ವಕಾಲದವರೆಗೂ ಇದ್ದು ಆಗ ಬಂದ ಪಲ್ವನನ್ನು ಕೊಂದು, ಉತ್ತರಭಾರತ ದಕ್ಷಿಣಭಾರತಗಳಲ್ಲಿರುವ ತೀರ್ಥಗಳಲ್ಲೆಲ್ಲಾ ಯಾತ್ರೆ ಮಾಡಿ ಪರಿಶುದ್ಧನಾದನು.

ಆತನು ಹಿಂತಿರುಗಿ ಬರುವ ವೇಳೆಗೆ ಕೌರವ ಪಾಂಡವರ ಯುದ್ಧವೆಲ್ಲಾ ಮುಗಿದು ಭೀಮದುರ್ಯೋಧನರ ಗದಾ ಯುದ್ಧವು ನಡೆಯುತ್ತಿತ್ತು. ಬಲರಾಮನು ಅಲ್ಲಿಗೆ ಹೋಗಿ ಅವರನ್ನು ತಡೆದನು. ಅವರಿಬ್ಬರೂ ಅವನ ಮಾತನ್ನು ಕೇಳಲಿಲ್ಲ. ಬಲರಾಮನು ಹಿಂತಿರುಗಿ ಬಂದು ಕೆಲಕಾಲ ದ್ವಾರಕೆಯಲ್ಲಿದ್ದು, ಅಲ್ಲಿಂದ ನೈಮಿಶಾರಣ್ಯಕ್ಕೆ ಹೋಗಿ ಅಲ್ಲಿ ನಾನಾ ಯಾಗಗಳನ್ನು ಮಾಡಿದನು.

## ನಲವತ್ತ ಮೂರನೆಯ ಅಧ್ಯಾಯವು

# ಇತರ ಲೀಲೆಗಳು

ಪರೀಕ್ಷಿತನು ಹೇಳಿದನು: "ಎಲೈ ಮುನೀಂದ್ರನೇ, ಭಗವಂತನ ಚರಿತ್ರೆಗಳನ್ನು ಎಷ್ಟು ಕೇಳಿದರೂ ತೃಪ್ತಿಯಾಗದು. ಭಗವಂತನ ಗುಣಗಳನ್ನು ಹಾಡುವ ನುಡಿಯೇ ನುಡಿಯು. ಆತನ ಕರ್ಮಗಳನ್ನು ಮಾಡುವ ಕರಗಳೇ ಕರಗಳು. ಸ್ಥಾವರ ಜಂಗಮ ಎಂಬ ಎಲ್ಲಾ ವಸ್ತುಗಳಲ್ಲಿಯೂ ಪರಮಾತ್ಮನನ್ನು ಚಿಂತಿಸುವ ಮನಸ್ಸೇ ಮನಸ್ಸು. ಆತನ ಪುಣ್ಯ ಕಥೆಗಳನ್ನು ಕೇಳುವ ಕಿವಿಗಳೇ ಕಿವಿಗಳು. ಆತನ ಚರಾಚರ ಮೂರ್ತಿಗಳನ್ನು ನಮಸ್ಕರಿಸುವ ಶಿರವೇ ಶಿರವು. ಅವುಗಳನ್ನು ಕಾಣುವ ಕಣ್ಣೇ ಕಣ್ಣು. ಆದ್ದರಿಂದ ಆತನ ಇತರ ಚರಿತ್ರೆಗಳನ್ನೂ ಹೇಳು."

ಶುಕಮುನಿಯು ಆಗಲೆಂದು ಮುಂದೆ ಹೇಳಿದನು---ಶ್ರೀಕೃಷ್ಣನಿಗೆ ಮಿತ್ರನಾದ ಬ್ರಾಹ್ಮಣನು ಇದ್ದನು: ಆತನು ವೇದವೇದಾಂಗಗಳನ್ನು ಚೆನ್ನಾಗಿ ಬಲ್ಲವನು. ಆತನ ಹೆಸರು ಶ್ರೀದಾಮ. ಆದರೆ ಯಾವಾಗಲೂ ಆತನು ಹರಕು ಬಟ್ಟೆಗಳನ್ನೇ ಉಡುತ್ತಿದ್ದುದರಿಂದ ಆತನಿಗೆ ಕುಚೇಲ ಎಂದೇ ಹೆಸರಾಗಿ ಹೋಯಿತು. ಆತನ ಮಡದಿಯು ಮಹಾ ಪತಿವ್ರತೆಯು. ಅವಳಿಗೆ ಗಂಡನಿಗೆ ಹೊಟ್ಟೆ ತುಂಬಾ ಬಡಿಸಲಾರೆನಲ್ಲಾ ಎಂದು ಬಹಳ ಯೋಚನೆ. ಒಂದು ದಿನ ಅವಳು ಗಂಡನನ್ನು ಕುರಿತು "ನೀನು ದ್ವಾರಕಾಪತಿಯಾದ ಶ್ರೀಕೃಷ್ಣನು ನನ್ನ ಸ್ನೇಹಿತನು ಎನ್ನುವೆಯಲ್ಲಾ! ಹೋಗಿ ಆತನನ್ನು ಕೇಳಿ ಏನಾದರೂ ತರಬಾರದೆ?'' ಎಂದು ಹೇಳಿದಳು. ಕುಚೇಲನು "ಶ್ರೀಕೃಷ್ಣನು

ಭಗವಂತನು. ಈ ನೆವದಿಂದಲಾದರೂ ಆತನ ದರ್ಶನ ಮಾಡಿ ಬರೋಣ'' ಎಂದುಕೊಂಡು, "ಆತನಿಗೆ ಕೊಡುವುದಕ್ಕೆ ಏನಾದರೂ ಕೊಡು" ಎಂದು ಹೆಂಡತಿಯನ್ನು ಕೇಳಿದನು: ಆಕೆಯು ಅಲ್ಲಿ ಇಲ್ಲಿ ತಿರಿದು ಎರಡು ಹಿಡಿ ಅವಲಕ್ಕಿ ತಂದು ಕೊಟ್ಟಳು. ಅದನ್ನು ತೆಗೆದು ಕೊಂಡು ಶ್ರೀಕೃಷ್ಣನ ದರ್ಶನಾರ್ಥಿಯಾಗಿ ಹೊರಟನು.

ದ್ವಾರಕೆಗೆ ಮೂರು ಕೋಟೆಗಳು. ಅವೆಲ್ಲವನ್ನೂ ದಾಟಿ ಆ ಬ್ರಾಹ್ಮಣನು ಒಳಕ್ಕೆ ಬಂದನು. ರುಕ್ಮಿಣೀದೇವಿಯ ಅರಮನೆಯನ್ನು ಕಂಡು ಅವನಿಗೆ ಅತ್ಯಾನಂದವಾಯಿತು. ಅಲ್ಲಿಯೇ ಶ್ರೀಕೃಷ್ಣನು ಇರ ಬಹುದು ಎಂದು ಒಳಕ್ಕೆ ಹೋದನು. ಅಲ್ಲಿ ಅವನಿಗೆ ಆತನ ದರ್ಶನ ವಾಯಿತು. ಶ್ರೀಕೃಷ್ಣನು ಆ ಬ್ರಾಹ್ಮಣನನ್ನು ಆಲಂಗಿಸಿಕೊಂಡನು: ಕರೆದುಕೊಂಡು ಹೋಗಿ ತನ್ನ ಪಟ್ಟದ ಅರಸಿಯಾದ ರುಕ್ಮಿಣಿಯ ಮಂಚದಲ್ಲಿ ಕುಳ್ಳಿರಿಸಿದನು. ಆಕೆಯು ''ಇದು ಯಾರು ಈ ಅದೃಷ್ಟ ವಂತ ? ಶ್ರೀಕೃಷ್ಣನು ಈತನನ್ನು ಬಲರಾಮನಿಗೆ ಸರಿಯಾಗಿ ನೋಡು ತ್ತಿರುವನಲ್ಲಾ!'' ಎಂದು ಆಶ್ಚರ್ಯಪಟ್ಟಳು.

ಶ್ರೀಕೃಷ್ಣನು ತಾನೂ ಅವನೂ ಗುರುಗಳ ಬಳಿ ಒಟ್ಟಿಗೆ ಇದ್ದಾಗ ನಡೆದ ಕಥೆಗಳನ್ನೆಲ್ಲಾ ನೆನಸಿಕೊಂಡನು. ಒಂದು ದಿನ ತಾವಿಬ್ಬರೂ ಸೌದೆಗೆ ಹೋಗಿದ್ದಾಗ ಮಳೆ ಬಂದುದು: ತಾವು ಯತ್ನವಿಲ್ಲದೆ ಅಲ್ಲಿಯೇ ನಿಂತು ಬಿಟ್ಟಾಗ, ಮರುದಿನ ಬೆಳಗಾಗುತ್ತಿದ್ದ ಹಾಗೆಯೇ ಗುರುಗಳು ತಮ್ಮನ್ನು ಹುಡುಕಿಕೊಂಡು ಬಂದುದು ಮೊದಲಾದವುಗಳನ್ನೆಲ್ಲಾ ಹೇಳಿದನು. ''ನನಗಾಗಿ ಏನು ತಂದಿರುವೆ ?" ಎಂದು ಕೇಳಿ ನಾಚು ತ್ತಿದ್ದ ಆತನ ಗಂಟು ಬಿಚ್ಚಿ ಅಲ್ಲಿದ್ದ ಅವಲಕ್ಕಿಯನ್ನು ತಿಂದನು. ರುಕ್ಮಿಣಿಯು ಎರಡನೆಯ ಹಿಡಿಯನ್ನು ತಾನು ಕಿತ್ತುಕೊಂಡು ತಿಂದಳು.

ಶ್ರೀಕೃಷ್ಣನು ಆ ದಿನ ಅವನಿಗೆ ಬೇಕುಬೇಕಾದ ರಾಜೋಪ ಚಾರಗಳನ್ನೆಲ್ಲಾ ಮಾಡಿದನು. ಕುಚೇಲನಿಗೆ ತಾನು ಧನಕ್ಕಾಗಿ ಬಂದಿ

ರುವೆನೆಂದು ಹೇಳಿಕೊಳ್ಳಲು ಮನಸ್ಸಾಗಲಿಲ್ಲ. ಮರುದಿನ ತಾನು ಹೊರಡುವೆನು ಎನ್ನಲು ಶ್ರೀಕೃಷ್ಣನು ಬಹು ದೂರದವರೆಗೂ ಬಂದು ಆತನನ್ನು ಕಳುಹಿಸಿ ಕೊಟ್ಟನು. ಕುಚೇಲನಿಗೆ ಶ್ರೀಕೃಷ್ಣನ ದರ್ಶನದಿಂದ



ಮತ್ಸ್ಯಾವತಾರವು
[ಮೈಸೂರು ಶಾಸನ ಇಲಾಖೆಯ ಕೃಪೆಯಿಂದ]

ಬೇಕಾದಷ್ಟು ಸಂತೋಷವಾಗಿ, ಆತನು ಮಾಡಿದ ಉಪಚಾರಗಳಲ್ಲೇ ಮನಸ್ಸು ನಿಂತು, ಧನವನ್ನು ಕೇಳಲಿಲ್ಲವಲ್ಲಾ ಎನ್ನುವ ಚಿಂತೆಯನ್ನೂ ಮರೆಯಿಸಿತು.

"ಶ್ರೀ ಕೃಷ್ಣನು ನನ್ನನ್ನು ಅಪ್ಪಿಕೊಂಡನಲ್ಲಾ! ನನ್ನ ಕಾಲುಗಳನ್ನು ತೊಳೆದನಲ್ಲಾ! ಪಾದಗಳನ್ನು ಒತ್ತಿದನಲ್ಲಾ!" ಎಂದು ಅಲ್ಲಿ ನಡೆದುದನ್ನೆಲ್ಲಾ ಯೋಚಿಸಿಕೊಂಡು ಬರುತ್ತಿದ್ದ ಆತನಿಗೆ ದಾರಿಯು ಸವೆದುದೂ ತಿಳಿಯಲಿಲ್ಲ. ಮನೆಗೆ ಬಂದರೆ, ತನ್ನ ಹರಕು ಮುರುಕು ಮನೆಯಿದ್ದ ಕಡೆ ಒಂದು ಅರಮನೆಯಿದೆ. ದಾಸದಾಸಿಯರು ತುಂಬಿದ್ದಾರೆ. ಹೆಂಡತಿಯು ಪೀತಾಂಬರವನ್ನುಟ್ಟು ಬಂದು ಕಾಲು ತೊಳೆಯುತ್ತಿದ್ದಾಳೆ. ಅದೆಲ್ಲವನ್ನೂ ಕಂಡು "ಇದೆಲ್ಲವೂ ಶ್ರೀಕೃಷ್ಣನು ಇತ್ತುದು: ಒಕ್ಕಲಿಗನು ಮಲಗಿ ನಿದ್ರಿಸುತ್ತಿದ್ದಾಗ ಮೇಘವು ಮಳೆಗರೆದು ಹೊಲಗದ್ದೆಗಳನ್ನು ಉಳುವುದಕ್ಕೆ ಸರಿಮಾಡುವಂತೆ, ಮಹಾತ್ಮನಾದ ಶ್ರೀಕೃಷ್ಣನು ನನಗೆ ತಿಳಿಯದಂತೆ ಇಷ್ಟು ಐಶ್ವರ್ಯವನ್ನು ಕೊಟ್ಟನು. ಆ ಮಹಾಪುರುಷನು ನಾನು ಕೊಟ್ಟ ಒಂದು ಹಿಡಿ ಅವಲಕ್ಕಿಯಿಂದಲೇ ತೃಪ್ತನಾದನು. ಈ ಐಶ್ವರ್ಯವೆಲ್ಲ ಆತನು ಕೊಟ್ಟುದು. ಈ ಧನವು ನನಗೆ ಮದವನ್ನು ತರದಿರಲಿ. ಆತನ ಭಕ್ತನಾದ ನನಗೆ ಎಂದಿಗೂ ಭಕ್ತಿಯು ಸ್ಥಿರವಾಗಿರಲಿ" ಎಂದು ಅತಿಶಯವಾದ ಭಕ್ತಿಯನ್ನು ಮಾಡಿ ಸತ್ಪುರುಷರು ಪಡೆಯುವ ಸದ್ಗತಿಯನ್ನು ಪಡೆದನು.

ಇನ್ನೊಮ್ಮೆ ರಾಮಕೃಷ್ಣರು ಸೂರ್ಯಗ್ರಹಣವೆಂದು ತಮ್ಮವರೆಲ್ಲರನ್ನೂ ಕರೆದುಕೊಂಡು ಸ್ಯಮಂತ ಪಂಚಕ ಎಂಬ ಕ್ಷೇತ್ರಕ್ಕೆ ಹೋದರು. ಅಲ್ಲಿ ಹಿಂದೆ ಪರಶುರಾಮನು ದುಷ್ಟ ಕ್ಷತ್ರಿಯರನ್ನು ಕೊಂದು ಅವರ ರಕ್ತಗಳಿಂದ ಐದು ಮಡುಗಳನ್ನು ಮಾಡಿದ್ದನು. ಅಲ್ಲಿಯೇ ಯಜ್ಞವನ್ನೂ ಮಾಡಿದ್ದನು. ಅಂತಹ ಪವಿತ್ರ ಸ್ಥಳವೆಂದು

ಮಥುರೆ ಬೃಂದಾವನಗಳಿಂದ ಇತರ ಯಾದವರೂ ನಂದನೇ ಮೊದ ಲಾದ ಗೋಪರೂ ಬಂದಿದ್ದರು. ಅವರೆಲ್ಲರೂ ಗ್ರಹಣ ಕಾಲವಲ್ಲಿ ಮಾಡಬೇಕಾದ ಕಾರ್ಯಗಳನ್ನೆಲ್ಲಾ ಮಾಡಿ ಶ್ರೀಕೃಷ್ಣನ ಸುತ್ತಲೂ ಕುಳಿತರು. ಆತನನ್ನು ನೋಡಿ ಬಹು ದಿನವಾಗಿತ್ತು. ಅದರಿಂದ ಒಬ್ಬರನ್ನೊಬ್ಬರು ಕುಶಲ ಪ್ರಶ್ನೆಗಳನ್ನು ಕೇಳುತ್ತ ಆ ಸಂತೋಷದಲ್ಲಿ ಎಲ್ಲವನ್ನೂ ಮರೆತು ಸುಖವಾಗಿದ್ದರು.

ಅಲ್ಲಿಗೆ ಪಾಂಡವರೂ ಬಂದಿದ್ದರು. ಅವರೆಲ್ಲರೂ ಶ್ರೀರಾಮ ಕೃಷ್ಣರನ್ನೂ ಅವರ ಪ್ರೀತಿಗೆ ಪಾತ್ರರಾದ ಯಾದವರನ್ನೂ ಬೇಕಾದ ಹಾಗೆ ಹೊಗಳಿದರು. ಅವರಿಂದ ಗೌರವವನ್ನು ಪಡೆದು "ಶ್ರೀಹರಿಯ ದರ್ಶನ, ಸ್ಪರ್ಶನ, ಅನುಸರಣ, ಸಂಭಾಷಣ, ಶಯನ, ಏಕಾಸನ, ಸಹಭೋಜನ, ಸಂಬಂಧಗಳನ್ನು ಪಡೆದಿರುವ ನೀವೇ ಧನ್ಯರು'' ಎಂದು ಮತ್ತೆ ಮತ್ತೆ ಹೊಗಳಿದರು.

ವಸುದೇವನ ಪತ್ನಿಯರಾದ ರೋಹಿಣಿಯೂ, ದೇವಕಿಯೂ ಯಶೋದಾ ದೇವಿಯನ್ನು ಆಲಂಗಿಸಿ ''ಅಮ್ಮಾ, ನೀನು ನಮಗೆಲ್ಲಾ ಪೂಜ್ಯಳು. ನೀನು ನಮಗೆ ಮಾಡಿದ ಪರವೋಪಕಾರಕ್ಕೆ ನಾವೇನು ಕೊಟ್ಟೇವು?'' ಎಂದು ಹೊಗಳಿದರು.

ಶ್ರೀಕೃಷ್ಣನೂ ರಾಮನೂ ತಮ್ಮ ಮಿತ್ರರಾದ ಗೋಪಗೋಪಿ ಯರ ಬಳಿ ಸಾರಿ ಅವರನ್ನು ಸ್ನೇಹದ ಕಾಣಿಕೆ ಕೊಟ್ಟು ಗೌರವಿಸಿದರು.

ಅಲ್ಲಿಗೆ ಪಾಂಡವರ ಪತ್ನಿಯಾದ ದ್ರೌಪದಿಯು ಬಂದಿದ್ದಳು. ಆಕೆಯು ಶ್ರೀಕೃಷ್ಣನ ಅಷ್ಟಮಹಿಷಿಯರನ್ನು ಕಂಡು ಅವರು ತಾವು ತಾವು ಶ್ರೀಕೃಷ್ಣನನ್ನು ಮದುವೆಯಾದ ಪರಿಯನ್ನು ಅವರವರ ಬಾಯಿಂದಲೇ ಕೇಳಬೇಕು ಎಂದು ಕೋರಿದಳು. ರುಕ್ಮಿಣಿ ಜಾಂಬವತಿ ಸತ್ಯೆ, ಸತ್ಯಭಾಮೆ, ಕಾಳಿಂದೆ, ಮಿತ್ರವಿಂದೆ, ಲಕ್ಷಣೆ, ಶೈಬ್ಯೆ ಎಂಬ ಆ ಎಂಟು ಮಂದಿಯೂ ತಮ್ಮ ತಮ್ಮ ಮದುವೆಯ ಕಥೆಗಳನ್ನು ಬಹು

ಸಂತೋಷವಾಗಿ ಹೇಳಿದರು. ನರಕಾಸುರನ ಸೆರೆಯಲ್ಲಿದ್ದು ಶ್ರೀಕೃಷ್ಣ ನನ್ನು ಪಡೆದ ಹದಿನಾರು ಸಾವಿರ ಸುಂದಿಯೂ ತಮ್ಮ ಕಥೆಯನ್ನೂ ಹೇಳಿದರು.

ಹೀಗೆ ಸ್ತ್ರೀಯರು ಸ್ತ್ರೀಯರೊಡನೆಯೂ, ಪುರುಷರು ಪುರುಷ ರೊಡನೆಯೂ ಕುಳಿತು ಆನಂದದಿಂದ ಮಾತನಾಡುತ್ತಿರುವಾಗ ದೇವರ್ಷಿಗಳೂ ಬ್ರಹ್ಮರ್ಷಿಗಳೂ, ಮಹರ್ಷಿಗಳೂ ಅಲ್ಲಿಗೆ ಬಂದರು. ಅವರನ್ನು ಕಂಡಕೂಡಲೇ ವಸುದೇವಾದಿ ಹಿರಿಯರೆಲ್ಲರೂ ಎದ್ದು ನಿಂತು ಪ್ರಣಾಮಮಾಡಿ ಅವರನ್ನು ಬರಮಾಡಿಕೊಂಡರು. ''ತಮ್ಮ ದರ್ಶನ ವೇ ಪರಮ ಪಾವನವು. ಲೋಕವಲ್ಲಿ ಜಲತೀರ್ಥಗಳೆಲ್ಲ ತೀರ್ಥ ಗಳಲ್ಲ. ಮಣ್ಣಿನಿಂದ ಕಲ್ಲಿನಿಂದ ಆದ ಪ್ರತಿಮೆಗಳೆಲ್ಲ ದೇವತೆಗಳಲ್ಲ. ಆತೀರ್ಥಗಳೂ ಆ ದೇವತೆಗಳೂ ಮಾಡಿದ ಅನುಗ್ರಹವು ಫಲಿಸುವು ದಕ್ಕೆ ಕಾಲವು ಬೇಕು. ಹಾಗಿಲ್ಲದೆ ನೋಡುತ್ತಿದ್ದ ಹಾಗೆಯೇ ಕಾಪಾಡು ವರು ನೀವು. ಅದರಿಂದ ನೀವೇ ತೀರ್ಥಗಳು. ನೀವೇ ದೇವತೆಗಳು.'' ಎಂದು ಅವರನ್ನು ಸ್ತುತಿಸಿದರು. ಶ್ರೀಕೃಷ್ಣನೂ ಆ ಸ್ತುತಿಯಲ್ಲಿ ಸೇರಿ ದನು. ಅವರೆಲ್ಲರೂ ಶ್ರೀಕೃಷನಿಗೆ ಸ್ತೋತ್ರಗಳನ್ನೂ, ಉಪಚಾರ ಗಳನ್ನೂ ಪೂಜೆಯನ್ನು ಒಪ್ಪಿಸಿ, ''ನೀನು ಸಾಕ್ಷಾತ್ ಭಗವಂತನು. ಜಗತ್ತನ್ನು ಸೃಜಿಸುವವನು ನೀನು. ಪಾಲಿಸುವವನು ನೀನು. ಕೊನೆ ಮಾಡುವವನು ನೀನು. ಧರ್ಮಕ್ಕೆ ಹಾನಿ ಬಂದು ಅಧರ್ಮವು ಬಲ ವಾದಾಗ ನೀನು ಅವತಾರಮಾಡಿ ಬಂದು ಸಾಧುಗಳನ್ನು ಕಾಪಾಡಿ ದುಷ್ಟರನ್ನು ನಿಗ್ರಹಿಸುವೆ. ಶ್ರೀಕೃಷ್ಣ ಪರಮಾತ್ಮನೆ, ನಿನಗೆ ನಮಸ್ಕಾರ ವು." ಎಂದು ಕೊಂಡಾಡಿದರು.

ಅವರುಗಳೆಲ್ಲರೂ ಹೊರಡುವುದಕ್ಕೆ ಸಿದ್ಧರಾಗಲು ವಸುದೇವನು "ನೀವು ಎಲ್ಲವನ್ನೂ ಬಲ್ಲರು. ಏನು ಮಾಡಿದರೆ ನನ್ನ ಪಾಪವೆಲ್ಲವೂ ಪರಿಹಾರವಾಗುವುದೋ ಅದನ್ನು ಹೇಳಿ." ಎಂದು ಕೇಳಿಕೊಂಡನು.

ಅವರೆಲ್ಲರೂ "ಈತನು ಹೀಗಾಡಬಹುದೇ ? ವಸುದೇವನು ಶ್ರೀಕೃಷ್ಣ ನನ್ನು ಬಾಲಕನೆಂದು ತಿಳಿದು ಕೊಂಡನಲ್ಲಾ! ಆತನಿಗಿಂತ ಇನ್ನು ಉಂಟೆ?" ಎಂದು ಚಿಂತಿಸಿದರು. ಕೊನೆಗೆ "ಅಯ್ಯಾ, ಕರ್ಮಗಳನ್ನು ಕಳದುಕೊಳ್ಳಲು ಯಜ್ಞವೇ ಉಪಾಯವು. ಯಜ್ಞಮೂರ್ತಿ ಶ್ರೀಮಹಾ ವಿಷ್ಣುವನ್ನು ಆರಾಧಿಸು. ಅದರಿಂದ ಶ್ರೇಯಸ್ಸಾಗುವುದು'' ಎಂದರು.

ಅದರಂತೆಯೆ ವಸುದೇವನು ಯಜ್ಞವನ್ನು ಮಾಡಿದನು. ಆ ಮಹಾ ಮಹರ್ಷಿಗಳೇ ನಿಂತು ಆ ಯಜ್ಞವನ್ನು ಮಾಡಿಸಿದರು. ನಾನಾ ಯಜ್ಞಗಳನ್ನು ಮಾಡಿ ವಸುದೇವನು ಯಜ್ಞೇಶ್ವರನಾದ ಮಹಾ ವಿಷ್ಣುವನ್ನು ಆರಾಧಿಸಿದನು ಆ ಯಜ್ಞಗಳಲ್ಲಿ ಮೃಗಪಕ್ಷಿಗಳು ಮೊದಲುಗೊಂಡು ಸರ್ವ ಪ್ರಾಣಿಗಳಿಗೂ ತೃಪ್ತಿಯಾಗುವಂತೆ ಊಟ ಉಪಚಾರಗಳು ನಡೆದುವು ಬಂದಿದ್ದ ಬ್ರಾಹ್ಮಣ, ಕ್ಷತ್ರಿಯಾದಿ ಸರ್ವ ರಿಗೂ ಅವರವರ ಯೋಗ್ಯತೆಗೆ ಮೀರಿದ ಗೌರವಗಳು ದೊರೆತುವು.

ಎಲ್ಲರೂ ಒಬ್ಬರನ್ನು ಒಬ್ಬರು ಬಿಡಲಾರದೆ, ಬಲವಂತವಾಗಿ ಬೀಳ್ಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು. ವಸು ದೇವನು ನಂದನನ್ನು ಇನ್ನೂ ಕೆಲವು ಕಾಲ ಇಟ್ಟುಕೊಂಡಿದ್ದು ಪರ ಮೋಪಚಾರಮಾಡಿ ಬೀಳ್ಕೊಟ್ಟನು. ಎಲ್ಲರನ್ನೂ ಕಳುಹಿಸಿ, ಯಾದ ವರು ಶ್ರೀಕೃಷ್ಣನನ್ನು ಮುಂದುಮಾಡಿಕೊಂಡು ದ್ವಾರಕೆಗೆ ಬಂದರು.

ಒಂದು ದಿನ ದೇವಕೀದೇವಿಗೆ ಕಂಸನು ಕೊಂದ ತನ್ನ ಮಕ್ಕಳ ನೆನಪಾಯಿತು. ಹಾಗೆಯೇ ರಾಮಕೃಷ್ಣರು ಸಾಂದೀಪಿನಿಗೆ ಮೃತ ಪುತ್ರನನ್ನು ತಂದು ಕೊಟ್ಟುದೂ ನೆನಪಾಯಿತು. ಆಗ ಆ ಮಕ್ಕಳನ್ನು ಕರೆದು ''ರಾಮಕೃಷ್ಣರೆ, ನೀವು ಮಹಾ ಮಹಿಮರು. ನೀವು ಅವ ತಾರ ಪುರುಷರು. ನನ್ನದೊಂದು ಕೋರಿಕೆಯುಂಟು. ಕಂಸನು ಕೊಂದ ಮಕ್ಕಳನ್ನು ನೋಡಬೇಕೆಂದಿರುವೆನು. ಅವರನ್ನು ತಂದು ತೋರಿಸಲಾರಿರಾ?'' ಎಂದು ಬೇಡಿಕೊಂಡಳು. ಆಗಲೆಂದು ಅವರೀ

ವರೂ ಸುತಲಲೋಕಕ್ಕೆ ತಮ್ಮ ಯೋಗ ಬಲದಿಂದ ಹೋದರು. ಅಲ್ಲಿದ್ದ ಬಲೀಂದ್ರನು ಅವರನ್ನು ಎದುರುಗೊಂಡು ಅವರನ್ನು ಬಹು ತರವಾಗಿ ಪೂಜೆ ಮಾಡಿದನು, ಬೇಕಾದ ಹಾಗೆ ಸ್ತುತಿಸಿದನು. ''ಏನು ಬಂದಿರಿ?'' ಎಂದು ಕೇಳಿದನು.

ಶ್ರೀಕೃಷ್ಣನು ತಾವು ಬಂದ ಕಾರಣವನ್ನು ಹೇಳಿದನು: "ಎಲೈ ಬಲೀಂದ್ರನೆ; ಹಿಂದೆ ಮರೀಚಿ ಬ್ರಹ್ಮನ ಪುತ್ರರು. ಆರು ಜನ ಬ್ರಹ್ಮನಿಂದ ಶಾಪಪಡೆದು ರಾಕ್ಷಸರಾದರು. ಅವರು ಹಿರಣ್ಯಕಶಿಪುವಿನ ಮಕ್ಕಳಾಗಿದ್ದರು. ಮತ್ತೆ ದೇವಕೀ ದೇವಿಯಲ್ಲಿ ಹುಟ್ಟಿ ಕಂಸನಿಂದ ಹತರಾದರು. ಅವರು ನಿನ್ನ ಬಳಿಯಲ್ಲಿರುವರು. ದೇವಕೀ ದೇವಿಯು ಅವರನ್ನು ನೋಡಬೇಕೆಂದು ಹಂಬಲಿಸುತ್ತಿರುವಳು. ಅವರನ್ನು ಕಳುಹಿಸಿಕೊಡು. ಅವರು ಶಾಪಮುಕ್ತರಾಗಿ ಪೂರ್ವದ ತಮ್ಮ ರೂಪವನ್ನು ಪಡೆಯುವ ಕಾಲವು ಬಂದಿರುವುದು.''

ಬಲೀಂದ್ರನು ಅವರನ್ನು ಕಳುಹಿಸಿ ಕೊಟ್ಟನು. ಅವರನ್ನು ಕರೆದುಕೊಂಡು ಶ್ರೀಕೃಷ್ಣನು ದ್ವಾರಕೆಗೆ ಬಂದು ತಾಯಿಗೊಪ್ಪಿಸಿದನು. ದೇವಕಿಯು ಅವರನ್ನು ಪುತ್ರ ಪ್ರೇಮದಿಂದ ಆಲಿಂಗಿಸಿಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಬಾರಿಬಾರಿಗೂ ಮುದ್ದಾಡಿ, ಅವರಿಗೆ ಸ್ತನ್ಯವನ್ನು ಕುಡಿಸಿದಳು. ಶ್ರೀಕೃಷ್ಣನು ಕುಡಿದಿದ್ದ ಸ್ತನಗಳನ್ನು ಕುಡಿದು ಅವರು ಕೃತಾರ್ಥರಾಗಿ ತಮ್ಮ ಪೂರ್ವದ ಜನ್ಮವನ್ನು ನೆನೆದುಕೊಂಡರು. ಶ್ರೀಕೃಷ್ಣನಿಗೂ ಬಲರಾಮನಿಗೂ ದೇವಕೀ ವಸುದೇವರಿಗೂ ನಮಸ್ಕಾರಮಾಡಿ, ಅವರೆಲ್ಲರೂ ನೋಡುತ್ತಿರುವ ಹಾಗೆಯೇ ದೇವಲೋಕಕ್ಕೆ ತೆರಳಿದರು.

## ನಲವತ್ತನಾಲ್ಕನೆಯ ಅಧ್ಯಾಯವು

# ಭಕ್ತರನ್ನು ಅನುಗ್ರಹಿಸಿದುದು

ರಾಮಕೃಷ್ಣರಿಗೆ ತಂಗಿಯಾದ ಸುಭದ್ರೆಯೆಂಬ ಸುಂದರೀ ಶಿರೋಮಣಿಯೊಬ್ಬಳಿದ್ದಳು. ಆಕೆಯನ್ನು ದುರ್ಯೋಧನನಿಗೇ ಕೊಡಬೇಕೆಂದು ಬಲರಾಮನ ಹಟ. ಅದು ವಸುದೇವಾದಿಗಳಾರಿಗೂ ಇಷ್ಟವಿರಲಿಲ್ಲ.

ಅರ್ಜುನನು ತೀರ್ಥಯಾತ್ರೆ ಮಾಡಿಕೊಂಡು ಪ್ರಭಾಸಕ್ಷೇತ್ರಕ್ಕೆ ಬಂದನು. ಅಲ್ಲಿ ಸುಭದ್ರಾ ವೃತ್ತಾಂತವೆಲ್ಲವೂ ಆತನಿಗೆ ತಿಳಿಯಿತು. ಆತನು ಆಕೆಯನ್ನು ಮದುವೆಯಾಗಬೇಕು ಎಂದು ಸನ್ಯಾಸಿಯ ವೇಷವನ್ನು ಧರಿಸಿ ದ್ವಾರಕೆಗೆ ಹೋದನು. ಅಲ್ಲಿ ಮಳೆಗಾಲದ ನಾಲ್ಕು ತಿಂಗಳು ನಿಂತನು. ಅವನನ್ನು ಬಲರಾಮನು ಒಮ್ಮೆ ತನ್ನ ಅರಮನೆಗೆ ಭಿಕ್ಷಕ್ಕೆ ಕರೆತಂದನು. ಅಲ್ಲಿ ಸುಭದ್ರೆಯೂ ಅರ್ಜುನನೂ ಒಬ್ಬರನ್ನೊಬ್ಬರು ನೋಡಿ ಮೋಹಗೊಂಡರು.

ಒಂದು ದಿನ ದೇವರ ಜಾತ್ರೆಯೆಂದು ಸುಭದ್ರೆಯು ರಥಹತ್ತಿ ಕುಳಿತು ದ್ವಾರಕೆಯ ಕೋಟೆಯಿಂದ ಹೊರಗೆ ಬಂದಳು. ಆ ವೇಳೆಗೆ ಅರ್ಜುನನು ದೇವಕೀವಸುದೇವರ ಮತ್ತು ಶ್ರೀಕೃಷ್ಣನ ಅಪ್ಪಣೆಯನ್ನು ಪಡೆದು, ಆ ರಥವನ್ನೇರಿ ಸುಭದ್ರೆಯನ್ನು ಹಾರಿಸಿಕೊಂಡು ಹೋದನು. ಯಾದವರು ಹಿಂದಟ್ಟಿಕೊಂಡು ಹೋದರು. ಅರ್ಜುನನು ಬಾಣಗಳಿಂದ ಅವರನ್ನು ತಡೆದನು. ಅದನ್ನು ಕೇಳಿ ಬಲರಾಮನು ರೇಗಿದನು. ಶ್ರೀಕೃಷ್ಣನೇ ಮೊದಲಾದ ಬಂಧುಗಳೆಲ್ಲರೂ ಆತನನ್ನು ಸಮಾಧಾನ ಮಾಡಿ ಸುಭದ್ರೆಗೂ ಅರ್ಜುನನಿಗೂ ಮದುವೆಮಾಡಿ, ಬೇಕಾದ ಹಾಗೆ ಬಳುವಳಿಯನ್ನು ಕೊಟ್ಟು ಕಳುಹಿಸಿಕೊಟ್ಟರು.

ಮಿಥಿಲೆಯಲ್ಲಿ ಶ್ರುತದೇವನೆಂಬ ಬ್ರಾಹ್ಮಣನು ಇದ್ದನು. ಆತನು ಶ್ರೀಕೃಷ್ಣನ ಏಕಾಂತ ಭಕ್ತನು. ಅವನು ತಾನಾಗಿ ದೊರತಷ್ಟನ್ನು, ತನಗೆ ಬೇಕಾದಷ್ಟು ಮಾತ್ರ ತೆಗೆದುಕೊಂಡು ಜೀವನ ಮಾಡುವನು. ಆ ದೇಶವನ್ನು ಆಳುವ ಬಹುಳಾಶ್ವನೆಂಬ ರಾಜನೂ ಶ್ರೀಕೃಷ್ಣನ ಪರಮ ಭಕ್ತನು. ಈ ಇಬ್ಬರು ಭಕ್ತರನ್ನು ಅನುಗ್ರಹಿಸಬೇಕೆಂದು ಶ್ರೀಕೃಷ್ಣ ಭಗವಂತನು ಮಹರ್ಷಿಗಳನ್ನು ಕರೆದುಕೊಂಡು ಅಲ್ಲಿಗೆ ಹೋದನು. ದರ್ಶನ ಮಾತ್ರದಿಂದಲೇ ಜನರ ಅಜ್ಞಾನವೆಂಬ ಅಂಧ ಕಾರವನ್ನು ಕಳೆಯುವ ಶ್ರೀಕೃಷ್ಣನ ದರ್ಶನಮಾಡಿ ಅನೇಕರು ಕೃತಾರ್ಥ ರಾದರು.

ಶ್ರೀಕೃಷ್ಣನು ಮಿಥಿಲೆಗೆ ಬಂದನೆಂಬುದನ್ನು ಕೇಳಿ ಅರಸನಾದ ಬಹುಳಾಶ್ವನೂ ಶ್ರುತದೇವನೂ ಆತನನ್ನು ಎದುರುಗೊಳ್ಳಲು ಬಂದರು. ಶ್ರೀಕೃಷ್ಣನು ಅವರಿಬ್ಬರಲ್ಲಿ ಯಾರಿಗೂ ದುಃಖವಾಗದಂತೆ ತಾನೇ ಎರಡು ರೂಪಾಗಿ ಅರಸನೊಡನೆ ಅರಮನೆಗೂ, ಆ ಬ್ರಾಹ್ಮಣ ನೊಡನೆ ಅವನ ಆಶ್ರಮಕ್ಕೂ ಹೋಗಿ ಎರಡು ಕಡೆಯೂ ಆದರದಿಂದ ಅವರೊಪ್ಪಿಸಿದ ಪೂಜಾದಿಗಳನ್ನು ಪರಿಗ್ರಹಿಸಿದನು.

ಅರಸನು "ಎಲೈ ನಾರಾಯಣ ಸ್ವರೂಪನೆ, ನಿನಗೆ ನಮಸ್ಕಾರವು. ಎಲೈ ಮಹಾನುಭಾವನೆ, ಕೆಲವು ದಿನಗಳು ನೀನು ಈ ಮಹರ್ಷಿಗಳೊ ಡನೆ ನಮ್ಮ ಮನೆಯಲ್ಲಿದ್ದು ನಿನ್ನ ಪಾದ ಧೂಳಿನಿಂದ ಈ ನಮ್ಮ ನಿಮಿ ವಂಶವನ್ನು ಉದ್ಧಾರಮಾಡು" ಎಂದು ಬೇಡಿಕೊಂಡನು. ಶ್ರೀಕೃಷ್ಣನು ಆಗಲೆಂದು ಅಲ್ಲಿಯೇ ನಿಂತನು. ಬ್ರಾಹ್ಮಣನೂ ತನ್ನ ಶಕ್ತಿಗೆ ಅನು ಸಾರವಾಗಿ ಆತನಿಗೆ ಉಪಚಾರಮಾಡಿ ಹೀಗೆ ಬಿನ್ನವಿಸಿದನು. "ಎಲೈ ಪರಮ ಪುರುಷನೆ, ನಿನ್ನ ದಿವ್ಯ ಚರಿತ್ರೆಗಳನ್ನು ಕೇಳುತ್ತಾ ಹೇಳುತ್ತ, ಭಕ್ತಿಯಿಂದ ನಿನ್ನನ್ನು ಅರ್ಚಿಸುತ್ತಾ, ಇರುವ ಪವಿತ್ರಾತ್ಮರ ಹೃದಯ ದಲ್ಲಿ ನೀನು ನೆಲಸಿರುವೆ. ಎಲ್ಲಕ್ಕೂ ಕಾರಣನು ನೀನೆ! ಅದರಿಂದ ನಿನಗೆ

ನಮುಸ್ಕಾರವು'' ಎಂದು ನಮುಸ್ಕಾರ ಮಾಡಿದನು. ಶ್ರೀಕೃಷ್ಣನು ಅವ ರಿಬ್ಬರನ್ನೂ ಉದ್ಧಾರ ಮಾಡಿದನು.

ಎಲೈ ರಾಜನೆ; ಮಹಾ ವಿಷ್ಣುವು ತಾನೇ ಜಗತ್ತಾಗುವನು. ತಾನೇ ಜೀವವೂ ಆಗುವನು. ಈ ಜೀವ ಜಗತ್ತುಗಳ ರೂಪದಿಂದ ಲೋಕವನ್ನೆಲ್ಲ ಆಡಿಸುತ್ತಿರುವನು. ವೇದಗಳ ಅರ್ಥವನ್ನು ಬಲ್ಲವರು ಈ ಗುಟ್ಟನ್ನು ತಿಳಿದು ಕೃತಾರ್ಥರಾಗುವರು.

ಲೋಕದಲ್ಲಿ ಮಿಕ್ಕೆಲ್ಲಾ ದೇವತೆಗಳು ಎಲ್ಲರೂ ಬೇಕುಬೇಕಾದ ಐಶ್ವರ್ಯವನ್ನು ಕೊಡಬಲ್ಲರು. ಆದರೆ ಮಹಾ ವಿಷ್ಣುವು ಈ ಐಶ್ವರ್ಯಾದಿ ಗಳೆಲ್ಲಕ್ಕೂ ಮಿಗಿಲಾದ ಭಕ್ತಿಯನ್ನೂ, ಮುಕ್ತಿಯನ್ನೂ ಕೊಡುವನು. ಈ ವಿಚಾರವಾಗಿ ಹಿಂದಿನ ಕಥೆಯೊಂದನ್ನು ಕೇಳು:—

ಹಿಂದೆ ವೃಕನೆಂಬ ಅಸುರನಿದ್ದನು. ಆತನು ಒಮ್ಮೆ ನಾರದ ಮುನೀಂದ್ರರನ್ನು ಕಂಡು, "ತ್ರಿಮೂರ್ತಿಗಳೊಳಗೆ ಬೇಗ ಅನುಗ್ರಹಿ ಸುವರಾರು ?" ಎಂದು ಕೇಳಿದನು. ಆತನು "ಶಿವನಷ್ಟು ಶೀಘ್ರವಾಗಿ ಯಾರೂ ವರ ಕೊಡುವುದಿಲ್ಲ" ಎನ್ನಲು, ಅವನು ಕೇದಾರವೆಂಬ ಕ್ಷೇತ್ರ ದಲ್ಲಿ ಶಿವನನ್ನು ಕುರಿತು ತನ್ನ ಶರೀರದಿಂದ ಮಾಂಸವನ್ನು ಕಿತ್ತು ಹೋಮ ಮಾಡುತ್ತ ಶಿವನನ್ನು ಆರಾಧಿಸಿದನು. ಕೊನೆಗೆ ತನ್ನ ತಲೆ ಯನ್ನೇ ಕಡಿದು ಹೋಮ ಮಾಡಬೇಕು ಎಂದು ಸಿದ್ಧನಾದನು. ಆಗ ಮಹಾದೇವನು ಪ್ರಸನ್ನನಾಗಿ ಅವನಿಗೆ ಮೊದಲಿನಂತೆ ಶರೀರವನ್ನು ಕೊಟ್ಟು, "ಏನು ಬೇಕು? ಕೇಳು'' ಎಂದನು.

ಆ ಮಷ್ಟನು "ನಾನು ಯಾವನ ತಲೆಯ ಮೇಲೆ ಕೈಯಿಟ್ಟರೆ ಅವನು ಸಾಯಬೇಕು'' ಎಂದನು. ಭಗವಂತನಾದ ರುದ್ರನು, 'ಆಗಲಿ' ಎಂದನು. ವೃಕನು ವರವು ಬಂದಿದೆಯೋ ಇಲ್ಲವೋ ನೋಡಲು ರುದ್ರನ ತಲೆಯ ಮೇಲೆಯೇ ಕೈಯಿಡಲು ಹೋದನು. ರುದ್ರನು ತನ್ನ ವರಕ್ಕೆ

ತಾನೇ ಹೆದರಿ ಓಡಬೇಕಾಯಿತು. ಅವನನ್ನು ಅಟ್ಟಿಕೊಂಡು ವೃಕನೂ ಓಡಿದನು.

ರುದ್ರನು ವೈಕುಂಠಕ್ಕೆ ಹೋದನು. ಅಲ್ಲಿ ಯೋಗೀಶ್ವರನಾದ ನಾರಾಯಣನು ಶಿವನ ಕಷ್ಟವನ್ನು ಕಂಡು ತಾನೊಬ್ಬ ಯೋಗಿಯಾಗಿ ಬಂದು ಆ ವೃಕನನ್ನು ವಿನಯದಿಂದ ಮಾತನಾಡಿಸಿದನು. "ಅಯ್ಯಾ! ಬಹಳವಾಗಿ ಬಳಲಿದಂತಿರುವೆಯಲ್ಲಾ! ಎಲ್ಲವೂ ಶರೀರದಿಂದ, ಆದ ರಿಂದ ಶರೀರವನ್ನು ಬಳಲಿಸುವುದು ತರವಲ್ಲ. ನಾನು ಕೇಳಬಹುದಾ ಗಿದ್ದರೆ, ಇದೇಕೆ ಇಷ್ಟು ಶ್ರಮಪಡುತ್ತಿರುವೆಯೋ ಹೇಳು'' ಎಂದನು. ವೃಕನು ಆ ಕಪಟ ಯೋಗಿಯ ವಿನಯ ವಾಕ್ಕುಗಳಿಗೆ ಮೈಮರೆತು. ಅಲ್ಲಿಯೇ ಸಮಾಧಾನವಾಗಿ ಕುಳಿತು ತಾನು ತಪಸ್ಸು ಮಾಡಿ ರುದ್ರ ನಿಂದ ಪಡೆದ ವರವನ್ನು ಕುರಿತು ಹೇಳಿದನು.

ಕಪಟ ಯೋಗಿಯು ''ಏನು ಮಾತಿದು, ಈಶ್ವರನು ವರವನ್ನೂ ಕೊಡಬಲ್ಲನೆ ? ಹಿಂದೆ ದಕ್ಷಬ್ರಹ್ಮನ ಶಾಪದಿಂದ ಪಿಶಾಚನಾಗಿ ಹೋದವನು ವರವನ್ನು ಕೊಡುವನೆ? ಹೌದೋ ಅಲ್ಲವೋ ನೀನೇ ನೋಡು'' ಎಂದನು. ಅವನು ಆ ಮಾತಿಗೆ ಮರುಳಾಗಿ ತನ್ನ ತಲೆಯ ಮೇಲೆ ತಾನೇ ಕೈಯಿಟ್ಟುಕೊಂಡು ಮೃತನಾದನು. ಶಿವನು ಸಂಕಟ ದಿಂದ ಪಾರಾದನು. ಆಗ ನಾರಾಯಣನು ''ಮಹಾದೇವಾ! ನಿನಗೆ ದ್ರೋಹ ಮಾಡಿದವನು ಏನಾಗುವನು ನೋಡು'' ಎಂದು ಹೇಳಿ ಆತನಿಗೂ ಸಂತೋಷವನ್ನು ಉಂಟು ಮಾಡಿದನು.

ಹಿಂದೆ ಸರಸ್ವತೀ ತೀರದಲ್ಲಿ ಋಷಿಗಳು ಸತ್ರಯಾಗವನ್ನು ಮಾಡಿದರು. ಆಗ ತ್ರಿಮೂರ್ತಿಗಳಲ್ಲಿ ದೊಡ್ಡವರು ಯಾರು ಎಂದು ವಾದವು ಹುಟ್ಟಿತು. ಅದನ್ನು ಗೊತ್ತು ಮಾಡಲು ಬ್ರಹ್ಮಪುತ್ರನಾದ ಭೃಗುವನು ಹೋಗಿ ಅಲ್ಲಿ ಬ್ರಹ್ಮನನ್ನು ನೋಡಿದನು. ಆತನು ತಂದೆ ಯಾದರೂ ಆತನಿಗೆ ನಮಸ್ಕಾರ ಮಾಡಲಿಲ್ಲ. ಸ್ತೋತ್ರವನ್ನು ಅರ್ಪಿಸ



ಕೂರ್ಮಾವತಾರವು

[ಮೈಸೂರು ಶಾಸನ ಇಲಾಖೆಯ ಕೃಪೆಯಿಂದ]

ಲಿಲ್ಲ. ಅದಕ್ಕಾಗಿ ಆತನಿಗೆ ಕೋಪ ಬಂತು. ಬೆಂಕಿಯಂತೆ ಉರಿದನು. ಆದರೂ ಮಗನಾದ ಭೃಗುವಿಗೆ ಶಾಪ ಕೊಡಬಾರದೆಂದು ತನ್ನ ಕೋಪವನ್ನು ತಾನೇ ನುಂಗಿಕೊಂಡನು. ಅಲ್ಲಿಂದ ಕೈಲಾಸಕ್ಕೆ ಹೋದನು. ಅಲ್ಲಿ ಪರಶಿವನು ಬ್ರಹ್ಮಪುತ್ರನೆಂದು ಅವನನ್ನು ಸಂತೋಷದಿಂದ ಆಲಂಗಿಸಲು ಹೋದರೆ, ''ಛೀ, ನೀನು ಅಶುಭಾಚಾರನು. ನನ್ನನ್ನು ಮುಟ್ಟಬೇಡ" ಎಂದನು. ಆತನು ಕೋಪಿಸಿಕೊಂಡು ತನ್ನ ಶೂಲದಿಂದ ಹೊಡೆಯಲು ಹೋದನು. ಪಾರ್ವತೀದೇವಿಯು ಆತನ ಕೋಪವನ್ನು ಶಾಂತಮಾಡಿದಳು. ಭೃಗುವು ಅಲ್ಲಿಂದ ತಪ್ಪಿಸಿಕೊಂಡು ವೈಕುಂಠಕ್ಕೆ ಹೋದನು.

ಮಹಾವಿಷ್ಣುವು ಅಲ್ಲಿ ಮಹಾಲಕ್ಷ್ಮಿಯು ತೊಡೆಯಮೇಲೆ ಮಲಗಿದ್ದನು. ಭೃಗುವು ಹೋಗಿ ಆತನ ಎದೆಯ ಮೇಲೆ ಒದ್ದನು. ಭಗವಂತನು ಅದನ್ನು ಗಮನಿಸದೆ ಎದ್ದು ಆತನಿಗೆ ಸಲ್ಲಬೇಕಾದ ಉಪಚಾರವನ್ನು ಸಲ್ಲಿಸಿದನು. ಭೃಗುವು ಹಿಂತಿರುಗಿ ಬಂದು ನಡೆದುದನ್ನೆಲ್ಲಾ ಆಮುನಿಮಂಡಲಕ್ಕೆ ತಿಳಿಸಿದನು. ಆಗ ಋಷಿಗಳೆಲ್ಲರೂ ಸೇರಿ ''ಶಾಂತಿ, ಅಭಯಗಳಿಂದ ಕೂಡಿದ ಆತನೇ ಧರ್ಮಸ್ವರೂಪನು. ಸಮದರ್ಶನನಾದ ಆತನೇ ಸತ್ವರೂಪನು. ಆತನೇ ಮೋಕ್ಷದಾಯಕನು'' ಎಂದು ನಿಶ್ಚಯಿಸಿದರು.

ಇನ್ನೂ ಒಂದು ಇತಿಹಾಸವುಂಟು. ಹಿಂದೆ ದ್ವಾರಕೆಯಲ್ಲಿ ಒಬ್ಬ ಬ್ರಾಹ್ಮಣನಿದ್ದನು, ಆತನ ಪತ್ನಿಯು ಒಂದು ಮಗುವನ್ನು ಹೆತ್ತಳು. ಅದು ಹುಟ್ಟುತ್ತಿದ್ದ ಹಾಗೆಯೇ ಸತ್ತುಹೋಯಿತು. ಆ ಸತ್ತ ಮಗುವನ್ನು ತಂದು ಅರಮನೆಯ ಬಾಗಿಲಲ್ಲಿ ಹಾಕಿ, ರಾಜನನ್ನು ಯದ್ವಾತದ್ವಾ ಬಯ್ದನು: ಆವನಿಗೆ ಹೀಗೆ ಒಂಭತ್ತು ಮಕ್ಕಳು ಸತ್ತು ಸತ್ತು ಹುಟ್ಟಿದುವು. ಒಂಭತ್ತನೆಯ ಸಲವೂ ಆ ಬ್ರಾಹ್ಮಣನು ಹಾಗೆಯೇ ಅರಮನೆಯ ಮುಂದೆ ಅತ್ತನು. ಅಗ ಅರ್ಜುನನು ಅಲ್ಲಿದ್ದನು. ಆತನು

ಆ ಬ್ರಾಹ್ಮಣನ ನಿಂದೆಯನ್ನು ಕೇಳಲಾರದೆ, ''ದೀನನಾದ ನಿನ್ನ ಸಂತಾನವನ್ನು ನಾನು ಕಾಪಾಡುವೆನು. ಇಲ್ಲದಿದ್ದರೆ ಅಗ್ನಿ ಪ್ರವೇಶ ಮಾಡುವೆನು'' ಎಂದು ಪ್ರತಿಜ್ಞೆ ಮಾಡಿದನು. ಆಗ ಬ್ರಾಹ್ಮಣನು ''ರಾಮನಲ್ಲ, ಕೃಷ್ಣನಲ್ಲ, ಪ್ರದ್ಯುಮ್ನಾದಿಗಳೂ ಅಲ್ಲ. ಇನ್ನು ನಿನ್ನಿಂದ ಆಗುವುದೇ ?" ಎಂದರೂ, ಅರ್ಜುನನು ಬಿಡದೆ ನಂಬಿಕೆಯ ಮಾತುಗಳನ್ನು ಹೇಳಿ ಕಳುಹಿಸಿದನು.

ಹತ್ತನೆಯ ಮಗುವು ಹುಟ್ಟುವ ಕಾಲವು ಬಂತು. ಆಗ ಬ್ರಾಹ್ಮಣನು ಬಂದು ಹೇಳಲು, ಅರ್ಜುನನು ಹೋಗಿ ಶುದ್ಧಾಚಮನಮಾಡಿ ನಾನಾಸ್ತ್ರಗಳಿಂದ ಆ ಸೂತಿಕಾಗೃಹದ ಹತ್ತು ಕಡೆಯೂ ಶರಪಂಜರವನ್ನು ಕಟ್ಟಿದನು. ಮಗುವು ಹುಟ್ಟಿತು. ಹುಟ್ಟಿದಕೂಡಲೇ ಅದೃಶ್ಯವಾಯಿತು. ಬ್ರಾಹ್ಮಣನು ಮತ್ತೆ ಬಯ್ದನು.

ಆಗ ಅರ್ಜುನನು ತನ್ನ ಯೋಗಬಲದಿಂದ ಲೋಕ ಲೋಕಗಳಿಗೆಲ್ಲಾ ಹೋಗಿ ನೋಡಿದರೂ ಆ ಮಗುವು ಸಿಕ್ಕಲಿಲ್ಲ. ತನ್ನ ಪ್ರತಿಜ್ಞಾ ಭಂಗವಾಯಿತೆಂದು ಅಗ್ನಿಪ್ರವೇಶಕ್ಕೆ ಸಿದ್ಧನಾದನು. ಆಗ ಶ್ರೀಕೃಷ್ಣನು ಬಂದು ತನ್ನ ರಥದ ಮೇಲೆ ಅತನನ್ನು ಕೂರಿಸಿಕೊಂಡು ಪಶ್ಚಿಮದಿಕ್ಕಿಗೆ ಹೋದನು. ರಥವು ಸಪ್ತದ್ವೀಪಗಳು, ಸಪ್ತಸಮುದ್ರಗಳು, ಸಪ್ತಕುಲಪರ್ವತಗಳು, ಇವೆಲ್ಲವನ್ನೂ ದಾಟಿ ಲೋಕಾಲೋಕಪರ್ವತವನ್ನೂ ದಾಟಿ ಕಗ್ಗತ್ತಲೆಯನ್ನು ಸೇರಿತು. ಅಲ್ಲಿ ಆ ಕುದುರೆಗಳು ಆ ಕತ್ತಲೆಯಲ್ಲಿ ಮುಂದೆ ಹೋಗಲಾರದೆ ನಿಂತು ಹೋದುವು. ಆಗ ಶ್ರೀಕೃಷ್ಣನು ಚಕ್ರವನ್ನು ಕಳುಹಿಸಲು ಅದು ಮುಂದಕ್ಕೆ ದಾರಿಯನ್ನು ತೋರಿಸುತ್ತಾ ಹೋಯಿತು. ಆ ಚಕ್ರಾಯುಧವು ಹೋದ ಹಾದಿಯಲ್ಲಿ ಹೋದರೆ, ಅಲ್ಲಿ ದಿವ್ಯ ತೇಜಸ್ಸು ಕಾಣಿಸಿ ನೋಡುವುದಕ್ಕೆ ಸಾಧ್ಯವಿಲ್ಲವಾಯಿತು. ಅರ್ಜುನನು ಕಣ್ಣು ಮುಚ್ಚಿದನು.

ಅನಂತರ ದೊಡ್ಡದೊಂದು ಸಮುದ್ರ. ಅದನ್ನೂ ಹೊಕ್ಕು

ಹೋದರೆ ಅಲ್ಲೊಂದು ದಿವ್ಯಭವನ. ಅದರಲ್ಲಿ ಅದ್ಭುತಾಕಾರನಾಗಿ ಬೆಳ್ಳಿಯ ಬೆಟ್ಟದಂತೆ ತೋರುವ ಅನಂತ. ಆ ಅನಂತನ ಮೇಲೆ ನೀಲ ಮೇಘ ಶ್ಯಾಮನಾದ ಮಹಾಮಹಿಮನಾದ ಪುರುಷೋತ್ತಮನು. ಆತನನ್ನು ಕಂಡು ಶ್ರೀಕೃಷ್ಣನು ವಂದಿಸಿದನು. ಅರ್ಜುನನೂ ವಂದಿಸಿದನು. ಆಗ ಆ ಮಹಾವಿಷ್ಣುವು ಇವರನ್ನು ಕಂಡು ''ನಿಮ್ಮನ್ನು ನೋಡಬೇಕು ಎಂದು ನಾನು ಈ ಬ್ರಾಹ್ಮಣ ಪುತ್ರನನ್ನು ಇಲ್ಲಿಗೆ ಕರೆಸಿಕೊಂಡೆನು. ನೀವು ಭೂಭಾರರಾಗಿರುವ ರಾಕ್ಷಸರನ್ನೆಲ್ಲಾ ಸಂಹರಿಸಿ ಇಲ್ಲಿಗೆ ಬೇಗ ಬನ್ನಿ. ನೀವು ನರನಾರಾಯಣರು'' ಎಂದು ಹೇಳಿದನು. ಅಲ್ಲಿದ್ದ ಬ್ರಾಹ್ಮಣ ಪುತ್ರನನ್ನು ಕರೆದುಕೊಂಡು ಬಂದು ಬ್ರಾಹ್ಮಣನಿಗೆ ಕೊಟ್ಟರು. ಅರ್ಜುನನು ''ಎಲ್ಲವೂ ಕೃಷ್ಣನಿಂದ, ಎಲ್ಲವೂ ಕೃಷ್ಣನದು'' ಎಂದು ತಿಳಿದುಕೊಂಡನು.

ಶ್ರೀ ಕೃಷ್ಣನು ತನ್ನ ಮಹಿಷಿಯರು ಒಬ್ಬೊಬ್ಬರಲ್ಲಿಯೂ ಹತ್ತು ಹತ್ತು ಮಂದಿ ಪುತ್ರರನ್ನೂ ಒಬ್ಬೊಬ್ಬ ಮಗಳನ್ನೂ ಪಡೆದನು. ಪ್ರದ್ಯುಮ್ನ ಮೊದಲಾದ ಹದಿನೆಂಟು ಮಂದಿ ಮಹಾರಥರೆಂದು ಕೀರ್ತಿ ಪಡೆದರು. ಈ ಯಾದವವಂಶವು ಅಪಾರವಾಗಿ ಬೆಳೆಯಿತು. ಅವರು ತಮ್ಮ ತಮ್ಮಲ್ಲಿಯೇ ಹೋರಾಡಿ ಎಲ್ಲರೂ ವಿನಾಶವಾದರು. ಅವರಲ್ಲಿ ಪ್ರದ್ಯುಮ್ನನ ಮಗ ಅನಿರುದ್ಧನ ಮಗನಾದ ವಜ್ರನೆಂಬುವನೊಬ್ಬನು ಯಾದವರ ವಂಶದ ಪ್ರತಿನಿಧಿಯಾಗಿ ಉಳಿದನು. ಆತನ ವಂಶವು ಪ್ರತಿಬಾಹು, ಸುಬಾಹು, ಶಾಂತಸೇನ, ಶತಸೇನರ ಮೂಲಕವಾಗಿ ಬೆಳೆಯಿತು.

ಯಾದವರಲ್ಲಿ ದರಿದ್ರರಾಗಲಿ ಮೂರ್ಖರಾಗಲಿ ಅಲ್ಪಾಯುಗಳಾಗಲಿ ಅಲ್ಪಬಲರಾಗಲಿ ಹುಟ್ಟಲಿಲ್ಲ. ಯದುವಂಶದ ಬಾಲಕರಿಗೆ ವಿದ್ಯೆಯನ್ನು ಹೇಳಲು ಮೂರುಸಾವಿರ ಕೋಟಿ ಎಂಟು ಸಾವಿರದ ಎಂಟು ನೂರು ಮಂದಿ ಆಚಾರ್ಯರಿದ್ದರಂತೆ. ಹಿಂದೆ ದೇವಾಸುರ ಯುದ್ಧದಲ್ಲಿ



ಭೂ ದೇ ವಿ

[ಮೈಸೂರು ಶಾಸನ ಇಲಾಖೆಯವರ ಕೃಪೆಯಿಂದ]

ದೇವತೆಗಳಿಂದ ಹತರಾದ ದೈತ್ಯರೆಲ್ಲರೂ ಮಾನವಲೋಕದಲ್ಲಿ ಕ್ಷತ್ರಿಯರಾಗಿ ಹುಟ್ಟಿ ಗರ್ವಾಂಧರಾಗಿ ಪ್ರಜೆಗಳನ್ನು ಬಾಧಿಸತೊಡಗಿದರು. ಆಗ ನಾರಾಯಣನ ಅಪ್ಪಣೆಯ ಪ್ರಕಾರ ಆ ದುಷ್ಟ ಕ್ಷತ್ರಿಯರನ್ನು ಸಂಹಾರಮಾಡಲು ದೇವತೆಗಳು ಯದುಗಳಾಗಿ ಅವತರಿಸಿದರು. ಶ್ರೀಕೃಷ್ಣನು ಅವರಿಗೆಲ್ಲಾ ನಾಯಕನಾದನು. ಶ್ರೀಕೃಷ್ಣನು ಎಷ್ಟೋ ಯಾಗಗಳನ್ನು ಮಾಡಿದನು. ಆತನು ಭೂಭಾರವನ್ನು ಇಳುಹಿದುದು ಏನಾಶ್ಚರ್ಯ ! ಧರ್ಮದ ಉದ್ಧಾರಕ್ಕಾಗಿ ಭಗವಂತನು ಮಾಡಿದ ನಾನಾವತಾರಗಳಲ್ಲೆಲ್ಲಾ ಶ್ರೀಕೃಷ್ಣಾವತಾರವು ವಿಶೇಷವು. ಅದರಿಂದ ಆ ಪರಮಾತ್ಮ ಸ್ವರೂಪನಾದ ಶ್ರೀಕೃಷ್ಣನ ಚರಿತ್ರೆಯನ್ನು ಕೇಳಿದವರೆಲ್ಲರೂ ಕೃತಾರ್ಥರಾಗುವರು.

---

## ನಲವತ್ತ ಐದನೆಯ ಅಧ್ಯಾಯವು

# ಯಾದವ ನಾಶವು

ಯಾದವರು ದಿನದಿನಕ್ಕೂ ವರ್ಧಿಸಿದರು. ಅವರನ್ನು ತಡೆಯುವವರೇ ಇಲ್ಲವಾಯಿತು. ಆಗ ಶ್ರೀಕೃಷ್ಣನು ''ಭೂಭಾರವನ್ನು ಇಳುಹಿಸಿದಂತೆಯೇ ಈಯಾದವರ ಭಾರವನ್ನೂ ಇಳುಹಿಸಬೇಕು.'' ಎಂದು ಸಂಕಲ್ಪಿಸಿದನು.

ವಿಶ್ವಾಮಿತ್ರಾದಿ ಮಹಾಮುನಿಗಳು ವಸುದೇವನ ಅತಿಥಿಗಳಾಗಿ ಇದ್ದರು. ಅವರೆಲ್ಲರೂ ಒಂದು ದಿನ ದ್ವಾರಕೆಯಸಮೀಪದಲ್ಲಿರುವ ಒಂದು ತೀರ್ಥಕ್ಕೆ ಸ್ನಾನಕ್ಕೆಂದು ಹೋಗಿದ್ದರು. ಆಗ ಅಲ್ಲಿ ಯಾದವ ಕುಮಾರರು ಪರಿಹಾಸಕ್ಕಾಗಿ ಸಾಂಬನಿಗೆ ಗರ್ಭಿಣಿಯ ವೇಷವನ್ನು ಹಾಕಿ ಅವನನ್ನು ಆ ಮಹಾ ಮುನಿಗಳ ಮುಂದೆ ನಿಲ್ಲಿಸಿ "ಇವಳು

ಯಾವ ಮಗುವನ್ನು ಹೆರುವಳು ?'' ಎಂದು ಕೇಳಿದರು. ಮುನಿಗಳು ಕಪಟವನ್ನು ತಿಳಿದು "ಇವಳು ನಿಮ್ಮ ಕುಲಕ್ಕೆ ಮೃತ್ಯುವಾಗುವ ಒನಕೆಯನ್ನು ಹೆರುವಳು'' ಎಂದರು. ಅವರು ಹೆದರಿ ಆ ವೇಷವನ್ನು ತೆಗೆದು ನೋಡಲು ಅಲ್ಲಿ ಒಂದು ಕಬ್ಬಿಣದ ಒನಕೆಯಿತ್ತು. ಅದನ್ನು ಕಂಡು ಅವರು ಕಳವಳಪಟ್ಟು ಹೋಗಿ ಉಗ್ರಸೇನ ಮಹಾರಾಜನಿಗೆ ತಿಳುಹಿಸಿದರು. ಆತನು ಆ ಒನಕೆಯನ್ನು ಅರೆಸಿ ಪುಡಿಮಾಡಿಸಿ ಆ ಪುಡಿಯನ್ನೂ ಉಳಿದಿದ್ದ ಒಂದು ತುಂಡನ್ನೂ ಸಮುದ್ರದಲ್ಲಿ ಹಾಕಿಸಿದನು. ಆ ತುಂಡನ್ನು ಒಂದು ಮೀನು ನುಂಗಿತು. ಆ ಮೀನನ್ನು ಹಿಡಿದ ಒಬ್ಬ ಬೇಡನು ಅದರ ಹೊಟ್ಟೆಯಲ್ಲಿದ್ದ ಕಬ್ಬಿಣದ ತುಂಡನ್ನು ತನ್ನ ಬಾಣದ ತುದಿಗೆ ಸೇರಿಸಿದನು. ಆ ಕಬ್ಬಿಣದ ಪುಡಿಯು ದಡಕ್ಕೆ ಬಂದು ಸೇರಿಕೊಂಡು ಹುಲ್ಲಾಯಿತು.

ಈ ವಿಷಯವು ಯಾರೂ ತಿಳಿಸದಿದ್ದರೂ ಶ್ರೀಕೃಷ್ಣನಿಗೆ ತಿಳಿಯಿತು. ಆತನು ''ಆಗಲಿ. ಯಾದವ ಸಂಹಾರಕ್ಕೆ ಇದು ಅನುಕೂಲವಾಯಿತು'' ಎಂದು ಸುಮ್ಮನಿದ್ದನು.

ನಾರದರು ದ್ವಾರಕೆಗೆ ಶ್ರೀಕೃಷ್ಣನ ದರ್ಶನಾರ್ಥವಾಗಿ ಪದೇ ಪದೇ ಬರುತ್ತಿದ್ದರು. ಒಂದು ಸಲ ಹಾಗೆ ಬಂದಿದ್ದಾಗ ವಸುದೇವನು ''ಎಲೈ ಪರಮ ಭಾಗವತನೆ, ಭಾಗವತ ಧರ್ಮಗಳನ್ನು ಕೇಳಿದ ಮಾತ್ರಕ್ಕೇ ಎಲ್ಲಾ ಭಯಗಳೂ ತಪ್ಪುವುವು ಎನ್ನುವರು. ಅಂತಹ ಭಾಗವತ ಧರ್ಮಗಳನ್ನು ಹೇಳು. ನಾವು ಪರಮಾತ್ಮನು ಮಗನಾಗಲಿ ಎಂದು ತಪಸ್ಸು ಮಾಡಿದೆವು. ಆದರೆ ಆಗ ಮೋಕ್ಷವನ್ನು ಕೇಳಿಕೊಳ್ಳಲಿಲ್ಲ. ಆದುದರಿಂದ ಮೋಕ್ಷ ಸಾಧಕಗಳಾದ ಆ ವ್ರತಗಳನ್ನು ಕುರಿತು ಹೇಳು" ಎಂದು ಕೇಳಿಕೊಂಡನು.

ನಾರದರು ಆಗಲಿ ಎಂದು ಹೇಳಿದರು: "ಭಾಗವತ ಧರ್ಮವು, ಕೇಳಿದವರನ್ನು, ಹೇಳಿದವರನ್ನು, ಧ್ಯಾನಿಸಿದವರನ್ನು, ಆದರಿಸಿದವರ

ರನ್ನು, ಇದು ಸರಿಯೆಂದವರನ್ನು ಕೂಡ ಕೂಡಲೇ ಕಾಪಾಡುವುದು. ನೀನು ನನಗೆ ದೇವದೇವನಾದ ಶ್ರೀಮನ್ನಾರಾಯಣನ ಸ್ಮರಣೆ ಬರುವಂತೆ ಮಾಡಿದೆ. ಈ ವಿಷಯದಲ್ಲಿ ವಿದೇಹರಾಜನಿಗೂ ಋಷಭ ಪುತ್ರರಿಗೂ ನಡೆದ ಒಂದು ಸಂವಾದವುಂಟು. ಅದನ್ನು ಹೇಳುವೆನು ಕೇಳು" ಎಂದು ಆ ಇತಿಹಾಸವನ್ನು ಹೇಳಿದರು.

ಸ್ವಾಯಂಭುವ ಮನುವಿನಿಂದ ನಾಲ್ಕನೆಯವನಾಗಿ ಋಷಭನು ಜನಿಸಿದನು. ಆತನು ಮೋಕ್ಷಧರ್ಮಗಳನ್ನು ಉಪದೇಶಿಸುವುದಕ್ಕಾಗಿಯೇ ಹುಟ್ಟಿದ ವಾಸುದೇವನೆನ್ನುವರು. ಆತನ ಮಗನೇ ಭರತನು. ಆತನ ಹೆಸರಿನಿಂದ ಈ ಭರತ ವರ್ಷವು ಪ್ರಖ್ಯಾತವಾಯಿತು. ಆತನು ಸರ್ವಸ್ವವನ್ನೂ ತ್ಯಾಗಮಾಡಿ ಧ್ಯಾನಯೋಗದಿಂದ ಶ್ರೀಹರಿಯನ್ನು ಆರಾಧಿಸಿ ಮುಕ್ತನಾದನು.

ಆ ಋಷಭ ಪುತ್ರರಲ್ಲಿ ಒಂಭತ್ತು ಮಂದಿ ಈ ಜಗತ್ತೆಲ್ಲವನ್ನೂ ಬ್ರಹ್ಮವನ್ನಾಗಿಯೂ ಆ ಬ್ರಹ್ಮವನ್ನು ಆತ್ಮ ಸ್ವರೂಪವಾಗಿಯೂ ಕಾಣುತ್ತ, ಸ್ವೇಚ್ಛೆಯಿಂದ ಲೋಕ ಲೋಕಗಳನ್ನೆಲ್ಲ ಸಂಚರಿಸುತ್ತಿದ್ದರು. ಅವರು ಒಮ್ಮೆ ನಿಮಿರಾಜನ ಯಜ್ಞಶಾಲೆಗೆ ಬಂದರು: ಆತನು ಅವರನ್ನು ಮಹಾ ಭಾಗವತೋತ್ತಮರೆಂದು ಅವರಿಗೆ ತಕ್ಕಂತೆ ಪೂಜಾದಿಗಳಿಂದ ಉಪಚರಿಸಿದನು. ಆತನು ಅವರ ಅನುಗ್ರಹವನ್ನು ಯಾಚಿಸುತ್ತಾ ಭಾಗವತ ಧರ್ಮಗಳನ್ನು ನಿರೂಪಿಸಬೇಕೆಂದು ಕೇಳಿಕೊಂಡನು. ಅವರಲ್ಲಿ ಒಬ್ಬೊಬ್ಬರು ಒಂದೊಂದಂಶವನ್ನು ಕುರಿತು ಉಪದೇಶಮಾಡಿದರು.

ಕವಿಯೆಂಬ ಯೋಗೀಂದ್ರನು ಹೀಗೆ ಹೇಳಿದನು: "ಪರಮಾತ್ಮನು ಪಾಮರರಾದ ಪುರುಷರಿಗೂ ಆಯಾಸವಿಲ್ಲದೆ ಆತ್ಮಲಾಭವಾಗಲಿ ಎಂದು ಉಪದೇಶಿಸಿದ ಉಪಾಯಗಳೇ ಭಾಗವತ ಧರ್ಮಗಳು. ವಾಕ್ಕು, ಮನಸ್ಸು, ಇಂದ್ರಿಯ, ಬುದ್ಧಿ, ಚಿತ್ತ, ಇವುಗಳಿಂದಲೂ

ತನ್ನ ಸ್ವಭಾವದಿಂದಲೂ ಮಾಡುವ ಕರ್ಮಗಳೆಲ್ಲವನ್ನೂ ನಾರಾಯಣ ನಿಗೆ ಒಪ್ಪಿಸುವುದೇ ಭಾಗವತ ಧರ್ಮವು. ಕಂಡು ಕಂಡುದನ್ನೆಲ್ಲ ಭಗವತ್ಸ್ವರೂಪವೆಂದು ನಮಸ್ಕರಿಸಿದರೆ, ಮನಸ್ಸು ಶಾಂತವಾಗು ವುದು. ಆಗ ಭಕ್ತಿ, ಮುಕ್ತಿಗಳು ಲಭಿಸುವುವು "'

ನಿಮಿಯು ''ಭಗವಂತನ ಭಕ್ತರ ಗುರುತೇನು ? ಅವರೇನ ಮಾಡುವರು?" ಎಂದು ಕೇಳಿದನು. ಅದಕ್ಕೆ ಹರಿಯು ಹೀಗೆ ಹೇಳಿ ದನು: " ಎಲ್ಲಿಲೂ ಪರಿಪೂರ್ಣನಾದ ಭಗವಂತನನ್ನೇ ನೋಡುವವನು ಭಾಗವತೋತ್ತಮನು. ಶತ್ರುಮಿತ್ರರಿಗೆ ತಕ್ಕಂತೆ ನಡೆದುಕೊಳ್ಳುವವನು ಮಧ್ಯಮ ಭಾಗವತನು. ಶ್ರೀ ಹರಿಯೊಬ್ಬನನ್ನೇ ಆರಾಧಿಸುವವನು ಸಾಮಾನ್ಯ ಭಾಗವತನು. ಶ್ರೀ ಹರಿಧ್ಯಾನದಲ್ಲಿ ಪರವಶನಾಗುವವನೇ ಭಾಗವತೋತ್ತಮನು. 'ನಾನು-ನನ್ನದು' ಎಂಬ ಅಹಂಕಾರ ಮಮಕಾರಗಳಿಲ್ಲದೆ ಧ್ಯಾನಕ್ಕಿಂತ ಇನ್ನು ಹೆಚ್ಚಿಲ್ಲವೆಂದು ತಿಳಿದು ಅದನ್ನು ಹಿಡಿದಿರುವವನೇ ಭಾಗವತೋತ್ತಮನು. ,ಯಾವನ ಹೃದಯ ದಲ್ಲಿ ಶ್ರೀ ಹರಿಯು ನೆಲಸಿರುವನೋ ಅವನೇ ಭಾಗವತೋತ್ತಮನು.''

ನಿಮಿಯು ''ಮಹಾತ್ಮರೆ, ವಿಷ್ಣು ಮಾಯೆಯೆಂದಿರಿ. ಆ ಮಾಯೆಯನ್ನು ತಿಳಿಯ ಹೇಳಿ'' ಎಂದು ಕೇಳಿದನು. ಅದಕ್ಕೆ ಅಂತರಿಕ್ಷನು ಹೀಗೆ ಹೇಳಿದನು: ''ಮಾಯೆಯನ್ನು ಯಾರೂ ಸಾಕ್ಷಾ ತ್ತಾಗಿ ತಿಳಿಯಲಾರರು. ಅದನ್ನು ಕಾರ್ಯಗಳಿಂದಲೇ ತಿಳಿಯಬೇಕು. ಮಾಯೆಯು ಪರಮಾತ್ಮನ ಶಕ್ತಿಯು. ಸೃಷ್ಟಿ, ಸ್ಥಿತಿ ಸಂಹಾರಗಳೆಲ್ಲ ಮಾಯೆಯಿಂದಲೇ ಆಗುವುದು.'' ನಿಮಿರಾಜನು '' ಈ ಮಾಯೆ ಯನ್ನು ಮಂದಬುದ್ಧಿಗಳು ಎಂತು ದಾಟುವರು ?'' ಎಂದು ಕೇಳಲು, ಪ್ರಬುದ್ಧನೆಂಬ ಮಹರ್ಷಿಯು ಹೀಗೆ ಹೇಳಿದನು: ''ಇದಕ್ಕೆ ಭಕ್ತಿ ಯಲ್ಲದೆ ಬೇರೆ ಉಪಾಯವಿಲ್ಲ. ಗುರುವನ್ನು ಆಶ್ರಯಿಸಿ ಭಾಗವತ ಧರ್ಮವನ್ನು ಕಲಿಯಬೇಕು. ಸರ್ವಸ್ವವನ್ನೂ ಪರಮಾತ್ಮನಿಗೆ

ಬೇಕು. ಆ ಪರಮಾತ್ಮನು ಒಲಿದಾಗ ಮಾಯೆಯು ಮುಗಿಯುವುದು."

ನಿಮಿಯು "ಪರಮಾತ್ಮನಾದ ನಾರಾಯಣನ ಸ್ವರೂಪವನ್ನು ಹೇಳಿ" ಎಂದು ಕೇಳಲು ಪಿಪ್ಪಲಾದನೆಂಬ ಮುನೀಂದ್ರನು ಹೇಳಿದನು: "ಎಲ್ಲದಕ್ಕೂ ಕಾರಣವಾದುದು ಪರಬ್ರಹ್ಮವು. ಅಗ್ನಿಯಿಂದ ಹುಟ್ಟಿದ ಬೆಂಕಿಯ ಕಿಡಿಗಳು ಅಗ್ನಿಯನ್ನು ಬೆಳಗಬಲ್ಲವೇ ? ಹಾಗೆ ಪರಮಾತ್ಮ ನಿಂದ ಹುಟ್ಟಿದ ಯಾವುದೂ ಆತನನ್ನು ನೋಡಲಾರದು. ನಮ್ಮ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲವೆಂದು ಬ್ರಹ್ಮವೇ ಇಲ್ಲವೆನ್ನ ಬಾರದು. ಜಗತ್ತೆಲ್ಲವೂ ವಿಕಾರಗಳಿಂದ ಕೂಡಿದುದು. ವಿಕಾರವಾಗು ತ್ತಿರುವುದು: ಆದರೂ ಜಗತ್ತಿನಲ್ಲಿ ಇರುವ ಪರಮಾತ್ಮನು ಮಾತ್ರ ನಿರ್ವಿಕಾರನೇ ಆಗಿರುವನು. ರೋಗವಿಲ್ಲದ ಕಣ್ಣಿಗೆ ಸೂರ್ಯ ಪ್ರಕಾಶವು ಕಾಣುವಂತೆ ಪರಿಶುದ್ಧವಾದ ಮನಸ್ಸಿಗೆ ಆತ್ಮತತ್ವವು ಗೋಚರವಾಗುವುದು."

ನಿಮಿಯು "ನನಗೆ ಯಾವ ಕರ್ಮವನ್ನು ಹೇಗೆ ಮಾಡಿದರೆ ಭಕ್ತಿಯು ಉದ್ಭವಿಸುವುದೋ ಆ ಕರ್ಮಯೋಗವನ್ನು ಹೇಳಿರಿ" ಎಂದು ಕೇಳಿದನು. ಆವಿರ್ಹೋತ್ರನೆಂಬ ಮುನೀಂದ್ರನು ಹೀಗೆ ಹೇಳಿದನು: "ಕರ್ಮವು ಮೂರು ವಿಧವು. ವೇದವಿಹಿತವಾದ ಕರ್ಮವೇ ಕರ್ಮವು. ತನಗೆ ತೋರಿದಂತೆ ಮಾಡುವುದು ಅಕರ್ಮವು. ಸಹಜವಾಗಿ ಶರೀರಾದಿಗಳಿಂದ ಮಾಡುವ ಕರ್ಮವು ವಿಕರ್ಮವು. ಇವುಗಳನ್ನು ವೇದಗಳಿಂದಲೇ ಅರಿಯಬೇಕು. ಆದರೆ ವೇದಗಳು ಕರ್ಮ ಗಳನ್ನು ಮುಚ್ಚಿ ಹೇಳುವುವು. ಮಾಡು ಎನ್ನುವವೇ ಹೊರತು ಏಕೆ ಮಾಡಬೇಕು ಎನ್ನುವುದನ್ನು ಹೇಳುವುದಿಲ್ಲ ದೇಹವೇ ತಾನು ಎಂಬುದೇ ಅಹಂಕಾರ ಗ್ರಂಥಿಯು. ಅದು ಬಿಟ್ಟವನಿಗೆ, ಅಗ್ನಿ ಸೂರ್ಯ ಜಲ ಅತಿಥಿ ಹೃದಯ ಮುಂತಾದ ಎಡೆಗಳಲ್ಲೆಲ್ಲಾ ಆತ್ಮ ಸ್ವರೂಪವು

ಗೋಚರವಾಗುವುದು. ಅದಕ್ಕಾಗಿ ಕರ್ಮ ಮಾಡುವುದೇ ಕರ್ಮ ಯೋಗವು." ನಿಮಿಯು "ಎಲೈ ಮುನೀಂದ್ರರೆ, ಶ್ರೀಹರಿಯು ತನ್ನ ಲೀಲಾವತಾರಗಳಿಂದ ಮಾಡಿದ, ಮಾಡುತ್ತಿರುವ, ಮಾಡುವ ಕರ್ಮ ಗಳನ್ನು ಹೇಳಿರಿ" ಎಂದು ಕೇಳಲು, ದ್ರುಮಿಲನು "ಎಲ್ಲವನ್ನೂ ಹೇಳಲು ಸಾಧ್ಯವಿಲ್ಲ, ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಈ ಮೂರು ಲೋಕಗಳೂ ಆತನ ಶರೀರಗಳು. ಅಂತಹ ಮಹಾ ಮಹಿ ಮನ ಮಹಿಮೆಯನ್ನು ಯಾರು ತಾನೇ ಬಣ್ಣಿಸಬಲ್ಲರು? ಆದರೂ ನೀನು ಕೇಳಿದೆಯೆಂದು ಒಂದೆರಡು ಹೇಳುವೆನು ಕೇಳು." ಎಂದು ನರ ನಾರಾಯಣ ಚರಿತೆಯನ್ನು ಹೇಳಿದನು.

ತಪಸ್ಸಿನಲ್ಲಿದ್ದ ನಾರಾಯಣ ಮುನಿಯ ತಪಸ್ಸನ್ನು ಕೆಡಿಸಲು ಇಂದ್ರನು ಮನ್ಮಥನನ್ನು ಸಪರಿವಾರನಾಗಿ ಕಳುಹಿಸಿದನ. ನಾರಾಯಣ ಮುನಿಯನ್ನು ಮನ್ಮಥನು ಏನೂ ಮಾಡಲಾರದೆ ಹೋದನು. ಆ ಮುನೀಂದ್ರನು ಅವರನ್ನೆಲ್ಲ ಕರೆದು ಆತಿಥ್ಯವನ್ನು ಕೊಟ್ಟನು. ಮನ್ಮ ಥನ ಜೊತೆಯಲ್ಲಿ ಬಂದಿದ್ದ ಸ್ತ್ರೀಯರಿಗಿಂತ ರೂಪವತಿಯರಾದವರು ಆತನನ್ನು ಸೇವಿಸುತ್ತಿರುವುದನ್ನು ಕಂಡು ಅವರೆಲ್ಲರೂ ನಾಚಿಕೊಂಡರು. ಅವರಿಗೆ ಆತನು ಪರಮ ರೂಪವತಿಯಾದ ಊರ್ವಶಿಯನ್ನು ಕೊಟ್ಟು ಕಳುಹಿಸಿದನು.

ಹೀಗೆಯೇ ಪರಮಾತ್ಮನು ಹಂಸಾವತಾರಮಾಡಿ ಸನಕಾದಿ ಗಳಿಗೆ, ದತ್ತಾತ್ರೇಯ ರೂಪದಿಂದ ಯದು, ಪ್ರಹ್ಲಾದ ಮುಂತಾದವ ರಿಗೆ ಬ್ರಹ್ಮೋಪದೇಶವನ್ನು ಮಾಡಿದನು. ಅದನ್ನೆಲ್ಲಾ ಕೇಳಿ ನಿಮಿಯು "ತಾವು ಹೇಳಿದ ಯಾವುದೂ ಇಲ್ಲದ ಪಾಮರರ ಗತಿಯೇನು?" ಎಂದು ಕೇಳಿದನು. ಅದಕ್ಕೆ ಚಮಸಮುನಿಯು ಹೇಳಿದನು: ಲೋಕದಲ್ಲಿ ಸ್ತ್ರೀಸಂಗ, ಮಾಂಸ, ಮದ್ಯ, ಇವುಗಳು ಸ್ವಭಾವಸಿದ್ಧವು. ಅವು ಗಳನ್ನು ಬಿಡುವುದು ಉತ್ತಮವು. ಬಿಡಲಾಗದವರು ವಿವಾಹ, ಯಜ್ಞ

ಗಳಿಂದ ಅವುಗಳನ್ನು ಸೇವಿಸುವುದು ಮಧ್ಯಮವು. ತನ್ನ ಆತ್ಮವಾಗಿರುವ ಶ್ರೀಹರಿಯೇ ಇತರರಲ್ಲಿಯೂ ಆತ್ಮಸ್ವರೂಪನಾಗಿರುವನು ಎಂಬುದನ್ನು ಅರಿಯದೆ ದ್ವೇಷ ಹಿಂಸೆಗಳನ್ನು ಮಾಡಿ ಕೆಡುವರು.''

ನಿಮಿಯು ಮತ್ತೆ ''ಮುನೀಂದ್ರರೆ, ಭಗವಂತನನ್ನು ಭಕ್ತರು ಯಾವ ಯಾವ ಕಾಲದಲ್ಲಿ ಹೇಗೆ ಹೇಗೆ ಪೂಜಿಸುವರೋ ಹೇಳಬೇಕು'' ಎಂದು ಕೇಳಲು ಕರಭಾಜನನು ಹೀಗೆ ಹೇಳಿದನು: "ಕೃತ, ತ್ರೇತಾ, ದ್ವಾಪರ, ಕಲಿ, ಎಂಬ ನಾಲ್ಕು ಯುಗಗಳು, ಕಾಲಭೇದಗಳು. ಕೃತದಲ್ಲಿ ಬಿಳಿಯ ಬಣ್ಣದಿಂದ ಇರುವ ಹರಿಯನ್ನು ಹಂಸ, ಸುವರ್ಣ, ವೈಕುಂಠ, ಧರ್ಮ, ಯೋಗೇಶ್ವರ, ಅಮಲ, ಈಶ್ವರ, ಪುರುಷ, ಅವ್ಯಕ್ತ, ಪರಮಾತ್ಮ ಎಂಬ ನಾಮಗಳಿಂದ ಭಜಿಸುವರು. ತ್ರೇತಾಯುಗದಲ್ಲಿ ಭಗವಂತನು ರಕ್ತವರ್ಣನು. ವಿಷ್ಣು, ಯಜ್ಞ, ಪೃಶ್ನಿಗರ್ಭ, ಸರ್ವದೇವ, ಉರುಕ್ರಮ, ವೃಷಾಕಪಿ, ಜಯಂತಿ, ಉರುಗಾಯ ಎಂಬ ನಾಮಗಳಿಂದ ಪೂಜಿಸುವರು. ದ್ವಾಪರದಲ್ಲಿ ಭಗವಂತನು ನೀಲವರ್ಣನು: ಆಗ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ ಮಹಾಪುರುಷ, ವಿಶ್ವೇಶ್ವರ, ವಿಶ್ವ, ಸರ್ವಭೂತಾತ್ಮ ಎಂಬ ನಾಮಗಳಿಂದ ಸ್ತುತಿಸುವರು. ಕಲಿಯುಗದಲ್ಲಿ ಕಪ್ಪಗಿರುವ ಶ್ರೀಕೃಷ್ಣನನ್ನು ನಾಮಸಂಕೀರ್ತನವೇ ಪ್ರಧಾನವಾದ ಪೂಜೆಗಳಿಂದ ಆರಾಧಿಸುವರು. ಕಲಿಯಲ್ಲಿ ಬೇರೆ ಯಾವ ದೋಷವೇ ಇರಲಿ, ಸಂಕೀರ್ತನದಿಂದಲೇ ಸರ್ವವೂ ಲಭಿಸುವುದು. ಭಕ್ತನಿಗೆ ಬಳ್ಳೆಯದು ಕೆಟ್ಟದು ಯಾವುದೂ ಇಲ್ಲ. ಅವನು ಕೃತಾರ್ಥನು" ಎಂದು ಹೇಳಿ ಅವರೆಲ್ಲರೂ ಅಂತರ್ಧಾನರಾದರು.

"ಎಲೈ ವಸುದೇವನೆ, ನೀನೂ ಈ ಭಾಗವತ ಧರ್ಮಗಳನ್ನು ಆಚರಿಸಿ ಕೃತಾರ್ಥನಾಗು" ಎಂದು ನಾರದರು ಹೇಳಿದರು. ಅದನ್ನು ಕೇಳಿ ದೇವಕೀ ವಸುದೇವರು ಅಜ್ಞಾನವನ್ನು ಬಿಟ್ಟರು.

ಒಮ್ಮೆ ಚತುರ್ಮುಖ ಬ್ರಹ್ಮನು ಮಹಾದೇವನಾದಿಯಾಗಿ ಎಲ್ಲ ರನ್ನೂ ಕರೆದುಕೊಂಡು ಭಗವಂತನಾದ ಶ್ರೀಕೃಷ್ಣನ ದರ್ಶನಾರ್ಥ ವಾಗಿ ದ್ವಾರಕೆಗೆ ಬಂದನು. ನಂದನವನದಿಂದ ತಾವು ತಂದಿರುವ ಹೂಗಳ ಮಾಲೆಗಳಿಂದ ಆ ಭಗವಂತನನ್ನು ಅರ್ಚಿಸಿ, ಆತನಿಗೆ ಏನೇನು ಉಪಚಾರ ಮಾಡಿದರೂ ಅವರಿಗೆ ತೃಪ್ತಿಯಾಗಲಿಲ್ಲ. ಬ್ರಹ್ಮನು ಶ್ರೀಹರಿಯನ್ನು ಬೇಕಾದ ಹಾಗೆ ಹೊಗಳಿ, "ಎಲೈ ಪ್ರಭುವೆ, ನಾವು ಹಿಂದೆ ಬೇಡಿಕೊಂಡಂತೆ ಅವತಾರಮಾಡಿ ಭೂಭಾರವನ್ನು ಇಳುಹಿದೆ; ಧರ್ಮವನ್ನು ಸ್ಥಾಪಿಸಿದೆ. ಈ ನಿನ್ನ ಚರಿತೆಗಳನ್ನು ಮುಂದೆ ಕಲಿಯುಗ ದಲ್ಲಿ ಕೀರ್ತಿಸಿದವರು ಕೃತಾರ್ಥರಾಗುವರು. ಎಲೈ ಸ್ವಾಮಿಯೆ, ನೀನು ಯದುವಂಶದಲ್ಲಿ ಅವತರಿಸಿ ನೂರ ಇಪ್ಪತ್ತೈದು ವರ್ಷಗಳಾದುವು. ನೀನು ಮಾಡಬೇಕಾದ ಕಾರ್ಯವೆಲ್ಲವೂ ಪೂರ್ಣವಾಗಿದ್ದರೆ ನಿನ್ನ ಸ್ವಸ್ಥಾ ನಕ್ಕೆ ಬರಬಹುದಲ್ಲವೆ ?" ಎಂದನು.

ಅದನ್ನು ಕೇಳಿ ಶ್ರೀಕೃಷ್ಣನು "ದೇವತೆಗಳಾದ ನಿಮ್ಮ ಕಾರ್ಯವು ಮುಗಿಯಿತು: ಆದರೂ ಈ ಯಾದವ ಕುಲದ ವಿನಾಶವೊಂದು ಉಳಿದಿ ರುವುದು. ಇದು ಆದ ಕೂಡಲೇ ನಾನು ವೈಕುಂಠಕ್ಕೆ ಹೊರಡು ವೆನು. ಹೋಗುವಾಗ ನಿನ್ನ ಲೋಕಕ್ಕೂ ಬರುವೆನು" ಎಂದು ಹೇಳಿ ದನು. ಬ್ರಹ್ಮಾದಿಗಳೆಲ್ಲರೂ ಸರಿ ಎಂದು ನಮಸ್ಕಾರಮಾಡಿ ಹೊರಟು ಹೋದರು.

ದ್ವಾರಕೆಯಲ್ಲಿ ಭಯಂಕರಗಳಾದ ಉತ್ಪಾತಗಳು ಕಾಣಿಸಿ ಕೊಂಡುವು. ಯಾದವಕುಲದ ವೃದ್ಧರು ಅದನ್ನು ತಿಳಿಸಲು ಶ್ರೀಕೃಷ್ಣನ ಬಳಿಗೆ ಬಂದರು. ಆತನು "ಎಲೈ ಪೂಜ್ಯರೆ, ನಮಗೆ ಬ್ರಾಹ್ಮಣ ಶಾಪವು ಬಂದಿರುವುದು ನಿಮಗೆಲ್ಲಾ ಗೊತ್ತು. ಇನ್ನು ಇಲ್ಲಿ ನಾವು ಇದ್ದರೆ ಉಳಿ ಯುವಂತಿಲ್ಲ ಎಂದು ಈ ಉತ್ಪಾತಗಳು ತೋರಿಸುತ್ತಿವೆ. ಅದರಿಂದ ಈ ದ್ವಾರಕೆಯನ್ನು ಬಿಟ್ಟು ಪ್ರಭಾಸ ತೀರ್ಥಕ್ಕೆ ಹೋಗಿ, ಅಲ್ಲಿ ಸ್ನಾನ

ತರ್ಪಣಾದಿಗಳಿಂದ ವಿಪತ್ತನ್ನು ತಡೆಯಲು ಪ್ರಯತ್ನ ಮಾಡೋಣ." ಎಂದನು. ಎಲ್ಲರೂ ಶ್ರೀಕೃಷ್ಣನು ಹೇಳಿದುದೇ ಸರಿಯೆಂದು ಹೊರಡಲು ರಥಗಳನ್ನು ಸಿದ್ಧಮಾಡಿದರು.

ಉದ್ಧವನೆಂಬ ಶ್ರೀಕೃಷ್ಣನ ವೃದ್ಧಮಂತ್ರಿಯು ಏಕಾಂತವಾಗಿ ಆತನ ಬಳಿಗೆ ಹೋಗಿ, "ಸ್ವಾಮಿಯೆ, ಇನ್ನು ನೀನು ಇಲ್ಲಿಂದ ಹೊರಡಲು ಸಿದ್ದವಾಗಿರುವೆ. ನಾನು ನಿನ್ನನ್ನು ಬಿಟ್ಟು ಇರಲಾರೆನು. ನನ್ನನ್ನೂ ಕರೆದುಕೊಂಡು ಹೋಗು'' ಎಂದು ಕಾಲುಗಳನ್ನು ಹಿಡಿದುಕೊಂಡನು. ಶ್ರೀಕೃಷ್ಣನು ''ಉದ್ಧವ, ಈ ಯಾದವರು ಪರಸ್ಪರ ಹೋರಾಡಿ ಮಡಿಯುವರು. ಇಂದಿಗೆ ಏಳನೆಯ ದಿನಕ್ಕೆ ಸಮುದ್ರವು ಉಕ್ಕಿ ಈ ದ್ವಾರಕೆಯನ್ನು ನುಂಗುವುದು. ನಾನು ನಿನಗೆ ರಹಸ್ಯವಾದ ಮೋಕ್ಷೋಪಾಯವನ್ನು ಉಪದೇಶಿಸುವೆನು. ಅದನ್ನು ನೀನು ಚೆನ್ನಾಗಿ ಸಾಧಿಸಿಕೊಂಡು ನನ್ನ ಭಕ್ತರಿಗೆಲ್ಲಾ ಉಪದೇಶಿಸುತ್ತ ಭೂಮಿಯಲ್ಲಿ ಸಂಚರಿಸಿಕೊಂಡಿರು. ಮೊದಲು ನನ್ನ ಆಶ್ರಮವಾದ ಬದರಿಕೆಗೆ ಹೋಗು. ಅಲ್ಲಿರುವ ನನ್ನ ಪಾದ ತೀರ್ಥವಾದ ಅಲಕನಂದೆಯನ್ನು ಸ್ನಾನಾದಿಗಳಿಂದ ಸೇವಿಸು. ಶುದ್ಧನಾಗಿ ಮುಕ್ತಿಯನ್ನು ಪಡೆಯುವೆ'' ಎಂದು ಆತನಿಗೆ ಬ್ರಹ್ಮವಿದ್ಯೆಯನ್ನು ನಾನಾ ಮುಖವಾಗಿ ಉಪದೇಶ ಮಾಡಿದನು.

ಪರಮ ಭಾಗವತನಾದ ಉದ್ಧವನನ್ನು ಕಳುಹಿಸಿ, ಶ್ರೀಕೃಷ್ಣನು ಎಲ್ಲರೊಡನೆ ಪ್ರಭಾಸ ಕ್ಷೇತ್ರಕ್ಕೆ ಹೋದನು. ಅಲ್ಲಿ ಯಾದವರೆಲ್ಲರೂ ಶ್ರೀಕೃಷ್ಣನು ಹೇಳಿದಂತೆ ಶಾಂತಿದಾನವೇ ಮೊದಲಾದ ಕರ್ಮಗಳೆಲ್ಲವನ್ನೂ ಮಾಡಿದರು. . ಆದರೆ ದುರ್ದೈವದಿಂದ ವಂಚಿತರಾಗಿ, ಬುದ್ಧಿಯನ್ನು ಕೆಡಿಸುವ ಮೈರೇಯವೆಂಬ ಮದ್ಯವನ್ನು ಬಹುವಾಗಿ ಪಾನ ಮಾಡಿದರು,

ಮದ್ಯದಿಂದ ಮತ್ತರಾದ ಅವರಿಗೆ ಕೃಷ್ಣಮಾಯೆಯು ಇನ್ನೂ ಬುದ್ಧಿಯನ್ನು ಕೆಡಿಸಿತು. ಅವರು ತಮ್ಮತಮ್ಮಲ್ಲಿಯೇ ಹೋರಾಡ

ತೊಡಗಿದರು. ಒಬ್ಬರನ್ನೊಬ್ಬರು ಲಕ್ಷಿಸದೆ ಕ್ರೋಧದಿಂದ ಮದ್ದಾನೆಗಳು ಹೋರಾಡುವಂತೆ ಹೋರಾಡಿದರು. ಹಿಂದಿನ ಮೈತ್ರಿಯನ್ನು ಬಿಟ್ಟು ಕಾದಾಡಿದರು. ತಂದೆ ಮಕ್ಕಳು, ಅಣ್ಣ ತಮ್ಮಂದಿರು, ಮುಂತಾದ ವಾವೆಗಳನ್ನು ಮರೆತು, ಮಿತ್ರರು ಮಿತ್ರರೊಡನೆ, ಆಪ್ತರು ಆಪ್ತರೊಡನೆ, ಜ್ಞಾನಿಗಳು ಜ್ಞಾನಿಗಳೊಡನೆ ಯುದ್ಧಮಾಡಿದರು.

ಅವರ ಬಾಣಗಳು, ಶಸ್ತ್ರಗಳು, ಅಸ್ತ್ರಗಳೂ ಮುಗಿದು ಹೋಗುತ್ತಲೂ ಸಮುದ್ರ ತೀರದಲ್ಲಿ ಬೆಳೆದಿದ್ದ ಜೊಂಡುಗಳನ್ನು ಕಿತ್ತುಕೊಂಡು ಹೋರಾಡಿದರು. ಆ ಜೊಂಡು ಇವರ ಕೈಗೆ ಬರುತ್ತಲೂ ವಜ್ರಾಯುಧದ ಹಾಗಾಗಿ ಎದುರಾದವರನ್ನು ಸದೆ ಬಡೆಯಿತು. ಅವರನ್ನು ಬಿಡಿಸಲು ಹೋದ ಬಲರಾಮ ಶ್ರೀಕೃಷ್ಣರನ್ನೂ ಹೊಡೆದರು. ಅವರೂ ಯತ್ನವಿಲ್ಲದೆ ಆ ಸಂಹಾರ ಕಾರ್ಯದಲ್ಲಿ ಸೇರಿದರು. ಹೀಗೆ ಬಿದಿರುಗಳಿಂದ ಹುಟ್ಟಿದ ಬೆಂಕಿಯು ವನವನ್ನೇ ದಹಿಸುವಂತೆ, ಆ ಯಾದವರ ಕೋಪವು ಯಾದವ ಕುಲವನ್ನೇ ಆಹುತಿಗೊಂಡಿತು.

ತನ್ನವರಾದ ಯಾದವರು ತನ್ನೆದುರಿಗೇ ವಿನಾಶವಾದುದನ್ನು ಕಂಡು ಶ್ರೀಕೃಷ್ಣನು ಒಂದು ನಿಟ್ಟುಸಿರು ಬಿಟ್ಟನು. "ಹೋಗಲಿ, ಉಳಿದಿದ್ದ ಭೂಭಾರವೂ ಇಳಿಯಿತು'' ಎಂದುಕೊಂಡು ಹೋಗಿ, ಒಂದು ಅಶ್ವತ್ಥವೃಕ್ಷದ ಬುಡದಲ್ಲಿ ಮೌನವಾಗಿ ನೆಲದ ಮೇಲೆ ಕುಳಿತನು. ಇದನ್ನೆಲ್ಲಾ ನೋಡಿದ ಬಲರಾಮನು ಸಮುದ್ರದ ತೀರದಲ್ಲಿ ಕುಳಿತು ಆತ್ಮಧ್ಯಾನ ನಿರತನಾಗಿ ಈ ಲೋಕವನ್ನು ಬಿಟ್ಟನು.

ವೃಕ್ಷ ಮೂಲದಲ್ಲಿ ಕುಳಿತ ಶ್ರೀಕೃಷ್ಣನು ಎಡಗಾಲನ್ನು ಬಲ ತೊಡೆಯ ಮೇಲೆ ಇಟ್ಟುಕೊಂಡಿದ್ದನು. ಎಂದಿನಂತೆ ಎಲ್ಲಾ ಒಡವೆಗಳನ್ನೂ ಧರಿಸಿಕೊಂಡಿದ್ದನು. ಸುತ್ತಲೂ ಆಯುಧಗಳೆಲ್ಲವೂ ಕಾಯ್ದುಕೊಂಡು ನಿಂತಿದ್ದುವು. ಆತನು ಕಾರ್ಮೋಡದಂತೆಯೂ, ಹೊಗೆಯಿಲ್ಲದ ಬೆಂಕಿಯಂತೆಯೂ ಪ್ರಕಾಶಿಸುತ್ತಿದ್ದನು. ಆಗ ಒಂದು ಬಾಣವು

ಬಂದು ಆತನ ಕಾಲಿಗೆ ತಗುಲಿತು. ಒಂದೆಯೇ ಆ ಬಾಣವನ್ನು ಹೊಡೆದ ಜರೆಯೆಂಬ ವ್ಯಾಧನು ಓಡಿಬಂದನು. ತಾನು ಗುರಿಯಿಟ್ಟಿದ್ದು ಜಿಂಕೆಗಲ್ಲ, ಭಗವಂತನ ಕಾಲಿಗೆ ಎಂದು ತಿಳಿಯುತ್ತಲೂ ಆ ಬೇಡನು ನಡುಗಿ ಹೋದನು. ಶ್ರೀಕೃಷ್ಣನ ಕಾಲಮೇಲೆ ಬಿದ್ದು ಕ್ಷಮಿಸು ಎಂದು ಬೇಡಿಕೊಂಡನು.

ಶ್ರೀಕೃಷ್ಣನು ಜರೆಯನ್ನು ಸಮಾಧಾನಗೊಳಿಸಿದನು. ''ಆಗ ಬೇಕಾಗಿತ್ತು, ಆಯಿತು. ಹೆದರಬೇಡ'' ಎಂದು ಬಹು ವಿಧವಾಗಿ ಸಮಾಧಾನಮಾಡಿ ತನಗೆ ಆ ಅಂತಿಮೋಪಚಾರವನ್ನು ಮಾಡಿದ ಅವನಿಗೆ ಪುಣ್ಯ ಲೋಕಗಳನ್ನು ಕೊಟ್ಟನು. ಆ ಬೇಡನು ಶ್ರೀಕೃಷ್ಣನಿಗೆ ಮೂರು ಸಲ ಪ್ರದಕ್ಷಿಣೆ ಮಾಡಿ ನಮಸ್ಕಾರಮಾಡಿ, ಆ ವೇಳೆಗೆ ಬಂದ ವಿಮಾನವನ್ನೇರಿ ಸ್ವರ್ಗಕ್ಕೆ ಹೋದನು.

ಶ್ರೀಕೃಷ್ಣನು ಇನ್ನೂ ಅಲ್ಲಿಯೇ ಇದ್ದನು. ಆತನ ಪ್ರಿಯ ಸಾರಥಿಯಾದ ದಾರುಕನು ಆತನ ತುಲಸೀಮಾಲೆಯ ಗಂಧವನ್ನು ಹಿಡಿದು ರಥದೊಡನೆ ಅಲ್ಲಿಗೆ ಬಂದನು. ಯೋಗಾರೂಢನಾಗಿರುವ ಸ್ವಾಮಿಯನ್ನು ಕಂಡು, ಪ್ರೇಮ ಭಕ್ತಿಗಳಿಂದ ಆತನ ಪಾದಗಳಿಗೆ ಅಡ್ಡ ಬಿದ್ದನು. ಅವನು ಸ್ವಾಮಿಯನ್ನು ಸ್ತುತಿಸುತ್ತ ನಿಂತಿರುವಂತೆಯೇ ಗರುಡಧ್ವಜದಿಂದ ಕೂಡಿದ ಶ್ರೀಕೃಷ್ಣ ರಥವು ದಿವ್ಯಾಶ್ವಗಳೊಡನೆ ಅಂತರಿಕ್ಷಕ್ಕೆ ಹಾರಿಹೋಯಿತು. ಆತನ ಸುತ್ತಲೂ ನಿಂತಿದ್ದ ಶಂಖ ಚಕ್ರ, ಗದೆ, ಮೊದಲಾದ ಆ ಭಗವಂತನ ಆಯುಧಗಳೂ, ಆ ರಥದ ಹಿಂದೆಯೇ ಹೊರಟು ಹೋದುವು.

ಅದನ್ನು ಕಂಡು ಆಶ್ಚರ್ಯಪಟ್ಟ ದಾರುಕನನ್ನು ಕರೆದು ಶ್ರೀಕೃಷ್ಣನು ಹೇಳಿದನು. "ನೀನು ದ್ವಾರಕೆಗೆ ಹೋಗಿ ಇಲ್ಲಿ ಯಾದವರು ಒಬ್ಬರೊಡನೆ ಒಬ್ಬರು ಹೋರಾಡಿ ಮಡಿದುದನ್ನೂ, ಬಲರಾಮನು ಯೋಗದಿಂದ ದೇಹವನ್ನು ಬಿಟ್ಟಿದ್ದನ್ನೂ, ನಾನು ಏನಾಗಿರುವೆ

ನೆಂಬುದನ್ನೂ ಅಲ್ಲಿರುವವರಿಗೆ ತಿಳುಹಿಸು. ಇನ್ನು ದ್ವಾರಕೆಯು ಸಮುದ್ರದಲ್ಲಿ ಮುಳುಗಿ ಹೋಗುವುದು. ಅದರಿಂದಲೇ ದೇವಕೀ ವಸುದೇವರನ್ನು ಕರೆದುಕೊಂಡು ಸಪರಿವಾರವಾಗಿ ಇಂದ್ರಪ್ರಸ್ಥಕ್ಕೆ ಹೋಗಿ ಪಾಂಡವರಲ್ಲಿ ಇರಿ' ಎಂದು ಹೇಳು: ನೀನು ಜ್ಞಾನವನ್ನು ಆಶ್ರಯಿಸಿ 'ಎಲ್ಲವೂ ಮಾಯೆಯಿಂದ ಆಯಿತು. ಮಾಯೆಯಿಂದ ಆಗುವುದು' ಎಂದು ನಂಬಿ ಶಾಂತನಾಗಿರು'' ಎಂದನು. ದಾರುಕನು ಅದನ್ನು ಕೇಳಿ ಆತನಿಗೆ ಪ್ರದಕ್ಷಿಣ ನಮಸ್ಕಾರ ಮಾಡಿ, ಆತನ ಅಪ್ಪಣೆಯಂತೆ ದ್ವಾರಕೆಗೆ ಹೋದನು.

ಶ್ರೀಕೃಷ್ಣನು ನಿರ್ಯಾಣವನ್ನು ಹೊಂದುವವೇಳೆಗೆ ಚತುರ್ಮುಖ ಬ್ರಹ್ಮನು, ಪಾರ್ವತೀ ಪರಮೇಶ್ವರರು, ಇಂದ್ರಾದಿ ದೇವಗಣಗಳು, ಸನಕಾದಿ ಬ್ರಹ್ಮಜ್ಞಾನಿಗಳು, ಮೊದಲಾದವರೆಲ್ಲರೂ ಅಲ್ಲಿಗೆ ಬಂದರು. ಆಲ್ಲಿರುವ ಸರ್ವರನ್ನೂ ನೋಡಿ, ನೋಟದಿಂದಲೇ ಅನುಗ್ರಹಿಸಿ, ಧಾರಣ ಧ್ಯಾನಗಳಿಂದ ಮಂಗಳವಾಗಿರುವ ತನ್ನ ದೇಹವನ್ನು ಆಗ್ನೇಯ ಯೋಗಧಾರಣದಿಂದ ದಹಿಸಿ, ತನ್ನ ಲೋಕಕ್ಕೆ ಹೊರಟುಹೋದನು*

ದೇವತೆಗಳು ಅವತಾರ ಪೂರ್ತಿಯಾಯಿತೆಂದು ದೇವ ದುಂದುಭಿಗಳನ್ನು ಮೊಳಗಿಸಿ ಹೂಮಳೆಯನ್ನು ಸುರಿಸಿದರು. ಶ್ರೀಕೃಷ್ಣನೊಡನೆಯೇ ಸತ್ಯ ಧರ್ಮ ಧೃತಿ ಕೀರ್ತಿ ಲಕ್ಷ್ಮಿಯರೂ ಭೂಮಿಯನ್ನು ಬಿಟ್ಟು ಹೊರಟು ಹೋದರು. ಶ್ರೀಕೃಷ್ಣನು ಹೋದ ಮಾರ್ಗವು ದೇವತೆಗಳಿಗೂ ತಿಳಿಯಲಿಲ್ಲ. ಎಲ್ಲರೂ ಕೃಷ್ಣ ಪರಮಾತ್ಮನ ಕೀರ್ತಿ ಹಾಡುತ್ತಾ ಹಿಂತಿರುಗಿದರು.

---

*ಇಲ್ಲಿ ಮೂಲದ ಲೋಕಾಭಿರಾಮಾಂ ಸ್ವತನುಧಾರಣ ಧ್ಯಾನ ಮಂಗಳ। ಯೋಗಧಾರಣಯಾಗ್ನೇಯ್ಯಾ ದಗ್ಧ್ವಾಧಾಮಾವಿಶತ್ಸ್ವಕಂ" ಎಂದು ಹೇಳಿದೆ. ಅನೇಕರು ಅದಗ್ಧ್ವಾ ಎಂದು ಅರ್ಥ ಮಾಡಿದ್ದಾರೆ. ಆ ಅರ್ಥವನ್ನು ಒಪ್ಪಿಕೊಂಡರೆ ಯೋಗಧಾರಣಯಾ ಆಗ್ನೇಯ್ಯಾ ಎಂಬ ಪದಗಳು ನಿಷ್ಪ್ರಯೋಜಕವಾಗುತ್ತವೆ. ಅದರಿಂದ ದಗ್ಧ್ವಾ ಎಂಬುದೇ ಸರಿ.

ದಾರುಕನು ದ್ವಾರಕೆಗೆ ಹೋಗಿ ನಡೆದುದೆಲ್ಲವನ್ನೂ ವಸುದೇವ ಉಗ್ರಸೇನ ಮೊದಲಾದ ಹಿರಿಯರಿಗೂ ಅಂತಃಪುರಕ್ಕೂ ತಿಳಿಸಿದನು. ಎಲ್ಲರಿಗೂ ಕಳವಳವಾಯಿತು. ಶೋಕದಿಂದ ಮೂರ್ಛಿತರಾದರು. ಎದ್ದು ಒಬ್ಬೊಬ್ಬರೂ ಹಣೆಯನ್ನು ಚಚ್ಚಿಕೊಳ್ಳುತ್ತಾ ರಣಭೂಮಿಗೆ ಬಂದರು. ದೇವಕಿ, ರೋಹಿಣಿ, ವಸುದೇವನು ಕೃಷ್ಣ ಬಲರಾಮರು ಇದ್ದ ಕಡೆಗೆ ಬಂದು ಅವರನ್ನು ಕಾಣದೆ ಅಲ್ಲಿಯೇ ಬಿದ್ದು ಪ್ರಾಣಗಳನ್ನು ಬಿಟ್ಟರು. ಸ್ತ್ರೀಯರೆಲ್ಲರೂ ತಮ್ಮ ತಮ್ಮ ಪತಿಗಳ ಶರೀರದೊಡನೆ ಸಹಗಮನ ಮಾಡಿದರು. ಶ್ರೀಕೃಷ್ಣ ಪತ್ನಿಯರು ಕೃಷ್ಣನನ್ನೇ ಧ್ಯಾನಿಸುತ್ತಾ ಅಗ್ನಿ ಪ್ರವೇಶ ಮಾಡಿದರು.

ಆ ವೇಳೆಗೆ ಅರ್ಜುನನು ಅಲ್ಲಿಗೆ ಬಂದನು. ಮಡಿದ ಬಂಧುಗಳಿಗೆಲ್ಲಾ ಪ್ರೇತ ಕರ್ಮವನ್ನು ಮಾಡಿಸಿದನು. ಸಮುದ್ರವು ಉಕ್ಕಿ ಬಂದು ದ್ವಾರಕೆಯನ್ನು ಆಕ್ರಮಿಸಿತು. ಶ್ರೀಕೃಷ್ಣನ ಅರಮನೆಯೊಂದು ಮಾತ್ರ ಮಾತ್ರ ಮುಳುಗದೆ ನಿಂತಿತು.ಅರ್ಜುನನು ಉಳಿದವರೆಲ್ಲರನ್ನೂ ಕರೆದುಕೊಂಡು ಇಂದ್ರಪ್ರಸ್ಥನಗರಿಗೆ ಬಂದು ಅಲ್ಲಿ ಅನಿರುದ್ಧನಮಗನಾದ ವ್ರಜನಿಗೆ ಮಧುರಾನಗರದ ಪಟ್ಟಾಭಿಷೇಕವನ್ನು ಮಾಡಿದನು. ಧರ್ಮರಾಜನು ಕಲಿಯುಗವು ಬಂತು ಎಂದು ತಿಳಿದು ಉತ್ತರೆಯ ಮಗನಾದ ಪರೀಕ್ಷಿತ್ತನಿಗೆಪಟ್ಟ ಕಟ್ಟಿ ತಮ್ಮಂದಿರನ್ನೂ ದ್ರೌಪದಿಯನ್ನೂ ಕರೆದುಕೊಂಡು ಮಹಾ ಪ್ರಸ್ಥಾನ ಮಾಡಿದನು.

---

## ಉಪಸಂಹಾರ

ಪರೀಕ್ಷಿತನು ಕೇಳಿದನು: "ಎಲೈ ಶುಕಮುನೀಂದ್ರನೆ, ಶ್ರೀಕೃಷ್ಣ ಪರಮಾತ್ಮನ ಅನಂತರದಲ್ಲಿ ಯಾವ ರಾಜವಂಶವು ಉಳಿಯಿತು ? ದಯವಿಟ್ಟು ಹೇಳು" ಎಂದನು. ಶುಕಮುನೀಂದ್ರನು ಹೇಳಿದನು:

"ರಾಜನೇ ಕೇಳು, ಚಂದ್ರವಂಶದಲ್ಲಿ ಯಯಾತಿಯ ಮಗನಾದ ಪುರು ವಿನ ವಂಶವನ್ನು ಪ್ರಸ್ತಾಪಿಸುವಾಗ, ಬೃಹದ್ರಥ, ಜರಾಸಂಧ, ಸಹ ದೇವರ ವಂಶದಲ್ಲಿ ಮಾರ್ಜಾರಿ ಮೊದಲಾಗಿ ಪುರಂಜಯನವರೆಗೆ ಇಪ್ಪತ್ತು ಮಂದಿರಾಜರಾಳುವರೆಂದು ಹೇಳಿದೆನಲ್ಲವೆ? ಆ ಪುರಂಜಯನ ಮಂತ್ರಿಯು ರಾಜನನ್ನು ಕೊಂದು ಪ್ರದ್ಯೋತನೆಂಬ ತನ್ನ ಮಗನಿಗೆ ರಾಜ್ಯವನ್ನು ಕಟ್ಟುವನು. ಅವನು ಮೊದಲಾಗಿ ಐವರು ರಾಜರು ಅಲ್ಲಿ ಆಳುವರು. ಅವರ ಅನಂತರ ಶಿಶುನಾಗರೆಂಬ ಹತ್ತು ಮಂದಿ ರಾಜ ರಾಳುವರು. ಅಲ್ಲಿಂದ ಮುಂದೆ ಶುದ್ಧ ಕ್ಷತ್ರಿಯ ಕುಲವು ಇಲ್ಲವಾಗು ವುದು. ಕೊನೆಕೊನೆಗೆ ರಾಜರೆನಿಸಿಕೊಂಡವರು ಧರ್ಮ ದಾನ, ಸತ್ಯ ಮೊದಲಾದ ರಾಜಗುಣಗಳೊಂದೂ ಇಲ್ಲದೆ, ಅಲ್ಪಾಯುಗಳೂ, ಅಲ್ಪ 'ಲರೂ ಆಗುವರು. ಪ್ರಜೆಗಳನ್ನು ರಕ್ಷಿಸುವುದಕ್ಕೆ ಬದಲಾಗಿ ಭಕ್ಷಿಸು 'ಕ್ಕೆ ಆರಂಭಿಸುವರು. ಪ್ರಜೆಗಳೂ ತಮ್ಮ ಅರಸರಂತೆಯೇ ನೀಚ ಪರಸ್ಪರ ಪೀಡಿತರಾಗಿ ನಾಶವನ್ನು ಹೊಂದುವರು.

ಭಗವಂತನಾದ ಕೃಷ್ಣನೆಂಬ ಸೂರ್ಯನು ಮರೆಯಾದ ದಿನವೇ ು ಭೂಲೋಕವನ್ನು ಪ್ರವೇಶಿಸಿತು. ದೇವಮಾನದಲ್ಲಿ ಒಂದು ುರದ ಇನ್ನೂರು ವರ್ಷಗಳು ಕಳೆದ ಮೇಲೆ ಕಲಿಯು ನಾಶವಾಗು ುದು. ಆಗ ಮನುಷ್ಯರ ಮನಸ್ಸಿನಲ್ಲಿ ಆತ್ಮ ಸ್ವರೂಪವು ಪ್ರಕಾಶವಾಗು ವುದು. ಆಗ ಮತ್ತೆ ಕೃತಯುಗವು ಆರಂಭಿಸುವುದು. ಆ ವೇಳೆಗೆ ಸೂರ್ಯಚಂದ್ರ ವಂಶಗಳು ಎರಡೂನಷ್ಟವಾಗಿರುವುವು. ಸೂರ್ಯ ವಂಶದ ವರು, ಚಂದ್ರವಂಶದ ದೇವಾಪಿ, ಎಂಬಇಬ್ಬರು ಯೋಗ ಬಲಸಂಪ ನ್ನರಾಗಿ ಕಲಾಪವೆಂಬ ಗ್ರಾಮದಲ್ಲಿ ನೆಲಸಿರುವರು. ಅವರು ಮುಂದೆ ಶುದ್ಧ ಕ್ಷತ್ರಿಯ ವಂಶಗಳ ಮೂಲಪುರುಷರಾಗುವರು.

ಎಲೈ ರಾಜನೆ, ಸತ್ವ, ರಜಸ್ಸು, ತಮಸ್ಸು ಎಂಬ ಗುಣಗಳು ಕಾಲವಶವಾಗಿ ಹೆಚ್ಚು ಕಡಿಮೆಯಾದಾಗ ಈ ಕೃತಾದಿ ಯುಗಗಳು

ಬರುವುವು. ಇವು ಜಗತ್ತಿನಲ್ಲಿ ಪ್ರವರ್ತಿಸುವಂತೆಯೇ ಪುರುಷರ ಅಂತಃ ಕರಣದಲ್ಲಿಯೂ ಪ್ರವರ್ತಿಸುವುವು. ಮನೋಬುದ್ಧಿ, ಇಂದ್ರಿಯಗಳು, ಸತ್ವಗುಣದಲ್ಲಿ ನೆಲಸಿದಾಗ ಜ್ಞಾನ ತಪಸ್ಸುಗಳಲ್ಲಿ ಅಭಿರುಚಿಯುಂಟಾಗುವುದು. ಅದು ಕೃತಯುಗವು. ಧರ್ಮಾರ್ಥ ಕಾಮಗಳಲ್ಲಿ ಕೀರ್ತಿಯಲ್ಲಿ ಅಭಿಲಾಷೆಯುಂಟಾದಾಗ ತ್ರೇತಾಯುಗವು. ಲೋಭ, ಅಸಂತೋಷ, ಮಾನ, ಡಂಭ ಮತ್ಸರ ಕಾಮ್ಯಕರ್ಮಗಳಲ್ಲಿ ಅಭಿಮಾನವು ಹೆಚ್ಚಿದಾಗ ದ್ವಾಪರ ಯುಗವು. ಮಾಯೆ, ಸುಳ್ಳು, ಆಲಸ್ಯ, ನಿದ್ರೆ, ಹಿಂಸೆ, ದುಃಖ, ಶೋಕ, ಮೋಹ, ಭಯ, ದೈನ್ಯ, ಇವು ಹೆಚ್ಚಿದಾಗ ಕಲಿ ಯುಗವು ಕಲಿಯುಗದಲ್ಲಿ, ಮನುಷ್ಯರು ಮಂದಮತಿಗಳು, ನಿರ್ಭಾಗ್ಯರು, ಹೊಟ್ಟೆ ಬಾಕರು, ಹಣವಿಲ್ಲದಿದ್ದರೂ ಹೆಣ್ಣು ಬೇಕೆನ್ನುವವರೂ ಸ್ತ್ರೀಯರು ಜಾರಿಣಿಯರೂ, ಆಗುವರು.

ಈ ರೀತಿಯಾಗಿ ಹರಡುವ ಕಲಿದೋಷಗಳಿಗೆ ಸುಲಭವಾದ ಉಪಾಯವು ಶ್ರೀಹರಿ ಧ್ಯಾನವು. ಶ್ರವಣ, ಸಂಕೀರ್ತನ, ಧ್ಯಾನ, ಪೂಜನ, ಆದರಣಗಳಿಂದ ಶ್ರೀಹರಿಯು ಎಲ್ಲಾ ಪಾಪಗಳನ್ನೂ ನಿವಾರಣ ಮಾಡುವನು. ಚಿನ್ನದಲ್ಲಿರುವ ದೋಷಗಳನ್ನೆಲ್ಲಾ ಬೆಂಕಿಯು ಕಳೆಯುವಂತೆ ಹೃದಯದಲ್ಲಿರುವ ಮಲಗಳನ್ನೆಲ್ಲಾ ಶ್ರೀಹರಿ ಭಕ್ತಿಯು ತೊಳೆಯುವುದು. ಕಲಿಯು ಪಾಪಗಳಿಗೆ ಸ್ಥಾನವು. ಆದರೂ ಶ್ರೀಹರಿ ಕೀರ್ತನದಿಂದ ಮುಕ್ತಿಯನ್ನು ಪಡೆಯಬಹುದಾಗಿ ಕಲಿಗಿಂತ ಮಿತ್ರ ನಿಲ್ಲ. ಕೃತಯುಗದಲ್ಲಿ ವಿಷ್ಣುವನ್ನು ಕುರಿತು ತಪಸ್ಸು ಮಾಡಿದವರೂ ತ್ರೇತೆಯಲ್ಲಿ ಯಜ್ಞಯಾಗಾದಿಗಳನ್ನು ಮಾಡಿದವರೂ ದ್ವಾಪರದಲ್ಲಿ ಶ್ರೀಹರಿಸೇವೆ ಮಾಡಿದವರೂ ಯಾವ ಪುಣ್ಯಗಳನ್ನು ಪಡೆಯುವರೋ ಕಲಿಯಲ್ಲಿ ಶ್ರೀಹರಿಸಂಕೀರ್ತನ ಮಾಡಿದವರಿಗೆ ಅಷ್ಟೂ, ಲಭಿಸುವುದು.

ಎಲೈ ಪರೀಕ್ಷಿತನೆ, ವಾಸುದೇವ ಲೀಲಾಮಯವಾದ ಈ ಭಾಗವತವನ್ನು ಕೇಳಿದ ನೀನು ಪುಣ್ಯವಂತನು. ಇನ್ನು ನಾನು ಸಾಯು

ಹೆನು ಎಂಬ ಪಶುಬುದ್ಧಿಯನ್ನು ಬಿಡು. ದೇಹವು ಮೊದಲಿಂದಲೂ ಇರಲಿಲ್ಲ. ಅದು ಹುಟ್ಟಿ ಬೆಳೆದು ನಾಶವಾಗುವುದು. ನೀನು ಅದಲ್ಲ. ನೀನು ಪರಮಾತ್ಮ ಧ್ಯಾನದಲ್ಲಿದ್ದು ಪರಮಾತ್ಮನೇ ಆಗು. ತಕ್ಷಕನು ನಿನ್ನ ದೇಹವನ್ನು ನಾಶಮಾಡಬಲ್ಲನಲ್ಲದೆ ನಿನ್ನನ್ನು ಏನೂ ಮಾಡ ಲಾರನು: ಅಲ್ಲದೆ ಎಲ್ಲವೂ ಆತ್ಮನಾಗಿರುವಾಗ ತಕ್ಷಕನೂ ಆತ್ಮನೇ ಅಲ್ಲ ವೇನು ?"

ಇದನ್ನು ಕೇಳಿ ಪರೀಕ್ಷಿತನು ಶುಕಮುನೀಂದ್ರನ ಪಾದಗಳಲ್ಲಿ ತಲೆಯನ್ನಿಟ್ಟು "ಕರುಣಾಮಯನೆ, ನೀನು ನಿರೂಪಿಸಿದ ಭಾಗವತ ವನ್ನು ಕೇಳಿ ಸಿದ್ಧನಾದೆನು: ಅನುಗೃಹೀತನಾದೆನು. ಇನ್ನು ನನಗೆ ಯಾರ ಹೆದರಿಕೆಯೂ ಇಲ್ಲ. ಅಂತಃಕರಣದಲ್ಲಿ ಶ್ರೀಹರಿಯನ್ನು ಧ್ಯಾನಿ ಸುತ್ತಾ ಪ್ರಾಣಗಳನ್ನು ಬಿಡುವೆನು. ನನಗೆ ಅನುಜ್ಞೆಯನ್ನು ಕೊಡು!" ಎಂದನು, ಶುಕಾಚಾರ್ಯನೂ ತಥಾಸ್ತು ಎಂದು ಆತನಿಂದ ಪೂಜೆ ಗಳನ್ನು ಪಡೆದು ಹೊರಟುಹೋದನು.

ಸಕಾಲದಲ್ಲಿ ಕಾಮರೂಪಿಯಾದ ತಕ್ಷಕನು ಬಂದು ಪರೀಕ್ಷಿತ ನನ್ನು ಕಚ್ಚಿದನು. ಆ ರಾಜನ ಶರೀರವು ಒಂದೇ ಗಳಿಗೆಯಲ್ಲಿ ವಿಷಾಗ್ನಿ ಯಿಂದ ಬೆಂದು ಬೂದಿಯಾಯಿತು. ಪರೀಕ್ಷಿತನು ಭಗವಂತನಲ್ಲಿ ಸಾಯುಜ್ಯವನ್ನು ಹೊಂದಿದನು. ದೇವಲೋಕದ ಭೇರಿಗಳು ಮೊಳಗಿ ದುವು. ದೇವತೆಗಳು ಹೂಮಳೆಯನ್ನು ಕರೆದರು.

**ಸಂಗ್ರಹ ಭಾಗವತವು ಪೂರ್ಣವಾಯಿತು.**

**ಸಮಸ್ತ ಸನ್ಮಂಗಳಾನಿ ಭವಂತು**

**—:ಶ್ರೀಕೃಷ್ಣಾರ್ಪಣಮಸ್ತು:—**